ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಗಂಗವ್ವ ಗಂಗಾಮಾಯಿ

ಶಂಕರ ಮೊಕಾಶಿ ಪುಣೇಕರ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಗಂಗವ್ವ ಗಂಗಾಮಾಯಿ

**ಶಂಕರ ಮೊಕಾಶಿ ಪುಣೇಕರ**

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**GANGAVVA GANGAMAYI** : A Novel by **Dr. Shankar Mokashi Punekar**
Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : XXVI + ೨೯೬
ಬೆಲೆ : ರೂ. ೭೫/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ಬಿ.ಎಸ್. ಯಡಿಯೂರಪ್ಪ

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

## ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**



## ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳದ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

## ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತಿವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳು ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦



## ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್
ದಿನಾಂಕ ೧೧.೦೧.೨೦೧೧ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ



## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ: ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್
**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಲೇಖಕನ ಎರಡು ಮಾತು

(ಪ್ರಥಮ ಮುದ್ರಣ)

ನನ್ನ ಪ್ರಥಮ ದೀರ್ಘ ಗ್ರಂಥದ ಪ್ರಕಟನೆಗಿಂತ ಒಂದು ತಿಂಗಳು ಮೊದಲು ನನ್ನ ಅಜ್ಜಿ ಅಂಬಕ್ಕನ ಮರಣವಾದುದಕ್ಕಾಗಿ ವಿಷಾದಿಸುತ್ತೇನೆ. ಆದರೆ ಆ ಮಹಾತಾಯಿಯು, ಕಾದಂಬರಿಯ ಕೆಲವು ಭಾಗಗಳನ್ನು ನನ್ನ ಸ್ನೇಹಿತರು ಓದುವಾಗ ಕೇಳಿ ಆನಂದಪಟ್ಟಿದ್ದಳು. ಅವಳ ಕೆಲವು ಅನುಭವಗಳೂ. ಅಲ್ಲದೆ ನನ್ನ ಪೂಜ್ಯ ಅಜ್ಜ (ಬಾಬಾ) ಅವರ ಅನುಭವಗಳೂ ಈ ಕಾದಂಬರಿಯಲ್ಲಿ ಕೆಲವು ಕಡೆಗೆ ಉಪಯೋಗಿಸಲ್ಪಟ್ಟಿರುತ್ತವೆ.

ಕಾನ್ರಾಡನು (Conrad) `language of facts' ಎಂದು ವರ್ಣಿಸಿದ ನಿರೂಪಣ ತಂತ್ರವನ್ನು ಶಕ್ಯವಿದ್ದಮಟ್ಟಿಗೆ ಇಲ್ಲಿ ಉಪಯೋಗಿಸಲು ಯತ್ನಿಸಿದ್ದೇನೆ.

ಇದರಲ್ಲಿಯ ಪಾತ್ರಗಳು ಯಾವ ಪ್ರತ್ಯಕ್ಷ ವ್ಯಕ್ತಿಯ ಅಧಾರದ ಮೇಲೂ ಕಟ್ಟಲ್ಪಟ್ಟಿರುವದಿಲ್ಲ. ಹಾಗೆ ಹುಡುಕುತ್ತ ಹೋಗುವ ಓದುಗನು ತಪ್ಪು ಹಾದಿಯನ್ನೇ ತುಳಿಯುವನೆಂದು ನನ್ನ ನಂಬುಗೆ.

ಕಾದಂಬರಿಯ ಮೊದಲನೆಯ ಅಧ್ಯಾಯವು ಕಥಾರೂಪವಾಗಿ 'ಕರ್ನಾಟಕ ಕಾಲೇಜ ಮಿಸಲನಿ'ಯಲ್ಲಿ ೧೯೪೮ರಲ್ಲಿ ಪ್ರಕಟವಾಯಿತು. ೧೯೪೯ರಲ್ಲಿ ಮುಂದಿನ ಮೂರು–ನಾಲ್ಕು ಅಧ್ಯಾಯಗಳನ್ನು ಬರೆದೆ. ೧೯೫೫–೫೬ರಲ್ಲಿ ಕಾದಂಬರಿಯನ್ನು ಮತ್ತೆ ಬರೆಯಲು ಉದ್ಯೋಗಿಸಿ ಮುಗಿಸಿದೆನು. ಇಪ್ಪತ್ತನೆಯ ಶತಮಾನದ ಮಧ್ಯ ಭಾಗದಲ್ಲಿ ಸ್ವಾತಂತ್ರ್ಯೋತ್ತರ ಸಮಯದಲ್ಲಿ, ಅಣುಯುಗದಲ್ಲಿ. ಈ ಸಂಪ್ರದಾಯ ಶರಣ ಕಾದಂಬರಿ ಜನ್ಮ ತಳೆದಿದೆ. ಕನ್ನಡದಲ್ಲಿ ಪರಂಪರೆ ಹುಟ್ಟಲಿ ಮೊದಲು; ಆಮೇಲೆ ಅದನ್ನು ಮುರಿಯುವ ಸೊಗಸೇ ಬೇರೆ ಎಂದು ನನ್ನ ಅರಿಕೆ. ಅದಕ್ಕೆಂದೇ ಈ ಕಾದಂಬರಿಯ ಮೈತುಂಬ ಸಂಪ್ರದಾಯದ ಮುದ್ರೆಗಳು. ಕನ್ನಡದಲ್ಲಿ ಉತ್ತಮ ಸಾಂಪ್ರದಾಯಿಕ ಕಾದಂಬರಿಗಳು ಹುಟ್ಟಿ, ಪರಂಪರೆ ನಿರ್ಮಾಣವಾಗಲಿ ಎಂದು ಹಾರೈಸುತ್ತೇನೆ.

ಏಪ್ರಿಲ್ ೧೯೫೭ — **– ಶಂಕರ ಮೊಕಾಶಿ ಪುಣೇಕರ**

ಧಾರವಾಡ



## ಅರಿಕೆ

(ಆರನೆಯ ಮುದ್ರಣ)

'ಗಂಗವ್ವ ಗಂಗಾಮಾಯಿ' ಕಾದಂಬರಿ ಮತ್ತೊಮ್ಮೆ ಪುನರ್ಮುದ್ರಣವಾಗುತ್ತಿರುವುದು ಸಂತೋಷದ ವಿಷಯ. ಈಗಾಗಲೇ ಇದು ದೇಶದ ಎಲ್ಲ ಪ್ರಮುಖ ಭಾಷೆಗಳಿಗೆ ಅನುವಾದವಾಗಲು (ನ್ಯಾಷನಲ್ ಬುಕ್ ಟ್ರಸ್ಟ್‌ನ 'ಅಂತರ ಭಾರತೀಯ ಪುಸ್ತಕಮಾಲೆ'ಯಲ್ಲಿ) ಆಯ್ಕೆಯಾಗಿದೆ; ರಾಜ್ಯದ ಬೇರೆಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯವಾಗಿದೆ. ಈ ಕಥೆ ಫಿಲ್ಮ್ ಕೂಡ ಆಗಿ ಮೆಚ್ಚುಗೆ–ಪ್ರಶಸ್ತಿಗಳನ್ನು ಗಳಿಸಿದೆ.

ಈ ಗ್ರಂಥದ ಯಶಸ್ಸಿಗೆ ಕಾರಣವಾದ ಎಲ್ಲ ಮಹನೀಯರೂ ವಂದ್ಯರು. ಕನ್ನಡಿಗರಿಗೆ ಇದರ ಗುಣವಿಶೇಷಗಳನ್ನು ತೋರಿಸಿದ ಗೆ॥ ಕೀರ್ತಿನಾಥ ಕುರ್ತಕೋಟಿಯವರ ಮಹತ್ವದ ವಿಮರ್ಶಾತ್ಮಕ 'ಧೂಳಿದರ್ಶನ' ಇಂದಿಗೂ ಅಮೂಲ್ಯ. ಅದನ್ನು ಲಭ್ಯಮಾಡಿದ ಪ್ರೊ॥ ರಮಾಕಾಂತ ಜೋಶಿ, ಶ್ರೀ ಜಿ.ಬಿ. ಜೋಶಿಯವರಿಗೆ ಕೃತಜ್ಞ. ಈ ಕಾದಂಬರಿ ಮೊದಲ ಬಾರಿ ಪ್ರಕಟವಾದದ್ದು ೧೯೫೬–೫೮ರಲ್ಲಿ, ಮನೋಹರ ಗ್ರಂಥಮಾಲೆಯಲ್ಲಿ. ಅನಂತರ ನಾಲ್ಕೈದು ಬಾರಿ ಪುನರ್ಮುದ್ರಣವಾಗಿರುವ ಇದರ ಮತ್ತೊಂದು ಸಂಸ್ಕರಣವನ್ನು ಮೈಸೂರಿನ 'ಗೀತಾ ಬುಕ್ ಹೌಸ್' ಸೋದರರು ಪ್ರಕಾಶಿಸುತ್ತಿದ್ದಾರೆ. ಇದರ ಪ್ರಕಾಶಕರಿಗೆ, ಮುದ್ರಕರಿಗೆ, ಕರಡಚ್ಚುಗಳನ್ನು ವಿಶ್ವಾಸದಿಂದ ತಿದ್ದಿಕೊಟ್ಟ ಗೆಳೆಯ ಶ್ರೀ ರಂಗರಾವ್ ರೋಹಿಡೇಕರರಿಗೆ ನನ್ನ ಕೃತಜ್ಞತೆಗಳು.

ಕರ್ನಾಟಕ ವಯೋವೃದ್ಧ, ಜ್ಞಾನವೃದ್ಧ ರಸಋಷಿಗಳನೇಕರು ನನ್ನ ಈ ಕೃತಿಯ ಬಗೆಗೆ ಮೆಚ್ಚುಗೆ ಸೂಚಿಸಿದ್ದಾರೆ. ಮನೋಹರ ಗ್ರಂಥಮಾಲೆಯ 'ಪುಟ–ಬಂಗಾರ' ಸಂಪುಟಗಳಲ್ಲೂ, 'ಲಂಕೇಶ ಪತ್ರಿಕೆ'ಯಲ್ಲೂ ಪುನರ್ಮುದ್ರಣಗೊಂಡಿದೆ. ಕಾದಂಬರಿ–ವಾಚಕರಲ್ಲಿನ ಆರ್ದ್ರ ಸಂಬಂಧವೇ ಕಾದಂಬರಿಯ ನಿಜ ಮೌಲ್ಯ.

ಫೆಬ್ರುವರಿ ೧೪, ೧೯೯೯ — **– ಶಂಕರ ಮೊಕಾಶಿ ಪುಣೇಕರ**

ಧಾರವಾಡ–೫೮೦ ೦೦೭

# ಧೂಳಿದರ್ಶನ

ಗೆಳೆಯ ಮೊಕಾಶಿಯವರ ಈ ಮೊಟ್ಟಮೊದಲನೆಯ ಕಾದಂಬರಿಗೆ ನಾನು ಮುನ್ನುಡಿ ಬರೆಯಲು ಒಪ್ಪಿಕೊಂಡದ್ದು ಕೇವಲ ಒಂದು ವಿಶಿಷ್ಟ ಉದ್ದೇಶಕ್ಕಾಗಿ– ಉಪಸಂಹಾರದಲ್ಲಿ ಅವರೇ ಹೇಳಿರುವಂತೆ, ಗಳಗನಾಥರ ಹಾಗೂ ಶ್ರೀನಿವಾಸರ ಮಾರ್ಗವನ್ನೇ ಅನುಸರಿಸುವ ಈ ಸಂಪ್ರದಾಯಬದ್ಧವಾದ ಕಾದಂಬರಿಯನ್ನು ಅವರ ಹತ್ತಿರದ ಸ್ನೇಹಿತನಾದ ನಾನು ಎಷ್ಟರಮಟ್ಟಿಗೆ ಅರ್ಥಮಾಡಿಕೊಂಡಿದ್ದೇನೆ ಎಂದು ನಾನೇ ತಿಳಿದುಕೊಳ್ಳುವದಕ್ಕಾಗಿ. ಅದಲ್ಲದೆ ಅವರ ಸ್ನೇಹವಾಗಲಿ, ಸಂಪಾದಕರ ಒತ್ತಾಯವಾಗಲಿ ಇಲ್ಲಿ ಕಾರಣವಾಗಿಲ್ಲ.

ಕನ್ನಡದಲ್ಲಿ ಇತ್ತೀಚೆಗೆ ಕಾದಂಬರಿಗಳ ಸಂಖ್ಯೆ ಬೆರಗುಗೊಳಿಸುವಂತಹದಿದ್ದರೂ, ಕನ್ನಡದ ಕಾದಂಬರಿಯ ಸಂಪ್ರದಾಯ ಇನ್ನೂ ನಿರ್ಮಾಣವಾಗಿಲ್ಲವೆಂಬ ಲೇಖಕರ ಮಾತಿಗೆ ನನ್ನದೂ ಒಪ್ಪಿಗೆಯಿದೆ. ಅನುಕರಣ ಹಾಗೂ ಅನನುಭವಗಳ ಸೀಮೆಯನ್ನು ದಾಟಿದೆ. ನಮ್ಮ ಲೇಖಕರು ಹೊಸ ಮಾರ್ಗಗಳ ವಿಷಯವಾಗಿ ಆಳವಾಗಿ ಆಲೋಚಿಸುತ್ತಿದ್ದಾರೆ. ಭಾಷೆಯ ಮೆರುಗು, ತಂತ್ರಗಳ ಹೊಸತನ, ನಿರೂಪಣದಲ್ಲಿಯ ಚಮತ್ಕಾರ. ಇವುಗಳಲ್ಲಿ ಸಾಕಷ್ಟು ಪ್ರಗತಿಯಾಗಿದೆಯೇನೋ ನಿಜ. ಆದರೂ ನಮ್ಮ ಲೇಖಕರಲ್ಲಿ ಇರಬೇಕಾದಷ್ಟು ಜೀವನಶ್ರದ್ಧೆಯಿಲ್ಲವೆಂದು ವಿಷಾದದಿಂದ ಒಪ್ಪಿಕೊಳ್ಳ ಬೇಕಾಗಿದೆ. ಅದು ಇರುವ ಕೆಲವೊಂದು ಶ್ರೇಷ್ಠ ಕೃತಿಗಳತ್ತ ನಮ್ಮ ಓದುಗರ ಲಕ್ಷ್ಯ ಹೆಚ್ಚಾಗಿ ತಿರುಗಿಲ್ಲ. ಶ್ರೀ ದೇವುಡು ಅವರ 'ಅಂತರಂಗ', ಶ್ರೀ ಕುವೆಂಪುರವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ', ಕಾರಂತರ 'ಬೆಟ್ಟದ ಜೀವ', ಅಯ್ಯರರ 'ದೆಯ್ಯದ ಮನೆ', ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ' ಇಂಥ ಕೃತಿಗಳು ನಮ್ಮ ಜನಮನದಲ್ಲಿ ಇನ್ನೂ ಆಳವಾಗಿ ಬೇರೂರಿಲ್ಲ. ಇದಕ್ಕೆ ನಮ್ಮ ಓದುಗರ ಉದಾಸೀನಭಾವವೂ ಸಾಕಷ್ಟು ಕಾರಣವಾಗಿದೆ. ಹಿರಿಯರಿಗೆ ಕಾದಂಬರಿ ಓದಿ ಮರೆಯುವ ವಸ್ತು, ಕಿರಿಯರಿಗೆ ಸಿನೆಮಾ ಚಹಗಳ ಜೊತೆಗೆ ಇದೂ ಒಂದು ಅವಶ್ಯವಾದ ಚಟ. ಹೀಗಿದ್ದಾಗ ಕಾದಂಬರಿಯ ಸಂಖ್ಯೆ ಏರಿದರೂ, ಬೆಲೆ ಇಳಿಯುವದು ಅನಿವಾರ್ಯ ವಾಗಿದೆ.

ಮೊಕಾಶಿಯವರ ಪ್ರಸ್ತುತ ಕಾದಂಬರಿ ಈ ಜಾತಿಗೆ ಸೇರಿಲ್ಲವೆಂಬ ವಿಚಾರವೇ



ನನಗೆ ಅತ್ಯಂತ ಸಮಾಧಾನವನ್ನು ಒದಗಿಸಿದೆ. ಮೊದಲಿನಿಂದಲೂ ಈ ಕಾದಂಬರಿಯ ಜೊತೆಗೆ ನಾನು ಭಾವನಾತ್ಮಕ ಸಂಬಂಧವನ್ನಿಟ್ಟುಕೊಂಡದ್ದರಿಂದ ಅದರ ಗುಣ ದೋಷಗಳೆಲ್ಲ ನನ್ನ ಕಣ್ಣಿಗೆ ಬಿದ್ದಿವೆ. ಕತೆಯ ಬೆಳವಣಿಗೆ, ವಸ್ತುವಿನ ರೂಪ, ಇವೆಲ್ಲ ನನಗೆ ಕುತೂಹಲ ಹುಟ್ಟಿಸಿದವು. ಕಾದಂಬರಿ ಕೊನೆಯಲ್ಲಿ ಯಾವ ಔನ್ನತ್ಯವನ್ನೇ ಮುಟ್ಟಲಿ, ಯಾವ ಉದಾತ್ತ ಭಾವನೆಗಳನ್ನೇ ಅರಳಿಸಲಿ, ಮೂಲದಲ್ಲಿ ಆಕರ್ಷಕವಾಗುವಂತೆ ಕತೆ ಹೇಳುವದೇ ಅದರ ಗುರಿಯಾಗಿರಬೇಕು. ಇಲ್ಲಿಯ ಕತೆಯ ಆಕರ್ಷತೆಯ ವಿಷಯವಾಗಿ, ಕಥನಕೌಶಲದ ವಿಷಯವಾಗಿ ನನಗೆ ಸಂದೇಹವೇ ಉಳಿದಿರಲಿಲ್ಲ.

ಆದರೆ ಈ ಕೃತಿಯ ಪ್ರಮುಖ ಆಕರ್ಷಣೆಯೆಂದರೆ ಇಲ್ಲಿಯ ಪಾತ್ರಸೃಷ್ಟಿ. ಇಲ್ಲಿಯ ಕೆಲವೊಂದು ಪಾತ್ರಗಳಂತೂ ತಮ್ಮ ಸಜೀವತೆಯಿಂದ, ಆಂತರಿಕ ಶಕ್ತಿಯಿಂದ, ಸ್ವಭಾವ ವಿಲಕ್ಷಣತೆಯಿಂದ ಕಾದಂಬರಿಯ ಹೊರಗೂ ಜೀವಿಸಿರಬಲ್ಲವು. ಅವುಗಳ ಚಟುವಟಿಕೆಗಳು, ಧ್ಯೇಯ–ಧೋರಣೆಗಳು. ವಿಶ್ವಾಸ–ಶ್ರದ್ಧೆಗಳು ಕಾದಂಬರಿಗಷ್ಟೇ ಪರಿಮಿತವಾಗಿಲ್ಲ. ಮಗನ ಸಲುವಾಗಿ ಗಂಗೆಯನ್ನೂ ತಿರಸ್ಕರಿಸಿ, ತಮ್ಮನ ನಿರಂತರ ದ್ವೇಷವನ್ನು ಕಟ್ಟಿಕೊಂಡು ಕೊನೆಯವರೆಗೂ ಹೋರಾಡುವ ಗಂಗವ್ವನ ಛಲ, ಕಾಲಿನ ಹಿಮ್ಮಡ ಒಂದಕ್ಕೊಂದು ತಾಕಲಾಡಿದರೆ 'ಎಲ, ಹಿಂದೆ ಎಂದೂ ಹೀಗೆ ಆಗಿರಲಿಲ್ಲವಲ್ಲ!' ಎಂದು ಉದ್ಗಾರ ತೆಗೆಯುವ 'ರಾಘೋಬಾ ಭರಾರಿ'ಯ ಗೋಪುರವಾಗಿ ನಿಲ್ಲುವ ಅಹಂಭಾವ. ತನ್ನನ್ನು ಕೇಳದೆ ಆಸ್ತಿ ಮಾರಿದನೆಂಬ ಸಿಟ್ಟಿಗೆ ತಂದೆಯ ಶ್ರಾದ್ಧವನ್ನೂ ಕೂಡ ಮಾಡದ ದೇಸಾಯರ ಆತ್ಮಗೌರವ. ಪ್ರತಿಕ್ಷಣಕ್ಕೆ ಸೋತರೂ ಬಾಳನ್ನು ಹದಗೊಳಿಸಲೆತ್ನಿಸುವ ಕಿಟ್ಟಿಯ ಹಾರ್ದಿಕತೆ. ತನ್ನ ಯಜಮಾನನ ಗೌರವರಕ್ಷಣೆಗಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿದ ಮೆಹಬೂಬಜಾನಳ ಶ್ರದ್ಧೆ. ತಾಲೂಕು ಕಚೇರಿಯ ವಿಷಮ ವಾತಾವರಣದಲ್ಲಿಯೂ ತನ್ನ ತತ್ವವನ್ನು ಎಚ್ಚರದಿಂದ ಕಾಯ್ದುಕೊಳ್ಳುವ ಜಾರ್ಜಿಯ ಸಹಜ ಘನತೆ, ಹೆದರಿ ಹೆದರಿಸಿ, ಹುಚ್ಚನಂತೆ ನಟಿಸಿ, ತನ್ನ ಜೀವನರಹಸ್ಯವನ್ನು ಸರ್ಪದಂತೆ ಕಾಯುವ ವೆಂಕಟರಾಯನ ಗೂಢ ಇತಿಹಾಸ– ಇವೆಲ್ಲವುಗಳನ್ನು ಒಂದು ಕಾದಂಬರಿ ಹೇಗೆ ಪೂರ್ಣವಾಗಿ ತೆರೆದು ತೋರಿಸೀತು? ಇಲ್ಲಿ ಪಾತ್ರನಿರ್ಮಾಣ ಕೇವಲ ಚಿತ್ರಲೇಖನವಾಗಿಲ್ಲ ಅಥವಾ ಮೂರ್ತಿಶಿಲ್ಪವೂ ಆಗಿಲ್ಲ. ತಂತಮ್ಮ ವ್ಯಕ್ತಿತ್ವಗಳ ಪ್ರಭಾವದಿಂದ ಜೀವನದ ರೂಪವನ್ನೇ ಬದಲಿಸಲು ಹಟ ತೊಟ್ಟ ಪಾತ್ರಗಳಿವು. ಪ್ರಖ್ಯಾತ ಫ್ರೆಂಚ್ ಕಾದಂಬರಿಕಾರನಾದ ಬಾಲ್ಸಾಕ್ ಸಾಯುತ್ತಿರುವಾಗ ಯಾವ ಡಾಕ್ಟರನನ್ನು ಕರೆತರಬೇಕೆಂದು ಕೇಳಿದರೆ, ತನ್ನ ಒಂದು ಕಾದಂಬರಿಯಲ್ಲಿಯ

ಪಾತ್ರದ ಹೆಸರನ್ನೇ ಹೇಳಿದನಂತೆ. ಸಾಹಿತ್ಯದ ವಿಪರೀತ ಸೃಷ್ಟಿಯಲ್ಲಿ ಪಾತ್ರನಿರ್ಮಾಣ ಅತ್ಯಂತ ಕಠಿಣವಾದ ಕಾರ್ಯ. ಇಲ್ಲಿ ಬೀಜದಿಂದ ವೃಕ್ಷ ಬೆಳೆಯುವದಿಲ್ಲ. ವೃಕ್ಷದಿಂದ ಬೀಜದವರೆಗೆ ಹೋಗಿ, ಜೀವನವನ್ನು ಪುನಃ ಸೃಷ್ಟಿಸಬೇಕಾಗುತ್ತದೆ; ಸುತ್ತಲಿನ ಜೀವನದಿಂದ ಒಪ್ಪಿಗೆಯನ್ನೂ ಪಡೆಯಬೇಕಾಗುತ್ತದೆ. ಈ ದೃಷ್ಟಿಯಿಂದ ವಿಚಾರ ಮಾಡಿ ನೋಡಿದಾಗ ಇಲ್ಲಿಯ ಪಾತ್ರಸೃಷ್ಟಿ ಅತ್ಯಂತ ಯಶಸ್ವಿಯಾಗಿದೆಯೆಂದೇ ನನ್ನ ಅಭಿಪ್ರಾಯ. ಅಂತೆಯೇ ಒಮ್ಮೊಮ್ಮೆ ಇಲ್ಲಿಯ ಪಾತ್ರಗಳು ಲೇಖಕನ ತಂತ್ರಕ್ಕೂ ವಿರೋಧವಾಗುವಂತೆ ವರ್ತಿಸುತ್ತವೆ. ಅಲ್ಲಿ ಲೇಖಕ ಸೋಲನ್ನೊಪ್ಪಿಕೊಳ್ಳದೆ ವಿಧಿಯಿಲ್ಲ. ಆದರೆ ಈ ಸೋಲಿನಂಥ ಗೆಲುವು ಬೇರೆಯಿಲ್ಲ; ಉದಾಹರಣೆಗಾಗಿ ಅಚ್ಯುತನ ಪಾತ್ರ. ಮುಂಬಯಿಯಷ್ಟು ದೂರದಲ್ಲಿದ್ದುಕೊಂಡು ಅಚ್ಯುತ ತನ್ನ ಅಮಿತ ಉತ್ಸಾಹದಿಂದ ಧಾರವಾಡದ ಜೀವನದ ಗತಿಯನ್ನೂ, ಅದಕ್ಕನುಗುಣವಾಗಿ ಕತೆಯನ್ನೂ ಬೇರೆ ಮಾರ್ಗಕ್ಕೆ ಹಚ್ಚುತ್ತಾನೆ. ಆದರೆ ಇದರಿಂದ ವಸ್ತುವಿನ ರಚನೆಗೆ ಯಾವ ಹಾನಿಯೂ ಆಗಿಲ್ಲವೆಂಬುದು ವಿಶೇಷ.

ಈ ಕಾದಂಬರಿಯ ವಾಸ್ತವತೆಯ ಬಗ್ಗೆಯೂ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. 'ಜೀವನದ ಯಥಾರ್ಥ ಚಿತ್ರಣ'ವೆಂದೊ, ಅಥವಾ 'ಜನಜೀವನದ ಪ್ರತಿಬಿಂಬ'ವೆಂದೊ ಕರೆಯಿಸಿಕೊಳ್ಳುವ ನಮ್ಮ ಕಾದಂಬರಿಗಳಲ್ಲಿ ಎಷ್ಟರಮಟ್ಟಿಗೆ ವಾಸ್ತವತೆ ಇರುತ್ತದೆ? ಅಥವಾ ಇಷ್ಟು ಮಾಡಿಬಿಟ್ಟರೆ ವಾಸ್ತವತೆಯ ಕೆಲಸ ತೀರಿಸಿದಂತಾಯಿತೆ? ವಾಸ್ತವಮಾರ್ಗದ ಲೇಖಕನಿಗೆ ಜೀವನದ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸುವ ಆಂತರಿಕ ಪ್ರಜ್ಞೆಯೊಂದು ಸದಾ ಜಾಗೃತವಾಗಿರಬೇಕು. ಕೇವಲ ಕಾದಂಬರಿಲೋಕದ ಸುಖದುಃಖಗಳೊಂದಿಗೆ ಲೇಖಕ ಸಮರಸನಾಗಿದ್ದರೆ ಮಾತ್ರ ಸಾಲದು. ಆ ತನ್ಮಯತೆಯನ್ನು ಮೀರಿ ವಿವೇಕವೊಂದು ಅವನಲ್ಲಿ ಇರಬೇಕಾಗುತ್ತದೆ. ವಾಸ್ತವವಾದಿಗೆ ಸರ್ಜನ್ನನ ಧೈರ್ಯ ಅನಾಸಕ್ತಿಗಳಿರಬೇಕು. ಪ್ರಸ್ತುತ ಕಾದಂಬರಿಯಲ್ಲಿ ಈ ಗುಣ ಪ್ರಮುಖವಾಗಿರುವದನ್ನು ನಾನು ಕಂಡಿದ್ದೇನೆ. ಗಂಗವ್ವ–ರಾಘಪ್ಪರ ದೀರ್ಘದ್ವೇಷ, ಕಿಟ್ಟಿಯ ಮನೋದೌರ್ಬಲ್ಯ, ಜಾರ್ಜಿ ಹಾಗೂ ಮೆಹಬೂಬಜಾನರ ಔದಾರ್ಯ, ಅಚ್ಯುತನ ಯೌವನೋತ್ಸಾಹ, ಚಂಪಕ್ಕನ ಮರಣ, ತಾಯಿ ಗರ್ಭವತಿಯಾದಾಗ ರತ್ನಾಳಲ್ಲಿ ಮೂಡಿದ ಅಸೂಯೆ– ಇವುಗಳನ್ನು ಚಿತ್ರಿಸುವಾಗಲೆಲ್ಲ ಲೇಖಕರು ಎಲ್ಲಿಯೂ ಭಾವಾವೇಶಕ್ಕೆ ಎಡೆಗೊಟ್ಟಿಲ್ಲ. ಅಂತಲೇ ಇಲ್ಲಿಯ ಎಲ್ಲ ಸನ್ನಿವೇಶಗಳ ಹಿಂದೆಯೂ ಒಂದು ಸೂಕ್ಷ್ಮ ವಿಡಂಬನ, ಇಲ್ಲವೆ ಮೃದುವಾದ ಕರುಣೆ ಮಿಡಿಯುತ್ತದೆ. ಇಲ್ಲಿಯ ವ್ಯಕ್ತಿಗಳ ಬಲಾಬಲಗಳ, ದೈವಗತಿಯ ಪರೀಕ್ಷೆಯಲ್ಲಿ ಲೇಖಕರ ನಿರ್ಣಾಯಕಬುದ್ಧಿ ಎಂದೂ ತೂಕ ತಪ್ಪಿಲ್ಲ. ಉದಾಹರಣೆಗಾಗಿ 'ಕಿಟ್ಟಿಯ



ಫಿರತಿ' ಪ್ರಕರಣವನ್ನು ಓದಿ ನೋಡಬಹುದು. 'ಅಥ ಕೇನ ಪ್ರಯುಕ್ತೋಯಂ...' ಎಂಬ ಗೀತವಾಕ್ಯದಿಂದ ಪ್ರಾರಂಭವಾಗಿ 'ನಿಮ್ಮ ಹೆಲ್ಥದ ಕಡೆಗೆ ನೀವು ಲಕ್ಷ್ಯ ಕೊಡಬೇಕರಿ' ಎಂಬ ಜಾರ್ಜಿಯ ಉಪದೇಶದೊಂದಿಗೆ ಆ ಪ್ರಕರಣ ಕೊನೆಗೊಳ್ಳುತ್ತದೆ. ಸತ್ಯವನ್ನು ನೋಡುವಾಗಿನ ಹಲವಾರು ದೃಷ್ಟಿಕೋನಗಳಲ್ಲಿಯೂ, ಗೊಂದಲಗೆಡದೆ ಇರುವದೇ ವಾಸ್ತವತೆಯ ನಿಜವಾದ ರಹಸ್ಯ.

ಸಹಜವಾಗಿಯೇ ಇನ್ನೊಂದು ಪ್ರಶ್ನೆ ಇಲ್ಲಿ ಅದ್ಭುತವಾಗುತ್ತದೆ. ಇದೊಂದು ನೀತಿಪರ ಕಾದಂಬರಿಯೇ? ಹೌದು, ಎಂದೇ ಉತ್ತರವೀಯಬೇಕಾಗುತ್ತದೆ. ಕಲೆಗೂ ನೀತಿಗೂ ಸಂಬಂಧವೇ ಇಲ್ಲ ಎಂದು ಹೇಳುವ ನವೀನ ಲಾಕ್ಷಣಿಕರು ನೀತಿಯನ್ನು ಬಹಳ ಪರಿಮಿತ ಅರ್ಥದಲ್ಲಿ ಗ್ರಹಿಸುತ್ತಾರೆ. ಅಗ್ನಿಶಾಮಕ ಮೋಟಾರು ಅಪಘಾತ ವೆಸಗಿದರೂ ಅಪರಾಧವಲ್ಲವೆಂದು ಕಾಯದೆ ಇರುವಂತೆ, ಕಲಾವಿದ ನೀತಿ ಮಾರ್ಗವನ್ನು ಅನುಸರಿಸದಿದ್ದರೂ ಅಪರಾಧವಲ್ಲವೆಂದು ಕಾಯದೆ ಇರುವಂತೆ, ಕಲಾವಿದ ನೀತಿಮಾರ್ಗವನ್ನು ಅನುಸರಿಸದಿದ್ದರೂ ನಡೆಯುತ್ತದೆಂಬ ತಿಳುವಳಿಕೆ ಇದೆ. ಆದರೆ ಜೀವನದ ಯಾವ ಸಮಸ್ಯೆಯನ್ನೂ ಚರ್ಚಿಸಲು ಸಿದ್ಧನಾಗಿರುವ ಲೇಖಕನಿಗೆ ನೀತಿಯೊಂದೇ ಏಕೆ ಬಹಿಷ್ಕೃತವಾಗಿರಬೇಕೋ ತಿಳಿಯದಾಗಿದೆ. ಇದರಿಂದ ಸಾಹಿತ್ಯ ಕೇವಲ ನೀತಿಬೋಧೆಯಾಗಿ ನೀರಸವಾಗಬೇಕೆಂದು ನನ್ನ ಅಭಿಪ್ರಾಯವಲ್ಲ. ಆದರೆ ರಸಪೋಷಣೆಯ ನೆವದಲ್ಲಿ ಜೀವನದ ಮೂಲಭೂತ ಪ್ರಶ್ನೆಗಳನ್ನು ತಪ್ಪಿಸುತ್ತ ಹೋಗುವದರಲ್ಲಿ ಯಾವ ಲಾಭವೂ ಇಲ್ಲ; ಹಾನಿ ಬೇಕಾದಷ್ಟಿದೆ. ಮೇಲಾಗಿ ವ್ಯಕ್ತಿಗಳ ಆಂತರಿಕ ಜೀವನದ ಬೆಳವಣಿಗೆಯಲ್ಲಿಯೂ ಒಂದು ಬಗೆಯ ಮನೋರಂಜಕತೆಯಿದೆ. ತನ್ನ ಹೃದಯದೌರ್ಬಲ್ಯದ ಮೂಲಕ ಕೀಳುತನದಲ್ಲಿ ಮನಸ್ಸು ಹಾಕುವ ಕಿಟ್ಟಿ, ರಾಘಪ್ಪನ ಮರಣದ ನಂತರ ಕರ್ಮಠತನಕ್ಕೆ ಜಿಗಿಯುತ್ತಾನೆ. ವಿಶ್ವವಿಜೇತನ ಸಾಮರ್ಥ್ಯವುಳ್ಳ ರಾಘಪ್ಪನಲ್ಲಿಯೂ ಅಂತಃಕರಣದ ಸೆಲೆಯಿದೆ. ಗಂಗವ್ವನ ಅಸಾಮಾನ್ಯ ಧೈರ್ಯ ಹಾಗೂ ಹಟದ ಹಿಂದೆ ಅವಳಿಗರಿಯದೆಯೇ ಒಂದು ದುಷ್ಟತನ ನೆಲೆನಿಂತಿದೆ. ತಾವು ನಡೆಯುವ ಮಾರ್ಗದಲ್ಲಿ ವಿಶ್ವಾಸವಿಟ್ಟ ದೇಸಾಯರು ಕಿಟ್ಟಿಯ ಎದುರು ಸುಳ್ಳು ಹೇಳಲೂ ಕೂಡ ಹಿಂಜರಿಯುವದಿಲ್ಲ. ಜಾರ್ಜಿಯ ಜೀವನ ಆದರ್ಶವಾದದ್ದೇನೋ ನಿಜ; ಆದರೆ ಅದರಲ್ಲಿ ಜೀವಂತ ತನವಿಲ್ಲ; ಹೆಪ್ಪುಗಟ್ಟಿದ ತತ್ತ್ವದಂತೆ ಅವನು ಕಾಣುತ್ತಾನೆ. ಇಂಥ ನೀತಿಪರವಾದ ಪ್ರಶ್ನೆಗಳು ಎದುರುಬಂದಾಗ ಅವುಗಳನ್ನು ಎದುರಿಸದಿರುವ ದೌರ್ಬಲ್ಯವನ್ನು ಸಾಹಿತ್ಯ ಏಕೆ ತೋರಿಸಬೇಕು? ಜೀವನದ ಮೌಲ್ಯಗಳನ್ನು ಸರಿಯಾಗಿ ವಿಂಗಡಿಸಿ ನೋಡುವ ವಿವೇಕಬುದ್ಧಿ ಸಮಾಜದ ಅಂತಃಸಾಕ್ಷಿಯಗಬೇಕಾದ ಲೇಖಕನಿಗೆ ಇರಬೇಡವೆ?

ಈ ಕಾದಂಬರಿ ಹತ್ತಾರು ವ್ಯಕ್ತಿಗಳ ಜೀವನದ ಆಗುಹೋಗುಗಳನ್ನು, ದೈವಗತಿಯನ್ನು ಚಿತ್ರಿಸುತ್ತದೆಯಾದರೂ, ಮುಖ್ಯವಾಗಿ ಇದು ಕಿಟ್ಟಿಯ ಆಂತರಿಕ ಹೋರಾಟದ ಕತೆ, ಕಿಟ್ಟಿಯ ಸಮಸ್ಯೆಗಳು ಮಹತ್ವದವಾಗಿರಲಿಕ್ಕಿಲ್ಲ; ಆದರೆ ಕಿಟ್ಟಿಯೇ ಒಂದು ಮಹತ್ವದ ಸಮಸ್ಯೆಯಾಗಿದ್ದಾನೆ. ಕಿಟ್ಟಿ ಜಾರ್ಜಿಯಂತೆ ಪ್ರಭಾವಶಾಲಿ ಯಾಗಲಾರ; ಆದರೆ ವಸಂತನಂತೆ ಆತ್ಮಹೀನನು ಆಗಲಾರ. ಇಂಥ ದ್ವಿಸ್ವಭಾವದ ಜನರಿಗೆ ಯಾವ ಸನ್ನಿವೇಶದಲ್ಲಿಯೂ ಧರ್ಮಸಂಕಟ ಪ್ರಾಪ್ತವಾಗುತ್ತದೆ. ಆಗ ಯಾರನ್ನು ಮೊರೆಹೋಗಬೇಕು? ಕಿಟ್ಟಿಯ ಸುತ್ತಮುತ್ತಲಿನ ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಶಕ್ತಿಯುತವಾದ ವ್ಯಕ್ತಿತ್ವವಿದೆ. ಆದರೆ ಇವನಿಗೋ ಅದೇ ದೊಡ್ಡ ಕೊರತೆ. ಅಂಥ ಪ್ರಸಂಗದಲ್ಲಿ ಯಾರನ್ನು ಅನುಸರಿಸಬೇಕು? ರಾಘಪ್ಪನನ್ನೇ? ತಾಯಿಯನ್ನೇ? ದೇಸಾಯರನ್ನೇ? ಜಾರ್ಜಿಯನ್ನೇ? ಅವರನ್ನು ಅನುಸರಿಸಿದರೂ ಲಾಭವಿದೆಯೇ? ಹಾಗೆ ಮಾಡಿದರೆ ಅವರ ಗುಣಗಳು ಇವನಲ್ಲಿ ಹಾಸ್ಯಾಸ್ಪದವಾಗಿ ದೋಷಗಳು ಇನ್ನೂ ವಿಕಾರವಾಗಿ ಕಾಣುವ ಸಂಭವವೇ ಹೆಚ್ಚು. ತನ್ನ ವ್ಯಕ್ತಿತ್ವವೇ ಕಳೆದುಹೋಗಿದೆ ಎಂಬ ಅರಿವು ಉಂಟಾದಾಗ ಈ ಜೀವ ಅದನ್ನು ಹುಡುಕಲು ಹಾತೊರೆಯುತ್ತದೆ. ಆ ಒದ್ದಾಟದ, ನೋವಿನ ಕರುಣಚಿತ್ರ ಹೃದಯವೇಧಕವಾಗಿದೆ. ಈ ಕಾರಣದಿಂದಲೇ ಕಿಟ್ಟಿ ಸಹಜವಾಗಿ ನಾಯಕನಾಗುತ್ತಾನೆ. ಅಂತಲೇ ಈ ಕಾದಂಬರಿಯ ಒಳಜೀವನಕ್ಕೂ ನೀತಿಗೂ ಸೂಕ್ಷ್ಮವಾದ ಸಂಬಂಧವಿದೆ.

ಹೀಗೆ ಸಂಕೀರ್ಣ ಪ್ರಶ್ನೆಗಳನ್ನೂ, ವಿಷಯವ್ಯಾಪ್ತಿಯನ್ನೂ ಪಡೆದ ಕಾದಂಬರಿಯ ಶೈಲಿಯೂ ವೈವಿಧ್ಯಪೂರ್ಣವಾಗಿದ್ದರೆ ಅದು ಸ್ವಾಭಾವಿಕವೇ. ಅದರಲ್ಲಿಯೂ ವಿಪುಲವಾಗಿ ಸಂಭಾಷಣೆಯನ್ನು ಬಳಸಿಕೊಂಡಾಗಲಂತೂ ಇದು ಅನಿವಾರ್ಯ. ಪ್ರಸ್ತುತ ಲೇಖಕರ ಶೈಲಿಯಲ್ಲಿ ಈ ಸಾಮರ್ಥ್ಯ ಬೇಕಾದಷ್ಟಿದೆ. ಗಂಗವ್ವ–ರಾಘಪ್ಪರ ವಾಗ್ಯುದ್ಧ, ರಾಘಪ್ಪ ವಸಂತನ ಮನವೊಲಿಸುವಾಗ ಹರಿಸಿದ ವಾಗ್ಲಹರಿ, ದೇಸಾಯರ ಮಾತಿನ ಬಿಗಿ, ರಾಘಪ್ಪ–ದೇಸಾಯರ ಸಂಭಾಷಣೆಯ ಚದುರಂಗದಾಟ, ಇವೆಲ್ಲ ಶ್ರೇಷ್ಠ ಸಂಭಾಷಣಾ ಶೈಲಿಯ ದ್ಯೋತಕವಾಗಿವೆ. ಕೆಲವು ಕಡೆಗೆ ಇಂಗ್ಲಿಷ್ ವಾಕ್ಯ ರಚನೆಯ ಪ್ರಭಾವ– ವಿಶೇಷವಾಗಿ ಸ್ವಭಾವವಿಶ್ಲೇಷಣೆಯ ಹೊತ್ತಿನಲ್ಲಿ– ಕಂಡು ಬರುತ್ತಿದೆ. ಆದರೆ ಎಲ್ಲಿಯೂ ಭಾಷೆ ಅನವಶ್ಯಕವಾಗಿ ಆಲಂಕಾರಿಕವಾಗಿಲ್ಲ. ಕೃತ್ರಿಮವಾಗಿಲ್ಲ. ನಿರೂಪಣದ ಸರಳತೆಯಲ್ಲಿ ವಿಶೇಷ ಸಂಯಮ ಕಾಣುತ್ತಿದೆ. ಕೆಲವು ಕಡೆಗಂತೂ ಭಾಷೆ ಸಾಂಕೇತಿಕವಾಗುವಷ್ಟು ಸಂಕ್ಷಿಪ್ತತೆಯನ್ನು ಪಡೆದಿದೆ. ಇನ್ನೊಂದು ಗಮನಾರ್ಹವಾದ ಮಾತೆಂದರೆ, ಇಡೀ ಕಾದಂಬರಿಯಲ್ಲಿ ಪ್ರಕೃತಿವರ್ಣನೆಗಾಗಲಿ, ವಿಷಯಾಂತರದ ಜಾದುಗಾರಿಕೆಗಾಗಲಿ ಅವಕಾಶವೇ ಇಲ್ಲ.



ಕಥನ ಕೊನೆಯವರೆಗೂ ನಿರರ್ಗಳವಾಗಿ ಒಂದೇ ನಿಟ್ಟಿನಲ್ಲಿ ಸಾಗಿದೆ. ಉತ್ತರ ಕರ್ನಾಟಕದ ಬಳಕೆ–ಮಾತಿನ ಪ್ರಯೋಗವೇ ಎಲ್ಲೆಡೆಗೂ ಹೆಚ್ಚಾಗಿರುವದರಿಂದ, ನಯ–ನಾಜೂಕು, ಕುಸುರಿನ ಕೆಲಸ, ಭಾಷೆಯ ಇಂಪು–ಸೊಂಪು ಹೆಚ್ಚಾಗಿ ಕಾಣಸಿಗುವದಿಲ್ಲ. ಆದರೆ ಉತ್ಕಟ ಸನ್ನಿವೇಶಗಳಲ್ಲಿ ಶೈಲಿ ಕಾವ್ಯದ ಕಾವಿನಿಂದ ಆವೇಶಗೊಳ್ಳುತ್ತದೆ. ಕಿಟ್ಟಿಯ ಮದುವೆಯ ಪ್ರಸಂಗದಲ್ಲಿ, ಮೆಹಬೂಬಜಾನ ಓಲಗದ ಸ್ವರಸೌಂದರ್ಯದಲ್ಲಿ ಲೀನಳಾದ ಸನ್ನಿವೇಶವನ್ನು ಇಲ್ಲಿ ನೆನೆಯಬಹುದು. ಅಥವಾ ಸಾಯುವ ಮುನ್ನ ರಾಘಪ್ಪ ದೇಸಾಯರಿಗೆ ಬರೆದ ಪತ್ರದಲ್ಲಿಯ ಭಾಗವನ್ನು ನೋಡಬಹುದು.

'...ನನ್ನ ಹೆಂಡತಿಯನ್ನು ನಾನು ಸಾವಿರ ಬಗೆಯಿಂದ ಪ್ರೀತಿಸಿದ್ದೇನೆ. ಅಷ್ಟು ಅನುಭವ ನಿಮಗೆ ಇರುವದು ಸಾಧ್ಯವಿಲ್ಲ. ಆದರೆ ಸಾವಿರದ ಒಂದನೆಯ ಬಗೆಯೂ ಇರುತ್ತದೆಂದು ಇದೇ ಬಾರಿ ನನ್ನಂಥವನಿಗೂ ಗೊತ್ತಾದದ್ದು. ಆಕೆಗೆ ನಾನು ಅನ್ಯಾಯ ಮಾಡಿದಾಗ, ಆಕೆ ಬೇನೆ ತಿನ್ನುವಾಗ, ಮೂಕತನದಿಂದ ಸಹಿಸುವಾಗ, ಕೊನೆಗೆ ಸತ್ತು ಹೋದಾಗ, ಕರುಣೆ, ಮಮತೆ, ಮಾಯೆ ನನ್ನಲ್ಲಿ ಪೂರಪೂರವಾಗಿ ಹರಿಯಿತು. ಅಪಾರವಾದ ಕನಿಕರ, ಸಮುದ್ರದಂಥ ಕನಿಕರ, ಸೆಲೆಸೆಲೆಯಾಗಿ ಹರಿಯುವ ಕನಿಕರ!... ಸಾಧುಸಂತರು ದೇವರನ್ನು ಹೀಗೆಯೇ ಪ್ರೀತಿಸಿದ್ದರೋ ಏನೋ ಎಂದು ನನ್ನ ಸಂಶಯ. ಎಷ್ಟು ಕಣ್ಣೀರು ಸುರಿಸಿದರೂ ಮುಗಿಯದ ಕರುಣೆ. ದೇಹಕ್ಕೆ ದೇಹ ಒಂದಾದರೂ ಮುಗಿಯದ ಮಮತೆ. ನನ್ನ ಹೆಂಡತಿಯ ಬಗ್ಗೆ ಇಷ್ಟು ಅಪಾರವಾದ ಉನ್ನತವಾದ ಪ್ರೇಮ ನನ್ನಲ್ಲಿ ಹುಟ್ಟಿತೆಂದು ನಾನು ಎಂದೂ ಎಣಿಸಿರಲಿಲ್ಲ...'

ರಾಘಪ್ಪನ ಜೀವನದ ರುದ್ರನಾಟಕಕ್ಕೆ ಸರಿಯಾದ ಭರತವಾಕ್ಯ!

ಇಲ್ಲಿಯವರೆಗೆ ನಾನು ಮಾಡಿದ್ದು ಕೇವಲ ಕೃತಿಪರಿಚಯ. ಇದಕ್ಕೆ ಮುನ್ನುಡಿ ಯೆಂಬ ದೊಡ್ಡ ಹೆಸರು ಕೂಡ ಅಗತ್ಯವಿಲ್ಲ. ಹೊಸಗನ್ನಡ ಕಾದಂಬರಿ ಹುಲುಸಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ. ಆದರ ಭವಿಷ್ಯದ ವಿಷಯವಾಗಿ ನನಗೂ ಕುತೂಹಲವಿದೆ. ಕಾದಂಬರಿ ಇಂದಿನ ಯುಗದ ಮಹಾಕಾವ್ಯ. ಆದ್ದರಿಂದಲೆ ಅದು ಇನ್ನೂ ಹೆಚ್ಚು ಹೊಣೆಗಾರಿಕೆಯನ್ನು ವಹಿಸಲು ಸಮರ್ಥವಾಗಬೇಕು. ನಮ್ಮ ನಾಡಿನಲ್ಲಿ ಹೊಸ ಮನ್ವಂತರ ಪ್ರಾರಂಭವಾಗಿದೆ. ಆದರೆ ಹಳೆಯ ಮನ್ವಂತರದ ಸಂಪೂರ್ಣ ಚಿತ್ರಗಳನ್ನು ನಾವೆಲ್ಲಿ ಕೊಟ್ಟಿದ್ದೇವೆ? ಒಂದು ಕಾದಂಬರಿಯಿಂದಲೇ ಈ ಕೆಲಸ ಸಾಧಿಸಲಾಗದು. ಸಾಲುಸಾಲಾಗಿ ಅಂಥ ಕಾದಂಬರಿಗಳು ಹುಟ್ಟಬೇಕು. ಸಂಪ್ರದಾಯ ನಿರ್ಮಾಣವಾಗಬೇಕು. ಸ್ಕಾಟ್. ಡಿಕೆನ್ಸ್, ಗಾಲ್ಸವರ್ದಿ ಹುಟ್ಟಿದ

ಮೇಲೆ ಜಾಯ್ಸ ಬರಲಿ, ಸ್ವಾಗತಿಸೋಣ. ಅಲ್ಲಿಯವರೆಗೆ ಭದ್ರವಾದ ತಳಹದಿಯ ಮೇಲೆ ಕಾದಂಬರಿ ನಿಲ್ಲಲಿ. ಮೊಕಾಶಿಯವರು ಈ ದಿಶೆಯಲ್ಲಿ ಪ್ರಯತ್ನ ಮಾಡಿ ನಿಜವಾಗಿಯೂ ಅಭಿನಂದನಾರ್ಹರಾಗಿದ್ದಾರೆ. ಅವರ ಕೈಯಿಂದ ಇಂಥ ಹಲವಾರು ಕೃತಿಗಳು ಹೊರಬರಲೆಂದೇ ನನ್ನ ಹಾರೈಕೆ.

ಧಾರವಾಡ — ಕೆ.ಡಿ. ಕುರ್ತಕೋಟಿ



## ಡಾ॥ ಶಂಕರ ಮೊಕಾಶಿ ಪುಣೇಕರ ಅವರ ಕೃತಿಗಳು

ಗಾನಕೇಳಿ (ಕವನಗಳು–ಭಾಗಶಃ), ೧೯೪೭

ಗಂಗವ್ವ ಗಂಗಾಮಾಯಿ (ಕಾದಂಬರಿ) ೧೯೫೮. ೧೯೭೦ ೧೯೮೪, ೧೯೮೬, ೧೯೯೩, ೧೯೯೯ (ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್‌ನಿಂದ ಭಾರತದ ಎಲ್ಲ ರಾಷ್ಟ್ರೀಯ ಭಾಷೆಗಳಲ್ಲಿ ಅನುವಾದ)

ಬೇಂದ್ರೆಯವರ ಕಾವ್ಯಮೀಮಾಂಸೆ, ೧೯೬೪, ೧೯೯೦.

ಮಾಯಿಯ ಮೂರು ಮುಖಗಳು (ಕವನ ಸಂಕಲನ), ೧೯೭೦.

ಪಾಶ್ಚಾತ್ಯ ವಿಮರ್ಶೆಯ ಇತಿಹಾಸ, ೧೯೭೬, (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ).

ಸಾಹಿತ್ಯ ಮತ್ತು ಅಭಿರುಚಿ, ೧೯೮೨ (ಕರ್ನಾಟಕ ಸಾಹಿತ್ಯ ಅಕಾಡೆಮಿ ವಿಶೇಷ ಬಹುಮಾನ)

ಅವಧೇಶ್ವರಿ (ವೇದಕಾಲೀನ ರಾಜಕೀಯ ಕಾದಂಬರಿ), ೧೯೮೭, ೧೯೮೯, ೧೯೯೫ (ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ).

ನಟ–ನಾರಾಯಣಿ (ಕಾದಂಬರಿ), ೧೯೮೮ ('ಸುಧಾ' ವಾರಪತ್ರಿಕೆ ಬಹುಮಾನ)

ವಿಪರ್ಯಾಸ ವಿನೋದ (ನಾಟಕ), ೧೯೮೮.

ಬಸವೇಶ್ವರ (ಭಾಗಶಃ), ೧೯೮೮

ಡೆರಿಕ್ ಡಿಸೋಜಾ ಮತ್ತು ಇತರ ಕಥೆಗಳು, ೧೯೯೦.

The Captive (Poems- With a Foreword by Sir Herbert Read), 1965.

The Cycle of Seasons (Rtusamhara rendered into Poetry), 1966.

The Later Phase in the Development of W. B. Yeats, 1966.

The Pretender (Poems), 1968

P. Lal: an Appreciation, 1968

An Epistle to Professor David Mc Cutchion (Satirical Verse)

Indo-Anglian Creed (Criticism- Presented at the Socio-Linguistics Scminar in New Zealand), 1972

Vinayaka Krishna Gokak (Criticism), 1975

Jnanapith Laureates of Karnataka (Kuvempu Vidyavardhaka Trust Award)

Studies in Indo- English Literature, 1978
Avadhoota Gita (Translation of Puurohit Swami; Edited with Additional Material and An Essay on the 'Avadhoota' Philosophy), 1980.
Compulsory Capitalisation Scheme, 1982.
Mohenjodaro Seals, 1984
Tent Pole (Poems), 1987.
Parodigms (Light Verse), 1991
Harijan Contribution to Mediaeval Indian Thought, 1991.
Nana's Confession (English Translation of His Novel, Nata-Narayani), 1992.
Chomsky- Skinner Experimental Method in Language Teaching, 1995.



# ಅರ್ಪಣ

ನನ್ನ ಅಜ್ಜ
ದಿವಂಗತ ರಾಮಚಂದ್ರ ಬಾಪೂಜಿ ಪುಣೇಕರ (ಬಾಬಾ)
ಹಾಗೂ ಅಜ್ಜಿ
ದಿವಂಗತ ಸೀತಾಬಾಯಿ ರಾಮಚಂದ್ರ ಪುಣೇಕರ (ಅಂಬಕ್ಕ)
ಇವರಿಗೆ
ಪ್ರೇಮಪೂರ್ವಕವಾಗಿ
ಈ ಪ್ರಥಮ ಕೃತಿ ಸಮರ್ಪಿತ

–ಇಬ್ಬಗೆಯಿಂದ ಮೊಮ್ಮಗನಾದ ಶಂಕರ

# ಪರಿವಿಡಿ


| | |
|---|---|
| ಶುಭ ಸಂದೇಶ | III |
| ಚೆನ್ನುಡಿ | IV |
| ಎರಡು ನುಡಿ | V |
| ಅಧ್ಯಕ್ಷರ ಮಾತು | VI |
| ಪ್ರಕಾಶಕರ ಮಾತು | VII |
| ಆಯ್ಕೆ ಸಮಿತಿ | IX |
| ಲೇಖಕನ ಎರಡು ಮಾತು | X |
| ಅರಿಕೆ | XI |
| ಧೂಳಿದರ್ಶನ | XII |
| ಡಾ॥ ಶಂಕರ ಮೊಕಾಶಿ ಪುಣೇಕರ ಅವರ ಕೃತಿಗಳು | XIX |
| ಗಂಗವ್ವ ಗಂಗಾಮಾಯಿ | ೧–೨೯೬ |

# ಗಂಗವ್ವ ಗಂಗಾಮಾಯಿ

# ೧ : ಗಂಗವ್ವ ಗಂಗಾಮಾಯಿ

ಗಂಗವ್ವನನ್ನು ಎಲ್ಲರೂ ಬಲ್ಲರು. ನಾಲ್ವತ್ತನೆಯ ವರ್ಷಕ್ಕೆ ಪತಿಯನ್ನು ಕಳೆದುಕೊಂಡಮೇಲೆಯೂ ಅವಳು ಬದುಕಿದಳು, ತನ್ನ ಒಬ್ಬನೇ ಒಬ್ಬ ಮಗ ಕಿಟ್ಟಿಗಾಗಿ. ಮೊದಲೇ ಬಡತನ. ಅದರಲ್ಲಿಯೂ ಗಳಿಸುವ ಕೈ ಕಣ್ಮರೆಯಾದ ಮೇಲೆ ಮನೆತನದ ಗತಿ ದೇವರೇ ಬಲ್ಲ ! ಈಗ ಹದಿನೆಂಟು ವರುಷದವನಾಗಿದ್ದಾನೆ ಕಿಟ್ಟಿ. ಈ ಎಂಟು ವರ್ಷ ಗಂಗವ್ವ ಸೋಸಿದ ಬವಣೆ ಅವಳಿಗೇ ಗೊತ್ತು. ಆದರೆ ಎಲ್ಲವನ್ನೂ ಸಹಿಸಿಕೊಂಡಳು, ಕಿಟ್ಟಿಗಾಗಿ. ತಾನು ಅರೆಹೊಟ್ಟೆಯುಂಡು ಅವನಿಗೆ ಉಣಿಸಿದಳು. ತಾನು ಹೆರವರಲ್ಲಿ ಅಡಿಗೆ ಮಾಡಿ ಕಿಟ್ಟಿಯನ್ನು ಶಾಲೆಗೆ ಕಳಿಸಿದಳು. ಕಿಟ್ಟಿ ಅಂತೂ ಮ್ಯಾಟ್ರಿಕ್ ಪರೀಕ್ಷೆ ಪಾಸಾದ. ಮಾಮಲೇದಾರ ಕಚೇರಿಯಲ್ಲಿ ಕೆಲಸವೂ ದೊರಕಿತು. ತಾಯಿ ತನ್ನ ಪ್ರಯತ್ನದ ಫಲವನ್ನು ಕಣ್ತುಂಬ ನೋಡಿ ಸಂತಸಪಟ್ಟಳು. ಆದರೆ ಆಸೆಗೆ ಕೊನೆಮೊದಲೇ ? ಇನ್ನೊಂದು ಮನದ ಹಂಬಲು – ಕಿಟ್ಟಿಗೆ ಸುಸ್ವರೂಪಿ ಹೆಂಡತಿಯನ್ನು ಜತೆ ಮಾಡಿಕೊಟ್ಟು ತಾನು ಕಣ್ಮುಚ್ಚುವದು. ಅವನು ತನ್ನದೇ ಒಲೆ ಹೂಡಿ ಪ್ರಪಂಚ ಸುರುವು ಮಾಡಿದನೆಂದರೆ ತನ್ನ ಇತಿಕರ್ತವ್ಯ ಮುಗಿಯಿತು !

ಇದೇ ಸಮಯಕ್ಕೆ ನೆರೆಮನೆಯ ದೇಸಾಯರ ಮನೆಯವರು ಕಾಶೀ ಯಾತ್ರೆಗೆ ಹೊರಟರು. ಗಂಗವ್ವ ಇದೇ ಸಂಧಿಯೆಂದುಕೊಂಡು ಅವರೊಡನೆ ಕಾಶಿಗೆ ಹೊರಟಳು, ವಿಶ್ವನಾಥನೆದುರು ತನ್ನ ಕೊನೆಯ ಅರಿಕೆಯನ್ನು ಒಯ್ಯುವದಕ್ಕಾಗಿ ! ಕಿಟ್ಟಿಗೆ ಬರುವದು ಸಾಧ್ಯವಿರಲಿಲ್ಲ. ಗಂಗವ್ವ ಒಬ್ಬಳೇ ಅವರೊಡನೆ ಹೊರಟಳು.

ಕಾಶಿಯಲ್ಲಿ ಗಂಗಾಮಾಯಿಯಲ್ಲಿ ಮಿಂದದ್ದಾಯಿತು. ವಿಶ್ವೇಶ್ವರ, ಕಾಲಭೈರವ, ಧುಂಡೀರಾಜ, ಬಿಂದುಮಾಧವ ಮುಂತಾದ ಎಲ್ಲ ದೇವರುಗಳ ದರ್ಶನವಾಯಿತು. ಹರಿಶ್ಚಂದ್ರಘಾಟದಲ್ಲಿ ದೀಪ ತೇಲಿಬಿಟ್ಟದ್ದಾಯಿತು. ಪಂಚಾರತಿ, ಗೋಪುರಾರತಿ, ಕರ್ಪೂರಾರತಿ ಮುಂತಾದ ಎಲ್ಲ ಆರತಿಗಳನ್ನೂ ಮಾಡಿಸಿ ಪ್ರಸಾದ ಸ್ವೀಕರಿಸಿದ್ದಾಯಿತು. ಪ್ರತಿಯೊಂದು ಕಡೆಯಲ್ಲಿ ಗಂಗವ್ವ ಭಕ್ತಿಭಾವದಿಂದ ಕಣ್ಮುಚ್ಚಿ ಸಾಷ್ಟಾಂಗವೆರಗಿ 'ಕಿಟ್ಟಣ್ಣನ ಮದಿವ್ಯಾಗಿ ಅವಳ ತುಂಬಿದ ಸಂಸಾರ ಅಷ್ಟು

ತೋರಿಸಿ ನನ್ನ ಕಣ್ಮುಚ್ಚಿಸಪ್ಪಾ!' ಎಂದು ಬೇಡಿಕೊಳ್ಳುತ್ತಿದ್ದಳು. ಕಿಟ್ಟಿ ಐಶ್ವರ್ಯವಂತನಾಗಲಿ, ಮನುಷ್ಯನಾಗಲಿ, ಬದುಕು ಸಾಗಿಸಲಿ – ಇವೇ ಅವಳ ಯಾಚನೆಗಳು. ವಾತ್ಸಲ್ಯದಿಂದ ಅವಳ ಎದೆ ತುಂಬಿಬರುತ್ತಿತ್ತು. ವಿಶ್ವೇಶ್ವರನೆದುರು ಗೋಪುರಾರತಿ ನಡೆದಾಗ ನೀರಾಂಜನಗಳ ಸಾಕ್ಷಿಯಾಗಿ ತನ್ನ ಯಾಚನೆಯನ್ನು ದೇವರೆದುರು ಇಟ್ಟು ಅಂಗಲಾಚಿದಳು.

ಕಾಶಿ ಬಿಟ್ಟು ಊರಿಗೆ ಮರಳುವ ಸಮಯ ಬಂದಿತು. ಎಲ್ಲರೂ ತಮ್ಮ ತಮ್ಮ ಸಾಮಾನು ಕಟ್ಟಿಕೊಳ್ಳತೊಡಗಿದರು. ಗಂಗವ್ವನೂ ತನ್ನ ಚಿಕ್ಕ ಗಂಟು ಕಟ್ಟಿಕೊಂಡಳು. ಮುನ್ನಾದಿನವೇ ಎಲ್ಲರಂತೆ ಅವಳೂ ಒಂದು ಹೊಸ ಕಾಶಿಯ ಬಿಂದಿಗೆ, ಒಂದು ಮುಚ್ಚಳ ಕೊಂಡುಕೊಂಡು ಬಂದಿದ್ದಳು. ಎಲ್ಲರಂತೆ ಅವಳೂ ಗಂಗಾಜಲ ತುಂಬಿಕೊಂಡಳು. ಮುಚ್ಚಳವಿರಿಸಿ, ಮೇಲೆ ಮೇಣವನ್ನಿರಿಸಿ, ಕುತ್ತಿಗೆಗೆ ಕಾತಿಯನ್ನು ಬಿಗಿದಿದ್ದಳು. ಬಿಂದಿಗೆ ತುಸು ಭಾರವೆನಿಸುತಿತ್ತು. ಒಯ್ಯಲಿಕ್ಕೆ ತುಸು ಕಷ್ಟ.... ಆದರೆ ಕಾಶಿಯುವರೆಗೆ ಬಂದಮೇಲೆ ಗಂಗೋದಕವಿಲ್ಲದೆ ಮರಳುವುದುಂಟೇ? ತಾನು ಸಾಯುತ್ತಿರುವಾಗ, ಊರ್ಧ್ವಶ್ವಾಸ ಹತ್ತಿದಾಗ, ಕಿಟ್ಟಿ ನನ್ನ ತಲೆಯ ಬಳಿ ಕುಳಿತು ಬಾಯಿಯಲ್ಲಿ ಗಂಗೋದಕ ಹಾಕಿದ ಹೊರತು ತನಗೆ ಸದ್ಗತಿಯೆಲ್ಲಿ?

ಗಾಡಿ ಬಿಡಲು ಇನ್ನೂ ಒಂದು ತಾಸು ಇರುವಾಗಲೇ ಇವರೆಲ್ಲ ಹೋಗಿ ಒಂದೇ ಡಬ್ಬಿಯಲ್ಲಿ ಜಾಗ ಹಿಡಿದು ಕುಳಿತುಕೊಂಡರು. ಕೆಲವರು ಅಡ್ಡಾದರು. ಕೆಲವರಿಗೆ ನಿದ್ದೆಯೂ ಹತ್ತಿತ್ತು. ಗಾಡಿ ನಿಲ್ದಾಣ್ವನ್ನು ಯಾವಾಗ ಬಿಟ್ಟಿತೆಂಬುದು ಕೆಲವು ಜನರಿಗೆ ಮಾತ್ರ ತಿಳಿಯಿತು.

ಗಂಗವ್ವ ಒಂದು ಕಿಡಿಕಿಗೆ ತಲೆ ಆನಿಸಿ, ಕೆಳಗೆ ತನ್ನ ಬಿಂದಿಗೆಯನ್ನೂ ಗಂಟನ್ನೂ ಇಟ್ಟುಕೊಂಡು ಕುಳಿತಿದ್ದಳು. ಗಾಡಿಯ ಹೊಯ್ದಾಟ, ನಾಲ್ಕು ದಿನಗಳ ಆಯಾಸ, ಇವುಗಳ ಮೂಲಕ ಕುಳಿತಲ್ಲಿಯೇ ಅವಳಿಗೆ ನಿದ್ದೆ ಹತ್ತಿತು.

ಅವಳು ಹಾಗೆಯೇ ಎರಡುಮೂರು ತಾಸು ಮಲಗಿರಬಹುದು. ಗಾಡಿಯ ಸಿಳ್ಳು ಅವಳನ್ನು ಎಚ್ಚರಗೊಳಿಸಿತು. ಅವರು ಕುಳಿತ ಡಬ್ಬಿಯ ಎಲ್ಲ ಕಿಡಿಕಿಗಳೂ ಮುಚ್ಚಿದ್ದವು. ಗಂಗವ್ವ ಕುಳಿತ ಕಿಡಿಕಿ ಮಾತ್ರ ತೆರೆದಿತ್ತು. ಚಳಿಯ ಮೂಲಕ ಅವಳ ಕೈನರಗಳು ಜಗ್ಗಿದಂತಾಗತೊಡಗಿದ್ದವು. ಮೈಯಲ್ಲಿ ನಡುಗು ಹುಟ್ಟಿತ್ತು. ಹೊರಗೆ ನೋಡಿದಳು. ಗಾಡಿ ಬಲಗಡೆಗೆ ಹೊರಳತೊಡಗಿತ್ತು. ಇಂಜನ್ನಿನ ಕಪ್ಪು ಹೊಗೆ ಮೇಲೆ ತುಂಬಿಕೊಂಡಿತ್ತು. ತುಂಬು ಚಂದ್ರನು ನಡುನೆತ್ತಿಗೇರಿದ್ದನು. ಸುತ್ತೆಲ್ಲ ಹಾಲ್ಗಡಲು – ಮುಂಜಾಗಿ ಮಿನುಗುವ ನಕ್ಷತ್ರಗಳು–ದೂರದ ಗುಡ್ಡಗಳು–

ಗೋಪುರಾಕಾರದ ಗಿಡಗಳ ಕಪ್ಪು ಛಾಯೆಗಳು–ಎಲ್ಲವನ್ನೂ ಗಂಗವ್ವ ನೋಡಿ, ಇನ್ನೊಮ್ಮೆ ನೋಡಿ ಕಿಡಿಕಿ ಮುಚ್ಚಿದಳು. ಅವಳಿಗೆ ಕೂಡಲೇ ನಿದ್ದೆ ಬರಲಿಲ್ಲ. ವಿಚಾರಚಕ್ರ ಪ್ರಾರಂಭವಾಯಿತು. ಕಂಡ ದೇವಾಲಯಗಳು, ದೇವರು, ಗೋಪುರಪ್ರಾಕಾರಗಳು, ಗಂಗಾನದಿ–ಒಂದೊಂದೇ ಕಲ್ಪನಾಪಟಲದ ಮೇಲೆ ಮೂಡಿಬಂದು ಅವಳು ಪರವಶಳಾದಳು. ಕಾಶೀಯಾತ್ರೆ ಒಂದು ಕನಸಿನಂತೆ ಭಾಸವಾಗತೊಡಗಿತು. ವಿಶ್ವನಾಥದರ್ಶನ ನೆನೆದೊಡನೆ ಅವಳ ಮೈ ಜುಮ್ಮೆಂದಿತು. ಅದಕ್ಕಾಗಿ ಅವಳಿಗೆ ಧನ್ಯತೆಯೆನಿಸಿತು.

ಎಲ್ಲ ಧಾರ್ಮಿಕ ಭಾವನೆಗಳನ್ನೂ ಮೀರಿದ ಕಡೆಯ ಆಸರೆಯೊಂದು ಮನುಷ್ಯನಿಗಿದೆ–ಕರುಳು, ಪ್ರೇಮ ! ಅವಳಿಗೆ ಒಮ್ಮೆಲೇ ಕಿಟ್ಟಿಯ ನೆನಪಾಯಿತು. ಬಹುಶಃ ಧಾರವಾಡದಲ್ಲಿ ಈ ವೇಳೆಗೆ ಅವನು ನಿದ್ದೆ ಮಾಡುತ್ತಿರಬಹುದು. ಕನಸಿನಲ್ಲಿ ತನ್ನನ್ನು ಕಂಡು 'ಅವ್ವಾ' ಎಂದು ಕನವರಿಸುತ್ತಿರಬಹುದು ! ಪಾಪ ! ಈ ಕೆಲವು ದಿನ ಆತ ತನ್ನ ಅಡಿಗೆ ತಾನೇ ಮಾಡಿಕೊಂಡಿದ್ದಾನೆ ! ಎಷ್ಟು ತೊಂದರೆ ಅವನಿಗೆ ! ಆಯಿತು. ಅವನ ಕೊರಳಲ್ಲೊಂದು ಗುದ್ದಿಯನ್ನು ಕಟ್ಟಿಬಿಟ್ಟರೆ ತನ್ನ ಬಾಳ್ವೆಯ ಆಸೆ ಮುಗಿಯಿತು. ನಂತರ ತಾನು ಕಣ್ಮುಚ್ಚಬಹುದು.

ಅವಳ ವಿಚಾರಚಕ್ರ ಹಾಗೆಯೇ ಮುಂದೆ ತಿರುಗತೊಡಗಿತು. ಮೃತ್ಯುವಿನ ಭೀಕರ ಚಿತ್ರ ಅವಳ ಮನಸ್ಸನ್ನು ಕ್ಷುಬ್ಧಗೊಳಿಸಿತು. ಸಾವು ಮಾನವನ ಎಲ್ಲ ಆಸೆ ಆಕಾಂಕ್ಷೆಗಳಿಗೆ ತಡೆಹಾಕುವ ಅಡ್ಡಗೋಡೆ ! ಸೊಸೆಯನ್ನು ಕಂಡ ಮೇಲಾದರೂ ತಾನು ಸುಖದಿಂದ ಸಾಯಬಹುದೇ? ಕಿಟ್ಟಿಯ ಮದುವೆಯೊಂದಾದರೆ ಮುಗಿಯಿತೇ ? ತನ್ನ ಬಾಳಿನ ಸಾರ್ಥಕತೆ, ಧನ್ಯತೆ ನಂತರ ಬರಬೇಕಾಗಿದೆ. ಅವನ ಬದುಕನ್ನೂ ತಾನು ಕಾಣಬೇಕು. ಅದಕ್ಕಾಗಿ ತಾನು ಇನ್ನೂ ಬಾಳಬೇಕು. ಅವನು ಮನುಷ್ಯನಾದದ್ದನ್ನು ತಾನು ಕಾಣಬೇಕು. ನಾಲ್ಕು ಜನರು ಅವನನ್ನು ಹೊಗಳುತ್ತಿರುವುದನ್ನು ತಾನು ಕೇಳಬೇಕು. ಅವನ ಮಕ್ಕಳು ಅಜ್ಜಿಯ ಅಂಗೈಬುತ್ತಿಗಾಗಿ ತನ್ನ ಸುತ್ತು ಸುಳಿದಾಡಬೇಕು. ಅವರಿಗೆ ತಾನು ಕಥೆ ಹೇಳಿ 'ತಾರಮ್ಮಯ್ಯ' ಮಾಡಿಸಬೇಕು. ಅದಕ್ಕಾಗಿ ತಾನು ಸಾಯಲಾರಳು. ಕೊನೆಯವರೆಗೆ ಸಾಧ್ಯವಿದ್ದ ಮಟ್ಟಿಗೆ ಬದುಕುವಳು ! ಬಾಳುವ ಆಸೆ ಅವಳ ಹೃದಯವನ್ನು ಉನ್ನತವಾಗಿ ಎತ್ತಿ ಹಿಡಿಯಿತು.

ಡಬ್ಬಿಯ ವಿದ್ಯುದ್ದೀಪದ ಮಂದ್ರಪ್ರಕಾಶದಲ್ಲಿ ಅಲ್ಲಿಯೇ ತಾನಿಟ್ಟಿದ್ದ ಕಾಶಿಯ ಬಿಂದಿಗೆ ಮಿರಮಿರನೆ ಮಿಂಚುತ್ತಿತ್ತು. ಅದರ ತೀಕ್ಷ್ಣಕಿರಣಗಳು ಅವಳೆಡೆಗೆ ಬಂದು ಶಲ್ಯದಂತೆ ನಟ್ಟಂತಾಯಿತು. ಒಳಗೆ ಗಂಗೋದಕ ಚಲ್–ಫಲ್ ಸಪ್ಪಳ ಮಾಡುತ್ತಿತ್ತು.

ಆ ಸಪ್ಪಳ ಅವನಿಗೆ ಯಮಪಾಶದ ಬೀಸುವಿಕೆಯೆನಿಸಿತು. ಏತಕ್ಕಾಗಿ ಈ ಗಂಗೋದಕ? ತಾನು ಸಾಯುತ್ತಿರುವಾಗ ಗುಟುಕರಿಸುವುದಕ್ಕಾಗಿಯೇ ಅಲ್ಲವೇ? ಇಲ್ಲ, ಅವಳು ಬದುಕುವಳು – ಸಾಯಲಾರಳು ! ಅವಳು ಬದುಕಬೇಕಾಗಿದೆ. ಅವಳಿಗೆ ಕಾಶಿಯ ವಿಶ್ವನಾಥನ ಆಶೀರ್ವಾದವಿದೆ.

ಸುತ್ತು ನೀರವ ! ಹೊಸ ಬಿಂದಿಗೆ ಮಿಂಚುತ್ತಲೇ ಇತ್ತು. ಒಳಗೆ ಗಂಗಾಮಾಯಿ ಚಲ್–ಫಲ್, ಚಲ್–ಫಲ್ ಎದು ಮರಣಸಂದೇಶವನ್ನು ಅರುಹುತ್ತಲೇ ಇದ್ದಳು. ಗಂಗವ್ವ ಅಧೀರಳಾದಳು. ಅವಳೆದೆ ಡವಡವ ಬಡಿದುಕೊಳ್ಳತೊಡಗಿತು. ಬುದುಕುವ ಆಸೆ – ಸಾವಿನ ಕರೆ, ಇವುಗಳ ತಿಕ್ಕಾಟದಿಂದ ಬೆಚ್ಚಿದಳು. ತಾಳಲಾರದಾಯಿತು. ಮನಸ್ಸಿನಲ್ಲಿಯೇ ಹೊಡೆದಾಟ ಬದುಕುವ ಆಸೆಯೇ ಗೆದ್ದಂತಾಯಿತು. ಕಿಡಿಕಿಯನ್ನು ತೆರೆದಳು. ಮೆಲ್ಲನೆ ಆ ಬಿಂದಿಗೆಯನ್ನು ಎತ್ತಿಕೊಂಡಳು. ಉಗುರಿನಿಂದ ಮೇಣವನ್ನು ಗೀರಿ ಕೆರೆದಳು. ಮುಚ್ಚಳವನ್ನು ಎತ್ತಿದಳು. ಬಿಂದಿಗೆಯನ್ನು ಕಣ್ಣಿಗೊತ್ತಿಕೊಂಡು 'ಜಯ ಗಂಗಾಮಾಯಿ' ಎಂದು ಪಿಸುಗುಟ್ಟಿದಳು. ಅದನ್ನು ಮೆಲ್ಲಗೆ ಕಿಡಕಿಯ ಹೊರಗೆ ಎತ್ತಿ ಬೋಕ್ಕುಬೋರಲಾಗಿ ಹಿಡಿದಳು..... ಗಂಗಾಮಾಯಿ ಚಲ್–ಫಲ್ ಎನ್ನುತ್ತ ಸುರಿದುಹೋದಳು.

ಕೊನೆಯ ಹನಿ ಬೀಳುವವರೆಗೆ ಗಂಗವ್ವ ಹಾಗೇ ಹಿಡಿದಿದ್ದಳು. ಎಲ್ಲರೂ ನಿದ್ರಿಸುತ್ತಿದ್ದರು. ಮತ್ತೆ ಮುಚ್ಚಳ ಇರಿಸಿ ಮೇಣ ಒರಿಸಿದಳು. ಅದನ್ನು ಕೆಳಗೆ ಇಡುವಾಗ ಸಪ್ಪಳಕ್ಕೆ ಯಾರೋ ಅರೆನಿದ್ದೆಯಲ್ಲಿ 'ಏನದು?' ಎಂದು ಕೇಳಿದರು.

'ಏನೂ ಇಲ್ಲ' ಎನ್ನುತ್ತ ಗಂಗವ್ವ ಸಮಾಧಾನದ ನಿಟ್ಟುಸಿರುಬಿಟ್ಟಳು.

# ೨ : ಹಳೆಯ ಬಳಗ

ಕಾಶೀಯಾತ್ರೆಯಿಂದ ಮರಳಿಬಂದಮೇಲೆ ಗಂಗವ್ವನನ್ನು ಎಲ್ಲರೂ ಹೊಗಳುವವರೇ. ನೆರೆಮನೆಯವರೆಲ್ಲರಿಗೂ ತನ್ನ ಯಾತ್ರೆಯ ವಿವಿಧ ಅನುಭವಗಳನ್ನು ರಸವತ್ತಾಗಿ ಗಂಗವ್ವ ಬಣ್ಣಿಸಿ ಹೇಳಿದಳು. ಆದರೆ ಗಂಗಾಮಾಯಿಯನ್ನು ಅಂತು ರೇಲ್ವೆ ಬಂಡಿಯಿಂದ ಹೊರಗೆ ಸುರುವಿದುದು ಕೇಳಿದವರಿಗೆ ಸರಿಕಾಣಲಿಲ್ಲ. ನೆರೆಮನೆಯ ಕಾಶೀತಾಯಿ 'ಗಂಗವ್ವ, ನೀ ತಪ್ಪು ಮಾಡಿದಿ. ಮನಿಗೆ ಬರುವಾಗ ಗಂಗಾಮಾತಾನ್ನ ಹೊರಗೆ ದೂಡಿದಿ. ಇನ್ನ ನೀನು ಮತ್ತ ಆಕೀ ಪಾದಕ್ಕೇ ಹೋಗಿ ಬೀಳಬೇಕು' ಎಂದಳು. 'ಆತ್ಯು, ಇನ್ನೊಮ್ಮೆ ಕಾಶೀಯಾತ್ರೆಯ ಯೋಗ ಇದ್ದರೆ ಆಗಲಿ' ಎಂದು ಗಂಗವ್ವ ಸಮಾಧಾನ ಹಚ್ಚಿಕೊಂಡಳು.

ಆದರೆ ಇನ್ನೊಂದು ಅನುಭವವನ್ನು ಗಂಗವ್ವ ಯಾರೆದುರೂ ಬಣ್ಣಿಸಿ ಹೇಳಲಿಲ್ಲ. ಅದರ ಬಗ್ಗೆ ಕೇವಲ ಶುಷ್ಕ ವಿವರಗಳನ್ನು ಬಿಗಿಬಾಯಿಯಿಂದ ಹೇಳುತ್ತಿದ್ದಳು ಮಾತ್ರ.

ಒಂದು ಕಡಿದಾದ ಗುಡ್ಡದ ಓರೆಗಂಟ ಗಂಗಾಮಾಯಿ ಹರಿಯುತ್ತಾಳೆ. ಪ್ರಯಾಣಿಕರು ನೂರಾರು ಫೂಟು ಎತ್ತರದ ಮೇಲಿಂದ ಗುಡ್ಡದ ಬದಿಯ ಕಾಲುಹಾದಿಯಿಂದ ಮುಂದೆ ಸಾಗಬೇಕು. ಸಾಮಾನು ಹೊತ್ತ ಬೋಯಿಗಳು ಪ್ರಯಾಣಿಕರಿಗೆ, ತೆಗ್ಗಿನತ್ತ ನೋಡಿದರೆ ಕಣ್ಣು ತಿರುಗುವವೆಂದೂ, ಅನೇಕರು ಬಿದ್ದಿದ್ದಾರೆದೂ, ಅದಕ್ಕಾಗಿ ತೆಗ್ಗಿನತ್ತ ನೋಡಬಾರದೆಂದೂ ಮೊದಲೇ ಎಚ್ಚರಿಕೆ ಕೊಟ್ಟಿರುತ್ತಾರೆ. ಆದರೆ ಗಂಗವ್ವ ಜೀವ ನಿಲ್ಲದೆ ನೋಡಿದ್ದಳು. ದೂರ ಕಗ್ಗತ್ತಲಾದ ತೆಗ್ಗಿನಲ್ಲಿ ಗಂಗಾಮಾಯಿಯ ಶುಭ್ರ ಪ್ರವಾಹ ಥಳಥಳನೆ ಹೊಳೆಯುತ್ತ ಗಂಗವ್ವನನ್ನು ಕರೆದಂತಾಗಿತ್ತು. ಗಕ್ಕನೆ ಗಂಗವ್ವ ತನ್ನ ಕಣ್ಣು ಹೊರಳಿಸಿ ಇನ್ನೊಮ್ಮೆ ಅತ್ತ ನೋಡದೆ ಮುಂದೆ ಸಾಗಿದಳು. ಅದೊಂದು ವಿಚಿತ್ರ ಅನುಭವ. ಆದದ್ದೇನೋ ವಿಶೇಷವಲ್ಲ. ಆದರೆ ಅದರ ಮಾನಸಿಕ ಚಿತ್ರ – ಅದರ ಬಲವಾದ ಅನುಭವ, ಭೀತಿ, ಆಸೆ – ಗಂಗವ್ವನ ಮನದಲ್ಲಿ ವಿಚಿತ್ರ ಕನಸಾಗಿ ನೆಲೆಯೂರಿತ್ತು. ಆ ಪೂರ್ಣ ಅನುಭವ ಆಕೆಯ ಏಕಾಂತದ ಸೊತ್ತು. ಹೇಳಿದರೆ ಪೂರ್ಣ ಹೇಳಲು

ಸಾಧ್ಯವಿಲ್ಲ, ಪೂರ್ಣ ಬಚ್ಚಿಡುವುದೂ ಅಸಾಧ್ಯ.

ಮೆಲ್ಲಮೆಲ್ಲನೆ ಬಾಳು ಹೊಂದಿಕೊಳ್ಳತೊಡಗಿತು. ತಾಯಿಯನ್ನು ಉಳಿದು ಕಿಟ್ಟಿ ಒಬ್ಬನೇ ಇದ್ದದ್ದು ಅದು ಮೊದಲನೆ ಬಾರಿ. ಕಿಟ್ಟಿಯೇನೂ ತಾಯಿಯ ಮಗನಲ್ಲ, ಆದರೆ ಅಗಲಿಕೆಯ ಬೇಸರವಾಗಿತ್ತು. ಮೊದಮೊದಲು ಅಡಿಗೆ ಮಾಡಿಕೊಳ್ಳುವುದರ ಬೇಸರದ ರೂಪವಾಗಿ ಅಗಲಿಕೆ ಕಾಣಿಸಿತು. ನಂತರ ಕಚೇರಿಯಲ್ಲಿ ತಾನು ಅನುಭವಿಸುವ ಕಷ್ಟಗಳನ್ನು ಸಹಾನುಭೂತಿಯಿಂದ ಕೇಳಲು, ಆಸರೆ ಕೊಡಲು, ಮನೆಯಲ್ಲಿದ್ದ ಧೈರ್ಯದ ವೀರಗಲ್ಲು ಇಲ್ಲದಾಯಿತಲ್ಲ ಎಂಬ ನೋವಾಗಿ ಕಾಣಿಸಿತು. ಕಿಟ್ಟಿಗೂ ತೊಂದರೆಗಳು ಅಷ್ಟಿಷ್ಟಲ್ಲ. ಹೊಸದಾಗಿ ಸೇರಿದ ನೌಕರಿ. ರೆವ್ಹೆನ್ಯೂ ಖಾತಯಲ್ಲಿ ಯಾರು ಯಾರನ್ನೂ ನಂಬಕೂಡದೆಂಬ ಅವನಿಗೆ ಯಾರೋ ಉಪದೇಶ ಕೊಟ್ಟಿದ್ದರಿಂದ ಅವನು ಇನ್ನೊಬ್ಬರನ್ನು ಕೇಳಲಾರದೆ, ತನಗೆ ಕೆಲಸ ತಿಳಿಯದೆ, ಆಷ್ಟಿಷ್ಟಕ್ಕೆ ತಪ್ಪು ಮಾಡುತ್ತ ಮೇಲಿನವರಿಂದ ಬೈಯಿಸಿಕೊಳ್ಳುತ್ತ, ಜೊತೆಯವರಿಂದ ನಗಿಸಿಕೊಳ್ಳುತ್ತ ಹಾಗೂ ಹೀಗೂ ಸಾಗಿದ್ದನು. ಅವನಿಗೆ ನೌಕರಿ ಹಚ್ಚಿಕೊಟ್ಟ ಅಂಗಡಿ ಮಾಮಲೇದಾರರು ಮೊದಮೊದಲು ಸಹಾನುಭೂತಿಪರರಾಗಿ ಅವನ ತಪ್ಪುಗಳನ್ನು ತಿದ್ದಿಕೊಳ್ಳುತ್ತಿದ್ದರು. ಆದರೆ ಎರಡು ತಿಂಗಳಾದರೂ ಕಿಟ್ಟಿ ತನ್ನ ಕೆಲಸ ಚೆನ್ನಾಗಿ ಮಾಡಲೊಲ್ಲನು. ಮುಂದೆ ಬಿದ್ದು ತನಗಿರುವ ತೊಂದರೆಗಳನ್ನು ಹೇಳನು. ಬರಿ ಕಾಗದದಲ್ಲಿ ತಪ್ಪು ಮಾಡಿಕೊಂಡು ಬಂದಾಗಲೇ ಮಾಮಲೇದಾರರಿಗೆ ಅವನಿಗೆ ಕೆಲಸವಿನ್ನೂ ಗೊತ್ತಾಗಿಲ್ಲವೆಂಬ ಅರಿಕೆ. ಅದಕ್ಕಾಗಿ ಅವರೇ ಒಮ್ಮೆ ಮನಸ್ಸಿಗೆ ನಡುವಂತೆ ದೂತಾಡಿದರು, 'ನಿನಗೆ ನೌಕರಿ ಕೊಟ್ಟವ ನಾನು ಮೂರ್ಖ!' ಎಂದು. ಅಂದಿನಿಂದ ಕಿಟ್ಟಿ ಇನ್ನೂ ಹೆಚ್ಚು ಅವರಿಂದ ದೂರವಿರತೊಡಗಿದ್ದನು. ಮೆಲ್ಲಮೆಲ್ಲನೆ ಹೆಡ್ ಕಾರಕೂನ ಜೋಶಿ ರಾಮರಾಯನೊಡನೆ ಸಲಿಗೆ ಬೆಳೆಸಿ ಅವನಿಂದ ಅಷ್ಟಿಷ್ಟಕ್ಕೆ ಸಲಹೆಪಡೆಯುತ್ತ, ಕೆಲಸ ಸಾಗಿಸಿದ್ದನು. ಆದರೆ ಅದರಲ್ಲೂ ಒಮ್ಮೊಮ್ಮೆ ವಿಚಿತ್ರ ಪ್ರಸಂಗಗಳು ಬರುತ್ತಿದ್ದವು. ರಾಮರಾಯನ ಸಲಹೆಪಡೆದು ಕಾಗದ ಬರೆದಾಗಲೂ ಮಾಮಲೇದಾರರು ಕಿಟ್ಟಿಗೆ ಬೈದು, ರಾಮರಾಯನನ್ನು ಕರೆಯಿಸಿ, ಅವನಿಗೆ ಆ ಕಾಗದವನ್ನು ಸರಿಗೊಳಿಸಲಿಕ್ಕೆ ಹೇಳುವರು. ಇಂಥ ಮೋಜಿನ ಪ್ರಸಂಗಗಳಲ್ಲಿ ಕಿಟ್ಟಿಗೆ ತಾಯಿ ಸಚಿವಳೂ ಆಗಿದ್ದಳು. ಆಕೆಯ ಎದುರು ಒಮ್ಮೆ ನಗುತ್ತ, ಒಮ್ಮೆ ಬೇಸರದಿಂದ ಎಲ್ಲವನ್ನೂ ಹೇಳದೆ ಇದ್ದರೆ ಕಿಟ್ಟಿಗೆ ಸಮಾಧಾನವಿಲ್ಲ.

ಒಮ್ಮೊಮ್ಮೆ ಕಚೇರಿಯಲ್ಲಿ ನಡೆಯದ ಅಧಿಕಾರಚಾಲನೆಗೆ ಕಿಟ್ಟಿಗೆ ಮನೆಯಲ್ಲಿ ಆಸ್ಪದ ಸಿಕ್ಕುತ್ತಿತ್ತು. ಅಶಿಕ್ಷಿತ ತಾಯಿಯು ಅಜ್ಞಾನದಿಂದ ಏನನ್ನಾದರೂ ಆಡಿದಾಗ

ಅದರ ಗೇಲಿಮಾಡಿಯಾಗಲಿ, ಆಕೆಯ ಹಳೆಯ ಬಗೆಯ ಸಲಹೆಗಳನ್ನು ದೂಷಿಸಿಯಾಗಲಿ, ಕಿಟ್ಟಿಗೊಂದು ಸಂತೋಷವಾಗುತ್ತಿತ್ತು. ತಾಯಿಯೊಡನೆ ಹುಸಿ ಜಗಳವೂ ಒಂದು ದೈನಂದಿನ ಕ್ರಮವಾದಾಗ ಆಕೆಯ ವಿರಹದಲ್ಲಿ ಕಿಟ್ಟಿಯ ಶಕ್ತಿಯೆಲ್ಲ ಕುಂಠಿತವಾಗಿತ್ತು. ಒಂದೂವರೆ ತಿಂಗಳುಗಳವರೆಗೆ ಕಿಟ್ಟಿ ಏಕಾಕಿಯಾಗಿದ್ದನು.

ಗಂಗವ್ವನು ಬಂದ ಮೊದಲ ದಿನಗಳನ್ನು ಕಿಟ್ಟಿಯೇ ಉತ್ಸಾಹದಲ್ಲಿ ಕಳೆದನು. ಅವಳಿಲ್ಲದಾಗ ಕಚೇರಿಯಲ್ಲಾದ ಅನೇಕ ಸಂಗತಿಗಳನ್ನು ಹೇಳಿದನು. ತಾಯಿಯು ಕಂಬನಿದುಂಬಿ ಕಾಶಿಯಲ್ಲಿದ್ದಾಗ ಹೇಗೆ ಮಗನನ್ನು ನೆನೆದೆನೆಂಬ ವಿಷಯವನ್ನು ಹೇಳುವಾಗ ಅರೆಲಜ್ಜಿತನಾಗಿ ಎಲ್ಲವನ್ನೂ ಪ್ರೀತಿಯಿಂದ ಕೇಳಿಕೊಂಡನು. ಗಂಗವ್ವನು ಗಂಗಾತ್ಯಾಗದ ವಿಷಯವನ್ನು ಪಶ್ಚಾತ್ತಾಪದಿಂದಲೂ ನೋವಿನಿಂದಲೂ ಹೇಳಿದಾಗ, 'ಅವ್ವಾ, ಇನ್ನೊಮ್ಮೆ ಕಾಶಿಗೆ ಹೋಗೀವಂತಿ' ಎಂದು ಉತ್ಸಾಹಕೊಟ್ಟನು. ದಿನ ಕಳೆದವು. ಮತ್ತೆ ಮೊದಲಿನ ಕ್ರಮ ಸುರುವಾದವು. ಚಿಕ್ಕಪುಟ್ಟ ಕಲಹಗಳು ಬಾಳಿನ ಏಕತಾನಕ್ಕ ನಡುನಡುವೆ ನಲುಗಾಗಿ ಬಂದು ಸೊಗಸನ್ನು ಹೆಚ್ಚಿಸುತ್ತಿದ್ದವು.

* * *

ಕಿಟ್ಟಿಗೆ ಇಬ್ಬರೇ ಸೋದರಮಾವಂದಿರು: ಒಬ್ಬ ವೆಂಕಟರಾಯ, ಇನ್ನೊಬ್ಬ ರಾಘವ. ಕಿಟ್ಟಿ ಅವರ ಹೆಸರನ್ನು ಮಾತ್ರ ಕೇಳಿಬಲ್ಲನು. ಅವರನ್ನು ಚಿಕ್ಕಂದಿನಲ್ಲಿ ಕಿಟ್ಟಿ ನೋಡಿದ್ದನಂತೆ. ಅವನಿಗಾದರೋ ಅದಾವುದೂ ನೆನಪಿಲ್ಲ. ಆದರೆ ಇದೀಗ ಗಂಗವ್ವ ಕಾಶೀಯಾತ್ರೆಗೆ ಹೋದಾಗ ಒಬ್ಬ ಮಾವ ಮತ್ತೆ ಕ್ಷಿತಿಜದ ಮೇಲೆ ಉದಯವಾದನು. ಒಮ್ಮೆ ಕಚೇರಿಗೆ ಯಾವದೋ ಕೆಲಸಕ್ಕೆ ಬಂದ ರಾಘಪ್ಪನು ಕಿಟ್ಟಿಯನ್ನು ಹುಡುಕಿಕೊಂಡು ಬಂದು ಅವನೊಡನೆ ತನ್ನ ಬಳಗವನ್ನು ಹೇಳಿದನು. ಬಳಗವೆಂದರೇನು ಎಂಬುದನ್ನು ಅರಿಯದ ಋಷ್ಯಶೃಂಗನಂತಿದ್ದ ಕಿಟ್ಟಿಗೆ ಈ ಜರತಾರೀ ಅಂಚಿನ ರುಮಾಲು ಧರಿಸಿದ ಗೋದಿಗೆಂಪು ವರ್ಣದ ಎತ್ತರ ನಿಲುವಿನ ಸೋದರಮಾವನಲ್ಲಿ ವಿಶೇಷ ಆಸಕ್ತಿ ಹುಟ್ಟಲಿಲ್ಲ. ರಾಘಪ್ಪನು 'ಗಂಗವ್ವ'ನ ಆರೋಗ್ಯ, ದಿನಚರ್ಯೆ, ಇವೆಲ್ಲವುಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ತಾವಾರೂ ಧಾರವಾಡಕ್ಕೆ ಕಳೆದ ಆರು ತಿಂಗಳಲ್ಲಿ ಮತ್ತೆ ಬಂದಿದ್ದೇವೆಂದು ಹೇಳಿದನು. ಯಾವುದೋ ಲೈನ್ ಬಝಾರದ ಪತ್ತೆಕೊಟ್ಟು ಮನೆಗೆ ಬರಲಿಕ್ಕೆ ಔತಣವನ್ನು ಕೊಟ್ಟನು. ಇಷ್ಟು ದಿವಸ ತಮ್ಮ ಬಿಂದಗೋಳ ಊರಿನಲ್ಲಿಯೇ ಇದ್ದರೆಂದೂ ಇದೀಗ ತಮ್ಮ ಹಿರಿಯ ಮಗಳು ಮುಲ್ಕೀಪರೀಕ್ಷೆ ಪಾಸಾದಮೇಲೆ ಇಂಗ್ಲೀಷ 'ಎರಡು ಬುಕ್ಕು' ಕಲಿಸಲು ಧಾರವಾಡಕ್ಕೆ ಮನೆ ಮಾಡಿರುವುದಾಗಿಯೂ ಹೇಳಿದನು.

ಕಿಟ್ಟಿ ಎಲ್ಲವನ್ನೂ ಅರೆಬೇಸರದಿಂದ ಕೇಳಿಕೊಂಡು ಆ ವಿಷಯವನ್ನು ಅಷ್ಟಕ್ಕೇ ಮರೆತುಬಿಟ್ಟನು. ಗಂಗವ್ವ ಬಂದು ಎರಡು ತಿಂಗಳಾಗುವಷ್ಟರಲ್ಲಿ ರಾಘಪ್ಪನ ಸವಾರಿ ಈ ಬಾರಿ ಮನೆಯನ್ನು ಹುಡುಕಿಕೊಂಡೇ ಬಂದಿತು.

# ೩ : ಅನಿರೀಕ್ಷಿತ ಭೇಟಿ

ತಮ್ಮನ ಭೇಟಿಯಾದೀತೆಂದು ಗಂಗವ್ವನು ಕನಸುಮನಸಿನಲ್ಲಿ ನೆನೆದಿರಲಿಲ್ಲ. ಕಿಟ್ಟಿಯಾದರೂ ರಾಘಪ್ಪನು ಕಚೇರಿಯಲ್ಲಿ ಭೇಟಿಯಾದದ್ದನ್ನು ಮರೆತೇ ಬಿಟ್ಟಿದ್ದನು. ಗಂಗವ್ವನ ಎದುರು ಉಸಿರಿರಲಿಲ್ಲ, ಉಸಿರಿದ್ದರೆ ಗಂಗವ್ವ ರಾಘೂನ ಭೇಟಿಗೆ ಮೊದಲೇ ಸನ್ನದ್ಧಳಾಗಿರಬಹುದಿತ್ತು. ಆದರೆ ಹತ್ತು ವರುಷಗಳನಂತರ ರಾಘೂ ಗಂಗವ್ವನ ಮನೆಯನ್ನು ನೀಟಾಗಿ ಪ್ರವೇಶಿಸಿದನು. ಗಂಗವ್ವನಿಗೆ ತನ್ನ ಭಾವನೆಗಳನ್ನು ಪ್ರಕಟಿಸುವ ಅವಕಾಶವನ್ನೂ ಕೊಡದೆ ಪಡಸಾಲೆಯಲ್ಲಿಯ ಮಂಚದ ಮೇಲೆ ಕುಳಿತು ತನ್ನ ಹತ್ತು ವರುಷದ ಸುಖ ದುಃಖಗಳನ್ನು ಹೇಳತೊಡಗಿದನು. ಗಂಗವ್ವನಿಗೆ ಮೊದಮೊದಲು ಏನು ಮಾತನಾಡಬೇಕೆಂಬುದು ತಿಳಿಯದಾಯಿತು. ಆಕೆಗೆ ತಮ್ಮನ ಬಗೆಗೆ ಭಯ, ಜುಗುಪ್ಸೆ. ತುಸು ಮೊದಲು ಗೊತ್ತಿದ್ದರೆ ತನ್ನ ನಾಲಿಗೆಯನ್ನು ಮಸೆದು ಇಟ್ಟುಕೊಳ್ಳುತ್ತಿದ್ದಳು. ನಾಲಿಗೆ ಹತ್ತು ವರುಷಗಳಲ್ಲಿ ಮೊಂಡವಾಗಿತ್ತು. ಜೊತೆಗೆ ಈ ಹತ್ತು ವರುಷಗಳಲ್ಲಿ ತಮ್ಮನ ವಿಷಯಗಳನ್ನು ತಿಳಿದುಕೊಳ್ಳುವ ಹವ್ಯಾಸವು ಗುಪ್ತವಾಗಿ ಅವಳಲ್ಲಿ ನೆಲೆಸಿತ್ತು. ಅದಕ್ಕಾಗಿ ಅದನ್ನೆಲ್ಲ ಸುಮ್ಮನೆ ಕೇಳಿಕೊಂಡಳು. ಅಂದು ರವಿವಾರವಾದ್ದರಿಂದ ಕಿಟ್ಟಿಯು ಮನೆಯಲ್ಲಿದ್ದನು. ಅವನೂ ಬೇಸರದಿಂದ ಈ ಅನಿರೀಕ್ಷಿತ ಅಭ್ಯಾಗತನ ನುಡಿಗಳನ್ನು ಕೇಳುತ್ತ ಕುಳಿತುಕೊಂಡನು.

ರಾಘಪ್ಪ ಈ ವರುಷಗಳನ್ನೆಲ್ಲ ಹಳ್ಳಿಯಲ್ಲೇ ಕಳೆದನಂತೆ. ಅವನ ಹೆಂಡತಿ ಎರಡನೆಯ ಮಗಳನ್ನು ಹೆತ್ತ ಮೇಲೆ ಬೇನೆಬಿದ್ದವಳು ಇಂದಿಗೂ ಅಶಕ್ತಳಾಗಿಯೇ ಇದ್ದಾಳೆ. ನಡುನಡುವೆ ಎದೆಸೂಲಿ ಎದ್ದು ವರುಷದಲ್ಲಿ ಮೂರು ನಾಲ್ಕು ತಿಂಗಳು ಮಲಗಿಯೇ ಇರುತ್ತಾಳೆ. ಬಿಂದಗೋಳದಲ್ಲಿ ರಾಘಪ್ಪ ಕೆಲವು ವರ್ಷ ಕಮತವನ್ನು ಇಟ್ಟಿದ್ದನಂತೆ. ಕಮತವಿಟ್ಟರೆ ಊರಿಗೇ ಶ್ರೇಷ್ಠ ದನಗಳನ್ನು ಸಾಕಿದ್ದನಂತೆ. ಸ್ವಲ್ಪ ದಿನ ದನದ ವ್ಯಾಪಾರವನ್ನೂ ಮಾಡಿದನಂತೆ. ಆದರೆ ಅದರಲ್ಲಿ ಲಾಭ ಕಾಣದಿರಲು ಒಕ್ಕಲುತನ ; ಇದೀಗ ಅರ್ಧವಯಸ್ಸಾಗಿ ಎಲ್ಲ ಬೇಸರ ಬರತೊಡಗಿದ್ದ ಮೂಲಕ ಹೊಲಗಳನ್ನೂ ಲಾವಣಿಗೆ ರೈತರಿಗೆ ಬಿಟ್ಟುಕೊಟ್ಟು, ತನ್ನ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಧಾರವಾಡಕ್ಕೆ ಮತ್ತೆ ಮನೆ ಮಾಡಿದ್ದಾನೆ. ಲೈನ್‌ಬಝಾರದಲ್ಲಿ ಮನೆ ಸಿಕ್ಕಿದೆ. ಎಲ್ಲ

ಸುಖ ಇದೆ, ಆದರೆ ಹಿಂದಿನ ದಿನ ನೆನೆದು ದುಃಖವೂ ಆಗುತ್ತದೆ. ಎಂಥ ಬಳಗ! ಹೇಗೆ ಚಲ್ಲಾಪಿಲ್ಲಿಯಾಯಿತಲ್ಲಾ ಅನಿಸುತ್ತದೆ – ಏನೇ ಆದರೂ ಪೂರ್ವಜನ್ಮದ ಋಣ ತೀರೀತೆ ? ಮತ್ತೆ ಒಂದಾಗಬೇಕು, ಇತ್ಯಾದಿ.....

ಗಂಗವ್ವ ಎಲ್ಲವನ್ನೂ ಸುಮ್ಮನೆ ಕೇಳಿಕೊಂಡಳು. ರಾಘಪ್ಪನ ವಾಗ್ವೃಷ್ಟಿಯು ಕೊನೆಗೆ ಎಲ್ಲಿ ಪರಿಣಮಿಸುವದೋ, ಎಂದು ಆಕೆ ದಾರಿ ಕಾಯುತ್ತಿದ್ದಳು. ಮೆಲ್ಲನೆ ಮಾತುಗಳು ಏಕಮುಖವಾಗತೊಡಗಿದವು. ಋಣಸಂಬಂಧ, ದಾಯಾದಿತನ, ಅಂತಃಕರಣ ಇತ್ಯಾದಿ ಪೂರ್ವಪೀಠಿಕೆಯನ್ನು ಮಾಡಿಕಿಟ್ಟಿಯ ಜಾಣತನವನ್ನು ಮನಸಾರೆ ಹೊಗಳಿ, ರಾಘಪ್ಪನು ಅವನತ್ತ ಹೊರಳಿ ಎಳೆ ಚಾಚಿದನು.

'ಕಿಟ್ಟಣ್ಣಾ, ನಮ್ಮ ರತ್ನಾನ್ನ ನಿನ್ನ ಪಾಲಿಗೇ ಬಿಟ್ಟುಬಿಟ್ಟೇವಿ. ಆಕಿಗೆ ವರ ಹುಡುಕೂದsಇಲ್ಲ..... ಯಾಕವಾ ಗಂಗಕ್ಕಾ ?'

ರಾಘೂ ಈಗ ಮನೆಗೆ ಬಂದ ಅತಿಥಿ ; ತನ್ನ ತಮ್ಮನಲ್ಲ. ಗಂಗವ್ವನಾದರೂ ಸರಸದಿಂದಲೋ ಕೊಂಕಿನಿಂದಲೋ 'ಕಿಟ್ಯಾ ನಿನ್ನ ಮೀರಿ ಇದ್ದಾನೇನು ಬಿಡಪ್ಪಾ!' ಎಂದಳು.

ಕಿಟ್ಟಿಗೆ ನೌಕರಿ ಸಿಕ್ಕಾಗಿನಿಂದ ಇಂಥ ಮಾತುಗಳಲ್ಲಿ ಸಿಲುಕುವ ಅನೇಕ ದುರ್ಧರ ಪ್ರಸಂಗಗಳು ಬಂದಿದ್ದವು. ಅವೆಲ್ಲವುಗಳಿಗೂ ಅವನದು ಒಂದೇ ಉತ್ತರ: 'ನನ್ನದು ಈಗsಲಗ್ನಾ ಮಾಡಿಕೊಳ್ಳೋ ವಿಚಾರ ಇಲ್ಲ.' ಆದರೆ ರಾಘಪ್ಪ ಜಿಗಣೆಯಂಥವನು, ಇಷ್ಟಕ್ಕೇ ಸಡಿಲು ಬಿಡುವವನಲ್ಲ.

'ನೀ ಈಗs ಮಾಡಿಕೋ ; ಇನ್ನು ಎರಡು ವರ್ಷಕ್ಕ ಮಾಡಿಕೋ – ನಮ್ಮ ರತ್ನಾನ್ನ ನಿನ್ನ ಪಾಲಿಗೆ ಬಿಟ್ಟೇವಿ. ಕಿಟ್ಟಣ್ಣಾ, ಹಂಗೆ ಕೇಳಿದರ ಆಕೀನ್ನ ನಾವು ಹಡದದ್ದೂ ನಿನ್ನ ದಶಿಂದನsಮತ್ತ ! 'ನಮ್ಮ ಕಿಟ್ಟಿಗೆ ನೀ ಒಂದು ಹೆಣ್ಣುಹಡಿ ಅಂತ ನಿಮ್ಮವ್ವ ಹೇಳಿದಳು ; ಮುಂದ ಮೂರs ತಿಂಗಳಿಗೆ ನಮ್ಮ ರತ್ನಾ ಹುಟ್ಟಿದಳು. ಕೇಳು ಬೇಕಾದರೆ ನಿಮ್ಮವ್ವನ್ನs"

ಗಂಗವ್ವ ಅಡ್ಡ ಬಾಯಿ ಹಾಕಿದಳು : 'ಹೌದಪಾ ಕಿಟ್ಟಿ ; ರಾಘೂ ಲಗ್ನಾ ಮಾಡಿಕೊಂಡದ್ದೂ ನನ್ನ ಮಾತsಕೇಳಿ ; ಮಕ್ಕಳನ್ನ ಹಡದದ್ದೂ ನನ್ನ ಮಾತsಕೇಳಿ. ನನ್ನ ಮಾತಿಲ್ಲದೆ ನೀ ಏನೂ ಮಾಡುವವ ಅಲ್ಲ' ಎಂದಳು. ರಾಘಪ್ಪನು ತುಸು ಬೆವರು ಒರೆಸಿಕೊಂಡು ಮಾತನ್ನು ಬೇರೆ ಕಡೆಗೆ ಹೊರಳಿಸತೊಡಗಿದನು. ಈ ಮಾರ್ಗದಲ್ಲಿ ಗಂಗವ್ವ ಭೂತಕಾಲವನ್ನು ಮರೆತಿಲ್ಲ, ಕ್ಷಮಿಸಿಲ್ಲ, ಅನಿಸಿತು ಅವನಿಗೆ.

'ಕಿಟ್ಟಣ್ಣಾ, ನಮ್ಮ ರತ್ನಾ ರೂಪದಲೆ ಏನೂ ಕಾಡು ಅಲ್ಲ, ಕೆಂಪು ಇದ್ದಾಳ

..... ಇನ್ನ ನೀನು ನಾಟಕದವರಹಂಗೆ ರೂಪಾ ಬೇಡಿದರ ಮಾತ್ರ ಇಲ್ಲ ನೋಡು. ಎಲ್ಲಾ ಕೆಲಸ ಮಾಡತಾಳ. ಮನೀ ಒಳಗೆ 'ಈಕಿ' ಕೈಲೆ ಅಂತೂ ಏನೂ ಆಗೋಹಂಗsಇಲ್ಲ. ರತ್ನಾನs ಎಲ್ಲಾ ಮನಿ ತೂಗಸತಾಳ, ಗಂಗಕ್ಕಾ, ನಿನ್ನ ಗಾದೀಮ್ಯಾಲ ಕೂಡಿಸಿ ಆಕಿ ಮನಿ ಸಾಗಿಸಿಕೊಂಡು ಹೋಗತಾಳ.'

'ನನಗ್ಯಾತಕಪಾ ಗಾದಿ ! – ಹಾಸಿಗೀ ಹಿಡಿಸೂದಿಲ್ಲ ಹೌದಲ್ಲೋ ?' ಎಂದು ವ್ಯಂಗ್ಯವಾಗಿ ನಕ್ಕಳು.

ರಾಘಪ್ಪನಿಗೆ ತಿಳಿಯಿತು ! ಗಂಗಕ್ಕನೊಡನೆ ಮಾತಾಡುವಾಗ ಜಗತ್ತನ್ನೇ ಗೆಲ್ಲಬಲ್ಲ ರಾಘಪ್ಪನ ಶಕ್ತಿ ತುಸು ಕುಂಠಿತವಾಗುತ್ತಿತ್ತು. ಅದರಲ್ಲಿ ಆಕೆಯ ಮಾತಿನಲ್ಲಿ ಮೊನೆ ಇರುತ್ತಿತ್ತು. ರಾಘಪ್ಪನಿಗೆ ಅದರ ಪರಿಚಯವುಂಟು. ಆದರೆ ಹತ್ತು ವರ್ಷಗಳಲ್ಲಿ ಆದ ಬದಲಾವಣೆಗಳು ತನಗೇನೂ ಅನುಕೂಲವಾಗಿಲ್ಲವೆಂದು ಮನವರಿಕೆಯಾಯಿತು. ಅಕ್ಕನ ಮಾತುಗಳು ಕೇಳಿಸದವನಂತೆ, ಕಿಟ್ಟಿಯತ್ತ ತಿರುಗಿ ಮುಗುಳುನಗೆ ನಗುತ್ತ ತನ್ನ ಗುಪ್ತಾಸ್ತ್ರಗಳನ್ನು ಹಿರಿಯತೊಡಗಿದನು.

'ಕಿಟ್ಟಣ್ಣಾ, ಇನ್ನ ನಾವೂ ಪೆನ್‌ಶನ್ನಿಗೆ ಬಂದಿವಿ ; ನಿಮ್ಮವ್ವನೂ ಬಂದಳು. ಮುಖ್ಯ ನಮ್ಮ ನಮ್ಮ ಅಂತಃಕರಣ ಕೂಡಿಕೊಂಡು, ನೀವು ಹೊಸಾ ರಕ್ತ ಮುಂದ ಬರಲಿ ಅಂತ ನಮ್ಮ ಆಶಾ. ನಿಮ್ಮ ಮಾಮಲೇದಾರರದೂ ನನ್ನದೂ ಮೊದಲಿನಿಂದ ಗಳಸ್ಯ ಕಂಠಸ್ಯ. ನೀನು ನೌಕರಿನೋ, ಹಾಯರನೋ, ಯಾವದೂ ಕಾಳಜೀ ಮಾಡಬ್ಯಾಡಾ. ಮೊನ್ನೆ ಇನ್ನೂ ಅವರು ಭೇಟಿ ಆಗಿದ್ದರು. ನಾ ಭೇಟಿ ಆದಕೂಡಲೇ ಗುರುತಾ ಹಿಡಿದವರು ತಮ್ಮ ಮನೀಗೆ ಬರಲಿಕ್ಕೆ ಹೇಳಿದರು. ನಾನೂ ಅವರನ ನಮ್ಮ ಮನೀಗೆ ಒಮ್ಮೆ ಬರಲಿಕ್ಕೆ ಹೇಳೀನಿ ಹೂಂ ಅಂದಾರ...... ನೀ ಯಾವದೂ ಹೆದರಿಕಿ ಹಿಡಬ್ಯಾಡ.'

ಈವರೆಗೆ ಈ ಎಲ್ಲ ಮಾತುಗಳಲ್ಲಿ ತನ್ನ ಸಂಬಂಧವೇ ಇಲ್ಲದವನಂತೆ ಕುಳಿತ ಕಿಟ್ಟಿಯು ಬಾಯಲ್ಲಿ ನೀರೂರಿತು. ಅವನು ಕಚೇರಿಯ ಕಟ್ಟೆಯನ್ನೇರಿದಂದಿನಿಂದ ಕೈಯಲ್ಲಿಯ ಸಿಪಾಯಿಯಿಂದ ಮಾಮಲೇದಾರರವರೆಗೆ ಎಲ್ಲರಿಂದ ಅವರವರ ಯೋಗ್ಯತೆಗೆ ತಕ್ಕ ಅಪಹಾಸ್ಯಕ್ಕೆ ಗುರಿಯಾಗಿದ್ದನು. ಅದರಲ್ಲಿ ಕಚೇರಿಯಲ್ಲಿ ತನ್ನಿಂದ ತಪ್ಪು ಆಗುವದಕ್ಕೂ, ತನ್ನ ಅಮಲದಾರನು ತನ್ನ ಮೇಲೆ ಹರಿಹಾಕುವದಕ್ಕೂ, ಅದರಿಂದ ಲಜ್ಜಿತನಾಗಿ ಇನ್ನಷ್ಟು ತಪ್ಪು ಮಾಡುವದಕ್ಕೂ ಸರಿಹೋಗುತ್ತಿತ್ತು. ಹೊಸಬನಾದ ಅವನು ಹಿರಿಯ ಕಾರಕೂನರಿಂದಲೂ ಸಾಕಷ್ಟು ಅಪಹಾಸ್ಯಕ್ಕೀಡಾಗಿದ್ದನು. ತಾನೂ ಹಿರಿಯನಾಗಿ ತನ್ನ ಕೈಕೆಳಗೆ ಬಂದ ತಪ್ಪಡಿಗಳನ್ನಿಡುವ ತರುಣ ಕಾರಕೂನರ ಮೇಲೆ ಹರಿಹಾಯುವ ಅನೇಕ

ಸುಖಸ್ವಪ್ನಗಳನ್ನು ಅವನು ಮನದಲ್ಲಿಯೇ ಕಲ್ಪಿಸಿಕೊಂಡಿದ್ದನು. ಒಮ್ಮೊಮ್ಮೆ ತಾಯಿಯು ಈ ಸ್ವಪ್ನಗಳ ಪರಿಣಾಮವಾಗಿ ಅವನ ಕೋಪಕ್ಕೆ ಗುರಿಯಾಗುತ್ತಿದ್ದಳು. ಕಿಟ್ಟಿಯ ಮುಖದ ಮೇಲೆ ಒಮ್ಮೆಲೆ ಆರ್ಜವದ ಹುಚ್ಚುನಗೆ ಮಿನುಗತೊಡಗಿತು.

ರಾಘಪ್ಪ ಈಗಲೇ ಲಗ್ನದ ಸುದ್ದಿ ಎತ್ತುವದರಲ್ಲಿ ಅರ್ಥವಿಲ್ಲವೆಂದು ಮನಗಂಡು, ಮಾಮಲೇದಾರರು ಹಾಗೂ ತಾನು ಕೂಡಿಯೇ ಶಾಲೆಯಲ್ಲಿ ಕಲಿತದ್ದು, ಫುಟ್‌ಬಾಲ್ ಆಡಿದ್ದು, ಅವರು ಮುಂದೆ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ ಸರಕಾರಿ ನೌಕರಿ ಸೇರಿದ್ದು, ತಾನು ಮಾತ್ರ ನಾಲ್ಕನೆಯ ಇಯತ್ತೆಗೆ ಸಾಲೆಗೆ ಶರಣು ಹೊಡೆದದ್ದು, ಇತ್ಯಾದಿ ಅನೇಕಾನೇಕ ಸಂಗತಿಗಳನ್ನು ರಸವತ್ತಾಗಿ ಹೇಳಿ 'ಹೊತ್ತು ಅತ್ಯು, ನಾ ಬರತೇನಿ' ಎಂದನು. ಇಷ್ಟಗಲ ಕಣ್ಣು ಅರಳಿಸಿ ಎಲ್ಲವನ್ನೂ ಕೇಳುತ್ತ, ಅಷ್ಟಷ್ಟಕ್ಕೆ ನಗುತ್ತ ಕುಳಿತ ಕಿಟ್ಟಿಯು, 'ಅವ್ವಾ, ಒಂದಿಷ್ಟು ಚಹಾನಾರ ಮಾಡು' ಎಂದು ಆಜ್ಞಾಪಿಸಿದನು.

ಅರ್ಧತಾಸು ಮೊದಲೇ ಕಿಟ್ಟಿ ಈ ಸಂಗತಿಯನ್ನು ಹೇಳಿದ್ದರೆ ಗಂಗವ್ವ ಮಾಡುತ್ತಿದ್ದಳು. ಆದರೆ ಈ ಎಲ್ಲ ಮಾತಿನ ಬಗೆಯನ್ನೂ, ಅದನ್ನು ಕಿಟ್ಟಿ ಕೇಳುತ್ತಿದ್ದ ಬಗೆಯನ್ನೂ ಕಂಡು ತಿಳಿದ ಗಂಗವ್ವ ಸಹಿಷ್ಣುತೆ ಸರಿಯಲ್ಲವೆಂದು ನಿಶ್ಚಯಿಸಿದಳು.

'ರಾಘೂ ಚಹಾದ ಮನಶ್ಯಾ ಅಲ್ಲ ಏಳಪಾ' ಎಂದಳು ನಿರುತ್ಸಾಹದಿಂದ. ಅವ್ವನಲ್ಲಿ ಇಂಥ ಕ್ರೌರ್ಯವಿರಬಹುದೆಂದು ಕಿಟ್ಟಿ ಎಣಿಸಿರಲಿಲ್ಲ. ಜೊತೆಗೆ ತನ್ನದೂ ಮುಖಭಂಗವಾಯಿತು. ತಾನೂ ನೌಕರದಾರ.... ತನ್ನ ಮನೆಗೆ ಬಂದವರು, ಅದರಲ್ಲಿಯೂ ಮಾಮಲೇದಾರರ ಇಂಥ ಸ್ನೇಹಿತರಿಗೆ ಹೀಗೆ ಅವಮರ್ಯಾದೆ ಆಗಬೇಕೆ ?.......

ರಾಘಪ್ಪ ನಗುತ್ತ, 'ಗಂಗಕ್ಕಾ, ಇತ್ತಿತ್ತಲಾಗ ನಮ್ಮದೂ ಗಟ್ಟಿಗತನಾ ಹೋಗೇದ. ನೀ ನೋಡಿದಾಗ್ಯೂ ಈಗ್ಯೂ ರಗಡ ಫರಕ ಆಗೇದ. ಒಂದು ಚಹಾ, ಒಂದು ತಂಬಾಕು ಯಾವಾಗರ ಬೇಕಾಗತಾವ. ಆದರ ಇದs ತೊಗೊಂಡು ಬಂದೇನಿ ; ಈಗ ಒಲ್ಲೆ. ಮೇಲಾಗಿ, ನಿನ್ನದೂ ಕಿಟ್ಟಣ್ಣನದೂ ಭೆಟ್ಟಿ ಅತ್ಯು. ಇದs ಚಹಾದಕಿಂತಾ ಮೇಲು ಆತ್ಯು' ಎಂದನು.

ಆದರೆ ಗಂಗವ್ವ ಬಿಡುವವಳೇ? – 'ಅಂತೂ ಇದಕೂ ದೊಡ್ಡ ದೊಡ್ಡ ಚಟಾ ಎಲ್ಲಾ ಹೋಗ್ಯಾವ ಅವಬಾರದs?' ಎಂದಳು.

ರಾಘಪ್ಪ ದೊಡ್ಡ ದನಿಯಿಂದ ನಕ್ಕಂತೆ ಮಾಡಿ, 'ಹ.... ಹ.... ಬರತೀನಿ, ಒಮ್ಮೆ ಮನೀಕಡೆ ಕರಕೊಂಡು ಬಾರಪಾ ನಿಮ್ಮವ್ವನ್ನ .... ತೀರ ಬಡವರನ್ನ ಮರೀಬ್ಯಾಡ್ರಿ....' ಎನ್ನುತ್ತ ಹೊರಗೆ ನಡೆದನು. ತಮ್ಮ ಅವ್ವನ ಅಸಭ್ಯ ವರ್ತನೆಯ

ಬಗ್ಗೆ ಹೇಗೆ ತಾನು ಕ್ಷಮೆ ಬೇಡಬೇಕೆಂಬುದು ತೋಚದೆ, ಅಷ್ಟಿಷ್ಟಕ್ಕೆ 'ಚಹಾ ತೊಗೊಂಡು ಹೋಗಿದ್ದರೆ ಬೇಶ್ ಆಗತಿತ್ತು' ಎನ್ನುತ್ತ ಸೋದರಮಾವನನ್ನು ದಾರಿಯವರೆಗೆ ಕಳಿಸಿ ಬಂದನು.

ಹೊಸ್ತಿಲ ದಾಟುವಾಗ ರಾಘಪ್ಪ ಹಿಂದಿರುಗಿ ಒಮ್ಮೆ ಗಂಗವ್ವನ ಕಡೆಗೆ ನಿಷ್ಠುರವಾಗಿ ನೀಟಾಗಿ ಬೀರಿದ ನೋಟ ಕಿಟ್ಟಿಗೆ ಕಾಣಲಿಲ್ಲ ; ಗಂಗಕ್ಕನಿಗೆ ಕಾಣಿಸಿತು. ಆಕೆ ತಮ್ಮನನ್ನು ಕಂಡಾಗ ತುಸು ಕರಗಿದ ಎದೆಯನ್ನು ಮತ್ತೆ ಕಲ್ಲುಮಾಡಿಕೊಂಡಳು.

# ೪ : ಕಿಟ್ಟಿಯ ಕೋಪ

ಕಿಟ್ಟಿ ಬೀದಿಯಿಂದ ಮರಳಿದಾಗ 'ರಾಘಪ್ಪಮಾವಾ' ಎಂದು ತಾನೇ ರಚಿಸಿದ ಹೆಸರು ಅವನ ಕಿವಿಯಲ್ಲಿ ಸವಿ ನುಡಿಯುತ್ತಿತ್ತು. ಆದರೆ ಮನೆ ಸೇರುವಾಗ, ಅವ್ವನ ತಪ್ಪಿಗಾಗಿ ಸಿಟ್ಟಿಗೇಳುವದು ತನ್ನ ಕರ್ತವ್ಯವೆಂಬುದು ನೆನಪಾಗಿ ಸಂತಾಪದಿಂದ ಕಾಲು ಅವ್ವಳಿಸುತ್ತಲೇ ಕಿಟ್ಟಿ ಮನೆ ಸೇರಿದನು. ಬಿಸಿಲೊಳಗಿಂದ ಒಮ್ಮೆಲೆ ಅರೆಗತ್ತಲಿನ ಮನೆಯನ್ನು ಸೇರಿದೊಡನೆ ಅವನ ಕಣ್ಣು ಕತ್ತಲೆ ಗಟ್ಟಿದಂತಾಗಿತ್ತು. ತತ್ತರಿಸುತ್ತ ಅರ್ಧ ಹರಿದ ಆರಾಮ ಕುರ್ಚಿಯ ಮೇಲೆ ಬಿದ್ದುಕೊಂಡ ; ಅದು ಪೂರ್ಣ ಹರಿದುಹೋಯಿತು. ಅದರ ವ್ಯೂಹದೊಳಗಿಂದ ಪಾರಾಗಿ ಬರುವಷ್ಟರಲ್ಲಿ ನಗೆ ಬಂದಿತು. ಆದರೆ ನಗಕೂಡದು; ಮತ್ತೆ ಹುಬ್ಬು ಗಂಟಿಕ್ಕಿಕೊಂಡು ಚಾಪೆಯ ಮೇಲೆ ಒರಗಿದ. ಗಂಗವ್ವ ಚಾಳೀಸು ಏರಿಸಿಕೊಂಡು ಅಡಿಗೆಯ ಮನೆಯಲ್ಲಿ 'ಭಕ್ತವಿಜಯ'ದ ಪುಟಗಳನ್ನು ತೆರೆಯುತ್ತಿದ್ದವಳು ಕಿಟ್ಟಯ ಧಡಪಡವನ್ನು ಕೇಳಿ ಪುಸ್ತಕದತ್ತ ಲಕ್ಷ್ಯಗೊಡದೆ ಸದ್ದು ಕೇಳತೊಡಗಿದಳು. ತುಸು ಹೊತ್ತು ಇಬ್ಬರೂ ಮೌನದಿಂದ ಇದ್ದರು. ಕಿಟ್ಟ ಸಿಟ್ಟಿಗೆದ್ದಿದ್ದಾನೆಂದು ಗಂಗವ್ವನಿಗೆ ಗೊತ್ತು. ತಾನು ಏನು ಮಾತನಾಡಿದರೂ ತನ್ನ ಮೇಲೆ ಹರಿಹಾಯುತ್ತಾನೆ. ಆದರೂ ಸುಮ್ಮನಿರಲು ಆಗದೆ ಆಕೆಯೇ ಒಳಗಿಂದ ಕೇಳಿಸುವಂತೆ ಹೇಳಿದಳು :

'ಕಿಟ್ಟಿ, ಒಳಗ ಬಾ ಅಲ್ಲಾ.'

'ಯಾಕ ?'

'ಅಲ್ಲ, ಬಂದರ ಹೇಳೇನು.'

'ಅಲ್ಲಿಂದನs ಹೇಳು. ಕೇಳಿಸತsದ.'

'ಆಗಲಿ......ನಾ ಹೇಳೋದು ಇಷ್ಟs. ಈ ರಾಘ್ಯಾನ ಜೋಡಿ ನಾ ಬೀಗತನಾ ಒಲ್ಲೆ.....'

'ಹೂಂ.'

'ನೀನು ಅವನ ಬಲ್ಯಾಗ ಬೀಳಬ್ಯಾಡ.'

'ಹೂಂ.'

ಗಂಗವ್ವನಿಗೆ ಮಾತಿನ ಸಮಯವಿನ್ನೂ ಬಂದಿಲ್ಲವೆಂದು ಹೊಳೆಯಿತು. ಅವಳಿಗೆ ಗೊತ್ತು ಕಿಟ್ಟಿ ತನ್ನನ್ನು ಮೀರಿ ಇಲ್ಲವೆಂದು..... ಆದರೆ ತನ್ನ ಮಾತನ್ನು ಪೂರ್ಣ ಅವನ ಮೇಲೆ ಬಿಂಬಿಸಬೇಕಾದರೆ ಯೋಗ್ಯ ವೇಳೆಬೇಕು. ಕಿಟ್ಟಿಗಾದರೋ ತನಗೊಬ್ಬ ಸೋದರಮಾವನಿರುವ ವಿಷಯ, ಅವನಿಗೊಬ್ಬ ಮಗಳಿರುವ ವಿಷಯ, ಅವಳನ್ನು ತನಗೆ ಕೊಡಮಾಡಿದ್ದ ವಿಷಯ, ಯಾವವೂ ಮಹತ್ವದವಲ್ಲ. ತನ್ನ ಮನೆಯಲ್ಲಿ ತನ್ನ ಮಾತು ನಡೆಯಲಿಲ್ಲವಲ್ಲ ; ತಾನು ಸರಕಾರಿ ಕಾಮದಾರನಿದ್ದು ಮಾಮಲೇದರರ ಗುರುತಿನ ಒಬ್ಬ ಗೃಹಸ್ಥನಿಗೆ ಚಹವಿಲ್ಲದೆ ಕಳಿಸಬೇಕಾಯಿತಲ್ಲ; ತನ್ನ ಮಾವನನ್ನು ಮನೆಯಲ್ಲಿ ತಾಯಿಯೇ ಕಾಯುವದಿಲ್ಲವೆಂದಮೇಲೆ ಕಚೇರಿಯಲ್ಲಿಯ ಸಿಪಾಯಿಯವರು ಹೇಗೆ ಕಾಯ್ದಾರು ?.... ಇವೇ ಅವನ ತಲೆಯಲ್ಲಿ ತುಂಬಿದ್ದವು. ಅವೆಲ್ಲ ವಿಚಾರಗಳನ್ನು ನೆನೆನೆನೆಸಿ ಕೊಂಡು ಕೆರಳಿಹೋಗಿ ತಾಯಿ ಇನ್ನೊಂದು ಆಡಿದರೆ ತನ್ನ ಬತ್ತಳಿಕೆಯನ್ನು ತೆಗೆಯಬೇಕೆಂಬ ಸನ್ನಾಹದಲ್ಲಿ ದಾರಿ ಕಾಯತೊಡಗಿದನು. ಹದಿನೈದು ನಿಮಿಷ ಹೋದವು. ಗಂಗವ್ವನಿಂದ ಮಾತೇ ಇಲ್ಲ. ಮೆಲ್ಲಗೆ ಅಡಿಗೆಯ ಮನೆಯಿಂದ ಪುಟುಪುಟು ಬಾಯಲ್ಲಿಯೇ ಆಡಿಕೊಂಡ ಅಸ್ಪಷ್ಟ ಉಚ್ಚಾರಗಳು ಕೇಳಿಬರತೊಡಗಿದವು – 'ಭಕ್ತವಿಜಯ' ಸುರುವು ಮಾಡಿದ್ದಾಳೆ ಅವ್ವ.

ಕಿಟ್ಟಿ ಇನ್ನೂ ರೇಗಿಹೋದನು. ಇನ್ನು ಒಂದು ತಾಸಿನವರೆಗೆ ಅವ್ವನಲಕ್ಷ್ಯ ಇನ್ನೊಂದು ಕಡೆ ಹೋಗುವುದಿಲ್ಲ. ಇನ್ನು ತಾನೇ ಪ್ರಾರಂಭಿಸಬೇಕು.

'ಅವ್ವಾ ರಾಹಂದಾಗ ಹಹಾಲಿಲ್ಲ?' ಎಂದು ಕೂಗಿಕೊಂಡನು. ಪುಸ್ತಕದಲ್ಲಿ ಗರ್ಕಳಾದ ಗಂಗವ್ವನಿಗೆ ಈ ಪ್ರಶ್ನೆ ತಿಳಿಯದೆ 'ಏನಂದೀ?' ಎಂದಳು.

'ರಾಘಪ್ಪ–ಬಂದಾಗ–ಚಹಾ–ಯಾಕ–ಮಾಡಲಿಲ್ಲ ? ಕೇ–ಳಿ–ಸಿ–ತೇ–ನು?' ಎಂದು ಬಿಡಿಬಿಡಿಸಿ ಕೂಗಿ ಹೇಳಿದನು.

'ಏನು ಹೇಳಲಿ ಬಿಡಪಾ?'

'ಹೀಂಗ ಮನೀಗೆ ಬಂದ ಮಂದಿಗೆ ಮಾಡಲಿಕ್ಕೆ ಹತ್ತಿದರ ನನ್ನ ಮಾನ ಹೋಗತದ, ಗೊತ್ತದನೋ ಇಲ್ಲೋ ? – ನಾನೂ ಸರಕಾರೀ ಕಾಮದಾರ ಆದೆ. ನನ್ನ ಮನ್ಯಾಗ ನನ್ನ ಮಾತು ನಡೀದಿದ್ದರ ನನಗೆ ಏನು ಅಂದಾರು ಮಂದಿ ? ಹೀಂಗಾದರ......' ಕಿಟ್ಟಿ ಮುಂದುವರಿಯುವವನು.

'ಅಯ್ಯ ಕಿಟ್ಟಣ್ಣಾ, ಚಹಾಪುಡಿ ತೀರೇದ ; ತೊಗೊಂಡು ಬಾ ಅಂತ ಮುಂಜಾನೇನs ಹೇಳೇನಪಾ. ನೀನs ಆ ನಿನ್ನ ಕಾಗದದಾಗ ಮಾರಿ ಹಾಕಿಕೊಂಡು ಕೂತುಬಿಟ್ಟಿ. ತರಲೇ ಇಲ್ಲ...'

ಹೋ, ಹೌದು, ಹೌದು, ಹೌದು. ಮರೆತೇಹೋಯಿತು. ಅವ್ವ ಮುಂಜಾನೆಯ ಚಹಕ್ಕೆ ಕೊನೆಯ ಚಮಚೆ ಪುಡಿ ಹಾಕಿ ತನ್ನೆದುರೇ ಚಹಡ ಡಬ್ಬಿ ತೋರಿಸಿದ್ದು, ತಾನು ಈ ತರುತ್ತೇನೆಂದು ಹೇಳಿ ಕಚೇರಿಯ ಕಾಗದಗಳಲ್ಲಿ ತಲೆ ಹಾಕಿದ್ದು, ಎಲ್ಲ ಮರೆತುಹೋದದ್ದು ನೆನಪಾಯಿತು. ಹರಿ, ಹರಿ, ಹರಿ, ಪುರಂದರ ವಿಠಲಾ... ಥೂ ಮರವೇ ! ಥೂ ಮರವೇ !......

ಕಿಟ್ಟಿಯ ಸಿಟ್ಟಿನ ಮೊನೆಯೇ ಮುರಿದುಹೋಯಿತು ; ತುಸು ನಗೆಯೂ ಬಂದಿತು. ತಾನು ಆಗ ಚಹಕ್ಕಾಗಿ ತಾಯಿಗೆ ಹೆಚ್ಚು ಜುಲುಮೆ ಮಾಡಲಿಲ್ಲವೆಂದು ತನ್ನನ್ನು ತಾನೇ ಅಭಿನಂದಿಸಿಕೊಂಡ. ಇಲ್ಲವಾದರೆ ಮಾಮಲೇದಾರರ ಗುರುತಿದ್ದ ಸೋದರಮಾವನ ಎದುರು ಕಾಮದಾರರ ಅಡಿಗೆಮನೆಯಲ್ಲಿಯ ಡಬ್ಬಿಗಳ ಗುಟ್ಟು ರಟ್ಟಾಗಿ, ಇಂದು ಕನ್ನೆಯ ಕೊಡಲು ಬಂದ ಅವನು ನಾಳೆ ಒಲ್ಲೆ ನೆನ್ನಬಹುದಾಗಿತ್ತು, ಎಂದು ತನ್ನಷ್ಟಕ್ಕೆ ತಾನೇ ಚೇಷ್ಟೆ ಮಾಡಿಕೊಂಡ...

ಆದರೆ ಉರಿಮೋರೆಯನ್ನು ಒಮ್ಮೆಲೇ ತಾಯಿಗೆ ಕಾಣುವಂತೆ ನಗೆಮೋರೆಯನ್ನಾಗಿಸಲು ಅಭಿಮಾನ ಸಾಲದ್ದರಿಂದ ಅದೇ ಮೊಗವಾಡ ಧರಿಸಿಕೊಂಡೇ ಕೋಟು-ಟೊಪ್ಪಿಗೆ ಹಾಕಿಕೊಂಡು ತಿರುಗಾಡಲು ಹೊರಟ.

ಗಂಗವ್ವನಿಗೆ ಈ ಟ್ರಾನ್ಸಫರ್ ಸೀನು ತಿಳಿಯಲಿಲ್ಲ. ತನ್ನದೇ ಆದ ಪ್ರತ್ಯುತ್ಪನ್ನ ಮತಿಯಿಂದ ಆಕೆ ತನ್ನದೇ ಹಾದಿ ತೆಗೆದಳು. ನಿನ್ನೆ ಶನಿವಾರ ಹನುಮಂತ ದೇವರಿಗೆ ಒಡೆಸಿದ ತೆಂಗಿನಕಾಯಿಯ ಬುಡಕ್ಕೆ ಇನ್ನೂ ತುಸು ಕೊಬ್ಬರಿ ಹತ್ತಿಕೊಂಡಿತ್ತು. ಅದನ್ನೆಲ್ಲ ಎಬ್ಬಿ ತೆಗೆದಳು. ಒಳಗಿನಿಂದ ಪುಠಣಿ ಹೊರತೆಗೆದಳು. ಕಿಟ್ಟಿ ಅಡ್ಡಾಡಿ ಬರುವಷ್ಟರಲ್ಲಿ ಅವನ ಚಪಾತಿಗೆ ಅತ್ಯುತ್ತಮ ಕೊಬ್ಬರಿಯ ಚಟ್ಣಿಯನ್ನು ತಯಾರಿಸಿ ಇಟ್ಟಿದ್ದಳು. ಕಿಟ್ಟಿ ಬಂದವನೇ ಸಂಧ್ಯಾವಂದನೆ ಮುಗಿಸಿ ಊಟಕ್ಕೆ ಕುಳಿತನು. ಅವನಿಗೂ ಮಧ್ಯಾಹ್ನದ ತನ್ನ ಅವಿವೇಕವನ್ನು ಮರೆಮಾಡಿ ತಾಯಿಯೊಡನೆ ಸಂಧಾನ ಹೂಡಲು ಒಳ್ಳೆಯ ನೆವ ಸಿಕ್ಕಿತು. ಚಟ್ಣಿಯನ್ನು ಬಾಯಿತುಂಬ ಹೊಗಳಿ ಒಪ್ಪಂದ ಮಾಡಿಕೊಂಡನು. ಗಂಗವ್ವ 'ಏನು ಮಾಡಲ್ಯಪ್ಪಾ; ಬಹಳ ಸಿಟ್ಟಿಗೆದ್ದು ಹೋಗಿದ್ದಿ' ಎಂದು ಎಲ್ಲದಕ್ಕೂ ಕೊನೆಯ ಶಾಂತಿಪಾಠ ಹೇಳಿದಳು.

ಅಂದು ರಾತ್ರಿ ತಾಯಿ-ಮಗ ಬಹಳ ಹೊತ್ತು ಮಾತನಾಡಿದರು.

# ೫ : ಹಳೆಯ ನೆನಪುಗಳು

'ಕಿಟ್ಟಣ್ಣಾ, ಇವತ್ತ ಮಧ್ಯಾನದಾಗ ಸಿಟ್ಟಿಗೆದ್ದೆಪಾ. ನಿನಗ ಈ ರಾಘ್ಯಾನ ಒಂದೊಂದು ಸುದ್ದಿ ಗೊತ್ತಿಲ್ಲ. ನಾವೆಲ್ಲ ಬಹಳಷ್ಟು ಕಂಡೇವಿ, ಉಂಡೇವಿ. ನಮಗ ಆ ವ್ಯಥಾ ಯಾವಾಗಲೂ ಕಣ್ಣ ಮುಂದ ಕಟ್ಟಿರತದ. ನೀ ಆರೇದವ ಅಂತ ನಿನ್ನ ಮುಂದಪಂಟು[೧] ಹೊಡಿತಾನ, ಹೊಡೀಲಿ. ನನ್ನ ಮುಂದ ಎಷ್ಟು ಹಾರ‍್ಯಾಡತಾನ ನೋಡೋಣ. ಮತ್ತ ಇಕಾ... ಅವ ನಿನ್ನ ತಲ್ಯಾಗ ಇಲ್ಲದ ಭುಲತಾಪಿ[೨] ತುಂಬಿಗಿಂಬ್ಯಾನು. ಯಾತಕ್ಕೂ ಹೇಸೂ ಮನಶ್ಯಾ ಅಲ್ಲ ಅವ; ಎರಡು ಸುಳ್ಳಾಡಲಿಕ್ಕೆ ಹೇಶ್ಯಾನs? ಅವನ ಬಣ್ಣದ ಮಾತಿಗೆ ನೀ ಮರಳಾಗ ಬ್ಯಾಡ.

'ಇವನಿಂದಲೇ ನಮಗ ಈ ಬಡತನ ಬಂದದ್ದು, ಕಿಟ್ಟಣ್ಣಾ. ನಾವು ಬಡವರು ಅಂತೀಯೇನು? – ಅಲ್ಲಪಾ. ಇಕಾ ನಾನs ಶೇರು ಭಂಗಾರ ಮೈಮಾಲ ಇಟ್ಟುಕೊಂಡಕಿ ಇದ್ದೇನಿ. ನಾ ಗೋಟು–ಪಾಟ್ಲಿ ಎಲ್ಲಾ ಇಟಗೊಂಡರೆ ಕೈ ಹೀಂಗ ಮ್ಯಾಲ ಎತ್ತಲಿಕ್ಕೆ ಆಗತಿದ್ದಿಲ್ಲ. ವರ್ಷಾ ಲಕ್ಷ್ಮೀನಾರಾಯಣನ ದರ್ಶನಕ್ಕ ಈ ಪೋದ್ದಾರ ಲಕ್ಷುಂಬಾಯಿ ನಾನೂ ಕೂಡೇ ಹೋಗತಿದ್ದಿವಿ., ಅವರ ಡಮಣ್ಯಾಗ. ಅದನ್ನೆಲ್ಲಾ ಆಕಿ ನೋಡ್ಯಾಳ ಅಂತ ನನ್ನ ಕಂಡರೆ ಆಕಿ ಅಷ್ಟು ಅಂತಃಕರಣ ಹಚ್ಚಿಗೊಂಡಾಳ... ಹೋಗಲಿ ಬಿಡು; ಈಗ ಅದನ್ನ ನೆನಸಿ ಏನು ಉಪಯೋಗ?

'ನಾ ಅಂಥಾ ದಿನದಾಗ ಇದ್ದಾಗ ಇದsರಾಘ್ಯಾ 'ಹೊಲಾ ಒತ್ತೀ ಬಿದ್ದಾವ, ಐನೂರು ರೂಪಾಯಿ ಸಾಲಾ ಕೊಡರಿ, ಎರಡು ಹೊಲಾನಾರ ಬಿಡಿಸಿಗೋತೇನಿ' ಅಂತ ನಿಮ್ಮಪ್ಪನ ಎದುರಿಗೆ ಬಂದು ಮೂಗು ತಿಕ್ಕತಿದ್ದ. ಇವರ ಮನಸ್ಸು ಭಾಳ ದೊಡ್ಡದು... ಏನು ಮಾಡೋದು, ಕಿಟ್ಟಣ್ಣಾ, ನೀ ಇನ್ನೂ ಆಗ ಗೇಣು ಇದ್ದಿ. ಅವರು ಕೈಬಿಟ್ಟು ಹೋದರು..... ಹಂ–ಏನಿಲ್ಲ ಬಿಡು ; ನಾ ಏನು ಹಂಗ ನೆನಸಿ ಅಳೋ ಆಕೆ ಅಲ್ಲ... ಆದರ ನಿನ್ನ ಮುಂದ ಕೂತಾಗ ಮಾತ್ರ ಆ ನೆನಪು ಆತ್ಯು ಅಂದ್ರ ಯಾಕೋ ದುಃಖ ಬರತದ..... ಈಗ ಇದ್ದರ ಎಷ್ಟು ಹಿಗ್ಗತಿದ್ದರೋ

---

೧. ಸುಳ್ಳು. ೨. ಮೋಸಗಾರಿಕೆ.

ಏನೋ ! ನಿನಗ ಕನ್ಯಾ ನೋಡಲಿಕ್ಕೆ ಯಾಯಾ ಊರು ಅಡ್ಡಾಡತಿದ್ದರೋ ಏನೋ ?....ಇರಲಿ ಬಿಡು.... ಈ ನೀಚಗ ಆಗ ಐನೂರು ರೂಪಾಯಿ ಕೊಟ್ಟು ಒಂದು ಜಮೀನು ಬಿಡಿಸಿಕೊಟ್ಟಮ್ಯಾಲ ಮುಂದ ಇವರ ಭರಭರಾಟಿ ಸುರುವು ಆತ್ಯು. ಇವನ ಹೇಣ್ತಿ ಚಂಪಿ ಈಗ ಇಷ್ಟು ದೌಲತ್ತು ಮೆರಸತಾಳ ! ಆಗ ಮೊದಲು ಕೆಲವು ದಿನಾ ಇವರು 'ನಿನ್ನ ಹೇಣ್ತಿಗೆ ಎರಡು ಕಿರಿಗಿ ತಗೋ' ಅಂತ ಕೈ ಎತ್ತಿ ಕೊಟ್ಟಾಗs ಆಕಿ ಹೊಸಾಸೀರಿ ಕಾಣಬೇಕು.... ಇಂಥಾ ದಿನಾನೂ ಇದ್ದವು.... ಕಡೀಕೆ ಆ ಉಪಕಾರಾ ತೀರಿಸಿದನಲ್ಲ ! ತಮ್ಮಂತ, ತಮ್ಮ ! ಪೂರ್ವಜನ್ಮದ ಭಾಗಾದಿ !

'ನಿನಗೆ ಇನ್ನೊಬ್ಬ ಸೋದರಮಾವ ಇದ್ದಾನ. ಈ ರಾಘ್ಯಾನಕಿಂತಾ ಚಿಕ್ಕಾವ.... ವೆಂಕಾಟಿ ಅಂತ. ಈಗ ಎಲ್ಲಿ ಇದ್ದಾನೋ ಸತ್ತಾನೋ ? ಅವನಾಪತ್ತೆ ಆಗೇ ಈಗ ಹತ್ತು ಹನ್ನೊಂದು ವರ್ಷ ಆತು. ಸ್ವಲ್ಪ ಅರೆಹುಚ್ಚನ ಹಂಗ ಇದ್ದ. ಅಂದರ ಮನಸ್ಸಿಲೇ ಒಳ್ಳೆಯವ. ದೇವರೂ ಅಂದರ ಅತೀ ಭಕ್ತಿ !

'ಇನ್ನೊಬ್ಬರನ ಬಿಟ್ಟು ಇದೊಂದು ಕಲಸಕ್ರಿ[೧] ಹಳಕು ತಿನ್ನೂ ಅಂದ್ರ ಅವ ತಿನ್ನತಿದ್ದಿಲ್ಲ. ಏನು ಎಲ್ಲಾ ನಮ್ಮ ಮನೆತನದ ದುರ್ಬೀಜ ಅಂದರ ಈ ರಾಘ್ಯಾನs.... ನಮ್ಮ ವೆಂಕಾಟಿ ಸ್ವಲ್ಪ ಹುಚ್ಚುಚ್ಚು ಅಷ್ಟs. ನಾಕು ಬುಕ್ಕು ಕಲ್ತಾ. ರಾಘ್ಯಾನ ಲಗ್ನ ಆದಕೂಡಲೇ, ಯಾರೋ ಚಾಷ್ಟಿಲೇ, ನಿನ್ನದು ಲಗ್ನ ಮಾಡಿಬಿಡಿತೇವಿ ಅಂದರು. ಅಂದಕೂಡಲೇ, ಮನಿ ಬಿಟ್ಟು ಓಡಿಹೋಗಿ ಬಿಟ್ಟ. ಎಷ್ಟೋ ದಿನ ಪುಣೇಕ್ಕ ಇರತಿತ್ತು ಖೋಡಿ. ಯಾರಿಗೂ ತಿಳಿಸಿದ್ದಿಲ್ಲಾ ಬಿಟ್ಟಿದ್ದಿಲ್ಲಾ. ಹೋದರ ಹೋಗಲಿ, ಹಿಸೆ[೨] ಕೊಡೋದು ತಪ್ಪಿತು, ಅಂತ ಈ ರಾಘ್ಯಾ ಅವನ ದಶಿಂದ ಒಂದಿಷ್ಟೂ ವಿಚಾರಮಾಡದೆ ಇಲ್ಲೇ ಧಾರವಾಡದಾಗs ಮನಿ ಮಾಡಿ ದಿನಾ ಒಂದು ಉದ್ಯೋಗಾ ಮಾಡಿಕೋತ ಇದ್ದ.

'ಪುಣೇದಾಗ ವೆಂಕಟ ಯಾರೋ ಗುಜ್ಜರ[೩] ಮನ್ಯಾಗ ಪೂಜಿ ಮಾಡಿಕೋತ ಇದ್ದನಂತ. ಅವರೂ ಶ್ರೀಮಂತ ವೈಶ್ಯರು. ಇವನ ಮ್ಯಾಲ ವಿಶ್ವಾಸ ಇಟ್ಟಿದ್ದರು ಕಾಣಸ್ತದ. ಏನು ಯಾರು ಕಲಿಸಿದರೋ, ತನಗs ರೊಕ್ಕದ ಆಶಾ ಹುಟ್ಟಿತೋ, ಒಂದು ದಿವಸ ಎರಡು ಸಾವಿರ ರೂಪಾಯಿ ಹುಂಡೀ ಮ್ಯಾಲ ಖೊಟ್ಟಿ ಸಹಿ ಹಾಕಿ ಯಾವದೋ ಬ್ಯಾಂಕಿನಾಗಿಂದ ಆ ರೊಕ್ಕಾ ನೆಗವಿ ನುಂಗಿ ಹಾಕಿಬಿಟ್ಟ. ಆತ ಅರೆಹುಚ್ಚ ; ತಾ ಒಬ್ಬನs ಮಾಡಿರೋದು ಸಾಧ್ಯ ಇಲ್ಲ. ಅದs ವ್ಯಾಳಾಕ್ಕ

---

೧. ಕಲ್ಲುಸಕ್ಕರೆ  ೨. ಪಾಲು.  ೩. ಗುಜರಾಥಿ.

ಪುಣೇದಾಗ ಇಂಥಲ್ಲಿ ಅವ ಇದ್ದದ್ದು ತಿಳಿದುಕೊಂಡು ರಾಘ್ಯಾ ಅಲ್ಲಿಗೆ ಹೋಗಿ ಎರಡು ದಿವಸ ಇದ್ದು ಬಂದಿದ್ದನಂತ ; ಈತನs ಅವನ ತಲ್ಯಾಗ ತುಂಬಿರಬೇಕು.

'ಇರತ ಇರತ ನಾಕು ದಿನದಾಗ ಈ ಹಕೀಹತ್ತು[೧] ಹೊರಬಿದ್ದು ಆ ವೈಶ್ಯರಾತ ಪೊಲೀಸರಿಗೆ ವರದಿ ಕೊಟ್ಟ. ಬಂದರು ನೋಡು, ಏಕದಂ ಪೊಲೀಸರು! ಬಂದವರs ಈ ಹುಚ್ಚನ್ನ ಹಿಡಕೊಂಡು ಪೊಲೀಸ ಠಾಣೇಕ್ಕ ಒಯ್ದರು. ಆಗ ಅವ ಅವರಿಗೆ ಇವರಿಗೆ ಹೇಳಿಕೊಂಡು ರಾಘ್ಯಾಗ ಒಂದು ತಾರುಕಳಿಸಿದ. 'ನನ್ನ ತುರಂಗಿ[೨]ನ್ಯಾಗ ಹಾಕತಾರ ; ಉಳಿಸಿಗೋಳ್ರಿ' ಅಂತ. ಆ ತಾರು ಮುಟ್ಟಿದ ಘಳಿಗ್ಗೆ ರಾಘ್ಯಾ ನಮ್ಮಲ್ಲಿ ಓಡಿಕೋತs ಬಂದ. ಇವರ ಕಾಲು ಬಿದ್ದು' 'ಹೆಂಗಾರs ಮಾಡಿ ನನ್ನ ತಮ್ಮನ್ನ ಉಳಿಸಿಕೊಳ್ರಿ. ಒಮ್ಮೆ ಮನೆತನದಂವ ತುರಂಗ ಸೇರಿದ್ದು ನಾಕುಮಂದಿಗೆ ಗೊತ್ತಾತ್ಯು ಅಂದರ ನನಗ ಈಗ ಹುಟ್ಟೋ ಎರಡು ದುಡ್ಡು ಹುಟ್ಟಲಿಕ್ಕಿಲ್ಲಾ' ಅಂದ. ನನ್ನ ಮಾರಿ ನೋಡಿ ಅವರು ಇದರಾಗ ಮುಂದ ಬಿದ್ದರಪಾ. ಅಂದ ರಾತ್ರೀನs ಇವರೂ ರಾಘ್ಯೂ ಕೂಡಿ ಗಾಡೀ ಹಿಡಿದು ಪುಣೇಕ್ಕ ಹೋದರು. ರಾಘ್ಯಾನ ಹೊಲಾ ಎಲ್ಲಾ ಒತ್ತೀ ಬಿದ್ದಿದ್ದವು ; ನಮ್ಮವರs ಜಾಮೀನು ಆದರು ಐದು ಸಾವಿರಕ್ಕ. ವೆಂಕಟನ್ನ ಬಿಡಿಸಿಗೊಂಡು ಧಾರವಾಡಕ್ಕ ತಂದರು.....

'ಅವರೂ ತಮ್ಮ ಟಕ್ಕಿ[೩]ನ್ಯಾಗs ಇದ್ದರೋ ಏನೋ. ಯಾವಾಗಲೂ ಈ ಹುಚ್ಚ ವೆಂಕಾಟೀಮ್ಯಾಲs ಅವರ ಕಣ್ಣು. ಆದರೆ ಈ ನೀಚ ರಾಘ್ಯಾ ಏನು ಮಾಡಿದನೋ ಏನೋ ? – ಒಂದು ದಿವಸ ಅವನ ಮನಿಗೆ ಮಲಕೊಳ್ಳಿಕ್ಕೆ ಬಿಟ್ಟಿದ್ದರು ವೆಂಕಾಟನ್ನ... ಅವನ ತಲ್ಯಾಗ ರಾಘ್ಯಾ ಏನು ತುಂಬಿದನೋ ಏನೋ .... ಅಂದ ರಾತ್ರೀನs ಅವನ್ನ ಊರು ಬಿಟ್ಟು ಓಡಿಸಿಬಿಟ್ಟ... ಇಂದಿಗೂ ಆ ಹುಚ್ಚನ ಪತ್ತೇ ಇಲ್ಲ.

'ಆತ್ಯು... ಮುಂದ ಆಗೋದೆಲ್ಲಾ ಆತು, ಆ ಜಾಮೀನ ಆದ ತಪ್ಪಿಗೆ ಇವರು ತಮ್ಮ ಆಸ್ತಿ, ಮನಿ ಕಳಕೊಂಡರು.... ಮನ್ಯಾನಿಗ ಛಂದಾಛಂದದ ಸಾಮಾನ ಚಿಲ್ಲರೆ ಕಿಮ್ಮತ್ತಿಗೆ ಲಿಲಾವು ಆಗಿಹೋದವು... ಎಲ್ಲಾ ಮನಿ ತೊಳೆದುಹೋತ್ಯು.[೪] ಆಗಷ್ಟು ಬಂದು ರಾಘ್ಯಾ ಅತ್ತಹಂಗ ಮಾಡಿದಾ, ಏನೇನೋ ನಾಟಕಾನs ಮಾಡಿದಾ. ಅದೆಲ್ಲಾ ಅವರಿಗೆ ಸೇರಿಕೆ ಬರಲಿಲ್ಲ ಮುಂದ ಅದs ಹೃದ್ರೋಗ ಹತ್ತಿ ನವದು ನವದು, ಕಡೀಕೆ ಇವರು.... ಹುಂ.... ಹುಂ.

---

೧. ಸುದ್ದಿ. ೨. ಜೇಲು ೩. ಹುಷಾರಿಯಲ್ಲಿ. ೪. ತೆರವಾಯಿತು.

'ಇರಲಿ ಏಳು. ಅಳೋದು ಅಗೇದ ; ಆಗೇದs. ಇನ್ನೇನು ಅದನ್ನೆಲ್ಲಾ ತೊಗೊಂಡು ಮಾಡೋದು? – ಮುಂದ ಒಂದು ವರ್ಷದಾಗ ಈ ರಾಘ್ಯಾ ಧಾರವಾಡಾ ಬಿಟ್ಟು ಬಿಂದಗೋಳಕ್ಕೆ ಇರಲಿಕ್ಕೆ ಹೋದ ; ಅಲ್ಲಿ ಹೊಲಾಬಿಡಿಸಿಕೊಂಡು ಶ್ರೀಮಂತ ಆದ. ಈಗ ನಮಗ ತನ್ನ ದೌಲತ್ತು ತೋರಿಸಿ ನಮಗs ಹಂಗಸಲಿಕ್ಕೆ ಬಂದಾನ....

'ಕಿಟ್ಟಣ್ಣಾ, ಕೆಲವು ಹೇಳೋವು ಇರತಾವ, ಕೆಲವು ಹೇಳಲಿಕ್ಕೆ ಬರತಿರುದಿಲ್ಲಾ.... ಒಟ್ಟು ಒಂದು ಮಾತು. ಮನಶ್ಯಾ ಸಾಚಾ[೧] ಅಲ್ಲ, ಅವನ ಹಾದಿಗೆ ನೀ ಹೋಗಬ್ಯಾಡ...'

ಗಂಗವ್ವ ಇನ್ನೂ ಅನೇಕ ಚಿಕ್ಕಪುಟ್ಟ ಸಂಗತಿಗಳನ್ನೂ, ವಿವರಗಳನ್ನೂ ಹೇಳಿದಳು. ರಾತ್ರಿ ಹನ್ನೆರಡೂವರೆ ಗಂಟೆಯವರೆಗೆ ತಾಯಿಮಕ್ಕಳ ಮಾತು ಕತೆ ಸಾಗಿತ್ತು. ನೌಕರಿ ಹತ್ತಿದ ನಂತರ ಕಿಟ್ಟಿ ಇಷ್ಟು ಸಖ್ಯದಿಂದ ತಾಯಿಯ ಮಾತು ಕೇಳಿದ್ದು ಅದೇ ಮೊದಲ ಬಾರಿ. ಭೂತಕಾಲದ ಚಿತ್ರಗಳನ್ನು ಪ್ರತ್ಯಕ್ಷ ಕಾಣದಿದ್ದರೂ ಕಾಣಿಸಬಲ್ಲ ಪಾರಂಪರಿಕ 'ಆಂತರಃ ಕೋಪಿ ಹೇತುಃ' ಅವನ ಮನಸ್ಸಿನ ಪಟಲದ ಮೇಲೆ ಆಯಾ ಚಿತ್ರಗಳನ್ನು ನಿಚ್ಚಳವಾಗಿ ಮೂಡಿಸುತ್ತಿತ್ತು. ತಾಯಿಯ ಬಗ್ಗೆ ಉತ್ಕಟ ಆದರ ಅವನಲ್ಲಿ ಹುಟ್ಟಿತು.

---

೧. ನಂಬಿಗಸ್ಥ.

# ೬ : ಹೊಯ್ದಾಟ

ಅವ್ವ ಹಳೆಯ ಪೀಳಿಗೆಯವಳು ; ತಾನು ಹೊಸ ಪೀಳಿಗೆಯವ. ಒಂದೊಂದು ಪೀಳಿಗೆಗೂ ಒಂದೊಂದು ಸಮಸ್ಯೆ. ಆಕೆಯ ನಿರ್ಣಯದ ವಿರುದ್ಧ ಕಿಟ್ಟಿ ನಿಲ್ಲುವದು ಅಸಾಧ್ಯ. ತನಗಾದರೂ ಲಗ್ನದ ವಿಷಯಕ್ಕೆ ಧೈರ್ಯವಿಲ್ಲ. ಆದರೆ ನಮ್ಮ ಸಮಾಜದ ಗಂಡಿಗೆ ಹದಿನೆಂಟು ಇಪ್ಪತ್ತು ವರ್ಷಗಳಾದೊಡನೆ ಕನ್ಯಾ ಪಿತೃಗಳು ಸುತ್ತು ನೆರೆದು ಬುದ್ಧಿವಾದ ಹೇಳಿ ಲಗ್ನವೆಂದರೆ ಜೀವನಕ್ಕೊಂದು ಅವಶ್ಯಕತೆ, ಇಂದಿಲ್ಲ ನಾಳೆ ಆಗತಕ್ಕದ್ದೇ, ಎಂಬ ಭಾವವನ್ನು ಹುಟ್ಟಿಸಿಬಿಡುವರು. ಖಂಡಿತ ಅಭಿಪ್ರಾಯಗಳಿಲ್ಲದ ಅನೇಕರು ಈ ವಿಶ್ವಾಸಕ್ಕೂ ತಲೆಬಾಗುತ್ತಾರೆ. ಕಿಟ್ಟಿಗೆ ಲಗ್ನವೆಂದರೆ ಭೀತಿ. ಆದರೆ ಇಂದಲ್ಲ ನಾಳೆ ಆಗತಕ್ಕದ್ದೇ, ಎಂಬ ವಿಶ್ವಾಸ. ಜೊತೆಗೆ ದಿನದಿನವೂ ಕಚೇರಿಯಲ್ಲಿಯ ಕಹಿ ಅನುಭವಗಳು.

ಅಂದು ರಸ್ತೆಯಲ್ಲಿ ಅಗಲುವಾದ ರಾಘಪ್ಪ ಹೇಳಿದ ಕೊನೆಯ ಮಾತುಗಳು ಕಿಟ್ಟಿಗೆ ಕಚೇರಿಯಲ್ಲಿ ಮರಮರಳಿ ನೆನಪಾಗುತ್ತಿದ್ದವು : 'ಕಿಟ್ಟಣ್ಣಾ, ನಾವು–ನಿಮ್ಮವ್ವ ಎಲ್ಲಾರೂ ಪೆನ್‌ಶನ್ನಿಗೆ ಬಂದೀವಿ. ನಮ್ಮ ನಮ್ಮ ಕಾಲದ ತಕ್ಕಹಂಗ ನಮ್ಮ ನಡತಿ. ನೀನು ನಿಮ್ಮವ್ವನ ಮ್ಯಾಲ ಸಿಟ್ಟಿಗೇಳಬ್ಯಾಡಾ. ಹಳೇ ಹೆಂಗಸರಿಗೆ ಈ ತರುಣ ಪೀಢಿ[೧]ಯ ನಡತಿ ತಿಳಿಯೂದಿಲ್ಲ. ನಮ್ಮ ನಮ್ಮ ಜಗಳಾಟ, ದುಸುಮುಸಿ, ಇವು ನಡಿಯೋವs. ಒಟ್ಟು ನೀವು ಅದರ ಕಡೆಗೆ ಅಷ್ಟು ಲಕ್ಷ್ಯ ಕೊಡಬಾರದು. ಮುಂದ ನೀವು ಏನು ಆಗತೀರಿ ಅದರ ಕಡೆಗೆ ನೋಡಿರಿ !' – ರಾಘಪ್ಪ ಹೇಳಿದ್ದು ಒಮ್ಮೊಮ್ಮೆ ನಿಜವೆನಿಸುತ್ತಿತ್ತು.

ಕಿಟ್ಟಿಯು ಎದುರಿಸಬೇಕಾದ ಸಮಸ್ಯೆಗಳು ಅನೇಕ. ಹಣವು ಅವನಲ್ಲಿ ಹೊಸ ಮನುಷ್ಯತ್ವವನ್ನು ತುಂಬತೊಡಗಿತ್ತು. ಬದಲಾಗದ ಜಗತ್ತಿನಲ್ಲಿ ಕ್ಷಣ ಕ್ಷಣಕ್ಕೆ ಬದಲಾಗುತ್ತಿದ್ದ ಕಿಟ್ಟಿಗೆ ಉಸಿರುಗಟ್ಟುವ ಪ್ರಸಂಗಗಳು ಕ್ಷಣಕ್ಷಣಕ್ಕೆ ಬರುತ್ತಿದ್ದವು. ಭೂತಕಾಲದೊಡನೆ ಸಂಬಂಧವಿಟ್ಟುಕೊಳ್ಳುವದು ದಿನದಿನಕ್ಕೆ ಕಠಿಣವಾಗತೊಡಗಿತ್ತು. ಬೀದಿಯಲ್ಲಿ ಅಡ್ಡಾಡುವಾಗ ಹಿಂದೆ ವಿದ್ಯಾರ್ಥಿ ದಿನಗಳಲ್ಲಿ ಯಾರ ಮನೆಗೆ

---

೧. ಪೀಳಿಗೆ.

ವಾರಕ್ಕೆ ಊಟಕ್ಕೆ ಹೋಗುತ್ತಿದ್ದನೋ ಅವರು ಎದುರಿಗೆ ಬಂದರೆ ಕಿಟ್ಟಿಗೆ ಅವರಿಗೆ ನಮಸ್ಕಾರ ಮಾಡಲೇ ಬಿಡಲೋ ಎಂಬ ಧರ್ಮಸಂಕಟ ಹುಟ್ಟುತ್ತಿತ್ತು. ಇಂಥ ಉಪಕಾರಿಗಳು ಕಿಟ್ಟಿಗೆ ಊರ ತುಂಬ. ತಾನು ಲಂಡ ಚಣ್ಣ ಬಿಟ್ಟು ಪೈಜಾಮಗಳನ್ನು ಧರಿಸತೊಡಗಿದ್ದನ್ನು ಕಂಡು ಅವರು ಎಲ್ಲಿ ನಗುತ್ತಾರೋ ಎಂಬ ಭಯ. ಕೂದಲು ಉದ್ದವಾಗತೊಡಗಿದ್ದವು. ಚಂಡಿಕೆಯ ಎಳೆಗಳ ಸಂಖ್ಯೆ ಕಡಿಮೆಯಾಗಿತ್ತು. ಜೊತೆಗೆ ಕನ್ನಡಿಯೆದುರು ನಿಂತು ಬೈತಲೆ ತೆಗೆದುಕೊಳ್ಳುವ ಹವ್ಯಾಸ. ಅದನ್ನು ಮುಚ್ಚಲು ಕಿಟ್ಟಿ ಜಾಣ್ಮೆಯಿಂದ ಕರಿಯ ಟೊಪ್ಪಿಗೆಯೊಂದನ್ನು ಧರಿಸುತ್ತಿದ್ದನು. ಒಮ್ಮೊಮ್ಮೆ ಚಂಡಿಕೆಯ ಎಳೆಗಳು ಟೊಪ್ಪಿಗೆಯಿಂದ ಹೊರಗೆ ಇಣುಕಿ ಎಟಕಾಡುತ್ತಿದ್ದವು. ಅದಕ್ಕೆ ಸ್ನೇಹಿತರ ಕಾಟ ಬೇರೆ. ಒಮ್ಮೆಯಾದರೂ ಅವರಿಗೆ, 'ನನ್ನ ಬಟ್ಟೆ, ಕೂದಲು, ಇವು ನನ್ನ ವಿಷಯ; ನಿಮಗೆ ಅದರ ಸಂಬಂಧವಿಲ್ಲ' ಎಂದು ಹೇಳಬೇಕೆಂಬ ನಿರ್ಧಾರಗಳು ಅಷ್ಟಿಷ್ಟಕ್ಕೆ ಹುಸಿಯಾಗುತ್ತಿದ್ದವು. ಅಷ್ಟಿಷ್ಟಕ್ಕೆ ತನಗಿಂತ ಹಿರಿಯ ಕಾರಕೂನರ ಸಲಹೆ ಬೇಕು ; ಇಂದಿಲ್ಲ ನಾಳೆ ಈ ಜನ ತನಗೆ ಉಪಯುಕ್ತರಾದಾರು, ಎಂಬ ಆಸೆ. ಇದರ ಜೊತೆಗೆ ಯಾರಿಗೂ ಬಿರುಸಾಡಲು ಕಿಟ್ಟಿಗೆ ಹೆದರಿಕೆ.

ಈ ಹೆದರಿಕೆಯೊಂದು ಕಿಟ್ಟಿಯ ದೊಡ್ಡ ಮಾನಸಿಕ ಸಮಸ್ಯೆ. ತನ್ನ ವಿದ್ಯಾರ್ಥಿ ದಿನಗಳಲ್ಲಿ, ಅನೇಕ ಕಷ್ಟದ ಪ್ರಸಂಗಗಳಲ್ಲಿ 'ವಾರದ ಹುಡುಗ ನಾನು ; ಸಿಟ್ಟಿಗೆದ್ದರೆ ಹೆಂಗ ?' ಎಂದು ಅಷ್ಟಿಷ್ಟಕ್ಕೆ ತಾನೇ 'ಮನಸ್ಸಿಗುಪದೇಶ' ಕೊಟ್ಟುಕೊಳ್ಳುವ ಚಟ ಬೆಳೆದುಬಂದಿತ್ತು. ಇದೀಗ ಸಿಟ್ಟಿಗೆದ್ದೇನೆಂದರೆ ಧೈರ್ಯವಿಲ್ಲದಾಗಿತ್ತು – ಎದ್ದರೆ, ಮನೆಯಲ್ಲಿ ಅವ್ವನ ಮೇಲೆ ಹರಿಹಾಯಬೇಕು ಮಾತ್ರ. ತನ್ನ ಸಿಟ್ಟನ್ನು ವ್ಯಕ್ತಗೊಳಿಸುವಷ್ಟು ಮನೋಧೈರ್ಯವಿಲ್ಲದ್ದಕ್ಕಾಗಿ ಈಗೀಗ ಕಿಟ್ಟಿಗೆ ತನ್ನ ತಾಯಿಯನ್ನೂ ತಂದೆಯನ್ನೂ ದೈವವನ್ನೂ ಶಪಿಸಿಕೊಳ್ಳುವ ಇಚ್ಛೆ ಆಗುತ್ತಿತ್ತು. ಅವ್ವ ಈಗಾಗಲೇ ಅನೇಕ ಬಾರಿ ತಮ್ಮ ಹಳೆಯ ಶ್ರೀಮಂತಿಕೆಯ ಕತೆಗಳನ್ನು ಹೇಳಿದ್ದಳು. ಅವೆಲ್ಲ ಹಾಗೇ ಇದ್ದರೆ ಈ ಎಲ್ಲ ಮನೋದೌರ್ಬಲ್ಯ ತನ್ನಲ್ಲಿ ಇರುತ್ತಿದ್ದವೇ ?

ಆದರೆ ಈ ಬೇಸರವನ್ನೂ ಮೀರಿ ಕಿಟ್ಟಿಗೆ ತಾಯಿಯ ಬಗ್ಗೆ ಕಕ್ಕುಲತೆ, ಆಸಕ್ತಿ. ನೆರೆಮನೆ ದೇಸಾಯರು ಕಿಟ್ಟಿಗೆ ನೌಕರಿ ಹತ್ತಿದ್ದನ್ನು ಕೇಳಿದೊಡನೆ ಮನೆಗೆ ಫರಾಳಕ್ಕೆ ಕರೆದು, 'ಕಿಟ್ಟೀ, ನಿಮ್ಮವ್ವ ಕಷ್ಟಬಟ್ಟಾಕಿ; ನಿನ್ನ ಹೆಂಗ ಸಾಕ್ಯಾಳ ಅನ್ನೋದನ್ನ ನಾವು ಕಂಡವರಿದ್ದೇವಿ. ಆಕೀಗೆ ಸುಖಾ ಮಾಡು' ಎಂದು ಹೇಳಿದ್ದರು. ನೌಕರಿ ಸಿಕ್ಕ ಸಂತೋಷದ ಭರದಲ್ಲಿ ಕಿಟ್ಟಿ ಎಲ್ಲರಿಗೂ ಕೇಳಿಸುವಂತೆ 'ಆಕಿ ದಶಿಂದನs

ನಾನು ನೌಕರೀ ಹಿಡಿದದ್ದು' ಎಂದು ಹೇಳಿದ್ದನು. ಈ ಮಾತು ಬಾಯಿಯಿಂದ ಬಂದ ಅರೆಕ್ಷಣದಲ್ಲಿ ತನಗೇ ಎಂಥಹುಚ್ಚು ಮಾತು, ಎನಿಸಿತು. ಇಷ್ಟೇ ಅಲ್ಲ, ಒಳಗೆ ಹಡೆಯಲಿಕ್ಕೆ ಬಂದ ದೇಸಾಯರ ಅಣ್ಣನ ಮಗಳು, ಕುಕ್ಕು ನಕ್ಕಳು. ದೇಸಾಯರ ಪತ್ನಿ ವೇಣೂಬಾಯಿ, 'ಹುಚ್ಚಾ, ಹಂಗಲ್ಲಪಾ ನಾವನ್ನೂದು. ಇನ್ನ ನೀ ಲಗ್ನಾ ಮಾಡಿಕೊಂಡು ಸಂಸಾರಾ ಹೂಡೋವವ. ಯಾರಾದರೂ ಭುಲತಾಪಿ ತುಂಬ್ಯಾರು, ಜೋಕೆ' ಎಂದರು. ಕಿಟ್ಟಿಗೆ ಆ ಪ್ರಸಂಗ ನೆನಪಾದೊಡನೆ ತನನ ಅಯೋಗ್ಯತೆ ಹಾಗೂ ಅವಮಾನದ ದ್ವೇಷ ಎರಡೂ ಅನುಭವವಾಗುತ್ತಿದ್ದವು.

ಆದರೆ ಭೂತಕಾಲವನ್ನು ತೊಡೆಯಲು ಒಂದು ಸಂಗತಿ ಕಚೇರಿಯಲ್ಲಿ ಆಯಿತು. ಕಿಟ್ಟಿಯ ಟೇಬಲ್ ಬದಲಾಯಿತು.

ಕಿಟ್ಟಿಗೆ ಸಿಪಾಯಿಯಾದ ಹುಸೇನಿಯನ್ನು ಕಂಡರೆ ತುಸು ಭೀತಿ. ಅವನು ಜಾಣನೆಂದೂ, ಸಾಕಷ್ಟು ಲಾಭಮಾಡಿಕೊಡಬಲ್ಲ ಯೋಗ್ಯತೆ ಅವನಿಗೆ ಇದೆಯೆಂದೂ ಅವನ ಬಗ್ಗೆ ಕಚೇರಿಯಲ್ಲಿ ಖ್ಯಾತಿ ಇತ್ತು. ಈವರೆಗೆ ಕಿಟ್ಟಿಗೆ ಹುಸೇನಿಯ ಪರಿಚಯ ಕೇವಲ ದೂರಿಂದ. ಮೊದಲ ದಿನ ಕಚೇರಿಗೆ ಕಿಟ್ಟಿ ಹಾಜರಾಗುವಾಗ ಅವನು ಧರಿಸಿದ ಸಾಬಾಣ ಹಚ್ಚಿ ಒಗೆದ ಬಿಳಿಯ ಅಂಗಿ, ಖಾಕೀ ಲಂಡಚಣ್ಣ, ಚೌಕಡಿ ಟೊಪ್ಪಿಗೆ – ಅವೆಲ್ಲವನ್ನು ಈ ಹುಸೇನಿ ಮೊದಲ ಬಾರಿ ಕುಹಕ ವಿಮರ್ಶಕನಂತೆ ಕಣ್ಣಿಟ್ಟು ನೋಡಿದ್ದನು. ಅಂದಿನಿಂದ ಕಿಟ್ಟಿಯ ನಡತೆ, ವೇಷ, ಮಾತು, ಇವೆಲ್ಲ ಯಾರ ಕಣ್ಣು ತಪ್ಪಿದರೂ ಹುಸೇನಿಯ ತೀಕ್ಷ್ಣ ದೃಷ್ಟಿಯನ್ನು ತಪ್ಪಿಸುತ್ತಿರಲಿಲ್ಲ. ಯಾವಾಗಾದರೂ ದಾರಿಯಲ್ಲಿ ಅವನು ಎದುರುಬಂದಾಗ ಸಲಾಂ ಮಾಡಿದರೂ ಕಿಟ್ಟಿಗೆ ಅದರಲ್ಲಿ ಯಾವುದೋ ವಿಮರ್ಶೆ, ಅಣಕ ಕಾಣಿಸುತ್ತಿತ್ತು. ಆದರೆ ಇಂದು ಹುಸೇನಿ ತಾನೇ ಕಿಟ್ಟಿಯ ಟೇಬಲ್‌ವರೆಗೆ ಬಂದು ಸಲಾಂ ಮಾಡಿದನು. ಕಿಟ್ಟಿ ಈ ಹೊಸ ಬಗೆಯನ್ನು ಕಂಡು ಮೊದಲು ಕಕ್ಕಾವಿಕ್ಕಿಯಾಗಿ, 'ಏನು ?' ಎಂದು ಕೇಳಿದನು.

'ಹೊರಗ ಯಾರೋ ಕರೀತಾರ ಸಾಹೇಬರನ !' ಎಂದ ಹುಸೇನಿ.

ಕಿಟ್ಟಿ ಮರುಮಾತಾಡದೆ ಹೊರಗೆ ಬಂದು, ಒಬ್ಬ ಲಂಡಪಂಜೆ ಕರಿಯ ಚಾಳೀಸುಧರಿಸಿದ ವ್ಯಕ್ತಿಯನ್ನು ಸಂಧಿಸಿದನು. ಹುಸೇನಿಯಾದರೂ ಅತಿದೂರನಿಲ್ಲದೆ, ನಿಂತಲ್ಲಿಂದಲೇ ಇವರತ್ತ ಗೋಣು ಹೊರಳಿಸಿ, ಈ ವ್ಯವಹಾರದಲ್ಲಿ ತಾನೂ ಪಾತ್ರಧಾರಿಯೆಂಬಂತೆ ಇವರತ್ತ ನೋಡುತ್ತ ನಿಂತನು. ಕಿಟ್ಟಿಗೆ ತಿಳಿಯಿತು, ಇದೆಲ್ಲ ತನ್ನ ಟೇಬಲ್ ಬದಲಾವಣೆಯ ಪರಿಣಾಮವೆಂದು. ಇನ್ನೂ ಕಿಟ್ಟಿ ಹೊಸ ದಪ್ತರಿನ ಚಾರ್ಜ ತೆಗೆದುಕೊಂಡಿರಲಿಲ್ಲ. ಇದೀಗ ಮುನ್ನಾ ದಿನವೇ ಈ

ವರ್ಗಾವರ್ಗಿಯ ಆಜ್ಞೆ ಬಂದಿತ್ತು. ಆದರೆ ಈ ಬದಲಾವಣೆ ಸುದ್ದಿ ಇಷ್ಟು ಬೇಗನೆ ಆಫೀಸಿನ ಹೊರಗಡೆಗೂ ಹಬ್ಬೀತೆಂದು ಕಿಟ್ಟಿಗೆ ಅನಿಸಿರಲಿಲ್ಲ.

ಕರೇ ಚಾಳೀಸಿನ ವ್ಯಕ್ತಿ ನಮಸ್ಕರಿಸಿ, ಖೇಕರಿಸುತ್ತ ಹೇಳಿತು : 'ನಮ್ಮ ಹೆಸರು ಕೊಳ್ಳೀ ಭೀಮಣ್ಣ. ನಮ್ಮದೊಂದು ಅತಿಕ್ರಮಣದ ಕೇಸು ನಿಮ್ಮ ಕಡೆ ಬರತsದ. ಕೇಸು ಎಲ್ಲಾ ಕ್ಲಿಯರ್ ಅದ. ಈಗಾಗಲೇ ನಮ್ಮಂತೇನs ಆಗೋದು. ನಿಮ್ಮ ಪದಕೀ ಸಾಹೇಬರು ಎಲ್ಲಾ ರಫ್ ನೋಟ್ಸ ತಯಾರಮಾಡಿ ಇಟ್ಟೀನಿ ಅಂತಿದ್ರು. ಅವರಿಗೆ ವರ್ಗ ಆಗಿ ಮತ್ತ ನಮಗ ಚಿಂತಿ ಹುಟ್ಟೇದ. ಕೇಸ್ ಕ್ಲೀಯರ್ ಆದs.... ಅವರು ಬರದಿಟ್ಟ ನೋಟ್ಸ ನೀವು ಪುಟಪ್ ಮಾಡಿಬಿಟ್ಟರ ಉಪಕಾರ ಆಗತದ. ಕೇಸ್ ಕ್ಲೀಯರ್ ಆದ....'

ಈ ಎಲ್ಲ ಗೊಂಯ್ ಗುಟ್ಟುವಿಕೆಗೆ ಕಿಟ್ಟಿ, 'ನಾ ಇನ್ನೂ ಚಾರ್ಜ್ ತೊಗೊಂಡಿಲ್ಲ – ಆಮ್ಯಾಲ ನೋಡೋಣ!' ಎಂದಿಷ್ಟೇ ಉತ್ತರ ಕೊಟ್ಟನು.

ಹುಸೇನಿಗೆ ಆಶ್ಚರ್ಯ, ಕಿಟ್ಟಿಯ ಉತ್ತರದಿಂದ ಅವನಿಗೆ ಒಮ್ಮೆಲೇ ಆದರ ಹುಟ್ಟಿತು. 'ನೋಡೋಣ' ಎಂಬ ತಿಳಿಗನ್ನಡ ಶಬ್ದಕ್ಕೆ ಹುಸೇನಿ ಒಂದೇ ಅರ್ಥ ಹಚ್ಚುತ್ತಿದ್ದನು. 'ನೋಡೋಣ' ಎನ್ನ ಬಲ್ಲ ಸಾಹೇಬನೇ ಸಾಹೇಬ. 'ಸ ಏವ ವಕ್ತಾ, ಸ ಚ ದರ್ಶನೀಯಃ,' ಅದರಲ್ಲಿ ಹುಸೇನಿಗೆ 'ದಪ್ತರಿ'ನ ಮೇಲೆ ವಿಶ್ವಾಸ ಬಹಳ. ವಿಕ್ರಮಾದಿತ್ಯನ ಸಿಂಹಾಸನದ ಮೇಲೆ ಕುಳಿತ ಮಗು ಕೂಡ ನ್ಯಾಯವನ್ನು ಕೊಡುವಂತೆ, ಒಳ್ಳೆಯ 'ದಪ್ತರು' ಎಂಥ ಬೇವಕೂಫನನ್ನಾದರೂ ಸಾಹೇಬನನ್ನಾಗಿ ಮಾಡಬಲ್ಲದು. ಆ ಅನುಭವರತ್ನಾಕರದಲ್ಲಿ ಕಿಟ್ಟಿಯದು ತೀರ ಹೊಸ ರತ್ನ. ಕಿಟ್ಟಿ ಇನ್ನೂ ದಪ್ತರಿನ ಚಾರ್ಜ ತೆಗೆದುಕೊಳ್ಳುವ ಮೊದಲೇ 'ನೋಡೋಣ!' ಎನ್ನಬಲ್ಲನೆಂದಮೇಲೆ ಅದು ದಪ್ತರಿನ ಮಹಿಮೆಯಲ್ಲದೆ ಇನ್ನೇನು ?

ಕಿಟ್ಟಿಯ ಬಗ್ಗೆ ಹುಟ್ಟಿದ ಹೊಸ ಆದರದ ರಭಸದಲ್ಲಿ ಹುಸೇನಿ ಆ ಕರಿ ಚಾಳೀಸುಧಾರಿಯ ಮೇಲೆ ಒಮ್ಮೆಲೆ ಹರಿಹಾಯ್ದನು. 'ಕೇಸ್ ಕ್ಲಿಯರ್ ಕೇಸ್ ಕ್ಲಿಯರ್, ಕ್ಯಾ ಬಕಬಕತಾಹೈ ಜೀ !' – ಎಂದು ಕೂಗುತ್ತ, ದಪ್ಪರಿನ ಮರ್ಯಾದೆ ಮಾಡಬೇಕೆಂದು ಅವನಿಗೆ ಹೇಳಿದನು. ಆ ಕರಿ ಚಾಳೀಸಿನ ವ್ಯಕ್ತಿ ಟೊಂಕ ಸಡಿಲಿಸಿ ಎರಡು–ಮೂರು ರೂಪಾಯಿಗಳ ನಡುವೆ ಮೀನಮೇಷ ಮಾಡುತ್ತಿರಲು, ಹುಸೇನಿ 'ಹೊಸಬರೆಂದು ಈ ಡೌಲು ಮಾಡುತ್ತೀಯಾ?' ಎಂದು ಕೂಗಿ, ಕಿಟ್ಟಿಗೆ 'ಸಾಹೇಬರ, ನೀವು ಹೋಗರಿ. ನಾ ಇವರನ ಮಾತಾಡಿಸತೇನಿ' ಎಂದು ಕಿಟ್ಟಿಯನ್ನು ಒಳಗೆ ಕಳಿಸಿದನು.

ಮುಂದೆ ಹದಿನೈದು ನಿಮಿಷಗಳಲ್ಲಿ ಕಿಟ್ಟಿಯ ಕೈಯಲ್ಲಿ ಐದು ರೂಪಾಯಿಯ

ನೋಟು ಬಂದು ಬಿದ್ದಿತು. ಹುಸೇನಿಯ ಕಿಸೆಗೆ ಒಂದು ಸೇರಿತ್ತು. ಈವರೆಗೆ ಈ ಬಗೆಯ ಪ್ರಾಪ್ತಿಯ ಅನುಭವ ಕಿಟ್ಟಿಗೆ ಇರಲಿಲ್ಲ. 'ಹುಸೇನಿ ಗೆಳೆತನ' ಎಂಬ ಪದದ ಅರ್ಥ ಕೂಡ ಅವನಿಗೆ ಕೇಳಿಕೆಯಿಂದಲೇ ತಿಳಿದಿತ್ತು. ಈ ದಪ್ತರು ಕಿಟ್ಟಿಗೆ ಬಂದದ್ದನ್ನು ಕಂಡು ಅನೇಕರು ಮುನ್ನಾದಿನ ಅಸೂಯೆಪಟ್ಟಿದ್ದರು. ಮಾಮಲೇದಾರರು ಈ ಕರೇ ಚಾಳೀಸಿನವನ ವಿಷಯವಾಗಿಯೇ ಈ ಟೇಬಲ್ಲು ಕಿಟ್ಟಿಯಂಥ ಅನನುಭವಿಗೆ ಕೊಡಮಾಡಿದ್ದಾರೆಂಬುದು ಹೆಡ್ ಕಾರಕೂನ ಜೋಶಿ ರಾಮರಾಯನಿಗೆ ಗೊತ್ತಿತ್ತು. ಆದರೆ ಕಿಟ್ಟಿಗೆ ಮೊದಲ ದಿನವೇ ಐದು ರೂಪಾಯಿಗಳ ಪ್ರಾಪ್ತಿ ಜೊತೆಗೆ ಹುಸೇನಿಯಿಂದ ಪಡೆದ ಆದರ, ಇವುಗಳಿಂದ ಅತೀವ ಹಿಗ್ಗು. ಹುಸೇನಿಯ ಚಟುವಟಿಕೆಗಳ ಮೇಲೆಯೇ ಕಣ್ಣಿಡುತ್ತಿದ್ದ ಕೆಲವು ಕಾರಕೂನರು ಕಚೇರಿ ಬಿಟ್ಟೊಡನೆ ಕಿಟ್ಟಿಯನ್ನು ಸಂಧಿಸಿ ಅವನನ್ನು ಚಹದಂಗಡಿಗೆ ಎಳೆದರು. ಕಿಟ್ಟಿ ಚಹದಂಗಡಿಯನ್ನು ಎಂದೂ ಸೇರಿದವನಲ್ಲ. ಆದರೆ ಅಂದು 'ಹುಸೇನೀ ಸ್ನೇಹ'ದ ಪ್ರಾರಂಭೋತ್ಸವ ನೆರವೇರಿಸಲೇಬೇಕಾಯಿತು ; ಚಹದಂಗಡಿ ಪ್ರವೇಶವಾಗಲೇಬೇಕಾಯಿತು.

ಮಡಿಮೈಲಿಗೆಗಳ ಹೆದರಿಕೆಯಿಂದ ಕಿಟ್ಟಿ ಕೇವಲ ಒಂದು ಕಪ್ಪು ಹಾಲನ್ನು ಸ್ವೀಕರಿಸಿ ಮಿತ್ರರ ಮೇಲೆ ಹದಿನೈದು ಆಣೆಗಳಷ್ಟನ್ನು ಖರ್ಚುಮಾಡಿದ್ದನು. ಜೋಶಿ ರಾಮರಾಯ ಕಿಟ್ಟಿಯು ಕೊಟ್ಟ ಫರಾಳವನ್ನು ಸವಿಯುತ್ತ ಅರ್ಧ ತಾಸು ಅವನ ಟೀಕೆಯನ್ನು ಮಾಡಿ ಅವನ ಹಣೆಯ ಮೇಲಿನ ನೀರು ಇಳಿಸಿದನು. 'ನಿನಗ ಚಹಾ ಬೇಡ, ಸಿಗರೇಟ ಬೇಡ, ತಂಬಾಕ ಬೇಡ, ಹರಟೆ ಬೇಡ, ಹೆಂಡತಿ ಬೇಡ – ನೌಕರಿ ಯಾಕ ಮಾಡತಿ, ಕೃಷ್ಣಾಜಿ?' ಎಂಬ ಅವನ ಪ್ರಶ್ನೆಗೆ ಕಿಟ್ಟಿಗೆ ಉತ್ತರ ಕೊಡಲು ಆಗಲಿಲ್ಲ. ರಾಮರಾಯ ಕಂಪನಿ ಒಡೆಯುವಾಗ ಕೊನೆಯ ಮಾತು ಹೇಳಿದನು : 'ಕೃಷ್ಣಾಜಿ, ಈ ದುಡ್ಡು ಇದಕ್ಕs ಹಾಕಬೇಕೋ. ಇದು ಬ್ಯಾರೇ ಕೆಲಸಕ್ಕ ನಿಲ್ಲೂದಿಲ್ಲ. ಹಂಗ ಆಗಿದ್ದರ ಈಗ ನಾವೆಲ್ಲಾ ಸಾವಕಾರರು ಆಗತಿದ್ದಿವಿ. ಅದು ಅದಕ್ಕs ಹೋಗಬೇಕು!' ಎಂದು ಹೇಳಿದನು. ಅವನ ವೇದಾಂತಕ್ಕೆ ಉಳಿದ ಎಲ್ಲರೂ ದೊಡ್ಡ ದನಿಯಿಂದ ಸಮ್ಮತಿ ತೋರಿಸಿದರು.

ಅರೆಕ್ಷಣವೇ ಆ ವೇದಾಂತದ ಪರಿಣಾಮ ಕಿಟ್ಟಿಯ ಮೇಲೆ ಆಯಿತು. ಆದರೆ ಇನ್ನೂ ಕಿಸೆಯಲ್ಲಿ ಚಿಲ್ಲರೆ ಹಣ ಸಪ್ಪಳ ಮಾಡುತ್ತಿತ್ತು. ಕಳ್ಳಬೆಕ್ಕಿನ ಅಭಿಮಾನದಿಂದ ಕಿಟ್ಟಿ ಮನೆಯತ್ತ ಹೊರಟನು. ದಾರಿಯಲ್ಲಿ ಎದುರಾಗಿ ಬಂದ ಪೋದ್ದಾರ ಲಕ್ಷ್ಮಂಬಾಯಿಯನ್ನು ಕಂಡೂ ಕಾಣದವನಂತೆ ಮಾತಾಡಿಸದೆ ಮುಂದೆ ನಡೆದನು.

ಹೆಡ್ ಕಾರಕೂನ ಜೋಶಿ ರಾಮರಾಯನಿಗೆ ಆ ಕೇಸಿನಲ್ಲಿ ಮಾಮಲೇದಾರ ಸಾಹೇಬರಿಗೆ ಸ್ವಂತದ ಆಸಕ್ತಿ ಇದ್ದದ್ದು ಗೊತ್ತಿತ್ತು. ಕಿಟ್ಟಿ ತನ್ನ ಮೊದಲಿಗನು ಏನಾದರೂ ನೋಟ್ಸ ಬರೆದಿಟ್ಟಾನೇನೋ ಎಂದು ದಪ್ತರ ತುಂಬ ಹುಡುಕಿದನು. ಏನೂ ಸಿಕ್ಕದಿರಲು, ಯಥಾಪ್ರಕಾರ ರಾಮರಾಯನ ಸಲಹೆಗಾಗಿ ಅವನತ್ತ ಹೋದನು. ಜೋಶಿ ರಾಮರಾಯನಿಗೆ 'ಶನಿ ರಾಮರಾಯ'ನೆಂದೂ ಒಂದು ಪಾಠಾಂತರ ಹೆಸರಿತ್ತು. ಕಿಟ್ಟಿಯ ಚಹವನ್ನು ಕುಡಿದ ದಿನವೇ 'ಒಂದು ಏಟು ಕೊಡೋಣ' ಎಂದು ಯೋಚಿಸಿದ್ದನು. ಕಿಟ್ಟಿ ತಂದ ಕಾಗದಗಳನ್ನು ನೋಡುತ್ತ, 'ಕೇಸ್ ಎಲ್ಲಾ ಕ್ಲಿಯರ ಅದs' ಎನ್ನುತ್ತ ಕರೇ ಚಾಳೀಸಿನ ಕೊಳ್ಳಿ ಭೀಮಣ್ಣನಿಗೆ ಅನುಕೂಲವಾಗುವಂತೆ ನೋಟ್ಸ ಬರೆದುಕೊಟ್ಟನು. ಅದನ್ನು ತನ್ನ ಹಸ್ತಾಕ್ಷರಗಳಲ್ಲಿ ಕಿಟ್ಟಿ ದುಂಡಾಗಿ ಬರೆದು ಮಾಮಲೇದರರ ಸಹಿಗಾಗಿ ಕಳಿಸಿಕೊಟ್ಟನು.

ಹತ್ತು ನಿಮಿಷಗಳಲ್ಲಿ ಮಾಮಲೇದಾರರಿಂದ ಕರೆ ಬಂದಿತು. ಕಿಟ್ಟಿಯ ಕೈಕಾಲೇ ಹೋದವು. ರಾಮರಾಯನತ್ತ ಹೋಗಿ ತಾನು ಏನು ಹೇಳಬೇಕು ಎಂಬುದನ್ನು ಕೇಳಿಕೊಂಡನು. ರಾಮರಾಯ ಅವನನ್ನು ಹುರಿದುಂಬಿಸಿ, 'ಮಾಮಲೇದಾರಗ ಏನು ತಲೀ ತಿಳೀತದನೋ ! ಅವ ಏನಾದರೂ ಅಂದರ, ನಾ ಕಾಯ್ದೇ ಇದ್ದಂಗ ಮಾಡೇನಿ ; ಕೇಸ್ ಕ್ಲಿಯರ್ ಅದs ! ಇಷ್ಟು ಸಡಕಾಸಿ[೧] ಹೇಳು. ನೀ ಈಗ ಸೈಲ ಕೊಟ್ಟೀ ಅಂದರ ನಾಳೆ ನಿನ್ನ ತಲೀಮ್ಯಾಲs ಮೆಣಸು ಅರೀತಾನ !' ಎಂದು ಹೇಳಿಕಳಿಸಿದನು.

ಕಿಟ್ಟಿ ಮಾಮಲೇದಾರರ ಕೋಣೆಯನ್ನು ಪ್ರವೇಶಿಸಿದಾಗ ಸಾಹೇಬರು ಸಂತಪ್ತರಾಗಿಯೇ ಕುಳಿತಿದ್ದರು. ಕಿಟ್ಟಿ ಅವರ ಟೇಬಲ್ ಮೇಲೆ ಕೈ ಊರಿ, 'ಏನು ಸರ್?' ಎಂದು ಕೇಳಿದನು.

'ಮೊದಲ ಟೇಬಲ್ ಮ್ಯಾಲಿನ ಕೈ ತಗಿ !' ಎಂದು ಗಡುಸಾಗಿ ಕೂಗಿದರು ಸಾಹೇಬರು.

ಕಿಟ್ಟಿ ಸರ್ರನೆ ಕೈ ತೆಗೆದು ಡ್ರಿಲ್ಲಿಗೆ ನಿಂತವರಂತೆ ನಿಂತನು.

'ಎಷ್ಟು ಶಗಣೀ[೨] ತಿಂದೀ?' ಎಂದು ಮಾಮಲೇದರರು ನೇರವಾಗಿ ಕೇಳಿದರು.

'ಇಲ್ ಸಾಹೇಬರ....'

'ಏ ಸಾಹೇಬರ !.... ನಾ ಕೇಳಿದ್ದಕ್ಕ ಉತ್ತರ ಕೊಡು......'

---

೧. ಸ್ಪಷ್ಟವಾಗಿ. ೨. ಲಂಚ.

ಕಿಟ್ಟಿ ಕಕ್ಕಾವಿಕ್ಕಿಯಾಗಿ ಸುಮ್ಮನೆ ನಿಂತನು.

'ನೋಟ್ಸ ಬರದಾನ ನೋಟ್ಸು ! ನಿನಗ ಯಾರು ಮ್ಯಾಟ್ರಿಕ್ ಪಾಸ ಮಾಡಿದರು ? ಯಾರು ನೌಕರೀ ಕೊಟ್ಟರು ? ದನಾ ಕಾಯಿ ಹೋಗು !'

'ಯಾಕ ಸಾಹೇಬರ, ನನ್ನ ತಪ್ಪು ಇದ್ದರ....'

'ತಪ್ಪು ಅಲ್ಲ ಅದು, ಕತ್ತೇ ! – ಶಗಣಿ ! – ತಿಂದೀ ಹೌದಲ್ಲೋ ? ಈ ಪಾರ್ಟೀದು ಹತ್ತೊಂಬತ್ತನೇ ಇಸ್ವಿಯೊಳಗ ವಾರಸಾ ಹಕ್ಕಿನ ದಶಿಂದ ಖಟ್ಲೆ ಆದ ಪಾಯಿಂಟ ಯಾಕ ಬರದಿಲ್ಲ, ನಿನ್ನ ನೋಟ್ಸಿನ್ಯಾಗ ?'

ಕಿಟ್ಟಿಗೆ ಅದೂ ತಿಳಿಯದು ; ಇದೂ ತಿಳಿಯದು. ದಿಕ್ಕುತಪ್ಪಿದಂತಾಗಿ, 'ತಪ್ಪಾತು ಸಾಹೇಬರ' ಎಂದನು.

ಮಾಮಲೇದಾರರ ಸಿಟ್ಟು ಇಳಿಯಿತು.

'ಕೃಷ್ಣಾಜೀ, ನೀ ಹೊಸಬ. ಉಳಿದವರ ಕೈಯಾಗ ಆ ದಪ್ತರು ಕೊಟ್ಟರ ರಾಡಿಮಾಡಿ ಇಡತಾರ ಅಂತ ನಿನ್ನ ಕಡೆ ಕೊಟ್ಟೇನಿ. ಕೊಟ್ಟು ಎರಡು ದಿನಾ ಆಗಿಲ್ಲಾ, ನೀನೂ ಕಲತ್ಯಾ ? ನೀವು ರೊಕ್ಕಾ ತಿನಬ್ಯಾಡ್ರಿ ಅನ್ನೂದಿಲ್ಲ ನಾವು. ಆದರೆ ಕಾಯದೇದಾಗ ಬರೊಬ್ಬರಿ ಇರ್ರಿ ; ದಕ್ಕಿಸಿಗೊಳ್ರಿ. ಇಲ್ಲಾದರ ಇಂದು ತಿಂದದ್ದು ನಾಳೆ ಕಾರಬೇಕಾದರ ಏನು ಬಂದಹಂಗ ಆತ್ಯು? ಮೊದಲು ನೌಕರೀ ಸಂಭಾಳಿಸಿಗೋಬೇಕು, ಆಮ್ಯಾಲೆ ಮಾಡೋ ಕಾರಭಾರ ಮಾಡಬೇಕು !.... ಬರಕೋ....!'

ರಾಮರಾಯ ಕಲಿಸಿದ ಮಾತುಗಳು ಸುದೈವದಿಂದ ಸಾಹೇಬರ ಕಾವಿನ ಮೂಲಕ ಮರೆತೇಹೋದವು. ಅವನು ಇನ್ನೊಂದು ಮಾತಾಡದೆ ಸಹೇಬರು ಹೇಳಿದಂತೆ ಎಲ್ಲವನ್ನೂ ಬರೆದು ಅವರ ಮುಂದೆ ಇಟ್ಟನು. ಸಾಹೇಬರು ಸ್ಪೆಲಿಂಗಿಗಾಗಿ ಗೊಣಗುಟ್ಟುತ್ತ ಅದರ ಮೇಲೆ ಸಹಿ ಗೀಚಿದರು.

ಕಿಟ್ಟಿ ಅವಮಾನಿತನಾಗಿ ಕೆಂಪು ಮುಖ ಮಾಡಿಕೊಂಡು ತನ್ನ ಟೇಬಲ್ಲಿನತ್ತ ಹೋದನು. ಮಾತುಗಳ ಹೋಗಲಿ, ತನ್ನ ಬಾಯಿಂದ 'ತಪ್ಪಾತು' ಅಂದದ್ದು, ಅವರು ಹೇಳಿದ್ದನ್ನೇ ಬರೆದದ್ದು, ಇಷ್ಟೇ ಅಲ್ಲ ಮಾಮಲೇದಾರರ ಸಿಟ್ಟು ಇಳಿದದ್ದು ನೋಡಿ ತನಗೆ ಸಂತೋಷವಾದದ್ದು, ಇವೆಲ್ಲ ತನ್ನ ದೌರ್ಬಲ್ಯಗಳು ಕಿಟ್ಟಿಯ ಮುಂದೆ ನರ್ತಿಸಿ ಅವನನ್ನು ಲಜ್ಜೆಗೊಳಿಸಿದವು.

ಕಾರಕೂನರು ಕೆಲಸದಲ್ಲಿ ಗರ್ಕರಾದವರಂತೆ ಕಾಗದದತ್ತ ನೋಡುತ್ತ ತಮ್ಮ ಮುಗುಳುನಗೆಯನ್ನು ಒತ್ತಿಹಿಡಿದರು.

ಅಂದು ಸಂಜೆ ಕಿಟ್ಟಿಯ ಅಭಿಮಾನವೆಲ್ಲ ಸೋತಿತ್ತು.

'ಹೌದು, ಕೆಲಸ ಚೊಕ್ಕತನದಿಂದ ಆಗದಿದ್ದರೆ ಇನ್ನಾವುದಾದರೂ ರೀತಿಯಿಂದ ಆದರೂ ಈ ಬೈಗಳನ್ನು ತಪ್ಪಿಸಿಕೊಳ್ಳಬೇಕು. ಕೊನೆಗೆ ತನ್ನ ದೇಶಾವರಿ ವಿನಯವಾದರೂ ನಡೆದೀತು. ಆದರೆ ಈ ಅಸಹ್ಯ ಬೈಗಳ ಬೇಡ. ಬೈಗಳು ಸೂಜಿಯಂತೆ ಮೈಗೆ ನಡುತ್ತವೆ...'

## ೭ : ಗಂಗವ್ವನ ಚಿಂತೆ

ಗಂಗವ್ವ ಅಂದು ಸಂಜೆ ಆರು ಗಂಟೆಗೆ ದೇಸಾಯರ ಮನೆಗೆ ಬಂದಳು.

ದೇಸಾಯರ ಹಿರಿಯ ಮಗ ಅಚ್ಯುತ ಮುಂಬೈಗೆ ಕಾಮರ್ಸ ಕಲಿಯಲಿಕ್ಕೆ ಹೋದಾಗಿನಿಂದ, ಎರಡನೆ ಮಗ ವಸಂತರಾಯನಿಗ ಮನೆಯ ವ್ಯವಹಾರಗಳ ಬಗ್ಗೆ ಅತೀವ ಆಸಕ್ತಿ ಹಾಗೂ ಹೊಣೆಗಾರಿಕೆ ಹುಟ್ಟಿಬಿಟ್ಟಿತ್ತು. ವಸಂತರಾಯನಿಗೆ ಗಂಗವ್ವ ಹಾಗು ಅವಳ ಆಪತ್ಯಂ ಪುಮಾನಂ ಇವರಿಬ್ಬರ ಬಗ್ಗೆಯೂ ಸಿಟ್ಟು ಬಹಳ. ಇದಕ್ಕೆ ಕಾರಣ, ಕಿಟ್ಟಿ ತನ್ನ ಹಿಂದಿನ ವರ್ಗಗಳನ್ನು ದಾಟುತ್ತ ಬಂದು ಮೊದಲನೆಯ ವರ್ಷವೇ ಮ್ಯಾಟ್ರಿಕ್ ಪಾಸಾಗಿ ವಸಂತನನ್ನು ದಾಟಿ ಬಿಟ್ಟದ್ದು ಇರಬಹುದು. ದೇಸಾಯರು ಕಿಟ್ಟಿಗೆ, 'ನೀ ಬ್ಯಾರೆ ಅಲ್ಲ, ನಮ್ಮ ವಸಂತ ಬ್ಯಾರೆ ಅಲ್ಲ' ಎಂದು ಹೇಳಿದಾಗ, ತನಗಿಂತಲೂ ಅವನ ಮೇಲೆಯೇ ಅಪ್ಪನ ವಾತ್ಸಲ್ಯ ಬಹಳ, ಎಂದು ಅನಿಸುತ್ತಿರಬಹುದು. ಇದರ ಜೊತೆಗೆ ಗಂಗವ್ವ ಆಗಾಗ್ಗೆ ಬಂದು ತಮ್ಮ ಅಪ್ಪನ ಕಡೆಯಿಂದ ರಹಸ್ಯವಾಗಿ ಹತ್ತು ಹದಿನೈದು ರೂಪಾಯಿಗಳನ್ನು ಒಯ್ಯುತ್ತಿದ್ದದ್ದು ಅವನಿಗೆ ಗೊತ್ತಾಗಿ ಈಗ ಎರಡು ತಿಂಗಳಾಗಿದ್ದವು. ವಸಂತರಾಯನಿಗೆ ಸ್ಟಂಟ ಸಿನೇಮಾ ನೋಡುವ ಆಸೆ ಬಹಳ. ಆದರೆ ಆ ದಿನ ಅಪ್ಪ ರೊಕ್ಕ ಕೊಡಲು ನಿರಾಕರಿಸಿದ್ದನು. ಆ ವ್ಯಸನದಲ್ಲಿ ವಸಂತರಾಯನಿಗೆ ಜೀವನವೇ ಬೇಸರವಾಗಿ ಪಡಸಾಲೆಯಲ್ಲಿ ಚಾಪೆ ಹಾಸಿಕೊಂಡು, ನೊಣ ಜಾಡಿಸುತ್ತ ಕುಳಿತುಕೊಂಡಿದ್ದನು. ಈ ಸಮಯಕ್ಕೆ ಗಂಗವ್ವನ ಪ್ರವೇಶವಾಯಿತು.

'ಬರ್ರಿ. ಎಷ್ಟು ರೂಪಾಯಿ ಬೇಕಾಗಿದ್ದವು ಹೇಳ್ರಿ. ಹಿತ್ತಲದಾಗ ಗಿಡ ಹಚ್ಚೇವಿ' ಎಂದನು ವಸಂತರಾಯ ಸಂಕಟದಿಂದ.

ಗಂಗವ್ವ ಸಂತಪ್ತಳಾದಳು. ಬಿರಬಿರನೆ ಒಳಗೆ ಹೋಗಿ ಕೋಣೆಯಲ್ಲಿ ಎಲೆ ಮೆಲ್ಲುತ್ತ ಕುಳಿತ ದೇಸಾಯರ ಎದುರು ನಿಂತು, 'ಯಾಕಪ್ಪಾ ಗೋಪಣ್ಣಾ, ನಿನ್ನ ಆಧಾರದ ಮ್ಯಾಲ ನಾವು ಇದ್ದೇವಿ, ಇದು ಖರೆ. ಆದರ ನಾ ಬೇಡಿದಾಗ ನೀ ನನಗ ರೊಕ್ಕಾ ಕೊಡತೀಯಲ್ಲಾ, ಆ ರೊಕ್ಕ ಯಾರದು ಅದನ್ನ ನಿನ್ನ ಮಗಗ ಅಷ್ಟು ತಿಳಿಸಿ ಹೇಳಪಾ...' ಎಂದು ಕೂಗಾಡಿದಳು.

ದೇಸಾಯರು ಎಲ್ಲವನ್ನೂ ಕೇಳಿಕೊಂಡು ಮರಮರನೆ ಮರುಗಿದರು. ವಸಂತನನ್ನು ಕರೆಸಿ ಅವನಿಗೆ ನಾಲಿಗೆ ಬಿಡಿಹಿಡಿಯಬೇಕೆಂದು ತಿಳಿಸಿ ಸಿಟ್ಟು

ಮಾಡಿ ಕಳಿಸಿದರು. ವಸಂತ ತನಗೆ ಸಿನೆಮಾಕ್ಕೆ ಮೂರಾಣೆ ಸಿಗದ್ದನ್ನು ಗೊಣ ಗುಟ್ಟುತ್ತ ಹೊರಹೊರಟನು. ಆದರೆ ಗಂಗವ್ವನಾಡಿದ ಮಾತು ಅವನ ಕಿವಿಗೆ ಈಗಾಗಲೇ ಬಿದ್ದಿತ್ತು. 'ಯಾರ ರೊಕ್ಕ?' – ಎಂಬ ಪ್ರಶ್ನೆಯ ಅರ್ಥವನ್ನು ವಿಚಾರ ಮಾಡತೊಡಗಿದನು.

ಈ ಸಮಯಕ್ಕೆ ಗಂಗವ್ವ ಬಂದಿದ್ದಳೆಂದಮೇಲೆ ಏನೋ ವಿಶೇಷ ಕಾರಣವಿರಬೇಕೆಂಬುದನ್ನು ದೇಸಾಯರು ಬಲ್ಲರು. ಗೋಡೆಗಾತುಕೊಂಡು ಗಂಗವ್ವನ ಮಾತುಗಳನ್ನು ಸ್ವಾಗತಿಸಿದರು. ಅವರಿಗೆ ಗಂಗವ್ವನ ಬಗ್ಗೆ ಆದರ ಬಹಳ. ಆದರೆ ವಿನಾಕಾರಣ ಈ ಕುಟುಂಬದ ಕೆಲಸದಲ್ಲಿ ಕೈಹಾಕುವದು ತರವಲ್ಲ. ಯಾವಾಗಾದರೂ ಕೈ ಸುಟ್ಟೀತೆಂಬ ಸಂಕೋಚ ಅವರಲ್ಲಿ. ಗಂಗವ್ವ ತನ್ನ ಎಲ್ಲ ಸಮಸ್ಯೆಗಳನ್ನು ಅವರ ತಲೆಯ ಮೇಲೆ ಹೇರುತ್ತಿದ್ದಳು. ಅವರಿಗೆ ನಿಜವಾಗಿಯೂ ಏನಾದರೂ ಕೆಲಸವಿದ್ದರೆ ಮಾಡಲು ಉತ್ಸಾಹ. ಆದರೆ 'ಕಿಟ್ಟಿ ನನ್ನ ಕೂಡ ಮೊದಲಿನಂತೆ ಮಾತಾಡುವುದಿಲ್ಲ, ಕಿಟ್ಟಿ ಹಣ ಬಹಳ ಖರ್ಚು ಮಾಡುತ್ತಾನೆ, ಕಿಟ್ಟಿ ರಾತ್ರಿ ಮನೆಗೆ ಬರಲು ಬಹಳ ತಡಮಾಡುತ್ತಾನೆ' – ಇಂಥ ಸಮಸ್ಯೆಗಳನ್ನು ಕೇಳಲು ಬೇಸರ. ಇದರ ಜೊತೆಗೆ, ಹಿಡಿದ ಕೆಲಸ ಪೂರ್ಣಮಾಡಬೇಕೆಂಬ ತತ್ವವುಳ್ಳ ದೇಸಾಯರು, ಶಕ್ಯವಿದ್ದ ಮಟ್ಟಿಗೆ ಹಿಡಿಯುವದನ್ನು ತಪ್ಪಿಸುತ್ತಿದ್ದರು. 'ಮಂದಿಯ ವಿಷಯಗಳಲ್ಲಿ ಅತಿ ಆಸಕ್ತಿ ಸರಿಯಲ್ಲ' ಎಂದು ಅವರು ಆದಷ್ಟು ದೂರವಿರಲು ಯತ್ನಿಸುವರು. ಆದರೆ ಗಂಗವ್ವ ಪ್ರತಿಯೊಂದು ಬಾರಿ ಅವರ ಸಮ್ಮತಿಯಮೇಲೆಯೇ ತನ್ನ ಸಮಸ್ಯೆಗಳನ್ನು ಒಟ್ಟುವಳು.

'ಗೋಪಣ್ಣಾ, ಈ ತಿಂಗಳ ಕಿಟ್ಟಿ ಎಷ್ಟು ರೂಪಾಯಿ ಕೊಟ್ಟ?'

'ಕೋಟು ಹೋಲಿಸಿಗೋತೇನಿ ಅಂತಿದ್ದ. ಐದs ಕೊಟ್ಟಿರಬೇಕು.'

'ನೀನು ಖರ್ಚು ಬಹಳ ಮಾಡಲಿಕ್ಕೆ ಹತ್ತೀ – ಅಂತ ಒಮ್ಮೆ ಅವಗ ಬಜಾಸಿ[೧] ಹೇಳಲ್ಲಾ' ಎಂದಳು ಗಂಗವ್ವ.

ಗಂಡಸಿನ ಸಮಸ್ಯೆಗಳನ್ನು ಅರಿತ ದೇಸಾಯರು ತುಸು ಬೇಸರದಿಂದ, 'ನಿನ್ನ ಮಗಾ ಏನ ಧಡ್ಡನs, ಧಬಕನ?[೨] ಬೇಕಾದಹಂಗ ನೌಕರೀ ಮಾಡತಾನ, ದುಡ್ಡು ಘಳಿಸಿ[೩] ತರತಾನ. ಇನ್ನ ದೊಡ್ಡವ ಆದ. ಇಂಥಾ ಮಾತು ನೀನೂ ಆಡಬಾರದು. ಆದರ ನೀ ಆಡಿದರ ಒಂದು ಪಕ್ಕಕ್ಕ ನಡೆದೀತು, ನಾವಂತೂ ಮೊದಲs ಆಡಬಾರದು. 'ಪ್ರಾಪ್ತೇ ತು ಷೋಡಶೇ ವರ್ಷೇ ಪುತ್ರಂ

೧. ಎಚ್ಚರಿಕೆ ಕೊಟ್ಟು. ೨. ಹುಂಬ. ೩. ಸಂಪಾದನೆ ಮಾಡಿ.

ಮಿತ್ರವದಾಚರೇತ್' ಅಂತ ಶಾಸ್ತ್ರ ಅದs....' ಎಂದರು.

ಈ 'ಯೂಯಂ ವಯಂ' ತಾರತಮ್ಯವು ಗಂಗವ್ವನಿಗೆ ಅಸಹ್ಯವಾಗುತ್ತಿತ್ತು. ಕಸಿವಿಸಿಬಡುತ್ತ, 'ಹಂಗಾದರ ಈಗ ಆಗೋದನ್ನೆಲ್ಲಾ ಸುಮ್ಮನs ನೋಡತs ಕೂಡಬೇಕು ಅಂತೀ ಹೌದಲ್ಲೋ?' – ಕೊನೆಯ ಶಬ್ದದಲ್ಲಿ ಗಂಗವ್ವ ಬಿಕ್ಕಳಿಸಿದಳು.

ಅವಳ ಮನಸ್ಸಿನಲ್ಲಿ ಇನ್ನೇನೋ ಇದೆಯೆಂಬುದು ದೇಸಾಯರಿಗೆ ಅವಳ ಈ ರಂಗಿನಿಂದ ತಿಳಿಯಿತು. ಈ ಸಂಸಾರದ ಒಳವಿಷಯಗಳನ್ನು ತಾವು ಹಚ್ಚಿಕೊಳ್ಳಬಾರದೆಂಬ ಆಸೆಯಿಂದ ದೇಸಾಯರು ತುಸು ಹೊತ್ತು ಸುಮ್ಮನೆ ಇದ್ದರು. ಆದರೆ ಗಂಗವ್ವನು ಸೆರಗಿನಿಂದ ಮುಖ ಮುಚ್ಚಿಕೊಂಡದ್ದು ಕಂಡು ಅವರಿಗೆ ತಡೆಯಲಾಗದೆ ಅಪೇಕ್ಷಿತ ಪ್ರಶ್ನೆಯನ್ನು ಕೇಳಿದರು :

'ಯಾಕ? ಈಗ ಏನಾಯಿತು?'

'ಏನು ಆಗೋದು? ದಿನಾ ಬರೋಹಂಗ ಸಿಡಿಮಿಡಿ ಮಾಡಿಕೋತ ಕಚೇಯಿಂದ ಬಂದಾ. ಇಂದ ರಾತ್ರಿ ಗಾಣೆ[೪] ಕೇಳಲಿಕ್ಕೆ ಹೋಗತೇನಿ, ಅಂದ. ಎಲ್ಲಿ ಅದನೋ ಗಾಣೆ ಅಂದರ...' ಗಂಗವ್ವನಿಗೆ ಮುಂದೆ ಮಾತಾಡಲು ಆಗಲಿಲ್ಲ.

ದೇಸಾಯರು ಅವಳನ್ನು ಸಾಂತ್ವನ ಮಾಡಿ ಎಲ್ಲವನ್ನೂ ಕೇಳಿ ತಿಳಿದುಕೊಂಡರು.

ಗಾಯನ ಸಭೆ ಇದ್ದದ್ದು ಗಂಗವ್ವನ ತಮ್ಮ ರಾಘಪ್ಪನ ಮನೆಯಲ್ಲಿ !

* * *

ಅದು ಹೀಗಾಯಿತು. ರಾಘಪ್ಪ ಕಚೇರಿಗೆ ಬಂದು ಕಿಟ್ಟಿಗೆ ಮನೆಗೆ ಬರಲು ಔತಣ ಕೊಟ್ಟಾಗ ಕಿಟ್ಟಿಗೆ ಅದರಲ್ಲಿ ವಿಶೇಷ ರುಚಿ ಅನಿಸಲಿಲ್ಲ. ಗಾಯನವೆಂದರೆ ಕಿಟ್ಟಿಗೆ ಔರಂಗಜೇಬನ ಪ್ರೀತಿ ! ಆದರೆ ರಾಘಪ್ಪ ಹೋಗುವಾಗ ಮಾಮಲೇದಾರರೂ ಗಾಯನಕ್ಕೆ ಬರುವವರಿದ್ದಾರೆಂದೂ, ಅಲ್ಲಿ ತುಸು ವೈಯಕ್ತಿಕ ಪರಿಚಯ ಮಾಡಿಕೊಡುತ್ತೇನೆಂದೂ ಹೇಳಿದ್ದ ಮೂಲಕ ಕಿಟ್ಟಿಗೆ ಅಲ್ಲಿ ಹೋಗಲು ಉತ್ಕಟ ಇಚ್ಛೆಯಾಯಿತು. ಬೈಯುವ ಕಲೆಯಲ್ಲಿ ನಿಷ್ಣಾತರಾದ ಮಾಮಲೇದಾರರ ತೋಫಿನಿಂದ ಈ ರೀತಿಯಿಂದಾದರೂ ತಾನು ಪಾರಾಗ ಬಲ್ಲೆನಾದರೆ ಸಾಕೆಂದು ಕಿಟ್ಟಿಯ ವಿಚಾರ. ರಾಘಪ್ಪ ಮಾಮಾ ದೇವರಂತೆ ಬಂದಂತಾಗಿತ್ತು ಅವನಿಗೆ.

ಹೊಸ ಟೇಬಲ್ಲು ಬಂದಾಗಿನಿಂದ ಮನೆಯಲ್ಲಿ ಕಿಟ್ಟಿಯ ನಡತೆಯೂ ಬದಲಾಗಿತ್ತು. ಮುಂಜಾನೆ ತಡಮಾಡಿ ಏಳುವದು, ಸಂಜೆ ಅಡ್ಡಾಡಲಿಕ್ಕೆ ಹೋಗಿ

---

೪. ಗಾಯನ.

ತಡಮಾಡಿ ತುತ್ತು ಊಟ ಉಂಡು ಮಲಗಿಬಿಡುವದು, ಈ ಪ್ರಘಾತ ಪ್ರಾರಂಭವಾಗಿತ್ತು. ಹೊರಗಿನ ದುಡ್ಡು ಬರುವಾಗ ಜೊತೆಗೆ ನಿಗೂಢ ಮೌನವನ್ನೂ ತರುತ್ತಿತ್ತು. ಕಿಟ್ಟಿ ಈಗೀಗ ಮಾತಾಡುವುದನ್ನು ಕಡಿಮೆ ಮಾಡಿದ್ದನು. ಮೊದಲಿನಂತೆ ಹುಡುಗತನದ ಮಾತುಗಳನ್ನು ಬಿಟ್ಟುಬಿಟ್ಟಿದ್ದನು. ಅದರಲ್ಲಿಯೂ ಮನೆಯಲ್ಲಿ ತೀರ ಮೌನ. ಏನನ್ನೋ ತಾಯಿಯಿಂದ ಬಚ್ಚಿಡುವವನಂತೆ ಊಟಕ್ಕೆ ಕುಳಿತಾಗ ಕೂಡ ಮೊದಲಿನಂತೆ ಸಡಿಲಾಗಿ ಅವನ ಬಾಯಿಯಿಂದ ಮಾತು ಬರುತ್ತಿರಲಿಲ್ಲ. ತಾನು ಹೆಚ್ಚಿನ ದುಡ್ಡು ಗಳಿಸುವದನ್ನು ಹೇಳಿದರೆ ತಾಯಿ ಬೇಡಿಯಾಳೆಂದೋ ಅಥವಾ ಆಲಸ್ಯವೆಂದೋ ಅಥವಾ ನಾಚಿಕೆಯೆಂದೋ – ಅಂತೂ, ಕಿಟ್ಟಿಯ ಮಾತೇ ಉಡುಗಿಹೋಗಿತ್ತು.

ಗಂಗವ್ವನಿಗೆ ಇದರಿಂದ ಒಳಗಿಂದೊಳಗೆ ಮೂಕನೋವು ಬಹಳವಾಗಿತ್ತು. ಕೆಲದಿನ ಆಕೆ 'ದುಡಿತದ ದಣಿವು' ಎಂದು ಸುಮ್ಮನಿದ್ದಳು. ಆದರೆ ಕೊನೆಗೆ ಮಾತೃತ್ವದ ಅಧಿಕಾರದಿಂದ 'ಕಿಟ್ಟಿ, ಮಾಮಲೇದಾರರು ನಿನ್ನ ಕೆಲಸ ನೋಡಿ ಏನು ಅಂತಾರ ?...' 'ಅವರ ಮರ್ಜಿ ಕಾಯಪ್ಪಾ !....' 'ಕಿಟ್ಟಿ, ಇಂದ ಮಾಡಿದ ಅನಾರಸ ಎಷ್ಟು ರುಚಿ ಆಗ್ಯಾವ. ಒಂದೆರಡು ಬಿಸಿಬಿಸಿ ಮಾಡಿ ಕೊಡತೇನಿ. ಮಾಮಲೇದಾರರ ಮನಿಗೆ ಒಯ್ದು ಕೊಡತೀಯೇನು?....' ಎಂದು ಮಾತಾಡುವಳು. ಆದರೆ ಮಾತಿಗೆ ಹೊರತಾಗಿ ಕಿಟ್ಟಿಗೆ ಇಂಥ ವ್ಯರ್ಥ ಮಾತುಗಳಲ್ಲಿ ಬೇಸರ. ತನಗೆ ತಿಳಿಯದ ವಿಷಯಗಳಲ್ಲಿ ತನ್ನ ತಾಯಿ ಏಕೆ ಮಾತಾಡುತ್ತಾಳೋ ಎಂದು ಅವಳ ಮೇಲೆ ಹರಿಹಾಯುವನು. ತಾನು ದೊಡ್ಡವನಾದ ವಿಷಯವು ತನ್ನ ತಾಯಿಗೆ ಮನವರಿಕೆಯಾಗುವುದಿಲ್ಲವೇಕೆ ಎಂದು ಅವನ ಸಿಟ್ಟು. ಅದರಲ್ಲಿ ತಾಯಿ ಮಾಮಲೇದಾರರ ವಿಷಯ ತೆಗೆದೊಡನೆ ಕಿಟ್ಟಿಗೆ ಆಕೆ 'ನನ್ನ ಪ್ರಯತ್ನದಿಂದ ನಿನಗೆ ನೌಕರಿ ದೊರಕಿತು' ಎಂದು ಹಂಗಿಸಿದಂತಾಗುತ್ತಿತ್ತು. ಅದರಿಂದ ಅವನು ಅವಮಾನಿತನಾಗಿ ಹೆಚ್ಚು ಸಿಟ್ಟಿಗೆದ್ದು ಏನಾದರೂ ಒದರಾಡುತ್ತಿದ್ದನು.[೧] ಕಚೇರಿಯಿಂದ ಸಿಡಿಮಿಡಿ ಮಾಡುತ್ತಲೇ ಕಿಟ್ಟಿ ಮನೆಗೆ ಬರುವದು ಗಂಗವ್ವನ ಸಾಮಾನ್ಯ ಅನುಭವವಾಯಿತು.

ಗಂಗವ್ವ ಇದನ್ನು ಸಹಿಸಬಲ್ಲಳು. ಆದರೆ ಹತ್ತು ವರುಷ ತಾನು ಬೆಳೆಯಿಸಿದ ವಕ್ಷ ಇಂದು ಫಲ ಕೊಡುವಾಗ ರಾಘೂ ಬಂದು ಅದನ್ನು ಕದ್ದೊಯ್ಯುವದು ಇದಕ್ಕೂ ಘೋರ ವಿಷಯ. ಅದನ್ನು ಗಂಗವ್ವ ತಡೆಯಲಾರಳು ; ಕ್ಷಮಿಸಲಾರಳು.

---

೧. ಕೂಗುತ್ತಿದ್ದನು.

ಅಂದು ಮಾತ್ರ ಕಿಟ್ಟಿ ತನ್ನ ತಾಯಿಗೆ ಮೋಸಮಾಡಿ ವಿಜಯ ಪಡೆದನು.

ತಾನು ರಾಘಪ್ಪನ ಮನೆಗೆ ಗಾಯನ ಕೇಳಲು ಹೋಗುವದನ್ನು ಹೇಳಿದೊಡನೆ ತಾಯಿ ಸಿಟ್ಟಿಗೇಳುವಳೆಂಬುದು ಖಂಡಿತ. ಆಕೆಗೆ ಸಿಟ್ಟಿಗೇಳಲು ಬಿಟ್ಟು ಆಕೆಯ ಆಕ್ರೋಶ ರಂಭಾಟ ಎಲ್ಲ ಮುಗಿಯುವವರೆಗೆ ಸುಮ್ಮನಿದ್ದನು. ಅದೆಲ್ಲ ಮುಗಿದಮೇಲೆ ತಾನೂ ಅಕ್ಕಸದ ಧ್ವನಿ ತೆಗೆದು ಬಟ್ಟೆಗಳ ಟ್ರಂಕು ತಿರುವಿಹಾಕುತ್ತ 'ಮಾಮಲೇದಾರರೂ ಗಾಣೇಕ್ಕ ಬರತಾರ. ಅವರ ಕೂಡ ವಹಿವಾಟು[೧] ಆಗತದ ಅಂತಾ ನಾ ಹೂಂ ಅಂದೆ. ಹೋದವನs ನಿಮ್ಮ ರಾಘೂನ ಮಗಳ ಕೊಳ್ಳಾಗ ಮಾಲೀ ಹಾಕಬೇಕಂತ ಹೋಗೂದಿಲ್ಲ. ಮನಿಗೆ ಬಂದರ ಈ ಹಾಡು, ಒತ್ತಟ್ಟಿಗೆ ನಿನ್ನ ಹೊದರಾಟ. ಹಾಕ್ಕೊಂಡೇನಂದರ ಒಂದು ಗಂಜಿಕೋಟು ಇಲ್ಲ. ಆತ್ಯು; ಈ ಹೊಲಸು ಕೋಟು ಹಾಕ್ಕೊಂಡs ಮಾಮಲೇದಾರರ ಕೂಡ ಕೂತು ಬರತೇನಿ....!' ಎಂದನು.

ಗಂಗವ್ವ ಕ್ಷಣಹೊತ್ತು ಅಪ್ರತಿಭಳಾದಳು. ಕಿಟ್ಟಿಗೆ ತಾನು ಯಶಸ್ವಿಯಾಗಿ ಅವ್ವನಿಗೆ ಮೋಸಮಾಡಿದಷ್ಟು ಆನಂದವಾಯಿತು. ಹೊಸ ದಪ್ತರಿನಿಂದ ತನ್ನಲ್ಲಿ ವಾಕ್‌ಚಾತುರ್ಯವು ಬೆಳೆದದ್ದು ಅಷ್ಟಿಷ್ಟಕ್ಕೆ ಅವನ ಅನುಭವಕ್ಕೆ ಬಂದಿತ್ತು. ಈಗ ಆಕೆಗೆ ಮೊದಲು ಸಿಟ್ಟು ಬರುವಂತೆ ಮಾಡಿ ಕೊನೆಗೆ ಅವಳ ನಾಲಿಗೆ ಕಟ್ಟಿ, ಅವಳಿಗೆ ದಿಕ್ಕುತಪ್ಪಿಸಿದುದು ಸಾಮಾನ್ಯ ವಿಜಯವೇ? ಆದರೆ ಗಂಗವ್ವ ಅಷ್ಟರಲ್ಲಿ ಚೇತರಿಸಿಕೊಂಡಳು.

'ಮಾಮಲೇದಾರರ ವಹಿವಾಟಿಗೆ ಈ ರಾಘ್ಯಾ ಯಾತಕ್ಕ ಬೇಕು? – ವೈಕುಂಠಕ್ಕ ಕುಂಟದಾಸಯ್ಯನ ಮಧ್ಯಸ್ತಿ ಅಂತ ! ನಾ ಇಷ್ಟು ದಿವಸ ಆತ್ಯು ಹೇಳೇ ಹೇಳತೇನಿ, ಕಿಟ್ಟ್ಯಾ, ಮಾಮಲೇದಾರರ ಮನಿಗೆ ಹೋಗಿ ಬಾ ; ಯಾಕ, ಎಂತು, ಕೇಳಿಕೋತs ಇರು; ಹಳೇಋಣಾನುಬಂಧ, ಬಿಡಬಾರದು' – ಅಂತ. ಅದನ್ನ ಕಿವ್ಯಾಗ ಹಾಕ್ಕೋತಾರ ಯಾರು? ಈಗ ರಾಘಪ್ಪ ಮಾಮಾ ನಿನಗ ಮಾಮಲೇದಾರರ ಗುರುತಾ ಮಾಡಿಕೊಡಬೇಕಾತ್ಯs?'

'ಅವ್ವಾ, ನಿನಗೆ ಗೊತ್ತ ಇಲ್ಲದ ಮಾತಿನ್ಯಾಗ ನೀ ಯಾಕ ಬಾಯಿ ಹಾಕತೀ?.... ಈಗ ಇರೋ ಮಾಮಲೇದಾರರು ಬ್ಯಾರೆ. ಅಂಗಡಿ ಮಾಮಲೇದಾರರಿಗೆ ವರ್ಗ ಆಗಿ ಹೋಗಿ ಈಗ ಐದು ತಿಂಗಳ ಆದವು...!'

ಗಂಗವ್ವನಿಗೆ ನೆಲಕ್ಕೆ ಕುಪ್ಪಳಿಸಿದಂತಾಯ್ತು. ಆಕೆ ಇದರ ಮುಂದೆ ಇನ್ನೊಂದು ಚಕಾರ ಶಬ್ದ ತೆಗೆಯಲಿಲ್ಲ.

೧. ಸಂಪರ್ಕ.

ಅಂಗಡಿ ಮಾಮಲೇದಾರರು ಗಂಗವ್ವನ ಪತಿಯ ಸ್ನೇಹಿತರು. ದೊಡ್ಡವರ ಹೆಂಡತಿಯಾದ ಗಂಗವ್ವ ತನ್ನ ಮುತ್ತೈದೆತನದ ದಿನಗಳಲ್ಲಿ ಅಂಗಡಿ ಮಾಮಲೇದಾರರ ಪತ್ನಿಯೊಡನೆ ಸರಿಸಮಾನಸ್ಕಂಧಳಾಗಿ, ಇಷ್ಟೇ ಏಕೆ, ತುಸು ಹೆಚ್ಚಿನವಳಾಗಿಯೇ ವ್ಯವಹಾರ ಮಾಡಿದವಳು. ಏಕೆಂದರೆ ಆಗ ಇನ್ನೂ ಸಾಹೇಬರು ಮಾಮಲೇದಾರರಾಗಿರಲಿಲ್ಲ. ಮುಂದೆ ಅನೇಕ ಬಾರಿ ಅವರು ಧಾರವಾಡಕ್ಕೆ ವರ್ಗವಾಗಿ ಬಂದಿದ್ದರೂ ಕೂಡ ತನ್ನ ದಾರಿದ್ರ್ಯಾವಸ್ಥೆಯಲ್ಲಿ ತನ್ನ ಸುಸ್ಥಿತಿಯನ್ನು ಕಂಡವರೆದುರು ಹೋಗಿ ನಿಲ್ಲಲು ಆಕೆಗೆ ಸರಿಬರಲಿಲ್ಲ. ಆದರೆ ಕಿಟ್ಟಿಯು ಮ್ಯಾಟ್ರಿಕ್ ಪಾಸಾದ ಮೇಲೆ ಆಕೆ ತನ್ನ ಮಾನಾಪಮಾನಗಳನ್ನು ಬದಿಗಿಟ್ಟು, ಹತ್ತು ವರ್ಷ ಪೂರ್ವದ ಋಣಾನುಬಂಧದ ನೆನಪು ತೆಗೆಯುವುದಕ್ಕಾಗಿ ಅಂಗಡಿ ಸಾಹೇಬರ ಮನೆಯ ಕಟ್ಟೆಯನ್ನು ಹತ್ತಿದಳು. ಅಲ್ಲಿ ಅತ್ತು ಕರೆದು, ಮಗನಿಗೆ ನೌಕರಿ ದೊರಕಿಸಿಕೊಟ್ಟಳು. ಸಾಹೇಬರಾದರೂ ಸಂತೋಷದಿಂದ ಹಳೆಯ ಗುರುತನ್ನು ನೆನೆದು ಕೆಲಸ ಮಾಡಿಕೊಟ್ಟರು. ಗಂಗವ್ವನಿಗಾದರೋ ಅತೀವ ಕೃತಜ್ಞತೆ. ಅದೇ ಸಮಯಕ್ಕೆ ಮಾಮಲೇದಾರರ ಹನ್ನೆರಡು ವರ್ಷದ ಮಗಳು ನೀಲವ್ವನಿಗೆ ವರಶೋಧನೆ ಸಾಗಿತ್ತು. ಈ ಮಗಳು ಹುಟ್ಟುವಾಗ ಗಂಗವ್ವನ ಪತಿ ಓಡಾಡಿ ಸ್ವಂತದ ಭಿಡೆ ಖರ್ಚುಮಾಡಿ ಸಿವ್ಹಿಲ್ ಸರ್ಜನ್ನರನ್ನು ಮನೆಗೆ ಬರುವಂತೆ ಮಾಡಿದ್ದರು. ಮಾಮಲೇದಾರರ ಪತ್ನಿ ಈ ವಿಷಯವನ್ನು ಗಂಗವ್ವನಿಗೆ ನೆನಪು ತಂದುಕೊಟ್ಟು ಕೃತಜ್ಞತೆ ವ್ಯಕ್ತಮಾಡಿದ್ದರಿಂದ ಗಂಗವ್ವನಿಗೆ ಈ ಮಗಳ ಬಗ್ಗೆ ಆತ್ಮೀಯತೆ ಅನಿಸುತ್ತಿತ್ತು. ನೀಲವ್ವನಿಗೆ ವರ ಗೊತ್ತಾದಕೂಡಲೇ ಗಡಿಗೆ– ನೀರು[೧] ಮಾಡಿ ಏನಾದರೂ ಒಳ್ಳೆಯ ಉಡುಗೊರೆ ಮಾಡಬೇಕೆಂದು ಗಂಗವ್ವನ ಹಂಬಲ. ಲಗ್ನ ಗೊತ್ತಾದಕೂಡಲೇ ಅದರ ವರದಿ ತನಗೆ ಬರಬೇಕೆಂದು ಕಿಟ್ಟಿಗೆ ಆದೇಶ ಕೊಟ್ಟಿದ್ದಳು. ಒಂದೆರಡು ಬಾರಿ 'ಇನ್ನೂ ಗೊತ್ತಾಗಿಲ್ಲ' ಎಂದು ಗೊಣಗುಟ್ಟಿ, ಕೊನೆಗೆ 'ಅವ್ವಾ, ನೀ ಇನ್ನ ಕೇಳಬ್ಯಾಡ. ಸುದ್ದಿ ತಿಳಿದರ ನಾನಃ ಹೇಳತೇನಿ' ಎಂದು ಆಶ್ವಾಸನ ಕೊಟ್ಟಿದ್ದನು....

ಆದರೆ ವರ್ಗವಾದ ಸುದ್ದಿಯನ್ನು ಹೇಳಬಾರದೇ?.... ಕನಿಷ್ಠ ಪಕ್ಷಕ್ಕೆ ಈ ಪ್ರಸಂಗದಲ್ಲಿ ಗಂಗವ್ವ ತುಪ್ಪದಲ್ಲಿ ಅನಾರಸ ಗುಳ್ಳೋರಿಗೆಗಳನ್ನು ಕರಿದು ಮಾಮಲೇದಾರರ ಮನೆಗೆ ಕಳಿಸಬಹುದಿತ್ತಲ್ಲ. ತಾನು ತನ್ನ ಅಭಿಮಾನಕ್ಕೆ ತಕ್ಕಂತೆ ಮುಂದೆ ಮೇಲಿಂದಮೇಲೆ ಅವರ ಮನೆಗೆ ಹೋಗಲಿಲ್ಲ ನಿಜ. ಆದರೆ ವರ್ಗವಾದ

---

೧. ವಿವಾಹಪೂರ್ವ. ಸಂತೋಷಕೂಟ.

ನೆವದಿಂದ ಇನ್ನೊಮ್ಮೆ ಹೋಗಿ ಹೀಗೆ ಏನಾದರೂ ಫರಾಳ ತನಗೆ ಹೇಳಬಾರದೇ? ಈ ವಿಶ್ವಾಸಘಾತನೆದುರು ಗಂಗವ್ವನಿಗೆ ಇನ್ನೊಂದು ಮಾತು ಆಡಲು ಮನಸ್ಸಾಗಲಿಲ್ಲ. ಮನಸ್ಸೆಲ್ಲ ನೊಂದು ಬೆಂದುಹೋಯಿತು.

ಆದರೆ ತಾಯಿಯನ್ನು ಪೇಚಿನಲ್ಲಿ ತಂದು ಆಕೆಯ ಬಾಯಿ ಕಟ್ಟಿದ್ದಕ್ಕಾಗಿ ಕಿಟ್ಟಿ ಮಾತ್ರ ಒಳಗಿಂದೊಳಗೇ ಹಿಗ್ಗಿದ್ದನು.

* * *

ದೇಸಾಯರ ಮುಂದೆ ಗಂಗವ್ವ ಎಲ್ಲ ವಿವರಗಳನ್ನು ತನ್ನ ದೃಷ್ಟಿಕೋನದಿಂದ ವಿವರಿಸಿ ರಾಘಪ್ಪನ ವಿಷಯದಲ್ಲಿ ಎರಡು ಮುಖ್ಯ ಭೀತಿಗಳನ್ನು ವ್ಯಕ್ತಗೊಳಿಸಿದಳು. ಅವನು ಕಿಟ್ಟಿಯನ್ನು ಕೆಟ್ಟ ವ್ಯಸನಕ್ಕೆ ಕೆಡವಿದರೆ ಹೇಗೆ ? –

ಇಷ್ಟೆಲ್ಲ ಮಾತು ಆಗುವಷ್ಟರಲ್ಲಿ ವೇಣೂಬಾಯಿ ಒಕ್ಕಲಗಿತ್ತಿಗೆ ಏನನ್ನೋ ಹೇಳಲು ಹಿತ್ತಲಕಡೆ ಹೋದ ಸಂಧಿ ನೋಡಿ ಗಂಗವ್ವ ಒಮ್ಮೆಲೇ ಧ್ವನಿ ಇಳಿಸಿ ದೇಸಾಯರೊಬ್ಬರಿಗೆ ಕೇಳಿಸುವಂತೆ ಉಸುರಿದಳು :

'ಗೋಪಣ್ಣಾ, ಒಂದು ಮಾತು ಹೇಳತೀನಿ. ಯಾರ ಎದುರೂ ಆಡಬ್ಯಾಡ. ನೀನು ನಾನು ಇಬ್ಬರೊಳಗs ಇರಲಿ ಈ ಮಾತು. ರಾಘ್ಯಾ ಅಂದರ ನನ್ನ ಮೈ ಉರೀತದ. ಆದರ ಮಗಳು ಎಷ್ಟಾದರೂ ಲಗ್ನ ಆಗೋ ಹುಡುಗಿ. ದೇವರು ಆಕೀ ಕಲ್ಯಾಣ ಕಟ್ಟಲಿ – ಆದರ ನಮ್ಮ ಮನಿತನದಾಗ ಬ್ಯಾಡ – ಇಷ್ಟs ನನ್ನ ಇಚ್ಛಾ. ಯಾಕ ಅಂದೀs! ಇಷ್ಟು ದಿವಸ ಒಳಗೆ ಇಟುಗೊಂಡ ಹಕೀಕತ್ತು ಈಗ ನನ್ನ ಮನೀತನಕ ಬಂದದ್ದಕ್ಕೆ ಹೇಳತೇನಿ. ನಮ್ಮ ರಾಘ್ಯಾನ ಲಗ್ನದ ವಿಷಯ ನಿನಗೆ ಗೊತ್ತಿಲ್ಲ. ರಾಘ್ಯಾನ ಹೇಣ್ತಿ ಮೊದಲs ಅವನ ಕೂಡಿಕೊಂಡಿದ್ದಳು. ಹಿಂದಾಗಡೆ ಅಂವ ಲಗ್ನಾ ಮಾಡಿಕೊಳ್ಳಲಿಕ್ಕೆ ಒಲ್ಲೆ ಅನಲಿಕ್ಕೆ ಹತ್ತಿದ. ಅಂದಕೂಡಲೆ ಆ ಹುಡುಗೀ ತಾಯಿ ನಮ್ಮವರ ಕಾಲಿಗೆ ಬಿದ್ದು, 'ಹೆಂಗಾದರೂ ಮಾಡಿ ನನ್ನ ಮಗಳ ಮಾನ ಕಾಯಿರಿ' ಅಂದಕೂಡಲೇ ಇವರೇ ಹೋದರು. ಬಡಗೀ ತೊಗೊಂಡು ಹೋಗಿ, ಕ್ವಾಣ್ಯಾಗ ರಾಘ್ಯಾನ ಹಿಡಿದು ಬಾರಕೋಲಲೆ ಹೊಡಸತೇನಿ, ಕತ್ತೀಮ್ಯಾಲ ಮೆರವಣಿಗಿ ತಗಸತೀನಿ ಅಂತ ಹೆದರಿಕಿ ಹಾಕಿದಮ್ಯಾಲ ಲಗ್ನಾ ಮಾಡಿ ಕೊಳ್ಳಿಕ್ಕೆ ಹೂಂ ಅಂದ. ಇಂಥವರ ಮಗಳನ ನಾ ನನ್ನ ಮನ್ಯಾಗ ಒಲ್ಲೆನಪಾ!....'

'ಗಂಗವ್ವಾ, ಇಷ್ಟು ದಿವಸ ಈ ಮಾತು ನುಂಗೀದಿ. ಇನ್ನ ಮುಂದನೂ ಇದನ್ನ ನೀ ನುಂಗಿಕೋಬೇಕು. ಇನ್ನೊಬ್ಬರ ಎದುರಿಗೆ ಉಸಿರು ಒಡೀ ಬಾರದು!' ಎಂದಿಷ್ಟೇ ದೇಸಾಯರು ಅಂದರು.

ತಾವು ಸರಿದಾಡಿದಷ್ಟೂ ಹೆಚ್ಚು ಆಳದ ಕೆಸರಿನಲ್ಲಿ ತಾವು ಮುಳುಗುತ್ತಿದ್ದೇವೆಂಬ ಅನುಭವ ಬಂದಿತು ಅವರಿಗೆ. ಆದಷ್ಟು ಬೇಗನೇ ಈ ಮನೆತನದ ವ್ಯವಹಾರದಿಂದ ತಾವು ನಿವೃತ್ತರಾಗುವ ಉಪಾಯಗಳನ್ನು ಯೋಚಿಸತೊಡಗಿದರು.

ಅಷ್ಟರಲ್ಲಿ ವೇಣೂಬಾಯಿ ಒಳಗೆ ಬಂದ ಮೂಲಕ ಮಾತು ಅಷ್ಟಕ್ಕೇ ನಿಂತು, ಇತರ ಕ್ಷೇಮಸಮಾಚಾರವಾಗಿ, ಗಂಗವ್ವ ಮನೆಗೆ ಹೊರಟಳು.

* * * *

# ೮ : ಸಂಗೀತ ಸಭೆ

ಕಿಟ್ಟಿ ಸಂಗೀತಕ್ಕೆ ಗಂಜೀ ಮುರಿದು ಕೋಟಿನಲ್ಲಿಯೇ ಹೋಗಬೇಕಾಯಿತು. ಆ ಕೋಟಿಗೆ ತಕ್ಕಂತೆ ತಾನಾದರೂ ಮುಖ ಮುದುಡಿಕೊಂಡು ಮಾಮಲೇದಾರರೊಡನೆ ವಿನಯದಿಂದ ನಡೆಯಬೇಕೆಂದು ನಿರ್ಣಯಿಸಿಕೊಂಡನು. 'ಗಾಣೆ' ಎಂಬ ಕಾರ್ಯಕ್ರಮವು ಹೇಗೆ ಇರುತ್ತದೆಂಬ ಕಲ್ಪನೆ ಕಿಟ್ಟಿಯನ್ನು ಮೀರಿದುದು. ಒಂದು ಕೋಣೆಯಲ್ಲಿ ತಾನು, ತನ್ನ ರಾಘಪ್ಪ ಮಾಮಾ ಹಾಗೂ ಸಾಹೇಬರು, ಹೀಗೆ ಎದುರುಬದಿರಾಗಿ ಕುಳಿತಿರುತೇವೆಂದೂ, ರಾಘಪ್ಪ ತನ್ನ ಗುಣಗಾನವನ್ನು ಮಾಡುವನೆಂದೂ, ಸಾಹೇಬರು ಸಮ್ಮತಿದರ್ಶಕ ಮುಗುಳುನಗೆಯಿಂದ ಅದನ್ನು ಕೇಳಿಕೊಳ್ಳುವರೆಂದೂ, ತಾನು ವಿನಯದಿಂದ ಮುಖ ಕೆಳಗೆ ಹಾಕಿಕೊಂಡು ಕುಳಿತಿರುತ್ತೇನೆಂದೂ, ಅವನು 'ಗಾಣೆ'ಯನ್ನು ಚಿತ್ರಿಸಿಕೊಂಡಿದ್ದನು. 'ಗಾಣೆ'ಯೆಂಬ ಕಾರ್ಯಕ್ರಮದಲ್ಲಿ ಹಾಡುವವರೊಬ್ಬರು ಬೇಕು, ನಿಜ. ಆದರೆ ಅದರ ಅಸ್ತಿತ್ವವು ಅಷ್ಟಿಷ್ಟಕ್ಕೆ ಕಿಟ್ಟಿಗೆ ಮರೆತುಹೋಗುತ್ತಿತ್ತು. ಏಳು ಗಂಟೆಗೆ ಕಿಟ್ಟಿ ಮಾಮಾನ ಮನೆಯನ್ನು ಸೇರಿದೊಡನೆ ಅವನಿಗೆ ಮೊದಲನೆಯ ನಿರಾಶೆಯಾಯಿತು. ಅವನು ಬಂದೊಡನೆ ಎದುರುಗೊಂಡು ಸ್ವಾಗತಿಸಬೇಕಾದ ರಾಘಪ್ಪಮಾಮಾ ಮನೆಯಲ್ಲಿ ಇರಲಿಲ್ಲ. ಮಾಮಲೇದಾರರೂ ಬಂದಿರಲಿಲ್ಲ. ಯಾರೂ ಅವನಿಗೆ ಒಳಗೆ ಬರಲು ಹೇಳಲಿಲ್ಲ. ನಿರ್ವಾವಿಲ್ಲದೆ ಕಾಲೊಳಗಿನವನ್ನು[೧] ಹೊರಗೆ ಇಟ್ಟು ಕಿಟ್ಟಿ ಒಳಗೆ ಪ್ರವೇಶಿಸಿದನು.

ಇಡಿಯ ಪಡಸಾಲೆಯ ತುಂಬ ಒಂದು ಕೆಂಪು ಜಾಜೂಮು[೨] ಹಾಸಲ್ಪಟ್ಟಿತ್ತು. ಅದು ಮುಚ್ಚದ ಒಂದು ಸ್ಥಳದಲ್ಲಿ ಕೈಗ್ಯಾಸುಬತ್ತಿಯನ್ನು ಇಟ್ಟಿದ್ದರು. ಅದರ ಸುತ್ತಮುತ್ತಲು ಹುಳಗಳು ಮುಕುರಿದ್ದವು. ಆರೇಳು, ರೇಶಿಮೆ ರುಮಾಲು ವುಲನ್ ಕೋಟುಗಳನ್ನು ಧರಿಸಿದ ಜೋಡೆಲುಬಿನ[೩] ಗೃಹಸ್ಥರು ಜಾಜುಮಿನ ಒಂದು ಬದಿಗೆ ಇರಿಸಲ್ಪಟ್ಟ ತೆಕ್ಕೆಗಳಿಗೆ ಆತು ಕುಳಿತುಕೊಂಡಿದ್ದರು. ಅವರೆಲ್ಲ ಯಾವುದೋ ಹರಟೆಯಲ್ಲಿ ಮಗ್ನರಾಗಿದ್ದರು. ಗ್ಯಾಸಿನ ಕಾವಿನಿಂದ ಕೆಲವರು ಬೆವತಿದ್ದರು.

---

೧. ಮೆಟ್ಟು. ೨. ತೆಳು ಜಮಖಾನೆ. ೩. ಗಡುತರ.

ಜಾಜುಮಿನ ಇನ್ನೊಂದು ಮೂಲೆಯಲ್ಲಿ ಏಳರಿಂದ ಹನ್ನೆರಡು ವರುಷಗಳಷ್ಟು ವಯಸ್ಸಿದ್ದ ಹುಡುಗರು ದುಂಡಾಗಿ ಕುಳಿತುಕೊಂಡು ಶಾಲೆ – ಮಾಸ್ತರರು – ಆಟ – ಈ ವಿಷಯಗಳನ್ನು ಪಿಸುಮಾತಿನಲ್ಲಿ ಚರ್ಚಿಸುತ್ತಿದ್ದರು.

ಕಿಟ್ಟಿ ಪ್ರವೇಶಿಸಿದೊಡನೆ ಆ 'ಆತ್ಮಸಂಭಾವಿತಾಃ ಸ್ತಬ್ಧಾಃ ಧನಮಾನಮದಾನ್ವತಾಃ' ಪುರುಷರು ಒಮ್ಮೆ ಇವನತ್ತ ನೋಡಿ, ಇವನಲ್ಲಿಯೇ ದೃಷ್ಟಿಯನ್ನಿಟ್ಟು ತಮ್ಮ ಚರ್ಚೆಯನ್ನು ಮುಂದುವರಿಸಿದರು. ಆ ಹುಡುಗರಾದರೋ ಇವನತ್ತ ನೋಡಲೇ ಇಲ್ಲ. ಓಡಿಬಂದು ಅಂಗಲಾಚಿ ಕರೆಯಬೇಕಾಗಿದ್ದ ಮಾಮಾ ಎಲ್ಲಿಗೋ ಮಾಯವಾಗಿದ್ದನು. ಆ ಗುಂಪೂ ಕರೆಯಲೊಲ್ಲದು. ಕಡೆಗೆ ಕಿಟ್ಟಿ ಹಿರಿಯರ ಗುಂಪಿನಲ್ಲಿ ಎಲ್ಲರೂ ತನಗಿಂದ ಹಿರಿಯರೇ, ಅಲ್ಲದೆ ಎಲ್ಲರೂ ತನಗಿಂದ ಒಳ್ಳೆಯ ಬಟ್ಟೆ ಧರಿಸಿದವರು ಎಂದು ವಿಚಾರ ಮಾಡಿ, ಕೊನೆಗೆ 'Better to reign in hell' ಎಂದು ಶಾಲಾಮೃಗಗಳ ನಡುವೆಯೇ ಕೂಡಬೇಕೆಂದು ನಿಶ್ಚಯಿಸಿದನು. ಆ ಚಿಕ್ಕವರ ಗುಂಪಿನಲ್ಲಿ ಒಬ್ಬನನ್ನು ಅತ್ತಿತ್ತ ದೂಡಿ, ಇನ್ನೊಬ್ಬನ ಎದೆಗೆ ಮೊಣಕೈ ಕೊಟ್ಟು, ಮೂರನೆಯವನೊಬ್ಬನ ಕೈಮೇಲೆ ಕಾಲಿಟ್ಟು, ಗಕ್ಕನೆ ಇನ್ನೊಬ್ಬನ ತೊಡೆಯ ಮೇಲೆ ಕುಳಿತನು. ಈ ವ್ಯವಹಾರದಲ್ಲಿ ಕಿಟ್ಟಿಯ ಕಾಲು ಬಿದ್ದದ್ದು ಏಳು ವರ್ಷದ ಒಬ್ಬ ಚಿಕ್ಕ ಬಾಲಕನ ಮೈಮೇಲೆ. ಅವನು ಒಂದು ಕ್ಷಣವೂ ತಡಮಾಡದೆ 'ಹೋ' ಎಂದು ಕಿರಿಚಿಕೊಂಡನು. ತೆಕ್ಕೆಗೆ ಆತು ಕುಳಿತು ದೇವತೆಗಳು ಕರುಣಾಮಯ ದೃಷ್ಟಿಯಿಂದ ಕಿಟ್ಟಿಯತ್ತ ನೋಡಿ ಅವನಲ್ಲಿಯೇ ದೃಷ್ಟಿಯಿಟ್ಟು ತಮ್ಮ ಚರ್ಚೆಯನ್ನು ಮುಂದವರೆಸಿದರು. ಕಿಟ್ಟಿಗೆ, 'ಭೂಮಿತಾಯಿಯೇ, ನನ್ನನ್ನು ಒಳಗೆ ತೆಗೆದುಕೋ' ಎಂಬುವಂತಾಯಿತು. ಹುಡುಗರ ಗುಂಪಿನಲ್ಲಿ ಇವನೇ ಎಲ್ಲರಿಗಿಂತ ಎತ್ತರ. ಆದರೆ ಮಳೆಯಲ್ಲಿ ನೆನೆದ ಬೆಕ್ಕಿನಂತೆ ಮುದುಡಿಕೊಂಡು ಆ ಹುಡುಗರ ನಡುವೆ ಅವರಷ್ಟೇ ಭಾಗವನ್ನು ಹೊರಚಾಚಿ ಕುಳಿತುಕೊಂಡನು.

ತುಸುಹೊತ್ತು ವಿಧವಿಧವಾಗಿ ಹಿಂಸೆಗೀಡಾದ ಆ ಬಾಲಕರ ತಂಡದ ಟೀಕೆಯನ್ನು ಸಹನೆಯಿಂದ ಕೇಳಿಕೊಂಡಮೇಲೆ ಕಿಟ್ಟಿಯ ಸ್ಥಾನವು ಭದ್ರವಾಯಿತು. ಆನಂತರ ಪಡಸಾಲೆಯನ್ನೆಲ್ಲ ತನ್ನ ಕಣ್ಣುಗಳಿಂದ ಸುತ್ತುವರಿದನು. ಮೊದಲು ಗೋಡೆಯ ಮೇಲಿನ ಚಿತ್ರಗಳು, ಫೋಟೋ, ಮೇಲಿಂದ ತೂಗುಹಾಕಿದ ಕ್ಯಾಲೆಂಡರ – ಇವನ್ನೆಲ್ಲ ದಿಟ್ಟಿಸಿ ನೋಡಿದನು. ನಂತರ ಒಂದು ಮೂಲೆಯಲ್ಲಿಟ್ಟ ತಂಬೂರಿ – ತಬಲಗಳನ್ನು ಕುತೂಹಲದಿಂದ ನಿರೀಕ್ಷಿಸಿದನು. 'ಎಲ, ತಂಬೂರಿ ಇಷ್ಟು ದೊಡ್ಡವಿರುತ್ತವೆಯೇ !' ಎಂದು ಕೊಂಡನು.

ಪಡಸಾಲೆಯ ಎರಡೂ ಮಗ್ಗಲಿಗೆ ಎರಡು ಕೋಣೆಗಳಿದ್ದವು. ಎರಡರಲ್ಲಿಯೂ ಮಬ್ಬುಗತ್ತಲೆಯಿದ್ದ ಮೂಲಕ ಗ್ಯಾಸಿನ ಬೆಳಕಿನಲ್ಲಿ ಕುಳಿತವರಿಗೆ ಮೊದಮೊದಲು ಈ ಕೋಣೆಗಳಲ್ಲಿದ್ದ ಯಾವ ವಸ್ತುವೂ ಕಾಣಿಸುತ್ತಿರಲಿಲ್ಲ. ಆದರೆ ಹತ್ತು ನಿಮಿಷ ಪಡಸಾಲೆಯನ್ನೆಲ್ಲ ನೋಡಿ ಬೇಸರ ಬಂದಮೇಲೆ ಕಿಟ್ಟಿ ತನ್ನ ಎದುರಿಗಿನ ಕೋಣೆಯ ಒಳಗನ್ನು ದಿಟ್ಟಿಸಿ ನೋಡುತ್ತಿರುವಾಗ ಅವನಿಗೆ ಒಂದು ವಿಚಿತ್ರ ದೃಶ್ಯ ಕಂಡಿತು.

ಆ ಕೋಣೆಯಲ್ಲಿ ಸುರಸುಂದರಿಯೋರ್ವಳು ಕುಳಿತುಕೊಂಡಿದ್ದಳು. ಆಕೆ ಗೋಡೆಗೆ ಅರ್ಧಮರೆಯಾಗಿದ್ದರೂ ಕೂಡ ಮುಖ ಮಾತ್ರ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಇವಳಾರು ಊರ್ವಶಿಯೋ, ರಂಭೆಯೋ, ಚಿತ್ರಾಂಗದೆಯೋ ಎಂದು, ಪುರಾಣಪುಣ್ಯಕಥೆಗಳನ್ನು ಮೊದಲಿನಿಂದಲೂ ಕೇಳಿದ ಕಿಟ್ಟಿ ದಂಗುಬಡಿದು ಆ ಮುಖವನ್ನು ನಿಟ್ಟಿಸಿ ನೋಡಿದನು. ನಿಜವಾಗಿಯೂ ಸುರಸುಂದರಿ !.... ಅಪ್ಸರೆ...! ಇಂಥ ಸೌಂದರ್ಯವನ್ನೇ ಕಿಟ್ಟಿ ನೋಡಿದ್ದಿಲ್ಲ; ಕಲ್ಪಿಸಿಕೊಳ್ಳುವದೂ ಸಾಧ್ಯವಿಲ್ಲ... ಆದರೆ ನಿಟ್ಟಿಸಿ ನೋಡುವಷ್ಟರಲ್ಲಿ, ಎಲ !.... ಅವಳೂ ತನ್ನೆಡೆಗೆಯೇ ನೋಡುತಿದ್ದಾಳೆ! ಅವಳ ನೋಟಕ್ಕೆ ಎದುರಾಗದೆ ಕಿಟ್ಟಿ ನಾಚಿ ಮುಖ ಕೆಳಗೆ ಮಾಡಿದನು. ಆದರೆ ಮತ್ತೆ ಆ ಸ್ವರ್ಗೀಯ ಮುಖವನ್ನು ನೋಡಬೇಕೆಂಬ ಆಸೆ ! ಮತ್ತೆ ಕಣ್ಣೆತ್ತಿ ಅತ್ತ ನೋಡುವನು, ಮತ್ತೆ ಮುಖ ತಗ್ಗಿಸುವನು. ಯಾರ ಮುಖವೂ ಇಂತು ಅವನ ಕಣ್ಣುಗಳನ್ನು ಸೆಳೆದಿರಲಿಲ್ಲ. ಅವನ ಕಣ್ಣು ಅವನನ್ನೇ ಮೀರತೊಡಗಿದವು. ಎಂದೂ ಇಲ್ಲದ ಎದೆಗಾರಿಕೆ ಅವನಲ್ಲಿ ಮೆಲ್ಲನೆ ಸೇರತೊಡಗಿತ್ತು. ಎಲ, ಅವಳೂ ಇವನನ್ನೇ ನೋಡುತ್ತಿರುವಳಲ್ಲ !...

ಹುಬ್ಬಳ್ಳಿಯ ಮೆಹಬೂಬಜಾನ್, ಹೆಸರಾದ ಗಾಯಕಿ, ರೂಪವತಿ– ತನ್ನದೇ ಆದ ರೀತಿಯಲ್ಲಿ ಸುಸಂಸ್ಕೃತಳೂ ಹೌದು. ರಸಿಕನಾದ ರಾಘಪ್ಪನ ಆಯ್ಕೆ ಹಾಗೆ ಹುಸಿಹೋಗುವದು ಸಾಧ್ಯವೇ ಇಲ್ಲ. ಕಳೆದ ಹತ್ತುಹನ್ನೆರಡು ವರುಷಗಳಲ್ಲಿ ಆಕೆ ರಾಘಪ್ಪನ ಆಶ್ರಯದಲ್ಲಿ ಇದ್ದವಳು. ಸಂಗೀತದಿಂದ ಆಕೆ ತನ್ನದೇ ಆದ ಪುಟ್ಟ ಕೀರ್ತಿಯನ್ನೂ ಸಂಪಾದಿಸಿದ್ದಳು ; 'ಶೇಷಶಾಯಿ' ನಾಟಕ ಕಂಪನಿಗೆ ಆಕೆಯ ಹೆಸರಿನ ಮೇಲೆ ಹಿಂದಕ್ಕೆ ಆದಷ್ಟು ಹಣ ಇಂದಿಗೂ ಹೊಸ ಸೀನ್ – ಸೀನರಿ ಮಾಡಿಸಿದರೂ, ಬೇರೆ ಒಳ್ಳೆಯ ನಟರನ್ನು ತಂದರೂ ಆಗಿದ್ದಿಲ್ಲ. ಪುಣೆಯ ಗಂಧರ್ವ ನಾಟಕದ ದರ್ಶನದಿಂದ ಹುಟ್ಟಿದ ಹೊಸ ರಸಿಕವರ್ಗವು ಮೆಹಬೂಬಜಾನಳ ಸಂಗೀತದಲ್ಲಿ ಎಷ್ಟೋ ಮಟ್ಟಿಗೆ ಆ ಸುಖವನ್ನು ಪಡೆಯುತ್ತಿತ್ತು. ಆದರೆ ಕಳೆದ ನಾಲ್ಕೈದು ವರ್ಷಗಳಿಂದ ಮೆಹಬೂಬಜಾನ

ನಾಟಕದಲ್ಲಿ ಭಾಗವಹಿಸುವುದನ್ನು ಬಿಟ್ಟುಬಿಟ್ಟಳು. ಎಷ್ಟೋ ನಾಟಕ ಕಂಪನಿಗಳು ಆಕೆಗೆ ತಿಂಗಳಿಗೆ ಮುನ್ನೂರರವರೆಗೆ ಪಗಾರವನ್ನು ಕೊಡಮಾಡಿದವು. ಆದರೆ ಒಮ್ಮೆ ಒಂದು ಜಾತ್ರೆಯಲ್ಲಿ ಅತಿ ದುಡಿದು ಮೆಹಬೂಬಜಾನಳು ಜಡ್ಡುಬಿದ್ದಮೇಲೆ ಆಕೆಯ ಯಜಮಾನರು[೧] 'ನನ್ನ ಆಣೆ ಅದ' ಅಂದು ಆಣೆ–ಚೂರಿ ಹಾಕಿ ಆಕೆಯನ್ನು ನಾಟಕಗಳಿಂದ ಪರಾವರ್ತನ ಗೊಳಿಸಿದರು. ಆಕೆಯಾದರೂ ರಾಘಪ್ಪನನ್ನೇ ನಂಬಿಕೊಂಡು, ಅವನ ಮಾತನ್ನು ಮೀರದೆ, ಅವನ ವಿಶ್ವಾಸವನ್ನೇ ಆಶ್ರಯಿಸಿಕೊಂಡು ಇದೀಗ ಕಾಲಹಾಕತೊಡಗಿದ್ದಳು. ಈಗಾಗಲೇ ಆಕೆಗೆ ಮಧ್ಯವಯಸ್ಸು ಬಂದಿತ್ತು. ಅಷ್ಟಿಷ್ಟಕ್ಕೆ ತೇಕುಬರುತ್ತಿದ್ದ ಮೂಲಕ ಹಾಡುವದನ್ನು ಕೂಡ ಆಕೆ ಬಹಳೇ ಕಡಿಮೆ ಮಾಡಿದ್ದಳು. ಆದರೂ ಇಂದು ಯಜಮಾನರ ಮನೆಯ ಔತಣವೆಂದು ಮುಂಜಾನೆಯಿಂದ ಖಾರಗೆಣಸು ತಿಂದು, ಧ್ವನಿ ಹದಮಾಡಿಕೊಂಡು ಹಾಡಲಿಕ್ಕೆ ಬಂದಿದ್ದಳು.

ಆದರೆ ಮಾಮಲೇದಾರರನ್ನು ಕರೆಯಲು ಹೋದ ಯಜಮಾನ ಒಂದು ತಾಸಾದರೂ ಬರಲಿಲ್ಲ. ಆಕೆಗೆ ಬಲು ಬೇಸರವಾಗಿಬಿಟ್ಟಿತ್ತು. ಗಾಯನ ಕೇಳಲು ಬಂದ ಜನರು, ಮೆಹಬೂಬಜಾನಳೊಡನೆ ಒಂದೆರಡು ಮಾತಾಡಲು ಒಳಗಿಂದೊಳಗೆ ಇಚ್ಛಿಸುತ್ತಿದ್ದರೂ ಕೂಡ, ರಾಘಪ್ಪನು ಇಲ್ಲದ ಮೂಲಕ, ಹೆಚ್ಚಿನ ಔತ್ಸುಕ್ಯವನ್ನು ತೋರಿಸಲಾರದೆ, ತಮ್ಮತಮ್ಮೊಳಗೇ ಹರಟುತ್ತ ಕುಳಿತಿದ್ದರು. ಇವಳೊಡನೆ ಮಾತಾಡಲು ಯಾರೂ ಇರಲಿಲ್ಲ. ದೊಡ್ಡ ಕಾಮದಾರರು ಬರುತ್ತಾರೆಂದು ರಾಘಪ್ಪ ಹೇಳಿದ್ದ ಮೂಲಕ ಮೆಹಬೂಬ ತನ್ನ ರೇಶಿಮೆಯ ಬಟ್ಟೆಗಳನ್ನು ಧರಿಸಿಕೊಂಡು, ಮುಖಕ್ಕೆ ತುಂಬ ಬಣ್ಣ ಹಚ್ಚಿಕೊಂಡು, ಹೆರಳಿನಲ್ಲಿ ಬಂಗಾರದ ಕಡ್ಡಿಗಳಿಂದ ಯುಕ್ತವಾದ ಸೇವಂತಿಗೆಯ ಮಾಲೆಯನ್ನು ಇಟ್ಟುಕೊಂಡು, ತನ್ನ ಹರೆಯದ ದಿನಗಳ ದೊಡ್ಡ ದೊಡ್ಡ ಸಭೆಗಳ ಥಾಟಿನಲ್ಲಿ ಬಂದಿದ್ದಳು. ಬಣ್ಣದ ರೂಢಿ ತಪ್ಪಿ ಸೆಕೆಯಾಗತೊಡಗಿತ್ತು. ಇಂಥ ಬೇಸರದ ವೇಳೆಯಲ್ಲಿ ಕಿಟ್ಟಿ ಒಳಗೆ ಬಂದಿದ್ದನು. ಅವನ ಆಗಮನದಿಂದ ಮೆಹಬೂಬಳಿಗೆ ತುಸು ಬೇಸರ ಕಡಿಮೆಯಾಯಿತು. ಅಭಿನಯಚತುರೆಯಾದ ಅವಳಿಗೆ, ಇವನು ಗೊಂದಲಪಟ್ಟು ಎಲ್ಲಿ ಕೂಡಬೇಕೆಂದು ವಿಚಾರಮಾಡುತ್ತಿದ್ದುದು, ಇವನು ಹುಡುಗರ ಮಧ್ಯೆ ಹಾಕಿದ ಗಲಾಟೆ, ಮೈಮುದುರಿಕೊಂಡು ಕುಳಿತದ್ದು, ಅಗಲ ಬಾಯಿ ತೆರೆದು ತಂಬೂರಿಯತ್ತ ನೋಡುತ್ತಿದ್ದದ್ದು – ಇವೆಲ್ಲ ತನ್ನ ನಾಟಕಗಳಲ್ಲಿಯ ಹಾಸ್ಯ

---

೧. ರಾಘಪ್ಪ

ಪಾತ್ರಗಳ ನೆನಪು ತಂದುಕೊಡುತ್ತಿದ್ದವು. ಆದ್ದರಿಂದ ಈ ಜೀವನಂತ ನಾಟಕವನ್ನೇ ಎವೆಯಿಕ್ಕದೆ ನೋಡುತ್ತ ಆಕೆ ರಮಮಾಣಳಾಗಿದ್ದಳು.

ಅಷ್ಟರಲ್ಲಿ ರಾಘಪ್ಪ ಮಾಮಲೇದಾರರನ್ನೂ ಅವರ ಇನ್ನೋರ್ವ ಮಿತ್ರರನ್ನೂ ಕರೆದುಕೊಂಡು ಪ್ರವೇಶಿಸಿದನು. ಮಾಮಲೇದಾರರು ಬಂದೊಡನೆ ತೆಕ್ಕೆಗೆ ಒರಗಿದ ಸಭ್ಯಗೃಹಸ್ಥರು ಸೆಟೆದು ಕುಳಿತು ಅವರನ್ನು ಸ್ವಾಗತಿಸಿದರು. ಮಾಮಲೇದಾರರು ತಮ್ಮ ಸ್ನೇಹಿತನಿಗೆ ಮೇಲಿನ ತೆಕ್ಕೆ ಕೊಟ್ಟು ತಾವೂ ಕುಳಿತುಕೊಂಡರು. ಅವರ ಬದಿಗೆ ರಾಘಪ್ಪ ಕುಳಿತುಕೊಂಡು, ಅಲ್ಲಿಂದಲೇ ಬೇರೆ ಬೇರೆ ಗೃಹಸ್ಥರ ಪರಿಚಯಮಾಡಿಕೊಟ್ಟನು. ಗುರುತಿದ್ದ ಒಬ್ಬಿಬ್ಬರ ಜೊತೆಗೆ ಮಾಮಲೇದಾರರು ಸರಸವಾಡಿದರು. ಈ ಹೊತ್ತಿಗೆ ಇನ್ನೂ ದೊಡ್ಡದಾಗಿದ್ದ ಚಿಕ್ಕಮಕ್ಕಳ ಗುಂಪಿನಲ್ಲಿ ರಾರಾಜಿಸುತ್ತಿದ್ದ ಕಿಟ್ಟಿಯು ಮಾಮಾ ತನ್ನತ್ತ ನೋಡಬಹುದೆಂದು ದೈನ್ಯದಿಂದಲೂ ಕಾತರದಿಂದಲೂ 'ಬಂದಾಗ ಬರಲಿ ಫಲ' ಎಂದು ತಾಳ್ಮೆಯ ತೊರೆದು 'ಕಾಡುಹೂವಿನ ತೆರದಿ ಕಾದು' ನಿಂತನು. ಆದರೆ ಮಾಮಲೇದಾರರಾಗಲೀ, ಅವರ ಹೃದಯಕ್ಕೆ ದಾರಿಯಂತಿದ್ದ ಮಾಮಾನಾಗಲೀ ಈ ಕೆಸರಿನೊಳಗಿನ ಕಮಲದ ಶೋಧದ ತೊಂದರೆಗೇ ಬೀಳಲಿಲ್ಲ. ಅದರ ಬದಲು ರಾಘಪ್ಪ ಗಟ್ಟಿಯಾಗಿ ಕೋಣೆಯೊಳಗಿನ ಸುರಸುಂದರಿಗೆ 'ಮೆಹಬೂಬ, ಸಾಹೇಬರು ಬಂದಾರ ನಿನ್ನ ಗಾಣೆ ಕೇಳಲಿಕ್ಕೆ. ಬಹಳ ದಿನದಿಂದ ನಿನ್ನ ಗಾಣೆ ಕೇಳಬೇಕು ಅಂತ ಅವರು ಅಂತಿದ್ದರು. ನಿನ್ನ ಪಹಿಲಾನಂಬರ[೧] ಚೀಜು[೨] ತಗೀಬೇಕು ಇವತ್ತು!' ಎಂದನು.

ಮೆಹಬೂಬಜಾನಳು ತುಸು ಬೆಳಕಿನತ್ತ ಸರಿಯುತ್ತ ವಯ್ಯಾರದಿಂದ ದೊಡ್ಡ ತೆಕ್ಕೆಗೆ ಆತು ಕುಳಿತ ಮಾಮಲೇದಾರರ ಸ್ನೇಹಿತರಿಗೆ ಮುಜುರೆ ಮಾಡಿದಳು. 'ಅವರಲ್ಲ ; ನಾನು' ಎಂದು ಹಕ್ಕನ್ನು ಪ್ರಸ್ಥಾಪಿಸುವವರಂತೆ ಮಾಮಲೇದಾರರು ಗಂಭೀರವಾಗಿ, 'ಗಂಧರ್ವನ ಚೀಜಬರತಾವೇನು?' ಎಂದು ಕೇಳಿದರು.

'ಜೀ ಹಾಂ' ಎಂದಳು ಮೆಹಬೂಜಾನ. ಸಭೆಯಲ್ಲಿ ಹಿಂದೂಸ್ಥಾನಿಯನ್ನೇ ಮಾತಾಡಬೇಕೆಂದು ಆಕೆಯ ಶಾಸ್ತ್ರ. ಇನ್ನು ಹೆಚ್ಚು ವಿಲಂಬ ವಿಲ್ಲೆಂದು ಕೋಣೆ ಬಿಟ್ಟು ಹೊರಕ್ಕೆ ಬಂದು ತನಗಾಗಿ ಹಾಸಿದ ಜಮಖಾನೆಯನ್ನು ಆಕ್ರಮಿಸಿ, ತಲೆಯ ಮೇಲೆ ಸೆರಗು ಸರಿಪಡಿಸಿಕೊಳ್ಳುತ್ತ ಕುಳಿತುಕೊಂಡಳು.

ಆಕೆ ಬೆಳಕಿಗೆ ಬಂದೊಡನೆ ಕಿಟ್ಟಿಗೆ ಆಕೆಯ ಸುರಸೌಂದರ್ಯವೆಲ್ಲ ಮಾಸಿ

---

೧. ಅತ್ಯುತ್ತಮ. ೨. ಪಲ್ಲವಿ

ಹೋಗಿತ್ತು. ಗ್ಯಾಸಿನ ಬೆಳಕಿನಲ್ಲಿ ಬಣ್ಣವೂ ಮುಚ್ಚಲಾರದ ಸುಕ್ಕುಗಳೂ ಅಲ್ಲಲ್ಲಿ ಕಾಣುತ್ತಿದ್ದವು. ಹೆಚ್ಚು ಅನುಭವಿಕರಿಗೆ ಆಕೆ ಇನ್ನೂ ಸುಂದರಿಯಾಗಿ ಕಂಡಿರಬೇಕು. ಆದರೆ ಸೌಂದರ್ಯ ಹೊಸ್ತಿಲಲ್ಲಿ ಕಾಲಿಡಲೋ ಬೇಡವೋ ಎನ್ನುತ್ತ ದೂರಿಂದಲೇ ಒಳಗೆ ಹಣಿಕಿಹಾಕಿ ನೋಡಿದ ಕಿಟ್ಟಿಗೆ ಮಹಬೂಬ ಜಾನಳ ಸದ್ಯದ ಚಿತ್ರವು ಭಯಾನಕವಾಗಿಯೇ ತೋರಿತು. ತುಸು ಸ್ಥೂಲ ದೇಹವಾದರೂ ಇನ್ನುಳಿದ ಅಂಗಾಂಗಗಳು ಪರಿಪುಷ್ಟವಾಗಿಯೇ ಇದ್ದವು. ಆದರೆ ಮುಖದ ಸತ್ಯದರ್ಶನದಿಂದ ಕಿಟ್ಟಿಗೆ ಪೂರ್ಣ ನಿರಾಶೆಯಾಯಿತು.

ಆದರೆ ಐದು ನಿಮಿಷಗಳ ಕೆಳಗೆ ಆ ಅರೆಗತ್ತಲೊಳಗಿನ ಸುಳ್ಳು ಚಿತ್ರದ ಎದುರು ಅವನು ತನ್ನ ಕಿಶೋರಾವಸ್ಥೆಯನ್ನು ಕಳಕೊಂಡಿದ್ದನು. ಈಗ ಈ ನಿರಾಶೆಯೂ ಮತ್ತೆ ಅವನನ್ನು ಬಾಲಕನನ್ನಾಗಿ ಮಾಡಲಾರದು.....

ಪಡಸಾಲೆಯ ಹೊರಗಿನ ವ್ಹರಾಂಡದಲ್ಲಿ ಬೆಂಚಿನ ಮೇಲೆ ಕುಳಿತ ಓರ್ವ ವೃದ್ಧನು ಒಳಗೆ ಬಂದವನೇ ತಂಬೂರಿ–ತಬಲಾಗಳ ಶ್ರುತಿಗಳನ್ನು ಇನ್ನೊಮ್ಮೆ ಪರಿಕಿಸಿ ನೋಡಿ ಮತ್ತೆ ಸರಿಗೊಳಿಸತೊಡಿದನು. ತಬಲ ಕೂಡಿಸುವ ಸುತ್ತಿಗೆಯ ಖಟಾಟೋಪವು ನಡೆದಾಗ ಡಬ್ಬಿಯಲ್ಲಿಯ ತಂಬಾಕ ತೀರಿದುದು ದೇಶಪಾಂಡೆಯವರ ಲಕ್ಷ್ಯಕ್ಕೆ ಬಿದ್ದಿತು. 'ರಾಘಪ್ಪಾ, ತಂಬಾಕ ತೀರಿತು' ಎಂದು ಅವರು ಘೋಷಿಸಿದರು. 'ಹೀಂಗs!' ಎನ್ನುತ್ತ ರಾಘಪ್ಪನು ಆ ಚಿಕ್ಕ ಮಕ್ಕಳ ಗುಂಪಿನತ್ತ ತಿರುಗುತ್ತ, ಟೊಂಕದಲ್ಲಿಯ ಎರಡಾಣೆಯನ್ನು ತೆಗೆದು ಅವರತ್ತ ಹಿಡಿದು, 'ಏ, ನಿಮ್ಮಲ್ಲೆ ಮೀಶಿ ಯಾರಿಗೆ ಬಂದಾವ ಅಂವ ಹೋಗಿ ಈ ದೋನಣೇದ ತಂಬಾಕ ತರಬೇಕು' ಎಂದನು.

ಆ ತಂತಿ–ಚರ್ಮಗಳ ಸಪ್ಪಳ ನಡೆದಾಗ ಹುಡುಗರು ಹೊರಗೆ ಹೋಗಲು ಒಬ್ಬರ ಮುಖ ಒಬ್ಬರು ನೋಡತೊಡಗಿದರು. ಒಬ್ಬ ಹುಡುಗನು ಕಿಟ್ಟಿಯತ್ತ ಕೈಮಾಡಿ, 'ಇಂವಗ ಮೀಶಿ ಬಂದಾವ!' ಎಂದನು. ಕಿಟ್ಟಿ ಕಕ್ಕಾಬಿಕ್ಕಿಯಾಗಿ ಚಟ್ಟನೇ ಎದ್ದು, ಮಾಮನ ಕೈಯಲ್ಲಿಯ ಎರಡಾಣೆಯ ಚೂರನ್ನು ತೆಗೆದುಕೊಳ್ಳಲು ಮುಂದಾದನು. ಆಗಲೇ ರಾಘಪ್ಪ ಅವನನ್ನು ನೋಡಿದ್ದು.

'ಓಹೋ ! ಬಂದೀಯೇನು?..... ಇಲ್ಯಾಕ ಕೂತಿದ್ದೀ?.....' ಎನ್ನುತ್ತ ತನ್ನ ತೆಕ್ಕೆಯನ್ನು ಸರಿಸಿ ಅಲ್ಲಿ ಕೂಡಲು ಸೂಚಿಸಿದನು. ಮಹಬೂಬಜಾನಳ ಮುಖದ ಮೇಲೆ ಮುಗುಳುನಗೆ ಮಿನುಗಿತು. ಮಾಮಲೇದಾರರು ತಾನು ತಂಬಾಕಕ್ಕಾಗಿ ಎದ್ದದ್ದನ್ನು ನೋಡಿದರೋ ಇಲ್ಲವೋ ಎಂಬುದನ್ನು ಕೂಡಲೇ ನೋಡುವ ಮನೋಧೈರ್ಯ ಕಿಟ್ಟಿಗೆ ಆಗಲಿಲ್ಲ. ಆದರೂ ಸದ್ಯ ಸಿಕ್ಕ ಪ್ರೊಮೋಶನ್ ಸಾಕು,

ಎಂದುಕೊಂಡು, ತೆಕ್ಕೆ ಸ್ವೀಕರಿಸಿ ಕುಳಿತು ಕೊಂಡನು. ತನ್ನತ್ತ ದುರುಗುಟ್ಟಿ ನೋಡುತ್ತಿದ್ದ ಸಾಹೇಬರಿಗೆ ನಮಸ್ಕಾರ ಮಾಡಿದನು. ರಾಘಪ್ಪ 'ಇವ ನಮ್ಮ ಹುಡುಗ. ನಿಮ್ಮ ಕಚೇರ್ಯಾಗ ಇದ್ದಾನ...' ಎಂದಿಷ್ಟೇ ಪರಿಚಯ ಮಾಡಿದನು. ಸಾಹೇಬರು ಗೋಣು ಹಾಕಿದರು. ತಮ್ಮ ಕೈಕೆಳಗಿನವ ಇಷ್ಟು ಸಮೀಪ ಕುಳಿತದ್ದು ಸಾಹೇಬರಿಗೆ ಸಂಕೋಚ ; ಅವರ ಹತ್ತರ ಕೂಡಬೇಕಾದರೆ ತೆಕ್ಕೆಗೆ ಒರಗಬೇಕೋ ಬೇಡವೋ – ಕಿಟ್ಟಿಗೆ ಸಂದೇಹ.

ಸಂಗೀತ ಪ್ರಾರಂಭವಾಯಿತು. ತುಸು ವೇಳೆಯನಂತರ ಮೈಚಳಿಬಿಟ್ಟು ಸಾಹೇಬರು ತಮ್ಮ ಸ್ನೇಹಿತನೊಡನೆ ಹರಟತೊಡಗಿದರು. ಕಿಟ್ಟಿಗೆ ತಾನು ಆ ಮಾತು ಕೇಳಬೇಕೋ, ಇತ್ತ ಸಂಗೀತ ಕೇಳಬೋಕೋ ಸಂದೇಹ. ಮಾಮಾನಾದರೋ ಸಂಗೀತದಲ್ಲಿ ಗರ್ಕನಾದನು.[೧] ಕಿಟ್ಟಿಗೆ ಈ ಹಾಡಿಕೆಯ ಅರ್ಥವೇ ಆಗಲಿಲ್ಲ. ಬಿಡಲಾಗದ ಕರ್ಮವೆಂದು ಕುಳಿತುಕೊಂಡನು. ತುಸುಹೊತ್ತಿನಲ್ಲಿ ತೆಕ್ಕೆಗೆ ಆನಲು ಆಗದಿದ್ದಕ್ಕಾಗಿ ಪಕ್ಕಡಿ ನೋಯತೊಡಗಿತು. ಜೊತೆಗೆ ಕರ್ಣ ಹಿಂಸೆ. ಆ ಸುರಸುಂದರಿಯಾದರೋ ಸ್ವರ್ಗದ ತಲೆಬಾಗಿಲದಷ್ಟು ಅಗಲ ಬಾಯ್ದೆರೆದು ಸ್ವರಸ್ವರಕೂ 'ಆಕ್' – 'ಅತ್' ಮುಂತಾದ ಸ್ವರವ್ಯಂಜನಾದಿಗಳ ವಿಚಿತ್ರ ಸಮ್ಮೇಳನವನ್ನು ಗೈಯುತ್ತ ಒಂದು ಶಾಸ್ತ್ರೀಯ ರಾಗವನ್ನು ಹಾಡಿದಳು. 'ಶಾಸ್ತ್ರೀಯ? ವೇಶ್ಯಾಸ್ತ್ರೀಯ !' ಎಂಬ ವಿಚಾರದಿಂದ ಕಿಟ್ಟಿಗೆ ಒಳಗಿಂದೊಳಗೇ ಅಸಾಧ್ಯ ನಗು ಬಂದಿತು. ಆದರೆ ಮುಂದೆ ಆಕೆ ಒಂದು ಮರಾಠಿ ಪದವನ್ನೂ, 'ಕೃಷ್ಣಾ ನೀ ಬೇಗನೆ ಬಾರೊ... ಣಾ ನೀ ಬೇಗನೆ ಬಾರೊ' ಎಂಬ ಕನ್ನಡ ಹಾಡನ್ನೂ ಹಾಡಿದಳು. ಅದೂ ಕಿಟ್ಟಿಗೆ ವಿಶೇಷ ಆನಂದವನ್ನು ಕೊಡಲಿಲ್ಲ. ಆದರೆ ಮಾಮಲೇದಾರರಿಂದ ಹಿಡಿದು ಮಕ್ಕಳವರೆಗೆ ಎಲ್ಲರೂ ಗೋಣುಹಾಕುವುದನ್ನು ಕಂಡು ತಾನೂ ಗೋಣುಹಾಕಿ ಮೆಲ್ಲಗೆ ಯಾರಿಗೂ ಕೇಳಿಸದಂತೆ 'ವಹವ್ವಾ!' ಅಂದು ನೋಡಿದನು. ಆ ಎರಡೂವರೆ ತಾಸಿನ ಕಾರ್ಯಕ್ರಮದಲ್ಲಿ ಮಾಮಾ ಮಾತಾಡಿದ್ದೂ ಅಷ್ಟೆ. ಮಾಮಲೇದಾರರಂತೂ ಎರಡೇ ಬಾರಿ ತನ್ನ ಅಸ್ತಿತ್ವದತ್ತ ಲಕ್ಷ್ಯಹಾಕಿದ್ದು. ಒಮ್ಮೆ ತಾನು ತಂಬಾಕ ತರಲು ಎದ್ದಾಗ, ಇನ್ನೊಮ್ಮೆ ಅವರ ಸಮೀಪದ ತೆಕ್ಕೆಯನ್ನು ತಾನು ಆಕ್ರಮಿಸಿದಾಗ. ಅಂತೂ ತಾನು ಇಂದು ಬಂದದ್ದು ವ್ಯರ್ಥವಾಯಿತು, ಎಂದು ಕಿಟ್ಟಿಗೆ ಖಂಡಿತವಾಯಿತು. ಮೆಹಬೂಬಜಾನಳು ರಾಘಪ್ಪನ ಸೂಚನೆಯಂತೆ 'ನಾ

---

೧. ತಲ್ಲೀನ

ಮಾರೋ ಪಿಚಕಾರಿ'ಯ ಸಾಭಿನಯ ಠುಮರಿ[೧]ಯೊಂದಿಗೆ ಮುಗಿಸಿದಳು. ಅವಳ ಅಭಿನಯ–ವಯ್ಯಾರಗಳನ್ನು ಕಣ್ಣಿಟ್ಟು ನೋಡಲು ಕೂಡ ಕಿಟ್ಟಿಗೆ ಬೇಸರವಾಯಿತು. ಈ ಹಿಂಸೆಯೇ ಇವತ್ತಿನ ಲಾಭ ಎಂದು ಕೊಂಡಿದ್ದನು.

ಆದರೆ ಸಭೆ ಮುಗಿದಮೇಲೆ ಮಾಮಲೇದಾರರು ಮೆಹಬೂಬಜಾನಳೊಡನೆ ಎರಡು ಸರಸವಾಡಿ, ಉಳಿದವರ ನಮಸ್ಕಾರ ಸ್ವೀಕರಿಸುತ್ತ ಹೊರ ಹೊರಟಾಗ, ಕಿಟ್ಟಿ 'ಟಾಂಗಾ ತರಲೇನು, ಸಾಹೇಬರಃ?' ಎಂದು ನಮಸ್ಕಾರ ಮಾಡಿ ಕೇಳಿದನು. 'ಆಗಳೆ ಯಾವದೊ ಹುಡುಗನ್ನ ಕಳಿಸ್ಯಾರ ರಾಘಪ್ಪ !' ಎಂದರು ಸಾಹೇಬರು. ಬೈಗುಳಗಳಿಲ್ಲದೆ ಅವರು ಮಾತಾಡಬಲ್ಲರು ಎಂಬ ವಿಚಾರದಿಂದ ಕಿಟ್ಟಿಗೆ ಧೈರ್ಯ ಬಂದಿತು. ಇತರ ಕ್ಷೇಮಸಮಾಚಾರ ಮಾತಾಡುತ್ತ ಕಿಟ್ಟಿ ಹಿಂದಿನ ಕೇಸನ್ನು ಎತ್ತಿದನು. ಅಷ್ಟರಲ್ಲಿ ಟಾಂಗೆ ಬಂದು ನಿಂತಿತು. ಆದರೆ ಮಾಮಲೇದಾರರಿಗೆ ಯಾಕೋ ಕಿಟ್ಟಿಯೊಡನೆ ಮಾತಾಡುವ ಇಚ್ಛೆಯಾಗಿ ಅಲ್ಲಿಯೇ ನಿಂತು ಗಂಭೀರವಾಗಿ ಹೇಳಿದರು – 'ನೋಡು ಕುಲಕರ್ಣಿ, ನಿನ್ನಂತಹವರು ರೆವ್ಹೆನ್ಯೂ ಡಿಪಾರ್ಟಮೆಂಟಿನ್ಯಾಗ ನಾಕು ದಿವಸ ಬಾಳಬೇಕಾದರ ಒಂದು ಮಾತು ಹೇಳತೇನಿ – ನಿನ್ನ ಟೇಬಲಿಗೆ ಆವಶ್ಯ ಇರೋ ಪ್ರೊಸೀಜರು, ರೂಲ್ಸು, ಕಾಯ್ದೆ, ಇಷ್ಟರಮ್ಯಾಲೆ ನಿನಗ ಪೂರ್ಣ ಮಾಸ್ಟರಿ ಇರಬೇಕು ; ಇನ್ನೊಬ್ಬರ ಮಾತು ಕೇಳಬಾರದು. ನಿಮ್ಮ ಪ್ರೊಸೀಜರ ಬರೋಬ್ಬರಿ ಇರಬೇಕು. ಹೀಂಗಿದ್ದರ ನೀವು ಪಾರಾಗಿಹೋಗತ್ತೀರಿ. ಮೊನ್ನೆ ನಿನ್ನ ನೋಟ್ಸು ನಿನಗ ಯಾರು ಬರಕೊಟ್ಟರು, ನನಗ ಗೊತ್ತಿಲ್ಲೇನು ?' ಎಂದರು.

'ಇಲ್ಲಾ, ಅವರು ಕೇಸ್ ಕ್ಲಿಯರ್ ಅದ ಅಂದರು' ಎಂದ ಕಿಟ್ಟಿ.

'ಅದಃ, ಅದಃ – ನಿನ್ನದು ಅವರ ಮ್ಯಾಲ ಅವಲಂಬನ ಯಾಕ ? ನಿನಗ ಬೇಕಾಗುವ ರೂಲ್ಸಿನ ಫಾಯಿಲು ಕಚೇರ್ಯಾಗ ಅದ. ಮನಿಗೆ ಒಯ್ದು ಎರಡು ಬಿಟ್ಟು ನಾಕು ಸರತೆ ಓದಿ ತಗಿ. ನಿನಗಃ ಕೆಲಸ ತಿಳೀತದ. ರೆವ್ಹೆನ್ಯೂದಾಗ ಕೆಲಸದ ವಿಷಯಕ್ಕ ಯಾರನೂ ನಂಬತಕ್ಕದ್ದಲ್ಲ. ನೀನು ಈಗ ಜ್ಯುನಿಯರ ಇದ್ದೀ ಅಂತ ನಾಲ್ಕು ಮಂದಿ ಇಷ್ಟರಃ ನಿನಗ ಹೇಳುತಾರ, ಆದರೆ ನಾಳೆ ನಿನ್ನ ಕೆಳಗೆ ಇನ್ನೊಬ್ಬ ಚಲಾಖ ಹುಡುಗ ಬಂದರ ಹದಿನೈದು ದಿನದಾಗ ನಿನ್ನ ಮ್ಯಾಲೆ ಏನಾದರೂ ಪ್ರಸಂಗ ತಂದು ನಿನ್ನ ಚಾನ್ಸಿಸ್ ಕಿತ್ತಿಗೋತಾನ. ನೀ ಇನೋಸೆಂಟ ಇದ್ದೀ. ನಿನಗ ಇನ್ನೂ ಡಿಪಾರ್ಟಮೆಂಟಿನ ಹಿಡಿತ ಗೊತ್ತಾಗಿಲ್ಲ.

---

೧. ಶೃಂಗಾರಿಕ ಹಾಡು

ನಾಳೇ ನೀ ಆ ರೂಲ್ಸಿನ ಪಾಯಿಲು ಸಂಜಿಗೆ ಮನಿಗೆ ಒಯ್ದು, ಮುಂಜಾನೆ ತಿರುಗಿ ತರತs ಬಾ. ನಿನಗ ಕೊಡೂದಿಲ್ಲಾ ಅಂದ ಅವರು ಅಂದರ ನನ್ನ ಕಡೆ ಬಾ; ಕೊಡಸತೇನಿ. ಆದರ ಬರೇ ಪರಾವಲಂಬನ ನಿಮ್ಮದು ಎಷ್ಟು ದಿವಸ ಸಾಗಬೇಕು?..... Before you burn you fingers, ಈ ವಿಚಾರ ಗೊತ್ತಿರಲಿ....' ಹೀಗೆನ್ನುತ್ತ ಸಾಹೇಬರು ಟಾಂಗಾ ಏರಿದರು. ಅವರನ್ನು ಕಳಿಸಲಿಕ್ಕೆ ರಾಘಪ್ಪನೂ ಸಹ ಟಾಂಗಾ ಏರಿದನು. ಕೃತಜ್ಞತೆಯಿಂದ ಕಿಟ್ಟಿಯ ಮನಸ್ಸು ಅರಳಿತು.

ಟಾಂಗಾ ಹೋದಮೇಲೆ ಕಿಟ್ಟಿ ಇನ್ನು ಮನೆಗೆ ಹೋಗಬೇಕೆಂಬ ವಿಚಾರದಲ್ಲಿದ್ದಾಗ, ತನ್ನ ಹಿಂಸೆಯಿಂದ 'ಹೋ' ಎಂದು ಕಿರಿಚಿದ ಬಾಲಕನು ಅವನ ಅಂಗಿಯನ್ನು ಜಗ್ಗಿ 'ಮಾಮೀ ಕರದಾಳ' ಎಂದನು.

'ಯಾ ಮಾಮೀ ?' – ಕಿಟ್ಟಿ ಕೇಳಿದ.

'ನಮ್ಮ ಮಾಮೀ.'

'ನೀ ಯಾರು ?'

'ನಾ ಭೀಮಸೇನ.'

ಕಿಟ್ಟಿಗೆ ಇಂಥ ಸಂವಾದದಿಂದ ಏನೂ ಫಲವಿಲ್ಲೆಂದು ಅನಿಸಿ, ಸುಮ್ಮನೆ ಭೀಮಸೇನನ ಕೈಯಲ್ಲಿ ಸಿಕ್ಕ ಬಕಾಸುರನಂತೆ, ಆ ಬಾಲಕನು ಕರೆದತ್ತ ಹೋದನು. ಬಾಲಕನು ನಡುಮನೆಯ ಕೋಣೆಯತ್ತ ಬೊಟ್ಟುಮಾಡಿ ತೋರಿಸಿ, 'ಅಲ್ಲಿ ಮಲಗ್ಯಾಳ ಮಾಮೀ' ಎಂದು ಹೇಳಿ ಓಡಿಹೋದನು. ರಾಘಪ್ಪನ ಹೆಂಡತಿ ಓಣಿಯಲ್ಲೆಲ್ಲ 'ಮಾಮಿ' ಎಂದೇ ಪರಿಚಿತಳಾಗಿದ್ದಳು. ಕಿಟ್ಟಿಗೆ ಭಯವೂ ಸಂಕೋಚವೂ ಆಯಿತು. ಆದರೆ ರಾಘಪ್ಪನ ಹೆಂಡತಿ ಬಲುದಿನಗಳಿಂದ ರಕ್ತಕ್ಷಯದಿಂದ ಬಳಲುತ್ತಿರುವಳೆಂದೂ ವರ್ಷದಲ್ಲಿ ಮೂರು–ನಾಲ್ಕು ತಿಂಗಳು ಹಾಸಿಗೆಯಲ್ಲೇ ಇರುತ್ತಾಳೆಂದೂ ಒಮ್ಮೆ ಹೇಳಿದ್ದು ನೆನಪಾಯಿತು. ಆದ್ದರಿಂದ ಸ್ವಲ್ಪ ಧೈರ್ಯ ತಳೆದು ಆ ಬಾಗಿಲತ್ತ ಸಾಗಿದನು. ಬಾಗಿಲ ಸಮೀಪ ಬಂದಾಗ ಈ ಸಂಭಾಷಣೆ ಅವನ ಕಿವಿಗೆ ಸ್ಪಷ್ಟವಾಗಿ ಕೇಳಿಸಿತು :

'ಮೆಹಬಕ್ಕಾ, ನೀ ತಂಗಿ, ನಾ ಅಕ್ಕಾ. ಈ ಕ್ರಿಯಾ[೧] ನೀ ಬಿಡಬ್ಯಾಡ. ನೀ ನನ್ನ ಪಾಲಿಗೆ ದೇವರು ಇದ್ದಂಗ !'

'ಅಕ್ಕಾ ಅವರs, ದೇವರು ನಮಗೂ ಮೆಚ್ಚಬೇಕ್ಕಲ್ಲರೆ !'

ಕಿಟ್ಟಿ ಅನುಮಾನಿಸುತ್ತಲೇ ಬಾಗಿಲ ಎದುರು ಬಂದನು. ಈಗಾಗಲೇ

೧. ಕೃತಜ್ಞತೆಯ ಆಸಕ್ತಿ.

ರಾತ್ರಿಯ ಹತ್ತು ಹೊಡೆದಿತ್ತು. ಅವನ ನೆರಳಿಗೆ ಮಹಬೂಬಜಾನ ಚಟ್ಟನೆ ಎದ್ದು ಒಂದು ಬದಿಗೆ ಸರಿದಳು. ಕಂದೀಲದ ಮಂದ್ರಪ್ರಕಾಶದಲ್ಲಿ ಹಾಸಿಗೆಯ ಮೇಲೆ ಸೋತು ಸಣ್ಣಾದ ಒಬ್ಬ ಮಧ್ಯವಯಸ್ಸಿನ ಹೆಣ್ಣು ಮಗಳು ಬಾಗಿ ಕುಳಿತುಕೊಂಡಿದ್ದಳು. ಸಣ್ಣನೆಯ ಉದ್ದ ಕುಂಕುಮ ಧರಿಸಿಕೊಂಡಿದ್ದಳು. ಮೈಬಣ್ಣ ನಿಂಬೆಯ ಹಣ್ಣು. ತನ್ನ ಈ ವಯಸ್ಸಿಗೆ ಹೆಚ್ಚು ವಯಸ್ಕಳಾಗಿ ಕಂಡರೂ ತನ್ನ ಹರಿಯದಲ್ಲಿ ಸುಂದರಿಯಾಗಿದ್ದಳೆಂದು ಸ್ಪಷ್ಟವಾಗಿ ಹೇಳಿಬಹುದಿತ್ತು. ವರ್ಷಾನುವರ್ಷ ಕೆಮ್ಮಿದುದರ ಚಿಹ್ನೆಗಳಂತೆ ಆಕೆಯ ಕೆನ್ನೆಗಳುಗದ್ದದ ಬದಿಗೆ ತುಸು ಜೋಲುಬಿದ್ದಿದ್ದವು. ಆದರೂ ಕಳೆಯುಳ್ಳ ಮುಖ. ಇವನತ್ತ ಮೆಲ್ಲನೆ ತಿರುಗಿ, ಯಾವ ಆಶ್ಚರ್ಯವನ್ನೂ ವ್ಯಕ್ತಗೊಳಿಸದೆ, ಮಂದಪ್ರಕಾಶದಲ್ಲಿ ದಿಟ್ಟಿಸಿ ನೋಡಲು ಯತ್ನಿಸದೆ, 'ಬಾ ಕಿಟ್ಟಣ್ಣಾ, ಬಾ' ಎಂದಳು. ಮೆಹಬೂಬಜಾನಳಿಗೆ, 'ಮೆಹಬಕ್ಕಾ, ಆ ಚಾಪಿ ಕೊಡತೀಯಾ?' ಎಂದಳು.

ಕಿಟ್ಟಿ ಚಾಪೆಯ ಮೇಲೆ ಕುಳಿತುಕೊಂಡನು. ಮೆಹಬೂಬಜಾನ ಎದ್ದು, 'ಬರತೀನಿ ಅಕ್ಕಾ ಅವರ, ಹತ್ತೂವರೆಗೆ ಗಾಡಿ ಐತಿ' ಎಂದಳು. ಮೆಹಬೂಬ ಜಾನಳದೊಂದು ನಿಯಮ. ರಾಘಪ್ಪನ ಮನೆಯಲ್ಲಿ ಮಲಗಿಕೊಳ್ಳುವದನ್ನು ಆದಷ್ಟು ಆಕೆ ತಪ್ಪಿಸುವಳು. ಕೇವಲ ನಿರುಪಾಯವಾದಾಗ ರಾಘಪ್ಪನಿಂದ ವಚನ ಪಡೆದು ಮಲಗಿಕೊಳ್ಳುವಳು.

ಚಂಪಕ್ಕ 'ತುಸು ಹಾಲು ತಗೊಂಡು ಹೋಗು .... !' ಎಂದೊಡನೆ ಮೆಹಬೂಬಜಾನ ಅಲ್ಲಿಯೇ ಕುಳಿತಳು. ಚಂಪಕ್ಕನ ನಿಶ್ಯಕ್ತತೆಯು ಆಕೆಯ ವಾಣಿಯಲ್ಲಿ ಅಧಿಕಾರವನ್ನು ತರುತ್ತಿತ್ತು. ಆಗ್ರಹ ಮಾಡುವ ಕೆಲಸ ಕೂಡ ಆ ಅಶಕ್ತ ಮೈಗೆ ಎಷ್ಟು ಕಠಿಣವೆಂಬುದು ನೋಡುವವರ ಕಣ್ಣಿಗೆ ತಕ್ಷಣ ಹೊಳೆದು ಅವರು ಇನ್ನೊಂದು ಮಾತಿಲ್ಲದೆ ಆಕೆಯ ಇಚ್ಛೆಯನ್ನು ಅಪ್ಪಣೆಯಂತೆ ನೆರವೇರಿಸುತ್ತಿದ್ದರು.

ಅಷ್ಟರಲ್ಲಿ ಬಾಗಿಲ ಎದುರಿಗೆ ಹಾಯ್ದು ಹೋಗುತ್ತಿದ್ದ ರತ್ನಾಳನ್ನು ಚಂಪಕ್ಕ ಕರೆದು, 'ರತ್ನಾ, ಪಡಸಾಲ್ಯಾಗಿನ ಗ್ಯಾಸಬತ್ತಿ[೧] ತಗೊಂಡು ಬಾ' ಎಂದಳು. ಗ್ಯಾಸು ಬಂದಿತು. ಹೊಸ್ತಿಲ ಬಳಿ ಗ್ಯಾಸನ್ನು ಇಟ್ಟು ರತ್ನಾ ಹೊರಗಿಂದ ಹೊರಗೆಯೇ ಜಾರಿದಳು.

'ನೀ ಇಷ್ಟು ಹುಡುಗ ಇದ್ದಾಗ ನೋಡಿದ್ದೆನಪಾ ನಿನ್ನ. ನಮ್ಮದೂ ನಿಮ್ಮದೂ

---

೧. ಪೆಟ್ರೋಮ್ಯಾಕ್ಸ್

ಮುರಗಡಿ ಆಗಿ ಈಗ ಹತ್ತು ವರ್ಷ ಆತ್ಯು. ಮುಖದರ್ಶನ ಸುದ್ದಾ ಇಲ್ಲದಾಂಗಾಗೇದ... ಆತ್ಯು. ಏನs ಆಗಲಿ, ದೊಡ್ಡವ ಆದ್ಯಪಾ !' ಎಂದು ಹೇಳಿ ಚಂಪಕ್ಕ ಮೆಹಬೂಬಜಾನಳಿಗೆ ಕಿಟ್ಟಿಯ ಸಂಬಂಧವನ್ನು ಹೇಳಿದಳು. ಮೆಹಬೂಬಜಾನಳೂ ಕುತೂಹಲದಿಂದ ನಡುನಡುವೆ ಪ್ರಶ್ನೆ ಹಾಕುತ್ತ ಎಲ್ಲ ಕೇಳಿಕೊಂಡಳು. ಈ ಪ್ರಶ್ನೆಗಳ ಮಧ್ಯದಲ್ಲಿ ಚಂಪಕ್ಕ ಕೆಲವು ಚಾಣಾಕ್ಷ ಪ್ರಶ್ನೆಗಳನ್ನು ಕೇಳಿ ಗಂಗವ್ವನ ಬಗ್ಗೆ ಕೆಲವು ವಿಷಯಗಳನ್ನು ತಿಳಿದುಕೊಂಡಳು. ಸುತ್ತು ಸುತ್ತು ಪ್ರಶ್ನೆಗಳನ್ನು ಹಾಕಿ ಗಂಗವ್ವನಲ್ಲಿ ತಮ್ಮ ಬಗ್ಗೆ ಇನ್ನೂ ದ್ವೇಷವಿದೆಯೋ, ಅದರ ಆಳವೆಷ್ಟು ಎಂಬುದನ್ನು ತಿಳಿಯಲು ಯತ್ನಿಸಿದಳು. ಕಿಟ್ಟಿಯ ತಂದೆಯು ಇರುವವರೆಗೆ ತಮ್ಮ ಹಾಗೂ ತನ್ನ ಪತಿಯ ಬಗ್ಗೆ ಎಷ್ಟು ಮಮತೆಯನ್ನು ಇಟ್ಟಿದ್ದನೆಂಬುದನ್ನು ರಸವತ್ತಾದ ಕತೆಗಳಲ್ಲಿ ಬಣ್ಣಿಸಿದಳು. ತನ್ನ ಬೇನೆಯ ವಿಷಯವನ್ನು ಕುರುಳು ಕರಗುವಂತೆ ಹೇಳಿದಳು. ಕಿಟ್ಟಿಯ ಮನಸ್ಸು ಈ ಸ್ತ್ರೀಯರ ಸಾಮೀಪ್ಯದಿಂದ ಕರಗಿದುದರ ಸಂದರ್ಭ ನೋಡಿಕೊಂಡು, ಚಂಪಕ್ಕ ಸಹಜವಾಗಿ ಹೇಳುವವರಂತೆ ಕಿಟ್ಟಿಗೆ ಒಂದು ಸಂಗತಿ ತಿಳಿಸಿದಿಳು.

'ಏನೋಪಾ, ಈ ಬ್ಯಾನ್ಯಾಗ ನಾನು ಇದ್ದೇನಂದ್ರೂ ಒಂದs, ಸತ್ತೇನಂದ್ರೂ ಒಂದs. ಇದ್ದೇನಿ ಅಂದ್ರ ನಿಮ್ಮಪ್ಪನ ಪುಣ್ಯಾದಿಂದ ಇದ್ದೇನಿ, ಸತ್ತೇನಿ ಅಂದ್ರ ನಿಮ್ಮವ್ವನ ಪಾಲಿಗೆ ಸತ್ತೇನಿ. ನಿಮ್ಮವ್ವ ನಮ್ಮ ಹೆಸರಿಗೆ ನೀರು ಹಾಕ್ಕೊಂಡಳು ಆಗ !'

ಮೆಹಬೂಬಜಾನಳು ಕನಿಕರದಿಂದ, 'ನಿಮ್ಮಂಥವರ ದಶಿಂದ ಇಷ್ಟು ದ್ವೇಷ ಹೆಂಗರೆ, ಅಕ್ಕಾ?' ಎಂದು ಕೇಳಿದಳು.

'ಮೆಹಬಕ್ಕಾ, ಎಲ್ಲಾನೂ ಒಂದೊಂದು ಕಾಲ. ಈಗ ನೀ ಯಾರು, ನಾನು ಯಾರು? – ಅಕ್ಕ ತಂಗೀ ಹಂಗೆ ಇದ್ದೇವಿ. ಅಂಥಾದ್ದು ರಕ್ತ ಸಂಬಂಧದಾಗ ಹಿಂಗ ಆಗತದ ನೋಡು. 'ಕಾಲಾಯ ತಸ್ಮೈ ನಮಃ' ಅಂತಾರ ಅದು ಇದಕ್ಕ. ಆದರ ಮೆಹಬಕ್ಕಾ, ಜಗಳಾಡಿದರ ರಕ್ತದ ಸಂಬಂಧ ಹೋಗತದೇನು? ನೂರು ವರ್ಷ ಹೋದರೂ ರಕ್ತ ರಕ್ತನs !'

ಇಂಥಾ ಉದಾರಿಗಳು ತನ್ನ ಪಾಲಿಗೆ ಸತ್ತರೆಂದು ನೀರು ಹಾಕಿಕೊಂಡ ತಾಯಿಯ ಮಗನಾದ ಬಗ್ಗೆ ಕಿಟ್ಟಿಗೆ ತುಸುವಾದರೂ ನಾಚಿಕೆ ಅನಿಸದಿರಲಿಲ್ಲ.

ಇಷ್ಟೊತ್ತಿಗೆ ರತ್ನಾ ಎರಡು ಕಪ್ಪು ಹಾಲು ಬಿಸಿಮಾಡಿಕೊಂಡು ಬಂದಳು. ಈ ಬಾರಿ ಒಳಗೆ ಬಾರದೆ ಆಕೆಗೆ ಗತ್ಯಂತರವಿಲ್ಲ. ಹೊಸ್ತಿಲ ಮೇಲೆ ಸಂಕೋಚ ಪಡುತ್ತ ನಿಂತ ಹದಿನೈದು ವರ್ಷದ ಎಳೆಯ ಅರೆತರುಣಿಯು ಕಿಟ್ಟಿಯ ಕಣ್ಣಿಗೆ

ಒಮ್ಮೆ ಮಾತ್ರ ಬಿದ್ದಳು. ತಾಯಿಯ ಲಾವಣ್ಯವು ಆಕೆಯಲ್ಲಿ ಇಮ್ಮಡಿಸಿ ಒಡಮೂಡಿತ್ತು. ಆಕೆ ಹಾಲನ್ನು ತಂದಿಟ್ಟಾಗ ಆಕೆಯ ತೆವಳು ಬೈತಲೆಯನ್ನು ಕಿಟ್ಟಿಯು ಆಸೆಯಿಂದ ನೋಡಿದನು.

ಮೂರು ತಾಸಿನ ಕೆಳಗೆ ಪ್ರಾಯಕ್ಕೆ ಬಂದ ಕಿಟ್ಟಿ ಇದೀಗ ಪ್ರೇಮಿಯೂ ಆದನು.

* * * *

# ೯ : ಗಂಗವ್ವನ ಅಚಾತುರ್ಯದ ಫಲ

ಹೋದ ಬಾರಿ ಗಂಗವ್ವ ದೇಸಾಯರ ಮನೆಗೆ ಬಂದಾಗ ಒಂದು ಅಚಾತುರ್ಯದ ಘಟನೆ ಆಗಿಹೋಯಿತು.

ಸಿಟ್ಟಿನ ಭರದಲ್ಲಿ ಹಣದ ಬಗ್ಗೆ ಗಂಗವ್ವನಾಡಿದ ಮಾತು ವಸಂತನ ಕಿವಿಗೆ ಬೀಳದಿರಲಿಲ್ಲ. ಅಂದು ವಸಂತರಾಯನಿಗೆ ಸಿನೇಮಾ ಭತ್ತೆ ದೊರಕದ್ದಕ್ಕಾಗಿ ಸಂಜೆಯೆಲ್ಲ ಮಿಡುಕಿ ಮಿಡುಕಿ ಪೇಚಾಟಪಟ್ಟಿದ್ದನು. ಇಷ್ಟು ಬಾರಿ ಸಿನೇಮಾಕ್ಕೆ ಹೋಗಿ ಅದರ ಕಾಯಂ ಗಿರಾಕಿಯಾಗಿದ್ದರೂ ಕೂಡ, ಅಂದೊಮ್ಮೆಯಾದರೂ ಆ ಗೇಟ್‌ಕೀಪರನು ಪುಕ್ಕಟೆಯಾಗಿ ಒಳಗೆ ಬಿಡಲು ಒಪ್ಪಲಿಲ್ಲ. ವಸಂತರಾಯ 'ಉದ್ರಿ!' ಎಂದು ಅಂಗಲಾಚಿದನು. ಅದಕ್ಕೂ ಪ್ರವೇಶ ದೊರಕಲಿಲ್ಲ. ಮೂರಾಣೆಗಾಗಿ ಅವನು ಎಂದೂ ಇಷ್ಟು ಹಿಂಸೆಪಟ್ಟಿರಲಿಲ್ಲ. ಇಂತು ಸಿನೇಮಾ ಥಿಯೇಟರವರೆಗೆ ಹೋಗಿ ಹಿಂದಿರುಗಬೇಕಾದ ಸಂಕಟದಲ್ಲಿ ಬಿದ್ದು ಕೆರಳಿದ ವಸಂತರಾಯನು ಮರುದಿನ ಗಂಗವ್ವನ ಮಾತಿನ ಗುಟ್ಟನ್ನು ಅರಿತೇಬಿಡಲು ನಿರ್ಧರಿಸಿದನು. ವಸಂತಮಾಸದಷ್ಟೇ ವಸಂತ ರಾಯನ ಚೇಷ್ಟೆಗಳು ವಿಚಿತ್ರವಾಗಿರುತ್ತಿದ್ದವು. ಮರುದಿನ ತಾಯಿಯ ಊಟ ಮುಗಿಯುವ ಹೊತ್ತಿಗೆ ಸರಿಯಾಗಿ ಎಲೆ-ಅಡಿಕೆಯ ಡಬ್ಬಿಯನ್ನು ಬಚ್ಚಿಟ್ಟನು. ಊಟ ಮುಗಿದಮೇಲೆ ವೇಣೂಬಾಯಿಗೆ ಎರಡು ಹಣ್ಣಾದ ಎಲೆ, ಒಂದು ಹಿಡಿ ಅಡಿಕೆ, ಇಷ್ಟು ಆಗದಿದ್ದರೆ 'ಊರ್ಧ್ವಂ ಪ್ರಾಣಾ ಹ್ಯುತ್ಕ್ರಾಮಂತಿ' ಆಗುತ್ತಿತ್ತು. ಚಡಪಡಿಸುತ್ತ ಆಕೆ ಮಾಡ ಮಾಡ ಹುಡುಕಾಡಿದಳು. ದೇಸಾಯರ ಮಲಗುವ ಸಮಯವಾದ್ದರಿಂದ ಹೆಚ್ಚು ಸಪ್ಪಳ ಮಾಡಲು ಆಸ್ಪದವಿರಲಿಲ್ಲ.

ಇಷ್ಟರಲ್ಲಿ ವಸಂತರಾಯನು ಅಟ್ಟ ಇಳಿದು ಬಂದು, 'ಅವ್ವಾ, ನಿನ್ನೆ ಗಂಗವ್ವ ಏನೋ ಅಂತಿದ್ದಳಲ್ಲಾ?' ಎಂದನು.

'ಏನು ಅಂತಿದ್ದಳು? – ಪಾಪ. ಮಗಾ, ಮಗಾ ಅಂತ ಸಣ್ಣಾಗಿ ಸಾಯ್ತದ ಪ್ರಾಣಿ !'

'ಅಲ್ಲಾಽ ಅವ್ವಾ, ರೊಕ್ಕದ ದಶಿಂದ !'

'ರೊಕ್ಕ ಎಲ್ಲೀದೋ?'

'ಮತ್ತ ನನ್ನ ಬೈಯಿಸಿ ಇಟ್ಟಳಲ್ಲಾ ! ಮನ್ಯಾಗಿನ ಖಾತೇದಾರ[೧] ಮಗಾ ಸಿನೇಮಾ ನೋಡಲಿಕ್ಕೆ ಮೂರು ಆಣೆ ಬೇಡಿದರ ಕೊಡೂಹಂಗಿಲ್ಲ. ಈ ಅಮ್ಮಗ ಮಾತ್ರ ಬೇಡಿದಾಗ ಹತ್ತು ರೂಪಾಯಿ, ಹದಿನೈದು ರೂಪಾಯಿ ! ಮನ್ಯಾಗ ಏನು ನಡೀತದ ನನಗ ಗೊತ್ತು ಇರಬಾರದೇನು ಹಂಗಾರ? ಬೇಕಬೇಕಾದವರಿಗೆ ದುಂದು, ಮನೀಮಂದಿಗೆ ಮಾತ್ರ ಪುಂಗಿ ! ನಾ ಏನು ಕೇಳೋ ಅಂವ ಅಲ್ಲ ನೋಡು –'

'ನಿನಗ ಯಾರ ಕೊಡೂದಿಲ್ಲ ಅಂತಾರೋ, ವಸಂತಣ್ಣಾ. ಅವರು ನಿನ್ನ ಹಿತಕ್ಕಪಾ ಹೇಳೋದು. ವಾರಕ್ಕ ಒಂದು ಸಿನೇಮಾ ನೋಡಪಾ. ಅದು ಬಿಟ್ಟು ದಿನಾ ಒಂದು ಅಂದರ ಹೆಂಗೋ? ನಿನ್ನ ಅಭ್ಯಾಸದ ಗತಿ ಏನು...?'

'ನನಗ ಸಿನೇಮಾ ನೋಡದಿದ್ದರ ತಲಿಸೂಲಿ ಏಳತದ. ತಲಿಸೂಲಿ ಬಂತಂದರ ಅಭ್ಯಾಸ ಆಗೋಣಿಲ್ಲ, ಮತ್ತ ನಪಾಸ ಆದೆ ಅಂದರ, 'ನೋಡು ಆ ಕಿಟ್ಟೀನ !' ಅಂತ ಕಿಟ್ಟೀ ಹೆಸರು ನನ್ನ ಕಿವ್ಯಾಗ ಕಿಟಿಕಿಟಿ ಮಾಡತೀರಿ. ಅವರನ ಕಂಡರ ನನ್ನ ಮೈ ಉರೀತದ. ಅದು ಹೋಗಲಿ ! ನನಗ ಕೊಡಬ್ಯಾಡ ರೊಕ್ಕಾ, ಅದರ ಮನೀ ರೊಕ್ಕ ಅವರಿಗೆ ಯಾಕ ಅನ್ನೋದು ನನಗ ಗೊತ್ತಿರಬೇಕೋ ಬ್ಯಾಡೋ? – ನಾ ಏನು ಸಣ್ಣ ಕೂಸೇನು?... ನಾ ಮನಿಗೆ ಹುಟ್ಟಿದ ಮಗಾ ಹೌದೋ ಅಲ್ಲೋ?.... ಹಿಂಗೆಲ್ಲಾ ಆದರ ನಾ ಅಚ್ಯುತಣ್ಣಗ ಪತ್ರಾ ಹಾಕಿ ತಿಳಿಸತೇನಿ ನೋಡು.'

'ಆಚ್ಯುತ ನಿನ್ನ ಹಂಗ ಅವಿವೇಕಿ ಇಲ್ಲಾ !.... ಅದೇನರ ಆಗಲಿ. ನಾ ಮೊದಲು ಎಲಿ ಹಾಕ್ಕೋತಿನಿ !' ಎಂದು ವೇಣೂಬಾಯಿ ಮಾತು ಮರೆಸುವದಕ್ಕಾಗಿ ಅಂದಳು.

'ನೀ ಏನು ಹಾಕ್ಕೋತಿದಿ, ಎಲಿ–ಅಡಿಕಿ ಡಬ್ಬಿ ನಾ ತಗದು ಇಟಗೊಂಡೇನಿ – ನೀ ಹೇಳು, ಅಂದರ ಕೊಡತೇನಿ.'

ವೇಣುಬಾಯಿಗೆ ಮಗನ ಈ ಪ್ರಚಂಡ ಉಪಾಯಗಳನ್ನು ನೋಡಿ ಕನಿಕರ ಬಂದಿತು. ಆಕೆ ಅಡಿಕೆಯನ್ನೂ ಬಿಡಬಹುದಾಗಿತ್ತು. ಆದರೆ ಇಂಥ ಲೀಲೆಗಳು, ತನ್ನ ಮಗನ ಭಾಷೆ, ಅವನ ವಿಚಾರದ ಉತ್ಕಟತೆಯ ಉದ್ಗಾರ, ಎಂಬುದು ಆಕೆಗೆ ಮನವರಿಕೆಯಾಯಿತು. ಒಂದು ಕ್ಷಣ ವಿಚಾರಮಾಡಿದರೆ ತನಗೆ ಗೊತ್ತಿದ್ದ ವಿಷಯದಲ್ಲಿ ಬಚ್ಚಿಡುವಂಥದು ಯಾವುದೂ ಇರಲಿಲ್ಲ. ಕನಿಷ್ಠ ಈ ಗುಟ್ಟು

---

೧. ಆಸ್ತಿಗೆ ಅಧಿಕಾರಿಯಾದ.

ತಿಳಿದಮೇಲಾದರೂ ಗಂಗವ್ವನ ಬಗ್ಗೆ ವಸಂತನಿಗೆ ಆದರ ಹುಟ್ಟಲಿ ಎಂಬ ಆಸೆಯಿಂದ ಆಕೆ ಬಾಯಿಬಿಚ್ಚಿದಳು.

'ವಸಂತಾ, ನೀ ಪ್ರಬುದ್ಧ ಆದಿ. ನಿನ್ನ ಎಲಿ–ಅಡಿಕಿ ನನಗ ಬ್ಯಾಡ. ಆದರ ನಿನ್ನ ದುಡ್ಡಿನ ಅಭಿಮಾನ ಹೋಗಲಿ ಅನ್ನೋ ಉದ್ದೇಶದಿಂದ ಈ ಮಾತು ಹೇಳತೇನಿ ಕೇಳು. ಗಂಗವ್ವ ಯಾರ ಮುಂದೂ ಆಡಬ್ಯಾಡ ಅಂದಿದ್ದಳು. ಆದರ ನೀ ಬ್ಯಾರೆ ಅಲ್ಲ, ನಾ ಬ್ಯಾರೆ ಅಲ್ಲ. ಮೇಲಾಗಿ ಹತ್ತು ವರ್ಷ ಆಗಿ ಹೋತ್ಯು, ಇನ್ನ ಹೇಳಲಿಕ್ಕೆ ಅಡ್ಡೀನೂ ಇಲ್ಲ. ಮುಖ್ಯ ದುಡ್ಡಿನ ಮ್ಯಾಲ ನಂಬಬ್ಯಾಡಪಾ. ಇಂದು ಇತ್ತು, ನಾಳೆ ಇಲ್ಲ. ಮನಶ್ಯಾರನ ಕಾಯಕೋ.'

'ಮೊದಲು ಹೇಳು ಏನು ಅನ್ನೋದನ್ನ...' ವಸಂತ ತಾಳ್ಮೆಗೆಟ್ಟು ಕೇಳಿದನು.

'ಗಂಗವ್ವನೂ ದೊಡ್ಡ ಮನೆತನದಾಕೆಪಾ. ಆಕಿ ಗಂಡ ಮುತ್ತಿನ ವ್ಯಾಪಾರ ಮಾಡ್ಯಾನ, ಬೆಲ್ಲದ ವ್ಯಾಪಾರ ಮಾಡ್ಯಾನ. ಒಂದs, ಎರಡs – ಏನೋ ತ್ರಾಸಿನ್ಯಾಗ ಸಿಕ್ಕಾ ; ಎಲ್ಲಾ ಲಿಲಾವ ಆಗಿ, ಇತ್ತೋ ಇಲ್ಲೊ ಆಗಿ ಹೋತ್ಯು. ಇಟ್ಟದ್ದು ಇಟ್ಟಲ್ಲೇ ಹೋತ್ಯು, ಕೊಟ್ಟದ್ದು ಕೊಟ್ಟಲ್ಲೇ ಹೋತ್ಯು. ಆರು ತಿಂಗಳದಾಗ ಅವನೂ ಹೊಟ್ಟಿಬ್ಯಾನಿ ಹಚಿಗೊಂಡು ಸತ್ತು. ಹೋದ ಆದರ ಗಂಗವ್ವ ಶ್ಯಾಣ್ಯಾಕಿ. ವ್ಯಾಪಾರದಾಗ ಅಂತ ಹೊಲಾಪಲಾ ಎಲ್ಲಾ ಮಾರಿಕೊಂಡಿದ್ದರು. ಅಂತs ಬೇಲೀಫ ತಲೆಬಾಗಿಲಿಗೆ ಬಂದುನಿಂತಾಗ ಗಂಡ ಘಾಬರ್ಯಾಗಿ ಕೂತ. ಆದರ ಗಂಗವ್ವ ಮನ್ಯಾಗಿನ ಸ್ವಲ್ಪ ಭಂಗಾರದದಾಗೀನ[೧] ಈ ಕಿಟ್ಟ್ಯಾನ ಕೈಯಾಗ ಕೊಟ್ಟು ಹಿತ್ತಲ ಬಾಗಿಲಲೇ ಹೊರಗೆ ಕಳಿಸಿ ತಿಪ್ಯಾಗ ಒಗಿಸಿದಳು. ಅದೂ ಆಗ ಎಂಟು ಒಂಬತ್ತು ವರ್ಷದ್ದು ಇತ್ತು. ಅವ ಹೆಂಗ ಒಯ್ದನೋ, ಎಲ್ಲಾರ ಕಣ್ಣತಪ್ಪಿ ಅದು ಹೆಂಗ ಉಳೀತೋ, ಅಂತೂ ಆದಷ್ಟು ಉಳೀತು. ಮುಂದೆ ಎಲ್ಲಾ ಹೋಗಿ ಗಂಡನೂ ಸತ್ತು ಹೋದಮ್ಯಾಲ ಅದನ್ನ ಹೊರಗ ತಗದು ರಾತ್ರೋರಾತ್ರಿ ನಮ್ಮಲ್ಲೇ ಬಂದು ಅದನ್ನ ಮಾರಿಸಿ ಬಂದ ಏಳೆಂಟು ನೂರು ರೂಪಾಯಿ ಇವರ ಕಡೆಗೆ ಇಟ್ಟಾಳ. ಬಡ್ಡಿಗೆ ಬಡ್ಡಿ ಕೂಡಿ ಈಗ ಸಾವಿರದ ಸನೇಕ್ಕ ಬಂದದ. ಬೇಕಾದಾಗ ಬಂದು ತನ್ನ ರೊಕ್ಕಾ ಒಯ್ತಾಳಪಾ ; ನಾವೇನೂ ಕೊಡೂದಿಲ್ಲ. ನಾವು ಕೊಡೋದು ಬರೇ ಎರಡು ಒಳ್ಳೇ ಮಾತು. ಅಷ್ಟಕ್ಕನs ನಮ್ಮ ಉಪಚಾರ – ಆಕಿ ಎಷ್ಟು ಹಿಡಿದಾಳ. ಈ ಗುಣಾ ನೀ ನೋಡಪಾ.'

'ಮತ್ತೆ ಕಿಟ್ಟ್ಯಾ ತಿಂಗಳಾ ರೂಪಾಯಿ ತಂದುಕೊಡತಾನೇನು ?'

---

೧. ಆಭರಣ.

'ಹೋದ ಸರೆ ಕಾಶೀಯಾತ್ರೆಗೆ ಜೋಡಿಗೆ ಬಂದಿದ್ದಳಲ್ಲ. ಆಗ ನಾವs ಕೈಖರ್ಚು ಮಾಡಿಕೊಂಡ ಹೋದಿವಿ ಅಂತ ಹೆಸರು ಆತ್ಯು. ಈಗ ಕಿಟ್ಟೀ ಕಡಿಂದ ತಿಂಗಳಾ ಅಷ್ಟಷ್ಟ ಕೊಡಿಸತಾಳ. ಅವಗೂ ರೊಕ್ಕ ಉಳಿಧಂಗ ಆತ್ಯು ಅಂಕ ಅಕೀ ಬೇತು.[೧] ಹಿಂಗ ಇರತದ ಬಡತನದಾಗಿನ ಪೇಚು. ಬರೆ ಹೊಟ್ಟೆಗೆ ಅನ್ನ ಒಂದು ಅದs ಅಂತ ಬಹಳ ಬಾಯಿ ಬಿಡಬಾರದು...!'

ಕಡೆಯ ಮಾತಿನಿಂದ ವಸಂತ ಮರ್ಮಾಹತನಾದನು. ತನ್ನ ಕೋಣೆಯಿಂದ ಎಲೆ–ಅಡಿಕೆಯ ಡಬ್ಬಿಯನ್ನು ತಂದು ತಾಯಿಯೆದುರು ಇಕ್ಕರಿಸಿದನು.

'ಬ್ಯಾಡ ಹೋಗು. ನೀನs ನಿನ್ನ ಎಲಿ ಹಕ್ಯೊ' ಎಂದಳು ತಾಯಿ.

ತಾಯಿಯ ಪಯಃಪಾನವನ್ನು ವಿಷವನ್ನಾಗಿ ಮಾಡಲಿಕ್ಕೆ ವಸಂತನಿಗೆ ಎರಡು ದಿನ ಬೇಕಾದವು.

ಅಂದೇ ರಾತ್ರಿ ವೇಣುಬಾಯಿ ಮಗನ ಪರಾಕ್ರಮವನ್ನೂ ಅದಕ್ಕೆ ತನ್ನ ಉತ್ತರವನ್ನೂ ಯಜಮಾನರಿಗೆ ಹೇಳಿದಳು. ಈ ಸುದ್ದಿಯನ್ನು ಕೇಳಿದೊಡನೆ ದೇಸಾಯರು ಮಗನ ಭವಿಷ್ಯತ್ತಿನ ಬಗ್ಗೆ ಚಿಂತಾಕ್ರಾಂತರಾದರು. ಇಂಥ ಹುಡುಗ ಹೀಗೆಯೇ ಬೆಳೆಯುತ್ತ, ಇನ್ನು ಎಲ್ಲಿಗೆ ಮುಟ್ಟುವನೋ ?.... ಹಿರಿಯ ಮಗ ಅಚ್ಯುತನ ಬಗ್ಗೆ ಅವರಿಗೆ ಚಿಂತೆ ಇದ್ದಿಲ್ಲ. ಅವನನ್ನು ಕಂಡು ಅವರು ಹಿರಿ ಹಿರಿ ಹಿಗ್ಗುತ್ತಿದ್ದರು. ಆದರೆ ವಸಂತರಾಯ ತಾನು ಕೆಡುವದಲ್ಲದೆ ಎಲ್ಲಕ್ಕೂ ಚಿಕ್ಕ ಮಗ ಪುರುಷೋತ್ತಮನನ್ನೂ ಎಲ್ಲಿ ತನ್ನ ಪಾಠದಿಂದ ಅಡ್ಡ ಹಾದಿಗೆ ಒಯ್ಯುವನೋ ಎಂಬುದು ಅವರ ಚಿಂತೆ.

ಹಾಗೆ ನೋಡಿದರೆ ದೇಸಾಯರಾದರೂ ತಮ್ಮ ವಯಸ್ಸಿನಲ್ಲಿ ತಮ್ಮ ತಂದೆಯೊಡನೆ ಸಾಕಷ್ಟು ಹೋರಾಟ ಮಾಡಿದ್ದರು. ಆದರೆ ವಸಂತನ ಕ್ಷುಲ್ಲಕತನವಿರಲಿಲ್ಲ ಅವರಲ್ಲಿ. ಅವರು ತಂದೆಯೊಡನೆ ಕಾದಿದ್ದು ಸಿನೇಮಾಕ್ಕೆ ಬೇಕಾಗುವ ಮೂರಾಣೆಗಾಗಿ ಅಲ್ಲ, ಆಸ್ತಿ ಉಳಿಸಿಕೊಳ್ಳುವುದಕ್ಕಾಗಿ. ಎಲ್ಲ ದೊಡ್ಡ ವತನದಾರರ ಮಕ್ಕಳೂ ಚಿಕ್ಕವಯಸ್ಸಿನಲ್ಲೇ ಆಸ್ತಿಪಾಸ್ತಿಯ ಬಗ್ಗೆ ಜಾಗೃತರಾಗುತ್ತಾರೆ. ಅವರೇ ದೊಡ್ಡವರಾದಮೇಲೆ ತಮ್ಮ ಮಕ್ಕಳಲ್ಲಿ ಹುಟ್ಟಿದ ಆಸ್ತಿಯ ಮೋಹ ಕಂಡು ಮರುಗುತ್ತಾರೆ. ಅದು ಆಸ್ತಿಯೊಡನೆ ಅಂಟಿಬರುವ ಶಾಪ!

ದೇಸಾಯುರು ಈ ಪ್ರಸಂಗವನ್ನು ಇನ್ನೊಂದು ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡರು. ಬಲುದಿನಗಳಿಂದ ಗಂಗವ್ವನ

---

೧. ಯೋಜನೆ

ನೊಗವನ್ನು ಕೆಳಗೆ ಇಳಿಸಬಯಸಿದ ದೇಸಾಯರಿಗೆ ಇದೊಂದು ನೆವ ದೊರಕಿದಂತೆ ಆಯಿತು. ಮರುದಿನವೇ ಗಂಗವ್ವನನ್ನು ಕರೆಕಳಿಸಿದರು. ಆಕೆಗೆ ಆದ ವರ್ತಮಾನವನ್ನೆಲ್ಲ ಸ್ಪಷ್ಟವಾಗಿ ಹೇಳಿದರು.

'ಇಕಾ, ನೀ ರೊಕ್ಕಾ ಇಟ್ಟಿದ್ದರ ಕಾಗದ ಇಲ್ಲ, ಪತ್ರ ಇಲ್ಲ. ನಮ್ಮದೂ ವಯಸ್ಸು ಆಗತಾ ಬಂತು. ನಮ್ಮ ಹಿರೇರ ಕಾಲಕ್ಕ ಇದ್ದ ನಾಮೆ[೧] ನಮ್ಮ ಕಾಲಕ್ಕ ಇಲ್ಲ, ನಮ್ಮ ಕಾಲಕ್ಕ ಇದ್ದದ್ದು ನಮ್ಮ ಮಕ್ಕಳ ಕಾಲಕ್ಕ ಇಲ್ಲ – ಹಿಂಗ ಲೋಕದ ರೂಢಿ ಇದs ಅದ. ನಿನ್ನ ಮಗನೂ ಈಗ ಬೇಕಾಧಾಂಗ ನೌಕರೀ ಮಾಡತಾನ. ನಾಳೆ ನಮ್ಮ ಕಡೆಗೂ ದುಡ್ಡು ಉಳಿದೀತು ಅನ್ನೋ ಭರವಸೆ ನನಗ ಇಲ್ಲ. ನಾಳೆ ನನ್ನ ಮಕ್ಕಳೂ ವಯಸ್ಸಿಗೆ ಬಂದರು... ಆ ವಿಷಯ ಬಿಡು... ಒಟ್ಟು, ದುಡ್ಡು ಅಶಾಶ್ವತ. ಪಟಕ್ಕನೆ ನಿನ್ನ ಋಣದಾಗ ಬಿದ್ದು ನಾ ಸಾಯಲಿಕ್ಕೆ ಒಲ್ಲೆ. ಇದ್ದ ಕೈಲೆ ನಿನ್ನದು ನಿನಗ ಮುಟ್ಟಿಸಿದರ ನನ್ನ ಎದೀ ಮ್ಯಾಲಿನ ಭಾರ ಇಳೀತದ' ಎಂದು ದೇಸಾಯರು ಸುದೀರ್ಘಭಾಷಣ ಮಾಡಿ ಆಗಿನ ಮಿತಿಯ ಲೆಕ್ಕವನ್ನು ಓದಿ ಹೇಳಿದರು.

ಆದರೆ ಗಂಗವ್ವನ ಮುಂದೆ ಅವರ ಆಟ ಸಾಗೀತೇ ? ಆಕೆಯ ಅಳುವು – ಆಕ್ರೋಶಗಳ ಮುಂದೆ ದೇಸಾಯರ ಖಂಡತುಂಡ ವಕ್ತವ್ಯದ ತುಂಡಖಂಡನವಾಗಿ ಹೋಯಿತು. ಕೊನೆಗೆ ದೇಸಾಯರು ಕನಿಷ್ಠ ಪಕ್ಷಕ್ಕೆ ಕಿಟ್ಟಿಯ ಕಿವಿಯ ಮೇಲೆ ಈ ಹಣದ ಸಂಗತಿಯನ್ನು ಇಡಬೇಕು, ಎಂದು ಅಂಗಲಾಚಿದರು. ಗಂಗವ್ವ ಅಷ್ಟಕ್ಕೂ ಹಿಂದೆ ಸರಿಯಲಿಲ್ಲ.

'ಮೊದಲs ಅವ ಖರ್ಚು ಹೆಚ್ಚು ಮಾಡಲಿಕ್ಕೆ ಹತ್ಯಾನ. ಒಂದಿಷ್ಟು ಹಿಂದೆ ಏನೂ ಇಲ್ಲ ಅಂತ ತಿಳಿದು ಅವ ಎರಡು ದುಡ್ಡು ಉಳಿಸಿಕೊಳ್ಳಲಿ, ಅಂತ ನನ್ನ ಹವ್ಯಾಸ. ಗೋಪಣ್ಣಾ, ಈ ಒಂದು ಸಾವಿರ ರೂಪಾಯಿ ಹೊರಗ ತಗದರ ಯಾತಕ್ಕ ಹತ್ಯಾವು ? – ಈ ಮುಚ್ಚಿದ ಮುಷ್ಟಿ ಮುಚ್ಚಿಧಂಗs ಇರಲಿ ಅವನ ತನಕಾ ಈ ಮಾತು ಹೋಗೋದs ಬ್ಯಾಡ...' ಎಂದು ದೇಸಾಯರನ್ನು ನಿರುತ್ತರರನ್ನಾಗಿ ಮಾಡಿದಳು.

ಕೊನೆಗೆ ಮನೆಗೆ ಬರುವಾಗ, 'ಯಾರು ಕೇಳಿದರೂ ನನ್ನ ಕಡೆಗೆ ಯಾರೂ ರೊಕ್ಕಾ ಇಟ್ಟೇ ಇಲ್ಲ ಅಂತs ಹೇಳು. ಇಷ್ಟು ನನ್ನ ಮಾತು ನಡಸು. ನಾ ಬಂದದ್ದು ನೋಡಿಕೋತೇನಿ' ಎಂದು ಬಜಾಯಿಸಿ ಗಂಗವ್ವ ಹೋದಳು.

---

೧. ವಿಶ್ವಾಸಿಗನೆಂಬ ಹೆಸರು.

ದೇಸಾಯರು ನಿಟ್ಟುಸಿರು ಬಿಡುತ್ತ ಮತ್ತೆ ಭಾರವನ್ನು ಹೊತ್ತರು.

* * *

ವಸಂತರಾಯನು ಮುಂದೆರಡು ದಿನಗಳಲ್ಲಿಯೇ ಮಾಮಲೇದಾರ ಕಚೇರಿಯ ಕ್ಯಾಂಟೀನದಲ್ಲಿ ಬೋಂಡಾ ಚಹಾ ಮುಗಿಸಿ, ಕಿಟ್ಟಿ ಕಚೇರಿಯೊಳಗಿಂದ ಹೊರಬೀಳುವ ಹಾದಿಯನ್ನೇ ಕಾಯುತ್ತ ಕಿಡಕಿಯೊಳಗಿಂದ ನೋಡುತ್ತ ಕುಳಿತಿದ್ದನು. ಮಾಮಲೇದಾರರು ಹೊರಟುಹೋದನಂತರ ಕಿಟ್ಟಿ ಹಾಗೂ ಇತರ ನಾಲ್ವರು ಕಾರಕೂನರು ಹೆಗಲ ಮೇಲೆ ಕೋಟು ಒಗೆದುಕೊಂಡು ಕ್ಯಾಂಟೀನದತ್ತೇ ನಗುತ್ತ ಕೆಲೆಯುತ್ತ ಬಂದರು. ಕಿಟ್ಟಿಯು ಎಲ್ಲರೊಡನೆ ಚಹಾ ಫರಾಳಗಳನ್ನು ಸೇವಿಸಿದನು. ಹಿಂದಿನ ಮೂಲೆಯಲ್ಲಿ ಎಲ್ಲವನ್ನೂ ನೋಡುತ್ತಾ ಕುಳಿತ ವಸಂತರಾಯ ಕಿಟ್ಟಿಯ ಕಣ್ಣಿಗೆ ಬೀಳಲಿಲ್ಲ. ಫರಾಳ ಮುಗಿಸಿದನಂತರ ಕಿಟ್ಟಿ ಒಬ್ಬನೇ ಮನೆಯತ್ತ ಸಾಗಿದೊಡನೆ ವಸಂತ ಅಡ್ಡಹಾದಿ ಬಿದ್ದು ಅವನಿಗೆ ಎದುರಾದನು.

'ಏನು ಸಾಹೇಬರು ! ಹಳೇ ಗುರುತಾ ಈಗ ಯಾಕ ಹಿಡಿದೀರಿ ?....'

ವಸಂತ ಹಾಗೂ ಕಿಟ್ಟಿಯ ದರ್ಶನ ಕಳೆದ ಒಂದು ತಿಂಗಳಿಂದ ಆಗಿರಲಿಲ್ಲ. ಅಲ್ಲದೆ ಅವನ ಬಿರುನುಡಿಯ ಅನುಭವ ಕಿಟ್ಟಿಗೆ ಇದ್ದೇ ಇತ್ತು. ಕಿಟ್ಟಿ ಯಾವಾಗಲೂ ಅವನೊಡನೆ ಸ್ನೇಹದಿಂದಲೇ ಮಾತಾಡುತ್ತಿದ್ದನು.

'ನೀವು ಬಹಾದ್ದೂರ ದೇಸಾಯರು. ಬಡವರ ಗುರುತಾ ಮರತರ ಮರತೀರೆಪಾ... ನಾವೇನು ಬಡವರs !'

'ಏ ಕಳ್ಳಾ, ಕಳ್ಳಾ, ಆ ಛಾದಂಗಡ್ಯಾಗ ಹಿಂದ ಕೂತವನ್ನ ನೀ ಮಾತಾಡಿಸಲಿಲ್ಲ. ಹೊರಳಿ ನೋಡಿದರ ಮಾತಾಡಬೇಕಾದೀತು ಅಂತ ಸೆಟೆದು ಮುಂಬರಕಿ ನೋಡಿಕೋತ ಕೂತುಗೊಂಡಿ... ಆಗಲಿ, ಸಾಹೇಬ ಆಗ್ಯಾನ, ಕಚೇರ್‍ಯಾಗ ಯಾಕ ಇವನ ಚಂಡಿಕಿ ಹಿಡೀಬೇಕೂ ಅಂತ ನಾ ಸಮ್ಮನ ಇದ್ದೆ... ಅಲ್ಲೋ ಕಿಟ್ಟ್ಯಾ, ಅಂತೂ ಸಾಹೇಬಿಕಿ ಜೋರ ಇಟ್ಟೀ ಬಿಡು. ಏನೊ ನೀ ಚಹಾ ಕುಡಿಯೂದಿಲ್ಲಂತ, ಫರಾಳ ತಿನ್ನೋದಿಲ್ಲಂತ, ಸಿನೇಮಾ ನೋಡೋದಿಲ್ಲಂತ, ಭೃಗುಋಷಿ ಇದ್ದಹಂಗ ಇದ್ದೀಯಂತ, ನಮ್ಮಪ್ಪ ವರ್ಣನಾ ಮಾಡತಿರತಾನ. ಅಂತೂ ಕಳ್ಳಬೆಕ್ಕಿನ ಹಂಗ ಒಳಗಿಂದೊಳಗs ಎಲ್ಲಾ ಇಟ್ಟೀ ಅನ್ನು !'

'ಏ ವಸಂತಾ, ನಿನ್ನ ಹಂಗ ಮನ್ಯಾಗ ಕಾಲು ಚಾಚಿಗೊಂಡು ಉತ್ತನ್ನ ಉಣ್ಣೋಹಂಗ ಇದ್ದರ ಇವು ಯಾವೂ ಬ್ಯಾಡ ಆಗತಿದ್ದವೊ ! ಹೊಟ್ಟೀ ಉದ್ಯೋಗ ಹಣ್ಣು ಮಾಡತದ, ಇಲ್ಲದವರಿಗೂ ಚಟಾ ಹಚ್ಚತದ.'

'ನಿನಿಗೇನಾಗೇದೋ ಕಳ್ಳಬೆಳ್ಳಕ್ಕಿಹಂಗ ಒಳಂಗಿದೊಳಗs ದುಡ್ಡು ಮಾಡಿಕೊಂಡು !... ನಿಮ್ಮವ್ವ ಇಷ್ಟು ಗಂಟು ಮಾಡ್ಯಾಳ, ನೀ ಘಳಿಸತೀದಿ, ನಾಳೆ ಸಾಹೇಬ ಆಗೋ ಆತ. ಬಿಡಪ್ಪಾ, ಈ ನರಗುಂದ ಬಂಡಾಯದ ಕಾಲದ ಕೋಟು. ತಗೀ ಆ ಸುಜಾ ಉದ್ದೌಲಾನ ಮೀಶೀನ. ಸಾಹೇಬ ಆದರೂ ದೇಶಾವರೀ ಕಳೆ ಹೋಗಿಲ್ಲ ನೋಡು... !'

'ಅದು ಎಲ್ಲಿ ಹೋಗಬೇಕು ; ಅದು ಹಿರೇರ ಕೊಟ್ಟ ಆಸ್ತಿ...' ಕಿಟ್ಟಿ ಅವಮಾನದ ಒಳಗೇ ಮಾನಭಾವಿತನವನ್ನು ತೋರಲು ಯತ್ನಿಸಿದನು.

'ಏ, ಏನು, ಏನು ಹೇಳತೀಯೋ... !'

ಹೇಳಬೇಕಾದದ್ದೆಲ್ಲಾ ಹೇಳಲ್ಪಟ್ಟಿತು.

* * *

ಕಿಟ್ಟಿ ವಸಂತನಿಂದ ಅಗಲಿದಾಗ, ಒಮ್ಮೆಲೇ ಮನೆಗೆ ಹೋಗಿ ತಾಯಿಯನ್ನು ಪ್ರಶ್ನಿಸಬೇಕೆಂದು ಉತ್ಕಟ ಆಸೆಯಾಯಿತು. ಆದರೆ ಮನೆ ಸಮೀಪ ಬಂದಂತೆ ಕಿಟ್ಟಿ ತನ್ನ ನಿರ್ಧಾರ ಬದಲಿಸಿದನು. ಹೋದ ಬಾರಿ 'ಹುಕುಂ ಎಕ್ಕಾ' ಮುಚ್ಚಿ ಇಟ್ಟುಕೊಂಡು ತಾಯಿಯನ್ನು ಬಗ್ಗುಬಡಿದಂತೆ ಈ ಬಾರಿಯೂ ಮಾಡಬೇಕೆಂದು ನೆನೆಸಿ, ಇದರ ಬಗ್ಗೆ ಮನೆಯಲ್ಲಿ ಚಕಾರಶಬ್ದ ತೆಗೆಯಲಿಲ್ಲ. ಆದರೆ ಅಂದಿನ ಅನುಭವವು ಕಿಟ್ಟಿಯ ಮೈಯಲ್ಲಿ ರಸಾಯನವಾಗಿ ತಿಂಗಳುಗಳವರೆಗೆ ಹಬ್ಬಿಕೊಂಡು ಅನೇಕ ಚಿಕ್ಕಪುಟ್ಟ ಬದಲಾವಣೆಗಳನ್ನು ಮಾಡಿತು. ಏನು ಆದರೂ ಬೆನ್ನಿಗೆ ಒಂದಿಷ್ಟು ಆಸರೆ ಇದೆಯೆಂಬ ಧೈರ್ಯವು ಅವನ ಹುರಿಗೊಂಡ ಸ್ನಾಯುಗಳನ್ನು ತುಸು ಸಡಿಲಿಸಿತು. ಮಾಮಲೇದಾರರ ಉಪದೇಶದಂತೆ ಅವನು ಸಂಕಟಪಡುತ್ತ ಕಾಯದೆ ಪುಸ್ತಕಗಳನ್ನು ತಿರುವಿಹಾಕಿದ್ದನು. ಆದರೆ ಅತ್ಯಾತುರದ ಮೂಲಕ ಅದರಲ್ಲಿ ತಿಳಿಯದ ಅನೇಕ ಸಂಗತಿಗಳು ಈಗ ಹೊಸಶಮನದಲ್ಲಿ ಸ್ಪಷ್ಟವಾಗಿ ತಿಳಿಯತೊಡಗಿ, ಅವನ ನಡತೆಯಲ್ಲಿ ತುಸು ಗಂಭೀರತೆ ಒಡಮೂಡಿತು. ಗುಪ್ತಧನದ ಬೆಂಬಲವಿದೆಯೆಂಬ ಧೈರ್ಯದಲ್ಲಿ ಕಚೇರಿಯಲ್ಲಿ ಆತ್ಮವಿಶ್ವಾಸದಿಂದ ಕೆಲಸ ಮಾಡತೊಡಗಿದನು. ಎಲ್ಲರನ್ನೂ ಸಂತೋಷಗೊಳಿಸಬೇಕೆಂಬ ತವಕ ಕಡಿಮೆಯಾಗಿ ಆತ್ಮಪ್ರತಿಷ್ಠೆ ಹೆರವರಿಗೆ ತಿಳಿಯದ ಪ್ರಮಾಣದಲ್ಲಿ ಬಂದಿತು. ಎಲ್ಲವನ್ನೂ ತಿಳಿದುಕೊಳ್ಳುವ ಚಪಲ ಕಡಿಮೆಯಾದ ಮೂಲಕ ಮನಸ್ಸಿನಲ್ಲಿಯ ಗೊಂದಲ ಮರೆಯಾಗಿ ಚಿಕ್ಕ ಸಂಗತಿಗಳ ಮೇಲಿನ ಪ್ರಭುತ್ವ ಹೆಚ್ಚಾಯಿತು. ಹಣದ ಚೀಲದ ದಾರಗಳು ಹೆಚ್ಚು ಸಡಿಲಾದವು. ತುಸುವೆ ಮೈ ಬಂದಿತು. ಕಣ್ಣುಗಳು ರಜೋಗುಣದ ಆರಕ್ತತೆಯನ್ನು ಪಡೆದವು. ಕೆಸಲದಲ್ಲಿ ಯಾಂತ್ರಿಕ ಸುಗಮತೆ ಬಂದಿತು.

# ೧೦ : ಮನೆಮುರುಕ ಬಾಳುವೆ

ಬಿಂದಗೋಳ ರಾಘಪ್ಪನು ಎಂದಿನಿಂದಲೂ 'ರಾಘೋಬಾ ಭರಾರಿ' ಎಂಬ ಉಪನಾಮವನ್ನು ಪಡೆದಿದ್ದನು. ಆ ಉಪನಾಮದ ಬಗ್ಗೆ ಅವನಿಗೆ ಅಭಿಮಾನವೂ ಇದ್ದಿತು. ಅವರ ಕೀರ್ತಿ ಅನೇಕಮುಖವಾಗಿತ್ತು. ಹತ್ತನೆಯ ವರ್ಷದಲ್ಲಿಯೇ, ಗಾಂಧೀಜಿಯವರು ಇನ್ನೂ ಚಿಕ್ಕವರಿದ್ದಾಗಲೇ, ರಾಘಪ್ಪನು ಸತ್ಯಾಗ್ರಹದ ಮಂತ್ರವನ್ನು ಕಲಿತದ್ದು. ತನ್ನ ನಾಲ್ವರು ಚಿಕ್ಕ ಸ್ನೇಹಿತರೊಂದಿಗೆ ಒಂದು ಬೇಕರಿಯ ಎದುರು ಹೋಗಿ ನಿಂತುಗೊಂಡು 'ಬ್ರೆಡ್ ಬೇಕರಿss' ಎಂದು ಒಂದು ತಾಸು ಮೇಳಗೀತವನ್ನು ಹಾಡಿದನು. ಬೇಕರಿಯವನು ಆ ಕಲಕಲರವಕ್ಕೆ ಬೇಸತ್ತು ಒಂದು ಬ್ರೆಡ್ಡನ್ನು ಅವರಿಗೆ ಕೊಟ್ಟು ನಮಸ್ಕಾರ ಮಾಡಿ, ಇನ್ನೊಮ್ಮೆ ಬಾರದಿರಲು ಬೇಡಿಕೊಂಡಿದ್ದನು. ಹನ್ನೆರಡನೆಯ ವರ್ಷಕ್ಕೆ ಅಪ್ಪನ ಪಾಕೀಟಿನೊಳಗಿಂದ ಐದು ರೂಪಾಯಿಯ ನೋಟನ್ನು ಚಷ್ಕಮಾಡಿ ತನ್ನ ಜೀವನದ ಒಂದು ಮಟ್ಟವನ್ನು ಮುಟ್ಟಿದ್ದನು. ನಾಲ್ವತ್ತು ವರ್ಷ ವಯಸ್ಸಾಗುವವರೆಗೆ ಹೋಳೀ ಹುಣ್ಣಿಮೆಯ ಚಟುವಟಿಕೆಗಳಲ್ಲಿ ಅವನ ಪುಢಾಕಾರವಿರುತ್ತಿತ್ತು. ಔಟಾಗದ ಬ್ಯಾಟ್‌ಗಾರನು ರಿಟಾಯರ್ ಆಗುವಂತೆ ಕಳೆದ ಹತ್ತುಹನ್ನೆರಡು ವರ್ಷಗಳಲ್ಲಿ ಗಾರ್ದಭಾರೋಹಣದ ದೀಕ್ಷೆಯನ್ನು ಉಳಿದವರಿಗೆ ಒಪ್ಪಿಸಿದ್ದು. ಆದರೂ ಮುಂದೆ ನಾಲ್ಕು ವರ್ಷ ತರುಣರು ತಮ್ಮ ಕಾರ್ಯಕ್ರಮಗಳಿಗಾಗಿ 'ಧುರ್ಯೇಣ ದಮ್ಯಃ ಸದೃಶಂ' ಎಂಬಂತೆ ಸಲಹೆಸೂಚನೆಗಳನ್ನು ರಾಘಪ್ಪನಿಂದ ಪಡೆಯುತ್ತಿದ್ದರು.

ನಿಸರ್ಗದ ಖಾಸ ಮಗನಾದ ರಾಘಪ್ಪನಿಗೆ ಯಾತರದೂ ಕೊರತೆ ಇರಲಿಲ್ಲ. ಅವನು ಬಿಂದಗೋಳದಲ್ಲಿ ಇದ್ದ ಎಂಟು ವರ್ಷಗಳಲ್ಲಿ ಆ ಗ್ರಾಮಕ್ಕೇ ಮುಂದಾಳಾಗಿದ್ದನು. ರೈತರು ಅವನಿಗೆ ಹೆದರಿ ಲಾವಣಿಯಲ್ಲಿ ಸೂಟು ಕೂಡ ಬೇಡುತ್ತಿರಲಿಲ್ಲ. ಬೇಡಿದರೆ ಅವರ ಅಣ್ಣ ತಮ್ಮಂದಿರಲ್ಲಿ ಜಗಳಾಟ ಹುಟ್ಟಿಸಬಲ್ಲವೆಂದು ಅವನ ಖ್ಯಾತಿ ಇದ್ದಿತು. ಒಕ್ಕಲತನ ಕೆಲವು ದಿನ ಮಾಡಿದರೆ ಊರಿನ ದೊಡ್ಡ ರೈತರು ನೋಡಿ ನಾಚುವಂಥ ಎತ್ತುಗಳನ್ನು ಕಟ್ಟಿದ್ದನು. ಅದರಿಂದ ಉತ್ಪನ್ನವನ್ನೂ ಹಾಗೆಯೇ ತೆಗೆದನು. ಕೆಲದಿನ ಜೇನು ಸಾಕುವ, ಕೋಳಿ ಸಾಕುವ ವಿಷಯಗಳನ್ನೂ ಮಾಡಿ ನೋಡಿದ್ದನು. ಇವನು ಸಾಲ ಕೇಳಹೋದರೆ ಇಲ್ಲವೆಂದು ಹೇಳುವ

ಎದೆಗಾರಿಕೆ ಊರಲ್ಲಿ ಯಾರಲ್ಲಿಯೂ ಇರಲಿಲ್ಲ. ಬಣಿವೆಗಳ ದಹನವು ಎಲ್ಲರಿಗಿಂತ ಅರ್ಧತಾಸು ಮುಂಚಿತವಾಗಿ ರಾಘಪ್ಪನಿಗೆ ಗೊತ್ತಿರುತ್ತಿತ್ತು. ಊರಲ್ಲಿ ಇಲ್ಲದ ನ್ಯಾಯವನ್ನು ಹುಟ್ಟಿಸಿ, ಕೋರ್ಟುಕಚೇರಿ ಎಂದು ಜನರನ್ನು ಎಡತಾಕಿಸಿ, ಒಮ್ಮೆ ಹೊರಗೆ ಬಿದ್ದನೆಂದರೆ ಐದಾರು ರೂಪಾಯಿಗಳಿಲ್ಲದೆ ಅವನು ಮನೆಗೆ ಮರಳುತ್ತಿರಲಿಲ್ಲ. ಆದರೆ ಈ ಎಲ್ಲ ಗೊಂದಲಗಳಲ್ಲಿ ಊರ ಹೊರಗಿನ ಹನುಮಪ್ಪನಂತೆ ರಾಘಪ್ಪನು ಸಾಕ್ಷೀಭೂತನಾದರೂ ನಿರ್ಲಿಪ್ತನಾಗಿದ್ದನು.

ಇದೀಗ ಮತ್ತೆ ಅವನು ಧಾರವಾಡಕ್ಕೆ ಬಂದಮೇಲೆ ಬಿಂದಗೋಳವು ಶಾಂತಿಯಿಂದ ನಿದ್ರೆಮಾಡತೊಡಗಿತ್ತು. ಧಾರವಾಡದಲ್ಲಿ ರಾಘಪ್ಪ ಹೊಸ ಧಂದೆ ಹೂಡಿದ್ದನು. ದೊಡ್ಡವರ ಸ್ನೇಹ ! ಕುದುರೆ ಕಟ್ಟಿದರೆ ಅತ್ಯುತ್ತಮ ಕುದುರೆ, ಹೊಲ ಮಾಡಿದರೆ ಒಳ್ಳೆಯ ಒಕ್ಕಲತನ, ದನ ಕಟ್ಟಿದರೆ ಪ್ರದರ್ಶನಕ್ಕೆ ನಿಲ್ಲಿಸುವ ದನ, ಹೀಗೆ ಎಲ್ಲದರಲ್ಲೂ ಯಶಸ್ವಿಯಾದ ರಾಘಪ್ಪನು ಈ ಹೊಸ ಆಟದಲ್ಲಿಯೂ ಒಂದೇ ವರ್ಷದಲ್ಲಿ ಮುಂದಾದನು. ದೊಡ್ಡವರ ವಶೀಲಿಯ ಮೂಲಾಧಾರನಾಗತೊಡಗಿದ್ದನು.

ಅವನು ಹಾಗು ಮೆಹಬೂಬಜಾನಳ ಸಂಬಂಧವುಂಟಾಗಿ ಈಗ ಹನ್ನೆರಡು ಹದಿನಾಲ್ಕು ವರ್ಷಗಳಾಗಿರಬಹುದು. ಮೊದಮೊದಲು ಗುರುತಿದ್ದುದು ಬೇಗನೆ ಅನ್ಯೋನ್ಯಸ್ನೇಹವಾಗಿತ್ತು. ಪ್ರಥಮ ಮೂರುನಾಲ್ಕು ವರ್ಷ ಈ ವ್ಯವಹಾರ ಗೌಪ್ಯವಾಗಿತ್ತು. ಆದರೆ ಕೊನೆಗೊಮ್ಮೆ ಸ್ಫೋಟಗೊಂಡಿತು. ಬಿಂದಗೋಳದಲ್ಲಿ ಒಮ್ಮೆ ಮನೆಯಲ್ಲಿಯ ತುಸುಬಂಗಾರ ಮಾಯವಾಯಿತು. ರಾಘಪ್ಪ 'ಕಳವಾಯಿತು' ಎಂದು ತಪಾಸಣಿ ಸುರುವು ಮಾಡಿದನು. ಊರಲ್ಲೆಲ್ಲ ಗದ್ದಲವೇಳಲಾಗಿ ಅದೇ ಓಣಿಯ ಮುಪ್ಪಿನ ಮುದುಕ ಲಿಂಗಯ್ಯನು ತನ್ನ ಮಕ್ಕಳ ಮಾತು ಮೀರಿ ಚಂಪಕ್ಕನ ಬಳಿಗೆ ಬಂದು, 'ಮಗಳs, ನಾ ಒಂದು ಮಾತು ನಿನ್ನ ಸುಕಕ್ಕ ಹೇಳತೇನು. ಗೌಡರು ಕೋರ್ಟು–ಕಚೇರಿ ಅಂತ ಹುಬ್ಬಳ್ಳಿ ಅಡ್ಡ್ಯಾಡಿ ಬರತಾರು, ಅಲ್ಲೇ ಅಡ್ಡ ಹಾದಿ ಬಿದ್ದಾರು. ದಾಗೀಣು ಮತ್ತೆಲ್ಲೂ ಹೋಗಿಲ್ಲ. ಒಯ್ದವರೂ ತಾವs, ಹುಡುಕೋ ಅವರೂ ತಾವs. ನೀ ಹುಶಾರಾಗಿ ಬಾಳೆ ಮಾಡು...' ಎಂದು ಹೇಳಿಹೋದನು.

ಮುಂದಿನ ಮೂರು ವರ್ಷಗಳವರೆಗೆ ಚಂಪಕ್ಕನು ಹುಶಾರಾಗಿ ಬಾಳ್ವೆ ಮಾಡಲಿಲ್ಲ. ಮನೆಯನ್ನು ಅಸಾಧ್ಯ ಗೃಹಕಲಹದಿಂದ ತುಂಬಿಬಿಟ್ಟಳು. ಒಮ್ಮೆ ತನ್ನ ಮಕ್ಕಳನ್ನು ಕಟ್ಟಿಕೊಂಡು ತಮ್ಮನ ಮನೆಗೆ ನಾಲ್ಕು ತಿಂಗಳು ಇದ್ದು ಬಂದಳು. ತಮ್ಮನಾದರೋ ಕೊನೆಗೆ ಚಂಪಕ್ಕನಿಗೆ ಬುದ್ಧಿ ಹೇಳಿ ತಿರುಗಿ ಕಳಿಸಿಕೊಟ್ಟನು.

ರಾಘಪ್ಪನಿಗೆ ಬುದ್ಧಿ ಹೇಳುವ ಧೈರ್ಯ ಬಿಂದಗೋಳದಲ್ಲಿ ಯಾರಿಗೂ ಇರಲಿಲ್ಲ. ಒಮ್ಮೆ ಬಂಗಾರವನ್ನೆಲ್ಲ ಒಂದು ಟ್ರಂಕಿನಲ್ಲಿ ಹಾಕಿ, ತನ್ನ ಹೆಣ ಬಿದ್ದರೂ ಕೀಲಿಕೈ ಕೊಡಬಾರದೆಂದು ನಿರ್ಧರಿಸಿಕೊಂಡು, ಟ್ರಂಕಿನೊಡನೆ ದೇವರ ಕೋಣೆಯನ್ನು ಸೇರಿ ಚಂಪಕ್ಕ ಕುಳಿತುಕೊಂಡಳು. ಆದರೆ ಪತಿ ಬಂದು ಇನ್ನೊಂದು ಮಾತಿಲ್ಲದೆ ಕೆನ್ನೆಗೆ ಒಂದು ಏರಿಸಿದೊಡನೆ ಅವನ ನಿರ್ಧಾರವೆಲ್ಲ ಕರಗಿಹೋಯಿತು. ಆಕೆ ಕಾಲುಬಿದ್ದಳು, ಉಪವಾಸ ಬಿದ್ದಳು, ಪ್ರೀತಿಯ ಮಗಳನ್ನು ಕಾಲಿಗೆಹಾಕಿದಳು. ಅದೆಲ್ಲಕ್ಕೂ ರಾಘಪ್ಪನ ಉತ್ತರ ಒಂದೇ : 'ನಾ ಘಳಿಸತೇನು ; ಖರ್ಚು ಮಾಡತೇನಿ. ನಿಮ್ಮ ಅನ್ನ–ವಸ್ತ್ರಕ್ಕ ಕಡಿಮೆ ಆದ ದಿನ ಬಿಂದಗೋಳ ಚಾವಡೀ ಮುಂದ ನಿಂತು ಕಿವಿ ಮೂಗು ಕೊಯ್ಸಿಗೋತೀನಿ. ಗಂಡಸದ ವ್ಯವಹಾರದಾಗ ನಿಮಗ್ಯಾಕ ಕಿಸಬಾಯಿ....?' ಈ ಮಾತನ್ನೇ ಇದುವರೆಗೆ ರಾಘಪ್ಪ ನಡೆಸಿಕೊಂಡು ಬಂದನು. ಅವನು ದುಂದುಮಾಡಿದರೂ ಹಾಳಾಗಲಿಲ್ಲ. 'ನಾಕು ಹೆಜ್ಜೆ ನಡೆದರ ಸಾಕು ನಾಕು ರೂಪಾಯಿ ಕಿಸೆಗೆ ಹಾಕಿಕೊಂಡು ಬರತೇನಿ' ಎಂದು ಅವನು ಹೇಳುವದು ಅಕ್ಷರಶಃ ನಿಜವಿರುತ್ತಿತ್ತು. ಅವನು ಎಂದಿಗೂ ಅನ್ನಕ್ಕೆ ಕಡಿಮೆ ಮಾಡಿಕೊಳ್ಳಲಿಲ್ಲ. ಎಂದಿಗೂ ಹರಕು ಅರಿವೆ ಉಡಲಿಲ್ಲ, ಮನೆಯ ಮಂದಿಗೂ ಉಡುಗೊಡಲಿಲ್ಲ. ಒಮ್ಮೆ ಹಣ ಕಳಕೊಂಡರೆ, ಇನ್ನೊಮ್ಮೆ ಇಸ್ಪೀಟು ಆಡಿಯಾಗಲಿ, ಕೋರ್ಟು ಕಚೇರಿಯಲ್ಲಿ ಮಧ್ಯಸ್ಥಿಕೆ ವಹಿಸಿಯಾಗಲಿ, ಮೋಸಮಾಡಿಯಾಗಲಿ, ಮನೆಗೆ ಹಣ ತರವನು.

ಅಂತೂ ಇಷ್ಟೆಲ್ಲ ಆದರೂ ಚಂಪಕ್ಕ ತನ್ನ ಗಂಡನಂಥ ಗಂಡನೇ ಜಗತ್ತಿನಲ್ಲಿಲ್ಲವೆಂಬ ನಿರ್ಣಯಕ್ಕೆ ಬಂದು, ಮೌನವನು ತಳೆದಳು. ನಾಲ್ಕು ಜನರ ಎದುರಿಗೆ ತಾನು ಗಂಡನ ದೂರು ಹೇಳಿಕೊಂಡದ್ದು ಕೊನೆಗೆ ತನ್ನ ಅಭಿಮಾನಕ್ಕೇ ತಾಗತೊಡಗಿದ್ದರಿಂದ ಆಕೆ ಒಮ್ಮೆ ಮನೆ ಸೇರಿದವರು ಒಂದು ವರ್ಷ ಮನೆಯ ಹೊರಕ್ಕೇ ಕಾಲಿಡಲಿಲ್ಲ.

ಆದರೆ ಒಂದೆರಡ ವರ್ಷಗಳಲ್ಲಿ ಆಕೆಯ ತಮ್ಮನಿಗೆ ಹುಬ್ಬಳ್ಳಿಗೆ ವರ್ಗವಾಯಿತು. ಆಗ ತಾನು ಸೋತು ಗೆದ್ದ ತನ್ನ ಪತಿಯನ್ನು ತನ್ನಿಂದ ಸೆಳೆದೊಯ್ಯಬಲ್ಲ ಈ ರಂಭೆಯನ್ನು ಒಮ್ಮೆ ಕಣ್ಣಿಂದ ಕಾಣಬೇಕೆಂಬ ಇಚ್ಛೆ ಬಲವಾಯಿತು. ಒಮ್ಮೆ ಹುಬ್ಬಳ್ಳಿಗೆ ಬಂದು, ತಮ್ಮನ ಮನೆಯಲ್ಲಿ ನಿಂತು, ಮೆಹಬೂಬಜಾನಳ ಮನೆಯ ಪತ್ತೆ ತೆಗೆದಳು. ಒಂದು ದಿನ ಮಧ್ಯಾಹ್ನ ತನ್ನ ಮಗಳನ್ನು ಕರೆದುಕೊಂಡು ಮೆಹಬೂಬಜಾನಳ ಮನೆಗೆ ಬಂದಳು. ಅಲ್ಲಿ ಮಗಳನ್ನು ಆಕೆಯ ಕಾಲಿಗೆ ಹಾಕಿ, ತಾನೂ ಸೆರಗೊಡ್ಡಿ ಕಣ್ಣೀರು ತೆಗೆದು ತನ್ನ

ಗೋಳನ್ನು ಹೇಳಿಕೊಂಡು ಮನೆಗೆ ಬಂದಳು.

ಮೆಹಬೂಬಳಿಗೆ ರಾಘಪ್ಪನಿಗೂ ಹೆಂಡಿರುಮಕ್ಕಳಿವೆಯೆಂಬ ವಿಚಾರವೇ ಹೊಳೆದಿರಲಿಲ್ಲ. ಈ ಹೊಸ ಪ್ರಕಾರದಿಂದ ಅವಳ ಕರುಳು ಕರಗಿತು. ಮುಂದಿನ ವಾರ ರಾಘಪ್ಪ ಬಂದಾಗ 'ನಿಮ್ಮ ಮನೀಗೆ ಹೋಗರಿ' ಎಂದು ಹೇಳಿ ಕಳಿಸಿಕೊಟ್ಟಳು. ಅಂದಿನಿಂದ ಒಂದೂವರೆ ವರ್ಷ ರಾಘಪ್ಪನಿಗೆ ಮೆಹಬೂಬಜಾನಳ ದರ್ಶನವಾಗಲಿಲ್ಲ.

ಆದರೆ ಇಷ್ಟರಲ್ಲಿ ಚಂಪಕ್ಕನಿಗೆ ಹೊಸ ಚಿಂತೆಗಳೇಳತೊಡಗಿದವು. ರಾಘಪ್ಪ ಅತ್ತಿತ್ತ ಕೀಳುಕಸಬೆಯರಲ್ಲಿ ಅಡ್ಡಾಡಿ ಎಲ್ಲಿ ಆರೋಗ್ಯ ಕೆಡಿಸಿಕೊಳ್ಳುತ್ತಾನೋ ಎಂಬ ಭೀತಿ ಸುರುವಾಯಿತು. ಕೊನೆಗೆ ಒಂದು ದಿನ ಚಂಪಕ್ಕ ತಾನೇ ಮೆಹಬೂಬಜಾನಳ ಮನೆಗೆ ಬಂದು ರಾಘಪ್ಪನ ಪಾಲನೆಯನ್ನು ಅವಳಿಗೆ ಒಪ್ಪಿಸಿದಳು. ಅಂದಿನಿಂದ ಮೆಹಬೂಬಜಾನ 'ಅಕ್ಕಾ ಅವರ' ಮನೆ ಗೃಹದೇವತೆಯಾದಳು. ಯುಗಾದಿಗೊಮ್ಮೆ ಮೆಹಬೂಬಜಾನಳನ್ನು ಚಂಪಕ್ಕ ಬಿಂದಗೋಳದ ಮನೆಗೆ ಕರೆಸಿಕೊಂಡು ಖಣ ಕೊಟ್ಟು ಮರ್ಯಾದೆ ಮಾಡಿ ಕಳಿಸುವಳು. ಮೆಹಬೂಬಜಾನಳಾದರೋ ಯಾವಾಗಾದರೊಮ್ಮೆ ಹುಬ್ಬಳ್ಳಿಯಿಂದ ಪೇರಲ ಹಣ್ಣಿನ ಬುಟ್ಟಿ, ಮಾವಿನ ಹಣ್ಣಿನ ಬುಟ್ಟಿಗಳನ್ನು ಆಯಾ ಮಾಸಕ್ಕೆ ಅನುಗುಣವಾಗಿ ಚಂಪಕ್ಕನಿಗೆ ಕಳಿಸಿಕೊಡುವಳು. ಅಂತೂ ರಾಘಪ್ಪನ ಪ್ರೀತಿಯ ಬಾಳುವೆ ಸಮೃದ್ಧವಾಯಿತು. ಈ ಮೊದಲೇ ಚಂಪಕ್ಕನಿಗೂ ಇನ್ನೊಂದು ಮಗು ಹುಟ್ಟಿತ್ತು. ಇದರ ಜನನಕಾಲಕ್ಕೆ ಆದ ತೊಂದರೆಯೇ ಚಂಪಕ್ಕನಿಗೆ ರಕ್ತಕ್ಷಯ – ಎದೆಸೂಲಿಗಳಾಗಿ ಪರಿಣಮಿಸಿ ಆಕೆಯನ್ನು ವರ್ಷಕ್ಕೆ ಮೂರುನಾಲ್ಕು ತಿಂಗಳು ಹಾಸಿಗೆಹಿಡಿಸುತ್ತಿತ್ತು. ಡಾಕ್ಟರರು ಅವಳು ಇನ್ನೊಂದು ಗರ್ಭಧಾರಣೆ ಮಾಡಬಾರದೆಂದು ಸಲಹೆ ಮಾಡಿದರು. ಅಂದಿನಿಂದ ರಾಘಪ್ಪನ ಪ್ರೀತಿಯ ಒಂದು ಭಾಗವು ಅವಳಿಗೆ ಡಾಕ್ಟರರ ಸಲಹೆ ಮೇಲೆಗೆ ಹೊರತಾಯಿತು. ಬೇನೆಯ ಪ್ರಥಮ ದಿನಗಳಲ್ಲಿ ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಚಂಪಕ್ಕನಿದ್ದಾಗ ದಿನಾಲು ಎರಡು ಬಾರಿ ಮೆಹಬೂಬಜಾನ ಆಕೆಯನ್ನು ನೋಡಿಕೊಂಡು ಹೋಗುತ್ತಿದ್ದಳು. ರಾಘಪ್ಪ ಮಕ್ಕಳ ಶಿಕ್ಷಣ, ಹೆಂಡತಿಯ ಆರೋಗ್ಯವೆಂಬ ನೆವದಿಂದ ಧಾರವಾಡದಲ್ಲಿ ಮನೆ ಮಾಡಿದಮೇಲಂತೂ ಮೆಹಬೂಬಜಾನಳ ಬರುಹೋಗುವಿಕೆ ಹೆಚ್ಚಾದವು. ಆಕೆ ಮನೆಯವಳಾದಳು. ಹುಡುಗಿಯರಿಗಂತೂ ಅವಳ ಬಗ್ಗೆ ಆದರ ಬಹಳ. ಏಕೆಂದರೆ ಆಕೆ ಬಂದಾಗೊಮ್ಮೆ ಫೇಡೆ, ಆಟಿಗೆ, ಹಣ್ಣುಗಳನ್ನು ತರುತ್ತಿದ್ದಳು.

ಇದೀಗ ರತ್ನಾಗೆ ಹದಿನೈದು ವರ್ಷ ; ಶಾಂತಾಗೆ ಹನ್ನೆರಡು.

ಧಾರವಾಡದಲ್ಲಿಯಾದರೂ ಆ ಮಕ್ಕಳು ತಮ್ಮ ಓಣಿಯ ಹೆಣ್ಣುಮಕ್ಕಳಲ್ಲಿ ತಮ್ಮ ಸೌಂದರ್ಯದಿಂದಲೂ ನಡತೆಯಿಂದಲೂ ಲೋಕಪ್ರಿಯರಾಗಿದ್ದರು. ರತ್ನಾ ಲಗ್ನದ ವಯಸ್ಸಿಗೆ ಬಂದಂತೆಲ್ಲ ಚಂಪಕ್ಕನ ಆತುರ ಬಹಳವಾಗತೊಡಗಿತು. ಗಂಗವ್ವನ ಹಾಗೂ ಕಿಟ್ಟಿಯ ಅಸ್ತಿತ್ವದ ಬಗ್ಗೆ ಮೊದಲಲ್ಲೇ ಗೊತ್ತಿದ್ದರೂ ಕೂಡ ಮಾತಾಡಿಸಲಿಲ್ಲ. ಆದರೆ ಒಮ್ಮೆ ಸಹಜವಾಗಿ ಕಿಟ್ಟಿ ದೊಡ್ಡವನಾಗಿದ್ದ ಬಗ್ಗೆಯೂ ಮಾಮಲೇದಾರ ಕಚೇರಿಯಲ್ಲಿ ಅವನಿಗೆ ಕೆಲಸವಿದ್ದ ಬಗ್ಗೆಯೂ ರಾಘಪ್ಪ ಹೆಂಡತಿಗೆ ಹೇಳಿದನು. ಅವನಿಗೇನೂ ತನ್ನ ಮಗಳನ್ನು ಕಿಟ್ಟಿಗೇ ಕೊಡಬೇಕೆಂಬ ಹಟವಿಲ್ಲ. ಆದರೆ ಚಂಪಕ್ಕನಿಗೆ ಮಾತ್ರ ರತ್ನಾಳನ್ನು ಕಿಟ್ಟಿಗೆ ಕೊಟ್ಟು ಮೊದಲಿನ ಸಂಬಂಧ ಹಚ್ಚಿಕೊಳ್ಳಬೇಕೆಂದು ಬಲು ಆಸೆಯಾಯಿತು. ಕಿಟ್ಟಿಯ ತಂದೆ ಸ್ವಾಮಿರಾಯ ತನ್ನ ಲಗ್ನದ ವಿಷಯದಲ್ಲಿ ಎಂಥ ದೊಡ್ಡ ಉಪಕಾರ ಮಾಡಿದರೆಂಬುದು ಆಕೆ ಮರೆಯದ ವಿಷಯ. ಆ ಉಪಕಾರವನ್ನು ಹೀಗೆ ಮಗಳನ್ನು ಕೊಟ್ಟು ತೀರಿಸಬೇಕೆಂದು ಆಕೆಯ ಕರುಳಿನ ಆಸೆ. ಅವಳ ಆಗ್ರಹಕ್ಕಾಗಿ ರಾಘಪ್ಪ ಕಿಟ್ಟಿಯ ಗುರುತು ಮಾಡಿಕೊಂಡು, ಅಂದು ಗಂಗವ್ವನಲ್ಲಿ ಹೋಗಿ ಲಗ್ನದ ಪ್ರಸ್ತಾಪವೆತ್ತಿದ್ದು. ಆದರೆ ಗಂಗವ್ವನ ನಿರಾಕರಣೆಯಿಂದ ಈ ವಿಷಯ ರಾಘಪ್ಪನಿಗೆ ಚದುರಂಗದ ಕಠಿಣ ಸಮಸ್ಯೆಯಾದಂತಾಗಿ ಅವನ ಆಟಗಾರಿಕೆಗೆ ಆಹ್ವಾನವಾಗಿ ಬಂದಿತು. 'ನಿನ್ನ ಕಣ್ಣ ಮುಂದಃ ನಿನ್ನ ಮಗನ್ನ ಕಿಸೆಕ್ಕ[೧] ಹಾಕತೇನಿ !' ಎಂದು ಕೊಂಡವನು ಅದೇ ದಾರಿಗುಂಟ ತನ್ನ ಚಟುವಟಿಕೆಗಳನ್ನು ಸಾಗಿಸಿದನು. ಇದಲ್ಲದೆ ಇನ್ನೊಂದು ವಿಷಯ. ರಾಘಪ್ಪನಿಗೆ ತನ್ನ ವಿವಾಹದ ಬಗ್ಗೆ ದುಃಖಪಡುವ ಕಾರಣವೇನೂ ಇರಲಿಲ್ಲ. ಆದರೂ ಅಂದು ಸ್ವಾಮಿರಾಯನ ಬೆದರಿಕೆಗಳಿಗೆ ತಾನು ಸೋತದ್ದರ ಕುಟುಂಬ ದ್ವೇಷವಿನ್ನೂ ಅವನ ಅವ್ಯಕ್ತಮನದಲ್ಲಿ ಕುದಿಯುತ್ತಿತ್ತು. ತನ್ನ ಮಗಳನ್ನೇ ಕಿಟ್ಟಿಗೆ ಕೊಟ್ಟರೆ, ಒಂದು ಬಗೆಯಿಂದ ಸೇಡು ತೀರಿಸಿದಂತೆಯೇ ಅಲ್ಲವೇ ?

ಸುದೈವದಿಂದ ರತ್ನಾ ಬಲು ಚೆಲುವೆ. ಅದೇ ತನ್ನ ಅರ್ಧ ಕೆಲಸ ಮಾಡುವದೆಂಬ ಧೈರ್ಯ ರಾಘಪ್ಪನಲ್ಲಿತ್ತು. ಆದ್ದರಿಂದ ಈಗಾಗಲೇ ಅವನು ಮುಂದಿನ ವಿಚಾರದಲ್ಲಿ ತೊಡಗಿದ್ದನು. ಲಗ್ನ ಗೊತ್ತೇ ಆದರೆ ಒಮ್ಮೆಲೇ ಎರಡುಮೂರು ಸಾವಿರದ ಗಂಟು ಬೇಕು ಕೈಯಲ್ಲಿ.

ಧಾರವಾಡದಲ್ಲಿ ದೊಡ್ಡವರ ಸ್ನೇಹವೇ ರಾಘಪ್ಪನ ಉದ್ಯೋಗವಾಗಿದ್ದ ಮೂಲಕ ಲಗ್ನಕ್ಕೆ ಬರುವವರೂ ದೊಡ್ಡವರು ; ಲಗ್ನವೂ ದೊಡ್ಡ ಠೀವಿಯಲ್ಲಿಯೇ

---

೧. ಜೇಬಿಗೆ.

ಆಗಬೇಕು. ರಾಘಪ್ಪನಿಗೆ ದಿನದ ವ್ಯವಹಾರಕ್ಕೆ ಬೇಕಾಗುವ ಹಣದ ಕೊರತೆ ಎಂದೂ ಇರಲಿಲ್ಲ. ಆದರೆ ಒಮ್ಮೆಲೇ ಇಡಿಗಂಟು ಬೇಕಾದರೆ ಹೊಲ ಮಾರದೇ ಗತ್ಯಂತರವಿರಲಿಲ್ಲ.

ಈ ಚಿಂತೆಯಲ್ಲಿ ರಾಘಪ್ಪನು ಇರುವಾಗ ಸ್ತ್ರೀಸಹಜ ಚಾಪಲ್ಯದಿಂದ ಚಂಪಕ್ಕ ಇನ್ನೊಂದು ವಿಚಾರದಲ್ಲಿ ಇದ್ದಳು.... ಮೆಹಬೂಬಜಾನ ತನ್ನ ತಂಗಿ, ತನ್ನ ಗೃಹದೇವತೆ – ಎಲ್ಲ ನಿಜ. ಆದರೆ ಈಗಾಗಲೇ ತನ್ನ ಮನೆಯ ಆರೆಂಟು ಸಾವಿರ ರೂಪಾಯಿ ಆಕೆಗೆ ಮುಟ್ಟಿದೆ. ರತ್ನಾಳೂ ಆಕೆಯ ಮಗಳೇ ಅಲ್ಲವೆ ? ಮಗಳ ಲಗ್ನಕ್ಕೆ ತಾನೂ ಒಂದು ಸಾವಿರದಷ್ಟು ಖರ್ಚು ಕೊಡಕೂಡದೇಕೆ... ? ಈ ವಿಚಾರದಿಂದ ಪ್ರೇರಿತಳಾಗಿ ಚಂಪಕ್ಕ ಮೆಹಬೂಬಜಾನಳೊಡನೆ ಸವಿಯಾಗಿಯೂ ಸೂಚಕವಾಗಿಯೂ ಮಾತಾಡಲು ತೊಡಗಿದ್ದಳು !

ಈ ವಿಷಯವಾಗಿ ಒಮ್ಮೆ ಮನಸ್ಸು ನಿಲ್ಲದೆ ಚಂಪಕ್ಕನು ರಾಘಪ್ಪನ ಎದುರು ಅಡ್ಡಲಾಗಿ ಅವನು ಕ್ರೋಧಸಂತಪ್ತನಾಗಿ, 'ಇನ್ನೊಮ್ಮೆ ಈ ಮಾತು ಎತ್ತಬ್ಯಾಡ, ನನ್ನ ಎದುರಿಗೆ. ಆದರ ಒಂದು ಹೊಲಾನಾದರೂ ಚೆಲ್ಲತೇನು... ಲಗ್ನಾ ಮಾಡತೇನಿ. ಇಲ್ಲಾದರ ಗಂಡಸಮಗಾ ಆಗಿ ರತ್ನಿ ಇರವಲ್ಲಳು ಮನ್ಯಾಗ !' ಎಂದು ಗರ್ಜಿಸಿದನು. ಅವನೆದುರು ಆಗಲೇ ಚಂಪಕ್ಕನಿಗೆ ಏನೂ ಆಡಲು ಧೈರ್ಯವಾಗಲಿಲ್ಲ. ಆದರೆ ಇದೇ ಮಾತಿನ ಲಾಭ ತಕ್ಕೊಂಡು ಇನ್ನೊಮ್ಮೆ ಚಂಪಕ್ಕ ಮೆಹಬೂಬಜಾನಳಿಗೆ ಹೇಳಿದಳು : 'ನೋಡವಾ, ನಿನ್ನ ಯಜಮಾನರು ರತ್ನೀ ಲಗ್ನಕ್ಕs ಅಂತ ಮೇಗೂರ ಹೊಲಾ ಮಾರಬೇಕೂ ಅಂತ ಮಾಡ್ಯಾರಂತ!'

ಚಾಣಾಕ್ಷಳಾದ ಮೆಹಬೂಬಜಾನಳಿಗೆ ಈ ಮಾತುಗಳ ಅರ್ಥ ತಿಳಿಯದೆ ಇರುತ್ತಿರಲಿಲ್ಲ. ಆದರೆ ಇಂತ ಪ್ರಸಂಗಗಳಲ್ಲಿ ಆಕೆ ಮೌನ ಧರಿಸುತ್ತಿದ್ದಳು, ಮೊದಲನೆಯದಾಗಿ, ಲಗ್ನ ಇನ್ನೂ ಎಂದೋ ಏನೋ ! ಎರಡನೆಯದಾಗಿ, ತನ್ನ ಅಕ್ಕನ ಮಗನಿಗಾಗಿ ಮೆಹಬೂಬ ಒಂದು ಕಿರಾಣಿ ಅಂಗಡಿ ತೆಗೆದುಕೊಟ್ಟಿದ್ದಳು. ಅದರಲ್ಲಿಯೇ ತನ್ನ ಇದ್ದಬಿದ್ದ ಹಣವೆಲ್ಲವನ್ನೂ ಹಾಕಿ ಬಿಟ್ಟಿದ್ದಳು !

* * * *

## ೧೧ : ದೇಸಾಯರ ಚಿಂತೆಗಳು

ದೇಸಾಯರು ಚಿಂತಾಕ್ರಾಂತರಾಗಿ ಲಕ್ಷ್ಮೀ ಹೈಸ್ಕೂಲಿಗೆ ಬಂದರು. ಅವರು ಶಾಲೆಯ ಕಟ್ಟೆಯ ಮೇಲಿಂದ ಹೆಡ್‌ಮಾಸ್ತರರ ಕೋಣೆಯತ್ತ ನಡೆದಾಗ ಗುಜುಗುಜು, ಗುನುಗುನು ನಡೆಸಿದ ವರ್ಗಗಳೆಲ್ಲ ಸುಮ್ಮನಾಗಿ ಇವರತ್ತಲೇ ಕುತೂಹಲದಿಂದ ನೋಡುತ್ತಿದ್ದವು. ಒಂದು ಕ್ಲಾಸಿನಲ್ಲಂತೂ ಓರ್ವ ವ್ಯವಹಾರಶೂನ್ಯ ಶಿಕ್ಷಕನು 'Don't look here and there ; be attentive !' ಎಂದು ಅರಚಿದರು. ದೇಸಾಯರ ಚಿಂತೆ ಇನ್ನೂ ಹೆಚ್ಚಿತು. 'ಬೇಕಾದದ್ದು ಇರಲಿ, ಕಳವು, ಹೊಡೆದಾಟ, ಖೂನಿ ಆದರೂ ನಡೆದೀತು ; ಅದೊಂದು ಬೇಡ, ದೇವರೇ !' ಅಂದುಕೊಳ್ಳುತ್ತ ದೇವರ ಹೆಸರು ತೆಗೆದುಕೊಳ್ಳುತ್ತ ಹೆಡ್‌ಮಾಸ್ತರರ ಕೋಣೆಯನ್ನು ಪ್ರವೇಶಿಸಿದರು ಹೆಡ್ ಮಾಸ್ತರರು ಪ್ರತಿಸಲದಂತೆ ದೊಡ್ಡ ದನಿಯಿಂದಲೂ, ಮುಗುಳುನಗೆಯಿಂದಲೂ ಸ್ವಾಗತಿಸಿಲಿಲ್ಲ. 'ಬರ್‍ರಿ' ಎಂದಿಷ್ಟೇ ಅಂದು ಕುರ್ಚಿಯತ್ತ ಬೆರಳುಮಾಡಿದರು.

ಅದು 'ಅದೇ' ಆಗಿತ್ತು. ಈಗಾಗಲೇ ವಸಂತರಾಯನ ಬಗ್ಗೆ ಸಾಕಷ್ಟು ತಕರಾರುಗಳಿದ್ದವು. ವರ್ಗದಲ್ಲಿ ಗದ್ದಲ ಹಾಕುವದು, ಶಿಕ್ಷಕರಿಗೆ ಎದುರುತ್ತರ ಕೊಡುವದು, ಬೇಕಾದಾಗ ಶಾಲೆಗೆ ಬರುವದು – ಈ ವಿಷಯಗಳು ವಸಂತರಾಯನ ಒಂದನೆಯ ಇಯತ್ತೆಯಿಂದಲೇ ಇದ್ದವು. ಆದರೆ ದೇಸಾಯರು ಬುನಾದಿಕಾಲದ 'ಡೋನರ್' ಇದ್ದು ಅವರಿಗೆ ಮ್ಯಾನೇಜಿಂಗ್ ಕಮೀಟಿಯ ಚುನಾವಣೆಯ ಒಂದು ವ್ಹೋಟು ಇದ್ದಿತಾದ್ದರಿಂದ ಶಿಕ್ಷಕರು ವಸಂತನ ಬಗ್ಗೆ ತಕರಾರು ಮಾಡುವ ಪ್ರಘಾತವನ್ನೇ ಮರೆತುಬಿಟ್ಟಿದ್ದರು. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ಲಗಾಟ[೧]ವಾದಮೇಲೆ, ತಮ್ಮ ಅಪ್ಪ ಇಲ್ಲದಿದ್ದರೆ ಹೋಗಲಿ, ತಾನಾದರೂ ಶಾಲೆಯ ಲಾಯಿಫ್ ಮೆಂಬರ ಎಂಬಂತೆ ವಸಂತ ವರ್ತಿಸತೊಡಗಿದನು. ವರ್ಗದ ವಿದ್ಯಾರ್ಥಿನಿಯರು ಮನೆಗೆ ಹೋಗುವಾಗ ನಾಲ್ಕು ಉಡಾಳ ಸ್ನೇಹಿತರೊಡನೆ ಅವರ ಚೇಷ್ಟೆಮಾಡುತ್ತ, ಅವರ ಬೆನ್ನ ಹಿಂದಿನಿಂದ ಹೋಗಿ,

---

೧. ಅನುತ್ತೀರ್ಣ.

ಎಲ್ಲರನ್ನೂ ಅವರವರ ಮನೆಗೆ ಕಾಣಿಸಿ, ತನ್ನ ಮುಂದಿನ ಚಟುವಟಿಕೆಯತ್ತ ಸಾಗುವ ಅವನ ಪರಿಪಾಠವು ಹೆಡ್‌ಮಾಸ್ತರರಿಂದ ಸಿಪಾಯಿಗಳವರೆಗೆ ಎಲ್ಲರಿಗೂ ಗೊತ್ತಿತ್ತು. ಆದರೆ ಇದಕ್ಕೂ ಮುಂದೆ ವಸಂತರಾಯನ ಪ್ರಗತಿಯಾಗಿರಲಿಲ್ಲ. ವಿದ್ಯಾರ್ಥಿನಿಯರಿಗಾದರೂ ಇದು ಪರಿಪಾಠ ಬಿದ್ದ ಮೂಲಕ ಇವನ ಲೀಲೆಗಳತ್ತ ಲಕ್ಷ್ಯ ಕೊಡದೆ ಮನೆಗೆ ಸಾಗುತ್ತಿದ್ದರು. ಅದರ ಮರುವರ್ಷ ವಸಂತರಾಯನು ಮ್ಯಾಟ್ರಿಕ್ ದಾಟಲು ಮಾಡುವ ಮೂರನೆಯ ಯತ್ನ. ಆ ವರ್ಷ 'ತ್ರೇಧಾ ನಿದಧೇಪದಂ' ಎಂಬ ತ್ರಿವಿಕ್ರಮನ ರೂಪವನ್ನು ವಸಂತರಾಯನು ತಳೆದು ತೃತೀಯ ಪಂಥಕ್ಕೆ ಅಣಿಯಾದನು. ಇಂದುಮತೀಸ್ವಯಂವರಕ್ಕೆ ಬಂದ ರಾಜರ ಲೀಲೆಗಳನ್ನೂ ನಾಚಿಸುವಂತೆ ವಸಂತರಾಯನು ವರ್ಗದಲ್ಲಿ, ವರ್ಗದ ಹೊರಗೆ, ಕನ್ನಿಕೆಯ ಮೆದುವಾದ ಕೆನ್ನೆಗಳನ್ನು ಗುರಿಮಾಡಿ ಚಿಕಣಿ ಅಡಿಕೆಯ ಬೆಟ್ಟಗಳನ್ನು ತೂರಿ ಸವ್ಯಸಾಚಿಯಂತೆ ಮೆರೆಯತೊಡಗಿದನು. ಸಂಪಿಗೆಯ ಹೂಗಳ ಪಕಳೆಯ ಮೇಲೆ ತನ್ನ ಹೆಸರನ್ನಾಗಲಿ, ಅವರ ಹೆಸರನ್ನಾಗಲಿ ಬರೆದು, 'I love you' ಎಂದಾಗಲಿ ಕೆಂಪು ಮಶಿಯಿಂದ ಬರೆದು. ದಿನಾಲು ಬೇರೆ ಬೇರೆ ಕಿಶೋರಿಯರ ತಲೆಗೆ ತೂರಿ, ತನ್ನ ನಿಷ್ಪಕ್ಷಪಾತ ಧೋರಣೆಯ ಬಗ್ಗೆ ಎಲ್ಲರಿಗೂ ಮನವರಿಕೆ ಮಾಡಿ ಕೊಟ್ಟನು. ವರ್ಗದಲ್ಲಿ ಬಲು ಫ್ಯಾಶನ್ ಮಾಡುವವಳೆಂದು ಹೆಸರಾದ ಉದ್ದ ಕೂದಲಿನ ಓರ್ವ ಗಂಡುಬೀರಿಯ ಬಗ್ಗೆ ವಸಂತರಾಯನಿಗೆ ಎಳ್ಳಷ್ಟೂ ಆದರವಿರಲಿಲ್ಲ. ತಲೆಯ ಮೇಲೆ ಉಪ್ಪು ಹಾಕಿದರೆ ಕೂದಲು ಉದುರಿಹೋಗುತ್ತವೆಯೆಂಬ ಸಿದ್ಧಾಂತವನ್ನು ಯಾರೋ ಪುಣ್ಯಾತ್ಮರು ಅವನಿಗೆ ಹೇಳಿದ್ದರು. ಅದರ ಸಶಾಸ್ತ್ರಪ್ರಯೋಗವನ್ನು ಮಾಡಹೋಗಿ ಶಾಲೆಯ ಕಟ್ಟೆಯ ಮೇಲಿಂದ ಆಕೆಯ ತಲೆಯ ಮೇಲೆ ಅರ್ಧ ಸೇರು ಉಪ್ಪು ಸುರಿದಿದ್ದನು. ಈ ಲೀಲೆಗಳಿಗಾಗಿ ಹೆಡ್‌ಮಾಸ್ತರರು ಅವನನ್ನು ಕರೆದು ಸಿಟ್ಟುಮಾಡಿದ್ದರು. ಆದರೆ ಹೆಡ್ ಮಾಸ್ತರರನ್ನೂ ಲೀಲಾಜಾಲವಾಗಿ ಹಣ್ಣು ಮಾಡುವ ವಿದ್ಯೆಯೂ ವಸಂತನಿಗೆ ಕರತಲಾಮಲಕವಾಗಿತ್ತು. ಅವರ ಕಡೆಯಿಂದ ಪೂರ್ಣ ಬೈಯಿಸಿಕೊಂಡು, ಹಳ್ಳಿಗನಂತೆ ನಟಿಸುತ್ತ, 'ಯಪಾ, ಇದೊಂದು ಸರೆ ತಪ್ಪಾ ತರಿ ! ನಿಮ್ಮ ಮಗ ಅಂತ ತಿಳಕೊಳ್ರಿ....' ಎಂದು ಕೈಜೋಡಿಸುವನು. ಇಂಥವನಿಗೆ ಹೇಗೆ ಶಿಕ್ಷೆಮಾಡಬೇಕೆಂಬುದು ಹೆಡ್‌ಮಾಸ್ತರರಿಗೆ ದೊಡ್ಡ ಸಮಸ್ಯೆಯೇ ಆಗಿತ್ತು. ಶಾಲೆಯ ವಿದ್ಯಾರ್ಥಿಗಳಲ್ಲಿ ಮಾತ್ರ ವಸಂತರಾಯನ ಕತೆಗಳು ಪುರಾಣ–ಪುಣ್ಯಕತೆಗಳಂತೆ ಹಬ್ಬಿ, ಅವನ ಕೀರ್ತಿಯನ್ನು ದಿನದಿನಕ್ಕೂ ಹೆಚ್ಚಿಸುತ್ತಿದ್ದವು. ಅವನು ಯಾವ ವಿದ್ಯಾರ್ಥಿಗೂ ಕೇಡುಬಗೆಯುವವನಲ್ಲ, ಯಾರ ಮನಸ್ಸನ್ನೂ ನೋಯಿಸುವವನಲ್ಲ, ಎಂಬ ಖ್ಯಾತಿಯೂ ಆಗಿತ್ತು.

ಆದರೆ ಆ ವರ್ಷದ ದ್ವಿತೀಯ ಚರಣದಲ್ಲಿ ಪುಣೆಯಿಂದ ವರ್ಗವಾಗಿ ಬಂದ ಓರ್ವ ಸಬ್‌ಜಜ್ಜರ ಮಗಳು ಶಾಲೆಗೆ ಸೇರಿದಳು. ಆವರೆಗೆ ಸ್ತ್ರೀಜಾತಿಯಲ್ಲೇ ಸಮಭಾವದಿಂದ ಆಸಕ್ತನಾದ ಯೋಗೀಶ್ವರ ಕೃಷ್ಣನೋಪಾದಿಯಾದ ವಸಂತರಾಯನು ಒಮ್ಮೆಲೆ ಯೋಗಭ್ರಷ್ಟನಾಗಿ ಪಕ್ಷಪಾತಿಯಾದನು. 'ಏಕದೃಷ್ಟಿರ್ವಿಶಿಷ್ಯತೇ.' ಈ ಬೆಕ್ಕಿನ ಕಣ್ಣಿನ ಹೊಸ ಹುಡಿಗೆಯ ಕಡೆಗೆ ವಸಂತ ಹೋತಿನ ಕಣ್ಣುಗಳಿಂದ ನೋಡತೊಡಗಿದನು. ಈವರೆಗೆ ಚೇಷ್ಟೆಯ ರೂಪವಾಗಿ ಈ ವಿಷಯಗಳ ಬಗ್ಗೆ ಮಾತನಾಡುವವನು ಈಗ ಮಧ್ಯಾಹ್ನ-ಸಂಜೆ ತನ್ನ ಸ್ನೇಹಿತ ಅಬ್ದುಲ್ ಅಜೀಜನ ಕೋಣೆಯನ್ನು ಸೇರಿ ಅವನೆದುರು ತನ್ನ ಹೃದಯದ ಬಡಿತಗಳನ್ನು ಎಣಿಸಿಕೊಳ್ಳತೊಡಗಿದನು. ಅವನಿಂದ ಗಝಲುಗಳನ್ನು ಅನಿಸಿಕೊಂಡು 'ಹಾಯ್ ಹಾಯ್' ಎಂದು ತಾನೂ ನಿಟ್ಟುಸಿರು ಹಾಕತೊಡಗಿದನು. ಕೊನೆಗೆ ಅವನ ಸಹಾಯದಿಂದ ಈ ಕೆಳಗಿನ ಪ್ರೇಮಪತ್ರವನ್ನು ರಚಿಸಿ, ಅದನ್ನು ಆಕೆಯ ಕಂಪಾಸಪೆಟ್ಟಿಗೆಯಲ್ಲಿ ಬಚ್ಚಿಟ್ಟನು.

**Welfare**

My Dearest Laila (Miss Kho t),

All well, I love you hart and sole, You also please love to me. I you Go to Seneema, box seat. I stand in Moter stand 3 O'clock. Seneema begin three and half matnee. You do not come, my life *Barbad*! Nothing more to wright at present. All well.

Post : Dharwar — Your dearest Manju,
At : Dharwar — Vasantrao Gopal Gouda Desai
District : Dharwar — (Bahaddur)

ಲೈಲಾಳು ಈ ಪತ್ರವನ್ನು ತನ್ನ ತಾಯಿಗೆ, ತಾಯಿ ತನ್ನ ಗಂಡನಿಗೆ, ಗಂಡನು ಅದಕ್ಕೊಂದು ಪರಿಚಯಾತ್ಮಕ ಪತ್ರದೊಡನೆ ಹೆಡ್ ಮಾಸ್ತರರಿಗೆ – ಹೀಗೆ ವಸಂತರಾಯನ ಪ್ರೇಮಪತ್ರವು ಮೂರು ದಿನಗಳಲ್ಲಿ ಪ್ರಯಾಣ ಮಾಡಿತು.

(ಓದುಗರು, 'ಇದೇನು ಫಿಶ್‌ಪತ್ರ' ಎನ್ನದಿರಿ. ಈ ಘಟನೆ ಆದದ್ದು ನಿನ್ನೆಮೊನ್ನೆಯಲ್ಲ. ಕನಿಷ್ಠ ನಾಲ್ವತ್ತು ವರ್ಷಗಳ ಹಿಂದನದು. ಆಗ ಪ್ರೇಮ ಪತ್ರವೆಂದರೆ ಇಂದಿನ ಪ್ರೇಮಪತ್ರಗಳನ್ನು ಬೆಲೆಗೇಡಿಯಾಗಿರಿಲಿಲ್ಲ!)

ಹೆಡ್ ಮಾಸ್ತರರ ಮೇಲೆ ನಾಜೂಕಿನ ಪ್ರಸಂಗ ಬಂದಿತು. ಆ ಹುಡಿಗೆಯ ತಂದೆ ಸಬ್‌ಜಜ್ಜನು ತನ್ನ ಕಾಯದೇಶೀರ ಪದ್ಧತಿಯಿಂದ ಪುಟ್ಟದಾದರೂ ಖಾರವಾದ

ಪತ್ರವನ್ನು ಅದರ ಜೊತೆಗೆ ಕಳಿಸಿದ್ದನು.

Dear Mr. Headmaster,

I have enclosed herewith a letter found in my daughter's compass box. I should like to know what action you propose to take against the miscreant. Please acknowledge per bearer the receipt of the two letters. Yours etc...

ಪತ್ರ ತಂದ ಸಿಪಾಯಿಯು, ಪತ್ರ ಮುಟ್ಟಿದ ಪಾವತಿಯನ್ನು ಪಡೆದೇ ಹೋದನು.

ಒಂದು ಬಗೆಯಿಂದ ಹೆಡ್‌ಮಾಸ್ತರರಿಗೆ ಸಂತೋಷವಾಯಿತು. ಈ ಬಾರಿ ಎಲ್ಲ ಲೇಖೀ ಸಿಕ್ಕಿವೆ. ಈ ಎರಡೂ ಪತ್ರಗಳನ್ನೂ ದೇಸಾಯರ ಮುಂದೆಯೇ ಇಟ್ಟು, ಅವರಿಗೇ ಏನು ಮಾಡಬೇಕೆಂದು ಕೇಳಿ, ಅವರಿಗೆ ಪೇಚುಹಾಕ ಬೇಕೆಂದು ಅವರು ನಿಶ್ಚಯಿಸಿಕೊಂಡಿದ್ದರು.

ಪತ್ರವನ್ನೋದಿ ದೇಸಾಯರ ಮುಖ ಬೆವತಿತು. ಅದರ ಅರ್ಥವನ್ನು ಮಾಡಲಾರದೆ ಹೆಡ್‌ಮಾಸ್ತರರು ಬೆವೆತರು. ತುಸು ಹೊತ್ತು ಮೌನವು ಆವರಿಸಿತು. ವರ್ಗಗಳೊಳಗಿಂದ ವಿದ್ಯಾರ್ಥಿಗಳು ಮಾಸ್ತರರಿಗೆ 'ಒಂದು' ಬೆರಳನ್ನು ತೋರಿಸಿ ಹೊರಗೆ ಬಂದು ಹೆಡ್‌ಮಾಸ್ತರರ ಕೋಣೆಯೊಳಗೆ ಇಣುಕತೊಡಗಿದ್ದರು... ದೇಸಾಯರು ಐದು ನಿಮಿಷಗಳಲ್ಲಿ ನಿರ್ಣಯಕ್ಕೆ ಬಂದರು.

'ಮಾಸ್ತರs, ಈಗ ನಾ ಡೋನರ ಅನ್ನೋದನ್ನ ಮರೆತುಬಿಡಿರಿ. ಅದರ ಹುಡುಗನ ತಂದಿ ಅನ್ನೋ ನಾತೇ[೧]ದಿಂದ ನನ್ನದೊಂದು ಪ್ರಾರ್ಥನಾ ಅದ. ಅದು ನಿಮಗೂ ನೀಗದಿದ್ದರ ನೀವು ಭಿಡೆ ಇಲ್ಲದೆ ಆಗೂದಿಲ್ಲಾ ಅನ್ನಿರಿ. ಏನು ಚಿಂತೆ ಇಲ್ಲ' ಎಂದರು.

ಮಾಸ್ತರರಿಗೆ ದೇಸಾಯರು ಏನು ಸೂಚಿಸುತ್ತಾರೆ ಎಂಬ ಚಿಂತೆ. ತುಸು ಬೇಸರದಿಂದ ಅವರು 'ಏನು?' ಎಂದು ಕೇಳಿದರು.

'ನನ್ನ ಮಗನ ಹೆಸರು ಕಿತ್ತಿಹಾಕಲಿಕ್ಕೆ ನಾನs ಅರ್ಜಿ ಕೊಡತೇನಿ. ಅವನ ಹೆಸರು ತಗದುಹಾಕರಿ. ಅವಗ ಸಾಲೀ ಪಟಾಂಗಣದಾದ ಕಾಲಹಾಕಬೇಡಾ ಅಂತ ತಾಕೀದ ಮಾಡತೇನಿ. ಇಷ್ಟೂ ಮೀರಿ ಅವ ಬಂದರ ಎರಡನೇ ವಿಚಾರ ಇಲ್ಲದs ಶಿಪಾಯಿ ಹಚ್ಚಿ ಹೊರಗೆ ಹಾಕಿಸರಿ. ಒಬ್ಬನ ದಶಿಂದ ಇಡೀ ಸಾಲಿ

---

೧. ಸಂಬಂಧ.

ಕೆಡೋದು ಬೇಡ, ಸಾಲೀನೂ ಒಂದು ರೀತಿಯಿಂದ ನನ್ನ ಮಗನs...!' ದೇಸಾಯರು ತುಸುವೆ ಒದ್ದೆಯಾದ ಎವೆಯನ್ನು ಉಪ್ಪರಣಿ[೧] ಯಿಂದ ಒಮ್ಮೆ ಅವಸರದಿಂದ ಒರೆಸಿ ಮುಂದುವರಿದರು ; 'ನನ್ನ ಪ್ರಾರ್ಥನಾ ಇಷ್ಟs – Expel ಮಾಡಿದಿವಿ ಅಂತ ನೋಟೀಸ ಹಚ್ಚಬೇಡಿರಿ... ರೆಕಾರ್ಡಿನ್ಯಾಗ Expelled ಅನ್ನೊ ಶಬ್ದ ಬೇಡ... ಬೇಕಾದರ ಆ ಜಜ್ಜಗ ಎಕ್ಸಪೆಲ್ ಮಾಡೇವಿ ಅಂತ ತಿಳಿಸಿರಿ. ನಿಮ್ಮ ಇಚ್ಛಾ ಇದ್ದರ ನಾ ಒಂದು ಕ್ಷಮಾಪಣೆಯ ಪತ್ರ ಬರಕೊಡತೇನಿ. ಆದರೆ ಸಾಲೀ ರೆಕಾರ್ಡಿನೊಳಗ ಮಾತ್ರ ಆ ಶಬ್ದ ಬೇಡ, ಇಷ್ಟs ನನ್ನ ಪ್ರಾರ್ಥನಾ. ಇದು ನಿಮಗ ಸರಿ ಕಂಡರ ನೋಡಿರಿ....!' – ದೇಸಾಯರು ಸುಮ್ಮನಾದರು.

'ಪ್ರೋಗ್ರೆಸ್ ಬುಕ್ ಕಳಿಸಿಲ್ಲ ; ಫೀ ಹೆಚ್ಚು ತಗೊಂಡಿರಿ ; ಗೇಮ್ಸ್ ಫೀ ತೊಗೋತೀರಿ, ಆದರ ಆಟಾ ಕೊಡೂದಿಲ್ಲ' – ಇವೇ ಮುಂತಾದ ಪಾಲಕರ ಸರಳರಗಳೆಯನ್ನು ದಿನಬೆಳಗಾದರೂ ಕೇಳಿ ಬುದ್ಧಿಯ ಸ್ತಿಮಿತ ತಪ್ಪಿದ ಬಡಪಾಯಿ ಹೆಡ್‌ಮಾಸ್ತರರಿಗೆ ಕಿವಿಯಲ್ಲಿ ಅಮೃತವೆರೆದಂತಾಯಿತು. ಕೃತಜ್ಞತೆಯಿಂದ ಅವರ ಮುಖ ಇಷ್ಟಗಲವಾಯಿತು. ದೇಸಾಯರಿಂದ ಇಷ್ಟೆಲ್ಲವನ್ನು ಮಾಸ್ತರರು ಅಪೇಕ್ಷಿಸಿದ್ದಿಲ್ಲ. ದೇಸಾಯರ ಸೂಚನೆಯಿಂದ ಎಲ್ಲ ಕಡೆಗೂ ನ್ಯಾಯವಾದಂತಾಗಿತ್ತು. ಜಜ್ಜನಿಗೆ ತುಸು ಸುಳ್ಳಾಡಬೇಕಾದೀತು. ಆದರೆ ವಾಕ್ಯರಚನೆಯ ಸಹಾಯದಿಂದ ಅಲ್ಲಿಯೂ ತಮ್ಮ ನೈಜತೆ ಕಾಯ್ದುಕೊಳ್ಳುವದು ಸಾಧ್ಯ. ಅದರಲ್ಲಿಯೂ ಶಾಲೆಯ ರೆಕಾರ್ಡಿನ ಬಗ್ಗೆ ದೇಸಾಯರಿಗಿದ್ದ ಮರ್ಯಾದೆ ಕಂಡು ಮಾಸ್ತರರ ಬೇನೆತಿಂದ ಮಿದುಳಿಗೆ ಹಿಗ್ಗಾಯಿತು...

ಹೆಡ್‌ಮಾಸ್ತರರು ವಸಂತರಾಯನನ್ನು ಕರೆಕಳಿಸಿದರು. ಅವನು ಅಂದು ವರ್ಗಕ್ಕೇ ಬಂದಿರಲಿಲ್ಲ....

* * *

ಅಂದು ಸರ್ವಾಲಂಕಾರಭೂಷಿತನಾಗಿ ವಸಂತರಾಯನು ಮಧ್ಯಾಹ್ನದ ಸಮಯದಲ್ಲಿ ಅಬ್ದುಲ್ ಅಜೀಜನ ಕೋಣೆಯೊಳಗೆ ಕಳೆದನು. ಅವನಿಗೆ ಹೋಟೆಲಿನಲ್ಲಿ ಸಾಕಷ್ಟು ಪರಾಮರ್ಶೆಮಾಡಿದನು. ಎರಡು ಗಂಟೆಗೆ ಮೋಟರ ಸ್ಟ್ಯಾಂಡಿನ ಹತ್ರ ಹೋಗಿ ಇಂತನು. ಎರಡು ತಾಸು ನಿಂತರೂ ಯಾರೂ ಬರಲಿಲ್ಲ. ಮೋಟರ ಸ್ಟ್ಯಾಂಡ, ಸಿನೇಮಾ ಥಿಯೇಟರ – ಇವನ್ನು ಹತ್ತು ಹತ್ತು ಬಾರಿ ಸುತ್ತಾಡಿದನು. ಕೊನೆಗೆ ತನ್ನ ಪ್ರೇಯಸಿ ತನಗೆ ಒಲಿಯದಿದ್ದದ್ದು

---

೧. ಅಂಗವಸ್ತ್ರ.

ಖಂಡಿತವಾಯಿತು. ಶಾಲೆ ಬಿಡುವದರ ಒಳಗಾಗಿ ಆಕೆಯನ್ನು ಸಂಧಿಸಿ, ಬೀದಿಯಲ್ಲಿ 'ಖೋಟಾ ಖೋಟಾ...' ಎಂದು ಕಾಡಿಯೇ ಬಿಡಬೇಕೆಂದು 'ಬರಬಾದ'ಗೊಂಡ ಅವನ ಹೃದಯವು ಹೇಳತೊಡಗಿತು. ದಾರಿಯು ದೂರವೆನಿಸಿ ಶಾಲೆ ಬಿಡುವದರ ಒಳಗಾಗಿ ತಾನು ಶಾಲೆಯನ್ನು ಮುಟ್ಟುವೆನೋ ಇಲ್ಲವೋ ಎಂದು ಸಂದೇಹವಾಯಿತು. ಕೂಡಲೇ ಒಂದು ಟಾಂಗಾ ಗೊತ್ತುಮಾಡಿದನು. ಟಾಂಗಾ 'ಘೀಲ್ ಘೀಲ್' ಎಂದು ಶಬ್ದ ಮಾಡುತ್ತ ರಭಸದಿಂದ ಶಾಲೆಯ ಆವಾರವನ್ನು ಪ್ರವೇಶಿಸಿತು. 'ಎತ್ತಣ ತುರಂಗಮದು !' ಎಂದು ಶಾಲೆಯೇ ಅತ್ತ ನೋಡತೊಡಗಿತು. ಯಾರಾದರೂ ಇನ್‌ಸ್ಪೆಕ್ಟರರು ಬಂದಿದ್ದಾರೋ ಎಂದು ಹೆಡ್‌ಮಾಸ್ತರರು ಕೋಣೆ ಬಿಟ್ಟು ಹೊರಕ್ಕೆ ಬಂದರು. ಅವರ ಹಿಂದಿನಿಂದ ಇಬ್ಬರು ಸಿಪಾಯಿಗಳು ಓಡಿದರು. ಇನ್‌ಸ್ಪೆಕ್ಟರ್ ಎಂಬ ಗಾಬರಿಯಿಂದ ಅವಾರದಲ್ಲಿಯ ಗಿಡಗಳಲ್ಲಿಯ ಗುಬ್ಬಿಗಳು ಕೂಡ ಸ್ತಬ್ಧವಾಗಿದ್ದವು.

ಇಂಥ ತೀವಿದ ಕ್ಷಣದಲ್ಲಿ ವಸಂತರಾಯನು ಟಾಂಗಾ ಬಿಟ್ಟು ಲೀಲೆಯಿಂದ ಧೋತರ ಸರಿಪಡಿಸಿಕೊಳ್ಳುತ್ತ ಕೆಳಗಿಳಿದನು. ತಂಬುಲದಿಂದ ಅವನ ಬಾಯಿ ಕೆಂಪಾಗಿತ್ತು. ವುಲನ್ ಕೋಟಿನಿಂದ ಹೊರಟ ಅತ್ತರಿತ ಘಮಘಮಾಟವು ತೋಟದ ಹೂಗಳ ವಾಸನೆಯನ್ನು ಬದಲಿಸತೊಡಗಿತ್ತು. ಕೋಟಿನಲ್ಲಿ ತಾಜಾ ಗುಲಾಬಿಯೊಂದು ಅರಳಿತ್ತು. ಕಿಸೆಯಿಂದ ಮೂರುನಾಲ್ಕು ವಿಧವಿಧ ವರ್ಣದ ಕೈವಸ್ತ್ರಗಳು ಇಣುಕಾಡುತ್ತಿದ್ದವು. ಪಾಲಿಶ್‌ದಿಂದ ಕಾಲಲ್ಲಿಯ ಸ್ಲಿಪರ್‌ಗಳು ಮಿರಿಮಿರಿ ಮಿಂಚುತ್ತಿದ್ದವು. ಕೊರಳಲ್ಲಿ ಕಂದೀಬಣ್ಣದ ಸ್ಕಾರ್ಫು ಶೇಷನಂತೆ ಸುತ್ತಿಕೊಂಡಿತ್ತು. ಕೂದಲಿನ ಬೈತಲೆ ಹಣೆಯ ಮಧ್ಯಕ್ಕೆ ಬಂದಿತ್ತು. ಅಂದು ಅಬ್ದುಲ್ ಅಜೀಜನು ವಸಂತರಾಯನನ್ನು ಮಜನೂನನ್ನಾಗಿಸಲು ಸುರ್ಮಾ[೧]ದ ಲೇಪನವನ್ನು ಅವನ ಕಣ್ಣಿಗೆ ಕೊಟ್ಟಿದ್ದನು. ಈ ಸರ್ವ ಪ್ರಕಾರಗಳಿಂದ ವಸಂತರಾಯನು ಅರ್ಧ ನಾಟಕದಲ್ಲಿಯ ಭೀಮಸೇನ, ಅರ್ಧ ಮೂರು ತಿಂಗಳ ಬಾಣಂತಿ – ಈ ದ್ವಿವಿಧ ವ್ಯಕ್ತಿತ್ವವನ್ನು ಪಡೆದಿದ್ದನು.

ಹೆಡ್‌ಮಾಸ್ತರರು ತಮ್ಮ ಕಾಲೊಳಗಿನ ಜೋಡುಗಳ ಪರಿವೆಯಿಲ್ಲದೆ ಕುದುರೆಯತ್ತಣಿಂದ ಧಾವಿಸುತ್ತ ಬಂದವರೇ ವಸಂತನೆದುರು ಗಕ್ಕನೆ ನಿಂತರು ! ಮುಗಿಯಲು ಎತ್ತಿದ ಕೈಗಳಿಂದ ಹಣೆಯನ್ನು ತುರಿಸಿದಂತೆ ಮಾಡಿ ಕೆಳಗಿಳಿಸಿದರು. ಅವರಿಗೆ ಕ್ಷಣಾರ್ಧ ಏನು ಮಾತಾಡಬೇಕೆಂಬುದು ತೋಚದೆ ಅತ್ತಿತ್ತ

---

೧. ಪುಡಿಕಾಡಿಗೆ.

ನೋಡತೊಡಗಿದರು. ವರ್ಗದೊಳಗಿನ ವಿದ್ಯಾರ್ಥಿಗಳು ಒಬ್ಬರನ್ನೊಬ್ಬರು ನೋಡಿ ನಗೆ ಬಿಗಿಹಿಡಿದರು. ಆದರೆ ಐದನೆಯ ಇಯತ್ತೆಯಲ್ಲಿ ಕಲಿಸುತ್ತಿದ್ದ ಓರ್ವ ತರುಣ ಅನ್‌ಟ್ರೇಂಡ್ ಮಾಸ್ತರರಿಗೆ ನಗೆ ತಡೆಯದಾಗಿ ತಾವೇ 'ಗಿಕ್' ಮಾಡಿದ ಮೂಲಕ ಆ ವರ್ಗ 'ಹೋss' ಎಂದು ನಕ್ಕಿತು. ಅದೇ ನಗೆ ಸಮೀಪದ ಕ್ಲಾಸುಗಳಿಗೆ ಹಬ್ಬಿ ಮೂರುನಾಲ್ಕು ಕ್ಲಾಸುಗಳು ದೊಡ್ಡ ದನಿಯಿಂದ ನಕ್ಕವು. ಈ ನಗೆಯಲ್ಲಿ ಹೆಡ್‌ಮಾಸ್ತರರು ತಮ್ಮ ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡು ತಮ್ಮ ಕರ್ತವ್ಯಕ್ಕೆ ಸಿದ್ಧರಾದರು.

'ಏನಿಲ್ಲಸರ್, ಮನ್ಯಾಗಶ್ರಾದ್ಧ ಇತ್ತು ; ಅದಕ್ಕೆ ಬರಲಿಕ್ಕೆ ತಡ ಆತು.' ಹೆಡ್‌ಮಾಸ್ತರರಿಗೆ ಈ ಶ್ರಾದ್ಧವನ್ನು ಮುಗಿಸಿಯೇಬಿಡಬೇಕೆಂದು ತೋಚಿ ಅವನನ್ನು ತಮ್ಮ ಕೋಣೆಗೆ ಕರೆದೊಯ್ದರು. ಪ್ರಣಯದೋಲೆಯನ್ನು ಅವನ ಕೈಗಿತ್ತು, 'ಇದನ್ನ ನೀನs ಬರೆದೆಯೇನು?' ಎಂದು ಕೇಳಿದರು.

ಆ ಪತ್ರವು ಕೇವಲ ತನ್ನ ರಕ್ತದಿಂದಲೇ ಬರೆಯಲ್ಪಟ್ಟದ್ದಾಗಿದ್ದರೂ ಕೂಡ, ಹೆಡ್‌ಮಾಸ್ತರರ ಕೈಯಿಂದ ತನ್ನೆದುರು ಬಂದಾಗ ಅದೇಕೋ ವೈರತ್ವದಿಂದ ತನ್ನನ್ನು ನೋಡುವಂತೆ ತೋರಿತು. ತನ್ನದೇ ಆದ ಹಸ್ತಾಕ್ಷರ, ತನ್ನದೇ ಸಹಿ, ಮತ್ತೆ ತಪ್ಪು ತಿಳುವಳಿಕೆಯಾಗಬಾರದೆಂದು ತಾನು ಸೇರಿಸಿದ 'ಬಹದ್ದೂರ' ಎಂಬ ಶಬ್ದ – ಇವೆಲ್ಲ ವಸಂತನ ಕೈಕಟ್ಟಿದವು. ಸುಳ್ಳು ಹೇಳಲು ಮನಸ್ಸಾಗಲಿಲ್ಲ. ಸುಳ್ಳು ಆವೇಶ ತಂದುಕೊಂಡು ವಸಂತ ಕಾಯಿದೆಯ ಮೊರೆಹೋಗಲು ಯತ್ನಿಸಿದನು.

'ಹೌದು, ನಾನs ಬರದೇನಿ. ನೀವು ಯಾಕ ಓದಿದಿರಿ ಅದನ್ನ ?'

ಹೆಡ್‌ಮಾಸ್ತರರು ಕೂಡಲೇ ಜಜ್ಜನ ಪತ್ರವನ್ನು ಹಿಡಿದರು ಅವನ ಮೂಗಿನ ಮುಂದೆ. ಜೊತೆಗೆ 'ನಾಳೆಯಿಂದ ನೀನು ಸಾಲಿಗೆ ಬರಬಾರದು !' ಎಂದು ಗರ್ಜಿಸಿದರು.

ಅವರ ಆವೇಶ ಕಂಡು ವಸಂತರಾಯ ಸಾಮೋಪಾಯ ಹುಡುಕಿದನು. 'ಸರ್, ನಿಮ್ಮಗಾ ಅಂತ ತಿಳಿಕೊಳ್ರಿ ; ಇದೊಂದ ಸರೆ ಹೊಟ್ಯಾಗಹಾಕ್ಕೊಳ್ರಿ. ತಪ್ಪಾತು, ಕ್ಷಮಾ ಮಾಡಿರಿ... !' ಮಾಸ್ತರರಿಗೆ ವಸಂತನ ಈ ಪ್ರಕಾರವು ಹೊಸತಲ್ಲ. 'ಅದೇನಿಲ್ಲ ! ನಾಳೆಯಿಂದ ನೀ ಸಾಲಿಗೆ ಬರುವಂತಿಲ್ಲ, ಬಂದರ....' ಎಂದು ಉಗುಳು ನುಂಗಿದರು. ವಸಂತನಿಗೆ ಈ ಮಾತು ಹೊಸತು.

'ಬಂದರ ಏನು ಮಾಡುತೀರಿ ?'

'ಅದನ್ನ ಬಾಳಪ್ಪಗ ಕೇಳು...'

ಬಾಳಪ್ಪ ಗಂಟೆ ಹೊಡೆಯುವ, ಲಠ್ಠ ಸಿಪಾಯಿ. ವಸಂತನಿಗೆ ಬ್ರಹ್ಮಾಂಡ ಸಿಟ್ಟುಬಂದಿತು ; ಅವಮಾನವೂ ಆಯಿತು. ಅರ್ಧ ದರ್ಪದಿಂದ, ಅರ್ಧ ಬಿಕ್ಕಳಿಸುತ್ತ, 'ಹುಂ ! ಬಾಳಪ್ಪ ಏನು ಮಾಡತಾನ...? ನಮ್ಮಪ್ಪ ಹಚ್ಚಿ ಕೊಟ್ಟ ನೌಕರಿ... ಇಲ್ಲದಿದ್ದರ ಹಳ್ಳಾ ಹಿಡೀತಿದ್ದ... ಬರಲಿ ನನಗೆ ಕೈಹಚ್ಚಲಿಕ್ಕೆ ; ನೋಡತೇನಿ....' ಎಂದು ಕೂಗಾಡಿ ಮುಖ್ಯ ವಿಷಯಕ್ಕೆ ಬಂದನು. 'ಸಾಲಿಗೆ ನಾ ಬರಬಾರದs...? ಯಾಕೆ? ನಾವೇನೂ ಕಲ್ಲು ಕೊಡೂದಿಲ್ಲ ; ಫೀ ಕೊಡತೇವಿ ಫೀ !'

'ನಿನ್ನ ಫೀನೂ ಬ್ಯಾಡ ; ನೀನೂ ಬ್ಯಾಡ.'

'ಯಾಕ್ಕ? ಬೇಕಾದಾಗ ಬಾ, ಬ್ಯಾಡಾದಾಗ ಬರಬ್ಯಾಡ ಅನಲಿಕ್ಕೆ ಇದು ನಿಮ್ಮಪ್ಪನ ಸಾಲಿ ಅಲ್ಲ... ! ಹಂ... ಹ....' ಎಂದು ವಸಂತ ಬಿಕ್ಕಿಸತೊಡಗಿದನು. ಸಿಪಾಯರು ಓಡಿಬಂದು ಅವನನ್ನು ಹಿಡಿದರು. ಅವರ ಕೈಯಲ್ಲಿಯೇ ನೆಲಕ್ಕೆ ಕುಳಿತುಕೊಂಡನು. ಹೆಡ್‌ಮಾಸ್ತರರು ದೇಸಾಯರೇ ಬರಕೊಟ್ಟ ಅರ್ಜಿಯನ್ನು ಓದಿ ಹೇಳಿದಮೇಲೆಂತೂ ಅವನಿಗೆ ನೆಲವೇ ಕುಸಿದಂತಾಯಿತು. ಕೊನೆಗೆ ದೇಸಾಯರೇ ಬಾಳಪ್ಪನಿಂದ ಹೊರಗೆ ಹಾಕಿಸಲು ತೋಂಡೀ[೧] ಸೂಚನೆಯನ್ನು ಕೊಟ್ಟಿದ್ದಾರೆಂಬುದನ್ನೂ ಹೆಡ್ ಮಾಸ್ತರರು ಅವನಿಗೆ ತಿಳಿಸಿದರು. ಅವರೂ ಎಲ್ಲ ಹೊಣೆಯನ್ನು ಬಲ್ಲರು. ಸಿಟ್ಟಿಗೆದ್ದ ವಸಂತರಾಯ ತಾವು ಕತ್ತಲಲ್ಲಿ ಹೊರಟಾಗ ಏನಾದರೂ ಮಾಡಿದರೆ... ? ಎಲ್ಲವನ್ನೂ ಹೇಳುವದಾದಮೇಲೆ ಇನ್ನು 'ನೀನು ಹೋಗಬಹುದು' ಎಂದರು.

ವಸಂತ ಪುಟಚಂಡಿನಂತೆ ಎದ್ದು ಹೊರಗೆ ಬಂದನು. ರೊಕ್ಕ ಕೊಟ್ಟಿದ್ದಿಲ್ಲವಾದ್ದರಿಂದ ಟಾಂಗಾ ಇನ್ನೂ ಹೊರಗೇ ನಿಂತಿತ್ತು. ವಸಂತರಾಯ ಅರ್ಧ ಬಿಕ್ಕುತ್ತ, ಅರ್ಧ ಬೆರಳು ಮುರಿಯುತ್ತ, 'ಯಾರಪ್ಪನ ಹಂಗು !' ಎಂಬ ಭಾವದಿಂದ ಮತ್ತೆ ಟಾಂಗೆಯನ್ನು ಹತ್ತಿದನು. 'ಮಾರರೇ ! ಇಸ್ ಸ್ಮಶಾನ ಕಟ್ಟಾಕೋ ಕೋನ ಆತಾ ಹೈ' ಎಂದು ಅಲ್ಲಿಯೇ ಶಾಲೆಯ ನೆಲದ ಮೇಲೆ ಉಗುಳಿದನು.

* * * *

---

೧. ಬಾಯಿಮಾತಿನ.

## ೧೨ : ವಸಂತರಾಯನ ಲಂಕಾದಹನ

ಶಾಲೆಯಿಂದ ಹೊರಬಿದ್ದ ವಸಂತರಾಯನು ಅಬ್ದುಲ್ ಅಜೀಜನ ಕೋಣೆಗೆ ಬಂದನು. ಅಬ್ದುಲ್ ಅಜೀಜನಿಗೆ ತನ್ನ ಕಲಾಕೃತಿಗೆ ಬಹುಮಾನ ದೊರಕದ್ದಕ್ಕಾಗಿ ಬಹಳ ವ್ಯಸನವಾಯಿತು. ಈ ಪ್ರೇಮಭಂಗದಿಂದ ನಿಜವಾದ ದುಃಖವಾದದ್ದು ಅವನಿಗೇ. ಲೈಲಾ–ಮಜನೂರ ಕತೆಯಲ್ಲಿಯೇ ಬೆಳೆದ ಅವನಿಗೆ ವಸಂತ ಎಲ್ಲಿ 'ಬರಬಾದ' ಆಗುವನೋ, ಎಲ್ಲಿ ಎದೆ ಒಡೆದುಕೊಳ್ಳುವನೋ, ಎಲ್ಲಿ ಹುಚ್ಚನಾಗುವನೋ, ಎಂಬ ಚಿಂತೆ ಹುಟ್ಟಿ, ಆ ರೀತಿ ಅವನ ಸಮಾಧಾನ ಮಾಡತೊಡಗಿದನು. ಆದರೆ ವಸಂತರಾಯ ಪ್ರೇಮದ ವಿಷಯವನ್ನು ಮರೆತೇ ಬಿಟ್ಟಿದ್ದನು. ಅದರ ಬದಲು, ಆದ ಅವಮಾನವನ್ನು ನೆನೆಯುತ್ತ ಶಾಲೆಯನ್ನು ಸುಡಲೋ, ಹೆಡ್‌ಮಾಸ್ತರರನ್ನು ಕತ್ತಲಲ್ಲಿ ಸಂಧಿಸಲೋ, ಎಂಬ ಎದೆಗಾರಿಕೆಯ ಖಂಬೀರ[೧] ವಿಚಾರಗಳಿಂದ ಅವನ ತಲೆ ತುಂಬಿಹೋಗಿತ್ತು. ಅಬ್ದುಲ್ ಅಜೀಜನ 'ಗಝಲ್'ಗಳಿಂದ ಅವನ ಗಂಡುಹಸಿವು ತಮಿಯದ್ದರಿಂದ 'ಏಕಾಕೀ ವಿಕ್ರಮಂ ಕುರ್ಯಾತ್' ಎಂಬ ವಿಚಾರದಿಂದ ಕತ್ತಲಾದ ಮೇಲೆ ಮನೆಯತ್ತ ಹೊರಟನು. ಮನೆಯ ಸಮೀಪ ಬಂದೊಡನೆ 'ಇಲ್ಲಿಗೇಕೆ ಹೋಗುವದು?' ಎಂಬ ವಿಚಾರ ಬಂದು ಮರಳಿದನು. ಇಂತು ಡೋಲಾಚಲ ಚಿತ್ತವೃತ್ತಿಯಿಂದ ಮೂರು ಬಾರಿ ಸುತ್ತಾಡುವಷ್ಟರಲ್ಲಿ ಹತ್ತೇ ಹೊಡೆಯಿತು. ಕೊನೆಯ ಬಾರಿ ತನ್ನ ಮನೆಯ ಕಾಂಪೌಂಡಿನ ಬೇಲಿಯ ಮರೆಯಿಂದ ಈ ಸಂಭಾಷಣೆಯನ್ನು ಕೇಳಿದನು :

'ಏ, ಆ ಭಾವೀಕಟ್ಟೀ ಅವರ ಮನ್ಯಾಗ ಇಸ್ಪೇಟು ಆಡಿಕೋತ ಕೂತಾನೇನು ನೋಡಿ ಬಾ' ಎನ್ನುತ್ತಿದ್ದರು ದೇಸಾಯರು.

'ಅಲ್ಲೆ ಇಲ್ಲರಿ, ಗೌಡರ.'

'ಆ ಮುಸಲ್ಮಾನ ಹುಡುಗನ ಕೋಣಿ ನೋಡಿದೇನು ?'

'ಇದs ಹೋಗಿ ಬಂದಿನ್ರಿ.'

'ಹಂಗಾದರ ಇಲ್ಲೇ ಇನ್ನೊಂದು ತಾಸು ಹಾದಿ ನೋಡರಿ. ಆತ ಬಂದ

---

೧. ಧೈರ್ಯಶಾಲಿ.

ಕೂಡಲೇ ನನಗ ಎಬ್ಬಿಸರಿ. ಎಲ್ಲಿ ಹೋಗತಾನ !' ಮುಂದೆ ಎಲ್ಲನೂ ಮೌನ.

ಈ ಸಂಭಾಷಣೆ ಕೇಳಿ ವಸಂತನಿಗೆ ಅಲ್ಲಿಂದ ಓಡಬೇಕೆಂದು ಇಚ್ಛೆಯಾಯಿತು. ಆದರೆ ಆತನ ಕಾಲು ನೋಯತೊಡಗಿದ್ದವು. ಅಜೀಜನ ಕೋಣೆ ದೂರ ಉಳಿದಿತ್ತು. ಇನ್ನಾರ ಮನೆಗಾದರೂ ಹೋದರೆ ಇಲ್ಲದ ಚಿಕಿತ್ಸೆ ಪ್ರಾರಂಭವಾಗುತ್ತದೆ. ಪುರೋಹಿತ ಬಾಳಂಭಟ್ಟನ ಮನೆಗೆ ಹೋಗಿ, 'ಭಟ್ಟಾ, ನಿನ್ನಲ್ಲೇ ಊಟಕ್ಕ ಹಾಕು' ಎನ್ನಬಹುದಿತ್ತು. ಆದರೆ ಅಲ್ಲಿ ಮಲಗುವದು ಅಸಾಧ್ಯ–ತಗಣಿಗಳ ಕಾಟ. ವಸಂತನಿಗೆ ಒಂದೇ ಉಪಾಯ ಕಾಣಿಸಿತು, ಹಿತ್ತಲಿನಿಂದ ಅಂಗಳವನ್ನು ಪ್ರವೇಶಿಸಿ, ಹೇಗಾದರೂ ಮಾಡಿ ಸದ್ದಿಲ್ಲದೆ ಅಟ್ಟದ ಮೇಲಿನ ತನ್ನ ಕೋಣೆಯನ್ನು ಸೇರುವದು.

ಹಿತ್ತಲಲ್ಲಿ ಎಲ್ಲೆಡೆಗೂ ಕತ್ತಲಾಗಿತ್ತು. ಬೇಲಿ ಜಿಗಿದು, ಮುಳ್ಳು ನಡದೇ ಇದ್ದದ್ದಕ್ಕೆ ಆನಂದಪಡುತ್ತ ಮನೆಯ ಬಳಿಗೆ ಬಂದನು. ಕತ್ತಲಲ್ಲಿ ಮನೆ ಬೆಳ್ಳನೆಯ ದೆವ್ವದಂತೆ ಅಸ್ಪಷ್ಟವಾಗಿ ನಿಂತಿತ್ತು. ತನ್ನ ಟೊಪ್ಪಿಗೆಯನ್ನು ಕೋಟಿನ ಕಿಸೆಗೆ ಹಾಕಿ, ಕೋಟು ತೆಗೆದು ತೋಳುಗಳಿಂದ ಅದನ್ನು ಟೊಂಕಕ್ಕೆ ಕಟ್ಟಿಕೊಂಡನು, ಸ್ಲಿಪರ್‌ಗಳನ್ನು ಮೋರಿಯಲ್ಲಿ ಮುಚ್ಚಿಟ್ಟನು. ಏರುಗಚ್ಚೆ ಹಾಕಿ ಕಿಡಿಕಿಗೆ ಕಾಲಿಕ್ಕಿ ಅದರ ಕಂಬಿಗಳ ಮೇಲೆ ಹೆಬ್ಬೆರಳುಗಳಿಂದ ಸರಿಯುತ್ತ ಒಂದು ಕಿಡಿಕಿಯ ಕಮಾನಿನ ಮಧ್ಯಶಿಲೆಗೆ ನೇತುಬಿದ್ದನು. ಅಲ್ಲಿಂದ ಜೀಕಿ, ಒಂದು ಹೊರಗೆ ಬಂದ ಪುಟ್ಟ ಕಲ್ಲಿನ ಆಧಾರಕ್ಕೆ ಕಾಲು ಕೊಟ್ಟು, ಮೊಣಕಾಲೂರಿ ಮಧ್ಯಶಿಲೆಯ ಮೇಲೆ ಏರಿದನು. ಅರ್ಧಫೂಟು ಅಗಲವಾಗಿದ್ದ ಆ ಕಲ್ಲಮೇಲೆ ಮೊಣಕಾಲು ತಾಕಿ ನೋಯತೊಡಗಿತು. ಗೋಡೆ ಮೇಲೆ ಅಂಗೈಗಳನ್ನು ಒತ್ತಿ ಪ್ರಯಾಸದಿಂದ ಸರಿಯುತ್ತ ಕೊನೆಗೊಮ್ಮೆ ನೀಟಾಗಿ ಎದ್ದು ನಿಂತನು. ಅಲ್ಲಿಂದ ಕೈ ಮೇಲೆ ಚಾಚಲಾಗಿ ತನ್ನ ಕೋಣೆಯ ಕಿಡಕಿಯ ತಳಗಲ್ಲು ತುದಿ ಬೆರಳಿಗೆ ಹತ್ತಿತು. ಕಿಡಿಕಿಯ ಒಂದು ಕಂಬಿ ಕೈಗೆ ಹತ್ತಿದರೆ ಒಂದೇ ಹಾರಿಕೆಯಲ್ಲಿ ವಸಂತ ಮೇಲಾಗುತ್ತಿದ್ದನು. ಇನ್ನೊಂದೆಡೆಗೆ ಕೈಚಾಚಿದರೆ ವ್ಹರಾಂಡದ ಕಂಬಿಗಳು ಒಂದೇ ಅಂಗುಲ ದೂರ ಉಳಿಯುತ್ತಿದ್ದವು. ವಸಂತ ಇಡೀ ಮೈಯನ್ನೇ ಹೀಚಿ ತುದಿಗಾಲ ಮೇಲೆ ನಿಂತನು. ತುದಿಬೆರಳು ಕಿಡಿಕಿಯ ಕೋನಶಿಲೆಗೆ ಅರ್ಧ ಇಂಚಿನಷ್ಟು ಮಾತ್ರ ಸುತ್ತಿತು. ಇಷ್ಟರಮೇಲೆ ಜೋತುಬೀಳುವದು ಹೇಗೆ ಸಾಧ್ಯ?...

ಇಂಥಾ ನಿರಾಶೆ ವಸಂತನ ಜೀವನದಲ್ಲಿಯೇ ಆಗಿರಲಿಲ್ಲ. ಈವರೆಗೆ ಮರೆತು ಹೋದ ಶಾರೀರಿಕ ದಣಿವು ಒಮ್ಮೆಲೇ ಅವನ ಮೇಲೆ ಕುಸಿದಿತು. ಮೈಯೆಲ್ಲ ಸೋತು ಜೋರನೆ ಬೆವೆತಿತು. ಮೀನಗಂಡಗಳೊಳಗೆ ಕಬ್ಬಿಣದ

ಮೊಳೆ ಹೊಡೆದಷ್ಟು ನೋಯತೊಡಗಿತು. ಅಂಗಾಲು ಕೂಡ ಬೆವೆತವು. ಅವನು ಇದೇ ನಿರಾಶೆಗೆ ಇನ್ನಷ್ಟು ಮೈಗೊಟ್ಟಿದ್ದರೆ ಹಂಚಿನಿಂದ ಬೀಳುವ ಹಲ್ಲಿಯಂತೆ ನೆಲಕ್ಕೆ ಉದುರುತ್ತಿದ್ದನು. ಆದರೂ ಪ್ರಸಂಗಾವಧಾನವನ್ನು ತಳೆದನು. ಕಾಲು ಕೆಳಗೆ ನೇತಾಡಿಸಿ ನೋಡಿದನು. ಕೆಳಗಿನ ಕಿಡಿಕಿಯ ಕಂಬಿಗಳು ಹತ್ತಲಿಲ್ಲ. ಜಿಗಿಯುವದೊಂದೇ ಉಪಾಯ. ಕತ್ತಲಲ್ಲಿ ನೆಲ ಎಷ್ಟು ದೂರ ಇದೆಯೆಂಬುದು ಕಾಣದಾಗಿತ್ತು. ಆದರೆ ಎಲ್ಲಿ ಬಿದ್ದರೂ ಬೆಕ್ಕಿನಂತೆ ಕಾಲ ಮೇಲೆಯೇ ಬೀಳಬೇಕೆಂದು ನಿಶ್ಚಯಿಸಿ ಕೋನಶಿಲೆಯಿಂದ ಕೆಳಗೆ ಹಿಂಬರಿಕೆ ನೆಗೆದನು. ಗಾಳಿಯಲ್ಲಿ ಅರೆಕ್ಷಣ ಅನಿರ್ಬಂಧವಾಗಿ ಪ್ರಯಾಣಮಾಡಿ ನೆಲಕ್ಕೆ 'ಉಯಿಕ್' ಎಂದು ಕುಳಿತನು. ಕಣ್ಣಿಗೆ ಚಕ್ರ ಬಂದಂತಾಗಿ ಕುಳಿತಲ್ಲಿಯೇ ತಲೆ ಹಿಡಿದುಕೊಂಡು ಕುಳಿತು ತುಸು ವಿಶ್ರಮಿಸಿದನು. ಜಗತ್ತೇ ಶೂನ್ಯವಾಗಿ ತೋರತೊಡಗಿತು.

ಆದರೆ ಅಷ್ಟರಲ್ಲಿ ಮೂಲೆಯಲ್ಲಿ ಸರಸರ ಸದ್ದಾಯಿತು. ಕೊಟ್ಟಿಗೆ ! – ಕೊಟ್ಟಿಗೆ ವಸಂತನನ್ನು ಕರೆಯಿತು. ಅಲ್ಲಿ ಸರಿಯುತ್ತ ಹೋಗಿ ಮೇವಿನ ಹಾಸಿಗೆಯನ್ನು ಮಾಡಿ ಅದಕ್ಕೆ ತನ್ನ ದೇಹವನ್ನು ನೀಡಿದನು. ಅಲ್ಲಿಯೇ ನಿದ್ದೆ ಹತ್ತಿತು.

ಅಂದು ರಾತ್ರಿ ಹನ್ನೆರಡಾದರೂ ಮಗ ಮನೆಗೆ ಬರಲಿಲ್ಲ. ಸಿನೇಮಾಕ್ಕೆ ಹೋಗಿದ್ದರೆ ಹನ್ನೆರಡಕ್ಕಾದರೂ ತಿರುಗಿ ಬರಬೇಕಾಗಿತ್ತು. ವೇಣೂಬಾಯಿ ಆವರೆಗೆ ಸುಮ್ಮನಿದ್ದವಳು, ದುಃಖಿಸಿ ದುಃಖಿಸಿ ಅಳತೊಡಗಿದಳು. ಇಬ್ಬರಿಗೂ ಅಂದು ಊಟವಿಲ್ಲ. ದೇಸಾಯರು ಎರಡು ಗಂಟೆಯವರೆಗೆ ಓಣಿ ಓಣಿ ಅಡ್ಡಾಡಿದರು. ಕೊನೆಗೆ ರೈಲ್ವೇಸ್ಟೇಶನ್ನಿಗೆ ಹೋಗಿ ಅಲ್ಲಿ ತಾವು ವೇಟಿಂಗ ರೂಮಿನಲ್ಲಿ ಕುಳಿತು ಒಂದು ಹಳಿಯ ಬದಿಗೆ ಭರಮನನ್ನೂ ಇನ್ನೊಂದು ಕಡೆಗೆ ಯಲ್ಲವನ್ನೂ ಓಡಿಸಿದರು. ಅವರು ಕಂದೀಲುಗಳೊಡನೆ ಎರಡೂ ದಿಕ್ಕಿಗೆ ಓಡಿ ಒಂದೊಂದು ಮೈಲು ನೋಡಿ ಬಂದರು. ದೇಸಾಯರು ಉಸಿರ್ಗರೆಯುತ್ತ ಮನೆಗೆ ಮರಳಿದರು. ವೇಣೂಬಾಯಿ ತನ್ನ ಚಿಕ್ಕ ಮಗ ಪುರುಷೋತ್ತಮನನ್ನು ಎದೆಗೆ ಅವಚಿಕೊಂಡು ಒಂದೇ ಟಕ್ಕಿ[೧]ನಲ್ಲಿ ಮಲಗಿದ್ದಳು. ತುಸು ಸಪ್ಪಳಕ್ಕೆ ಎಚ್ಚತ್ತು ಮತ್ತೆ ರೋದನ ಆರಂಭಿಸಿದಳು. ದೇಸಾಯರು ಆಕೆಗೆ ಹಾಗೂ ಹೀಗೂ ಸಮಾಧಾನ ಹೇಳುವಷ್ಟರಲ್ಲಿ ಕೋಳಿಯೇ ಕೂಗಿತು. ಬೆಳಗುಮುಂಜಾನೆ ಮನೆಯಲ್ಲಿ ಎಲ್ಲರೂ ನಿದ್ದೆಹೋದರು.

---

೧. ದಾರಿ ಕಾಯುವ ಕಾತುರ.

ಆದರೆ ಏಳು ಗಂಟೆಗೆ ಸೆಗಣಿಗಸ ಬಳಿಯಲು ಕೊಟ್ಟಿಗೆಗೆ ಬಂದ ಭರಮನಿಗೆ ದ್ರೋಣಾವತಾರದಂತೆ ಹೊಟ್ಟು – ಮೇವಿನಲ್ಲಿ ಮಲಗಿದ್ದ ವಸಂತರಾಯನು ಕಂಡನು. ಕೂಡಲೇ ಅದೇ ಜಂಪುಹತ್ತುತ್ತಿದ್ದ ದೇಸಾಯರು ಎಬ್ಬಿಸಲ್ಪಟ್ಟರು. ವೇಣೂಬಾಯಿ ಓಡುತ್ತ ಬಂದು ಸ್ತಂಭೀಭೂತಳಾಗಿ ದೃಷ್ಟಿ ಹತ್ತುವವರೆಗೆ ಮಗನನ್ನು ನೋಡಿದಳು. ದೇಸಾಯರು ಬಂದವರೇ ಇನ್ನೊಂದು ಮಾತಾಡದೆ ಭರಮನಿಗೆ ಅವನನ್ನು ಎಚ್ಚರಗೊಳಿಸಲು ಹೇಳಿದರು. ವೇಣಕ್ಕ ತಾನೇ ಹೋಗಿ ಅವನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ಎಚ್ಚರಿಸಿದಳು. ವಸಂತ ಕಣ್ಣು ತಿಕ್ಕುತ್ತ ಎದ್ದು ಕುಳಿತನು. ಅತ್ತಿತ್ತ ನೋಡುವಷ್ಟರಲ್ಲಿ ಆಕಳು, ಹುಲ್ಲು, ಮೇವು ಸೆಗಣಿ – ಇವುಗಳ ದರ್ಶನದಿಂದ ಪೂರ್ವದಿನದ ಸ್ಮರಣೆಯಾಯಿತು. ತಾಯಿ ಅವನನ್ನು ಅಪ್ಪಿಕೊಂಡು, ‘ವಸಂತಾ, ವಸಂತಾ !’ ಎಂದು ಹಂಬಲಿಸಿದಳು. ಬಲು ಸಂಭ್ರಮದಿಂದ ಒಂದು ಬಟ್ಟಲು ಹಾಲು ಕುಳಿತಲ್ಲಿಯೇ ಕುಡಿಸಿದಳು. ದೇಸಾಯರು ಎಲ್ಲವನ್ನೂ ಸುಮ್ಮನೇ ನೋಡಿದರು. ಮಗನು ಹಾಗೆ ಮಲಗಿದ್ದನ್ನು ನೋಡಿ ಅವರ ಬುದ್ಧಿಯನ್ನೂ ಮೀರಿ ಕನಿಕರ ಉಕ್ಕಿತ್ತು. ಆದರೆ ಏಕೋ ಮುಖದ ಮೇಲೆ ಅದನ್ನು ತೋರಗೊಡಲು ಅವರಿಗೆ ಮನಸ್ಸಾಗಲಿಲ್ಲ.

ವೇಣಕ್ಕ ವಸಂತರಾಯನಿಗೆ ಮೈಯೆಲ್ಲ ಎಣ್ಣೆ ತಿಕ್ಕಿ ಎರೆದಳು. ಕದಲಾರತಿ ಮಾಡಿ ದೃಷ್ಟಿತೆಗೆದು, ಹಣೆಗೆ ಕುಂಕುಮದ ಬೊಟ್ಟಿಟ್ಟಳು. ಫರಾಳಕ್ಕೆ ಕೂಡಿಸಿದಳು. ಹಸಿದು ಕಂಗಾಲಾದ ವಸಂತ ಎಲ್ಲವನ್ನೂ ಸುಖವಾಗಿ ಸವಿದನು. ಕೊನೆಗೆ ತಾಯಿ, ‘ವಸಂತಾ, ನನ್ನ ಕೈ ಬಿಡಬ್ಯಾಡಪಾ. ನೋಡು, ನಿನ್ನ ದಶಿಂದ ನನಗ ಸ್ವಲ್ಪ ಸುದ್ಧಾ ನಿದ್ದಿಹತ್ತಲಿಲ್ಲ. ರಾತ್ರೆಲ್ಲಾ ಹೀಂಗs ಎದ್ದುಕೂತೇನಿ. ಅವರಾದರೂ ನಿನ್ನ ಹೆಂಗ ರಾತ್ರೋರಾತ್ರಿ ಓಣಿ ಓಣಿ ಹುಡುಕಾಡಿದರು, ಎಷ್ಟು ತ್ರಾಸ ಮಾಡಿಕೊಂಡರು, ಆ ಭರಮಗ ಕೇಳು. ಹೋಗಪ್ಪಾ, ‘ನನ್ನದು ತಪ್ಪಾತು’ – ಇಷ್ಟು ಅವರ ಎದುರಿಗೆ ಆಡಿ ಬಾ. ಅವರ ಮನಸ್ಸಿಗೆ ಒಂದಿಷ್ಟಾದರೂ ಹಗುರು ಆದೀತು...’ ಎಂದು ಬೇಡಿಕೊಡಳು.

ಆದರೆ ಹೊಟ್ಟೆ ತುಂಬಿದ ಮೂಲಕ ವಸಂತನು ತಂದೆಯನ್ನು ಕ್ಷಮಿಸಲು ಸಿದ್ಧನಾಗಲಿಲ್ಲ. ಮತ್ತೆ ತಂದೆಯೇ ತನ್ನನ್ನು ಶಾಲೆಯಿಂದ ಹೊರತೆಗೆದದ್ದು, ಸಿಪಾಯರನ್ನು ಹಚ್ಚಿ ಹೊರಗೆ ಹಾಕಲು ಮಾಸ್ತರರಿಗೆ ಹೇಳಿದ್ದು ನೆನಪಾಗಿ ಅವನು ಅವ್ವನ ಮಾತಿಗೆ ಸರ್ವಥಾ ಒಪ್ಪಲಿಲ್ಲ.

* * *

ವಸಂತರಾಯನ ವಿಚಿತ್ರ ಪರಾಕ್ರಮಗಳ ಮೂಲಕ ಅವನು ಮೊದಲು

ಮಾಡಿದ ತಪ್ಪುಗಳೆಲ್ಲ ಮರೆತುಹೋಗಿ ಅವನಿಗೆ ಮನೆಯಲ್ಲಿ ಮತ್ತೆ ಯಥಾ ಪ್ರಕಾರ ಸ್ಥಾನವು ದೊರಕಿತು. ಆದರೆ ಮರುದಿನದಿಂದ ಧಾರವಾಡ ಊರೇ ಅಸಹ್ಯವಾಗತೊಡಗಿತು. ಅವನನ್ನು ಶಾಲೆಯ ಹೊರಗೆ ಹಾಕಿದ ಸುದ್ದಿ ಊರ ತುಂಬ ಹಬ್ಬಿ ಅವನಿಗೆ ಹಗಲು ಓಣಿಯಲ್ಲಿ ಅಡ್ಡಾಡಲು ಬಾರದಾಯಿತು. ಅವನಿಗೆ ಊರ ತುಂಬ ಶತ್ರುಗಳು ಕಾಣತೊಡಗಿದರು. ದಾರಿಯಲ್ಲಿ ಹುಳು ಹುಳು ಇವನ ಮುಖ ನೋಡಿದವರೆಲ್ಲ ಇವನ ಶತ್ರುಗಳೇ. ಅವರೆಲ್ಲರ ಸೇಡನ್ನು ಮಿಸ್ ಖೋತಳ ಮೇಲೆ ತೀರಿಸಿಕೊಳ್ಳಬೇಕೆಂದು ಅವನು ನಿಶ್ಚಯಿಸಿಕೊಂಡನು. ಒಂದು ರಾತ್ರಿ ಸದ್ದಿಲ್ಲದೆ ಮನೆ ಬಿಟ್ಟು ಬಂದು, ಒಂದು ಖಡುವಿನ[೧] ಡಬ್ಬಿಯೊಂದಿಗೆ ಊರ ತುಂಬ ಅಡ್ಡಾಡಿ ಸಾರ್ವಜನಿಕ ಸ್ಥಳಗಳಲ್ಲೆಲ್ಲ ತನ್ನ ಪ್ರೇಯಸಿಯ ಹೆಸರನ್ನು ಹಾಗೂ ಇತರ ಶೃಂಗಾರಿಕ ವಿಷಯಗಳನ್ನು ಬರೆದು ಬಂದನು.

ಇದರ ವಿಷಯಕ್ಕೆ ದೇಸಾಯರತ್ತ ಮತ್ತೆ ದೂರು ಬಂದಿತು. ವಸಂತ ತಾನು ಮಾಡೇ ಇಲ್ಲವೆಂದೂ ಮನೆಯ ಹೊರಗೇ ಹೋಗಿಲ್ಲವೆಂದೂ ಎಲ್ಲರ ಆಣೆಯಿಟ್ಟು ಸಾಧಿಸಿದನು. ದೇಸಾಯರಿಗೆ ಏನು ಮಾಡಬೇಕು ತಿಳಿಯದಾಯಿತು. ಕೊನೆಗೆ ವೇಣಕ್ಕನ ಬಿನ್ನಹವನ್ನು ಲೆಕ್ಕಿಸದೆ ಅವರು ಅವನನ್ನು ದೇಸಗತಿಯ ಹಳ್ಳಿಗೆ ಅಟ್ಟಿದರು. ಅವನಿಗೂ ಧಾರವಾಡ ಬಿಡುವದೇ ಬೇಕಾಗಿತ್ತು. ತಂದೆಯ ಹಾಗೂ ಧಾರವಾಡದವರ ದರ್ಶನದಿಂದ ಒಮ್ಮೆ ಪಾರಾಗಿ ಹಾಯಾಗಿ ಹಳ್ಳಿಯನ್ನು ಸೇರಿಕೊಂಡನು.

* * * *

೧. ಚಾಕ್‌ಪೀಸ್.

## ೧೩ : ಜಾರ್ಜ್ ವಾಸಿಂಗ್ಟನ್ ಕಂಬಾರಗಣಿವಿ

ಕಚೇರಿಯಲ್ಲಿ ಕಿಟ್ಟಿಯ ಬದಲುಗೊಂಡ ಮನೋವೃತ್ತಿಗನುಗುಣವಾಗಿ ಹೊಸ ಸ್ನೇಹಿತನೋರ್ವನು ದೊರಕಿದನು – ಜಾರ್ಜ್ ವಾಶಿಂಗ್ಟನ್ ಕಂಬಾರ ಗಣಿವಿ.

ಜಾರ್ಜಿಯು ತನ್ನ ಸುದೀರ್ಘ ನಾಮದ ಮೂಲಕ, ಕಚೇರಿಯಲ್ಲಿ ಕಿಟ್ಟಿಗೆ ಎಷ್ಟೋ ದಿನಗಳವರೆಗೆ ಪವಾಡಪುರುಷನಂತೆ ದೂರಕ್ಕೆ ದೂರೇ ಇದ್ದನು. ಅವನು ಯಾರೊಡನೆಯೂ ವಿಶೇಷ ಬೆರೆಯುತ್ತಿದ್ದಿಲ್ಲ. ತನ್ನ ಕೆಲಸವಾಯಿತು, ತಾನಾಯಿತು. ಯಾರನ್ನಾದರೂ ಮಾತನಾಡಿಸಿದರೆ, ಅದು ಕೆಲಸದ ಮಟ್ಟಿಗೆ ಮಾತ್ರ. ಕಿಟ್ಟಿಗಾದರೋ ಅವನು ಒಂದು ಹೆಸರು ಮಾತ್ರ. ಆದರೆ ಕಿಟ್ಟಿಯ ಮನೋವೃತ್ತಿಯೇ ಈಗ ಬದಲಾಗಿತ್ತು. ಮಾಮಲೇದಾರರ ಉಪದೇಶದಂತೆ ಮನೆಯಲ್ಲಿ ತನ್ನ ಕಾಯದೆಯನ್ನು ಹಾಗು ಇತರ ಕೇಸುಗಳನ್ನು ಅಭ್ಯಸಿಸತೊಡಗಿದನು. ಕೆಲಸದ ಮೇಲಿನ ಹಿಡಿತ ಹೆಚ್ಚಾದಂತೆ ಹಳೆಯ ಸ್ನೇಹಿತರು ಬೇಡವಾಗತೊಡಗಿದರು. ಅವರೆಡೆಗೆ ಅಜ್ಞನಂತೆ ಹೋಗಿ ಚಿಕ್ಕಪುಟ್ಟ ವಿಷಯಗಳನ್ನು ಕೇಳುವದು ಅವನ ಮಾನಕ್ಕೆ ಸಾಲದಾಯಿತು. ಅವರಾದರೋ, ಕಿಟ್ಟಿ ಮೊದಲಿನಂತೆ ಬಂದು ತಮ್ಮನ್ನು ಕೇಳಲಿ ಎಂದು ಒಳಗಿಂದೊಳಗೇ ಬಯಸುತ್ತಿದ್ದರು. ಇತ್ತಿತ್ತ, ಹಾಗೆ ತನಗೆ ತಿಳಿಯದ ವಿಷಯ ಬಂದಾಗ ಕಿಟ್ಟಿ ಸ್ವತಃ ಮಾಮಲೇದಾರರ ಬಳಿಗೆ ಹೋಗುತ್ತಿದ್ದನಾದ್ದರಿಂದ, ಇತರರಿಗೆ ಸಂಶಯ ಹುಟ್ಟಿ ಅವರು ಇವನೊಡನೆ ಮೊದಲಿನಂತೆ ಬಾಯಿಬಿಚ್ಚಿ ಮಾತಾಡದಾದರು. ಕಿಟ್ಟಿಯ ಬಗ್ಗೆ ಈಗೀಗ ಒಮ್ಮೆ ಮಾಮಲೇದಾರರು 'good worker' ಎಂದು ಅಂದದ್ದು ಉಳಿದವರ ನಡುವೆ ಹಬ್ಬಿ ತುಸು ಅಸೂಯೆಗೂ ಕಾರಣವಾಗಿತ್ತು. ಕಿಟ್ಟಿ ಯಾವ ಕೆಲಸಕ್ಕೆ ಅವರ ಕಡೆಗೆ ಹೋದರೂ ಹಂಗಿಸುವ ದನಿಯಲ್ಲಿ ಮಾತಾಡದೇ ಅವರು ಬಿಡುತ್ತಿರಲಿಲ್ಲ. ಇದರಿಂದ ಕಿಟ್ಟಿ ಬೇಸರಗೊಂಡನು. ಒಮ್ಮೆ ಒಂದು ಪುಟ್ಟ ಕೆಲಸಕ್ಕಾಗಿ ಜಾರ್ಜಿಯ ಜೊತೆಗೆ ಮಾತಾಡುವ ಪ್ರಸಂಗ ಬಂದಾಗ ಕಿಟ್ಟಿ ಸಂಭಾಷಣೆಯನ್ನು ಮುಂದುವರಿಸಿ, ಅವನನ್ನು ತನ್ನ ಸ್ನೇಹದಲ್ಲಿ ಹಿಡಿದನು. ಜಾರ್ಜಿಯಾದರೋ ಸ್ನೇಹ ಕೊಡುವವರನ್ನು ಯಾವಾಗಲೂ ಸ್ವಾಗತಿಸುವವನು ; ತಾನಾಗಿಯೇ ಯಾರ

ಪರಿಚಯಕ್ಕಾಗಿ ಹಂಬಲಿಸುವವನಲ್ಲ ; ಆದರೆ ತಾವೇ ತನ್ನ ಪರಿಘದಲ್ಲಿ ಬಂದಾಗ, ತನ್ನ ಮನಸ್ಸಿಗೆ ಸರಿದೋರಿದರೆ ಅವರನ್ನು ಕೂಡಿ ಕೊಳ್ಳುವವನು. ತುಸು ದಿನಗಳಲ್ಲಿಯೇ ಅವರ ಸ್ನೇಹ ಗಾಢವಾಯಿತು. ಕೇವಲ ಒಂದು ಹೆಸರಾಗಿ ಕಂಡ ಜಾರ್ಜಿ ಒಂದು ಜೀವಂತವ್ಯಕ್ತಿಯಾಯಿತು.

ಜಾರ್ಜಿಯ ಜೀವನ ನಿದ್ದೆಯ ಬೊಗರಿಯಂತೆ. ಮೌನವು ಅವನ ಜೀವಾಳ. ಕಚೇರಿಯಲ್ಲಿ ಅವನು ಬೆನ್ನ ಹಿಂದೆ ಇತರರು ಅವನ ಹೆಸರಿನ ಬಗ್ಗೆ, ಅವನ ಮೌನದ ಬಗ್ಗೆ ಅನೇಕ ಕುಹಕನುಡಿಗಳನ್ನು ಆಡಿ ನಗುವರು. ಆದರೆ ಕಿಟ್ಟಿಯಂತೆ ಅವನಿಗೆ ಪ್ರತ್ಯಕ್ಷ ಬೈಯಿಸಿಕೊಳ್ಳುವ ಪ್ರಸಂಗ ಈವರೆಗೂ ಬಂದಿರಲಿಲ್ಲ. ಅವನು ಎಂದು ತನ್ನ ಕಾಯದೆಗಳನ್ನು ಓದಿದ್ದನೋ ಯಾರೂ ಅರಿಯರು. ಆದರೆ ಅವನು ಇದ್ದಲ್ಲಿ ಕೆಲಸವೇ ಇಲ್ಲದಂತಾಗುತ್ತಿತ್ತು. ಕೆಲಸದ ಸುತ್ತು ನೆರೆಯುವ ಗೊಂದಲು, ತಪ್ಪುತಡೆಗಳು ಮಾಯವಾಗಿ, ಅವನು ಕೆಲಸಮಾಡುತ್ತಾನೆ ಎಂಬ ವಿಷಯ ಕೂಡ ಮರೆವಾಗುತ್ತಿತ್ತು. ಅವನಿಗೆ ಯಾರು 'good worker' ಎಂದು ಕರೆಯಲಿಲ್ಲ. ಅವನ ಕೆಲಸದ ಬಗ್ಗೆ ಯಾರೂ ಪ್ರಶಸ್ತಿಯನ್ನು ವ್ಯಕ್ತ ಮಾಡಿರಲಿಲ್ಲ. ಏಕೆಂದರೆ ಉಳಿದವರಂತೆ ಕಷ್ಟಪಟ್ಟು ಮುಂದಾಗುವ ಪ್ರಸಂಗವೇ ಅವನಿಗೆ ಬಂದಿರಲಿಲ್ಲ. ತಾನು ಚೆನ್ನಾಗಿ ಕೆಲಸ ಮಾಡುತ್ತಿದ್ದೇನೆ ಎಂಬುದನ್ನು ಅವನೂ ಅರಿಯನು. ಎಲ್ಲರೂ ತಮ್ಮ ತಮ್ಮ ಕೆಲಸವನ್ನು ಮಾಡುತ್ತಾರೆ ; ತಾನೂ ಮಾಡುತ್ತಿದ್ದೇನೆ – ಇದಿಷ್ಟೇ ಕಚೇರಿಯ ಕೆಲಸದ ವಿಷಯದಲ್ಲಿ ಅವನ ದೃಷ್ಟಿ.

ಕಿಟ್ಟಿಯಾದರೋ ಮೊದಲು ಅವನನ್ನು ಮೆಚ್ಚಿದುದು, ತನಗೆ ಇತರ ಸ್ನೇಹಿತರು ಉಳಿಯಲಿಲ್ಲವೆಂಬ ಕಾರಣಕ್ಕಾಗಿ. ಆದರೆ ಎಡವಿಬಿದ್ದರೂ ಅರಳೆಯ ಅಂಡಿಗೆಯ ಮೇಲೆ ಬಿದ್ದಂತೆ, ಕಿಟ್ಟಿ ಬೇಗನೆ ಈ ಹೊಸ ವ್ಯಕ್ತಿಯ ನಡತೆಗೆ ಮನಸೋತನು. ಎಲ್ಲಕ್ಕೂ ಮೊದಲು ಅವನು ಜಾರ್ಜಿಯಲ್ಲಿ ಮೆಚ್ಚಿದ ಗುಣವೆಂದರೆ, ಜಾರ್ಜಿಯು ಕಿಟ್ಟಿಯ ಸ್ನೇಹಿತನಾದದ್ದು ಕಿಟ್ಟಿಗಾಗಿ ಮಾತ್ರ. ಅವನು ಯಾರನ್ನಾದರೂ ಅವನ ಮುಖಬೆಲೆಗೆ ಮಾತ್ರ ಸ್ವೀಕರಿಸುವವನು. ಅವನು ಕಿಟ್ಟಿಯ ವೇಷಭೂಷಣ, ಮಾತು, ಇವುಗಳ ಬಗ್ಗೆ ಚಕಾರಶಬ್ದವನ್ನೂ ಎತ್ತಲಿಲ್ಲ. ಕಿಟ್ಟಿಯ ಬಟ್ಟೆಯ ಬಗ್ಗೆ, ಅವನ ಚಂಡಿಕೆ–ಮೀಸೆಗಳ ಬಗ್ಗೆ, ಅವನ ಟೊಪ್ಪಿಗೆ–ಕೋಟುಗಳ ಬಗ್ಗೆ ಅವನ ಎಲ್ಲ ಸ್ನೇಹಿತರು ಒಂದಿಲ್ಲೊಂದು ರೀತಿಯಲ್ಲಿ ಆಡಿದ್ದರು. ಆದರೆ ಜಾರ್ಜಿಗಾದರೋ ಇಂಥ ವಿಷಯಗಳು ಕಣ್ಣಿಗೇ ಕಾಣುತ್ತಿರಲಿಲ್ಲವೋ ಏನೋ, ಕಿಟ್ಟಿ ಹೇಗೆ ಅವನ ಸ್ನೇಹಪಥದಲ್ಲಿ ಬಂದನೋ ಹಾಗೆಯೇ ಅವನನ್ನು ಸ್ವೀಕರಿಸಿದನು.

ತನ್ನ ಕೆಲಸದಲ್ಲಿ ಚೊಕ್ಕು, ಜೀವನದಲ್ಲಿ ಒಂದು ಬಗೆಯ ಕಾಲ್ಪನಿಕ

ರೊಮಾಂಟಿಕ್ ಬೇಸರ, ಅದನ್ನು ಕಳೆಯುವದಕ್ಕಾಗಿ ಎರಡು ದಿನಕ್ಕೊಮ್ಮೆ ಸಿನೇಮಾ–ಇವಿಷ್ಟೇ ಕಿಟ್ಟಿಗೆ ಜಾರ್ಜಿಯ ವ್ಯಕ್ತಿತ್ವದ ಸಾರವಾಗಿ ತೋರಿ ಬಂದವು. ಆದರೆ ತನ್ನ ಬಗ್ಗೆ ಅವನು ವಿಚಾರವನ್ನೂ ಮಾಡಿರಲಿಲ್ಲವಾದ್ದರಿಂದ ಇಲ್ಲದ ವಿನಯವೂ ಅವನಲ್ಲಿರಲಿಲ್ಲ. ಕಿಟ್ಟಿಗೆ ಜಾರ್ಜಿ ತನಗರಿಯದೆಯೇ ಒಂದು ಆದರ್ಶವಾದನು. ಕಿಟ್ಟಿ ತನ್ನ ಪ್ರಯತ್ನಪೂರ್ವಕ ಯಶಸ್ಸಿನೊಡನೆ ಜಾರ್ಜಿಯ ಜನ್ಮಜಾತ ಯಶಸ್ಸನ್ನು ಹೋಲಿಸಿನೋಡುತ್ತ, ಏಕೆ ಹೀಗೆ ಎಂದು ಮೇಲಿಂದ ಮೇಲೆ ವಿಚಾರಮಾಡುವನು. ಅಷ್ಟಿಷ್ಟಕ್ಕೆ, ಮಾಮಲೇದಾರರು ತನಗೆ 'good worker' ಎಂದರು, ಜಾರ್ಜಿಗೆ ಅನ್ನಲಿಲ್ಲ ಎಂಬ ಮಾತಿನಿಂದ ಬಹುತರ ತನ್ನ ಕೆಲಸ ಅವನಿಗಿಂತ ಒಳ್ಳೆಯದು, ಎಂದು ಮನಸ್ಸಿನಲ್ಲಿ ಅಂದುಕೊಳ್ಳುವನು. ಆದರೆ ಅದರಿಂದ ಪೂರ್ಣ ಮನವರಿಕೆಯಾಗದು.

ಜಾರ್ಜಿ ಕಿಟ್ಟಿಯ ಜೀವನದಲ್ಲಿ ಸಿನೇಮಾ ತಂದನು. ಅವನಿಗೆ ಸಿನೇಮಾ ಇಲ್ಲದೆ ಬಾಳು ಶುಷ್ಕವಾಗುತ್ತಿತ್ತು. ಎರಡು ಮೂರು ದಿನಕ್ಕೆ ಒಮ್ಮೆ ಯಾದರೂ ಸಿನೇಮಾ ಬೇಕು. ಈಗೊಂದು ಎರಡು ವರ್ಷಗಳ ಕೆಳಗೆ ಎಂಟರ್‌ಟೇನಮೆಂಟ ಟೇಬಲ್ಲು ಅವನ ಕಡೆಗೆ ಇತ್ತು. ಅದೀಗ ಬೇರೆಯವರ ಕೈಗೆ ಹೋಗಿದ್ದರೂ ಕೂಡ, ಸಿನೇಮಾದವರ ಮೇಲೆ ಜಾರ್ಜಿಯ ದರ್ಪವು ಕಡಿಮೆಯಾಗಿರಲಿಲ್ಲ. ಅವನು ಎಷ್ಟು ಜನರನ್ನು ಕರೆದೊಯ್ದರೂ ಸಿನೇಮ ಪುಕ್ಕಟೆ.

ಅವನ ಜೊತೆಗೇ ಕಿಟ್ಟಿ ಮೊದಲು ಬಾರಿ ಸಿನಿಮಾಕ್ಕೆ ಓದದ್ದು. ಹೋಗುವಾಗ ಮನಸ್ಸು ಹಿಂಜರಿದಿತು. ಆದರೆ ಜಾರ್ಜಿಯ ಆಗ್ರಹವೊಂದು, ಎರಡನೆಯದಾಗಿ ಪುಕ್ಕಟೆ – ತಾನಾದರೂ ಹಣ ಹಾಳುಮಾಡುತ್ತಿಲ್ಲವೆಂಬ ಸಮಾಧಾನವೊಂದಿತ್ತು. ಕಿಟ್ಟಿಗೆ ಸಿನಿಮಾ ಹೊಸ ಅನುಭವ. ಅವನು ಚಿಕ್ಕವನಿದ್ದಾಗ ಒಮ್ಮೆ 'ಮೂಕ ಬೋಲಪಟ'ವೊಂದನ್ನು ನೋಡಿ ಬೇಸತ್ತ ಪೂರ್ವ ಅನುಭವವೊಂದೆ. ಕಿಟ್ಟಿಯ ಅನನುಭವಿ ಮನಸ್ಸಿನ ರಸಾನುಭವವು ಥಿಯೇಟರಿನಲ್ಲಿಯ ಕತ್ತಲು, ಗದ್ದಲು, ಸೆಕೆ ಇವೆಲ್ಲವುಗಳಿಂದಲೇ ಮೊದಲಾಯಿತು. ಪಾರ್ಶ್ವಸಂಗೀತವು ಆಯಾ ರಸಗಳನ್ನೂ ಕಿಟ್ಟಿಯ ಮನಸ್ಸಿನಲ್ಲಿ ಪೂರ್ಣವಾಗಿ ಹುಟ್ಟಿಸುತ್ತಿತ್ತು. ಯಾವುದಾದರೂ ಶೋಕಮಯ ಸಂಗೀತ ಸುರುವಾಯಿತೆಂದರೆ ಕಿಟ್ಟಿಗೆ ದುಃಖವೇ ಬಂದುಬಿಡುವುದು. ಭಾಷೆ ಹಿಂದುಸ್ತಾನಿಯಾದ್ದರಿಂದ ಅವನಿಗೆ ಅದರ ಅರ್ಥವೇ ಆಗಲಿಲ್ಲ. ಬಲ್ಲವನಾದ ಜಾರ್ಜಿ 'ಈತ ಬಿಲಿಮೋರಿಯಾ, ಆಕೆ ಹುನ್ನಬಾನು' ಮುಂತಾಗಿ ನಡುನಡುವೆ ಸದುದ್ದೇಶದಿಂದ ಹೇಳುತ್ತಿದ್ದುದು ಕಿಟ್ಟಯ ಏಕತಾನರಸಾನುಭವಕ್ಕೆ ಅಷ್ಟಿಷ್ಟಕ್ಕೆ ಅಡ್ಡಬರುತ್ತಿತ್ತು. ಅದೇನು ಕಾರಣವೋ, ಒಂದು ದುರುಳರ ತಂಡ ಆ ತರುಣಿಯನ್ನು

ಹಿಂಸಿಸುತ್ತಿತ್ತು ; ಅದರ ಮುಖಂಡನು ಆಕೆಯ ಕೂದಲು ಹಿಡಿದು ಜಗ್ಗುವನು. ಅವನ ಸಂಗಡಿಗರು ಆಕೆಯ ಮುಖದ ಸಮೀಪಕ್ಕೆ ಪಂಜುಗಳನ್ನೊಯ್ದು ಹಚ್ಚುವೆವೆಂದು ಹೆದರಿಸುವರು. ಯಾಕೆ, ಏನು, ಯಾರು, ಅದಾವುದೂ ಕಿಟ್ಟಿಗೆ ಅರ್ಥವಾಗಲಿಲ್ಲ. ಆದರೆ ಆ ತರುಣಿಯ ಶೋಕವು ಕಿಟ್ಟಿಯ ಮನ, ಎದೆ, ಕರುಳುಗಳನ್ನು ತದುಕಿಕಳವಳವನ್ನುಂಟು ಮಾಡತೊಡಗಿತು. ಹೆಚ್ಚು ನೋಡಲಾರದೇ ಮುಖ ಕೆಳಗೆ ಮಾಡುವನು ; ಮತ್ತೆ ನೋಡಲು ಮನಸ್ಸಾಗಿ ಮುಖ ಮೇಲಕ್ಕೆತ್ತುವನು. ಈ ಉಕ್ಕುತ್ತಿದ್ದ ಶೋಕರಸಾಯನದಲ್ಲಿ ಎರಡುಮೂರು ಬಾರಿ ಜಾರ್ಜಿಯು 'ಬೋರಿಂಗ' 'ಬೋರಿಂಗ' ಎಂದದ್ದು ಕಿಟ್ಟಿಗೆ ರಸಭಂಗವನ್ನುಂಟುಮಾಡಿತು.

ಅರ್ಧವಿರಾಮಕ್ಕೆ ಇಬ್ಬರೂ ಎದ್ದು ಹೊರಬಂದಾಗ, ಜಾರ್ಜಿ ಮತ್ತೆ ಒಳಗೆ ಬರಲು ನಿರಾಕರಿಸಿದನು. 'ಬ್ಯಾಡ್ ಪಿಕ್ಚರ್' ಎನ್ನತೊಡಗಿದನು. ಕಿಟ್ಟಿಗಾದರೋ ಸಂಕಟ. ತನಗೆ ಚಿತ್ರ ಪೂರ್ಣ ನೋಡಬೇಕೆಂಬ ಆಸೆ. ಆದರೆ ತಾನು ಜಾರ್ಜಿಯೊಡನೆ ಬಂದವನು. ಕೊನೆಗೆ ನಿರ್ವಾಹವಿಲ್ಲದೆ ತಾನೂ ಒಲ್ಲೆನೆಂದು ಜಾರ್ಜಿಯೊಡನೆ ಮನೆಗೆ ಹೊರಟನು.

ಇಂಥ ಪ್ರಸಂಗಗಳು ಮೇಲಿಂದಮೇಲೆ ಬರುತ್ತಿದ್ದವು. ಜಾರ್ಜಿ ಬೇಸರದಿಂದ ಅರ್ಧಕ್ಕೆ ಎದ್ದು ಬರುವದು, ಕಿಟ್ಟಿ ತಾನು ಬೇಸತ್ತರೂ ಮುಂದಾದರೂ ಚಿತ್ರ ಒಳ್ಳೆಯದಾದೀತೆಂಬ ಆಸೆಯಿಂದ ಕೊನೆಯವರೆಗೆ ಕೂಡುವದು, ಕೊನೆಯವರೆಗೂ ಚಿತ್ರ ಚೆನ್ನಾಗಿ ಆಗದೆ, ಬೇಸರಬಡುತ್ತ ರಾತ್ರಿ ಹತ್ತು ಗಂಟೆ ಮುಟ್ಟಿ ತಾಯಿಯಿಂದ ಬೈಯಿಸಿಕೊಂಡು ತಾನೂ ಎರಡು ಎದರು ಉತ್ತರ ಕೊಟ್ಟು ಸಿಡಿಮಿಡಿಮಾಡುತ್ತ ಮಲಗುವದು, ಇವು ಅನೇಕ ಬಾರಿ ಆಗತೊಡಗಿದವು. ತುಸು ದಿನಗಳಲ್ಲಿ ಒಳ್ಳೆಯ–ಕೆಟ್ಟ ಚಿತ್ರಗಳ ತಾರತಮ್ಯವು ಕಿಟ್ಟಿಗೂ ತಿಳಿಯತೊಡಗಿತು. ಆದರೆ ಅರ್ಧಕ್ಕೆ ಎದ್ದುಬರುವ ಇಚ್ಛೆಯನ್ನು ಅವನು ಎಂದೂ ಪೂರೈಸಲು ಅಸಮರ್ಥನಾದನು. ಮನೆಯಲ್ಲಿ ತಾಯಿ ಒಂಟಿಗಳಾಗಿ ಬಹಳ ಹೊತ್ತು ಹಾದಿ ನೋಡಬೇಕಾಗುತ್ತದೆಂಬ ವಿಚಾರದಿಂದ ಅವನು ಸಿನೇಮಾಕ್ಕೆ ಬರಲು 'ಒಲ್ಲೆ' ನೆನ್ನಬೇಕೆಂದು ಎಷ್ಟೋಬಾರಿ ಮಾಡಿಕೊಂಡ ನಿರ್ಧಾರವೂ ಫಲಕಾರಿಯಾಗಲಿಲ್ಲ. ಒಮ್ಮೊಮ್ಮೆ ಸಿನೇಮಾಕ್ಕೆ ಕರೆಯುವ ಜಾರ್ಜಿಯ ಬಗ್ಗೆಯೂ ಸಿಟ್ಟುಬರುತ್ತಿತ್ತು. ಆದರೆ ವಿಚಾರ ಮಾಡಿದ ಮರುಕ್ಷಣಕ್ಕೆ ತನ್ನ ಮೇಲೆ ತನಗೇ ಸಿಟ್ಟು ಹುಟ್ಟುವದು.

ಇಂಥ ಪ್ರಸಂಗಗಳಿಂದ ಕಿಟ್ಟಿಗೆ ತನಗೂ ಜಾರ್ಜಿಗೂ ಇರುವ ದೊಡ್ಡ ಅಂತರ ಸ್ಪಷ್ಟಗೊಂಡಿತು. ಜಾರ್ಜಿಯು ಅನಾಸಕ್ತ. ತನ್ನ ಮನಸ್ಸು ಒಲ್ಲೆಯೆಂದೊಡನೆ

ಅದೇ ಕ್ಷಣಕ್ಕೆ ತನ್ನ ಆಸಕ್ತಿಯನ್ನೂ ಹಿಂತೆಗೆದುಕೊಳ್ಳಬಲ್ಲನು. ಈ ಸ್ವ–ಆಸಕ್ತಿಯ ಮೂಲಕ ಚಿಂತೆಬಡುವ ಸಂದರ್ಭಗಳು ಅವನ ಮೇಲೆ ಕಡಿಮೆ. 'ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ' ಎಂಬ ಅರಿವು ಅವನ ರಕ್ತದಲ್ಲಿಯೇ ಇತ್ತು. ಇಂಥ ನಿಶ್ಚಲಬುದ್ಧಿಪ್ರಧಾನತೆಯ ಪರಿಣಾಮವಾಗಿ ವ್ಯಕ್ತಿತ್ವದ ಬುಡದಿಂದಲೇ ಅರಳಿಬಂದ ನೈಸರ್ಗಿಕ ನೀತಿಮತ್ತೆಯೊಂದು ಜಾರ್ಜಿಯ ವೈಶಿಷ್ಟ್ಯ. ಕಾಲಮಾನಕೆ ತಕ್ಕಂತೆ ಜಾರ್ಜಿಯೂ ಕಚೇರಿಯ ಕೆಲಸದಲ್ಲಿ ಹಣ ಸ್ವೀಕರಿಸುವವನೇ. ಆದರೆ ಜೊತೆಗೆ, ತನ್ನಿಂದ ಕೆಲಸವಾಗುವಂತೆ ಇಲ್ಲದಿದ್ದರೆ ಆಯಾ ಜನರಿಗೆ ಅದರಂತೆ ಸ್ಪಷ್ಟವಾಗಿ ಹೇಳಿ ಬಿಡಲೂ ಅವನು ಹಿಂಜರಿಯುತ್ತಿರಲಿಲ್ಲ. 'ಅದೇ ಪ್ರೊಸಿಜರು. ನಾನೇನು ಮಾಡಲಿ?' ಎಂದು ಅವರ ಮುಖಕ್ಕೇ ಹೇಳಿಬಿಡುವನು. ಒಮ್ಮೆಯಂತೂ ಇಷ್ಟು ಹೇಳಿದರೂ, ಒಬ್ಬ ಮನುಷ್ಯ ಟೇಬಲ್ ಮೇಲೆ ಐದು ರೂಪಾಯಿಯ ನೋಟು ಇಟ್ಟು ಓಡಿಹೋಗಲು, ಜಾರ್ಜಿ ಅವನ ಹಿಂದೆಯೇ ಸಿಪಾಯಿಯನ್ನು ಓಡಿಸಿ ಆ ಹಣವನ್ನು ಅವನಿಗೆ ಮುಟ್ಟಿಸಿದ್ದನು. ಯಾರಿಂದ ಯಾವ ಕಾರಣಕ್ಕಾಗಿ ತನಗೆ ಹಣ ಬಂದಿತೆಂಬುದರ ಸಂಪೂರ್ಣ ಅರಿವು ಇಲ್ಲದೆ ಒಂದು ಬಿಲ್ಲಿಯೂ ಅವನ ಕಿಸೆ ಸೇರುತ್ತಿರಲಿಲ್ಲ. ಅವನಿಗೆ ಹಣದ ಚಿಂತೆ ಇರಲಿಲ್ಲ. ಮನೆಯಲ್ಲಿ ಅವಿವಾಹಿತ ಅಕ್ಕ ಶಾಲಾ ಶಿಕ್ಷಕಿ. ತಾನೂ ಗಳಿಸುವವ. ಮರುವರ್ಷ ತಮ್ಮನೊಬ್ಬ ಮ್ಯಾಟ್ರಿಕ್ ಪಾಸಾಗಿ ನೌಕರಿ ಹಿಡಿಯುವವನು. ತಂದೆ ಚರ್ಚಿನ ಕೆಲಸದಲ್ಲಿ ನಿಯುಕ್ತ. ತಾಯಿ ಇಲ್ಲ. ಎಲ್ಲರೂ ಎಲ್ಲದಕ್ಕೂ ಹೊಣೆಗಾರರು.

ಈ ನಿಃಸ್ಪೃಹತೆ ಕಿಟ್ಟಿಯ ಸಡಿಲುಗೊಂಡ ಹಮ್ಮಿಣಿಗೆ ನಿಲುಕದಾಯಿತು. ಎಷ್ಟು ಹಣ ಬಂದರೂ ಸಾಲದಾಗಿತ್ತು. ಒಮ್ಮೊಮ್ಮೆ ಯಾರು ಹಣ ಕೊಟ್ಟರೆಂಬುದೂ ಮರೆತುಹೋಗುತ್ತಿತ್ತು. ಎರಡೂ ಪಕ್ಷದವರಿಂದ ಹಣ ಬಂದರೂ ಎರಡನೆಯ ವಿಚಾರವಿಲ್ಲದೇ ಅವನು ಕಿಸೆಗೆ ಸೇರಿಸುವನು. ಉಳಿದವರೆಲ್ಲರೂ ಹೀಗೇ ಮಾಡುತ್ತಾರೆ, ಎಂದು ಮನಸ್ಸಿಗೆ ಸಮಾಧಾನ ಹೇಳುತ್ತಿದ್ದರೂ, ಅಷ್ಟಿಷ್ಟಕ್ಕೆ ಜಾರ್ಜಿಯ ವಿಷಯವು ಅವನ ಮನವನ್ನು ಇಬ್ಬಗೆಯಾಗಿ ಮಾಡುತ್ತಿತ್ತು. ಆದರೆ ಒಟ್ಟಿನಮೇಲೆ ಕಿಟ್ಟಿ ಹುಸೇನಿಯ ಪ್ರೀತಿಗೆ ಪಾತ್ರನಾಗಿದ್ದನು. 'ಕೃಷ್ಣಾಜಿ ಸಾಹೇಬರನ್ನ ನಾವಃ ತಾಯರು ಮಾಡೇವಿ' ಎಂದು ಅನೇಕರ ಎದುರು ಕೊಚ್ಚಿದುದುಂಟು.

ಹಣವನ್ನು ಪಡೆಯವ ರೀತಿಗಳು ಎರಡು – ಒಬ್ಬನು ಅಧಿಕಾರದಿಂದ ಹಣವನ್ನು ಪಡೆದು ದೈನಂದಿನ ವಿಷಯವೆಂದು ಕಿಸೆಗೆ ಸೇರಿಸುತ್ತಾನೆ ; ಇನ್ನೊಬ್ಬ ಆಸೆಪಡುತ್ತ ಸಿಕ್ಕಷ್ಟನ್ನೇ ದೊರಕಿಸಿ ಹಿಗ್ಗುತ್ತ ನಲಿದಾಡುತ್ತಾನೆ. ಒಬ್ಬ ಹಣ ಸ್ವೀಕರಿಸಿದುದೇ ಕೊಟ್ಟವನಿಗೆ ದೊಡ್ಡ ಉಪಕಾರ, ಇನ್ನೊಬ್ಬ ಹಣ ಕೊಟ್ಟವನಿಗೆ

ತನ್ನ ದುಡಿಮೆಯನ್ನು ಮಾರಿದಂತೆಯೇ. ಒಬ್ಬನು ಹಣ ಸ್ವೀಕರಿಸಿ ಕೊಟ್ಟವನನ್ನು ಕೃತಜ್ಞನನ್ನಾಗಿ ಮಾಡುತ್ತಾನೆ, ಇನ್ನೊಬ್ಬ ತಾನೇ ಕೃತಜ್ಞನಾಗುತ್ತಾನೆ. ದಾನ ಕೊಟ್ಟವನ ಕೈ ಯಾರಿಗಾದರೂ ಒಳ್ಳೆಯ ಕೆಲಸ ಮಾಡಿದರೆ ಅದು ಸಂದ ಹಣದ ಬೆಲೆಯಾಗಿ ಬರುತ್ತಿತ್ತೇ ಹೊರತು ಉಪಕಾರ ಉಳಿಯುತ್ತಿರಲಿಲ್ಲ. ಆದರೆ ಯಾವುದೋ ಕಾಲಕ್ಕೆ ಜಾರ್ಜಿ ಒಂದು ಕೆಲಸ ಮಾಡಿಕೊಟ್ಟಿದ್ದರೆ, ಇಷ್ಟೇ ಏಕೆ, ಒಮ್ಮೊಮ್ಮೆ 'ಆಗುವುದಿಲ್ಲ'ವೆಂದು ಹೇಳಿದಾಗ ಕೂಡ, ಆ ವ್ಯಕ್ತಿ ಅವನಿಗೆ ಕೊನೆಯವರೆಗೆ ಮಾನ ಕೊಡುತ್ತಿತ್ತು.

ಇದೇಕೆ ಹೀಗೆ ?.... ಎಂಬ ಪ್ರಶ್ನೆ ಕಿಟ್ಟಿಗೆ ಬರುವದುಂಟು.

* * *

ರೆವ್ಹೆನ್ಯೂದಂಥ ಸರಕಾರಿ ಖಾತೆ ಖಾತೆಯಿಷ್ಟೇ ಅಲ್ಲ, ಜಾತಿ – ಯಾರು ಯಾವ ದಫ್ತರಿಗಿದ್ದರೂ ಇಂದಿಲ್ಲ ನಾಳೆ ಇನ್ನೊಂದು ದಫ್ತರಿಗೆ ಬರುವವರೇ ಆದ್ದರಿಂದ ಎಲ್ಲರನ್ನೂ ಸಮಾನಸಂತೋಷದಲ್ಲಿ ಇಡುವದು ಸಿನೇಮಾಗೃಹಗಳಂಥ ದೊಡ್ಡ ಸಂಸ್ಥೆಗಳಿಗೆ ಅವಶ್ಯ. ಆ ಮರ್ಯಾದೆ ತಮ್ಮ ಹಕ್ಕು ಎಂದು ಖಾತೆಯಲ್ಲಿಯ ಎಲ್ಲ ಕಾಮದಾರರೂ ತಿಳಿಯುವರು. ಆದರೆ ಅದರಲ್ಲೂ ದರ್ಪದ ವಿಷಯದಲ್ಲಿ ಹೆಚ್ಚು ಕಡಿಮೆ ಆಗಿಯೇ ಆಗುವದು ಸ್ವಾಭಾವಿಕ. ಒಂದು ರವಿವಾರ ಕಿಟ್ಟಿಗೆ ಬಲು ಬೇಸರಾದ್ದರಿಂದ ಸಿನೇಮಾಕ್ಕೆ ಹೋದನು. ಕಿಸೆಯಲ್ಲಿ ಹಣವನ್ನೇನೋ ಒಯ್ದಿದ್ದ. ಆದರೆ ಐದು ನಿಮಿಷ ತಿಕೀಟ ಆಫೀಸಿನ ಎದುರು ನಿಲ್ಲುವಷ್ಟರಲ್ಲಿ, ನಿಲ್ಲಲು ಬೇಸರವಾಯಿತೋ, ದುಡ್ಡು ಕೊಡಲು ಬೇಸರವಾಯಿತೋ, ಅಲ್ಲಿಂದ ಹೊರಟು ಬಾಕ್ಸಿನ ಬಾಗಿಲಿಗೆ ಬಂದು ನಿಂತ. ಜಾರ್ಜಿಗೆ ಅನೇಕ ಬಾರಿ ಸ್ಯಾಲ್ಯೂಟ ಹೊಡೆದ ಗೇಟಕೀಪರ್ ತನಗೆ ಸ್ಯಾಲ್ಯೂಟ್ ಹೊಡೆಯದಿದ್ದರೆ ಹೋಗಲಿ, ಒಳಗೆ ಬಿಡದಿರಲಾರ, ಎಂಬುದೇ ಅವನ ಧೈರ್ಯ. ಯಥಾಪ್ರಕಾರ, ಎಲ್ಲ ತಿಕೀಟಧಾರಿಕಗಳು ಒಳಗೆ ಪ್ರವೇಶಿಸಿದನಂತರ ತಾನು ಒಳನುಗ್ಗಿದ. ಆದರೆ ಗೇಟಕೀಪರನು ಅವನನ್ನು ತಡೆದು 'ಟಿಕೆಟ್' ಎಂದು ಒದರಿದ. ಕಿಟ್ಟಿ ತುಸು ಗೊಂದಲ ಗೊಂಡನು. ಜಾರ್ಜಿಯ ಹೆಸರು ಹೇಳಲು ಸರಿಕಾಣಲಿಲ್ಲ. ಪಾಕೀಟು ತೆಗೆದವನೇ ಒಳಗೆ ಹುಡುಕಾಡಿದಂತೆ ಮಾಡಿ, 'ಎಲ! ಕಳೆದಿರಬೇಕು' ಎಂದು ಗುಣುಗುಟ್ಟುತ್ತ ಹಿಂತಿರುಗಿದ. ಗೇಟಕೀಪರ 'ಹ್ಞ'ಂದು ಮಾಡಿದ ಹುಂಕಾರ ಅವನ ಎದೆಯಲ್ಲಿ ನಟ್ಟು ಬೆನ್ನೊಳಗಿಂದ ಪಾರಾಯಿತು. ಇನ್ನೊಮ್ಮೆ ಆ ಸಿನೇಮಾದತ್ತ ಹೋಗಕೂಡದೆಂದು ನಿಶ್ಚಯಿಸಿಕೊಂಡನು. ಆದರೆ ಮರುದಿನವೇ ಮತ್ತೆ ಜಾರ್ಜಿ ಕರೆಯಲಾಗಿ ಹೋಗಬೇಕೆನ್ನಿಸಿತು. ಇಂದು ಅದೇ ಗೇಟಕೀಪರ್ ಏನು ಮಾಡುತ್ತಾನೆ

ನೋಡಬೇಕೆಂಬ ಇಚ್ಛೆಯು ನಿನ್ನೆ ನೋಡಲಾಗದ ಸಿನೇಮಾವನ್ನು ಇಂದು ನೋಡಬೇಕೆಂಬ ಆಸೆಯನ್ನು ಕೆಂಬಣ್ಣದ ಮುಸುಕಿನಿಂದ ಹೊದ್ದಿಸಿತು. ಈ ಬಾರಿ ಗೇಟಕೀಪರನು ಕಿಟ್ಟಿಯ ಅಸ್ತಿತ್ವವನ್ನೇ ಲೆಕ್ಕಿಸಲಿಲ್ಲ. ಅದೂ ಒಂದು ನಿರಾಶೆಯೇ!

ಜಾರ್ಜಿ ಚಹಾ ಫರಾಳಗಳ ವಿಷಯದಲ್ಲಿ ನಿಯಮಿತ ಚಟದವನು. ದಿನಾಲು ಕಚೇರಿಯಲ್ಲಿ ಸಂಜೆ ನಾಲ್ಕಕ್ಕೊಮ್ಮೆ ಚಹವಾದರಾಯಿತು. ಒಮ್ಮೊಮ್ಮೆ ಅವಶ್ಯ ಕಂಡಾಗ ಎರಡು ಗಂಟೆಗೆ ತುಸು ಫರಾಳ, ಇಲ್ಲವಾದರೆ ಇಲ್ಲ. ಕಚೇರಿಗೆ ಬಂದ ಜನರೊಡನೆಯಂತೂ ಅವನು ಒಮ್ಮೆಯೂ ಹೋಟೆಲ್ಲು ಸೇರುತ್ತಿರಲಿಲ್ಲ. ಉಳಿದವರು ಇದನ್ನೇ 'A good principle' ಎನ್ನುವರು. ಜಾರ್ಜಿಗೆ ಅದೇನೂ ತತ್ವವಲ್ಲ. ಸಿಕ್ಕವರೊಡನೆ ಕೂಡಲು ಅವನಿಗೆ ಬೇಸರ ಅಷ್ಟೇ.

ಅವರ ಸ್ನೇಹದ ಮೊದಲ ದಿನಗಳಲ್ಲಿ ಕಿಟ್ಟಿ ಅವನಿಗೆ ತಮ್ಮೊಡನೆ ಚಹ ತೆಗೆದುಕೊಳ್ಳಲು ಬಲವಂತ ಮಾಡಿದನು. ತನ್ನದು ಅರ್ಧಗಂಟೆ ಮೊದಲ ಮಾತ್ರ ಆದ ಮೂಲಕ ತಾನು ಒಲ್ಲೆನೆಂದ ಜಾರ್ಜಿ. ತನ್ನೊಡನೆ ಹಾಗೆಯೇ ಕೂಡು ಎಂದು ಆಗ್ರಹಪಡಿಸಿ ಕಿಟ್ಟಿ ಅವನನ್ನು ಕ್ಯಾಂಟೀನಿಗೆ ಸೆಳೆದೊಯ್ದ. ಇಲ್ಲಿ ಬೇಡಬೇಡವೆನ್ನುತ್ತಿರಲು ಎರಡು ಕಪ್ಪು ಸ್ಪೆಶಲ್ ಚಹಾ ಹೇಳಿದ. ಮಾಣಿ ಚಹಾ ತಂದಿಟ್ಟ ಮೇಲೆಯಾದರೂ ಜಾರ್ಜಿ ಒಪ್ಪಿಯಾನೆಂದು ಅವನ ಭರವಸೆ. ಚಹ ಬಂದಿತು. ಆದರೆ ಜಾರ್ಜಿ ಬಾಗಲಿಲ್ಲ. ಚಹ ಸ್ಪೆಶಲ್ ಆಗಿದ್ದ ಮೂಲಕ ಹಿಂದೆ ಕಳಿಸಲು ಕಿಟ್ಟಿಗೆ ಧೈರ್ಯವಿರಲಿಲ್ಲ. ಆದರೆ ಎರಡನೆಯ ಕಪ್ಪನ್ನು ಮುಟ್ಟದೆ ಅದಕ್ಕೆ ಹಣ ತೆರಲು ಮನಸ್ಸಿಲ್ಲ. ಕೊನೆಗೆ ಕಿಟ್ಟಿ ತಾನೇ ಎರಡೂ ಕಪ್ಪು ಚಹ ಕುಡಿದನು. ಒಮ್ಮೊಮ್ಮೆ ಜಾರ್ಜಿಯ ಹಟಮಾರಿತನಕ್ಕೆ ಕಿಟ್ಟಿಗೆ ರೋಷ .... ಆದರೆ, ತಾನೂ ಹಟಮಾರಿಯಾಗಿದ್ದರೆ ಇದೀಗ ರೆವ್ಹೆನ್ಯೂದಲ್ಲಿ ಮುಂದೆ ಬರುತ್ತಿರಲಿಲ್ಲವೇ?....

ಜಿಹ್ವಾಲೌಲ್ಯದಿಂದ ಮನೆಯಲ್ಲಿ ಊಟ ಹೋಗದಾಯಿತು. ಪ್ರತಿದಿನ ಕಚೇರಿಗೆ ಬಂದವರಿಂದಲೇ ನಾಲ್ಕೈದು ಬಾರಿ ಚಹಾಫರಾಳವಾಗುತ್ತಿತ್ತು. ಪ್ರತಿಬಾರಿ ಕಿಟ್ಟಿ ಫರಾಳಕ್ಕೆ ಪೂರ್ಣ ನ್ಯಾಯದಾನವನ್ನು ಮಾಡುವನು. ಜಾರ್ಜಿ ಈ ವಿಷಯಕ್ಕೆ ತನ್ನ 'ಪ್ರಿನ್ಸಿಪಲ್'ನ್ನು ತನಗೆ ಹೇಳಬೇಕೆಂದೂ ಅದಕ್ಕೆ ತಾನು ಉತ್ತರ ಕೊಡಬೇಕೆಂದೂ ಕಿಟ್ಟಿಗೆ ಆಸೆ. ಆದರೆ ಇವು ಜಾರ್ಜಿಯ ಕಣ್ಣಿಗೇ ಕಾಣಿಸುತ್ತಿರಲಿಲ್ಲವೋ, ತಾನಾಗಿಯೇ ಕೇಳಲಿ ಎಂದೋ, ಅವರವರ ತತ್ವ ಅವರವರಿಗೆ ಎಂಬ ಅಭಿಪ್ರಾಯದಿಂದೊ, ಜಾರ್ಜಿ ಒಮ್ಮೆಯೂ ಈ ವಿಷಯದ ಬಗ್ಗೆ ಮಾತಾಡಲಿಲ್ಲ. ಕೊನೆಗೆ ಕಿಟ್ಟಿ ಬೇಸತ್ತು ತಾನೇ ಪ್ರಶ್ನಿಸಲಾಗಿ, ಅದಕ್ಕೆ ಉತ್ತರ : 'ಡಾಯಜೆಸ್ಟಿವ್ ಸಿಸ್ಟೀಮ

ಕೆಡತೈತಿ !'

ಇದಕ್ಕೆ ಕಿಟ್ಟಿ ಅಸಮಾಧಾನಕರ ಸಮಾಧಾನವೊಂದನ್ನು ತನಗೆ ತಾನೇ ಹೇಳಿಕೊಳ್ಳುತ್ತಿದ್ದನು. 'ಬರತಾನ ಮನ್ಯಾಗ ಖಂಡಾ ಮಾಂಸಾ ಬಡದು. ಇಲ್ಲಿ ಚಕ್ಲಿ, ಚೂಡಾ ರುಚೀ ಹತ್ತತಾವs?...'

ರವಿವಾರವೆಂದರೆ ಕಿಟ್ಟಿಗೆ ಘಾತವಾರ. ಅಂದು ಕಚೇರಿಯ ಕ್ಯಾಂಟೀನೂ ಬಂದು, ಪ್ರಾಪ್ತಿಯೂ ಬಂದು ; ಪುಕ್ಕಟೆ ಪರಾಮರಿಕೆಯೂ ಬಂದು ; ತನ್ನ ಮನೆಯ ಹತ್ತಿರದ ಪರಿಚಯದ ಹಾಟೆಲ್ ಒಂದಕ್ಕೆ ಕಿಟ್ಟಿ ಒಂದು ರವಿವಾರ ಬಂದನು. ಅಂದು ಖಾಸಗೀ ಚಹ. ಮಾಣಿ ಚಹ ತಂದುಕೊಟ್ಟಮೇಲೆ 'ಒಂದು ಬಳ್ಳಿ ಚಕ್ಲಿ ಕೊಡು, ಚಹಾದ ಜೋಡಿ' ಎಂದ ಕಿಟ್ಟಿ. ಸಾಹೇಬನಾದರೆ ಮಾಣಿಗೇನು?... 'ಒಂದು ಪ್ಲೇಟ ಚಕ್ಲಿ ಕೊಡಲಾ?' ಎಂದು ಘಟ್ಟಿಸಿ ಕೇಳಿದ ಮಾಣಿ. 'ಇಲ್ಲೋ, ಚಹಾದ ಜೋಡಿ ಒಂದು ಬಳ್ಳಿ ಚಕ್ಲಿ ಕೊಡು' ಎಂದ ಕಿಟ್ಟಿ. ಮಾಣಿ ನೀಟಾಗಿ ಸಾಹುಕಾರರ ಟೇಬಲ್ ಬಳಿ ಹೋಗಿ ಗಟ್ಟಿಯಾಗಿ 'ಆ ಸಾಹೇಬರಿಗೆ ಚಹಾದ ಜೋಡಿ ಒಂದು ಬಳ್ಳಿ ಚಕ್ಲಿ ಬೇಕಂತೆ' ಎಂದು ಕರ್ತವ್ಯನಿಷ್ಠನಾಗಿ ಹೇಳಿದನು. ಕೂಡಿದ ಜನ ಕಿಟ್ಟಿಯತ್ತ ನೋಡಿತು. ಸಾಹುಕಾರರೂ ಮುಗುಳುನಗೆ ನಗುತ್ತ 'ಕೊಡು' ಎಂದರು. ಬಂದಿತು ಅವನ ಬಳಿ ಚಕ್ಲಿ.... ಬಾಯಿಯೆಲ್ಲ ಕಹಿಯಾಯಿತು!

ಸುಖ ಬೇಕಾದವರು ನಾಚಿಕೆ ಬಿಡಬೇಕು, ಎಂಬ ತತ್ವವನ್ನು ಪ್ರತ್ಯಕ್ಷ ವ್ಯವಹಾರದಲ್ಲಿ ಇಳಿಸುವದು ಕಾಣಿಸುವಷ್ಟು ಸುಲಭವಲ್ಲ.

ಜಾರ್ಜಿಗೆ ಸ್ನೇಹಿತರೇ ಕಡಿಮೆ. ಅದರಲ್ಲಿಯೂ ಕಿಟ್ಟಿಯಲ್ಲಿ ಜಾರ್ಜಿಗೆ ಅಕ್ಕರೆ ಬಹಳ. ಅವರ ಸ್ನೇಹ ಬೆಳೆದಂತೆಲ್ಲ ಜಾರ್ಜಿಗೆ ಒಂದು ಉತ್ಕಟ ಆಸೆ ಹುಟ್ಟತೊಡಗಿತು. – ಕಿಟ್ಟಿಗೆ ತನ್ನ ಪ್ರೇಯಸಿಯನ್ನು ತೋರಿಸುವದು... ಮೊದಮೊದಲು ತನ್ನ ಲಗ್ನ ಗೊತ್ತಾದ ವಿಷಯವಾವುದನ್ನೂ ಕಿಟ್ಟಿಗೆ ಹೇಳದಿದ್ದರೂ, ಈ ಆಸೆ ಇದ್ದೇ ಇತ್ತು. ಆದರೆ ಸ್ನೇಹ ಬೆಳೆದಂತೆಲ್ಲ ಈ ಆಸೆ ಉತ್ಕಟವಾಯಿತು.

ಜಾರ್ಜಿಯ ಜೀವನದಲ್ಲಿ ಅವನ ಪ್ರೇಯಸಿ ಅವನ ದೊಡ್ಡ ವಿಜಯ. ಸಾರಾಳು ಪಾದ್ರಿಯವರ ಮಗಳು. ಆ ಊರ ಪ್ರೊಟೆಸ್ಟಂಟ ಮನೆತನಗಳಲ್ಲಿಯೇ ಚೆಲುವೆ. ಅಲ್ಲದೆ ಆರನೆಯ ಇಯತ್ತೆಯಲ್ಲಿ ಓದುತ್ತಿರುವವಳು. ಮರುವರುಷವೇ ಮ್ಯಾಟ್ರಿಕ್ ಪಾಸಾಗಿ ನೋಕರಿ ಹಿಡಿಯತಕ್ಕವಳು. ಆದ್ದರಿಂದ ಅವಳಿಗೆ ಇಮ್ಮಡಿ ಮಹತ್ವ. ಅವಳಿಗಾಗಿ ಅನೇಕ ವರಗಳು ತಂದೆಗೆ ಬೇಡಿಕೆ ಹಾಕಿದ್ದರು. ಅವರಲ್ಲಿ ಮಂಗಳೂರಿನ ಕಡೆಯ ಓರ್ವ ತರುಣ ಪಾದ್ರಿಯೂ ಒಬ್ಬನು. ಆದರೆ ಅದೇ ಪ್ಯಾರಿಶ್‌ನಲ್ಲಿ ಬೆಳೆದವನಾದ್ದರಿಂದ ಜಾರ್ಜಿಯ ಬಗ್ಗೆ ಪಾದ್ರಿಯವರಿಗೆ

ಮೊದಲಿನಿಂದಲೂ ಗೊತ್ತು. ಒಂದು ದಿವಸ ಅವರು ಜಾರ್ಜಿಯನ್ನು ಬರಹೇಳಿ ವಿವಾಹಕ್ಕೆ ಅವನ ಸಮ್ಮತಿ ಕೇಳಿದರು. ಕನಸುಮನಸಿನಲ್ಲಿಲ್ಲದ ಈ ಅಲಭ್ಯಲಾಭದಿಂದ ಜಾರ್ಜಿಯ ಕುಟುಂಬಕ್ಕೆ ಕುಟುಂಬವ ಹಿಗ್ಗಿಹೋಯಿತು. ಮಂಗಳೂರಿನ ಪಾದ್ರಿಯ ಬೇಡಿಕೆಯನ್ನೂ ನಿರಾಕರಿಸಿ ತಾವಾಗಿಯೇ ಜಾರ್ಜಿಗೆ ಮಗಳನ್ನು ಕೊಡಮಾಡಿದ್ದು ಅವನಿಗೆ ಹೆಮ್ಮೆಯ ವಿಷಯವಲ್ಲದೆ ಮತ್ತೇನು?

ಸಾರಮ್ಮನಾದರೂ ಈ ವಿವಾಹಕ್ಕೆ ಹಿಗ್ಗಿನಿಂದ ಅನುಮತಿಯನ್ನಿತ್ತಳು. ಜೊತೆಗೆ ಅವನಿಗೆ ಅನೇಕ ಬಡಕುಟುಂಬಗಳಿಗೆ ಸಾಧ್ಯವಿಲ್ಲದ ಒಂದೂವರೆ ವರ್ಷದ ಕೋರ್ಟಶಿಪ್ ಬೇರೆ. ಜಾರ್ಜಿಗೆ ಅವಳ ಸೌಂದರ್ಯದ ಬಗ್ಗೆ ಅಭಿಮಾನ ಬಹಳ. ಅವನಿಗೆ ಸ್ನೇಹಿತರೇ ಕಡಿಮೆ. ಕಿಟ್ಟಿ ಜೀವಾಳದ ಗೆಳೆಯನಾದಂತೆ ಈ ವಿಷಯವನ್ನು ಹೇಳುವ ಲವಲವಿಕೆ ಹೆಚ್ಚುತ್ತಾ ಹೋಗಿ, ಕೊನೆಗೆ ಒಂದು ದಿನ ಜೀವ ನಿಲ್ಲದೆ, ತನ್ನ ಮದುವೆ ಮರುವರ್ಷ ಆಗುವದಿದೆಯೆಂದೂ, ಪಾದ್ರಿಯವರ ಮಗಳು ಗೊತ್ತುಮಾಡಿದೆಯೆಂದೂ ಹೇಳಿ, 'ಅವರು ಬಹಾಳ ಬ್ಯೂಟಿ ಅದಾರರಿ!' ಎಂದು ಉದ್ಗಾರ ತೆಗೆದನು. 'ಒಮ್ಮೆ ಪಾದ್ರಿಯವರ ಮನೆಗೆ ಹೋಗಿ ಬರೋಣ, ಇಂಟ್ರೊಡ್ಯೂಸ ಮಾಡುತ್ತೇನೆ' ಎಂದು ಆಮಂತ್ರಣವನ್ನು ಕೊಟ್ಟನು. ಕಿಟ್ಟಿಗೆ ಈ ರೂಪವತಿಯನ್ನು ನೋಡಬೇಕೆಂಬ ಲವಲವಿಕೆಯಿದ್ದರೂ ಅಪರಿಚಿತ ಪಾದ್ರಿಯವರ ಮನೆಗೆ ಹೋಗಲು ಸಂಕೋಚ. ಅಲ್ಲದೆ, ಉಳಿದ ಅನೇಕ ವಿಷಯಗಳಲ್ಲಿ ಕಿಟ್ಟಿ ಮಡಿ ಮೈಲಿಗೆಯನ್ನು ಬಿಟ್ಟಿದ್ದರೂ ಕ್ರಿಶ್ಚನ್ನರ ಮನೆಯಲ್ಲಿ ಖಾದ್ಯ ತಿನ್ನುವ ವಿಷಯದಲ್ಲಿ ಅವನಿಗೆ ಹೆದರಿಕೆ. ಜಾರ್ಜಿಯ ಮನೆಗೆ ಹೋದಾಗಲೂ ಆಗ್ರಹದಿಂದ ಚಹ ಮಾತ್ರ ಸ್ವೀಕರಿಸುತ್ತಿದ್ದನು. ಈಗಲಾದರೂ ಏನಾದರೂ ನೆವಹೇಳಿ ಒಂದೆರಡು ಬಾರಿ ತಪ್ಪಿಸಲಾಗಿ ಜಾರ್ಜಿಯು ಬೇರೊಂದು ಉಪಾಯವನ್ನೇ ಹೂಡಿದನು.

ಒಂದು ದಿನ ಇಬ್ಬರೂ ಸಿನೇಮಾಕ್ಕೆ ಹೋದರು. ಅಲ್ಲಿ ಸಾರಮ್ಮ ಇವರ ದಾರಿಕಾಯುತ್ತ ಸ್ತ್ರೀಯರ ಬೆಂಚಿನ ಮೇಲೆ ಕುಳಿತಿದ್ದಳು. ಇವನ್ನು ಕಂಡು ಎದ್ದು ಸಮೀಪಕ್ಕೆ ಬಂದಳು. 'ಬಹಳ ಹೊತ್ತು ವೇಟ್ ಮಾಡಿದಿರಾ?' ಎಂದು ಜಾರ್ಜಿ ಆಕೆಯನ್ನು ಕೇಳಿ, ಆಕೆ ಇಲ್ಲವೆನ್ನುತ್ತಿರಲು, ಆಕೆಗೆ ಕಿಟ್ಟಿಯ ಗುರುತು ಮಾಡಿಕೊಟ್ಟನು. 'ಇವರು ಕೃಷ್ಣಾಜಿ ಕುಲಕರ್ಣಿ. ನಮ್ಮ ಕಲೀಗ್. ಇವರು ಸಾರಾ ಡಿಸೌಜಾ. ನಮ್ಮ ಬೆಟ್ರೋದ್ಡ'. ಕಿಟ್ಟಿಗೆ ನಾಚಿಗೆಯಿಂದ ನೆಲವು ತನ್ನ ಜೀವವನ್ನು ಹೀರುತ್ತಿರುವಂತೆ ಭಾಸವಾಯಿತು. ಮೂವರೂ ಚಹದಂಗಡಿ ಸೇರಿ ಬಿಸ್ಕೀಟು ಚಹ ಸೇವಿಸಿದರು. ಸಾರಾಳೆದರು ಈಗಾಗಲೇ ಜಾರ್ಜಿ ತನ್ನ ಸ್ನೇಹಿತನ ಬಗ್ಗೆ ಹೇಳಿದ್ದನು. ಜಾರ್ಜಿಗೆ ಸಾರಾಳ ಬಳಿ ಬಂದಾಗ ಏನು ಮಾತನಾಡಬೇಕು ತಿಳಿಯುತ್ತಿರಲಿಲ್ಲವಾದ್ದರಿಂದ

ಇಂಥ ಉಪಾಯ ಹುಡುಕಬೇಕಾಗುತ್ತಿತ್ತು. ಸಾರಮ್ಮನ ಲಕ್ಷ್ಯವೆಲ್ಲ ಜಾರ್ಜಿಯ ಈ ನಾಚುಬುರುಕ ಸ್ನೇಹಿತನ ಮರ್ಯಾದೆಯತ್ತ. ಜಾರ್ಜಿಯಾದರೋ ಸಾರಾಳ ಬಗ್ಗೆ ಕಿಟ್ಟಗೆ ಬಾಯಿತುಂಬ ಹೇಳುವದಿತ್ತು. ಅವಳ ತಂದೆಯ ಬಗ್ಗೆ ಅವಳ ಶಾಲೆಯಲ್ಲಿಯ ಜಾಣತನದ ಬಗ್ಗೆ, ಅವಳ ಹೌಸ್‌ಕೀಪಿಂಗ್ ಹಾಗೂ ಎಂಬ್ರಾಯಿಡರಿ ವಿಷಯದಲ್ಲಿದ್ದ ಆಸ್ಥೆಯ ಬಗ್ಗೆ ಪ್ರದೀರ್ಘವಾಗಿ ಹೇಳಿದನು. ಅವಳ ಬೆರಳಲ್ಲಿದ್ದ ತಾನು ಕೊಟ್ಟ ಬಿಟ್ರೋದಲ್ ಉಂಗುರವನ್ನು ಕಿಟ್ಟಿಗೆ ತೋರಿಸಿ, ಅದರ ಹರಳನ್ನು ತಾನು ಪಡೆದ ಬಗೆ, ಅದಕ್ಕೆ ತಾನೇ ಡಿಸಾಯಿನ್ ಹಾಕಿದ ಬಗೆ, ಅದನ್ನು ಮಾಡಿದ ಸ್ಥಳ, ಎಲ್ಲವನ್ನೂ ವರ್ಣಿಸಿದನು. ನಡುನಡುವೆ ಸಾರಾ ಮೌನದಿಂದ ಬಿಸ್ಕೀಟುಗಳನ್ನು ಕಿಟ್ಟಿಯತ್ತ ಸರಿಸುವಳು. ಅವಳ ಮರ್ಯಾದೆಗೆ ಮರ್ಯಾದೆಯೆಂದು ಕಿಟ್ಟಿ ಇನ್ನೊಂದು ಬಿಸ್ಕೀಟು ಎತ್ತಿಕೊಳ್ಳುವನು.

ಸಾರಾ, ಜಾರ್ಜಿ ಹೇಳಿದಷ್ಟೇನೂ 'ಬ್ಯೂಟಿ' ಕಾಣಿಸಲಿಲ್ಲ ಕಿಟ್ಟಿಗೆ. ಆದರೆ ಆರೋಗ್ಯ ಉತ್ಸಾಹಗಳಿಂದ ಆಕೆಯು ಕಾಂತಿಮಯಿಯಾಗಿ ತೋರಿ, ಆದರವನ್ನು ಪ್ರೇರೇಪಿಸಿದಳು. ಎತ್ತರವಾಗಿದ್ದರೂ ಇನ್ನೂ ಮುಖದ ಮೇಲೆ ಎಳೆಯ ತನದ ಕಳೆ ಹೋಗಿರಲಿಲ್ಲ. ಅಂದು ಒಂದು ಹಳದಿ ಫ್ರಾಕ್ ಧರಿಸಿದ್ದಳು. ತಲೆಗೆ ಕೆಂಪು ರಿಬ್ಬನ್ ಕಟ್ಟಿಕೊಂಡು, ತಲೆಯಲ್ಲಿ ಹತ್ತೆಂಟುಕಡೆಗೆ ಅಡ್ಡ ತಿಡ್ಡ ಪಿನ್ನು ಚುಚ್ಚಿಕೊಂಡಿದ್ದಳು. ಅವಳು ಕೇಳಿದಷ್ಟಕ್ಕೇ ಉತ್ತರ ಕೊಡುತ್ತ, ಉಳಿದ ಎಲ್ಲ ವೇಳೆಯನ್ನು ಜಾರ್ಜಿಯ ಮಾತಿನ ಬಗ್ಗೆ ಸಮ್ಮತಿದರ್ಶಕ ಮುಗುಳುನಗೆಯಲ್ಲಿಯೇ ತುಂಬಿಕೊಂಡಳು.

ಸಿನೇಮಾಕ್ಕೆ ಸಾರಾ ಬರಲು ಒಪ್ಪಲಿಲ್ಲ. ಅವಳ ತಂದೆ ರಾತ್ರಿ ಗಾಡಿಗೆ ಯಾವುದೋ ಊರಿಗೆ ಪ್ಯಾರಿಶ ಪರೀಕ್ಷೆಗಾಗಿ ಹೋಗಬೇಕಾಗಿಬಂದದ್ದರಿಂದ ರಾತ್ರಿ ಬೇಗ ಅಡಿಗೆ ಮಾಡುವ ಕೆಲಸವಿತ್ತು. ಆಕೆಯೇ ಮನೆಗಾರ್ತಿ. ಪಾದ್ರಿಯವರು ಹೆಂಡತಿಯನ್ನು ಕಳೆದುಕೊಂಡು ಆರು ವರ್ಷಗಳಾಗಿದ್ದವು. ಲಗ್ನವಾದ ಮೇಲೆ ಜಾರ್ಜಿ ಪಾದ್ರಿಯವರಲ್ಲಿಯೇ ಹೋಗಿ ಇರುವನು. ಸಾರಮ್ಮನನ್ನು ಅಷ್ಟಕ್ಕೆ ಹಿಂದಕ್ಕೆ ಕಳಿಸಲು ಮನಸ್ಸಾಗದೆ ಜಾರ್ಜಿ 'ಶಾಪಿಂಗ್' ಎಂದು ಮಾರ್ಕೆಟ್ಟಿಗೆ ಕರೆದೊಯ್ದನು. ಕಿಟ್ಟಿಗೆ ಉಭಯಸಂಕಟ. ಈಗ ಅವರನ್ನು ಬಿಟ್ಟುಹೋಗುವದು ತಪ್ಪು ; ಆದರೆ ದಾರಿಯಲ್ಲಿ ಇವರೊಡನೆ ಹೋಗಲಿಕ್ಕೆ ನಾಚಿಕೆ. ಅಂತೂ ಅವರಿಂದ ಒಂದು ಮಾರು ದೂರ ಅಂತರದ ಮೇಲೆ ದಾರಿಯುದ್ದಕ್ಕೂ ಕಿಟ್ಟಿ ನಡೆದನು. ಜಾರ್ಜಿಗೂ ಸಾರಮ್ಮನಿಗೂ ತಮ್ಮತಮ್ಮೊಳಗೆ ಏನು ಮಾತಾಡಬೇಕು, ತಿಳಿಯದು. ಕಿಟ್ಟಿಯನ್ನು ಮಾತಿನಲ್ಲಿ ಎಳೆಯುವದು ಇನ್ನೂ ಅಸಾಧ್ಯವಾಯಿತು.

ಹೀಗೆ ರಸ್ತೆಯ ಮೇಲೆ ಇದೊಂದು ಮೂಕಾಭಿನಯದಂತೆ ಕಾಣಿಸಿಕೊಂಡಿತು.

ಅಂಗಡಿಗಳಲ್ಲಿ ಸಾರಮ್ಮನಿಗೆ ರಿಬ್ಬನ್, ಕೈವಸ್ತ್ರ, ಲೇಸ್, ಬಾಚಣಿಕೆ ಮುಂತಾದ ಪುಟ್ಟ ಪುಟ್ಟ ವಸ್ತುಗಳ ಖರೀದಿಯಾಯಿತು. ಅವನ್ನೆಲ್ಲ ಒಂದು ದೊಡ್ಡ ರಟ್ಟಿನ ಪೆಟ್ಟಿಗೆಯಲ್ಲಿ ಹಾಕಿ ರಿಬ್ಬನ್ನಿನಿಂದ ಕಟ್ಟಿಕೊಂಡು, ಜಾರ್ಜ್ ಅವನ್ನು ಅವಳ ಮನೆಗೆ ಮುಟ್ಟಿಸಹೊರಟನು. ಇನ್ನು ಈ ಮೆರವಣಿಗೆಯ ಬೆನ್ನು ಹತ್ತುವದು ಚೆನ್ನಲ್ಲವೆಂದುಕೊಂಡು ಕಿಟ್ಟಿ ಕಾಯಿಪಲ್ಯಕೊಳ್ಳುವ ನೆವಮಾಡಿ ಅಲ್ಲಿಂದ ಕಾಲ್ದೆಗೆದನು....

ಆದರೆ ರಾತ್ರಿಯೆಲ್ಲ ತಾನೂ ರತ್ನಾಳೊಡನೆ ಹೀಗೆಯೇ ಊರ ತುಂಬೆಲ್ಲ ಅಡ್ಡಾಡಿದಂತೆ, ಸಿನೇಮಾಕ್ಕೆ ಹೋದಂತೆ, ತಲೆಯಲ್ಲಿ ಹೂ ಮುಡಿಸಿದಂತೆ, ಅಂಗಡಿಯಲ್ಲಿ ಬಳೆ ಕೊಡಿಸಿದಂತೆ – ಏನೇನೋ ವಿಚಾರಗಳು ಅರ್ಧ ಎಚ್ಚರ ಅರ್ಧ ನಿದ್ದೆಯಲ್ಲಿ ಚಿತ್ರರೂಪವಾಗಿ ಕಣ್ಣುಗಳನ್ನು ತುಂಬಿದವು. ಈ ಸಾರಾಳಿಗೆ 'ಬ್ಯೂಟಿ' ಎಂದು ಮಂಕಾದ ಜಾರ್ಜ್ ತನ್ನ ರತ್ನಾಳನ್ನು ನೋಡಿದರೆ ಏನನ್ನುವನೋ, ಎಂಬ ಅವಿವೇಕದ ವಿಚಾರವೂ ಸುಳಿದುಹೋಯಿತು. ನಿದ್ದೆ ಹತ್ತಲಿಕ್ಕೆ ಹನ್ನೆರಡೇ ಹೊಡೆಯಬೇಕಾಯಿತು.

'ಬ್ಯೂಟಿ' ಎಂಬ ಶಬ್ದವು ಜಾರ್ಜ್‌ಯ ಬಾಯಿಯಲ್ಲಿ ಯಾವ ಅರ್ಥವನ್ನು ಪಡೆದಿತ್ತೋ ಆ ಅರ್ಥವನ್ನು ತಿಳಿದುಕೊಳ್ಳುವ ಶಕ್ತಿ ಬರಲು ಕಿಟ್ಟಿಗೆ ಇನ್ನೂ ದಿನಗಳು ಕಳೆಯಬೇಕು !

* * * *

# ೧೪ : ಕಿಟ್ಟಿಯ ಪ್ರಣಯ

ರಾಘಪ್ಪನ ಮನೆ ಕಿಟ್ಟಿಯ ಕಚೇರಿಗೆ ತುಸು ಸಮೀಪವಾಗುತ್ತಿತ್ತು. ರಾಘಪ್ಪನು ಬೇಕಾದಾಗ ಮನೆಗೆ ಬಂದು ಚಹ ಫರಾಳ ತೆಗೆದುಕೊಳ್ಳಲು ಕಿಟ್ಟಿಗೆ ಕಾಯಂ ಔತಣ ಕೊಟ್ಟಿದ್ದನು. ಆದರೆ ಅದು ಸಾಕಷ್ಟು ಫಲಕಾರಿಯಾಗಿರಲಿಲ್ಲ. ಕಾರಣ ದೀಪಾವಳಿ ಬಂದೊಡನೆ ನರಕಚತುರ್ದಶಿಯ ದಿವಸ ಫರಾಳಕ್ಕೆ ಆಗ್ರಹದ ಔತಣ ಕೊಟ್ಟನು. ಅಂದು ಕಿಟ್ಟಿಯಲ್ಲದೆ ಇನ್ನಾವ ಗಂಡಸರಿಗೂ ಆಮಂತ್ರಣವಿರಲಿಲ್ಲ; ಆದರೆ ನೆರೆಹೊರೆಯ ಹನ್ನೆರಡು ಹದಿನಾಲ್ಕು ಕನ್ನಿಕೆಯರ ದಂಡೇ 'ರತ್ನೀ ಗಂಡ'ನನ್ನು ನೋಡಲಿಕ್ಕೆ ಆಗಮಿಸಿತ್ತು. ಈ ಸ್ತ್ರೀರಾಜ್ಯದಲ್ಲಿ ಕಿಟ್ಟಿಗೆ ಅನೇಕ ಸುಸಮಯ ಅನುಭವಗಳು. ಮುಖ್ಯವಾಗಿ, ಅವರ ಲಗ್ನ ಗೊತ್ತಾದಂತೆಯೇ ಈ ಮಕ್ಕಳು ವರ್ತಿಸುತ್ತಿದ್ದರು. ಅವರಲ್ಲಿ ಲಠ್ಠಳೂ ಎತ್ತರಳೂ ಆದ ಓರ್ವ ಪ್ರಗಲ್ಭೆಯ ಕೈಯಲ್ಲಿ ಕಿಟ್ಟಿಗೆ ಬಹಳ ಬಳಲಬೇಕಾಯಿತು. ಇವನು ಪಡಸಾಲೆಯಲ್ಲಿ ಕೂತಾಗ ಸ್ತ್ರೀಸೈನ್ಯವು ಬಾಗಿಲ ಬಳಿ ಲಗ್ಗೆ ಹೂಡಿ ಇವನನ್ನು ಮಿಕಿಮಿಕಿ ನೋಡುತ್ತ, ಒಬ್ಬರಿಗೊಬ್ಬರು ಚಿವುಟುತ್ತ ಸನ್ನೆ ಮಾಡುತ್ತಿದ್ದರು. ಆದರೆ ಪ್ರಗಲ್ಭೆ ಗೋದಾವರಿಯು ಇನ್ನೂ ಮುಂದಕ್ಕೆ ಹೋದಳು. ತನ್ನ ಅಸಾಮಾನ್ಯ ಬಾಹುಬಲದೋರ್ದಂಡದಿಂದ ರತ್ನಳ ರಟ್ಟೆಗಳನ್ನು ಹಿಡಿದು ಎಳೆಯುತ್ತ, ಸ್ತ್ರೀಸೈನ್ಯದಲ್ಲಿ ನುಗ್ಗಿ ಪಡಸಾಲೆಯ ಹೊಸ್ತಿಲ ಬಳಿ ಅದುಮಿ ಹಿಡಿದು, 'ಈಕಿ ನಿಮ್ಮನ್ನ ನೆಟ್ಟಗ ನೋಡೇ ಇಲ್ಲ ಅಂತರೆಪಾ. ಅದಕ್ಕ ಸಿಟ್ಟಿಗೇಳಬ್ಯಾಡಿರಿ. ಕರಕೊಂಡು ಬಂದೀನಿ' ಎಂದು ಹೇಳಿದಳು. ಈ ಸೆಣಸಾಟದಿಂದಲೂ ನಗೆಯಿಂದಲೂ ರತ್ನಳ ಕೆನ್ನೆ ಕೆಂಪಾಗಿದ್ದವು. ಕಣ್ಣು ಹೊಳೆಯುತ್ತಿದ್ದವು. ಒಂದೇ ಹನಿ ಕಣ್ಣೀರು ಒಂದು ಕಣ್ಣ ಅಂಚಿನಲ್ಲಿ ತೂಗಿ ತೊನೆದಾಡುತ್ತಿತ್ತು. ಕಿಟ್ಟಿಯತ್ತ ಚಂಚಲವಾಗಿ ಒಮ್ಮೆ ಮಾತ್ರ ದೃಷ್ಟಿ ತಿರುವಿ, ಕೂಡಲೆ 'ಬಿಡಽ ಬಿಡಽ' ಎಂದು ಪ್ರಯತ್ನದಿಂದ ಕೈ ಕೊಸರಿಕೊಂಡು ಓಡಿಹೋದಳು. ಈ ಪ್ರಗಲ್ಭಳಾದ ಗೋದಾವರಿಗೆ ಹದಿನಾರು ವರ್ಷಗಳು ತುಂಬಿದ್ದರೂ ಕೂಡ ಇನ್ನೂ ಲಗ್ನವಾಗಿರಲಿಲ್ಲ. ಆದರೆ ಅವಳಿಗೆ ಅದರ ಚಿಂತೆಯಿಲ್ಲ. ಆಕೆ ಇನ್ನೂ ತನ್ನ ಬಾಲಭಾವವನ್ನು ದಾಟಿಯೇ ಇರಲಿಲ್ಲ. ಕಾರಣ ಇನ್ನೋರ್ವರ ಲಗ್ನ ಮುಂತಾದ ಕಾರ್ಯಗಳಲ್ಲಿ ಈ ಬಗೆಯ ಮಂಗತನದಲ್ಲಿ ಅವಳ ಕುಶಾಗ್ರತೆ ಬಹಳ.

ಕಿಟ್ಟಿಗಾಗಿಯೇ ಎಂದು ಆರತಿ ಕೂಡ ಎಂಟೂವರೆಯಾದರೂ ಆಗಿರಲಿಲ್ಲ. ರಾಘಪ್ಪ ಬಂದೊಡನೆ ಆರತಿಯ ಶಾಸ್ತ್ರ ಸುರುವಾಯಿತು 'ಬಾ ನೀನs ; ನಿನ್ನ ಕೈಲೇ ಆರತಿ ಹಿಡಿಸತೇನಿ' ಎಂಬ ಗಂಭೀರ ಪ್ರತಿಜ್ಞೆಯನ್ನು ತೊಟ್ಟು ಗೋದಾವರಿ ನಾಚುತ್ತ ಒಳಗೆ ಓಡಿದ ರತ್ನಳ ಬೆನ್ನು ಹತ್ತಿದಳು.

ರತ್ನ ಒಲ್ಲೆನೆಂದಳು, ಗೋದಾವರಿ ಚಿವುಟತೊಡಗಿದಳು. ಒಳಗೆ ತಾಯಿಯಾದರೂ ಮಗಳ ಪಕ್ಷ ಹಿಡಿಯದೆ, 'ಹೋಗs; ಎಲ್ಲಾ ಗೆಳತ್ಯಾರೂ ಕರೀತಾರ ; ಮನೀ ಹುಡುಗಿ' ಎಂದು ಸಿಟ್ಟು ಮಾಡಿದ ಮೂಲಕ ಉಪಾಯವಿಲ್ಲದೆ ರತ್ನಾ ಆರತಿ ತೆಗೆದುಕೊಂಡು ಬಂದಳು. ಗೋದಾವರಿ ಜೊತೆಯಾದಳು. ಆರತಿ ಹಾಡಿನ ಸಮಸ್ಯೆ ಬಂದೊಡನೆ ಗೋದಾವರಿ ಕುಮಾರಿಕಾ ವೃಂದಕ್ಕೆ 'ಏ, ನೀವು ಯಾರೂ ಹಾಡಬ್ಯಾಡರೆ, ರತ್ನಿ ಹಾಡಲಿ' ಎಂದು ಕಟ್ಟಪ್ಪಣೆ ಮಾಡಿದಳು. ಎಲ್ಲ ಕಡೆಗೆ ಮೌನವಾವರಿಸಿತು. ಈ ಮೌನ ರತ್ನ ಗಾಯನಕ್ಕಾಗಿ ಕಾಯ್ದಿದೆ ಎಂಬ ವಿಚಾರದ ಭಾರಕ್ಕೆ ರತ್ನಾ ಹಾಡಲೇ ಬೇಕಾಯಿತು. ಮೆಹಬೂಬಕ್ಕನಿಂದ ಹೇಳಿಸಿಕೊಂಡಿದ್ದ 'ಕೃಷ್ಣಾ ನೀ ಬೇಗನೇ ಬಾರೋ ಮೊಗವನೆ ತೋರೋ' – ಅದನ್ನೇ ಹಾಡಿದಳು. ಮೆಹಬೂಬಳ ಶಿಕ್ಷಣಪದ್ಧತಿಯ ಮೂಲಕವೋ ಮೂಲ ರೆಕಾರ್ಡಿನ ಮೂಲಕವೋ 'ಕೃಷ್ಣಾ' ಪದವು ಪೂರ್ಣ ಬರುವದು ಪಲ್ಲವಿಯಲ್ಲಿ ಮಾತ್ರ. ಉಳಿದ ಕಡೆಗೆ 'ಣಾ' ಮಾತ್ರ ಆಗುವದು. ಪಲ್ಲವಿಯನ್ನು ಎತ್ತಿದ ಕೂಡಲೆ ಆ ಹಾಡು ತನಗಾಗಿಯೇ ಎಂಬ ವಿಚಾರ ಕಿಟ್ಟಿಯಲ್ಲಿ ಮೂಡಿ ಅವನು ಮುಖ ಕೆಳಗೆ ಹಾಕಿದನು. ಉಳಿದ ಸಮುದಾಯಕ್ಕೆ ಅದರ ಅರ್ಥ ಹೊಳೆದು ಕಿಲಕಿಲನೆ ನಕ್ಕಿತು. ರತ್ನಾ ತುಸು ಹೊತ್ತು ಯಾವುದೂ ತಿಳಿಯದೆ ಹಾಡಿದವಳು ಎರಡನೆಯ ನುಡಿಯ ಸಾಲುಗಳನ್ನು ಎರಡನೆಯ ಬಾರಿ ಅನ್ನುವಾಗ, ಒಮ್ಮೆಲೇ ಸಂದರ್ಭ ಹೊಳೆದು, ಗಾಬರಿಯಿಂದಲೂ ನಾಚಿಕೆಯಿಂದಲೂ ಮುಖ ಕೆಂಪಗೆ ಮಾಡಿಕೊಂಡು ನಡುಗುತ್ತ ಮುಂದವರಿದಳು. ಆದರೆ ಈ ಬಾರಿ ಮಾತ್ರ ಪಲ್ಲವಿಯನ್ನು ಅನ್ನಲಾರದೆ 'ಕೃಶ್ ಖೊಕ್' ಎಂಬ ಕಕಾರವನ್ನು ದಾಟದೆ ನಗುತ್ತ ಗೋಣು ಹೊರಳಿಸಿದಳು. ಸಕಲ ಸ್ತ್ರೀವೃಂದವೂ ಬಿದ್ದುಬಿದ್ದು ನಗತೊಡಗಿತು.

ಈ ಸಮಯದಲ್ಲಿ ಕಿಟ್ಟಿ ನಾಚಿಕೆಯಿಂದ ಅವರ ಕಣ್ಣುತಪ್ಪಿಸಲಿಕ್ಕೆಂದು ಪಡಸಾಲೆಯ ಇನ್ನೊಂದು ಬದಿಯ ಕೋಣೆಯತ್ತ ನೋಡತೊಡಗಿದನು. ಅಲ್ಲಿ ನಸುಗತ್ತಲಲ್ಲಿ ಹರ್ಷದಿಂದ ಕಣ್ಣೀರು ಸುರಿಸುತ್ತ ಇವನನ್ನೇ ನೋಡುತ್ತ ಕುಳಿತ ವ್ಯಕ್ತಿಯೊಂದು ಕಾಣಿಸಿತು.... ಚಂಪಕ್ಕ !

ಫಳಾರಕ್ಕೆ ಕುಳಿತಾಗ ಗೋದಾವರಿ ಖಾರದ ಕರಚಿಕಾಯನ್ನು ಇತರ ಕರಚೀಕಾಯಿಗಳನ್ನು ಸೇರಿಸಿ ಕಿಟ್ಟಿಗೆ ಹಾಕಿದಳು. ಹಾಸ್ಯದ ಪ್ರಸಂಗಗಳನ್ನು ಒದಗಿಸಲು ಎಂದೂ ಜಿಪುಣನಲ್ಲದ ಕಿಟ್ಟಿ ಇದೀಗ ಇನ್ನೊಂದನ್ನು ಒದಗಿಸಿದನು. ಅಯ್ಯೋ, ಯಾಕೆ ಈ ಹುಡಿಗೆಯರಲ್ಲಿ ಸಿಕ್ಕೆನಪ್ಪಾ ಎನಿಸುವಂತಾಯ್ತು.

ಫಳಾರವಾದಮೇಲೆ ರಾಘಪ್ಪ ಕಿಟ್ಟಿಗೆ, 'ಇಲ್ಲಿಯೇ ಊಟ ಮಾಡಿ ಹೋಗು; ನಾನು ಹೋಗಿ ಬರತೇನೆ' ಎಂದು ಹೇಳಿ ತನ್ನ ವಿಡಾ ತೆಗೆದುಕೊಂಡವನೇ ಎಲ್ಲಿಯೋ ಕೆಲಸಕ್ಕೆ ಹೋಗಿ ಬಂದನು. ಈ ರಂಗಿನಲ್ಲಿ ಮೈಮರೆತ ಕಿಟ್ಟಿ ಒಮ್ಮೆಲೇ ಒಲ್ಲೆನೆನ್ನಲಾರದೆ ಸುಮ್ಮನಿದ್ದನು. ಅಲ್ಲದೆ ರತ್ನಾ ಕಾಣಿಸಿಕೊಳ್ಳಬಹುದಲ್ಲ ಎಂಬ ಆಸೆ ಬೇರೆ. ರತ್ನಾ ಮತ್ತೆ ನಾಚುತ್ತ ಎರಡು ವಿಡಾ ತಂದಿಟ್ಟು ಹೋದಳು. ಅದರಲ್ಲಿ ದೊಡ್ಡದನ್ನು ಆರಿಸಿದ ಕಿಟ್ಟಿ.... ಅದರಲ್ಲೂ ಖಾರವೇ...? ಸ್ತ್ರೀವೃಂದವು ಕೊನೆಯ ಬಾರಿ ಮನಸಾರೆ ನಕ್ಕು ತಮ್ಮ ಮನೆಗೆ ಹೊರಟುಹೋಯಿತು. ಗದ್ದಲದಿಂದ ದುಮುದುಮಿಸಿದ ಪಡಸಾಲೆ ಬರಿದಾಯಿತು. ಇನ್ನು ರಾಘಪ್ಪನ ಹಾದಿ ಕಾಯುತ್ತ ಒಬ್ಬನೇ ಗುಡಾರದ ಮೇಲೆ ಕುಳಿತುಕೊಳ್ಳಬೇಕು.

ಪಡಸಾಲೆಯಲ್ಲಿ ಒಂದು ವರ್ತಮಾನಪತ್ರ ಕೂಡ ಇರಲಿಲ್ಲ. ಅರ್ಧಗಂಟೆ ಒಂಟಿಯಾಗಿ ಕಳೆಯುವಷ್ಟರಲ್ಲಿ ಕಿಟ್ಟಿಯ ಉಮೇದು[೧] ಅರ್ಧ ಇಳಿಯಿತು. ಕರುಳುಗಳು ಮಾತಾಡತೊಡಗಿದವು.... ಅರೆಮರೆತ ದೀವಳಿಗೆಯ ನೆನಪುಗಳು ಮರುಕಳಿಸತೊಡಗಿದವು... ಮನೆ, ತಾಯಿ...

ಅಂದು ಮುಂಜಾನೆ ಗಂಗವ್ವ ಕಿಟ್ಟಿಯನ್ನು ಐದಕ್ಕೆ ಎಬ್ಬಿಸಿದ್ದಳು. ಹದಿನೈದು ವರ್ಷಗಳಿಂದ ಕಾಯ್ದಿಡಲ್ಪಟ್ಟಿದ್ದ ಅತ್ತರಿನ ಬಾಟಲಿಯೊಳಗಿನ ಎರಡು ಹನಿಗಳು ಅಂದು ಎಣ್ಣೆಯ ಬಟ್ಟಲನ್ನು ಸೇರಿದ್ದವು. ಕಿಟ್ಟಿಗೆ ಈ ದೀವಳಿಗೆಯಲ್ಲಿ ಮನೆಯಲ್ಲಿ ಆರತಿಯನ್ನು ಮಾಡಿಸಬೇಕೆಂಬ ಹುಮ್ಮಸ್ಸು ಅವಳಿಗೆ. ಸ್ವಾಮಿರಾಯರ ನಿಧನದ ವರುಷ ದುಃಖದ ಮನೆಯೆಂದು ಕಿಟ್ಟಿಯನ್ನು ದೀವಳಿಗೆಯ ಆರತಿಗೆ ದೇಸಾಯರ ಮನೆಗೆ ಕಳಿಸಿಕೊಟ್ಟಂದಿನಿಂದ ಅದೇ ಪರಿಪಾಠವೇ ಮುಂದುವರಿದು, ತುಂಬ ವರುಷ ಕಳೆದುಹೋಗಿದ್ದವು. ಈ ಬಾರಿಯೂ ದೇಸಾಯರ ಔತಣಕ್ಕೆ ಮರ್ಯಾದೆ ಕೊಡುವದು ನಿಜ. ನೌಕರಿ ದೊರೆತೊಡನೆ ಸೊಕ್ಕು ಬಂದಿತೆಂದು ಅನಿಸಿಕೊಳ್ಳಬಾರದಾದರೆ ಅಲ್ಲಿ ಆರತಿಗೆ ಹೋಗಲೇಬೇಕು. ಆದರೆ ಅದಕ್ಕೂ ಮೊದಲು ಗುಪ್ತವಾಗಿ ಮನೆಯಲ್ಲಿಯೇ ಆರತಿ ಮಾಡಿಸಬೇಕೆಂದು ಅವಳ

---

೧. ಉತ್ಸಾಹ.

ಹವ್ಯಾಸ. ಅದಕ್ಕಾಗಿ ನೆರೆ ಮನೆಯ ಕಾಶೀತಾಯಿಯನ್ನೂ, ಆಕೆಯ ಆರು ವರ್ಷದ ಮಗಳನ್ನೂ, ಗಂಡನನ್ನೂ ಐದೂವರೆಗೇ ಫಳಾರಕ್ಕೆ ಕರೆದಿದ್ದಳು. ಅವರು ಬಂದು, ಹಾಡು ಹಾಡಿ, ಎಣ್ಣೆ ಕುಂಕುಮ ಹಚ್ಚಿ, ಆರತಿ ಮಾಡಿದರು. ಅಂದು ಬಡವಿ ಕಾಶೀ ತಾಯಿಗೆ ಕಿಟ್ಟಿಯ ಕಡೆಯಿಂದ ಒಂದು ರೂಪಾಯಿ ಆರತಿ ತಾಟಿನಲ್ಲಿ ಹಾಕಿಸಿದಳು. ಗಂಗವ್ವನ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ಅಂದು ಎಲ್ಲರ ಮನಸ್ಸೂ ಕರಗಿಹೋಗಿತ್ತು. ಫಳಾರದ ಸಮಯಕ್ಕೆ ಕಾಶೀ ತಾಯಿ ಎಷ್ಟು ಸಮಾಧಾನ ಹೇಳಿದರೂ ಗಂಗವ್ವನಿಗೆ ತಡೆಯಲು ಆಗದೆ ಅಡಿಗೆಮನೆಯ ಚೌಕಟ್ಟಿಗೆ ಆತುಕೊಂಡು 'ಹ್ವಾಂ' ಎಂದು ಅಳತೊಡಗಿದ್ದಳು. ಅವಳೊಡನೆ ನೊಂದ ಜೀವಿಯಾದ ಕಾಶೀತಾಯಿ ಎಷ್ಟು ಸಮಾಧಾನ ಹೇಳಿದರೂ ಗಂಗವ್ವನಿಗೆ ತಡೆಯಲು ಆಗದೆ ಅಡಿಗೆಮನೆಯ ಚೌಕಟ್ಟಿಗೆ ಆತುಕೊಂಡು 'ಹ್ವಾಂ' ಎಂದು ಅಳತೊಡಗಿದ್ದಳು. ಅವಳೊಡನೆ ನೊಂದ ಜೀವಿಯಾದ ಕಾಶೀತಾಯಿ ಕೂಡ ಸೆರಗು ಮರೆಮಾಡಿ ಅಳತೊಡಗಿದ್ದಳು. ಕಾಶೀತಾಯಿಯ ಅರೆಹುಚ್ಚ ಗಂಡನೊಬ್ಬನ 'ಅಳಬೇಡರವ್ವಾ, ಅಳಬೇಡರವ್ವಾ' ಎಂಬ ಅತಿವಿಫಲ ಧ್ವನಿಯೊಂದೇ ಕೇಳಬರುತ್ತಿತ್ತು. ಕಿಟ್ಟಿಯ ಮನಸ್ಸೂ ಕರಗಿತ್ತು. ಕಂಬನಿ ಸುರಿಯಲಾರದೆ ಗಂಭೀರ ಮೌನವನ್ನು ತಳೆದಿದ್ದನು.

ಅದರ ಮುಂದೆ ದೇಸಾಯರ ಮನೆಯ ಸಾಂಪ್ರದಾಯಿಕ ಆರತಿ. ಅಷ್ಟಕ್ಕೆ ಅರ್ಧ ಮರೆತ ಮುಂಜಾನೆಯ ಪ್ರಸಂಗವು ರಾಘಪ್ಪನ ಮನೆಯ ದೊಂಬಿಯಲ್ಲಿ ಪೂರ್ಣ ಕಣ್ಮರೆಯಾಗಿತ್ತು. ಇದೀಗ ಸ್ತಬ್ಧವಾದ ಮನೆಯ ಪಡಸಾಲೆಯಲ್ಲಿ ಅರ್ಧಗಂಟೆ ಒಂಟಿಗನಾಗಿ ಕುಳಿತಮೇಲೆ ಆ ಮುಂಜಾನೆಯ ಚಿತ್ರ ಕಿಟ್ಟಿಯ ಕಣ್ಣಿನೆದುರು ಸುಳಿದಾಡತೊಡಗಿತು. ಅವನಿಗೆ ಒಳಗಿಂದ ಒಳಗೆ ಕಸಿವಿಸಿಯಾಗತೊಡಗಿತು.... ಮನೆಯಲ್ಲಿಯೂ ಹಬ್ಬ ; ತಾಯಿ ಹಾದಿ ನೋಡುತ್ತಿರಬಹುದು ; ಏನು ಅಡಿಗೆ ಮಾಡಿಕೊಂಡು ಕುಳಿತಿದ್ದಾಳೆಯೋ ಏನೋ...! ಕಿಟ್ಟಿಗೆ ಮನೋವ್ಯಥೆ ತಡೆಯದಾಯಿತು. ಒಳಗೆ ಹೋಗಿ ಚಂಪಕ್ಕನಿಗೆ 'ಮನೆಯಲ್ಲಿ ಹಬ್ಬ; ಊಟ ಒಲ್ಲೆ.' ಇಷ್ಟು ಹೇಳಿ ಹೊರಟು ಹೋಗೋಣವೆಂದೆನಿಸಿತು. ಬಿರಬಿರನೇ ಒಳಗೆ ಹೋದನು, ಚಂಪಕ್ಕನು ಮಲಗುವ ಕೋಣೆಗೆ....

ಕೋಣೆಯಲ್ಲಿ ಚಂಪಕ್ಕ ಇರಲಿಲ್ಲ. ರತ್ನಾಳೊಬ್ಬಳೇ ಒಂದು ದೊಡ್ಡ ಕನ್ನಡಿಯನ್ನು ಗೋಡೆಗೆ ಆನಿಸಿಟ್ಟು, ತನ್ನ ನಸುಗೆಂಪು ಕೂದಲುಗಳ ಗುಚ್ಛಗಳನ್ನು ಬೆರಳುಗಳಿಂದ ಒಮ್ಮೆ ಎಡಗಡೆಗೆ, ಬಲಗಡೆಗೆ, ನಡುವೆ ಸರಿಸಾಡುತ್ತ ತನ್ನ

ಬಹುವಿಧಸೌಂದರ್ಯದಲ್ಲಿ ಆಸಕ್ತಳಾಗಿ, ತನ್ನಲ್ಲಿಯೇ ತಾನು ಆನಂದಿತಳಾಗಿ, ಸೃಷ್ಟಿಕರ್ತನಂತೆ ಪ್ರಯೋಗ ಮಾಡುತ್ತ ಕುಳಿತಿದ್ದಳು. ಅವಳ ವಿಪುಲವಾದ ಆ ನಸುಗೆಂಪು ಕೇಶರಾಶಿಯು ಮಳೆಗಾಲದ ತಡಸಲಿನಂತೆ ಬಹುವಿಧವಾದರೂ ತನ್ನ ಯೌವನದ ಏಕಪ್ರಮಾಣವನ್ನು ಪ್ರತ್ಯಯಕ್ಕೆ ತರುತ್ತಿತ್ತು. ಕನ್ನಡಿಯಲ್ಲಿ ಒಮ್ಮೆ ಮುಗುಳುನಗೆ ನಕ್ಕು ನೋಡಿದಳು ; ಒಮ್ಮೆ ಓರೆನೋಟ ಬೀರಿ ನೋಡಿಕೊಂಡಳು...

ಈ ಸೌಂದರ್ಯಸೇವೆಯನ್ನು ನೋಡಲು ಧೈರ್ಯವಾಗದೆ ಕಿಟ್ಟಿ ತುಸು ಖೇಕರಿಸಿದನು. ರತ್ನಾ ತಿರುಗಿ ನೋಡಿದವಳೇ ಗಡಿಬಿಡಿಯಿಂದ ತನ್ನ ಕೂದಲಿಗೆ ಒಂದು ಗಂಟು ಕೊಟ್ಟು ಒಂದು ಬದಿಗೆ ಸರಿದಳು. ಕಿಟ್ಟಿ ಸಂಕೋಚ ಪಡುತ್ತ – 'ನಾ ಮನೀಗೇ ಊಟಕ್ಕ ಹೋಗತೇನಿ' ಎಂದನು.

ಎಷ್ಟು ನಾಚುಬುರುಕಿಯಾದರೂ ಊಟದ ವಿಷಯದಲ್ಲಿ ಉತ್ತರವೀಯದ ಹೆಣ್ಣಾರು?

'ಊಟಾ ಮಾಡಿ ಹೋಗಿರಿ.'

'ಯಾಕ ಹಕ್ಕಿ[೧]ನಿಂದ ಮಾತಾಡತೀಯಲ್ಲ !' ಎಂದ ಕಿಟ್ಟಿ ಅಣಕದಿಂದ. ಆದರೆ ಹದಿನೈದು ವರ್ಷದ ಸರಳ ಹುಡಿಗೆಗೆ ಈ ಮಾತಿನ ಮೊನೆ ತಿಳಿಯಲಿಲ್ಲ.

'ನಮ್ಮ ಮನ್ಯಾಗ ಊಟಕ್ಕ ಹೇಳೋ ಹಕ್ಕು ನಮಗ ಇಲ್ಲ ಏನು?'

ಆದರೆ ತನ್ನ ಮಾತಿನ ಸೂಚನೆಯನ್ನು ಪೂರ್ಣ ತಿಳಿಯಪಡಿಸದೆ ಕಿಟ್ಟಿಗೆ ಸಮಾಧಾನವಿಲ್ಲ.

'ನಿನ್ನ ನನಗ ಲಗ್ನಾ ಕೊಡತಾರಂತಲ್ಲಾ ! ಗೊತ್ತು ಅದs ಏನು?'

'ಅದೆಲ್ಲಾ ಅವರಿಗೇ ಗೊತ್ತು' ಎಂದಳು ರತ್ನಾ ನೀರಸವಾಗಿ.

'ಮತ್ತ ಹಿಂಗ ವಿಡಾದಾಗ ಖಾರಾ ಹಾಕಿ ಕೊಟ್ಟರ ಹೆಂಗ ಮಾಡಿಕೋ ಬೆಕು ನಿನ್ನ ಜೋಡಿ ಲಗ್ನಾ?'

'ನಾ ಹಾಕಿದ್ದಿಲ್ಲ ; ಗೋದಾವರಿ ಹಾಕಿದ್ದಳು ; ನನಗ ಗೊತ್ತಿದ್ದಿದ್ದಿಲ್ಲ.'

'ಯಾರs ಹಾಕಲಿ, ಬಾಯಂತೂ ಖಾರಖಾರ ಆಗೇದ !' ಎಂದ ಕಿಟ್ಟಿ ಅವಳ ಕೆಂಪು ತುಟಿಗಳ ಕಡೆಗೆ ನೋಡುತ್ತ.

'ಅದಕ್ಕs ಊಟ ಮಾಡಿ ಹೋಗರೀ ಅಂದದ್ದು... ಕರಿಗಡುಬು ಮಾಡ್ಯಾರ.'

'ಹೌದು, ನಿಮ್ಮಪ್ಪ ನಿನ್ನ ಲಗ್ನಾ ಮಾಡಿಕೊಡತೇನಿ ಅಂದ ; ಆದರೆ ನೀ ಒಲ್ಲೆಂದರ ಮುಂದ ಹೆಂಗ?' ಎಂದ ಕಿಟ್ಟಿ.

---

೧. ಅಧಿಕಾರ

ಈ ಮಾತಿನ ಕೊಂಕು ತಿಳಿಯಿತು ರತ್ನಳಿಗೆ. ತುಸು ವಿಚಾರ ಮಾಡಿ ಉತ್ತರ ಕೊಟ್ಟಳು:

'ನನ್ನ ಮಾತು ಹ್ಯಾಂಗಾದರೂ ಇರಲಿ ; ನಿಮ್ಮ ಅವ್ವ ಏನಂತಾಳ, ಅದನ್ನ ಮೊದಲ ಕೇಳಿಕೊಳ್ರಿ, ಅದು ಮುಖ್ಯ ನಿಮಗ.'

ಅವ್ವನ ವಿಷಯ ಬಂದೀತೆಂಬ ಕಲ್ಪನೆ ಕೂಡ ಇಲ್ಲದ ಕಿಟ್ಟಿಗೆ ಮುಖವೇ ಕಳೆಗುಂದಿತು. ತನ್ನ ರಸಿಕ ಮಾತುಗಳನ್ನು ನೀರಸಗೊಳಿಸಿ ತೀರ ಗದ್ಯಕೆ ಇಳಿಸಲು ಪಣತೊಟ್ಟ ಈ ಕಾವ್ಯದೇವತೆಯ ಮಾತಿನ ನೆಲೆಯೇ ಅವನಿಗೆ ಹತ್ತದಾಯಿತು.

ಸುದೈವದಿಂದ ಅಷ್ಟಕ್ಕೆ ಚಂಪಕ್ಕನೇ ಅಲ್ಲಿ ತೇಕುತ್ತ ಬಂದದ್ದರಿಂದ ಸಂಭಾಷಣೆ ಅಲ್ಲಿಗೇ ಕೊನೆಗೊಂಡಿತು. ಕಿಟ್ಟಿ ಚಂಪಕ್ಕನಿಗೆ 'ಇಂದು ಹಬ್ಬ, ಮನೀಗೇ ಹೋಗತೇನಿ ಊಟಕ್ಕ !' ಎಂದನು.

ಚಂಪಕ್ಕ, 'ಯಾಕ, ಇದು ಮನಿ ಅಲ್ಲ ಏನು?' ಎಂದಳು.

'ಹೇ, ಹೇ,.... ಹಾಂಗಲ್ಲ... ಅವ್ವ ಹಾದೀ ನೋಡತಾಳ.... ಇನ್ನೊಮ್ಮೆ ಬರತೇನಿ.'

'ಇಲ್ಲ, ಅಡಿಗಿ ಆಗೇದ. ಈಗ ಅವರು ಬಂದರಂದರ ಊಟಕ್ಕೇ ಕೂಡುವದು.'

ಅಷ್ಟರಲ್ಲಿ ರಾಘಪ್ಪನೇ ಆಗಮಿಸಿದನು. ಅವನಿಗೆ ಚಂಪಕ್ಕ ಕಿಟ್ಟಿಯ ವಿಚಾರವನ್ನು ತಿಳಿಸಲಾಗಿ ಅದಕ್ಕೆ ಅವನು ಆಸ್ಪದವನ್ನೇ ಕೊಡಲಿಲ್ಲ.

'ಛೆ, ಛೆ, ಕಿಟ್ಟಣ್ಣಾ, ನಾ ಬ್ಯಾರೆ ಅಲ್ಲ, ನಿಮ್ಮವ್ವ ಬ್ಯಾರೆ ಅಲ್ಲ. ಎಡೂ ನಿನ್ನ ಮನೀನs ; ಅಪರೂಪಧಂಗ ಬಂದೀದಿ. ಇನ್ನು ಊಟಾ ಮಾಡಿಯೇ ಹೋಗಲಿಕ್ಕೆ ಬೇಕು. ಇಷ್ಟು ದಿವಸ ಚಹಾಕ್ಕೆ ಬಾರಪಾ ಅಂದರೂ ಬರಲಿಲ್ಲ... ಇನ್ನೊಮ್ಮೆ ಬರತಿ ಅನ್ನೊ ಭರವಸೆ ನಮಗೇನು ?... ಇಕಾ, ಕೂತು ಬಿಡೋಣ !'

ಕಿಟ್ಟಿಗೆ ಬೇರೆ ಉಪಾಯ ಕಾಣದೆ ಊಟಕ್ಕೆ ಕುಳಿತನು. ರಾಘಪ್ಪ ಊಟದ ಕಾಲಕ್ಕೆ ಅನೇಕ ಸೊಗಸಿನ ಹರಟೆ ಹೊಡೆದರೂ, ಕಿಟ್ಟಿಗೆ ಅಷ್ಟೊಂದು ಸೊಗಸು ಇರಲಿಲ್ಲ. ಊಟ ಮುಗಿದಮೇಲೆ ಗಡಿಬಿಡಿಯಿಂದ ಮನೆಗೆ ನಡೆದನು.

ಅವನು ಮನೆ ಬಿಟ್ಟು ದಾಟಿದ ಕೂಡಲೆ ರಾಘಪ್ಪ ಹೆಂಡತಿಯತ್ತ ನೋಡಿ, ಮುಗುಳುನಗುತ್ತ 'ಇವತ್ತು ನನ್ನ ಪೆಟ್ಟು ಗಂಗಿಗೆ ಹೋಗಿ ಮುಟ್ಟತದ' ಎಂದನು. ಆಕೆ ಯಾವ ಮುಖಭಾವವನ್ನೂ ತೋರಿಸದೆ ಸುಮ್ಮನಿದ್ದಳು.

* * *

ಕಿಟ್ಟಿ ಮನೆ ಮುಟ್ಟಿದಾಗ ಒಂದು ಹೊಡೆದುಹೋಗಿತ್ತು. ಗಂಗವ್ವನೂ

ಕಡುಬು ಮಾಡಿಟ್ಟುಕೊಂಡು ಹಾದಿಕಾಯ್ದು, ಅಷ್ಟಿಷ್ಟಕ್ಕೆ ಮನೆಯೆದುರಿನ ಚೌಕಿನವರೆಗೆ ಹೋಗಿ ನೋಡನೋಡುತ್ತ, ಕಂಗಾಲಾಗಿ ಕುಳಿತಿದ್ದಳು. ಕಿಟ್ಟಿ ಗಡಿಬಿಡಿ ಮಾಡುತ್ತ ಬಂದೊಡನೆ,

'ಎಷ್ಟೊತ್ತೋ ಕಿಟ್ಟಣ್ಣಾ, ಅಡಿಗಿ ಆರಿ ಅಂಗಾರ ಆಗಿಹೋಯ್ತು !' ಎಂದಳು.

'ಇಲ್ಲ ; ನನ್ನ ಊಟ ಆಗೇದ. ಒಬ್ಬ ಸ್ನೇಹಿತರು ಬಿಡಲೇ ಇಲ್ಲ. ಜುಲುಮೆಯಿಂದ ಊಟ ಮಾಡಿಸಿಯೇ ಕಳಿಸಿದಳು...' ಎಂದನು. 'ನೀನು ಕುಳಿತು ಬಿಡು' ಎಂದು ಹೇಳುವವನು, ಅಷ್ಟರಲ್ಲಿಯೇ ಗಂಗವ್ವ ಮಾತಾಡಿದಳು... ಖೇದದಿಂದ.

'ಅಯ್ಯ ! ಇಷ್ಟೆಲ್ಲಾ ಮಾಡಿ ಇಟುಗೊಂಡು, ಆಗ ಬರತಾನ ಕಿಟ್ಟಣ್ಣ, ಇನ್ನೊಂದು ಕ್ಷಣಕ್ಕ ಬರತಾನ, ಅಂತ ಹಾದಿ ನೋಡಿದರ... ಊಟಾ ಮಾಡಿ ಬಂದ್ಯಾ ?.... ಯಾಕs, ಯಾರವರು ಊಟಕ್ಕ ಕರೆದವರು ?... ಮಂದಿ ಮನ್ಯಾಗೂ ಹಬ್ಬ ಇರತದs ಅಂತ ಅವರಿಗೆ ಗೊತ್ತs ಇದ್ದಿದ್ದಿಲ್ಲೇನು ?... ಛಲೋ ಇದ್ದಾರ ಆ ಸ್ನೇಹಿತರು ! (ಏನೋ ಹೊಳೆದಂತಾಗಿ)... ಕಿಟ್ಟೀ, ಖರೇ ಹೇಳು, ಎಲ್ಲಿ ಹೋಗಿದ್ದಿ ?... ರಾಘೂನ ಮನೀಗೆ ಹೌದಲ್ಲೋ ?'

ಈವರೆಗೆ ತಾಯಿಯ ಬಗ್ಗೆ ಇದ್ದ ಸಹಾನುಭೂತಿ ಕೊನೆಯ ಮಾತಿನಿಂದ ಕಡಿಮೆಯಾಯಿತು, ಬಿರುಸಾಗಿಯೇ 'ಹೌದು' ಎಂದನು.

'ಆತು ! ಬಂದದ್ದು ಬರಲಿ. ಹೆಣ್ಣಿನ ಜನ್ಮಾ ದೇವರು ಗೋಳಾಡಲಿಕ್ಕೆ ಅಂತ ಕೊಟ್ಟಿರತಾನ !... ಅನುಭೋಗಿಸತೇನಿ !' ಎಂದವಳೇ ಒಳಗೆ ಹೋಗಿ ಮರುಮಾತಾಡದೆ ಅನ್ನ ಬಡಿಸಿಕೊಂಡಳು. ತೀವ್ರಸಂತಾಪದಿಂದ ತಲೆ ದಿಮ್ಮೆನ್ನತೊಡಗಿತ್ತು. ಎರಡು ತುತ್ತು ನುಂಗುವಷ್ಟರಲ್ಲಿ ನಾಲ್ಕು ಥಾಲಿ ನೀರು ಬೇಕಾದವು. ಇನ್ನೆರಡು ತುತ್ತಿಗೆ ಎದ್ದವಳೇ ಬಚ್ಚಲಕ್ಕೆ ಹೋಗಿ ಉಂಡದ್ದನ್ನೆಲ್ಲ ಕಾರಿದಳು. ಬಾಯಿಯೇ ಕಹಿಯಾಗಿಹೋಗಿತ್ತು.

ತಾಯಿಯ ವಿಚಾರಶೂನ್ಯ ಸಂತಾಪಕ್ಕೆ ಬೇಸರಗೊಂಡಿದ್ದ ಕಿಟ್ಟಿಗೆ ತಾಯಿ ಅರ್ಧ ಊಟಕ್ಕೆ ಎದ್ದದ್ದನ್ನು ಕಂಡು ಅನುತಾಪವಾಯಿತು. ಬಿಗುವಿನ ಮೌನದಲ್ಲಿ ಕುಳಿತ ಅವನು ಒಳಗೆ ಬಂದವನೇ, 'ಅವ್ವಾ, ಇನ್ನೊಮ್ಮೆ ಊಟಕ್ಕ ಹಾಕ್ಕೊ. ರಾತ್ರೀನೂ ಉಂಡಿರುವದಿಲ್ಲ' ಎಂದು ಆಗ್ರಹ ಮಾಡಿದನು.

ಕಿಟ್ಟಿಯ ಬಾಯಿಂದ ಹಾಗೆ ಮಾತು ಬಂದದ್ದು ಎರಡು ವರ್ಷಗಳಲ್ಲಿ ಮೊದಲನೆಯ ಬಾರಿ. ಅಷ್ಟಕ್ಕೇ ಅವಳ ಕರುಳು ಕರಗಿತ್ತು.

'ಹಂಗ ಹೆಂಗಪಾ. ನಾವು ಒಮ್ಮೇ ಊಟಾಮಾಡೋದು ; ನಮ್ಮ ಜನ್ಮಾನು

ಅಂಥಾದು, ಇರಲಿ ಏಳು. ಹಸಿವೆ ಅದರ ರಾತ್ರೀ ಇನ್ನೊಂದು ಮುಕ್ಕು ಅವಲಕ್ಕಿ ತಿಂದೇನು !' ಎಂದು ಮಣೆಯ ಮೇಲೆ ಅಡ್ಡಾದವಳು ಮುಸುರೆ ತೆಗೆಯಲಿಕ್ಕೆಂದು ಎದ್ದುಬಿಟ್ಟಳು.

ಬೂದಿಯ ಕಾವಿನಲ್ಲಿ ಬೆಚ್ಚನೆ ದಾರಿಕಾಯುತ್ತಿದ್ದ ಕಡುಬು ತುಂಬಿದ ಹಿತ್ತಾಳೆಯ ಬುಟ್ಟಿ ಕಣ್ಜಿವುಟಿ ಅಣಗಿಸುತ್ತಿತ್ತು.

* * * *

# ೧೫ : ದೇಸಾಯರ ಸಂಧಾನ

ಗಂಗವ್ವ ಈ ಬಾರಿ ದೇಸಾಯರ ಮೇಲೆ ದೊಡ್ಡ ಭಾರ ಹಾಕಿದಳು. ಆದ ಸಾದ್ಯಂತ ವರ್ತಮಾನವನ್ನು ಹೇಳಿದಳು. ಹಬ್ಬದ ದಿವಸ ಕಿಟ್ಟಿಯನ್ನು ಬೇಕೆಂತಲೇ ಮನೆಯಲ್ಲಿ ಉಣ್ಣದಂತೆ ಮಾಡಿ ರಾಘೂ ಮೂಕಪೆಟ್ಟನ್ನು ಕೊಟ್ಟಿದ್ದನು. ಆದರೆ ಆದದ್ದೂ ಒಳಿತೇ ಆಯಿತು.... ಸಕಾಲದಲ್ಲಿ ಎಚ್ಚರ ಕೊಟ್ಟಂತಾಯಿತು. ಕೆಲಸ ಕೈಮೀರುವದರ ಒಳಗಾಗಿ ಕಿಟ್ಟಿಗೆ ಬೇರೊಂದತ್ತ ಕನ್ಯೆ ಶೋಧಿಸಿಬಿಟ್ಟರೆ ಹೇಗೆ, ಎಂದು ಅವಳ ವಿಚಾರ.

'ಇನ್ನೂ ನಾಲ್ಕು ದಿವಸ ನೌಕರೀ ಆಗಿ ಈತನ ಬಸ್ತಾನ[೧] ಕೂಡಲಿ, ಲಗ್ನಾ ಮಾಡೋಣ, ಅನ್ನೋ ವಿಚಾರದಾಗ ನಾ ಇದ್ದೆ. ಆದರ ಗೋಪಣ್ಣಾ, ಈಗಿನ ಲಕ್ಷಣಾ ನೋಡಿದರ, ರಾಘೂನ ಹೊಂಚು ದೀರ್ಘಕ್ಕ ಹೋಗೂಹಂಗ ಕಾಣಿಸತಾವ. ಆಡಾಡತ ಏನಾದರೂ ಮಾಡಲಿಕ್ಕೆ ಅವ ಹೇಸುವವ ಅಲ್ಲ ಅನ್ನೋದು ಕಂಡದ್ದs ಅದ. ಮಾಟಾ ಮದ್ದಿಗೂ ಸರಿ ; ನನಗಂತೂ ಹೆದರಿಕಿ ಹುಟ್ಟಲಿಕ್ಕೆ ಹತ್ತೇದ. ಕಿಟ್ಟಿ ಅಂದರ ನನ್ನ ಹುಡುಗ ಅಂತ ನಾ ಎಷ್ಟು ತಿಳಿದಿದ್ದೇನೋ... ಹೋಗಲಿ ಬಿಡು. ಈಗ ಹೆಂಗಾದರೂ ಮಾಡಿ ಒಂದು ಒಳ್ಳೇ ಕನ್ಯಾ ನೋಡಪಾ ಅವನ ದಶಿಂದ. ಏನಾರs ಆಗಲಿ, ಒಮ್ಮೆ ಗೊತ್ತು ಮಾಡಿಟ್ಟು ಮುಂದ ಅನುಕೂಲ ಆದಾಗ ಲಗ್ನಾ ಮಾಡೋಣ....' ಎಂದಳು.

ದೇಸಾಯರತ್ತ ಕಿಟ್ಟಿಗಾಗಿ ಅನೇಕ ಕನ್ಯೆಗಳು ಬಂದಿದ್ದವು. ಆದರೆ ಗಂಗವ್ವನೇ ಪ್ರಸ್ತಾಪವೆತ್ತಿರಲಿಲ್ಲವಾದ್ದರಿಂದ ಸುಮ್ಮನಿದ್ದರು. ಅದರಲ್ಲಿ ಅವರ ಬಡಸ್ನೇಹಿತನಾದ ದುಂದೂರ ಶೀನಪ್ಪನ ಮಗಳೋರ್ವಳು ಹದಿನೈದು ವರ್ಷದಾಕೆ ಅವರ ಮನಸ್ಸಿಗೆ ಬಂದಿದ್ದಳು. ಕನ್ಯೆ ತುಸು ಕಪ್ಪಾದರೂ ಕಣ್ಣು ಮೂಗಿನಿಂದಲೂ ಆರೋಗ್ಯದಿಂದಲೂ ಚೆನ್ನಾಗಿ ಇದ್ದಳಲ್ಲದೆ ಮನೆಗೆಲಸದಲ್ಲಿ ಎತ್ತಿದ ಕೈ. ಗಂಗವ್ವನ ಸುಖಕ್ಕೆ ಒಪ್ಪುವ ಹುಡುಗಿ. ಆಕೆಯನ್ನು ಕಂಡಾಗ ದೇಸಾಯರೇ ಸಾಧ್ಯವಾದರೆ ಈ ಸಂಬಂಧ ಮಾಡಿಸಿಯೇಬಿಡಬೇಕೆಂದು ಹವಣಿಸಿದ್ದರು. ಜೊತೆಗೆ ಬಡಸ್ನೇಹಿತನೋರ್ವನಿಗೆ

---

೧. ಸ್ಥಿರಜೀವನ.

ಉಪಕಾರ ಮಾಡಿದಂತೆ ಆಗುತ್ತಿತ್ತು. ಪ್ರತಿಬಾರಿಯಂತೆ ಗೋಣಗದೆ ದೇಸಾಯರು ಶೀನಪ್ಪನ ಮಗಳ ವಿಷಯವಾಗಿ ವಿವರಗಳನ್ನು ತಿಳಿಸಿದರು. ಗಂಗವ್ವನ ಬಾಯಿಯಲ್ಲಿ ನೀರೊಡೆಯಿತು. ಆದರೆ ದುಂದೂರ ಶೀನಪ್ಪನು ಮಹಾ ಕರ್ಮಠ ಬ್ರಾಹ್ಮಣ. ಬಡವನಾದರೂ ದರಿದ್ರನಲ್ಲ. ಜೊತೆಗೆ ಉದಾರ. ನಾಲ್ಕು ಜನರನ್ನು ಗಳಿಸಿಕೊಂಡವನು. ಮನೆಯಲ್ಲಿ ಅಗ್ನಿಹೋತ್ರ. ಸ್ವತಃ ವೇದಾಂತಿ. ಗಂಗವ್ವನಿಗೆ ಹಿಗ್ಗಾಯಿತು. ದೇಸಾಯರ ಬಳಿಯಲ್ಲಿ ಇದ್ದ ಕುಂಡಲಿಯನ್ನು ಪರೀಕ್ಷಿಸಲಾಗಿ ಗುಣಗಳು ಕೂಡಿಬಂದವು.

ಗಂಗವ್ವ ಎದುರು ನಿಂತು ದೇಸಾಯರಿಂದ ಒಂದು ಕಾರ್ಡು ಬರೆಯಿಸಿ ದುಂದೂರ ಶೀನಪ್ಪನಿಗೆ ಕನ್ಯಾ ತೋರಿಸಲಿಕ್ಕೆ ಸಹ ಕುಟುಂಬ ಸಹಿತ ಬರಲು ಪತ್ರ ಬರೆಯಿಸಿದಳು....

ರವಿವಾರದ ದಿವಸ ಬೆಳಗಿನಿಂದ ಗಂಗವ್ವ ದೇಸಾಯರ ಮನೆಯಿಂದ ತಮ್ಮ ಮನೆಗೆ ಎಡತಾಕುತ್ತಿದ್ದಳು ಏನೂ ಅರಿಯದ ಕಿಟ್ಟಿಗೆ ಇದರ ರಹಸ್ಯ ತಿಳಿಯಲಿಲ್ಲ. ಆದರೆ ಹತ್ತು ಗಂಟೆಯ ಸಮಯಕ್ಕೆ ದೇಸಾಯರಿಂದ ಕಿಟ್ಟಿಗೆ ಕರೆ ಬಂದಿತು. ದೇಸಾಯರಿಂದ ಕರೆ ಎಂದೊಡನೆ ಓಡಿಬರಬೇಕಾದ ತಾಯಿ ಅಂದು ಏನನ್ನೂ ಅರಿಯದವಳಂತೆ ಅಡಿಗೆ ಮನೆಯಲ್ಲಿ ಧಡಪಡ ಮಾಡುತ್ತಿದ್ದಳು. ದೇಸಾಯರ ಮನೆಯ ವಹಿವಾಟು ಕಿಟ್ಟಿಗೆ ತುಸು ತಪ್ಪಿದಂತಾಗಿತ್ತು. ಅವರ ಕರೆಯಿಲ್ಲದೆ ಇತ್ತಿತ್ತ ಅವರು ಅವರ ಮನೆಗೆ ಹೋಗಿಯೇ ಇರಲಿಲ್ಲ. ದೀಪಾವಳಿಯ ದಿವಸ ಮಾತ್ರ ವಾಡಿಕೆಯಂತೆ ಆರತಿ – ಫಳಾರಕ್ಕೆ ಹೋದಾಗ ದೇಸಾಯರು ವಿಶೇಷ ಮಾತು ಆಡಿರಲಿಲ್ಲ. ವಸಂತರಾಯನ ಸುದ್ದಿಯನ್ನು ಎತ್ತಿ ಯಾರೆಂಬ ಹೆದರಿಕೆಯಿಂದ ದೇಸಾಯರು ಇತ್ತಿತ್ತ ಯಾರ ಜೊತೆಗಾದರೂ ಮಾತೇ ಕಡಿಮೆ ಮಾಡಿದ್ದರು. ಈಗ ಏಕೆ ಕರೆಕಳಿಸಿರಬಹುದೆಂಬ ತರ್ಕದಲ್ಲಿಯೇ ಕಿಟ್ಟಿ ಜೋಡು ಮೆಟ್ಟಿಕೊಂಡು ಬೊಕ್ಕತಲೆಯಿಂದ ಹೊರಟನು. ಆಗ ಮಾತ್ರ ಗಂಗವ್ವ ಅಡಿಗೆಮನೆಯಿಂದ ಓಡಿಬಂದು, 'ಯಾಕ ಕಿಟ್ಟಿ, ದೇಸಾಯರನ್ನು ಭೇಟಿಯಾಗಲಿಕ್ಕೆ ಒಂದು ಟೊಪ್ಪಿಗಿ ಸಿಗಹಕ್ಕೊಂಡು ಹೋಗಲ್ಲಾ' ಎಂದಳು.

ಶೀನಪ್ಪನ ಅನುಷ್ಠಾನ ಮುಗಿದಿರಲಿಲ್ಲವಾದ್ದರಿಂದ ಪಡಸಾಲೆಯಲ್ಲಿ ದೇಸಾಯರೊಬ್ಬರೇ ಕಿಟ್ಟಿಯನ್ನು ಬಿಗುಹಿನ ಆದರದಿಂದ ಸ್ವಾಗತಿಸಿದರು. ಆ ಮಾತು ಈ ಮಾತು ಆಡಿ ಕೊನೆಗೆ ವಿಷಯಕ್ಕೆ ಬಂದರು. 'ದುಂದೂರ ಶೀನಪ್ಪಾ ಅಂತ ನಮ್ಮ ಹಳೆಯ ಸ್ನೇಹಿತ ಇದ್ದಾನ. ಅವ ತನ್ನ ಮಗಳನ ನಿನಗ ತೋರಿಸಬೇಕೂ ಅಂತ ಇದ್ದಾನ. ಅವ ತನ್ನ ಮಗಳನ ನಿನಗ ತೋರಿಸಬೇಕೂ ಅಂತ ಬಂದಾನ.

ಒಳ್ಳೇ ಮನೆತನ. ಕನ್ಯಾನೂ ಛಲೋ ಅದ. ಅದನ್ನ ನಿನಗs ಕೊಡಿಸಬೇಕು ಅಂತ ನನ್ನದೂ ಬಹಳ ದಿವಸದ ವಿಚಾರ....'

ಕಿಟ್ಟಿ ಒಮ್ಮೆಲೇ ಅಡ್ಡಬಾಯಿ ಹಾಕಿ, 'ಇನ್ನೂ ನನ್ನ ಲಗ್ನದ ವಿಚಾರ ಇಲ್ಲೇ ಇಲ್ಲ' ಎಂದನು.

'ನಿಮ್ಮದು ಎಂದೂ ಇರೋದೇ ಇಲ್ಲೋ. ಲಗ್ನದ ವಿಚಾರ ನಿಮಗ ಇರsಬಾರದು. ಅದು ಹಿರಿಯರ ವಿಷಯ. ಕನ್ಯಾ ನೋಡಿ ಪಾಸಮಾಡೋ ಕೆಲಸ ಅಷ್ಟs ನಿಮ್ಮದು.'

'ಆದರ ಗೋಪಣ್ಣಾ, ನೌಕರೀ ಕಾಯಂ ಆಗದs ಲಗ್ನಾ ಮಾಡಿಕೋ ಬಾರದು ಅಂತ ನನ್ನ ವಿಚಾರ....'

'ಹೌದೋ, ಅದು ಸರಿ. ಲಗ್ನ ಅಂದಮೇಲೆ ಎಲ್ಲಾ ವಿಚಾರ ಮಾಡsಬೇಕಾತದ. ಆದರ ಕನ್ಯಾ ನೋಡಿ ಗೊತ್ತುಮಾಡಿ ಇಟ್ಟುಕೊಳ್ಳಲಿಕ್ಕೆ ಏನು ಅಡ್ಡಿ ಅದs?... ಕಾಯಂ ಆಗೇ ಆಗತದ ಸ್ವಲ್ಪ ದಿವಸದಾಗ....' ಎಂದರು ದೇಸಾಯರು.

'ಈಗ ನೋಡಿದರ ಏನು ಮಾಡಿದ ಹಂಗ ಆಯಿತು ?'

ಕಿಟ್ಟಿ ಆ ದನಿಯಲ್ಲಿ ದೇಸಾಯರಿಗೆ ಮಾತಾಡಿದ್ದು ಅದೇ ಮೊದಲ ಬಾರಿ, ಅವನ ಮನಸ್ಸಿನಲ್ಲಿ ಇದ್ದ ಗಟ್ಟಿಪದರುಗಳ ಅನುಭವ ದೇಸಾಯರಿಗೆ ಈ ಮೊದಲು ಆಗಿರಲಿಲ್ಲ. ಅವರು ತುಸು ರೌಸಿಗೆದ್ದೇ ಮಾತಾಡಿದರು.

'ನಿನ್ನ ಮನಸ್ಸಿನ್ಯಾಗ ಇರದಿದ್ದರ ನೋಡಬ್ಯಾಡ. ಏನೋ ಬ್ರಾಹ್ಮಣ, ಗಾಡೀ ಖರ್ಚು ಮಾಡಿಕೊಂಡು ಬಂದಾನ, ನೋಡುವ ಶಾಸ್ತ್ರ ಅಷ್ಟು ಮುಗದರ ಒಂದು ಕೆಲಸ ಆದಹಂಗ ಆಯಿತು, ಅಂತ ನಮ್ಮ ವಿಚಾರ. ಇದರ ಮ್ಯಾಲ ನಿಮ್ಮ ಮನಸ್ಸು ತಿಳಿದಂತೆ....'

ದೇಸಾಯರ ಸಂತಾಪದೆದುರು ಕಿಟ್ಟಿಗೆ ಆಗಲೇ ಬಾಯ್ಬಿಡುವ ಧೈರ್ಯವಾಗಲಿಲ್ಲ. ಆದರೂ 'ನೀವು ನೋಡು ಅಂದ್ರ ನೋಡತೀನಿ ಬೇಕಾದರ!' ಎಂದು ಗೊಣಗಿದನು.

ಸದ್ಯ ಕೆಲಸ ನಡೆಯಲಿ ಎಂಬ ವಿಚಾರದಿಂದ ದೇಸಾಯರು ಅಷ್ಟಕ್ಕೇ ಸಮಾಧಾನದ ಉಸಿರುಗರೆದರು.

ಅಷ್ಟೊತ್ತಿಗೆ ಅನುಷ್ಠಾನ ಮುಗಿಸಿ ಭಸ್ಮಾಂಕಿತಫಾಲಧಾರಿಯಾದ ಕೃಷ್ಣ ಕಾಯ ಶೀನಪ್ಪನು ಬರಿಮ್ಮೈಯಿಂದ ಹೊರಗೆ ಬಂದು, ಜಮಖಾನೆ ಮುಚ್ಚದ ಪಡಸಾಲೆಯ ಒಂದು ಗೋಡೆಯ ಬದಿಗೆ ತುದಿಗಾಲ ಮೇಲೆ ಗೋಡೆಗಾತು

ಕುಳಿತುಕೊಂಡನು. ದೇಸಾಯರು ಡಬ್ಬಿಯಲ್ಲಿಯ ಎರಡು ಎಲೆ, ಅಡಿಕೆ, ತಂಬಾಕದ ಚಿನ್ನು ಅವನ ಮಡಿ ಸ್ಥಳಕ್ಕೆ ಸರಿಸಿದರು. ಅನುಷ್ಠಾನದ ಉಂಗುರ, ಹಣೆಯ ಮೇಲಿನ ತ್ರಿಪುಂಡ್ರ, ಕೊರಳಲ್ಲಿಯ ರುದ್ರಾಕ್ಷಿ, ಹುರಿಕಟ್ಟಾದ ಗಿಡ್ಡ ದೇಹ – ಇವೆಲ್ಲವನ್ನು ಕಂಡು ಕಿಟ್ಟಿಗೆ ಸಾಕಷ್ಟು ಆದರ ಹುಟ್ಟಿದರೂ ಕೂಡ, ಇಂಥವನನ್ನು ಮಾವನೆಂದಾಗ, ಸ್ವೀಕರಿಸುವದರಲ್ಲಿ ಅನೇಕ ಲೋಪದೋಷಗಳು ಕಂಡವು. ಈ ತ್ರಿಪುಂಡ್ರಧಾರಿಗೆ ಮಾಮಲೆದಾರರ ಗುರುತು ಇರುವದು ಸಾಧ್ಯವಿಲ್ಲ... ಬಹಳವಾದರೆ ಅವರ ಮನೆಯ ದೇವರ ಗುರುತು ಇರಬಹುದು. ಈ ಲಂಡಪಂಜಾಧಾರಿಯಾದ ಕೃಷ್ಣ ಕಾಯನೊಡನೆ ಬೀದಿಗಳಲ್ಲಿ ಓಡಾಡುವದು ಕಷ್ಟ... ಇವನೇ ಹೀಗೆಂದಮೇಲೆ ಇವನ ಮಗಳು...! ಇವನೆತ್ತ, ಮ್ಯಾಂಚೆಸ್ಟರ ಧೋತರದ, ಆರು ಫೂಟು ಎತ್ತರದ, ಗೌರವರ್ಣದ ರಾಘಪ್ಪನೆತ್ತ.... ಇತ್ಯಾದಿ.

ದೇಸಾಯರು ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು. ಶೀನಪ್ಪನಿಗೆ ಅಡ್ಡ ತಿಡ್ಡ ಸವಿಮಾತುಗಳಲ್ಲಿ ರುಚಿಯಿರಲಿಲ್ಲ. ತತ್‌ಕ್ಷಣ ವಿಷಯಕ್ಕೇ ಬಂದನು. 'ನೋಡ್ರಿ, ಐವತ್ತು ಮಂದಿಗೆ ಅಡಿಗೀ ಒಬ್ಬಾಕೀನ ಮಾಡು ಅಂದರೂ ಮಾಡಿ ಹಾಕತಾಳ. ಇದೊಂದು ವಿಷಯ ನಾನು ಸ್ವತಃ ಅಭಿಮಾನದಿಂದ ಹೇಳೋದು. ಉಳಿದದ್ದು ನಿಮ್ಮ ನಿಮ್ಮ ವಿಚಾರ....' ಇಷ್ಟು ಹೇಳಿದವನೇ ಎರಡನೆಯ ಮಾತಿಲ್ಲದೆ ಚಪ್ಪಾಳೆ ಹೊಡೆದು, 'ಕೃಷ್ಣಾ, ಬಾರವ್ವಾ' ಎಂದು ಕೂಗಿದನು.

ತನ್ನ ತಾಯಿ–ತಮ್ಮಂದಿರನ್ನು ಮುಂದೆ ಹಾಕಿಕೊಂಡು ಕೃಷ್ಣಾ ಬಂದಳು. ಶೀನಪ್ಪನಿಗೆ ಇನ್ನೊಂದು ವಿಷಯಕ್ಕೆ ಅಭಿಮಾನ ಬಹಳ. 'ನೋಡ್ರಿ, ನಮ್ಮ ಮಂದಿ ಎಲ್ಲರೂ ಕಪ್ಪು. ಎಲ್ಲಾರಿಗೂ ಅದರ ತಕ್ಕಂತೇ ಹೆಸರು ಇಟ್ಟೇನಿ. ಈಕಿ ಕೃಷ್ಣಾ. ಆಕೀಕಿಂತ ಚಿಕ್ಕಂವ ಕಾಳಿಂಗ ; ಅವನಿಗಿಂತ ಚಿಕ್ಕಾಕಿ ಶ್ಯಾಮಲಾ, ಅಕೀಕಿಂತ ಚಿಕ್ಕದು ಆ ಕೂಸು ಘನಶ್ಯಾಮ. ಕೃಷ್ಣಾನs ಎಲ್ಲಾರಿಗಿಂತ ಸ್ವಲ್ಪ ತಿಳಿ.' ತಥೋಕ್ತಕ್ರಮದಲ್ಲಿ ಶೀನಪ್ಪನ ಮಕ್ಕಳು ಜಮಖಾನೆಯ ಮೇಲೆ ಕುಳಿತುಕೊಂಡರು. ಘನಶ್ಯಾಮನು ಕೂಡ ತನ್ನ ನಾಮೋಚ್ಚಾರದ ಜೊತೆಗೆ ಅಪ್ಪನ ಕಡೆಗೆ ಹೋಗಲು ತಾಯಿಯ ಕಂಕುಳದಿಂದ ಕೈಚಾಚತೊಡಗಿದನು. ಆದರೆ ಮಡಿಯ ಹೆದರಿಕೆಯಿಂದ ಶ್ಯಾಮಲಾ ಅವನನ್ನು ಕರೆದುಕೊಂಡಳು. ಸ್ತ್ರೀಯರ ಚಿಕ್ಕ ಗುಂಪು ಬಾಗಿಲ ಬಳಿ ಇಣುಕುತ್ತ ನಿಂತುಕೊಂಡಿತು. ಅವರಲ್ಲಿ ಪುಢಾರಿ ವೇಣೂಬಾಯಿ.

ಕೃಷ್ಣಾಕುಮಾರಿಯು ಒಂದು ಗೋಡೆಯ ಬಳಿ ತುದಿಗಾಲ ಮೇಲೆ ಮುಖ ಕೆಳಗೆ ಮಾಡಿಕೊಂಡು ಕುಳಿತಳು.

ವೇಣೂಬಾಯಿ ನಿಂತಲ್ಲಿಯೇ, 'ನೋಡಪಾ, ನೀನಂತೂ ಕೃಷ್ಣ, ಆಕಿ

ಕೃಷ್ಣಾ ; ನಮ್ಮೆಲ್ಲರಿಗೂ ಈ ಜೋಡಿ ಪಸಂದ ಬಿದ್ದದ. ನಿಮ್ಮವ್ವ ಸುದ್ಧಾ ಮುಂಜಾನೆ ಬಂದು ಹಿರಿಹಿರಿ ಹಿಗ್ಗಿ ಹೋದಳು' ಎಂದಳು. ಕಿಟ್ಟಿ ಮಾರುತ್ತರ ಕೊಡಲಿಲ್ಲ.

ಎಲ್ಲ ಕಡೆಗೆ ಮೌನ ವ್ಯಾಪಿಸಿತು. ದೇಸಾಯರೇ ಆಕೆಗೆ ಒಂದೆರಡು ಪ್ರಶ್ನೆ ಕೇಳುವ ಶಾಸ್ತ್ರ ಮಾಡಿದರು. ನಿನ್ನ ಹೆಸರೇನು, ಎಷ್ಟನೇ ಇಯತ್ತಾ ಕಲತೀ, ಹಾಡಲಿಕ್ಕೆ ಬರತದ ಏನು, ಇತ್ಯಾದಿ. ಆಕೆ ವೇದಾಂತಪರ 'ಯಾತರ ಖಟ ಪೀಟಿ, ಒಂದಿನ ಹೋಗತೀದಿ ಲಟಪೀಟಿ!" ಎಂಬ ಹಾಡನ್ನು ಗಡುಸಾದರೂ ಸ್ವರಬದ್ಧವಾದ ಧ್ವನಿಯಲ್ಲಿ ಹಾಡಿದಳು. ದೇಸಾಯರೂ ಹೆಚ್ಚು ಚಿಕಿತ್ಸೆ ಇಲ್ಲದೆ ಆಕೆಯನ್ನು ಒಳಕ್ಕೆ ಕಳಿಸಿದರು. ಎಲ್ಲ ಜನ ಒಟ್ಟಿನ ಕೆಲಸ ಚೆನ್ನಾಗಿ ಆಯಿತೆಂದು ಭಾವಿಸಿದ್ದರು. ಶೀನಪ್ಪ ಮುಂದಿನ ವಿಷಯವನ್ನೂ ಕಿಟ್ಟಿಗಾಗಿಯೇ ಎಂದು ದೇಸಾಯರನ್ನು ಉದ್ದೇಶಿಸಿ ಪ್ರಸ್ತಾಪಿಸಿದನು : "ನೋಡ್ರಿ, ನನ್ನ ಯೋಗ್ಯತಾದ ತಕ್ಕಂತೆ ಮರ್ಯಾದೆ ಮಾಡಿ ಒಂದು ಸಾವಿರ ರೂಪಾಯಿ ವರದಕ್ಷಿಣೆ ಕೊಡತೇನಿ....'

'ಖರೆ, ಇನ್ನೂ ಲಗ್ನದ ವಿಚಾರವೇ ಇಲ್ಲ ನನ್ನದು...' ಎಂದು ಕಿಟ್ಟಿ ಗೊಣಗಿಕೊಂಡಿದ್ದು ದೇಸಾಯರೊಬ್ಬರಿಗೇ ಕೇಳಿಸಿತು. ಈ ವಾತಾವರಣದಲ್ಲಿ ಮಾತು ಮುಂದುವರಿಸುವದು ಅವರಿಗೆ ಸರಿಕಾಣಲಿಲ್ಲ. ಬಾಗಿಲ ಬಳಿ ಬಂದು ನಿಂತ ಗಂಗವ್ವನಿಗೆ ಸನ್ನೆ ಮಾಡಿ ಫಳಾರದಿಂದಲೇ ಅಂದಿನ ಕಾರ್ಯಕ್ರಮ ಮುಗಿಸಿದರು. ನಂತರ ಕಿಟ್ಟಿಗೆ ಮನೆಗೆ ಹೋಗಲು ಅಪ್ಪಣೆ ದೊರಕಿತು.

ಕಿಟ್ಟಿ ಮನೆಗೆ ದುರುದುರನೆ ಬಂದವನೇ ಕೀಲಿ ತೆಗೆದು ತನ್ನ ಕುರ್ಚಿಯ ಮೇಲೆ ಕುಳಿತುಕೊಂಡನು. ಇದೆಲ್ಲವೂ ತನ್ನ ತಾಯಿ ಹಾಗೂ ದೇಸಾಯರು ಕೂಡಿ ಮಾಡಿದ ಒಳಸಂಚು ಎಂದೇ ಅವನಿಗೆ ತೋರಿತು. ತಾಯಿ ಮೂರ್ಖಳು, ಆದರೆ ದೇಸಾಯರಿಗೂ ತಿಳಿಯಬಾರದೇ....? ಏನೋ ಒಮ್ಮೆ ಮಾಡಿದ ಉಪಕಾರಕ್ಕಾಗಿ ಲಗ್ನದ ವಿಷಯಕ್ಕೂ ನಾನು ಸುಮ್ಮನೇ ಕುಳಿತಿರಬೇಕೆ... ? ಕೂಡಲೇ ಒಂದು ವಿಚಾರ ಪೂರ್ಣವಾದ ಲೇಖೀ ಕಾಗದವನ್ನೇ ದೇಸಾಯರಿಗೆ ಬರೆದು ಕಾಶೀತಾಯಿಯ ಮಗಳ ಜೊತೆಗೆ ದೇಸಾಯರ ಕೈಯಲ್ಲಿಯೇ ಕೊಡಲಿಕ್ಕೆಂದು ಹೇಳಿ ಕಳಿಸಿಕೊಟ್ಟನು.

ಮ॥ ರಾ॥ ರಾ॥ ಗೋಪಣ್ಣಾ ಇವರಿಗೆ ಚಿ. ಕೃಷ್ಣಾಜಿಯ ಶಿ.ಸಾ.ನ. ವಿ.ವಿ.. ನನಗೆ ಲಗ್ನಮಾಡಿಸಬೇಕೆಂಬ ತಮ್ಮ ಸದುದ್ದೇಶಕ್ಕೆ ನಾನು ಅಭಾರಿಯಾಗಿದ್ದೇನೆ. ಆದರೆ ಈ ವಿಷಯಕ್ಕೆ ತಮ್ಮ ಶ್ರಮ ವ್ಯರ್ಥವಾದೀತಲ್ಲ ಎಂಬ ಹೆದರಿಕೆಯಿಂದ ವಿಷಯ ಬರೆಯುತ್ತಿದ್ದೇನೆ. ತಮ್ಮ ಚಟುವಟಿಕೆಗಳನ್ನು ದಯವಿಟ್ಟು ಸದ್ಯಕ್ಕೆ ತಹಕೂಬ

ಇಡಬೇಕು. ನನಗೆ ಲಗ್ನವಾಗಬೇಕೆಂಬ ಇಚ್ಛೆಯಾದೊಡನೆ ತಮಗೆ ತಿಳಿಸುತ್ತೇನೆ. ಇಂತೀ ಸವಿನಯ ಪ್ರಾರ್ಥನೆ.

ತಮ್ಮ ನಮ್ರ ಬಾಲಕ.

**ಕೃಷ್ಣಾಜಿ.**

ಕಾ.ಕ.... ಈ ವಿಷಯಕ್ಕೆ ಇನ್ನೊಮ್ಮೆ ಸಮಕ್ಷಮ ಭೇಟಿಯಾಗುವೆ.

**ಕೃಷ್ಣಾಜಿ**

ಕೊನೆಯ ತಾಜಾ ಕಲಮು ಪತ್ರದ ಖಾರವನ್ನು ಮುರಿಯುವದಕ್ಕಾಗಿಯೆಂದೇ ಇದ್ದಿತು. ದೇಸಾಯರನ್ನು ನಿಜವಾಗಿಯೂ ಭೇಟಿಯಾಗುವ ಉದ್ದೇಶ ಕಿಟ್ಟಿಯ ಮನಸ್ಸಿನಲ್ಲಿ ಸರ್ವಥಾ ಇರಲಿಲ್ಲ.

ಪತ್ರದ ಧೋರಣೆಯನ್ನು ತಿಳಿದುಕೊಂಡು ದೇಸಾಯರಿಗೆ ಅವಮರ್ಯಾದೆಯಾದಂತಾಯಿತು. ಅದನ್ನು ಯಾರೆದುರಿಗೂ ತೋರಿಸದೆ ತಮ್ಮ ತಿಜೋರಿಯಲ್ಲಿ ಭದ್ರವಾಗಿಟ್ಟುಕೊಂಡು, ಏನೂ ಆಗದವರಂತೆ ಇದ್ದರು. ಶೀನಪ್ಪನೊಬ್ಬನನ್ನೇ ಇನ್ನೆರಡು ದಿವಸ ತಮ್ಮ ಬಳಿಗೆ ಇಟ್ಟುಕೊಂಡು ಅವನಿಂದ ಗ್ರಹಶಾಂತಿಯನ್ನು ಮಾಡಿಸಿದರು. ಊರಿಗೆ ಹೊರಡುವಾಗ ಅರ್ಧ ಸಂಶಯದಿಂದಲೇ ಶೀನಪ್ಪ ಮತ್ತೆ ಲಗ್ನದ ಮಾತು ಎತ್ತಲು, 'ಏನs ಆಗಲಿ ; ಒಂದು ನೆವದಿಂದ ನನ್ನ ಮನಿಗೆ ಬಂದೆಯಲ್ಲಾ, ಅದs ಸಂತೋಷ. ಹಂಗs ಒಂದು ದಿವಸ ಇರಲಿಕ್ಕೆ ಬಾರಪಾ ಅಂದರ ಬರತಿದ್ದ್ಯ, ನಿನ್ನ ಅನುಷ್ಠಾನ ಬಿಟ್ಟು... ?' ಇಷ್ಟೇ ಹಾರಿಕೆಯ ಮಾತಾಡಿ ಕಳಿಸಿಬಿಟ್ಟರು. ಗಂಗವ್ವನ ಜೊತೆಗೂ ಹೆಚ್ಚು ಮಾತಾಡಲಿಲ್ಲ.

ಗಂಗವ್ವ ಕಿಟ್ಟಿಗೆ ಮನೆಯಲ್ಲಿ ಎರಡು ದಿವಸ ಅಸಾಧ್ಯ ಕಾಡಿದಳು. ಹೀಗೆಯೇ ನಾಲ್ಕು ವರ್ಷ ದಾಟಿದವೆಂದರೆ ವಯಸ್ಸು ಮೀರಿ, ಕನ್ಯಾ ಕೂಡ ಹತ್ತಲಿಕ್ಕಿಲ್ಲವೆಂದು ಹೆದರಿಸಿ ನೋಡಿದಳು. ಆಕೆಯ ಮಾತನ್ನು ತಪ್ಪಿಸಿಲು ಕಿಟ್ಟಿ ರಾತ್ರಿ ತಡ ಮಾಡಿ ಮನೆಗೆ ಬರತೊಡಗಿದನು. ಎಲ್ಲದಕ್ಕೂ ಅವನ ಒಂದೇ ಹಟಮಾಡಿ ಉತ್ತರ.... 'ಈಗ ನನ್ನ ಲಗ್ನದ ವಿಚಾರವಿಲ್ಲ, ನೌಕರಿ ಕಾಯಂ ಆಗಲಿ, ನೋಡೋಣವಂತೆ!'

* * * *

# ೧೬ : ಪುನಃ ದೇಸಾಯರ ಸಂಧಾನ

ಕಿಟ್ಟಿಗೆ ಬಲು ತೊಂದರೆಗಿಟ್ಟುಕೊಂಡಿತು. ಎಂದೋ ಹಿಂದೆ ಒಮ್ಮೆ ತನ್ನ ತಾಯಿಯ ಎದುರು ರಾಘಪ್ಪ ಲಗ್ನದ ಪ್ರಸ್ತಾಪವನ್ನೆತ್ತಿದವನು ಮುಂದೆ ಅದರ ಮಾತೇ ಎತ್ತಿರಲಿಲ್ಲ. ಆದರೆ ಅಪ್ರತ್ಯಕ್ಷ ಜಾಲಗಳು ಮಾತ್ರ ಸುತ್ತಮುತ್ತಲು ತುಂಬ ಬಿಗಿದಿದ್ದವು. ಕಿಟ್ಟಿ ಅಪ್ಪಿತಪ್ಪಿ ರಾಘಪ್ಪನ ಓಣಿಯಲ್ಲಿ ಹಾಯುವಾಗ ನೆರೆಹೊರೆಯ ಹೆಂಗಸರು ಅವನೆಡೆಗೆ ಬೊಟ್ಟುವಾಡಿ 'ರತ್ನಾನ ವರ' ಎಂದು ಮಾತಾಡಿಕೊಳ್ಳುತ್ತಿದ್ದರು. ದೀಪಾವಳಿಯಲ್ಲಿ ಇಷ್ಟೆಲ್ಲ ಸರಸವಾದರೂ ಸ್ವತಃ ರಾಘಪ್ಪ ಮಾತ್ರ ಲಗ್ನದ ವಿಷಯಕ್ಕೆ ಚಕಾರವೆತ್ತಿರಲಿಲ್ಲ. ಮುಂದಾದರೂ ದಿನಗಳು ಕಳೆದೇ ಕಳೆದವು. ರಾಘಪ್ಪ – ಮಾಮಲೇದಾರರ ಗುರುತು, ಇಲಾಖ ಸಾಹೇಬರ ವಶೀಲಿ, ಜಹಗೀರದಾರರ ದತ್ತಕ ಪ್ರಕರಣ, ಇವುಗಳ ಮೇಲೆಯೇ ಪಂಟು ಹೊಡೆಯುತ್ತಿದ್ದನೇ ಹೊರತು ರತ್ನಾಳ ವಿಷಯಕ್ಕೆ ಮಾತ್ರ ಮಾತೇ ಇಲ್ಲ. ರತ್ನಾಳಾದರೋ ಆ ದೀವಳಿಗೆಯ ಪ್ರಸಂಗದನಂತರ, ಸ್ವಂತದ ಕಿಶೋರಾವಸ್ಥೆಯನ್ನು ದಾಟಿದ ಮೂಲಕವೋ ಅಥವಾ ತಾಯಿಯ ಅಪ್ಪಣೆಯ ಮೂಲಕವೋ ಇನ್ನೊಮ್ಮೆ ಕಿಟ್ಟಿಯ ಎದುರು ನಿಂತು ಮಾತಾಡಿರಲಿಲ್ಲ. ಹೀಗೆ ಪ್ರಣಯ ನೆನೆಗುದಿಗೆ ಬಿದ್ದ ಮೂಲಕ ಕಿಟ್ಟಿ ಕಂಗಾಲಾದನು. ದಿನದಿನವೂ ರತ್ನಾ ಸುಂದರಿಯಾಗತೊಡಗಿದ್ದಳು. ಇಂದಿನ ರತ್ನಾ ಮರುದಿನ ಬೇರೆಯಾಗಿರುತ್ತಿದ್ದಳು..... ಬರೀ ವೇಷಭೂಷೆಯಲ್ಲಿ ಅಲ್ಲ, ಪ್ರತ್ಯಕ್ಷ ಅಂಗಾಂಗಗಳಲ್ಲಿ. ಅಂದು ಕಿಟ್ಟಿಯೊಡನೆ ಮಾತಾಡುವಾಗ ಇದ್ದ ಧೈರ್ಯ ಉಡುಗಿಹೋಗಿ ಅವನನ್ನು ಕಂಡೊಡನೆ ನಾಚಿಕೆಯ ತೆರೆಯಲ್ಲಿ ಮರೆಯಾಗುತ್ತಿದ್ದಳು... ಆದರೆ ಅಷ್ಟರಲ್ಲಿಯೇ ಕಿಟ್ಟಿಗೆ ಅನೇಕ ಚಿಕ್ಕಪುಟ್ಟ ವಿಷಯಗಳು ಕಂಡಿದ್ದವು. ಅವಳ ತುಟಿಗಳು ಮೊದಲಿನ ಹಾಲುಗಸುಕನ್ನು ಕಳೆದು ಹಣ್ಣಾಗಿ ತಮ್ಮ ನೈಜರೇಖೆಯನ್ನು ತೋರತೊಡಗಿದ್ದವು. ಕಾಡಿಗೆಯ ಗೆರೆಗಳಲ್ಲದೆ ಕಣ್ಣುಗಳೇ ಹೊಸಬಗೆಯ ನೀರನ್ನು ಪಡೆದಿದ್ದವು. ಕೆನ್ನೆಗಳು, ಕೊರಳು, ಮೊದಲಿನ ಮಸುಕನ್ನು ಕಳೆದು ಹಸ್ತಿದಂತದಂತೆ ಶುಭ್ರವಾಗಿದ್ದವು. ಕಣ್ಮರೆಯಾದಂತೆ ಕಿಟ್ಟಿಯ ಮನದಲ್ಲಿ ಆಕೆ ಹೆಚ್ಚು ಸುಸ್ಪಷ್ಟವಾಗತೊಡಗಿದಳು.

ಕಿಟ್ಟಿಯ ಮಂಗಮನಸ್ಸು ಉಪಾಯಗಳನ್ನು ಹುಡುಕತೊಡಗಿ ಬಲು ದಿನಗಳಾದವು. ಆದರೆ ಅವನ್ನು ಕೃತಿಗೆ ಇಳಿಸಲು ಧೈರ್ಯ ಸಾಲುತ್ತಿದ್ದಿಲ್ಲ. ಆದರೆ ದೇಸಾಯರ ಮನೆಯಲ್ಲಿ ಆದ ಕನ್ಯಾಪರೀಕ್ಷೆಯಿಂದ ಇದೀಗ ನೆವದೊರಕಿದಂತಾಯಿತು. ಒಮ್ಮೆ ದಾರಿಯಲ್ಲಿ ಭೇಟಿಯಾದಾಗ ಕಿಟ್ಟಿ ರಾಘಪ್ಪನಿಗೆ ಅಂದನು :

'ದೇಸಾಯರು ಒಂದು ಕನ್ಯಾ ಮಾಡಿಕೋ ಅಂತ ಆಗ್ರಹ ಮಾಡಲಿಕ್ಕೆ ಹತ್ಯಾರ.'

'ಯಾವ ದೇಸಾಯರು....?' ರಾಘಪ್ಪ ಮುಖ್ಯ ಪ್ರಶ್ನೆಯನ್ನೇ ಬದಿಗೆ ಸರಿಸಿದನು.

'ನಮ್ಮ ಮನಿ ಹತ್ತಿರದ ಬಹಾದ್ದೂರ ದೇಸಾಯರು, ಸುಣ್ಣದ ಮನಿಯವರು.'

'ಹೀಂಗೇನು....?'

ಮೌನ.

'ನನದೇನೂ ಈಗs ಲಗ್ನದ ವಿಚಾರ ಇಲ್ಲ, ಅಂತ ತಿಳಿಸೇನಿ....'

'ಹಂಗಾದರ ಯಾವಾಗ ಮಾಡಿಕೋಬೇಕಂತ ಮಾಡೀ?'

'ಅಲ್ಲಲ್ಲ, ಅವರಿಗೆ ಹಂಗ ತಿಳಿಸೇನಿ !' ಎಂದ ಕಿಟ್ಟಿ ನಾಚಿಗೆದೊರೆದು.

'ಹಂಗಾದರ ನಾ...' ಇನ್ನೇನು ಆಡಬೇಕೆಂದಿದ್ದನೋ ಏನೋ, ಆದರೆ ತಾಳ್ಮೆಗೇಡಿಯಾದ ಕಿಟ್ಟಿಗೆ ಇಷ್ಟು ಅರ್ಧೋಚ್ಚಾರವೇ ಮುಂದಿನ ಮಾತಿಗೆ ಎಡೆಮಾಡಿಕೊಟ್ಟಿತು.

'ಇಲ್ಲಿಲ್ಲ.... ನೀವೇನೂ ಚಿಂತಿ ಮಾಡುವ ಕಾರಣ ಇಲ್ಲ. ತಿರಿಗಿ ಕೇಳಿದರ, ನಿಮ್ಮ ಮಗಳ ಹೊರತು ಇನ್ನು ಯಾರನ್ನೂ ಮಾಡಿಕೊಳ್ಳೋದಿಲ್ಲ, ಅಂತ ಹೇಳಿಬಿಡಬೇಕೆಂದು ಮಾಡಿದ್ದೆ. ಹಿರೇರು ಅಂತ ಸುಮ್ಮನs ಇದ್ದೆ.'

ರಾಘಪ್ಪ ಈ ಮಾತುಗಳಿಗಾಗಿಯೇ ಇಷ್ಟು ದಿವಸ ಕಾಯ್ದದ್ದು. ಕೊನೆಗೊಮ್ಮೆ ತನ್ನ ಒಣ ಉಪಾಯ ಚಿಗಿತಿತು. ಅವನ ಮೊಗದ ಮೇಲೆ ಗೆಲುವಿನ ಮಿನುಗುನಗೆ ಮೂಡಿತು.

'ಈ ಮಾತು ಖರೇನs?' ಎಂದ ರಾಘಪ್ಪ.

'ಯಾಕ, ನಿಮಗ ಸಂಶಯ ಇತ್ತೇನು ?'

'ಅಲ್ಲ, ಗಂಗಕ್ಕನ ವಿಚಾರ ಈ ವಿಷಯದಾಗ ಹೆಂಗ ?'

'ಅದರ ಸಲುವಾಗಿಯೂ ನಾನು ವಿಚಾರ ಮಾಡಿ ಇಟ್ಟೇನಿ. ಅವ್ವ ದೇಸಾಯರು ಹೇಳಿದ ಮಾತು ಮೀರುವದಿಲ್ಲ. ಮುಖ್ಯ ಕೆಲಸ, ದೇಸಾಯರನ್ನು

ಒಪ್ಪಿಸುವದು.... ಅವರು ಒಪ್ಪಿದರ ಅವ್ವ ಒಪ್ಪಿದ ಹಂಗs'

ರಾಘಪ್ಪ ಗಂಭೀರವಾಗಿ ಕೆಲವೊಮ್ಮೆ ಯೋಚಿಸಿದನು. ಅನಂತರ ಆ ದೇಸಾಯರ ಗೊತ್ತುಗುರಿ, ಸ್ವಭಾವ, ಅವರ ಸ್ನೇಹಿತರು ಇವೆಲ್ಲವುಗಳ ಬಗ್ಗೆ ಸಾದ್ಯಂತ ವರ್ತಮಾನವನ್ನು ಕೇಳಿಕೊಂಡು, ತನ್ನ ಮುಂದಿನ ವಿಚಾರಕ್ಕೆ ಅಣಿಯಾದನು.

* * *

ರಾಘಪ್ಪನ ಮುಂದಿನ ಸಮಸ್ಯೆ ಬಹು ನಾಜೂಕಿನದು. ದೇಸಾಯರ ಪ್ರತ್ಯಕ್ಷ ಪರಿಚಯುವಿಲ್ಲ. ಇನ್ನು ಯಾರನ್ನಾದರೂ ಗುರುತಿನವರನ್ನು ಕರೆದೊಯ್ಯಬಹುದಾಗಿತ್ತು. ಒಬ್ಬನೇ ಹೋಗಬೇಕೆಂದರೆ, ಈಗಾಗಲೇ ಗಂಗವ್ವ ತನ್ನ ಬಗ್ಗೆ ದೇಸಾಯರಿಗೆ ಏನನ್ನೋ ಹೇಳಿರಬಹುದೆಂಬ ಸಕಾರಣ ಸಂಶಯವೂ ಇದ್ದಿತು. ಆದರೆ ಜೊತೆಗೆ ಇನ್ನೊಬ್ಬರಿದ್ದರೆ ಗಂಗವ್ವನ ಎದುರು ಆಗಬೇಕಾಗಿದ್ದ ಭೂತಕಾಲದ ಪಾರಾಯಣದಿಂದ ತನ್ನ ಮರ್ಯಾದೆ ಹೋಗುವ ಸಂಭವವಿತ್ತು. ಅಂತೂ ಸೋಕ್ಷಮೋಕ್ಷದ ವಿಚಾರಮಾಡಿ ಕೊನೆಗೆ ಒಬ್ಬನೇ ಹೋಗಬೇಕೆಂದೂ ನಿಶ್ಚಯಿಸಿಕೊಂಡನು. ಕಿಟ್ಟಿಗೆ ಆಫೀಸು ಇದ್ದ ಸಮಯ ನೋಡಿಕೊಂಡು ಒಂದು ಮಧ್ಯಾಹ್ನ ಮೂರು ಗಂಟೆಗೆ ದೇಸಾಯರ ಮನೆಗೆ ಹೋಗಿ ಬಾಗಿಲು ತಳ್ಳಿದನು.

ದೇಸಾಯರು ಅದೇ ನಿದ್ರೆ ಮುಗಿಸಿ ಮುಖ ತೊಳೆದುಕೊಂಡು ವೃತ್ತ ಪತ್ರದ ಪುನರ್ವಾಚನದಲ್ಲಿ ತೊಡಗಿದ್ದರು. ಎದ್ದವರೇ ಹೊರಗೆ ಬಂದು ಈ ಅಪರಿಚಿತ ವ್ಯಕ್ತಿಯನ್ನು ಕಂಡು, 'ಬರ್ರಿ, ಯಾರು?' ಅಂದರು.

ರಾಘಪ್ಪ ಎರಡನೆಯ ಮಾತಾಡದೆ ದೇಸಾಯರಿಗೆ ಸಾಷ್ಟಾಂಗ ಹಾಕಿದನು. ಇದೆಲ್ಲ ತುಸು ನಾಟಕೀಯದಾಗಿ ಕಂಡರೂ ಕೂಡ ದೇಸಾಯರಿಗೆ ಕಾಲು ಬೀಳಿಸಿಕೊಳ್ಳುವ ಅನುಭವ ಸಾಕಷ್ಟು ಇತ್ತು. ಊರ ರೈತರಂತೂ ಹೋಗಲಿ, ಹಿಂದಕ್ಕೆ ಮಾಸ್ತರನೋರ್ವನನ್ನು ಕೆಲಸದಿಂದ ತೆಗೆಯಬೇಕೆಂದಿದ್ದಾಗ, ಅವನಿಂದ; ಅಲ್ಲದೆ ನೌಕರಿ, ಸಹಾಯ, ಸಾಲ ಇತ್ಯಾದಿ ಕೇಳಲು ಬರುವ ಇತರ ಸುಸಂಸ್ಕೃತ ದೈವಗೇಡಿಗಳಿಂದ ಅವರು ಸಾಷ್ಟಾಂಗವನ್ನು ಪಡೆದಿದ್ದರು. ಅವರು ಒಮ್ಮೆಲೇ ಬಾಗಿ ರಾಘಪ್ಪನನ್ನು ಎಬ್ಬಿಸಿ 'ಛೆ, ಹಿಂಗ ಯಾರೂ ಯಾರ ಕಾಲಿಗೂ ಬೀಳಬಾರದು...' ಎನ್ನುತ್ತ ತಮ್ಮ ಕೋಣೆಯ ಒಳಗೆ ಕರೆದೊಯ್ದರು. ರಾಘಪ್ಪ ಬಿಕ್ಕಳಿಸುವವರಂತೆ ನಟಿಸುತ್ತ,

'ರಾಯರs, ನನ್ನ ಸಂಕಟದಾಗಿಂದ ಪಾರುಮಾಡೋದು ನಿಮ್ಮಿಂದ ಮಾತ್ರ ಸಾಧ್ಯ ಅದ. ಅದಕ್ಕೆ ನಿಮ್ಮ ಆಶ್ರಯಕ್ಕ ಬಿದ್ದೇನಿ....' ಎಂದು ಪ್ರಾರಂಭಿಸಿದನು :

'ನನ್ನ ಹೆಸರು ಬಿಂದಗೋಳ ರಾಘಪ್ಪ. ನಿಮ್ಮ ಮನೀ ಹತ್ತಿರ ಇರೋ ಗಂಗಕ್ಕ ನನಗ ಖಾಸ ಅಕ್ಕ ಆಗಬೇಕು. (ದೇಸಾಯರು ಮುಖ ಕಿವುಚಿದ್ದನ್ನು ಲೆಕ್ಕಿಸದೆ ರಾಘಪ್ಪ ಮುಂದುವರಿದನು.) ಆಕೀದು ನನ್ನದು ಮುರುಗಡೆ ಆಗಿ ಇಂದಿನ ಮಿತಿಗೆ ಹತ್ತು ವರ್ಷ ಆದವು. ಆದರ ದೈವದ ಆಟ ನೋಡ್ರಿ, ಈಗ ಮತ್ತೆ ನನಗ ನನ್ನ ಅಕ್ಕ, ತಮ್ಮಂಥ ಹೀರೇರು, ಇವರ ಕಾಲು ಹಿಡಿದು ಕೊಳ್ಳೋ ಪ್ರಸಂಗ ಬಂದsದ. ಬಿಂದಗೋಳದಾಗ ಇರೋತನಕಾ ಈ ಪ್ರಸಂಗ ಬಂದೀತು ಅಂತ ನನ್ನ ಕನಸುಮನಸಿನ್ಯಾಗ ಇದ್ದಿದ್ದಿಲ್ಲ. ಊರು ಬಿಟ್ಟು ಇಲ್ಲಿಗೆ ಬಂದೆ, ಏನೋ ನನ್ನ ಹೆಣ್ಣು ಹುಡುಗರು ನಾಲ್ಕು ಅಕ್ಷರ ಕಲೀಲಿ ಅಂತ..... ಆದರ ಅದs ನನ್ನ ಕೊಳ್ಳಾಗ ಬೀಳಬೇಕs...?' ಎಂದು ನಿಃಶ್ವಾಸಗೈದನು.

ದೇಸಾಯರಿಗೆ ಈ ಹೊಸ ಪ್ರಕರಣದ ಮಂಜು ಅರ್ಥವು ಕೂಡಲೇ ಹೊಳೆಯಿತು. ಲೋಕರೂಢಿಯ ಮಾತಿಗಾಗಿ ಇಷ್ಟೊಂದು ಆರ್ಜವನಾಟಕಗಳು ಬೇಕಾಗಿರಲಿಲ್ಲ. ಆದರೆ ಕೊನೆಯ ಪರಿಣಾಮವನ್ನು ಅನುಲಕ್ಷಿಸಿ, ಶಕ್ಯವಿದ್ದಷ್ಟು ವಿಚಾರಗಳನ್ನೂ ತ್ಯಜಿಸಿ, ಎಲ್ಲವನ್ನು ಕೇಳಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡರು. ಅದಕ್ಕಾಗಿ ಈ ನಾಟಕವನ್ನು ಸಹಿಸಿದರು.

'ಯಾಕ....? ಈಗ ಏನು ಆಯಿತು?'

'ಈ ಊರಿಗೆ ಬಂದಮ್ಯಾಲ ಅಕಸ್ಮಾತ್ ನಮ್ಮ ಕಿಟ್ಟಣ್ಣನ ಭೇಟಿ ಆಯಿತು. ರಕ್ತಸಂಬಂಧ, ಎಷ್ಟ ಆದರೂ ಜೀವ ನಿಲ್ಲಬೇಕು ನೋಡಿರಿ! ಗಂಗಕ್ಕನಂತು ಹೆಣ್ಣು ಮಗಳು, ತನ್ನ ಡಂಕು ಬಿಡುವದಿಲ್ಲ ; ಮಗನ ಜೊತೆಗಾದರೂ ಮೊದಲಿನ ಋಣಾನುಬಂಧ ಇಡೋಣ ಅನ್ನೋ ಉದ್ದೇಶದಿಂದ ನಾಲ್ಕು ಸರೆ ಕಿಟ್ಟಣ್ಣನ್ನ ಮನಿಗೆ ಕರಕೊಂಡು ಹೋದೆ, ಚಹಾಕ್ಕೂ ಫಳಾರಕ್ಕೂ ಅಂತ. ಗಂಗಕ್ಕಗ ತಿಳಿದರ ಆಕಿ ಸಿಟ್ಟಿಗೇಳತಾಳ ಅನ್ನೋದು ಗೊತ್ತು ಇದ್ದರೂ ಕರಕೊಂಡು ಹೋದೆ. ಯಾಕಂದರ ಗಂಡಸುಮಕ್ಕಳು ಇಲ್ಲದ ರಂಡೇ ಮಗ ನಾನು. ಕಿಟ್ಟಣ್ಣನ ಕಂಡರ ಏನೋ ಒಂದು ಭಾವನಾ.... ಆದರ ಏನೋ ಮಾಡಲಿಕ್ಕೆ ಹೋದರ ಏನೋ ಆಯಿತು..... ಏನೋ ಅಂತರs ಯಾಕ ಅನಬೇಕು?... ಗಂಗಕ್ಕ ಏನಾದರೂ ಅನವಲ್ಲಳು ಯಾಕ, ನಿಮ್ಮಂಥ ದೊಡ್ಡ ಮನಸ್ಸಿನವರು ಆದರೂ, ಅದದ್ದು ಒಳಿತೇ ಅಂತೀರಿ... ಈಗ ಏನು ಆಗೇದ ಅಂದರ, ಕಿಟ್ಟಣ್ಣ ನನ್ನ ಹಿರೇ ಮಗಳು ರತ್ನಾನ್ನ ಲಗ್ನಾ ಮಾಡಿಕೋತೇನಿ ಅಂತ ನನ್ನ ಸುತ್ತ ಗಂಟುಬಿದ್ದಾನ! ಅಲ್ಲಲ್ಲ, ದೇಸಾಯರs, ನನ್ನ ಆಶಾನೂ ನನ್ನ ಮಗಳ್ನ ಕಿಟ್ಟಣ್ಣಗ ಕೊಡಬೇಕಂತs ಇತ್ತು. ಇಲ್ಲ ಅಂತಲ್ಲ. ಆದರ ಕಿಟ್ಟಣ್ಣ ಇಷ್ಟು ದೀರ್ಘವಿಚಾರಕ್ಕ ಹೋಗಿ ಹಿಂಗ ಹಟಾ

ಹಿಡದಾನು ಅಂತ ಕನಸುಮನಸ್ಸಿನ್ಯಾಗ ಇರಲಿಲ್ಲ ನನಗ !... ಇದೇನು ಕಿಟ್ಟಣ್ಣನ ಕಥಿ ಆಯಿತು. ಆದರ ಈ ಸುದ್ದಿ ಹೊರಬಿದ್ದು, ಓಣೀತುಂಬ ಹಬ್ಬಿ, ನಮ್ಮ ರತ್ನೀ ಜೊತೆಯ ಗೆಳತಿಯರು ಆಕೀಗೆ 'ಇವ ನಿನ್ನ ಗಂಡ, ನಿನ್ನ ಗಂಡ' ಅಂತ ಚ್ಯಾಷ್ಟೀ ಮಾಡಿ ಮಾಡಿ, ಅದೊಂದು ವಿಚಾರ ಆಕೀ ತಲ್ಯಾಗ ತುಂಬಿಬಿಟ್ಟಾರ!....

'ಇನ್ನ ವಾಸ್ತವಿಕ ನೋಡಿದರ, ಎಲ್ಲಾರೂ ಹಿರಿಹಿರಿ ಹಿಗ್ಗಿ ಈ ಲಗ್ನಕ್ಕ ಒಪ್ಪಬೇಕು. ರಕ್ತದ ಋಣ ರಾಯರ, ಅದು !.... ಅದರ ಗಂಗಕ್ಕಗ ನನ್ನ ಕಂಡರ ಏನೋ ಒಂದು ಸಂಶಯ... ಯಾಕ, ಏನೂ, ನನಗ ಯಾವದೂ ಗೊತ್ತಿಲ್ಲ. ನಮ್ಮ ಗಂಗಕ್ಕ ಹಂಗ ದುಷ್ಟಜೀವನ ಅಲ್ಲ, ರಾಯರ !... ಆಕಿ ಎಂಥಾ ಉದಾರಮನಸ್ಸಿನಾಕಿ ಅನ್ನೋದನ್ನ ನಾನs ನೋಡಿಲ್ಲೇನು ? ನನ್ನ ಲಗ್ನದಾಗ ಎದುರಿಗೆ ನಿಂತು, ಊಟ ಉಡಿಗಿ ಎಲ್ಲಾ ಮಾಡಿಸಿ, ಕಡೀಕೆ ಬ್ರಾಹ್ಮಣರಿಗೆ ದಕ್ಷಿಣೆ ಕೊಡೋದು ಆದಮೇಲೆ ತಾನs ಕೈಯೆತ್ತಿ ಎರಡು ಎರಡು ರೂಪಾಯಿ ದಕ್ಷಿಣೆ ಮುಟ್ಟಿಸಿದಾಕಿ !... ಆದರೆ ನಶೀಬ ಕೆಟ್ಟದು.... ಆಕೀದೂ ಕೆಟ್ಟದ್ದು. ಆಕಿ ದೈವಮುಣುಗಿದ ಕೂಡಲೇ ಸಮೀಪ ಇದ್ದವರ ಮೇಲೆಲ್ಲಾ ಆಕೀಗೆ ಒಂದು ವಿಚಿತ್ರ ಸಂಶಯ ಕೂತು ಬಿಟ್ಟಿತು : 'ನಾನು ಮುಳುಗಿದ್ದು ಇವರಿಂದನೇ !' ಥೇ, ಥೇ, ಅದು ಆಕೀ ತಪ್ಪು ಅಂತ ನಾನು ಹೇಳುವದಿಲ್ಲ – ಎಂಥೆಂಥಾ ಮೀಸೆ ಹೊತ್ತ ಗಂಡಸರು ದುಡ್ಡು ಕಳಕೊಂಡ ಕೂಡಲೆ ಹುಚ್ಚ ಆಗಿ ಹೋಗತಾರ... ಅಂಥಾದ್ದು ಆಕಿ ಅಂತು ಅಸಹಾಯಕ ಹೆಣ್ಣು. ಆರು ತಿಂಗಳದಾಗ ದುಡ್ಡು ಹೋಯಿತು, ದೌಲತ್ತು ಹೋಯ್ತು, ಗಂಡನೂ ಹೋದ !... ಅಂದಮ್ಯಾಲ ಆಕೀದು ತಪ್ಪಲ್ಲ... ನಿಮ್ಮಂಥ ಹಿರೇರು ಯಾರಾದರೂ ಆಗ ಆಕಿಗೆ ಸಮಾಧಾನ ಹೇಳಲಿಕ್ಕೆ ಸಮೀಪಕ್ಕ ಇದ್ದರ ನಮ್ಮಂಥ ಬಳಗ ಆಕಿಗೆ ಹೊರತ ಆಗತಿದ್ದಿಲ್ಲ... ಇರಲಿ, ದೈವಕ್ಕ ಏನು ಉಪಾಯ ಮಾಡೋದು?....

'ಇನ್ನ ಈಗ ನನ್ನ ಗೋಳು ನೋಡ್ರಿ. ಇತ್ತಲಾಗ ಕಿಟ್ಟಿ ನನ್ನ ಬಂದು ಕಾಡತಾನ. ಅದರಾಗ ಮೊನ್ನೆ ನೀವು ಒಂದು ಕನ್ಯಾ ಬ್ಯಾರೆ ಅವಗ ತೋರಿಸಿದಿರೀ, ಅಂತ ಹೇಳಿದ. ಅಲ್ಲಲ್ಲ, ನಿಮ್ಮಂಥ ಹಿರೇರು ಅವನ ಕಲ್ಯಾಣದಶಿಂದ ಎಲ್ಲಾ ಮಾಡತೀರಿ ; ಅದಕ್ಕಂತs ನಾ ನನ್ನ ಸ್ವಂತ ಅಕ್ಕನ ಕಡಿಗೆ ಹೋಗಲಿಲ್ಲ, ನಿಮ್ಮ ಕಡಿಗೆ ಬಂದೆ. ಅತ್ತಲಾಗ ಆ ಹುಚ್ಚ ಹುಡುಗಿ ರತ್ನಿ.... ಈಗಂತೂ ನೆಟ್ಟಗಿದಾಳ ಖರೆ... ಆದರ ಈಗಿನ ಕಾಲದ ಹೆಣ್ಣು ಹುಡುಗರು... ನಾಟಕ, ಸಿನೇಮಾ ನೋಡಿ ಒಂದು ನಮೂನೆ ಆಗಿರತಾರ. ನಾಳೆ ಗಂಗಕ್ಕನ ಹಟದ ದಶಿಂದ ಆಗಲಿ, ಮತ್ತ ಎದಕ್ಕರ ಆಗಲಿ, ಇವ ಲಗ್ನ ಮಾಡಿಕೋಳಿಲ್ಲಾ ಅಂದರ,

ಆ ಗೆಳತ್ಯಾರ ನಡುವೆ ಆಕಿ ಇರಬೇಕು ಹೆಂಗ?... ನಾಲ್ಕು ಮಂದಿಗೆ ಮಾರೀ ತೋರಿಸಬೇಕು ಹೆಂಗ?.... ಅದರಾಗ ಹೆಣ್ಣು ಮನಸ್ಸು, ಸಣ್ಣ ಹುಡುಗಿ, ಉತಾವಳೀ ಸ್ವಭಾವ ಬಲು ಕಠಿಣ, ರಾಯರ! ಅಂತೂ ಸೂಕ್ಷ್ಮ ಪ್ರಸಂಗ ಬಂದsದ, ದೇವರs ಕಾಯಬೇಕು...

'ರಾಯರs, ಈ ಮಾತೂ ಮಹತ್ವದ್ದಲ್ಲ. ಇದನ್ನೆಲ್ಲಾ ನಾ ಹೆಂಗಾದರೂ ನೀಗಿಸಿಗೊಂಡೇನು. ಅದರ ಮುಖ್ಯ ಮಾತು ಏನು ಅಂದರ ನೀವು ನನ್ನ ಮಗಳನ್ನ ನೋಡಿರಿ... ಹೆಂಗೂ ಕಿಟ್ಟೀ ಜವಾಬದಾರಿ ಹೊತ್ತೀರಿ, ಅಂದಮ್ಯಾಲ ನಿಮಗ ನಾವು ಮೊದಲ ಕನ್ಯಾ ತೋರಿಸತೇವಿ. ನೀವು ಬೇಕಾದ ಹಂಗ ಪರೀಕ್ಷಾ ಮಾಡಿರಿ... ನಿಮ್ಮ ಮನಸ್ಸಿಗೆ ಖಾತ್ರಿ ಆದಮ್ಯಾಲರ ನೀವು ಈ ಸಂಬಂಧಕ್ಕ ಹೂಂ ಅಂತೀರ್‍ಯಾ?... ಇನ್ನೊಂದು.... ರಕ್ತ ಸಂಬಂಧ ದೊಡ್ಡದು. ಗಂಗಕ್ಕ ನನ್ನ ಮ್ಯಾಲ ಬೇಕಾದಷ್ಟು ಬೆಂಕೀ ಕಾರಲಿ... ಆದರ ಕಿಟ್ಟಣ್ಣನ್ನ ನೋಡಿದ ಕೂಡಲೇ ನನ್ನ ಕರುಳು ಕರಗಿತು ನೋಡ್ರಿ... ನಮ್ಮಮ ರತ್ನಾ ಅಂದರ ರತ್ನ ಇದ್ದ ಹಂಗs... ನಾ ಹೊಗಳತೇನಿ ಅಂತ...'

ಈ ಹೊತ್ತಿಗೆ ರಾಘಪ್ಪನ ದೃಷ್ಟಿ ಬಾಗಿಲ ಬಳಿ ನಿಂತುಕೊಂಡು ಎಲ್ಲ ಮಾತೂ ಕೇಳುತ್ತಿದ್ದ ವೇಣೂಬಾಯಿಯನ್ನು ಕಂಡಿತು. ಹಠಾತ್ತಾಗಿ ಮಾತು ನಿಲ್ಲಿಸಿ ಇನ್ನೊಮ್ಮೆ ಅತ್ತ ನೋಡಿ, ರಾಘಪ್ಪ ಅರ್ಧ ಅತ್ತ ಅರ್ಧ ಇತ್ತ ಮಾತು ಮುಂದುವರಿಸಿದನು. ಆದರೆ ಈ ಭಾಟ[೧]ನ ಮಾತುಗಳನ್ನು ದಿಙ್ಮೂಢರಂತೆ ತನ್ನ ಪತಿದೇವರು ಕೇಳುತ್ತ ಕುಳಿತದ್ದು ವೇಣೂಬಾಯಿಗೆ ಸಹನವಾಗಲಿಲ್ಲ. ಆಕೆ ನಡುವೆಯೇ ಬಾಯಿ ಹಾಕಿದಳು :

'ನಮಗೇನು ಬಿಡಿರಿ ; ಕಿಟ್ಟಿ ಯಾರನ ಮಾಡಿಕೊಂಡರರ ಏನು....? ಆದರ ಗಂಗವ್ವ ಕಷ್ಟಬಟ್ಟ ಜೀವನ. ಮಗಾ ಅಂದರ ಮುಗಿದುಬಿದ್ದು ಸಾಯತಾಳ... ಆಕಿ ಉಂಡ ತಾಪತ್ರಯಾ ನಾವು ಕಣ್ಣಾರೆ ಕಂಡೇವಿ.... ಇಷ್ಟು ಸಾಹಸಾ ಮಾಡಿ ಮಗನ್ನ ಅಷ್ಟು ಹಾದಿಗೆ ಹಚ್ಚ್ಯಾಳ... ! ಆಕೀಗೆ ಸುಖಾ ಆಗಲಿ ಅಂತ ನಮ್ಮ ಹ್ಯಾಂವ ![೨]' ಎಂದಳು.

ದೇಸಾಯರಿಗೆ ಆಕೆಯ ಮುಖ್ಯ ಮಾತು ಮನಸ್ಸಿಗೆ ಬಂದವು... ಆದರೆ ಶಕ್ಯವಿದ್ದಷ್ಟು ಈ ಕೆಲಸದಲ್ಲಿ ತೊಡಗಿಕೊಳ್ಳಬಾರದೆಂಬ ಉದ್ದೇಶವುಳ್ಳ ಅವರಿಗೆ 'ಹ್ಯಾಂವ' ಎಂಬ ಶಬ್ದ ಸರಿಬರಲಿಲ್ಲ.

---

೧. ಬಾಯ್ಬಡಕ, ಅಧಿಕಪ್ರಸಂಗಿ, ೨. ಛಲ, ಪ್ರತಿಜ್ಞೆ,

'ನಮಗ ಯಾವ ಹ್ಯಾಂವನೂ ಇಲ್ಲ ; ಪಂಥನೂ ಇಲ್ಲ!.... ಹಂಗ ಕೇಳಿದರ ನಮಗ ಗಂಗಕ್ಕನೂ ಯಾರೂ ಅಲ್ಲ, ಕೃಷ್ಣ ಯಾರೂ ಅಲ್ಲ.... ಅದರಾಗ ಈ ವಿಷಯದಾಗ ನಾವು ಮೊದಲ ಕೈಹಾಕಲಿಕ್ಕ ಒಲ್ಲೆವು. ನೀವು ಗಂಗವ್ವನ್ನ ಭೇಟಿ ಆಗಿ ಒಪ್ಪಿಸರಿ. ನಾವು ಬೇಕಾದರ ಬಂದು ನಾಲ್ಕು ಅಕ್ಕಿಕಾಳು ಹಾಕಿ ಹೋಗತೇವಿ!' ಎಂದರು.

'ರಾಯರs, ಆ ಹುಡುಗನ ಖರೇ ಕಲ್ಯಾಣ ಮಾಡಿದವರು ನೀವು!... ನೀವು ಇಲ್ಲದಿದ್ದರ ಆ ಬಡವಿ ಗಂಗವ್ವನಿಂದ ಏನು ಆಗುತ್ತಿತ್ತು...?' ನಡುವೆಯೇ ದೇಸಾಯರು ಎದ್ದು ಹೊರಗೆ ಹೋದರೂ ವೇಣಕ್ಕನತ್ತ ರಾಘಪ್ಪ ಮಾತು ಮುಂದುವರಿಸಿದನು : 'ನೀವು ಆ ಹುಡುಗನ ದಶಿಂದ ಏನು ಮಾಡಿದಿರಿ ಅನ್ನೋದನ್ನ ಖುದ್ದ[೧] ಅವನs ಹೇಳಿದಾ, ಉಳಿದವರು ಹೇಳಿದರು. ಇಷ್ಟs ಯಾಕ, ಲೋಕಕ್ಕ ಲೋಕ ಮಾತಾಡತದ.... ಆ ಹುಡುಗ ನಿಮ್ಮ ಮ್ಯಾಲs ಆಧಾರ ಇಟಕೊಂಡಾನ!'

ದೇಸಾಯರು ತಡೆಯಲಾರದೆ ಎದ್ದವರು ತಿಜೋರಿ ತೆಗೆದು ಕಿಟ್ಟಿ ಕಳಿಸಿಕೊಟ್ಟ ಚೀಟಿಯನ್ನು ಹೊರತೆಗೆದವರೇ ರಾಘಪ್ಪನ ಮಾತು ಮುಗಿಯುವಷ್ಟಕ್ಕ ಅವನ ಮೂಗಿನ ಕೆಳಗೆ ಹಿಡಿದರು.

ಚೀಟಿ ಕಂಡು ರಾಘಪ್ಪ, ಸ್ವಲ್ಪ ಅಳುಕಿದನು. ಆದರೂ ತಾಜಾ ಕಲಮಿನಲ್ಲಿ ತುಸು ಎಳೆ ಸಿಕ್ಕಿತು. 'ಅದs ಅದs... ಕಿಟ್ಟಣ್ಣ ಅನಲಿಕ್ಕಹತ್ತಿದ್ದಾ. ದೇಸಾಯರು ನನ್ನ ದಶಿಂದ ಕನ್ಯಾ ನೋಡಲಿಕ್ಕೆ ಕಷ್ಟಪಡಲಿಕ್ಕೆ ಹತ್ಯಾರ ; ಆದರ ನನ್ನ ಮನಸ್ಸು ಇತ್ತಲಾಗ ಹರೀತದ ; ಹೇಳೇನೂ ಅಂದರ ಧೈರ್ಯ ಇಲ್ಲ... ಆದರೂ ಒಮ್ಮೆ ಧೈರ್ಯಮಾಡಿ ಈ ವಿಷಯಕ್ಕ ಅವರ ಕಡೆಯಿಂದ ಆಶೀರ್ವಾದ ಪಡೆದೇ ತೀರತೇನಿ ಅಂತ.... ನೀವೂ ಅಂದರ ಅಷ್ಟು ಆದರ, ಅಷ್ಟು ಹೆದರಿಕಿ, ಅವನಿಗೆ.'

ಮಗುವನ್ನು ಸಮಾಧಾನಗೊಳಿಸುವ ಈ ರೀತಿ ದೇಸಾಯರಿಗೆ ತಿಳಿದಿರಲಿಲ್ಲವಾದರೂ, ಪರಣಾಮದತ್ತ ಲಕ್ಷ್ಯಕೊಟ್ಟು ಅವರು ತಮ್ಮ ಕೋಪವನ್ನು ನುಂಗಿ ಇಟ್ಟುಕೊಂಡರು.

'ಈ ಪತ್ರದ ಅರ್ಥ 'ಏನರs ಆಗಲಿ.... ಆದರ ಗಂಗವ್ವನ ಸುಖ ಆಗಲಿ ಅಂತ ಎಲ್ಲಾರಿಗೂ ಅನಿಸುವಂತೆ ನಮಗೂ ಅನಿಸುತದ....' ಎಂದರು.

'ಯಾಕಾಗವಲ್ಲದು ರಾಯರs.... ನಿಮ ಮುಂದ ಸುಳ್ಳು ಆಡೂದಿಲ್ಲ.

---

೧. ಸ್ವಯಂ.

ಗಂಗಕ್ಕನ್ನ ಹೆಂಗ ಸಾಕತೇನಿ ನೀವು ನೋಡಿಬಿಡಿರಿ. ಆಕೀ ಉಪಕಾರ ತೀರಿಸೋದು ಇನ್ನೂ ಬಹಳ ಅದs... ಏನು ಮಾಡೋದು ? ಉಪಾಯ ಇಲ್ಲ ಅಂತ ಸುಮ್ಮನs ಕೂತೇನಿ... ಆದರೂ ಒಂದು ಮಾತು ನಾನು ನಿಮಗs ಅಂತ ಹೇಳತೇನಿ. ನನಗ ಇರೋವು ಎರಡು ಹೆಣ್ಣುಮಕ್ಕಳು. ಹಿರೇ ಆಕಿನ್ನ ಕಿಟ್ಟಣ್ಣಗ ಕೊಟ್ಟು ಗಂಗಕ್ಕನ್ನ ಮತ್ತ ಒಳಗ ಹಕ್ಕೋಬೇಕು, ಇದು ನನ್ನ ಮೊದಲನೇ ಇರಾದೆ.[೧] ಎರಡನೇ ಆಕಿ ವಯಸ್ಸಿಗೆ ಬರಲಿಕ್ಕೆ ಇನ್ನೂ ಐದಾರು ವರ್ಷ ಬೇಕು. ಆಕಿನ್ನ ಎರಡು ಸಾವಿರ ಆಗೋ ಅಲ್ಲೆ ನಾಲ್ಕು ಸಾವಿರ ಖರ್ಚು ಮಾಡಿ ಒಳ್ಳೆ ಸುಖಸ್ಥ ಮನೆತನಕ್ಕ ಕೊಟ್ಟು ಲಗ್ನ ಮಾಡಬೇಕು, ಇದು ಎರಡನೇ ಇರಾದೆ. ಇನ್ನ ಮೂರನೇದ್ದು... ಕಿಟ್ಟಣ್ಣನ್ನ ದತ್ತಕಮಾಡಿಕೋ ಬೇಕು.... ಇದು ಒಳಗಿನ ಉದ್ದೇಶ.... ಗಂಗಕ್ಕಗೂ ಒಬ್ಬನೇ ಮಗ ಖರೆ ; ಆದರ ದ್ವಾಮುಷಾಯಣ ದತ್ತಕ ಮಾಡಿಸಲಿಕ್ಕೆ ಬರತದ ; ಅನೇಕ ಇಂಥಾ ದತ್ತಕ ನಾನs ಮಾಡಿಸೇನಿ.... ನಾ ದೇವರ ಮುಂದ ಹೇಳಿಧಂಗ ಹೇಳತೇನಿ, ಸರ್ವಥಾ ವಂಚನಾ ಮಾಡೋದಿಲ್ಲ... ನನ್ನದೆs ರಕ್ತ, ನಾ ಹೆಂಗ ವಂಚನಾ ಮಾಡೇನು?... ನನ್ನದು ವರ್ಷಾ ಒಂದು ಸಾವಿರ ರೂಪಾಯಿ ಉತ್ಪನ್ನ. ಈ ಎರಡು ಲಗ್ನಕ್ಕ ಸ್ವಲ್ಪ ಹೊಲಾ ಪಲಾ ಹೋದವು ಅಂತ ಹಿಡಿದರೂ, ಕನಿಷ್ಠ ಏಳೆಂಟು ನೂರು ರೂಪಾಯಿ ಉತ್ಪನ್ನ ಆದರೂ ಉಳೀತದ... ಅಷ್ಟು ಈ ಕಿಟ್ಟಣ್ಣನ ತಾಬೆಮಾಡಿ, ಹರಿ ಹರಿ ಅಂತ ನಾಲ್ಕೊಪ್ಪತ್ತು ಇದ್ದು, ಕಿಟ್ಟಣ್ಣನ ಮಕ್ಕಳನ್ನ ಅಷ್ಟು ಆಡಿಸಿ, ಕಣ್ಣು ಮುಚ್ಚಬೇಕು, ಅಂತ ನನ್ನೂದ್ದ ನನ್ನ ಹೆಂಡತೀದೂ ಇಚ್ಛಾ....! ಒಳ್ಳೇ ಕ್ರಿಯಾವಂತ ಹುಡುಗ ; ಮನೆತನದಾಗಿನಾತ ; ಇವನಿಂದ ಸತ್ತಮ್ಯಾಲ ಅಷ್ಟು ಪಿಂಡಾ ಕಂಡೇವು ಅನ್ನೋ ಒಂದು ಭರವಸೆ ಹುಟ್ಟತದ.... ಇದು ನಮ್ಮ ಒಳಗಿನ ಮಾತು, ನಿಮ್ಮ ಎದುರಿಗೆ ಬಿಚ್ಚಿ ಇಟ್ಟೇನಿ ! ಇಕಾ, ಇದು ಕುಡುಗೋಲು, ಇದು ಕುಂಬಳಕಾಯಿ... ಏನ ಮಾಡತೀರೋ ನಿಮ್ಮನ್ನs ಕೂಡೇದ !....' ಎಂದನು. ತಟಸ್ಥ ಮೌನವು ವ್ಯಾಪಿಸಿದ್ದನ್ನು ನೋಡಿ ಕೊನೆಯ ಅಡ್ಡಿತಡೆಯನ್ನೂ ದಾರಿಯಿಂದ ತೆಗೆಯಲು ಉದ್ಯುಕ್ತನಾದನು...

'ಇದರ ಮ್ಯಾಲ ನೀವು, 'ಇದs ಮಾತು ನಿಮ್ಮ ಅಕ್ಕಗ ಹೇಳು' ಅಂತ ನನ್ನ ಮ್ಯಾಲs ಭಾರ ಒಗೆದರ, ಅದಕ್ಕ ನನ್ನ ಉತ್ತರ ಇಷ್ಟೆ : ಹಂಗ ಹೇಳೂದರ ಬದಲು 'ರಾಘಪ್ಪಾ, ನೀನು ಒಳ್ಳೇ ನಮಶ್ಯಾ ಅಲ್ಲ ; ನಿನ್ನ ಮಗಳು ನಮಗ ಪಸಂದ[೨] ಇಲ್ಲ ; ನೀನು ಲುಪ್ತಪಿಂಡ ಆಗಿ ಸಾಯಿ...' ಇಷ್ಟು ಸ್ಪಷ್ಟ ಹೇಳಿ ನನ್ನ

೧. ಅಪೇಕ್ಷೆ. ೨. ಸರಿ, ಒಪ್ಪಿಗೆಯಾಗುವಂಥ.

ಹೊರಗೆ ಹಾಕಿರಿ !... ಈಅಟದಕ್ಕೂ ನನ್ನ ಸಂತೋಷ ಅದ. ಅದರ ಅಕ್ಕನ್ನ ನೀನs ಒಪ್ಪಿಸು ಅಂದರ, ಅದಕ್ಕ ನಾ ಒಪ್ಪಲಾರೆ. ಅದು ತಮ್ಮಂಥ ಹಿರೇರ ಕೆಲಸ !.... ಯಾಕ, ಒಡಹುಟ್ಟಿದವರು ಎಲ್ಲೂ ಜಗಳಾಡಿಯೇ ಇಲ್ಲೇನು ? .... ಅಂಥಲ್ಲೆಲ್ಲಾ ತಮ್ಮಂಥ ಹಿರೇರ ಮಾತಿನಿಂದನs ಕಾರ್ಯ ಪೂರ್ತಿ ಆಗಿಲ್ಲೇನು?... ಇಷ್ಟು ಮಂದಿಗೆ ಉಪಕಾರಮಾಡಿ ನನಗ ಒಬ್ಬಗs ಹಂಗs ಬರೀ ಕೈಲೆ ಕಳಿಸಬೇಕು ಅಂತ ತಮ್ಮಂಥವರು ವಿಚಾರ ಮಾಡಿದರ, ಅದು ನನ್ನದs ನಶೀಬ ಅಂದುಕೊಳ್ಳಲ್ಯೋ ...?'

ರಾಘಪ್ಪನ ವಾದದಲ್ಲಿ ಸಿಲುಕಿ ದೇಸಾಯರು ವಿಲಿವಿಲಿ ಒದ್ದಾಡಿದರು. ಅವರಿಗೆ ಸತ್ವಪರೀಕ್ಷೆಯ ಕಾಲ ಒದಗಿದಂತಾಯಿತು. ದುಂದೂರ ಶೀನಪ್ಪನ ಮಗಳಾಗಿದ್ದರೆ, ಆ ವಿಷಯವೇ ಬೇರೆ. ಆದರೆ ಇದೀಗ ಒಂದು ಪಕ್ಷದ ಬೆನ್ನು ಕಟ್ಟಿ ನಿರ್ಣಯ ಕೊಡಬೇಕು ; ದೃಷ್ಟಿ ಮಾತ್ರ ಕಿಟ್ಟಿಯ ಕಲ್ಯಾಣದತ್ತ ಇರಬೇಕು; ಕಿಟ್ಟಿಯೇ ಮೂರ್ಖತನ ಮಾಡಿದರೂ ತಮ್ಮ ವಿವೇಕ ಕಳೆದುಕೊಳ್ಳಬಾರದು; ಈ ಅಷ್ಟಾವಧಾನ ತಮ್ಮಿಂದ ನೀಗೀತೆ ?.... ಯಾಕೆ ಜನ ಬಂದು ಬಂದು ಗೋಳುಹೊಯ್ದುಕೊಳ್ಳುತ್ತಾರೆ ?.... ತಮ್ಮ ಗೋಳೇ ಹೊರಲಾರದಷ್ಟು ಇರುವಾಗ?.... ಹೀಗೆಲ್ಲ ಮನಸ್ಸಿನಲ್ಲಿಯೇ ಪೇಚಾಡುತ್ತ, ಕೊನೆಯ ಉಪಾಯಕ್ಕೆ ಸಿದ್ಧರಾದರು. ಗಂಗವ್ವನನ್ನು ಕರೆತರುವುದಕ್ಕೆ ಭರಮನನ್ನು ಅಟ್ಟಿದರು....

* * * *

# ೧೭ : ಗಂಗವ್ವ – ರಾಘಪ್ಪ

ಭರಮನಿಂದ ತಿಳಿದಷ್ಟು ಸುದ್ದಿಯ ಮೇಲಿಂದಲೇ ರಾಘಪ್ಪ ಬಂದಿದ್ದಾನೆಂದು ತರ್ಕಿಸಿ ಗಂಗವ್ವ ಬಿರಬಿರನೆ ನೀಟಾಗಿ ದೇಸಾಯರ ಕೋಣೆಯ ಹೊರಕ್ಕೆ ಗೋಡೆಗೆ ಆತು ಕುಳಿತಳು. ವೇಣಕ್ಕ ಆಕೆಗೆ 'ಒಳಗೆ ಹೋಗs, ಗಂಗವ್ವಾ ಎಂದಳು. ಆದರೆ ಚಿಃ ಮಾಡಿ ಗಂಗವ್ವ ಅಲ್ಲೇ ಕುಳಿತಳು. ರಾಘಪ್ಪ ಬಾಯಿ ಮುಂದುಮಾಡಿ, 'ಗಂಗಕ್ಕಾ, ಒಳಗ ಬಾರಲ್ಲಾ ; ಹಿಂಗ್ಯಾಕ ಹೊರಗ ಕೂಡತಿ ಅರೇದವರಹಂಗ' ಎಂದನು.

'ಇಲ್ಲೇ ಇರಲಿ ಏಳಪ ; ಯಾರು ಎಲ್ಲಿರಬೇಕು ಅಲ್ಲೇ ಇದ್ದರs ಚಂದ.' ರಾಘಪ್ಪನ ಚಾತುರ್ಯದ ಮಾತುಗಳು ಗಂಗವ್ವನ ನೀಟ ಗುರಿಗಾರಿಕೆಗೆ ಸೋಲುತ್ತಿದ್ದವು. ವಿಶ್ವವಿಜೇತನಾದ ರಾಘಪ್ಪನಿಗೆ ಯಾಕೋ ಅಕ್ಕನೆಂದರೆ ತುಸು ಅಳುಕು. ಆದರೆ ಈಗಂತೂ ಆಕೆ, ಕಣಿವೆಯಲ್ಲಿಯ ಸೈನಿಕನಿಗಿಂತ ಗುಡ್ಡದ ಓರೆಗೆ ನಿಂತ ಸಿಪಾಯಿಯ ಬಲವು ಹೆಚ್ಚು ಹೆಚ್ಚಾಗಿರುವಂತೆ ಗಂಗವ್ವ ನಾಡುವ ಮಾತುಗಳು ಗೋಡೆಯ ಮರೆಯ ಮೂಲಕ ಹೆಚ್ಚು ಘಾತಕವಾಗುವಂತೆ ತೋರಿತು. ದೇಸಾಯರ ಮಾತನ್ನು ಕೂಡ ಉಲ್ಲಂಘಿಸಿ ಗಂಗವ್ವ ಹೊರಗಿನವಳು ಹೊರಗೇ ಕುಳಿತಳು. ಎದುರು ಬಂದು ಕೂಡಲು ಸರ್ವಥಾ ಒಪ್ಪಲಿಲ್ಲ. ಆಕೆಗೆ ಇನ್ನೊಂದು ಹೆದರಿಕೆ. ತಮ್ಮನ ಎದುರೇ ಕುಳಿತರೆ, ಎಷ್ಟಾದರೂ ಒಡಹುಟ್ಟಿದ ಜೀವ, ಅವನ ಮುಖ ನೋಡಿ ಮನಸ್ಸು ಕರಗಿದರೆ ಹೇಗೆ?... ಅವನ ಬಣ್ಣದ ಮಾತುಗಳ ಬಲೆಗೆ ಬೀಳಬಾರದೆಂಬ ನಿಶ್ಚಯದಿಂದಲೇ ಗಂಗವ್ವ ಬಂದಿದ್ದಳು. ಅದಕ್ಕೆ ಗೋಡೆಯ ಮರೆಯೇ ಆಕೆಗೆ ಒಳ್ಳೆಯದಾಗಿ ಕಂಡಿತು.

ದೇಸಾಯರು ಔಪಚಾರಿಕ ಪ್ರಸ್ತಾಪವೆತ್ತಿದರು.... 'ಗಂಗವ್ವಾ, ನಿಮ್ಮ ತಮ್ಮಂದಿರದು ನಮಗ ಪೂರ್ಣವಹಿವಾಟು[೧] ಇಲ್ಲ. ಆದರ ಇದs ಒಂದು ತಾಸಿನ್ಯಾಗ ನಾವು ಅದು–ಇದು ಮನೆತನದ ಸಂಬಂಧಿ ಮಾತು ಆಡಿದಿವಿ. ಅವರ ಅಭಿಪ್ರಾಯ ಅಂದರ ಕೃಷ್ಣಗ ತಮ್ಮ ಮಗಳನ್ನ ಕೊಡಬೇಕು ಅಂತ. ಮನ್ನೆ ಶೀನಪ್ಪನ ಮಗಳನ್ನ ಕೃಷ್ಣಗ ತೋರಿಸಿದ ಹಕೀಕತ್ತು[೨] ಕೇಳಿ ಅವರು ನಮ್ಮ

---

೧. ಪರಿಚಯ. ೨. ಸುದ್ದಿ.

ಕಡೆಗೆ ಬಂದರು. ಅದಕ್ಕ ನಾವು ನಿನ್ನ ಅಭಿಪ್ರಾಯ ಕೇಳದೇ ಏನೂ ಹೇಳೋದು ಸಾಧ್ಯ ಇಲ್ಲ, ಅಂತ ಅವರಿಗೆ ತಿಳಿಸೇವಿ !'

ರಾಘಪ್ಪ ನಡುವೆಯೇ ಬಾಯಿ ಹಾಕಿ, 'ಛೇ, ಛೇ, ಗಂಗಕ್ಕನ ಆಶೀರ್ವಾದ ಇಲ್ಲದೆ ಹೆಂಗ ?' ಎಂದು ಉದ್ಗರಿಸಿದನು.

ಗಂಗವ್ವ ತೀಕ್ಷ್ಣವಾಗಿ 'ನನ್ನ ಆಶೀರ್ವಾದ ಯಾಕಪಾ ? ನೀನs ವರದ ಹಸ್ತ ಇಟ್ಟೀಯಲ್ಲ ಅವನ ಮ್ಯಾಲ !'

'ಅದು ಇರಲಿ, ಗಂಗವ್ವಾ ; ಎಷ್ಟಾದರೂ ನೀವು ಒಡಹುಟ್ಟಿದವರು. ಇಂದ ಜಗಳಾಡತೀರಿ, ನಾಳೆ ಒಂದಾಗಿ ನಮ್ಮ ಮೈಮ್ಯಾಲ ಬರತೀರಿ... ಈಗ ನಿಮ್ಮ ನಿಮ್ಮ ಮನಸ್ತಾಪ ಬಿಟ್ಟುಬಿಡಿರಿ. ಮುಖ್ಯ ಮಾತು ಆಡೋಣ. ಈ ಹುಡುಗೀನ್ನ ನೀನು ನೋಡಬೇಕಂತಿಯೇನು ?...

'ಗೋಪಣ್ಣಾ, ಸುಮ್ಮನs ಇಲ್ಲದ ಉಪಚಾರ ಯಾತಕ್ಕ. ನಾ ಈ ಹುಡುಗೀನ್ನ ನೋಡಲಿಕ್ಕೆ ಒಲ್ಲೆ, ಆಕೀ ಅಪ್ಪನ ನೋಡಲಿಕ್ಕೆ ಒಲ್ಲೆ, ಆಕೀ ಅವ್ವನ ನೋಡಲಿಕ್ಕೆ ಒಲ್ಲೆ. ನೋಡೋದು ಸಾಕಾಗಿ, ಎಂದು ಕಣ್ಣು ಮುಚ್ಚೇನೋ ಅಂತ ಆಗೇದ ನನಗ !'

ದೇಸಾಯರು ಮುಖ ಕೆಳಗೆ ಹಾಕಿದರು.

ಇದೀಗ ತನ್ನ ಸಮಯ ಬಂದಿತೆಂದು ರಾಘಪ್ಪ ಎದ್ದು ಉಪರಣಿ ಸರಿಪಡಿಸುತ್ತ ಅಂದನು :

'ಗಂಗಕ್ಕಾ, ಆದದ್ದು ಆಗಿಹೋಯ್ತು. ಹಿಂದಿನದೆಲ್ಲಾ ಮರೆತು, ಇನ್ನ ತಮ್ಮಾ ಅಂತ ನನ್ನ ಕಡೆ ಇಷ್ಟು ನೋಡಲ್ಲಾ ! ಎಷ್ಟು ದಿವಸ ರೊಚ್ಚು, ಏನು ನಿಷ್ಕಾರಣ ದ್ವೇಷಾ !.... ಕಲ್ಲಿನ ಮನಸ್ಸಾಗಿದ್ದರೂ ಕರಗತಿತ್ತು ನೋಡು !....

'ಹೌದು ನೋಡಪಾ ರಾಘು, ನನ್ನದು ಕಲ್ಲಿನ ಮನಸು. ನಿನ್ನ ದೌಲತ್ತು ನೋಡಿ, ನಿನ್ನ ರಂಡ್ಯಾರನ ನೋಡಿ, ನನ್ನ ಮನಸ್ಸು ಕರಗಲೇ ಇಲ್ಲ.... ಅದು ಹೋಗಲಿ, ನಾನು ಇಷ್ಟು ದಿವಸ ಕಷ್ಟ ಪಟ್ಟು ಕಿಟ್ಟ್ಯಾನ ಇಷ್ಟು ಮಾಡಿದೆ, ಒಬ್ಬಾಕೀನ ; ಹಿಂದಿಲ್ಲ ಮುಂದಿಲ್ಲ. ಹಿಂಗs ಒಬ್ಬರ ಕಾಲು ಬಿದ್ದು, ಒಬ್ಬರ ಚಾಕರೀ ಮಾಡಿ, ಇನ್ನೊಬ್ಬರಿಗೆ ಭಿಡೇಕ್ಕ[೧] ಹಾಕಿ ಚಾಲವರದು,[೨] ಏನೋ ಮಾಡಿದೆ. ಇಲ್ಲೀತನಕ ನನ್ನ ನೆನಪು ನಿನಗ ಬಂತೇನು ?.... ತಮ್ಮನ ಕ್ರಿಯಾ ನೀ ಹಿಡದೇನು ?.... ಏನವಾ, ನೀ ಹೆಂಗ ಇದ್ದೀ, ನಿನ್ನ ಮನ್ಯಾಗ ದಿನದ ಜೋಳ

---

೧. ಸಂಕೋಚ. ೨. ಆಗ್ರಹಪಡಿಸು.

ಅದsನೋ ಇಲ್ಲೋ, ಏನಾದರೂ ಕೇಳಿದೇನು? ಒಂದು ದಿನಾನರs?..... ಈಗ ಮಾತ್ರ ಆತಗ ನೌಕರೀ ಹತ್ತಿದಮ್ಯಾಲ ನನ್ನ ಗುರುತಾತೇನು? ಆಗ ನಿನ್ನ ಮನಸು ಕರಗಲಿಲ್ಲೇನು?...

'ಗಂಗಕ್ಕಾ, ನೀ ಬ್ಯಾಟೀ ನಾಯಿಹಂಗ ನಮ್ಮನ್ನ ನಿನ್ನ ಮನಿ ಸನೇಕ್ಕ ಬರಗೊಡಲಿಲ್ಲ ; ನಿನ್ನ ಮಗನ ಎಂಜಲ ಎಲೀ ನೋಡಗೊಡಲಿಲ್ಲ ; ನಮ್ಮನ್ನ ಮೈಲಿಗಿ ಅವರ ಹಂಗ ದೂರ ಇಟ್ಟಿ....'

'ಇಲ್ಲಪಾ, ನೀ ಯಾಕ ಮೈಲಿಗಿ ಅವ ಆದಿ? ನಾವು ದುಡ್ಡು ಕಳಕೊಂಡಿವಿ, ನಾವು ಆದಿವಿ, ದುಡ್ಡು ಇರೂತನಕ ಎಲ್ಲಾರೂ ಬೇಕಾಗೋದು. ದುಡ್ಡು ಹೋದಮ್ಯಾಲ ಎಲ್ಲಾರೂ ಫಾನಾಫಾನ[೧] ಆಗೋದು, ಇದು ಲೋಕದ ಪಾಯಾನs[೨] ಅದ....'

'ಗಂಗಕ್ಕಾ, ನನಗ ಒಬ್ಬರ ದುಡ್ಡು ಹಿಡದರ ಬೆಂಕಿ ಹಿಡಧಂಗ ಆಗತದ. ನೀನು ನಂಬು, ಬಿಡು – ನನ್ನ ವಿಶ್ವಾಸ ಹೇಳಿದೆ...'

ಈ ಮಾತಿನಿಂದಲಂತೂ ಗಂಗವ್ವ ಸಂತಪ್ತಳಾದಳು. ಆವರೆಗೆ ಕೊಂಕು ಕಟಕಿಯಿಂದ ನಡೆದ ಮಾತನ್ನು ಒಮ್ಮೆಲೇ ಕ್ರೂರವಾಗಿ ರೇಗಿಸಿದಳು... ಒಮ್ಮೆಲೇ ಬಾಗಿಲ ಬಳಿ ಬಂದು ಕುಳಿತವಳೇ ಚೀರಿದಳು :

'ಒಬ್ಬರ ದುಡ್ಡs.... ಎಂದಿತ್ತೋ ನಿನ್ನ ದುಡ್ಡು..... ! ನನಗೇನು ಗೊತ್ತಿಲ್ಲೇನು ....? ಎಲ್ಲಾ ಹೊಲಾ ಒತ್ತೀ ಬಿದ್ದಿದ್ದವು. ನಾವು ಹಾಳಾದ ಮ್ಯಾಲ ನಿನ್ನ ಹೊಲಾ ನಿನ್ನ ತಾಬೇಕ್ಕ ಬಂದದ್ದು... ! ಬಿಡು ಈ ಡೌಲು!'

'ಗಂಗಕ್ಕಾ, ಹೀಂಗ ಯಾಕ ಮಾಡತೀ? ನಿನ್ನ ದುಡ್ಡು ನಾವೇನು ಕಳವು ಮಾಡಿದೆವs, ತುಡುಗು ಮಾಡಿದೆವs.... ಒಂದೊಂದು ಪ್ರಸಂಗ ಬರೋವs ನೀ ಮುಣುಗಿದ್ದಕ್ಕ ನನಗ ದುಃಖ ಆಗ್ಲಿಲ್ಲ ಅಂತೀಯೇನು?'

'ನನ್ನ ಹಾಳು ಮಾಡಿದವನs ನೀನು! ನಮಗ ಜಾಮೀನ ಆಗಲಿಕ್ಕೆ ಹಚ್ಚಿದವನೂ ನೀನs. ಆ ಬೋಳ್ಯಾ ವೆಂಕ್ಯಾನ್ನೂ ಊರು ಬಿಟ್ಟು ಓಡಿಸಿ, ಅವನ ಟೊಂಕದಾಗಿಂದು ಸುಲಕೊಂಡಿ;[೩] ಅಷ್ಟಕ್ಕ ಅಕ್ಕನ ಕುತ್ತಿಗ್ಗೆ ಉರುಲು ಬಿದ್ದಿತು ಅನ್ನೋ ಖಬರು[೪] ಇತ್ತೇನು? ನನ್ನ ಮನ್ಯಾಗ ರವಾ ಖಡ್ಡಿ ಭಂಗಾರ ಉಳೀಧಂಗ ಮಾಡಿದವನೂ ನೀನs... ಕಡೀಕೆ ನನ್ನ ಗಂಡನ್ನೂ ನೀಗಿಬಿಟ್ಟಿ!... ಅವ್ವವ್ವ, ಜಗತ್ತಿನ್ಯಾಗ ಭಾಗಾದ್ಯಾರು ಇರತಾರಪಾ.... ಆದರ ನಿನ್ನಂಥವರು ಹಗಲು ದೀವಟಿಗಿ ಹಚ್ಚಿ

೧. ಚೆಲ್ಲಾಪಿಲ್ಲಿ. ೨. ರೂಢಿ. ೩. ಹಣವನ್ನು ಎತ್ತಿಹಾಕಿದಿ. ೪. ಎಚ್ಚರ.

ಹುಡುಕಿದರೂ ಸಿಗಲಿಕ್ಕಿಲ್ಲ ನೋಡು!...'

'ನಿಂದರs ಗಂಗಕ್ಕಾ ; ತಿರುಗಿ ನಮ್ಮದೂ ನಿಮ್ಮದೂ ಭೆಟ್ಟಿ ಆದೀತು ಆಗಲಿಕ್ಕಿಲ್ಲ. ನಾನೂ ಬಹಳ ದಿವಸ ಆಯ್ತು ಈ ಮಾತು ಕೇಳಲಿಕ್ಕೆ ಹತ್ತಿ. ಇಲ್ಲೇ ದೇಸಾಯರೂ ಸಾಕ್ಷಿ ಇದ್ದಾರ. ನಿನ್ನ ಒಂದೊಂದು ಮಾತಿಗೂ ನನ್ನ ಕಡಿಗೆ ಉತ್ತರ ತಯಾರ ಅದ ; ಒಮ್ಮೆ ಇಬ್ಬರ ಮನಸ್ಸೂ ಎದರಾ ಎದರಾ ಬಯಲಿಗೆ ಬರಲಿ, ಮನಸ್ಸಿನ್ಯಾಗ ಹೊಲಸು ಬ್ಯಾಡಾ... ಒಂದನೇ ಮಾತು ಗಂಗಕ್ಕಾ, ವೆಂಕಾಟಿಗೆ ನಾನು ಜಾಮೀನ ಆಗಲಿಕ್ಕೆ ಒಲ್ಲೆ ಅಂದೇನೇನು?... ನಾ ಹಿಂದ ಸರದು ಸ್ವಾಮಿರಾಯನ ಮುಂದ ನೂಕಿದೆನೇನು?... ಅಲ್ಲಾ, ಮುಂದ ಆದದ್ದು ದೇವರ ಕೈಯಾಗಿನ ಮಾತು ಬಿಡು. ಆದರ ನನ್ನ ತಪ್ಪು ಏನು, ನನ್ನ ಪದರಿನ್ಯಾಗ ಹಾಕು. ನಾ ಜಾಮೀನ ಅಗಲಿಕ್ಕೆ ಮುಂದೆಬಿದ್ದವ, ಆದರ ನನ್ನ ಹೊಲ ವತ್ತಿ ಬಿದ್ದದ್ದಕ್ಕ ಆಗಲಿಕ್ಕೆ ಬರೂದಿಲ್ಲಾ ಅಂತ ವಕೀಲರು ಹೇಳಿದಮ್ಯಾಲ, ಸ್ವಾಮಿರಾಯ ಬಹಾದ್ದೂರನ ಹಂಗ, 'ನೀ ಯಾಕ ಕಾಳಜಿ ಮಾಡತೀ ; ನಾ ಆಗತೇನಿ' ಅಂತ ಅಂದ. ನೆನಪು ಅದs ಏನು? ಮನೆತನದ ಅಭಿಮಾನಾ ಹಿಡಿದು ಆ ಹುಚ್ಚನ ದಶಿಂದನೂ ಜಾಮೀನ ಆಗಲಿಕ್ಕೆ ಮುಂದ ಬಂದ, ಪುಣ್ಯಾತ್ಮ, ಅವನ ಹೆಸರು ತಂಪುಹೊತ್ತಿನ್ಯಾಗ ನೆನಸಬೇಕು... ಅವ ಜೀವದಿಂದ ಇದ್ದಿದ್ದರ, ನೀನು ಎಷ್ಟು ಕಳಕೊಂಡಿದ್ದರೂ, ನಮ್ಮ ಮ್ಯಾಲ ಹೀಂಗ ದ್ವೇಷಾ ಕಾರತಿದ್ದಿಲ್ಲ...! ಹೋಗಲಿ, ಈಗ ಮಾತಾಡಿ ಏನು ಪ್ರಯೋಜನ... ತನ್ನ ಆಟ ನನ್ನ ಕೈಲೆ ಆಡಿಸಿದ ಆ ದೇವಾ ಅಂತ ಹತ್ತ ಸರತೆ ದೇವರನ ಶಪಿಸತೇನಿ ನೋಡು....'

'ಅವ್ವವ್ವ, ಈ ಹೆಂಗಸರ ಮಾತು ಬಿಟ್ಟುಬಿಡು... ಹೀಂಗs ಬಣ್ಣದ ಮಾತಾಡಿ ಎಷ್ಟು ಮಂದೀನ್ನ ನುಂಗಿ ನೀರು ಕುಡಿದಿಯೋ ಏನೊ... ಊರಿಗೆ ಊರs ಹೇಳತದ, ನಾ ಯಾಕ ಹೇಳಬೇಕು?... ಇಂಥಾ ಮಾತಿಗೆ ಮಳ್ಳ ಆಗೂದಿಲ್ಲ ಬಿಡು...'

'ನಿಂದ್ರು, ನನ್ನ ಮಾತು ಮುಗೀಲಿ... ಇಂದು ಸೋಕ್ಷಮೋಕ್ಷ ಆಗೇ ಹೋಗಲಿ. ನನ್ನ ತರ್ಫೆ ಹೇಳೋದನ್ನೆಲ್ಲಾ ನಿನ್ನ ಕಿವೀಮ್ಯಾಲ ಇಟ್ಟುಬಿಡತೇನಿ. ಮುಂದ ನೀನು ಬೇಕಾದರ ತಮ್ಮಾ ಅಂತ ಕರೀ, ಇಲ್ಲಾ ಬಿಡು... ಇನ್ನ ನೀವು ಮುಳುಗಲೀ ಅನ್ನೋ ಉದ್ದೇಶದಲೇ ವೆಂಕಾಟೀನ್ನ ನಾನು ಓಡಿಸಿದೆ, ಅಂತ ನಿನ್ನ ಭ್ರಮಾ ಅದ... ಅವನ್ನ ಓಡಿಸಿ ನನಗೆ ಬರೋ ಭಾಗ್ಯ ಏನಿತ್ತು?.... ಅವನ್ನ ನಾ ಯಾಕ ಓಡಿಸಬೇಕು?... ಹೇಳಿ ಕೇಳಿ ಅರಹುಚ್ಚ... ಯಾರು ಮಾಡಿದ ಪಾಪನೋ ಏನೋ, ತಾ ಹೊತುಗೊಂಡವ... ಅಂದು ರಾತ್ರಿ ಅವ ನನ್ನ

ಮನ್ಯಾಗ ಮಲಗಿಕೊಂಡಿದ್ದು ಖರೆ. ಆದರ ಅವನ್ನ ನಾನು ಇಪ್ಪತ್ತು ನಾಲ್ಕು ತಾಸು ಕಾಯಕೋತ ಇರಬೇಕಿತ್ತs, ಅಥವಾ ರಟ್ಟಿಗೆ ಹಗ್ಗಾ ಹಚ್ಚಿ ಖಂಬಕ್ಕ ಕಟ್ಟಬೇಕಿತ್ತs?... ರಾತ್ರಿ ಹತ್ತು ಗಂಟೆ ಆಗಿತ್ತು... ಅಷ್ಟು ಕೂಳು ತಿಂದಾ, ಇಲ್ಲೇ ಹೋಗತೇನಿ ಅಂದಾವಾ ಹೋದಾ ! ಹೋಗೇ... ಬಿಟ್ಟ !... ಮುಂದ ಏನು ಆತು ಗೊತ್ತದs ಏನು ?... ಅವನ್ನ ಹುಡುಕ್ಯಾಡಲಿಕ್ಕೆ ಅಂತ ಸ್ವಾಮಿರಾಯ ಒಂದು ನೂರು ರೂಪಾಯಿ ರೋಖ ಕೊಟ್ಟು ನನ್ನ s ಪುಣೇಕ್ಕ ಓಡಿಸಿದ್ದು !... ನಾ ವೆಂಕ್ಯಾನ ಓಡಿಸೇನೀ ಅಂತ ಅನ್ನೋ ಸಂಶಯ ನಿನ್ನ ಗಂಡಗ ಬರಲಿಲ್ಲಾ ಅಂದೆ ! ನಿನ್ನ ತಲ್ಯಾಗ ಮಾತ್ರ ಈ ಭ್ರಮಾ ಯಾಕ ಬಂತೋ ಏನೋ, ನನಗ ತಿಳೀ ಒಲ್ಲದು... ಅಲ್ಲಾ, ಸ್ವಾಮಿರಾಯ ನಮ್ಮ ತಮ್ಮನ ಅಭಿಮಾನ ಹಿಡಿದ. ಹಂಗ ಕೇಳಿದರ, ಗಂಗಕ್ಕಾ, ವೆಂಕಾಟಿ ನನ್ನ ತಮ್ಮನೂ ಹೌದು, ನಿನ್ನ ತಮ್ಮನೂ ಹೌದು. ಆದರೆ ಸ್ವಾಮಿರಾಯ ಜಾಮೀನು ಆದದ್ದು ನಿನ್ನ ತಮ್ಮನ ದಶಿಂದನs ಅಂತ ನಾ ಅಂತೇನಿ ನೋಡು... ಸ್ವಾಮಿರಾಯ ಏನು ನನ್ನ ಶತ್ರೂನs? ನನ್ನ ಕಣ್ಣೆದುರಿಗೇ ಜಾಮೀನುಪತ್ರಕ್ಕ ಸಹಿ ಹಾಕ್ಯಾನ, ವೆಂಕ್ಯಾನ್ನ ಓಡಿಸಿದರ ಅವನs ಪೇಚಿನ್ಯಾಗ ಸಿಗತಾನ. ನನಗೆ ತಿಳಿಯೂದಿಲ್ಲ?.... ಅವನ ಜೀವ ವಯಿಕ್[೧] ಅಂದರ ನನ್ನ ಅಕ್ಕನ ಜೀವನೂ ವಯಿಕ್ ಅಂತsದ ಅನ್ನೋದು ನನಗ ತಿಳಿಯೂದಿಲ್ಲs...?'

ಗಂಗವ್ವನಿಗೆ ಈ ವಿಷಯಗಳು ಅಷ್ಟು ಚೆನ್ನಾಗಿ ತಿಳಿಯವು. ಅವಳ ಜೀವನಸ್ಮೃತಿಯಲ್ಲಿಯ ಈ ಭಾಗವು ಬಹು ಗೊಂದಲಮಯವಾದದ್ದು. ವೆಂಕಾಟಿ ಓಡಿಹೋದನಂತರ ಅವನನ್ನು ಹುಡುಕಾಡಲು ಜನರು ಎಷ್ಟೆಷ್ಟೋ ಕಡೆಗೆ ಅಡ್ಡಾಡಿ ಬಂದರು. ಅವನು ಸಿಗದಾಗಲು, ಒಂದು ತಿಂಗಳಷ್ಟರಲ್ಲಿ ಜನರು ರಾಘಪ್ಪನ ವಿಷಯದಲ್ಲಿ ಸಂಶಯಪಡತೊಡಗಿದರು. ರಾಘಪ್ಪನ ಕುಹಕಜೀವನದ ಬಗ್ಗೆ ಮನೆಯ ಹೊರಗೆ ಅನೇಕ ಸುದ್ದಿಗಳು ಸುಳಿದಾಡುತ್ತಿದ್ದರೂ ಕೂಡ ಮನೆಯಲ್ಲಿ ಒಕ್ಕಟ್ಟು ಇದ್ದ ಮೂಲಕ ಅದರ ಪ್ರತಿಧ್ವನಿ ಮೊದಲು ಕೇಳಿರಲಿಲ್ಲ. ಆದರೆ ಮನೆಯೆಲ್ಲ ತೊಳೆದುಕೊಂಡುಹೋದದ್ದು, ದ್ವೇಷ-ಸಂಶಯ ವಾತಾವರಣದಲ್ಲಿ ಹೊರಗೆ ಜನರಾಡುವ ಹಾರಿಕೆಯ ಮಾತುಗಳು ಗಂಗವ್ವನ ಕಿವಿಯವರೆಗೆ ಮುಟ್ಟಿದ್ದವು. ಅನೇಕ ಸುದ್ಧಿಗಳಲ್ಲಿ, ವೆಂಕಾಟಿಯನ್ನು ಓಡಿಸಿದವನು ಅವನೇ ಎಂಬ ಸುದ್ದಿಯು ಹೆಚ್ಚು ಆಳವಾಗಿ ಗಂಗವ್ವನ ಮನಸ್ಸನ್ನು ಸೇರಿ

---

೧. ನೊಂದರೆ

ಬೇರುಬಿಟ್ಟಿತ್ತು. ಈ ವಿಷಯವನ್ನು ಗಂಗಕ್ಕ ಯಾವ ಆಧಾರಗಳಿಲ್ಲದೇ ನಂಬಿದ್ದಳು. ಆರೇಳು ತಿಂಗಳುಗಳ ತರುವಾಯ ಗಂಡನೂ ನಿಧನಹೊಂದಿದ್ದನು. ಆಗ ಆದ ನೋವು ಈ ನಂಬುಗೆಯನ್ನು ಪೂರ್ಣಗೊಳಿಸಿಬಿಟ್ಟು, ಒಂದು ಸಂದರ್ಭದಲ್ಲಿ ಗಂಗವ್ವನು ರಾಘಪ್ಪ ಹಾಗು ಅವನ ಹೆಂಡತಿಮಕ್ಕಳ ಹೆಸರಿನಿಂದ ನೀರು ಹಾಕಿಸಿಕೊಂಡುಬಿಟ್ಟಿದ್ದಳು !

ಇದೀಗ ಆ ವಿಷಯದ ಸ್ಪಷ್ಟವಾದ ವಿವರಣೆ ಬಂದು ಅವಳನ್ನು ನಿರುತ್ತರಳನ್ನಾಗಿ ಮಾಡಿಬಿಟ್ಟಿತು. ಕಾರಣದ ಬಲ ಹೋದ ಕೂಡಲೆ ತ್ವೇಷವು ದುಃಖವಾಗಿ ಪರಿಣಮಿಸಿತು. ಅವಳು ಇದೀಗ ಹೆಚ್ಚು ವಾದಿಸಲಾರಳು. ಅದರಲ್ಲಿಯೂ ಹಳೆಯ ಆಯಾ ಪ್ರಸಂಗಗಳು ಕಣ್ಣೆದುರು ಕಟ್ಟಿದಂತಾಗಿ ಆಕೆ ಕಣ್ಣೀರು ತೆಗೆದು ಇಷ್ಟು ಮಾತ್ರ ಅಂದಳು :

‘ಕಡೀಕೆ ಅವರನ ವಯಿಕ್ ಅನಿಸಿದ್ಯಪಾ !... ತಮ್ಮಾ ಅನ್ನೋ ಅಭಿಮಾನಾ ಹಿಡಿದು ನನ್ನ ಯಾಕ ಅನಿಸಲಿಲ್ಲಾ ಅಂತ ಅಳತೇನೋ, ರಾಘೂ...’

ಆದರೆ ರಾಘಪ್ಪ ಇಷ್ಟಕ್ಕೆ ಬಿಡಲಿಲ್ಲ. ಇನ್ನೊಂದು ವಿಷಯ ಅವನಿಗೆ ಹೇಳಬೇಕಾಗಿತ್ತು ; ಬಲುದಿವಸಗಳಿಂದ ಹೇಳಬೇಕಾದದ್ದು....

‘ಗಂಗಕ್ಕಾ, ನೀ ಆಡಿದ ಮಾತು ಕೇಳಿ ನನಗ ಸಿಟ್ಟು ಬರೂದಿಲ್ಲ... ಯಾಕಂತಂದರ ಇವನ ಮಾತs ನಾನೂ ಆಡಿಕೊಂಡೇನಿ.... ಈಗ ಮಾತಾಡಿ ಬರೋ ಫಲ ಅಷ್ಟರಾಗs ಅದs ಅನ್ನು. ಆದರೂ ಮಾತು ಬಂದದ್ದಕ್ಕ ಸ್ಪಷ್ಟ ಹೇಳಿಬಿಡತೇನಿ.... ಸ್ವಾಮಿರಾಯ ಹೋದದ್ದಕ್ಕ ಎಲ್ಲಾರಿಗಿಂತಾ ದೊಡ್ಡ ದುಃಖ ನಿನ್ನದು, ಇದು ಖರೆ ; ಆದರೆ ನನ್ನ ವಿಷಯನೂ ಅಷ್ಟು ಹೇಳತೇನಿ, ಕೇಳು. ನೀನು ಹೆಣ್ಣು ಮಗಳಾದಿ ; ವೆಂಕಾಟಿ ಖರೇ ಜವಾಬದಾರಿ ನನ್ನದು ; ಅವ ಓಡಿಹೋದದ್ದು ನನ್ನ ಮನ್ಯಾಗಿಂದ ; ಅವ ಓಡಿಹೋದದ್ದಕ್ಕ ನನ್ನ ಅಕ್ಕನ ಮನಿ ಬರೇದು ಆಯ್ತು ; ಆದರ ಒಂದಿಲ್ಲ ಒಂದು ರೀತಿಯಿಂದ ನನ್ನ ಅಕ್ಕನ ಋಣ ತೀರಸಬೇಕು ಅನ್ನೋ ಹ್ಯಾಂವದಾಗ ನಾನು ಇದ್ದೆ... ಅಷ್ಟರಾಗ ಸ್ವಾಮಿರಾಯನ ತಲಿ ಪಟಕ್ಕನ ಬಿತ್ತು !... ಆಗ ನನಗ ಏನು ಅನಿಸಿರಬ್ಯಾಡ ?... ಅವನ್ನ ಕೊಂದವ ನಾನs, ಅನ್ನೋ ಭ್ರಮದಾಗ ನಾ ಹೆಂಗ ಓಣಿ ಓಣಿ ಅಡ್ಡ್ಯಾಡಿ, ದೇವರs ನನ್ನ ಜೀವಾ ತೊಗೊಂಡು ಅವನ ಜೀವಾ ಕೊಡು ಅಂತ ಅತ್ತೇನಿ – ಇದು ನಿನಗ ಗೊತ್ತಿದ್ದರ... ಹೋಗಲಿ, ನಿನಗ ಹೆಂಗ ಗೊತ್ತಾಗಬೇಕು ? ನಿನ್ನ ಹೊರಲಾರದ ದುಃಖs ನಿನಗ ಸಾಕಾಗಿತ್ತು ; ಅದು ನಿನ್ನ ತಪ್ಪು ಅಲ್ಲ... ಆದರ ದೇಸಾಯರ, ನನ್ನ ಹೇಳಿಕಿ ಇಷ್ಟs... ನೋಡಿದವರು ಇದ್ದಾರ... ಕನಿಷ್ಠ ನಮ್ಮನ್ನ

ಕಾಡಿನ ದೇವರಿ ಗರs ಗೊತ್ತದ, ಸಾಕು !'

ತನ್ನ ಮಾತಿನ ರಭಸದಲ್ಲಿ ರಾಘಪ್ಪ ಕೊನೆಕೊನೆಗೆ ತನ್ನ ಧ್ವನಿಯನ್ನೂ ಏರಿಸಿದನಲ್ಲದೆ, ಅವನಿಗೂ ಆ ದಿನಗಳ ನೆನಪಾಗಿ, ನಿಜವಾದ ದುಃಖ–ಕನಿಕರಗಳು ತುಂಬಿದ್ದರಿಂದ ಅವು ಯಾರ ಎದೆಯನ್ನೂ ಮೀಟುವಂತೆ ಬಂದವು. ಅವನಾದರೂ ಗದ್ಗದಿತನಾಗಿದ್ದನು. ಅತ್ತ ಹೊರಗೆ ಈ ಸಂಭಾಷಣೆಯತ್ತ ಲಕ್ಷ್ಯವಿಲ್ಲದೆ ಗಂಟಲು ಬಿಗಿ ಹಿಡಿದು ಅಳುತ್ತಿದ್ದ ಗಂಗವ್ವನ ರೋದನವು ರಾಘಪ್ಪನ ಮಾತು ಮುಗಿದೊಡನೆ ಒಮ್ಮೆಲೇ ಎಲ್ಲರಿಗೂ ಕೇಳಿಸಿತು. ದೇಸಾಯರು ಚಟ್ಟನೆದ್ದು ಹೊರಗೆ ಬಂದರು. ರಾಘಪ್ಪನೂ ಒದ್ದೆಯಾದ ಎವೆಗಳನ್ನು ಒರೆಸುತ್ತ ಹೊರಗೆ ಬಂದನು. ದೇಸಾಯರು ಬಂದೊಡನೆ ಗಂಗವ್ವ ಗಂಟಲನ್ನು ಬಿಗಿಹಿಡಿಯುವ ಪ್ರಯತ್ನವನ್ನು ಬಿಟ್ಟುಕೊಟ್ಟು, ತಲೆಯ ಮೇಲಿನ ಸೆರಗನ್ನು ಗದ್ದದವರೆಗೆ ಎಳೆದುಕೊಂಡು ತಾಳ್ಮೆ ಮೀರಿ ದೊಡ್ಡ ದನಿಯಿಂದ ಅಳತೊಡಗಿದಳು. ಆ ರುದ್ರ ದೃಶ್ಯವನ್ನು ಕಂಡು ರಾಘಪ್ಪನಿಗೂ ಕನಿಕರ ಉಕ್ಕಿತು. ಅವನಿಗಾದರೂ ಕಣ್ಣಿನಲ್ಲಿ ಬಳಬಳನೆ ನೀರು ಉಕ್ಕಿದವು. ಅವನ ಗಂಡುಸ್ವಭಾವವೂ ಅಳಿದಂತಾಯಿತು. ಒಂದೆರಡು ಬಾರಿ ಬಿಕ್ಕಳಿಸಿದನು ಕೂಡ. ಆದರೆ ಈ ಬಗೆಯಿಂದ ನಿಜವಾದ ರೋದನದಲ್ಲಿ ಎರಡು ನಿಮಿಷ ದಾಟುವಷ್ಟರಲ್ಲಿ ರಾಘಪ್ಪನ ವ್ಯವಹಾರೀದೃಷ್ಟಿ ಮತ್ತೆ ಒಮ್ಮೆಲೇ ಜಾಗೃತವಾಯಿತು. 'ಎಂಥ ಸುಸಂಧಿ!' ಎಂಬ ವಿಚಾರ ಬರುತ್ತಲೇ, ರಾಘಪ್ಪನು ಮತ್ತೆ ತನ್ನ ನಾಟಕಕ್ಕೆ ಆರಂಭ ಮಾಡಿದನು. ದೊಪ್ಪನೆ ನೆಲಕ್ಕೆ ಕುಕ್ಕರಿಸಿ, ತನ್ನ ಉಪರಣಿಯನ್ನು ನೆಲಕ್ಕೆ ಹಾಸಿ, 'ಗಂಗಕ್ಕಾ, ನನ್ನದು ಏನs ತಪ್ಪು ಆಗಿರಲಿ, ಹೊಟ್ಟ್ಯಾಗ ಹಾಕ್ಕೊ ; ಹಳೇದನ್ನೆಲ್ಲ ಮರೆತುಬಿಡು. ತಮ್ಮ ಅಂತ ಮತ್ತ ಕರಿ...' ಎಂದು ನೆಲಕ್ಕೆ ಒರಗಿದನು.

ಭೂತಕಾಲದಲ್ಲಿ ನಿಮಗ್ನಳಾಗಿ ಗಂಗಕ್ಕ ರೋದಿಸುತ್ತಿರುವಾಗ ತಮ್ಮನ ಬಗ್ಗೆ ತುಸು ಮನಸ್ಸು ಕರಗಿತ್ತು. ಆದರೆ ರಾಘಪ್ಪನ ಹೊಸ ಚಟುವಟಿಕೆಯಿಂದ ಭೂತಕಾಲದಿಂದ ಒಮ್ಮೆಲೇ ವರ್ತಮಾನಕಾಲಕ್ಕೆ ಬಂದಳು. ತಮ್ಮನ ಈ ಲೀಲೆಗಳ ಸಾಕಷ್ಟು ಪರಿಚಯವಿದ್ದ ಅವಳು ವಿವೇಕಬಲದ ಒಂದೇ ಹೊಡೆತಕ್ಕೆ ಈ ಭಾವನೆಗಳ ದಂಡನ್ನೇ ತೊಡೆದುಹಾಕಿದಳು. ಅರೆಕ್ಷಣದಲ್ಲಿ ಕಂಬನಿ, ಗದ್ಗದಸ್ವರ, ಕಂಪನ, ಎಲ್ಲವನ್ನೂ ನಿಲ್ಲಿಸಿಬಿಟ್ಟು ಚಟ್ಟನೆ ಎದ್ದಳು. ಇನ್ನೊಂದು ಮಾತಾಡದೆ ಬಿರಬಿರನೆ ಬಾಗಲು ದಾಟಿ ಮನೆಕಡೆಗೆ ನಡೆದಳು.

ದೇಸಾಯರಿಗೆ ಇನ್ನೊಮ್ಮೆ ಆಕೆಯೊಡನೆ ಮುಖ್ಯ ವಿಷಯ ಚರ್ಚಿಸುವದಾಗಿ ಭರವಸೆಪಡೆದು ರಾಘಪ್ಪನೂ ಅಲ್ಲಿಂದ ಜಾರಿದನು. ಅಂದು ದೇಸಾಯರ ಮೂಕಸಾನ್ನಿಧ್ಯದಿಂದ ಅವನಿಗೆ ಅರೆಗೆಲುವು ದೊರಕಿತ್ತು. ವಾತಿನಲ್ಲಿ

ಚತುರನಾದರೂ ದೇಸಾಯರ ಅಧ್ಯಕ್ಷತೆಯಿಲ್ಲದೆ ತನಗೆ ಗೆಲುವು ಇಲ್ಲವೆಂಬುದನ್ನು ಅವನು ಅರಿತನು. ಹಿಂದಕ್ಕೊಮ್ಮೆ ಒಬ್ಬನೇ ಹೋಗಿ ಮಂಕಾಗಿಬಂದಿರಲಿಲ್ಲವೆ ?

* * *

ಗಂಗವ್ವ ಅಂದು ಇದಾವ ವಿಷಯವನ್ನೂ ಕಿಟ್ಟಿಯ ಎದುರು ಎತ್ತಲಿಲ್ಲ. ಆದರೆ ಆದ ವಿಷಯವೆಲ್ಲ ಕಿಟ್ಟಿಗೆ ತಿಳಿದುಬಿಟ್ಟಿತ್ತು. ರಾಘಪ್ಪ ಕಚೇರಿ ಬಿಡುವ ಸಮಯದಲ್ಲಿ ಟಾಂಗಾ ಮಾಡಿಕೊಂಡು ಬಂದು ಅರ್ಧಹಾದಿಗೆ ಕಿಟ್ಟಿಯನ್ನು ಸಂದರ್ಶಿಸಿ, ಅವನಿಗೆ ಮುಖ್ಯ ವಿಷಯಗಳನ್ನು ತಿಳಿಸಿದ್ದನು. ಅಲ್ಲದೆ, ದೇಸಾಯರಾಗಲಿ ಗಂಗಕ್ಕನಾಗಲಿ ಕೇಳಿದರೆ, 'ರಾಘಪ್ಪನ ಮಗಳಾಗದಿದ್ದರೆ ತನಗೆ ಲಗ್ನವೇ ಬೇಡ'ವೆಂದು ಕಟ್ಟುನಿಟ್ಟಾಗಿ ಹೇಳಿಬಿಡಬೇಕೆಂಬ ಉಪದೇಶವನ್ನೂ ಮಾಡಿದ್ದನು. ಹಾಗೆ ಕಿಟ್ಟಿ ಹೇಳದೇಇದ್ದರೆ ತನ್ನ ಮಾತಿನ ಸಾಮರ್ಥ್ಯವೂ ಕಡಿಮೆಯಾಗುತ್ತಿತ್ತು. ಅಲ್ಲದೆ, ಅಷ್ಟಾಗದ ಹೊರತು ಈ ಲಗ್ನ ಗೊತ್ತಾಗುವದೂ ಸಾಧ್ಯವಿದ್ದಿದ್ದಿಲ್ಲ.

ಮರುದಿನ ಮುಂಜಾನೆ ನಸುಕಿನಲ್ಲಿ ಮತ್ತೆ ಕರೆ ಬಂದಿತು ಗಂಗವ್ವನಿಗೆ. ದೇಸಾಯರು ಮುನ್ನಾ ದಿನದ ಅತಿಭಾವನಾಪೂರ್ಣ ವಾತಾವರಣವನ್ನು ಕಡಿಮೆ ಮಾಡಲೋಸುಗ ತಮಗೆ ಹೇಳಬೇಕಾದ್ದನ್ನೆಲ್ಲ ತೀರ ಗದ್ಯಮಯವಾಗಿ ಗಂಗವ್ವನಿಗೆ ತಿಳಿಸಿದರು : 'ಗಂಗವ್ವಾ, ಈ ವಿಷಯದಾಗ ನಮ್ಮಂಥವರನ ನೀನು ನಡುವೆ ಹಾಕಬಾರದು. ಆದರೆ ಇಷ್ಟೆಲ್ಲ ನಮ್ಮ ಎದುರಿಗೆ ಆಗೇದ ಅಂದ ಮೇಲೆ ನಾವು ಇನ್ನೊಂದು ಮಾತು ನಿನಗ ಹೇಳತೇವಿ. ನಿನಗ ಸರಿ ಕಂಡರ ನೋಡು. ನೀನು, ನಿನ್ನ ತಮ್ಮ ಯಾಕ ಜಗಳಾಡಿದಿರಿ, ಎಷ್ಟು ಜಗಳಾಡಿದಿರಿ, ಹೆಂಗ ಜಗಳಾಡಿದಿರಿ, ಇವೆಲ್ಲ ನಮಗ ಸಂಬಂಧ ಇಲ್ಲ. ಕೃಷ್ಣನ ಹಿತ ಹೆಂಗ ಆದೀತು, ಅದರ ಮುಖಾಂತರ ನಿನಗೂ ಸುಖ ಹೆಂಗ ಸಿಕ್ಕೀತು, ಇಷ್ಟು ನೋಡೋ ಕೆಲಸ ನಮ್ಮಂಥ ನಡುವಿನವರದು. ನಿನಗ ಬ್ಯಾಡಃ ಆಗಿದ್ದರ ನೀನು ಬಿಟ್ಟರೂ ನಮಗ ದುಃಖ ಇಲ್ಲ... ಇನ್ನ ರಾಘಪ್ಪನ ಗಂಡಸುಮಕ್ಕಳು ಇಲ್ಲಂತ, ಖರೇ ಏನು ?' ಗಂಗವ್ವ ಗೋಣುಹಾಕಿದ್ದು ನೋಡಿ ದೇಸಾಯರು ಮುಂದುವರಿದರು : 'ಹಂಗಾದರ ಕಿಟ್ಟಿಗೆ ಮಗಳನ್ನ ಕೊಟ್ಟು, ಅವನ್ನ ದತ್ತಕ ತೊಗೊಳ್ಳೊ ಬೇತು ಇದ್ದ ಹಂಗ ಕಾಣಿಸತದ... ಹಂಗ ದ್ವಾಮುಷಾಯಣ ದತ್ತಕ ತೊಗೊಳ್ಳಿಕ್ಕೆ ಬರತಃದ... ಸಾಧಾರಣ ವರ್ಷಕ್ಕೆ ಏಳು ನೂರು ರೂಪಾಯಿ ಬರೋ ಅಷ್ಟು ಜಮೀನು ಅವ ಅಂತ ಅಂತಿದ್ದ. ಅದನ್ನ ನಾವು ಚೌಕಸಿ ಮಾಡಿ ತಿಳುಕೊಳ್ಳತೀವಿ. ಅದು ಮುಂದಿನ ವಿಷಯ ಆಯಿತು....

‘ಇನ್ನ ಎರಡನೇ ಮಾತು. ರಾಘಪ್ಪ ಎಂಥವ ಇದ್ದಾನ ಇದು ನಮಗ ಮುಖ್ಯ ಅಲ್ಲ, ಅವನ ಮಗಳು ಹೆಂಗ ಇದ್ದಾಳ ಇದು ಮುಖ್ಯ. ಅದರ ವಿಷಯಕ್ಕ ಹಿಂದಾಗಡೆ ಚೌಕಸಿ ಮಾಡೋಣಂತ. ಆದರ ಒಂದು ವಿಷಯ – ಹುಡುಗರು ದೊಡ್ಡವರಾದ ಮೇಲೆ ಅವರಿಗೆ ಬೇಕಾದ್ದು ಹೇಳೇವು ಅನ್ನೋದನ್ನ ಈಗಿನ ಕಾಲಕ್ಕ ಮರೆತುಬಿಡಬೇಕು, ಗಂಗವ್ವಾ. ಈಗ ಮಕ್ಕಳ ಮಾತಿನ್ಯಾಗ ನಮಗ ಸ್ವಾತಂತ್ರ್ಯ ಉಳಿದಿಲ್ಲ. ಕೃಷ್ಣ ಈ ಹುಡುಗಿನ್ನs ಮಾಡಿಕೋತೇನಿ ಅಂತ ಹಟಾ ಹಿಡಿದಾನಂತಲ್ಲಾ ? ನಿನ್ನ ಎದುರಿಗೆ ಏನಾದರೂ ಅಂದನೇನು ?

‘ಛೇ, ಅದೆಲ್ಲಾ ರಾಘೂನ ಭಟಾರಿಕಿ[೧] ಇರಬೇಕು ಏಳು !’

‘ಅದು ಏನs ಇರಲಿ, ಕೃಷ್ಣನ್ನs ಕರೆದು ನಾವು ಖರೇ ಹಕೀಕತ್ತು ತಿಳುಕೊಳ್ಳೋಣ. ಆದರ ನನಗ ಅದು ಅಶಕ್ಯ ಕಾಣಿಸೂದಿಲ್ಲ’ ಎಂದವರೇ ದೇಸಾಯರು ಕಿಟ್ಟಿ ಬರೆದ ಪತ್ರವನ್ನು ತಮ್ಮ ಚಾಳೀಸಿನ ಕೇಸಿನೊಳಗಿಂದ ತೆಗೆದು ಓದಿಹೇಳಿದರು. ಗಂಗವ್ವ ಹಣಿಹಣಿ ಗಟ್ಟಿಸಿಕೊಂಡು ದಂಗುಬಡಿದು ಅಸಹಾಯಳಾಗಿ ಸುಮ್ಮನೆ ಕುಳಿತಳು. ಆ ಪತ್ರ ಬರೆದದ್ದಕ್ಕಾಗಿ ತನ್ನ ಮಗನನ್ನು ಕ್ಷಮಿಸಬೇಕೆಂದು ಹೇಳಬೇಕೆಂದು ತುದಿನಾಲಿಗೆಯವರೆಗೆ ಬಂದಿದ್ದರೂ ಕೂಡ ಹೇಳಲು ಮನಸ್ಸಾಗಲಿಲ್ಲ.

‘ಏನs ಆಗಲಿ, ರಾಘಪ್ಪ ಹೇಳಿದ ಮಾತು ಖರೆ ಇದ್ದರ, ಈ ವಿಷಯದಾಗ ನಮಗ ಬಹಳ ಸ್ವಾತಂತ್ರ್ಯ ಉಳಿಯೂದಿಲ್ಲ. ಕನ್ಯಾ ಸಾಧಾರಣ ಮಟ್ಟಿಗೆ ಛಲೋ ಇದ್ದು ಕೆಲಸಾಪಲಸಾ ಮಾಡಿಕೊಂಡು, ಮನಿ ತೂಗಿಸಿಕೊಂಡು ಹೋಗೋ ಹಂಗ ಇದ್ದರ ನೀನು ಹೆಚ್ಚು ತಕರಾರು ಇಲ್ಲದೆ ಹೂಂ ಅನ್ನೋದು ನನಗ ಛಲೋ ಕಾಣಸ್ತದ. ಇಲ್ಲದೆ ಇದ್ದರ, ನಾಳೆ ಕೃಷ್ಣ ನನ್ನ ಮಾತೂ ಬ್ಯಾಡ, ನಿನ್ನ ಮಾತೂ ಬ್ಯಾಡ, ತನ್ನ ಮನಸಿಗೆ ಬಂದಹಂಗ ಮಾಡತೇನಿ, ಅಂದುಬಿಟ್ಟರ ನನಗs ತ್ರಾಸು, ಹೌದೋ ಅಲ್ಲೋ...? ಅಲ್ಲಲ್ಲ ; ಕೃಷ್ಣ ಅಂದರ ನೀ ಎಣ್ಣಿ ಹಚ್ಚಿ ಎರದು ತೊಟ್ಟಿಲದಾಗ ಮಲಗಿಸೋ ಕೂಸು ಅಲ್ಲ, ಅದನ್ನ ನೀ ಲಕ್ಷ್ಯದಾಗ ತೊಗೊ. ನಾವು ಎಷ್ಟs ಆದರೂ ಹೊರಗಿನವರು. ಕಷ್ಟಪಡೋ ಆಕಿ ನೀನು. ಅದಕ್ಕ ಪೂರ್ಣ ವಿಚಾರಮಾಡು.

‘ಇನ್ನ ಇತರ ಲೌಕಿಕ ವ್ಯವಹಾರ.... ವರದಕ್ಷಿಣಿ ಎಷ್ಟರ ಯಾಕ ಕೊಡವಲ್ಲಾ! – ಹೆಂಗೂ ದತ್ತಕ ತೊಗೋತಾನಂತs.’

---

೧. ಬಾಯ್ಬಡಕತನ.

'ಏನೋಪಾ ಗೋಪಣ್ಣಾ, ನೀ ಹೇಳಿದ ಮಾತು ನನಗ ಖರೆ ಅನಿಸತದ. ಆದರೆ ಆ ರಾಘ್ಯಾನ ದಶಿಂದ ನನಗ ಧೈರ್ಯ ಇಲ್ಲ ನೋಡು...'

'ನಿನಗ ಏನು ಅಧೈರ್ಯ ಅದs ಹೇಳು. ಅದಕ್ಕ ನಾವು ಏನಾದರೂ ಹಾದಿ ತಗೀಬಹುದು. ಮುಖ್ಯ ವಿಷಯ, ಎಲ್ಲಾ ನಾವು ಹೇಳಿದ ಹಂಗ ಸಾಗಿದರ ನಿನಗ ಒಪ್ಪಿಗಿ ಅದs ಏನು – ಇದು ಮುಖ್ಯ ಮಾತು.'

'ಇಲ್ಲಾ, ಇಂದ ದತ್ತಕ ತೊಗೋತೇನಿ ಅಂದ ; ನಾಳೆ ಇನ್ನ ಯಾರನಾದರೂ ತೊಗೊಂಡರs ? ಅವನದೇನು ನಿಯಮ...? ಮುದ್ದಾಂ ನನಗ ಟಕ್ಕು[1] ತಿನಿಸಲಿಕ್ಕೆ ಅಂತ ಅವ ಹಾಂಗ ಮಾಡೋ ಅವನs.'

'ಅವ ಮಾಡತಾನs... ? ಹಂs, ಮಾಡಲಿ. ನಾವೇನೂ ಕೈಯಾಗ ಬಳಿ ಇಟ್ಟಿರೂದಿಲ್ಲ. ಲಗ್ನ ನಿಶ್ಚಯದ ಕಾಲಕ್ಕ ದತ್ತಾತ್ರಯನ ಗುಡ್ಯಾಗ ನಾಲ್ಕು ಮಂದಿ ಸಮಕ್ಷಮ ಪ್ರಮಾಣ ಮಾಡಸಿಗೋತೇನಿ. ಇಷ್ಟೂ ಮೀರಿ ಹೋದರ, ನಮ್ಮ ಊರ ಲಮಾಣ್ಯಾರು ಇದ್ದಾರ, ಖಂಬಕ್ಕ ಕಟ್ಟಿ ಬಾರ ಕೋಲಲೇ ಹೊಡಿಸತೇನಿ.... ಯಾರು ಅಂತ ತಿಳಿದಾನ ಅಂವ?' ದೇಸಾಯರು ಆವೇಶದಿಂದ ನುಡಿದರು.

ಗಂಗವ್ವನಿಗೆ ಮುಂದೆ ಏನು ಮಾತಾಡಬೇಕೆಂಬುದು ತಿಳಿಯದಾಯಿತು. ಈಗಾಗಲೇ ಆಕೆ ಸಾಕಷ್ಟು ಹಿಂದೆ ಸರಿದಿದ್ದಳು. ತುಸು ಸುಮ್ಮನಿದ್ದು ಸಂಕೋಚಪಡುತ್ತ ಇನ್ನೊಮ್ಮೆ ನಿರ್ಬಲವಾಗಿ ಹೇಳಿದಳು :

''ನೀ ಏನs ಅನ್ನು, ಗೋಪಣ್ಣ ; ಹಿಂಗಲ್ಲ ಮಾಡಿ ಕಡೀಕೆ ಎಲ್ಲಿ ಆತ ಕಿಟ್ಟ್ಯಾನ್ನ ತನ್ನ ಚೀಲಕ್ಕ ಹಾಕ್ಕೋತಾನೋ ಅನ್ನೋ ಭೀತಿ ನನಗ ಹೋಗವಲ್ಲದು.'

'ಇಲ್ಲಿ ನೋಡು ಗಂಗವ್ವಾ, ನಿನ್ನ ಮಗ ಏನು ಸಣ್ಣವ ಅಲ್ಲ. ಈ ಲಗ್ನ ಆದರೂ ಸರಿ, ಬಿಟ್ಟರೂ ಸರಿ. ರಾಘಪ್ಪ ಹೇಳಿದಹಂಗ ನಾ ಕುಣಿಯೋ ಅವs ಅಂತೂ ಕಿಟ್ಟೂ ನಿಂತರ, ನಾವರ ನೀವರ ಅವಗ ಮನ್ನಾ[2] ಮಾಡೋದು ಸಾಧ್ಯ ಅದs ಏನು ....? ನೀನs ಸ್ವಲ್ಪ ವಿಚಾರ ಮಾಡು. ಇನ್ನ, ಕೃಷ್ಣನದೂ ಲಗ್ನಕ್ಕ ಆತುರ ಇದ್ದಹಂಗ ನನಗ ಕಾಣಿಸತದ. ಈಗs ಒಂದು ಕರಾರು ಅವಗೂ ನಾವು ಹಾಕತಕ್ಕದ್ದು. ಲಗ್ನ ಆದಮ್ಯಾಲ, ಅಥವಾ ದತ್ತಕ ಆದಮ್ಯಾಲ, ಕೃಷ್ಣ ರಾಘಪ್ಪನಲ್ಲೇ ಹೋಗಿ ಇರತಕ್ಕದ್ದಲ್ಲ ; ಹಿಂಗ ಇವನ ಕಡೆಯಿಂದನೂ ಪ್ರಮಾಣ ಮಾಡಿಸಿಕೊಳ್ಳೋಣ. ಇವನೂ ಕ್ರಿಯಾವಂತ ಹುಡುಗ ; ತನ್ನ ಕಾಲಮ್ಯಾಲ ತಾ ನಿಂತಾನ ; ನೀ ಈ ಲಗ್ನಕ್ಕ ಒಪ್ಪಿದ ಹಿಗ್ಗೂ ಇರತದ ; ತನ್ನ ಪ್ರತಿಷ್ಠಾನೂ

---

೧. ಮೋಸಮಾಡಿ ಚಿಂತೆ ಹುಟ್ಟಿಸುವದು. ೨. ನಿಷೇಧ.

ಆಗತದ. ಕುಣಕೋತ ಮಾಡತಾನ ; ಪ್ರಮಾಣ ಮೀರಲಿಕ್ಕಿಲ್ಲ. ಮೀರಿದರ ಅವರವರ ಪಾಪ ಅವರವರಿಗೆ ಇರತದ. ನಮ್ಮ ಕೈಯಾಗ ಇದ್ದದ್ದು ನಾವು ಸರಳ ಮಾಡಿದರ ಆಯಿತು....'

ಕೊನೆಗೊಮ್ಮೆ ದೇಸಾಯರ ಸಂಧಾನ ಸಫಲವಾಯಿತು. ಗಂಗವ್ವನೂ ತನ್ನ ತವರುಮನೆಯ ಕಡೆಯ ಆಸ್ತಿಯನ್ನು ಭೂಮಿ–ಮನೆಗಳನ್ನು ನೋಡದೆ ಅನೇಕ ವರ್ಷಗಳಾಗಿದ್ದವು. ತಾನು ಹುಟ್ಟಿದ ಊರು, ತಾನು ಚಿಕ್ಕಂದಿನಲ್ಲಿ ಆಡಿದ ನೆಲ, ಉಂಡ ಹೊಲ ಇವುಗಳ ವಿಚಾರಗಳಿಂದ ಆಕೆಯ ಮನಸ್ಸು ತುಂಬಿಹೋಯಿತು; ಮನಸ್ಸಿಗೆ ಒಂದು ಬಗೆಯ ಆಂತರಿಕ ಪ್ರಸನ್ನತೆಯೂ ಬಂದಂತಾಗಿ ತಾನು ಪಡುತ್ತಿದ್ದ ಸಂದೇಹದ ಬೇರುಗಳೇ ಸಡಿಲಾದಂತೆ ತೋರತೊಡಗಿದವು.

ದೇಸಾಯರಿಗೆ ಮಾತ್ರ ಇಷ್ಟರಿಂದಲೇ ಸಮಾಧಾನವಾಗಲಿಲ್ಲ. ಗಂಗವ್ವನ ಭಾವನಾಸಮಸ್ಯೆಗೂ ಒಂದು ಉತ್ತರ ತೆಗೆದರು :

'ಇನ್ನೊಂದು : ಇಷ್ಟು ದಿವಸದ ವೈರತ್ವಾ ನಾ ಈಗs ಹೆಂಗ ಬಿಡಲಿ ಅಂತ ನೀ ಅನ್ನತಿದ್ದರ.... ಅದನ್ನ ಬಿಡsಬೇಕು ಅಂತ ನಿಯಮ ಏನೂ ಇಲ್ಲ. ನಿನ್ನ ಸೊಸಿ ನಿನ್ನ ಮನಿಗೆ ಬಂದಮ್ಯಾಲ ನೀನು ಆಕಿಮ್ಯಾಲ ಪ್ರೇಮ ಇಡಬೇಕು, ಇದೊಂದs ನಿಯಮ. ಅದು ನಿನ್ನ ಕರ್ತವ್ಯ ; ಆಕೀ ಅಪ್ಪನ ಮ್ಯಾಲಿನ ಸಿಟ್ಟು ಆಕೀ ಮ್ಯಾಲ ತೀರಿಸತಕ್ಕದ್ದಲ್ಲ ; ಹಂಗ ಮಾಡಿದರ ಅದಕ್ಕ ನಮ್ಮ ವೋಟು ಕೊಡೋದಿಲ್ಲ – ಇದೊಂದು ಕರಾರು ನಾವು ನಿನಗ ಹಾಕತೇವಿ. ಆದರ ನೀನು ರಾಘಪ್ಪನ ಜೋಡಿ ಕೂಡಿ ನಡಿಯsಬೇಕು ಅಂತ ನಮ್ಮದೇನೂ ಕರಾರು ಇಲ್ಲ. ನೀನು ಅವನ ಮಾರಿ ನೋಡಬ್ಯಾಡ ; ಅವರ ಮನಿಗೆ ಕಾಲು ಹಾಕಬ್ಯಾಡ ; ಅವನ್ನ ನಿನ್ನ ಮನಿಗೆ ಕರೀಬ್ಯಾಡ – ಅವೆಲ್ಲ ಮೊದಲs ಸ್ಪಷ್ಟಮಾಡೋಣ. ಯೋಗ್ಯಕಾಲಕ್ಕ ಅಷ್ಟು ಸೊಸಿ–ಮಗನ್ನ ಅವರ ಮನಿಗೆ ನೀನು ಕಳಿಸಿಗೋತs ಇರು, ನಿನ್ನ ಕೆಲಸ ಆದಹಂಗ ಆಯ್ತು.'

ಇದರಿಂದಂತೂ ಗಂಗವ್ವ ಪೂರ್ಣ ನಿರುತ್ತರಳಾದಳು. ಈ ಸಂಗ್ರಾಹಕ ಸಮಸ್ಯಾಪೂರ್ತಿಗೆ ಮುಂದೆ ಮಾತಾಡುವದೇನಿದೆ?

ಮನೆಗೆ ಹೋದಮೇಲೆ ಕಿಟ್ಟಿಗೆ ಚೇಷ್ಟೆಯಿಂದ ಕೇಳುವವರಂತೆ ಗಂಗವ್ವ, 'ರತ್ನೀನ್ನ ಬಿಟ್ಟರ ಲಗ್ನಾ ಒಲ್ಲೆ ಅಂತ ಅಂದೀಯಂತ ರಾಘ್ಯಾನ ಎದುರಿಗೆ – ಹೌದೇನು?' ಎಂದು ಕೇಳಿದಳು.

ಕಿಟ್ಟಿ 'ಹೌದು !' ಎಂದು ಗಡುಸಾಗಿ ಉತ್ತರ ಕೊಟ್ಟನು.

ದೇಸಾಯರ ಕೃಪೆಯಿಂದ ತಾನು ಎಂಥ ದೊಡ್ಡ ಕುತ್ತಿನೊಳಗಿಂದ ಪಾರಾದೆನೆಂಬುದರ ಮನವರಿಕೆ ಆಕೆಗೆ ಆಯಿತು. ಅಂದು ದೇವರ ಎದುರು ಗಂಗವ್ವ ಇನ್ನೊಂದು ತುಪ್ಪದ ದೀವಿಗೆ ಇಟ್ಟಳು. ಗೋಪಣ್ಣ ಇನ್ನೂ ನಾಲ್ಕು ದಿವಸ ಹೆಚ್ಚು ಬಾಳಲಿ ಎಂದು ದೇವರನ್ನು ಬೇಡಿಕೊಂಡಳು.

* * * *

## ೧೮ : ಸರ್ವ ಪಕ್ಷಗಳ ತಯಾರಿ

ಯಾದಿ[೧] ಮಾಡಿಸುವ ದಿನ ಸಮೀಪ ಬರತೊಡಗಿತ್ತು. ಗಂಗವ್ವನಾದರೋ ಈ ಪ್ರಸಂಗ ತಾನಾಗಿಯೇ ಮೈಮೇಲೆ ಬಂದಂತೆಯೂ, ಅದರ ಹೊಣೆ ತನ್ನ ಮೇಲೆ ಇಲ್ಲದಂತೆಯೂ ತನ್ನ ನಡತೆಯನ್ನು ಇಟ್ಟುಬಿಟ್ಟಿದ್ದಳು. ಕನ್ಯೆಯನ್ನು ನೋಡಲಿಕ್ಕೂ ಆಕೆಯು ಒಪ್ಪಲಿಲ್ಲ. 'ನೋಡೋ ಅವನಃ ನೋಡ್ಯಾನ ; ನಾವ್ಯಾಕ?' ಎಂದು ಹೇಳಿಬಿಟ್ಟಿದ್ದಳು. ಕಿಟ್ಟಿಯೊಡನೆ ಲಗ್ನದ ಮಾತು ಎತ್ತುತ್ತಿರಲ್ಲಿಲ್ಲ ; ಆದರೆ ದೇಸಾಯರೊಂದಿಗೆ ತನ್ನ ಪಕ್ಷದ ಧೋರಣೆಯನ್ನು ನಿಶ್ಚಯಿಸಿಕೊಂಡಿದ್ದಳು. ಆಕೆಯ ಮುಖ್ಯ ಬೇಡಿಕೆಗಳೆಂದರೆ, ಲಗ್ನದ ಇಬ್ಬದಿಯ ಖರ್ಚನ್ನು ರಾಘಪ್ಪ ಹೊರಬೇಕು ; ದತ್ತಕದ ವಿಷಯವಾಗಿ ರಾಘಪ್ಪ ನಾಲ್ಕು ಸಭ್ಯಗೃಹಸ್ಥರೆದುರು ಪ್ರಮಾಣ ಮಾಡಬೇಕು ; ಯಾವುದೇ ಕಾರಣದಿಂದ ಮಾವನ ಮನೆ ಸೇರದಂತೆಯೂ, ಸ್ವತಂತ್ರ ಮನೆಯಲ್ಲಿಯೇ ಇರುವಂತೆಯೂ ಕಿಟ್ಟಿಯನ್ನು ಒಪ್ಪಿಸಬೇಕು ; ಜೊತೆಗೆ ವರದಕ್ಷಿಣೆ ಒಂದು ಸಾವಿರ ರೂಪಾಯಿ ರೋಖ ಕೊಡಿಸತಕ್ಕದ್ದು.

ಕಿಟ್ಟಿಗಾದರೋ ಇಷ್ಟು ಸುಲಭವಾಗಿ ತನ್ನ ಲಗ್ನ ಕೈಗೂಡೀತೆಂದು ಕನಸು ಮನಸ್ಸಿನಲ್ಲಿರಲಿಲ್ಲ. ಈ ಮೊದಲು ಅವನು ಆಡಿಕೊಳ್ಳುವ ಸ್ವಗತ ಭಾಷಣಗಳ ಬಗೆ ಬೇರೆ ಇದ್ದಿತು. ತಾನು ಲೋಕದ ರೂಢಿ ಅರಿಯದೆ, ಮನುಷ್ಯನಿಗಾಗಿಯೇ ಎಂದು ನಿರ್ಮಿಸಿದ ಸುಖಗಳನ್ನು ಅನುಭವಿಸದೆ, ತನ್ನ ಸ್ವಂತದ ವ್ಯಕ್ತಿತ್ವದ ಬೆಲೆಯನ್ನರಿಯದೆ ತಾಯಿಯ ನೆರಳ ಕೆಳಗೆ ಬೆಳೆದೆ. ಯಾರು ಕಂಡರೂ, 'ನೀನು ಒಳ್ಳೆಯವ, ಜಾಣ' ಎಂದು ಹೇಳುವುದರ ಬದಲು, 'ನಿನ್ನ ತಾಯಿ ಕಷ್ಟಪಟ್ಟವಳು, ನಿನ್ನನ್ನು ಬೆಳೆಸಿದವಳು' ಎಂದು ಹೇಳಿ ಹೇಳಿ ಆಕೆಯ ಉಪಕಾರದ ಭಾರವನ್ನು ತನ್ನ ತಲೆಯ ಮೇಲೆ ಹೊರೆಸಿ ತನ್ನ ಬೆಳವಣಿಗೆಯನ್ನೇ ತರುಬಿದರು. ಕಾರಣ ತಾನು ಸಿಂಹಂದತಿದ್ದರೂ ಆಡಿನಂತೆ ಬೆಳೆದೆ. (ಹುಸೇನಿಯನ್ನು ಕೇಳಿದರೆ ತಾನು ಸಿಂಹನೆಂಬುದು ತಿಳಿಯುವದು !) ತಾಯಿಯ ಉಪಕಾರ ದೊಡ್ಡದು

---

೧. ಲಗ್ನ ನಿಶ್ಚಯದ ಸಮಯಕ್ಕೆ ಕೊಡು–ಕೊಳ್ಳುವ ವಸ್ತುಗಳ ಪಟ್ಟಿ.

ನಿಜ ; ಆದರೆ ಆ ತಲೆಭಾರವನ್ನು ತಾನು ಕೊನೆಯವರೆಗೆ ಹೊರಬೇಕೆ?... ಯಾವ ತಾಯಿ ತನ್ನ ಮಗನನ್ನು ಸಾಕುವದಿಲ್ಲ?... ಇಷ್ಟು ಪ್ರೀತಿಯಿದ್ದ ತಾಯಿ ತನ್ನ ಕೊನೆಯ ಆಸೆಗೇಕೆ ಅಡ್ಡ ಬರಬೇಕು? ಹೌದು, ಇಷ್ಟು ಪ್ರೀತಿಯಿದ್ದರೆ, ದೇಸಾಯರ ಹತ್ತಿರವಿಟ್ಟ ಒಂದು ಸಾವಿರ ರೂಪಾಯಿಗಳಲ್ಲಿ ಒಂದು ನೂರು ರೂಪಾಯಿ ತನ್ನ ಬಟ್ಟೆಬರೆಗಳಿಗಾಗಿ ಏಕೆ ಖರ್ಚುಮಾಡಲಿಲ್ಲ? ಅಷ್ಟು ಮಾಡಿದ್ದರೆ ಹತ್ತುವರ್ಷ ಶಾಲಾಜೀವನವನ್ನು ಎರಡೇ ಅಂಗಿ ಎರಡು ಚಣ್ಣದ ಮೇಲೆ ಸಾಗಿಸವದು ತಪ್ಪುತ್ತಿತ್ತಲ್ಲ!... ಖಾಕಿ ಚಣ್ಣ ಹಾಕಿಕೊಂಡು ಕಚೇರಿಗೆ ಹಾಜರಾಗಿ ಸಿಪಾಯಿಯರಿಂದ ನಗಿಸಿಕೊಳ್ಳುವದು ತಪ್ಪುತ್ತಿತ್ತಲ್ಲ!... ತಾನು ಕಾಮದಾರನಾದರೂ ತನಗೆ ಧೋತರಕ್ಕೆ ಅಭಾವವಿದ್ದದ್ದನು ಇಷ್ಟು ಪ್ರೀತಿಯುಳ್ಳ ತಾಯಿ ನೋಡಿ ಸುಮ್ಮನಿದ್ದಳೇಕೆ? ಆ ಸಾವಿರದಲ್ಲಿ ಐದು ರೂಪಾಯಿ ಖರ್ಚುಮಾಡಿದ್ದರೆ ಉತ್ತಮ ಧೋತರಜೋಡಿ ಬರುತ್ತಿತ್ತಲ್ಲ ! ಒಂದು ರೀತಿ ನನ್ನ ಬಾಳು ಹಾಳೇ ಆದಂತಲ್ಲವೇ?... ಏನೋ ನೌಕರಿ ಹತ್ತಿ ಈಗ ನಾನು ಮನುಷ್ಯನಾದಂತಲ್ಲವೇ? ನಾನು ಕಚೇರಿಯಲ್ಲಿ ಎಷ್ಟು ಉದ್ದ ಅಡ್ಡ ಕಾಲು ಹಾಕಿ ಎರಡು ದುಡ್ಡು ತರುತ್ತಿದ್ದೇನೆಂಬ ವಿಚಾರವಿಲ್ಲದೆ, ತನ್ನನ್ನು ಕೈಗೊಂಬೆಯಂತೆ ಎಲ್ಲರಿಗೂ ತೋರುತ್ತ ತನ್ನದೇ ಆದ ಹೆಮ್ಮೆಯನ್ನು ಮುಂದೆ ಮಾಡುತ್ತಿದ್ದಾಳಲ್ಲ !... ಇವೇ ಮೊದಲಾದ ಸ್ವಗತ ಭಾಷಣಗಳು ಅವನ ಕಿವಿಯಲ್ಲಿ ಕಿಕ್ಕಿರಿ ತುಂಬಿರುತ್ತಿದ್ದವು. 'ಅವ್ವಾ, ನಿನ್ನ ಉಪಕಾರ ದೊಡ್ಡದು. ಆದರ ನನಗೂ ಒಂದು ವ್ಯಕ್ತಿತ್ವ ಇಲ್ಲ ಏನು?... ನನ್ನ ಆಶಾ ಆಕಾಂಕ್ಷಕ್ಕ ಒಂದು ಬೆಲೆ ಇರಬಾರದೇನು?... ನಾ ಏನು ಈಗ ನಿನ್ನ ಕೈಗೂಸು ಅಲ್ಲ !... ನಿನ್ನದು ನನ್ನ ಮ್ಯಾಲ ನಿಜ ಪ್ರೀತಿ ಇದ್ದರ ಹೀಂಗ ನೀ ಅಡ್ಡ ಬರತಿದ್ದಿಲ್ಲ... ನಿನಗ ನಿನ್ನ ದ್ವೇಷದ ಕಡೆಗೆ ಹೆಚ್ಚು ಲಕ್ಷ್ಯವೇ ಹೊರತು ನನ್ನ ಜೀವನದ ಕಡೆಗೆ ಇಲ್ಲ.... 'ನಾನು ನಿನ್ನ ದೊಡ್ಡವನನ್ನಾಗಿ ಮಾಡಿದೆ' ಎಂದು ಡಂಗುರ ಸಾರುತ್ತ ನಿನಗೆ ಮೆರೆಯಬೇಕಾಗಿದೆ....' ಇಂಥ ವ್ಯಾಕರಣಶುದ್ಧ – ಹೀನ ನಾಟಕೀಯ ವಾಕ್ಯಗಳ ಹಾಗೂ ಪದಪುಂಜಗಳ ರಂಗತಾಲೀಮು[೧] ಕಿಟ್ಟಿಯ ಮನಸ್ಸಿನಲ್ಲಿ ನಡೆದಿರುತ್ತಿತ್ತು. ಆದರೆ ಅವುಗಳನ್ನು ವ್ಯಕ್ತಗೊಳಿಸಲಿಕ್ಕೆ ಅವನಿಗೆ ಪ್ರಸಂಗವೇ ದೊರಕಿರಲಿಲ್ಲ. ಲಗ್ನವಂತೂ ಸುಲಭವಾಗಿ ಗೊತ್ತೇ ಆಗಿಹೋದಮೇಲೆಂತೂ ಈ ಸ್ವಗತಗಳು ಇದ್ದಲ್ಲಿಯೇ ಕರಗಿಹೋದವು. ಅಷ್ಟು ಸುಲಭವಾಗಿ ತನ್ನ ಎಲ್ಲ ಕೆಲಸವಾದದ್ದನ್ನು ನೋಡಿ ಅವನಿಗೆ

---

೧. ಡ್ರೆಸ್ ರಿಹರ್ಸಲ್.

ಸಾನಂದಾಶ್ಚರ್ಯವಾಯಿತಲ್ಲದೆ ತನ್ನ ಮಾವನ ಕರ್ತೃತ್ವಶಕ್ತಿಯ ಬಗ್ಗೆ ಗೌರವವೂ ಉಂಟಾಯಿತು. ಅವ್ವನೂ ಕೆಲದಿನ ದೇವತೆಯಂತೆ ತೋರಿದಳು. ಆಕೆ ಕಿಟ್ಟಿಯ ಕೃತಜ್ಞತೆಯನ್ನು ಎಂದಿಗೂ ಅಪೇಕ್ಷಿಸಲಿಲ್ಲ ; ಒಂದೂ ಮಾತಿಲ್ಲದೆ ಬಂದದ್ದನ್ನು ಸಹಿಸುವೆನೆಂಬ ಕಠೋರಮೌನದಲ್ಲಿ ಆಕೆ ದಿನಗೆಲಸಗಳಲ್ಲಿ ಮಗ್ನಳಾಗಿರುತ್ತಿದ್ದಳು.

ಈ ಎಲ್ಲ ಪ್ರಕರಣಗಳಿಂದ ಕಿಟ್ಟಿಗೆ ಹೊಸ ಹೃದ್ರೋಗವು ಪ್ರಾರಂಭವಾಯಿತು. ಎಲ, ನನ್ನ ಮದುವೆ...! ಮನೆಗೊಬ್ಬ ಗೃಹಿಣಿಯನ್ನು ತರುತ್ತಿದ್ದೇನೆಯೆ...? ಇಂಥ ನಾರೀಮಣಿಯನ್ನು ಮನೆಗೆ ತರುವದು ಒಜ್ಜೆಯ ಕೆಲಸವಲ್ಲವೆ....? ಆಕೆ ನನ್ನ ಬಡತನವನ್ನು ಕಂಡು ಹೀಯಾಳಿಸಿದರೆ ಹೇಗೆ? ತನ್ನ ಗಂಡ ಕಾಮದಾರನೆಂದು ಹೆರವರ ಎದುರು ಹೆಮ್ಮೆ ಕೊಚ್ಚಿ ಬಂದವಳು ತನ್ನ ಮನೆಯಲ್ಲಿಯ ಒಡಕಲು ಭಾಂಡೀಸಾಮಾನು ನೋಡಿ ಬೇಸರು ಪಟ್ಟಾಳೇ....? ಆಕೆಯ ಬಟ್ಟೆಬರೆಗಳ ಖರ್ಚು ಎಷ್ಟಾದೀತು...? ಆಕೆಗೆ ನನ್ನ ತಾಯಿಯ ಮನಸ್ಸನ್ನು ಗೆದ್ದುಬಿಡಲು ಮೊದಲೇ ಸೂಚನೆ ಕೊಡುವದು ಒಳಿತು. ಆಕೇಯೇನು ದಡ್ಡಳಲ್ಲ; ಎರಡು ದಿನಗಳಲ್ಲಿ ತಾಯಿಯ ಮನಸ್ಸನ್ನು ಗೆದ್ದು ಬಿಡುವಳು. ಈಗ ದತ್ತಕದ ಆಸೆಯಿಂದ ಲಗ್ನಕ್ಕೆ ಸಮ್ಮತಿ ಕೊಟ್ಟ ತಾಯಿ ಆಕೆಯ ರೂಪವನ್ನು ನೋಡಿ ಎಷ್ಟು ನಲಿದಾಡುವಳೋ ಏನೋ...? ಇಂದು ತಾಯಿ ತನ್ನನ್ನು ನಾಲ್ಕು ಜನರ ಎದುರಿಗೆ ಕರೆದೊಯ್ದು, 'ಇವನು ನನ್ನ ಮಗ' ಎದು ತೋರಿಸುವಂತೆ ನಾಳೆ ತನ್ನ ಸೊಸೆಯನ್ನೂ ತೋರಿಸಲಿಕ್ಕಿಲ್ಲವೇ?

ಒಮ್ಮೊಮ್ಮೆ ಕಿಟ್ಟಿಗೆ ತನ್ನ ಅತ್ಯಾಸಕ್ಕಿಯೇ ಭಯಾನಕ ರೂಪವನ್ನು ತಳೆದು ಹೆದರಿಸುತ್ತಿತ್ತು... ಎಲ್ಲ, ನಾನು ಇಷ್ಟು ಹಟತೊಟ್ಟು ರತ್ನಾಳನ್ನು ಮದುವೆಯಾಗಲು ಇಚ್ಛಿಸಿದೆನಲ್ಲ, ಇದು ಸರಿಯೇ...? ಹಟತೊಟ್ಟು ಪಡೆದ ವಸ್ತು ಸುಳ್ಳಾದರೆ ಹೆಚ್ಚು ನಗೆಗೀಡಲ್ಲವೇ...? ರತ್ನಾ ನಾನು ಯೋಚಿಸಿದಷ್ಟು ಲಾವಣ್ಯವತಿಯೇ...? ಇನ್ನೊಮ್ಮೆ ವಿವೇಕದೃಷ್ಟಿಯಿಂದ ನೋಡಿ ನಾನು ಹಟತೊಟ್ಟಿದ್ದರೆ ಒಳಿತಾಗುತ್ತಿದ್ದಿಲ್ಲವೇ...? ಹಾಗೆ ಆಕೆಯನ್ನು ನಿಜವಾಗಿ ನೋಡಿದ್ದು ಆ ನರಕಚತುರ್ದಶಿಯ ದಿನ ಮಾತ್ರ, ಮುಂದೆ ನೋಡಿದುದು ಆಕೆ ಮರೆಯಾಗುವದನ್ನು ಮಾತ್ರ...! ಅಯ್ಯೋ, ಇಷ್ಟು ಮುಂದೆಬಿದ್ದು ಸಾಧಿಸಿದ ಕೆಲಸ ನಾಳೆ ಏನು ಪರಿಣಮಿಸುವದೋ ಏನೋ....? ಬಂದದ್ದು ಬರಲಿ... 'ಮೃಷ್ಟಾನ್ನಮಿತರೇ ಜನಾಃ' – ಲಗ್ನ ಮಾಡಿಕೊಳ್ಳುವವನ ಸಂಕಟವನ್ನ ಅವನೇ ಬಲ್ಲ.

ದತ್ತಕದ ಅನಪೇಕ್ಷಿತ ವಿಚಾರದಿಂದತೂ ಕಿಟ್ಟಿ ಬಹಳವೇ ಹರ್ಷಿತನಾಗಿದ್ದನು. ಈ ವಿಚಾರ ತನ್ನ ಮಾಮಾನಲ್ಲಿದ್ದರೂ ಇಷ್ಟು ದಿವಸ ಹೇಗೆ ತನ್ನ ಲಕ್ಷ್ಯಕ್ಕೆ

ಬರಲಿಲ್ಲವೋ ಏನೋ? ಈವರೆಗೆ ಮಾಮಾ ಮತ್ತು ಮಾಮಿ ತನ್ನನ್ನು ಮಗನೆಂದೇ ನೋಡಿರಬಹುದೆಂಬ ವಿಚಾರದಿಂದ ಅವನು ಪುಳಕಿತನಾದನು. ನರಕಚತುದರ್ಶಿಯ ದಿವಸ ಊಟ ತಮ್ಮಲ್ಲಿಯೇ ಆಗಲೆಂಬ ಅವರ ಹಟ, 'ಇದು ನಿನ್ನ ಮನೆಯಲ್ಲವೇನು?' ಎಂದು ರಾಘಪ್ಪ ಕೇಳಿದ ಪ್ರಶ್ನೆ, ಚಂಪಕ್ಕ ಸರಿಯುತ್ತ ಬಂದು ತನ್ನ ತುಪ್ಪದ ಬಟ್ಟಲನ್ನು ತುಂಬಿಸಲು ತೋರಿದ ಉತ್ಸಾಹ – ಇವೆಲ್ಲವುಗಳು ಹೊಸ ಅರ್ಥದಿಂದ ತುಂಬಿಕೊಂಡು ಮಿನುಗತೊಡಗಿದವು.

ಕಿಟ್ಟಿಯ ಎದುರಿಗೆ ಇದೀಗ ಎರಡು ದೊಡ್ಡ ಕೆಲಸಗಳಿದ್ದವು ; ಒಂದು, ಲಗ್ನದ ಖರ್ಚಿನ ವಿಚಾರ ; ಇನ್ನೊಂದು, ರತ್ನಾಗೆ ಕೊನೆಯ ಉಪದೇಶ.

ಎರಡೂ ಕಡೆಯ ಖರ್ಚನ್ನು ಗಂಗವ್ವ ಮಾವನ ಮೇಲೆ ಹೇರುವದು ಕಿಟ್ಟಿಗೆ ತುಸು ಅನುಚಿತವಾಗಿ ಕಂಡರೂ ಕೂಡ, ಸ್ವಂತದ ಖರ್ಚು ಮಾಡದೆ ಹೋಟೆಲಿನಲ್ಲಿ ಫಳಾರ ಹೊಡೆಯುವ ರೆವೆನ್ಯೂ ಡಿಪಾರ್ಟಮೆಂಟಿನ ಖಾಸ ಚಟವನ್ನು ಸರಾಗವಾಗಿ ಮೈಗೂಡಿಸಿದ ಅವನಿಗೆ ಅದು ಒಟ್ಟಿದ ಮೇಲೆ ಹಿತಕರವೇ ಕಂಡಿತು. ಅಲ್ಲದೆ ಸ್ವಂತದ ಮಗನೆಂದೇ ರಾಘಪ್ಪ ತನ್ನನ್ನು ಕಾಣುತ್ತಿದ್ದಾನೆಂದ ಮೇಲೆ ಹಿಗ್ಗಿನಿಂದ ಈ ಖರ್ಚನ್ನೂ ಹಿಡಿಯುತ್ತಾನೆಂಬ ವಿಶ್ವಾಸವೂ ಇದ್ದಿತು. ಆದರೂ ತನ್ನ ಬಳಿ ನಾಲ್ಕೈದು ನೂರು ರೂಪಾಯಿಗಳು ಲಗ್ನದ ಸಮಯಕ್ಕೆ ಖರ್ಚಿಗಾಗಿ ಇರಕೂಡದೇ?... ಬಟ್ಟೆಬರೆ, ಬಂಗಾರ, ಹೆಣ್ಣಿನವರಿಗೆ ಕೊಡುವ ಸೀರೆ, ಸ್ನೇಹಿತರ ಫಳಾರ, ಶಿಪಾಯರ ಖುಶಿ – ಒಂದೇ ಎರಡೇ ! ವರದಕ್ಷಿಣೆ ಬರುವದು ಲಗ್ನದ ದಿವಸವೇ. ಆವರೆಗೆ ಮಾಡುನ ಖರ್ಚಿನ ಬಗೆ ಎಂತು?... ಅವ್ವನಾದರೋ ಮೌನವಾಗಿದ್ದಾಳೆ ! ನಿಜವಾಗಿಯೂ ಆಕೆಯೇ ಇನ್ನು ದ್ವೇಷವನ್ನು ಮರೆತು, ಮುಂದೆ ಬಿದ್ದು, ಈ ಪ್ರಶ್ನೆಯನ್ನು ಎತ್ತಿ ನನಗೆ ಉಪದೇಶ ಕೊಡಬೇಕಿತ್ತು!... ಆದರೆ ಕಚೇರಿಗೆ ಖಾಕೀ ಲಂಡಚಣ್ಣದ ಮೇಲೆ ಕಳಿಸಿದ ಆಕೆ ಈಗ ಬದಲಾಗುತ್ತಾಳೆಯೆ?... ಹೌದು ! ಈ ಲಗ್ನದಲ್ಲಿ ನನಗೆ ಅವಮಾನವಾದರೂ ಆಕೆ ಲೆಕ್ಕಿಸಳು! ನಾನೇ ಮುಂದೆ ಬಿದ್ದು ಈ ಲಗ್ನವನ್ನು ಯಶಸ್ವಿಯಾಗಿ ಮಾಡಿಯೇ ತೋರಿಸಬೇಕು ಆಕೆ ಸಮ್ಮತಿ ಕೊಟ್ಟಿದ್ದಾಳೆಂಬ ಮಾತ್ರಕ್ಕೆ ನಾನು ಸುಮ್ಮನಿದ್ದು, ಪರಾವಲಂಬಿಯಾಗಿ, ಮುಂಧೋರಣವಿಲ್ಲದೆ, ಲಗ್ನ ಮಂಟಪದಲ್ಲಿ ಅವಮಾನಿತನಾಗತಕ್ಕದಲ್ಲ! ನಾನು ಮೋಸಹೋಗತಕ್ಕದಲ್ಲ! ನಾನು ಪ್ರಬುದ್ಧನಾದದ್ದು ಅವ್ವನಿಗೂ ತಿಳಿಯಲೇಬೇಕು.

'ಅವ್ವಾ, ಲಗ್ನದ ಖರ್ಚಿನ ವಿಚಾರಾ ಮಾಡೀಯೇನು?'

'ನಿನ್ನ ಮಾವನಽ ಮಾಡವಲ್ಲನ್ಯಾಕ. ಹೆಣ್ಣಽ ಕೊಡತಾನಂತ !' ಎಂದಳು

ಗಂಗವ್ವ.

'ಹೌದು ಖರೆ ; ಆದರ ಅವ ಎಷ್ಟು ಮಾಡತಾನ? ಗಂಡಿನವರ ಹೆಸರಲೆ ಒಂದು ಪ್ರಸ್ತಾಮಾಡಿಸ್ಯಾನು ; ಚಹಾಫಳಾರಾ ಅಷ್ಟು ನೋಡಿಕೊಂಡಾನು... ಜವಳೀ ಖರೀದಿ, ಭಂಗಾರ ಅದು ಇದು, ಇದರ ವಿಚಾರ ಇಲ್ಲೇನು?'

'ಅದರ ವಿಚಾರ ಲಗ್ನಾ ಮಾಡಿಕೊಳ್ಳೋ ಅವಗ ಇರಬೇಕಪಾ!'

'ಹಾಂ!... ಹೀಂಗ ಅನ್ನು. ಈ ಖರ್ಚು ಅದs ; ಆದರ ಅದನ್ನ ನಾ ನೋಡಿಕೊಳ್ಳಲಿಕ್ಕೆ ಒಲ್ಲೆ, ಅಂತ ಸ್ಪಷ್ಟ ತಿಳಿಸು. ನಾ ಮಾಡೋದು ಮಾಡತೇನಿ!'

'ಅದನ್ನ ನಾ ಯಾಕ ತಿಳಿಸಬೇಕೊ....! ಕಾಣಿಸೂದಿಲ್ಲೇನು ನಿನಗ? ನಾ ಎಲ್ಲಿಂದ ಕೊಡಲಿ?.... ಫಳಿಸತೀದಿ, ತೊಗೊಂಡು ಬಾ.'

ತುಸು ಮೌನ. ಕೊನೆಗೆ ಕಿಟ್ಟಿ ಉಗುಳು ನಂಗಿ ಧೈರ್ಯಮಾಡಿದನು.

'ಮತ್ತ ದೇಸಾಯರ ಕಡೆಗೆ ಒಂದು ಸಾವಿರ ರೂಪಾಯಿ ಇಟ್ಟೀಯಂತಲ್ಲಾ?'

'ಎಲ್ಲೀ ಸಾವಿರ ರೂಪಾಯನೋ? ಏನು ಹುಚ್ಚು ಹೊಕ್ಕದ ನಿನಗ?.... ಎಲ್ಲಿಂದ ಬರತಾವೋ ಸಾವಿರ ರೂಪಾಯಿ?... ಸಾವಿರ ರೂಪಾಯಿ ಇದ್ದರ ಇಂಥಾ ಸೀರೀ ಉಡತಿದ್ದೆನೇನು?... ಶಾಣ್ಯಾ ಆಗಿ, ಬಿಡು....' ಗಂಗವ್ವ ತನ್ನ ಕೆಂಪು ಸೀರೆಯ ಮೇಲೆ ಅಲ್ಲಲ್ಲಿ ಹಾಕಿದ ಗಂಟು ತೋರಿಸಿದಳು.

ಅಂದು ಕಿಟ್ಟಿ ಕಣ್ಮರೆಯಾದೊಡನೆ ಗಂಗವ್ವ ದೇಸಾಯರತ್ತ ಹೋಗಿ, ಕಿಟ್ಟಿ ಕೇಳಿದ ಪ್ರಶ್ನೆಯನ್ನೂ ಅದಕ್ಕೆ ತಾನು ಕೊಟ್ಟ ಉತ್ತರವನ್ನೂ ಹೇಳಿದಳು. 'ನಿನ್ನ ಕಡೆಗೆ ಬಂದು ಕೇಳಿದರ, ನಿಮ್ಮವ್ವ ನನ್ನ ಕಡೆಗೆ ದುಡ್ಡು ಇಟ್ಟಿಲ್ಲಾ, ಅಂತ ಝುಳಝುಳ ಹೇಳು' ಎಂದು ವಚನ ಪಡೆದು ಬಂದಳು.

ಕಿಟ್ಟಿಯು ತನ್ನ ಭಾವೀ ಪತ್ನಿಯನ್ನು ಏಕಾಂತದಲ್ಲಿ ಕಾಣುವ ಹೊಂಚಿನಿಂದ ಮಾನವ ಮನಗೆ ನಾಲ್ಕಾರು ಬಾರಿ ಬಂದನು. ಬಂದ ಬಾರಿಯೊಮ್ಮೆ ಚಹಾ ಫಳಾರವಾಗುತ್ತಿತ್ತಾದರೂ ರತ್ನಾ ಏಕಾಂತದಲ್ಲಿ ಸಿಕ್ಕಲಿಲ್ಲ. ಆದರೆ ತುಸುವೇ ಕಾಣಿಸಿಕೊಂಡಳು ಮಾತ್ರ. ಇದೀಗ ರತ್ನಾ ಕಚ್ಚೆ ಹಾಕಿ ಸೀರೆ ಉಟ್ಟುಕೊಳ್ಳತೊಡಗಿದ್ದಳು. ಒಮ್ಮೆ ಮೆಹಬೂಬಜಾನ ಆಕೆಗೆ 'ಗಂಧರ್ವ ಕಚ್ಚೆಯನ್ನು ಹಾಕಲು ಕಲಿಸಿದ್ದಳು. ಆದರೆ ಅನನುಭವದ ಮೂಲಕ ಸರಿಯಾದ ಆಕಾರದಲ್ಲಿ ಹಾಗೆ ಸೀರೆ ಉಡಲು ರತ್ನಾಗೆ ಬರುತ್ತಿರಲಿಲ್ಲ. ಹೀಗೆ ಸೊಟ್ಟಪಟ್ಟ ಸೀರೆಯುಟ್ಟಾಗ ಕಿಟ್ಟಿ ನೋಡಿ ಆಕೆ ಕುಂಟುತ್ತಿರುವಳೋ ಎಂಬ ಸಂಶಯಪಟ್ಟನು. ಅವನ ಎದೆ ಧಸಕ್ಕೆಂದಿತು. ಆದರೆ ವಿಷಯ ತಿಳಿದಮೇಲೆ ಈ ವಿಕಾರಕಲ್ಪನೆ ಮರೆಯಾಯಿತು. ಒಮ್ಮೆ ಕಣ್ಣು ತುಸು ಮೆಳ್ಳವಿವೆಯೇನೋ ಎಂಬ ಸಂದೇಹ ;

ಒಮ್ಮೆ ಮಾತನಾಡುವಾಗ ಉಗ್ಗುತ್ತಾಳೋ ಏನೋ ಎಂಬ ಕಲ್ಪನೆ. ಆಕೆಯ ಸೌಂದರ್ಯದ ಬಗ್ಗೆಯೂ ಒಮ್ಮೊಮ್ಮೆ ಸಂದೇಹ ಬರುತ್ತಿತ್ತು. ಇತ್ತಿತ್ತ ಲಗ್ನ ಗೊತ್ತಾದ ಹೆಮ್ಮೆಯ ಮೂಲಕವೋ ಏನೋ ಮೈಕೈತುಂಬಿಕೊಂಡು ರತ್ನಾ ಗೌರಿಯ ಹಾಗೆ ಕಾಣಿಸುತ್ತಿದ್ದಳು. ಆದರೆ ಕಿಟ್ಟಗೆ ಸಂದೇಹ, ಈ ಮೈಬಣ್ಣವು ನಿಜವಾದದ್ದೇ ಅಥವಾ ಹಚ್ಚಿ ಕೊಂಡದ್ದೇ...? ಇದರಲ್ಲಿಯೂ ಮೆಹಬೂಬಜಾನಳ ಶಿಕ್ಷಣದ ಪರಿಣಾಮವಾಗಿದ್ದರೆ ಹೇಗೆ...? ಆದರೆ ಕೊನೆಗೆ ತನ್ನ ಸಂಶಯಗಳಿಗೆ ತಾನೇ ಬೇಸತ್ತು, 'ಬಂದದ್ದು ಬರಲಿ' ಎಂದು ಬುದ್ಧಿಯನ್ನು ಸ್ತಿಮಿತಕ್ಕೆ ತಂದುಕೊಂಡನು.

ಕೊನೆಗೊಮ್ಮೆ ಆಕೆಯ ಭೇಟಿಯ ಸುಯೋಗ ದೊರಕಿತು. ಕಿಟ್ಟಿಯ ಸುಳಿದಾಟಗಳ ವಾಸನೆಯನ್ನು ಹಿಡಿದು ರಸಿಕ ರಾಘಪ್ಪನು ಅದರ ಬಗ್ಗೆ ತನ್ನ ಹೆಂಡತಿಗೆ ಸೂಕ್ಷ್ಮವಾಗಿ ಸೂಚನೆ ಕೊಟ್ಟನು. ಚಂಪಕ್ಕನಿಗೆ ಭಯ ; ಇಂಥ ವಿಷಯಗಳಲ್ಲಿ ಚಂಪಕ್ಕನಿಗೆ ಬಹಳೇ ಭಯ. ಕೊನೆಗೊಮ್ಮೆ ಕಿಟ್ಟಿ ದೂರದಿಂದ ಬರುತ್ತಿದ್ದುದನ್ನು ಕಂಡು ರತ್ನಾಗೆ 'ನಿನ್ನ ಗಂಡ ನಿನಗ ಏನೋ ಹೇಳಬೇಕಂತ ಮಾಡ್ಯಾನ ಕಾಣಿಸತದ. ನಾನು ಹಿತ್ತಲದಾಗ ಇರತೇನಿ, ಹೆದರಬ್ಯಾಡಾ. ನೀನು ಬಹಳ ಮಾತಾಡಬ್ಯಾಡ. ಆದರೆ ಜೋಕೆ!' ಎಂದು ಹೇಳಿ, ಕಿವಿಯಲ್ಲಿ ಹೇಳತಕ್ಕದ್ದನ್ನು ಹೇಳಿ, ಹಿತ್ತಲದತ್ತ ಹೋದಳು. ರತ್ನಾ ವೃತ್ತಪತ್ರದೊಡನೆ ಪಡಸಾಲೆಯ ಮಗ್ಗುಲದ ಕೋಣೆಯಲ್ಲಿ ಹೋಗಿ ಕುಳಿತಳು.

ಕಿಟ್ಟಿ ಇಂತು ಏಕಾಂತವಾಗಿ ವೃತ್ತಪತ್ರದಲ್ಲಿ ಮಗ್ನಳಾಗಿ ಕುಳಿತ ನಲ್ಲೆಯನ್ನು ಕಂಡವನೇ ಆಸೆಯಿಂದಲೂ ಭಯದಿಂದಲೂ ಬೆವೆತನು. ಯಾವ ರಸಿಕ ಮಾತುಗಳೂ ನೆನಪಾಗದೆ, 'ಅಪ್ಪ ಇಲ್ಲೇನು?' ಎಂದು ಕೇಳಿದನು.

ಅವನನ್ನು ಮೊದಲ ಬಾರಿ ಕಂಡಂತೆ ರತ್ನಾ ಗಡಬಡಿಸಿ ಎದ್ದಳು. 'ಇಲ್ಲ' ಎಂದಳು.

'ಅವ್ವ ಎಲ್ಲಿದ್ದಾಳ?'

'ಹಿತ್ತಲದಾಗ ಕರಿಬೇವು ಹರೀತಾಳ'.

ಏಕಾಂತದ ಮೂಲಕ ಇಬ್ಬರೂ ಅಧೀರರಾಗಿ ತುಸು ಹೊತ್ತು ಮೌನವು ವ್ಯಾಪಿಸಿತು.

'ನಮ್ಮ ಅವ್ವನ್ನ ನೋಡೀಯೇನು?'

'ಇಲ್ಲ.'

'ನಿಮ್ಮ ಅಪ್ಪ–ಅವ್ವ ಏನಃ ಅನ್ನಲಿ ; ನಮ್ಮ ಅವ್ವನಂಥಾ ಉದಾರ ಹೆಂಗಸು ಜಗತ್ತಿನ್ಯಾಗಃ ಇಲ್ಲ.'

'ತಮ್ಮ ತಮ್ಮ ಅವ್ವಂದಿರು ಎಲ್ಲಾರಿಗೂ ಹಂಗs.'

'ಅಲ್ಲಲ್ಲ, ನಮ್ಮ ಅವ್ವ ಅಂದರ ದೇವತಾ ಇದ್ದ ಹಂಗ. ಈ ಲಗ್ನಕ್ಕ ಆಕಿ ಒಪ್ಪಿದ್ದು ಎಷ್ಟು ದೊಡ್ಡ ಮನಸು ಅಂತ ನಿನಗ ಕಲ್ಪನಾ ಅದs ಏನು?'

'ಇಲ್ಲ'

'ನಾಳೆ ಮನೀಗೇ ಬಂದೀ ಅಂದರ, ನೀನು ಆಕೀನ್ನ ಸಂತೋಷದಾಗ ಇಡಬೇಕು. ನೀನು ಆಕಿ ಸೇವಾ ಮಾಡಿದರ ನನಗ ಸಂತೋಷ ಆಗತದ.'

'ಮತ್ತ ನಿಮ್ಮ ಸೇವಾ ಯಾರು ಮಾಡಬೇಕು?'

'ನಡನಭಡ್ನದೂ ಮಾಡಬೇಕು, ಆಕೀದೂ ಮಾಡಬೇಕು. ಆದರ ಆಕೀದು ಮುಖ್ಯ. ಆಕೀನ್ನ ಒಲಿಸಿದೀ ಅಂದರ ನಿನಗೂ ಸುಖಾ ಆಗತದ.'

'ನಾವು ಮಾಡೋ ಅಷ್ಟು ಮಾಡೇ ಮಾಡತೀವಿ.'

'ನೀನು ಮಾಡತೀದಿ. ಆದರ ನನ್ನ ಮನಸಿನ ಸಮಾಧಾನಕ್ಕಂತ ಹೇಳಿದೆ.'

'ಅವರಿಗೂ ಅಷ್ಟು ಹೇಳರಿ ; ಸೊಸಿನ್ನ ಕಾಡಿ ಗೋಳಹೊಯ್ಕೋಬ್ಯಾಡ, ಅಂತ.'

ಕಿಟ್ಟಿ ಅಪ್ರತಿಭನಾದನು. ತುಸು ಬೇಸರದಿಂದ ಧ್ವನಿ ಏರಿಸಿ,

'ಹೂಂ ಆಕೀ ಸೇವಾ ಮಾಡತೇನಿ, ಅಂತ ಇಷ್ಟು ಸ್ವಚ್ಛ ಹೇಳಿದರ ನಿನ್ನದೇನು ಗಂಟು ಹೋಗತದ?' ಎಂದನು.

'ಹೂಂ, ಸೇವಾ ಮಾಡತೇನಿ !' ಎಂದಿಷ್ಟು ಅಂದವಳೇ ರತ್ನಾ ಬಿಕ್ಕಳಿಸಿದಳು. ಕಣ್ಣು ನೀರಿನಿಂದ ತುಂಬಿ ಕೆನ್ನೆಗುಂಟ ಹರಿದವು. ಸೆರಗಿನ ಚುಂಗಿನಿಂದ ಕನ್ನೆಯನ್ನು ಒರೆಸಿಕೊಳ್ಳತೊಡಗಿದಳು.

'ಇಲ್ಲಾ, ನಿನ್ನ ಮನಸ್ಸು ನೋಯಿಸಲಿಕ್ಕೆ ಈ ಮಾತು ಆಡಲಿಲ್ಲ ; ನಿನ್ನ ಹಿತಕ್ಕs...'

'ಯಾಕ...? ಅತ್ತೀ ಸೇವಾ ಮಾಡಬ್ಯಾಡ ಅಂತ ನಮ್ಮ ಅಪ್ಪಾ-ಅವ್ವಾ ಹೇಳಿಕಳಿಸಿರೂದಿಲ್ಲಾ !' ಎಂದು ಇನ್ನೊಮ್ಮೆ ಬಿಕ್ಕಳಿಸಿದಳು.

ಕಿಟ್ಟಿಗೆ ಸಮಾಧಾನವಾಯಿತು ; ರತ್ನಾ ಸೇವೆಗೆ ಸಿದ್ಧಳು ; ಮೂಢನಾದ ತಾನು ಪ್ರಶ್ನೆ ಕೇಳಿ ಸಂಶಯಪಟ್ಟು, ಆಕೆಯ ನಿಷ್ಕಲ್ಮಷ ಮನಸ್ಸಿಗೆ ಅವಮಾನಮಾಡಿದೆನೆಂದು ಮನವರಿಕೆಯಾಯಿತು. ಆನಂದದ ಉಕ್ಕಿನಲ್ಲಿ ಆಕೆಯ ಕಂಬನಿ ಒರೆಸಲು ಕೈ ಮುಂದೆ ಚಾಚಿದನು...

ಅವ್ವ ತನ್ನ ಕಿವಿಯಲ್ಲಿ ಉಸುರಿದ್ದ ಸೂಚನೆಯ ಕಾಲ ಬಂದಿತು. ರತ್ನಾ ಅಷ್ಟಕ್ಕೆ ಹಿಂದೆ ಸರಿದು ಒಳಗೆ ಹೊರಟುಹೋದಳು. ಕಿಟ್ಟಿಯ ಕೈಗೆ ಆಕೆಯ

ಬೆಚ್ಚನೆಯ ಕಂಬನಿ ಅಂಟಿಕೊಂಡಿತ್ತು. ಅದನ್ನು ತುಟಿಗೆ ಒರೆಸಿಕೊಂಡನು.

ಕಿಟ್ಟಿಯು ತನ್ನ ಮುಂದಿನ ತಯಾರಿಗೆ ತೊಡಗಿದನು. ತಾಯಿ ಎಷ್ಟು ನಿರುತ್ಸಾಹ ತಳೆದರೂ ತನ್ನ ಲಗ್ನದ ವಿಜೃಂಭಣೆಗ ಯಾವ ಕುಂದೂ ಬರಗೊಡದೆಂಬ ಹಟ ಅವನಲ್ಲಿ ಹೊಕ್ಕಿತ್ತು. ಈಗ ಒಂದು ತಿಂಗಳ ಕೆಳಗೆ ದಲಾಲೀ ವ್ಯಾಪಾರಸ್ಥರಾದ ಓರ್ವ ಶೆಟ್ಟರ ಗುರುತಾಗಿತ್ತು. ಅವರ ಒಂದು ಕೆಲಸಕ್ಕೆ ಕಿಟ್ಟಿಗೆ ಇಪ್ಪತ್ತು ರೂಪಾಯಿ ಸಂದಿದ್ದವು. ನೇರವಾಗಿ ಕಿಟ್ಟಿ ಅವರ ಅಂಗಡಿಗೆ ಬಂದನು. ಅವರು ಆದರದಿಂದ ಅವನನ್ನು ಬರಮಾಡಿಕೊಂಡು ಅರ್ಧ ವ್ಯವಹಾರದತ್ತ, ಆರ್ಧ ತೆಕ್ಕೆಗೆ ಆತು ಕುಳಿತ ಈ 'ಪೀಡಾ'ದ ಉಪಚಾರದತ್ತ ಲಕ್ಷ್ಯ ಕೊಡುತ್ತ ಕುಳಿತರು. ಕಿಟ್ಟಿ ಕೂಡಲೇ ಪ್ರಸ್ತಾಪವೆತ್ತಿ, ಒಂದು ಸಾವಿರ ಸಾಲ ಬೇಡಿದನು, ಒಂದು ಸಾವಿರ ಬೇಡಿದರೆ ನಾಲ್ಕೈದು ನೂರಾದರೂ ಸಿಕ್ಕಾವೆಂಬ ತರ್ಕದಿಂದ. ಶೆಟ್ಟರು ಅವನ ಮೇಲೆಯೇ ತಿರುಗಿಬಿದ್ದರು. 'ಏನು ಸಾಹೇಬರs, ಬೆಲ್ಲದ ಟ್ರಾನ್ಸಪೋರ್ಟಿಗೆ ನೀವs ಲಾಯಸೆನ್ಸ ಕೊಟ್ಟರಿ. ಇದ್ದ ಬಂಡವಲು ಎಲ್ಲಾ ಬೆಲ್ಲದಾಗ ಹಾಕಿ ಕೂತೇವಿ. ಇನ್ನ ಒಂದು ತಿಂಗಳ ತಡೀರಿ ; ಏನಿಲ್ಲ ಅಂದರೂ ಎರಡು ನೂರು ಅರs ಕೊಟ್ಟs ತೀರತೇವಿ' ಎಂದು ತನ್ನ ವ್ಯಾವಹಾರಿಕ ಪೇಚನ್ನು ಹಾಕಿದನು. ಕಿಟ್ಟಿಗೆ ಅವಮರ್ಯಾದೆ ಆದಂತೆ ಆಯಿತು. ಆದರೆ ಶೆಟ್ಟರು ಇತರ ಉಪಚಾರಕ್ಕೆ ಕಡಿಮೆ ಮಾಡಲಿಲ್ಲ. ಬ್ರೆಡ್ಡು, ಬೆಣ್ಣೆ, ಚಹ ಎಲ್ಲ ಸಲೀಸಾಗಿ ಆದವು. ತಿರುಗಿ ಬರುವಾಗ, 'ನಮ್ಮನ್ನೂ ಲಗ್ನಕ್ಕೆ ಕರೀತಿರಿಲ್ಲೋ, ಸಾಹೇಬರs?' ಎಂದು ಶೆಟ್ಟಿ ಕೇಳಿದ್ದಕ್ಕೆ. 'ನೀವು ಇರದs ನಮ್ಮ ಲಗ್ನ ಸಾಗಿತು ಹೆಂಗರೀ ?' ಎಂದು ಕಿಟ್ಟಿ ಹೇಳಿದ. 'ಏನೋರೆಪಾ, ಕರದರs ಅಷ್ಟು ಬಂದು ಉಡುಗೊರಿ ಮಾಡಿ ಹೋಗತೇವಿ ; ಇಲ್ಲಾ ಕಚೇರ್ಯಾಗಂತೂ ನೀವು ಭೇಟಿ ಆಗೇ ಆಗತೀರಲ್ಲಾ; ಅಷ್ಟರಮ್ಯಾಲs ಸಮಾಧಾನ ಹಚಿಗೊಂಡಾ' ಎಂದು ಶೆಟ್ಟರು ನಗೆಯಾಡಿದರು. ಪೆಟ್ಟು ಮರ್ಮಕ್ಕೆ ತಾಕಿತು.

ಇನ್ನೆರಡು ಜಾಗೆಗಳಿದ್ದವು. ಆದರೆ ಶೆಟ್ಟಿಯತೆ ಅವರೂ ಮಾತಾಡಿದರೆ ಹೇಗೆ, ಎಂಬ ಅಳುಕಿನಿಂದ ಕಿಟ್ಟಿ ಅವರಲ್ಲಿ ಹೋಗುವದನ್ನು ಮುಂದೆಹಾಕತೊಡಗಿದನು. ಆದರೆ ಮನಸ್ಸಿಗೆ ದುಡ್ಡಿನ ಚಿಂತೆ ಭಾರವಾಗತೊಡಗಿತು. ಒಂದು ದಿನ ತನ್ನ ಚಿಂತೆಗೆ ತಾನೇ ಬೇಸತ್ತು ದೇಸಾಯರತ್ತ ಬಂದನು. ದೇಸಾಯರ ಎದುರು ತನ್ನ ಸಮಸ್ಯೆಯನ್ನ ಮುಂದಿಟ್ಟನು.

'ಅದs !..... ದುಡ್ಡಿನದು ಏನು ವ್ಯವಸ್ಥಾ ಮಾಡಿದಿ ಅಂತ ಕೇಳಲಿಕ್ಕೆ ನಾನs ನಿನ್ನ ಕರೆಸೊ ಅವ ಇದ್ದೆ. ಆದರೆ ಮೊದಲ ಯಾದೀ ಆಗೂ ಕೆಲಸ

ಮುಗೀಲಿ ಅಂತ ಸುಮ್ಮನಿದ್ದೆ' ಎಂದರು ದೇಸಾಯರು. ಇದರಮೇಲೆ ತಾನು ಮುಖ್ಯ ವಿಷಯಕ್ಕೆ ಬಾರದೆ ಗತ್ಯಂತರವಿಲ್ಲೆಂದು ಕಿಟ್ಟಿ ಮಾತು ತೆಗೆದನು.

'ಗೋಪಣ್ಣಾ, ಅವ್ವ ಇಷ್ಟು ದಿವಸದ ದ್ವೇಷಾನ ಈಗಾದರೂ ಬಿಡಬಾರದೇನು?... ಲಗ್ನದ ಖರ್ಚಿನ ದಶಿಂದ ಯಾಕ, ಏನೂ, ಸ್ವಲ್ಪೂ ಕೇಳಬಾರದೇನು?'

'ಆಕಿ ಕೇಳದಿದ್ದರ ನೀನು ಕೇಳಲ್ಲಾ ! ಯಾಕ, ತಾಯಿನ್ನ ಕೇಳಲಿಕ್ಕೆ ನಿನಗ ನಾಚಿಗೇನು?'

'ಕೇಳಿದೆ ; ಆದರ ನನ್ನ ಕಡಿಗೆ ಒಂದು ಪೈನೂ ಇಲ್ಲಾ ಅಂತಾಳ. ಈಗ ಈ ಪ್ರಸಂಗದಾಗ ಹೀಂಗ ಅನ್ನೋದನ್ನ ಕೇಳಿದರ ನಮಗ ಏನೋ ಸಂಶಯ ಬರುತsದ. ನಮ್ಮ ತಂದೀ ಕಾಲಕ್ಕ ಎಷ್ಟು ಶ್ರೀಮಂತಿಕಿ ಇತ್ತು ಅಂತ ಎಲ್ಲಾರು ಮಾತಾಡತಾರ... ಅದಷ್ಟೂ ಹೋಯಿತೇನು?... ಸ್ವಲ್ಪೂ ಉಳಿದಿರಲಿಕ್ಕಿಲ್ಲೇನು?... ಕನಿಷ್ಠ ಒಂದು ಸಾವಿರ ರೂಪಾಯಿ ಅರs....'

ದೇಸಾಯರು ತಮ್ಮ ಮುಖಲಕ್ಷಣವನ್ನು ಸ್ವಲ್ಪೂ ಬದಲಿಸದೆ, 'ನಿಮ್ಮ ಅವ್ವನ ಕೇಳು, ಇದ್ದರ ಕೊಡತಾಳ. ಇನ್ನ ನಿನಗ ಬೇಕಾದರ ನಾನು ಎರುಡನೂರು ಮುನ್ನೂರು ರೂಪಾಯಿ ಕೊಡತೇನಿ. ನಿನ್ನ ವರದಕ್ಷಿಣಿ ಬಂದ ಮ್ಯಾಲ ಮುಟ್ಟಿಸು.'

'ನಿಮ್ಮಂಥಾ ಹಿರೇರು ಬೆಂಬಲಕ್ಕ ಇದ್ದೀರಿ ಅನ್ನೋ ಧೈರ್ಯ ಅದs ನನಗ. ಆದರ ನಮ್ಮ ಮನ್ಯಾಗ ಆಗೋ ಲಗ್ನ ನನ್ನದು ಒಂದs. ಅದಕ್ಕೂ ಅವ್ವ ಮನಿ–ಖರ್ಚು ಮಾಡಿಸಗೊಡಬಾರದು ಅಂದರ ನನಗ ವ್ಯಸನ ಆಗತದ. ಹಂಗ ನೋಡಿದರ ಆಕೀಗೇ ಉಮೇದು ಹೆಚ್ಚು ಇರಬೇಕು... ಆಕೀನಾರ ನನ್ನ ಕಡೆ ಒಂದೂ ಪೈನೂ ಇಲ್ಲಾ ಅಂತಾಳ !.... ಎಷ್ಟು ಇತ್ತಂತs !.... ಒಂದು ಸಾವಿರನೂ ಉಳೀಬಾರದು ಅಂದರ ನನ್ನ ಖೋಟ್ಟಿ ನಶೀಬ !'

'ಏನರs ಉಳಿದsದೇನು ಕೇಳಲ್ಲಾ ನಿಮ್ಮ ಅವ್ವನ್ನ. ಯಾಕ, ಕೇಳಲಿಕ್ಕೆ ನಾಚಿಗೆ ಏನು? ನೀ ಸಾಹೇಬ ಆದರ ಕಚೇರ್ಯಾಗ ಆದಿ....' ಎಂದರು ದೇಸಾಯರು ತುಸು ಕ್ರುದ್ಧರಾಗಿ.

ಕಿಟ್ಟಿಯ ತುದಿನಾಲಿಗೆಯವರೆಗೆ ಬಂದಿತ್ತು, 'ನಮ್ಮವ್ವ ನಿಮ್ಮ ಕಡೆ ದುಡ್ಡು ಇಟ್ಟಾಳೇನು?' ಎಂಬ ಪ್ರಶ್ನೆ. ಆದರೆ ಕೇಳುವ ಧೈರ್ಯವಾಗಲಿಲ್ಲ. ಅಲ್ಲದೆ ದೇಸಾಯರಿಂದಲೇ ಲಗ್ನ ಕೈಗೂಡಿದ್ದರಿಂದಲೇ ಈಗಲೇ ಖಂಡತುಂಡ ಮಾತಾಡುವದೂ ಸರಿಯಲ್ಲ.

ಕಿಟ್ಟಿ ಹೊರಡುವಾಗ ದೇಸಾಯರು ತೆಕ್ಕೆಗೆ ಇನ್ನಷ್ಟು ಒರಗಿ, 'ಹಂಗ

ಕೇಳಿದರ, ನೀನs ಕನ್ಯಾ ಗೊತ್ತು ಮಾಡಿಕೊಂಡೀ ; ನೀನs ರೊಕ್ಕಾ ಖರ್ಚು ಮಾಡು, ಅಂತ ನಾವು ಅನ್ನೋ ಅವರು. ಅದರ ನಮ್ಮ ಹುಡುಗಾ ಅನ್ನೋ ಅಭಿಮಾನ ನಮಗ ಇನ್ನೂ ಹೋಗಿಲ್ಲಾ, ಇನ್ನು ಮುಂದೂ ಹೋಗಲಿಕ್ಕಿಲ್ಲ.... ನೀವು ನಡಕೊಂಡರs'[೧] ಎಂದು ಕೊನೆಯ ಪದವನ್ನು ಜೋಡಿಸಿದರು.

ದೇಸಾಯರಲ್ಲಿ ಈ ಕ್ರೂರತನವಿದ್ದೀತೆಂದು ಕಿಟ್ಟಿಗೆ ಅನಿಸಿರಲಿಲ್ಲ. ದುಡ್ಡಿನ ವಿಷಯದಲ್ಲಿ ಎಲ್ಲ ಜಗತ್ತೂ ಒಂದೇ ಎಂದುಕೊಂಡು ಚೆಂದಿಗೆದ್ದವರಂತೆ[೨] ಹೊರಗೆ ಬಂದನು. 'ಅಬ್ಬಾ ! ನನ್ನ ಮನೆಯ ದುಡ್ಡನ್ನು ನಾನು ಬೇಡಲು ಪರಸ್ವಾಧೀನವೇ ?....' ಎಂದು ಕನಲಿದನು.

* * *

ಯಾದಿ ಮಾಡುವ ಕಾಲಕ್ಕೆ ಕನ್ಯಾ ತೋರಿಸುವ ಶಾಸ್ತ್ರವೂ ದೇಸಾಯರ ಮನೆಯಲ್ಲಿ ಆಯಿತು. ಓಣಿಯ ನಾಲ್ಕು ಸಭ್ಯಗೃಹಸ್ಥರೂ ಬಂದಿದ್ದರು. ಗಂಗವ್ವ ತಾನು ಕನ್ಯಾ ನೋಡಬಾರದೆಂಬ ಪಣತೊಟ್ಟು ಹೊರಗೇ ಕುಳಿತಳು. ಆದರೆ ರತ್ನಾ ಬಂದು ನಮಸ್ಕಾರ ಮಾಡಿದಾಗ ಕದ್ದು ಒಮ್ಮೆಯೇ ನೋಡಿ, ಪಣ ಮುರಿದವರಂತೆ ಮತ್ತೆ ಮುಖ ಹೊರಳಿಸಿದಳು. ಆದರೆ ಅಷ್ಟೇ ನೋಟಕ್ಕೆ ಗೌರಿಯಂತಿದ್ದ ರತ್ನಾಳ ಕಾಂತಿಯ ಮುಸುಕುಚಿತ್ರವು ಗಂಗವ್ವನ ಎದೆಯಲ್ಲಿ ಮೂಡಿತು. ಅಷ್ಟೇ ಸಮಾಧಾನ – ನೋಡಲಿಕ್ಕಂತು ಚೆಲುವೆ ; ಒಳ್ಳೆಯವಳೂ ಕಾಣುತ್ತಾಳೆ... ಏನೇ ಇದ್ದರೂ ಏನೇ ಇರಲಿ....

ದೇಸಾಯರು ಹೇಳಿದ ಎಲ್ಲ ಕರಾರುಗಳಿಗೂ ರಾಘಪ್ಪನು ಮುಗುಳುನಗೆ ನಗುತ್ತ ಒಪ್ಪಿಕೊಳ್ಳುತ್ತಿದ್ದನು. ದೇಸಾಯರು ದತ್ತಕದ ಮಾತು ಎತ್ತಿದೊಡನೆ ತನ್ನ ಕುಲದೇವತೆ ಶ್ರೀವೆಂಕಟೇಶನ ಆಣೆ ತೆಗೆದುಕೊಂಡು ಪ್ರಮಾಣ ಮಾಡಿದನು. ಕಿಟ್ಟಿಯ ಕಡೆಯಿಂದಲೂ ಸರ್ವರ ಸಮಕ್ಷಮವಾಗಿ ತಾನು ದತ್ತಕದ ನಂತರವೂ ತಾಯಿಯೊಡನೆ ಬೇರೆ ಮನೆ ಮಾಡುವೆನೆಂಬ ಮಾತೂ ಆಡಿಸಲ್ಪಟ್ಟಿತು. ಓಣಿಯವರ ಎದುರು ತಮ್ಮ ಮನೆತನದ ಗುಪಿತಗಳು ತೀರ ಸ್ಪಷ್ಟವಾಗಿ ಚರ್ಚಿಸಲ್ಪಟ್ಟದ್ದರಿಂದಲೂ, ಪರ್ಯಾಯದಿಂದ ತನ್ನ ಬಗ್ಗೆ ಬಂದ ಆತ್ಮವಿಶ್ವಾಸದ ಸೂಚನೆಯ ಮೂಲಕವೂ ಕಿಟ್ಟಿಗೆ ಅವಮರ್ಯಾದೆ ಎನಿಸಿತು. ಆದರೆ ಅದು ಅನಪೇಕ್ಷಿತವಿರಲಿಲ್ಲ. ಸದ್ಯ ಕೆಲಸವಂತೂ ಮುಗಿಯಿತಲ್ಲ, ಎಂದು ಸಂತಸಪಟ್ಟನು.

ದಿನ ಕಳೆದಂತೆಲ್ಲ ದುಡ್ಡಿನ ಚಿಂತೆ ಹೆಚ್ಚಾಗತೊಡಗಿತು. ಈ ಚಂಚಲ

---

೧. ವಿಶ್ವಾಸದಿಂದ. ೨. ಸಿಟ್ಟಿಗೇಳು.

ಮನಸ್ಸಿನ ಅಸ್ಥಿರ ಪ್ರಕೃತಿಯ ಬಾಲಭಾವವನ್ನು ದಾಟಿದ ಆಸೆಬುರುಕ ಸಾಹೇಬನಿಗೆ ಇಷ್ಟು ದೊಡ್ಡ ಗಂಟನ್ನು ಕೊಡಲಿಕ್ಕೆ 'ಪಾರ್ಟಿ' ಜನರಿಗೆ ಸಂದೇಹ. ಅದಕ್ಕಾಗಿ ಏನಾದರೊಂಡ ನೆವ ಹೇಳುವರು. ಅಲ್ಲದೆ ಆದ ಮನಸ್ತಾಪವನ್ನು ಬ್ರೆಡ್–ಬೆಣ್ಣೆಯಿಂದಾಗಲೀ ಇಲ್ಲ ಕೃಷ್ಣಪ್ಪನ ದೋಸೆಯಿಂದಾಗಲೀ ಕಳೆಯಬಹುದೆಂಬ ವಾಹಿನಿ ಕಿಟ್ಟಿಯ ಬಗ್ಗೆ ಆ ವಿಶಿಷ್ಟ ಜನರಲ್ಲಿ ಹಬ್ಬಿಬಿಟ್ಟಿತ್ತು. ಅದು ಅನುಭವಸಿದ್ಧ ಮಾತು. ಹೀಗಾಗಿ ಕಿಟ್ಟಿಗೆ ತನ್ನ 'ದಫ್ತರ ಬಾಬಿ'ನ ಹೊರತಾಗಿ ಇನ್ನೊಂದು ಪೈ ಹುಟ್ಟಲಿಲ್ಲ.

ಲಗ್ನ ಒಂದೆರಡು ವಾರವಿದ್ದಾಗ ಒಮ್ಮೆ ಕಛೇರಿಯಲ್ಲಿ ಕಿಟ್ಟಿ ಟೇಬಲ್ ಮೇಲೆ ಮೊಳಕೈಯೂರಿ ಹಸ್ತಗಳಲ್ಲಿ ತಲೆಯ ಭಾರವನ್ನು ಆನಿಸಿ ಒರಗಗಿದ್ದನು. ಅವನನ್ನು ಜಾರ್ಜಿ ಎಬ್ಬಿಸಿ ಚಹಕ್ಕೆ ಕರೆದುಕೊಂಡು ಹೋದನು. ಎಂದೂ ಮಧ್ಯಾಹ್ನ ನಾಲ್ಕರ ಒಳಗೆ ಚಹ ಕುಡಿಯದ ಜಾರ್ಜಿ ಇಂದೇಕೆ ಚಹಕ್ಕೆ ತಾನಾಗಿಯೇ ಬಂದನೋ, ಎಂದು ಕಿಟ್ಟಿಗೆ ಅಚ್ಚರಿ. ಕ್ಯಾಂಟೀನದ ದಾರಿಯ ಬಳಿ ಜಾರ್ಜಿ ಕಿಟ್ಟಿಯ ಕೊರಳಲ್ಲಿ ಕೈ ಹಾಕಿ, 'Short of cash?' ಎಂದು ಕೇಳಿದನು.

ಕಿಟ್ಟಿಯ ಕಣ್ಣಲ್ಲಿ ನೀರು ಊರದೆ ಬಹಳ ದಿನಗಳಾಗಿದ್ದವು. ಕನಲುತ್ತಿದ್ದನು; ಸಹಿಸುತ್ತಿದ್ದನು ; ಲತ್ತೆ ತಿನ್ನುತ್ತಿದ್ದನು ; ಅವಡುಗಚ್ಚುತ್ತಿದ್ದನು ; ಆದರೆ ಮೂರು ವರ್ಷಗಳಲ್ಲಿ ಕಣ್ಣಿನಲ್ಲಿ ನೀರು ಊರಲಿಲ್ಲ ; ಅಳುವುದಕ್ಕೂ ದೇವರ ಕೃಪೆ ಬೇಕೆಂದು ಒಬ್ಬ ಆಂಗ್ಲ ಕವಿ ಹೇಳಿಲ್ಲವೇ ?

ಅಂದೇ ಜಾರ್ಜಿ ಒಂದು ಕಡೆಗೆ ಕರೆದೊಯ್ದು ಐದುನೂರು ರೂಪಾಯಿ ರೋಖ ಸಾಲ ಕೊಡಿಸಿದನು.

* * * *

## ೧೯ : ಮಂಗಲವಾದ್ಯಗಳಲ್ಲಿ ಒಂದು ಅಪಸ್ವರ

ಲಗ್ನದ ಮನೆಯಲ್ಲಿ ಮೆಹಬೂಬಜಾನಳಿಗೆ ಬಹಳ ತೊಂದರೆಗಿಟ್ಟುಕೊಂಡು ಬಿಟ್ಟಿತ್ತು. ಆಕೆಯನ್ನು ಮರ್‍ಯಾದೆಯಿಂದ ಕಾಣುವವನೆಂದರೆ 'ಯಜಮಾನ'ನೊಬ್ಬನೇ. ಯಾವಾಗಾದರೊಮ್ಮೆ ಪೀತಾಂಬರದ ಭಾರದಿಂದ ಕುಂಟುತ್ತ ಅಡ್ಡಾಡುವ ಚಂಪಕ್ಕ ಮಾತ್ರ ಬಂದು ತುಸು ಪರಾಮರಿಕೆ ಮಾಡುತ್ತಿದ್ದಳು. ಆದರೆ ಲಗ್ನದ ಶ್ರಮವು ಆಕೆಯ ಅಶಕ್ತಮೈಗೆ ತಡೆಯಲಾರದಷ್ಟು ಆಗಿತ್ತು ; ಕಾರಣ ಆಕೆ ಅಷ್ಟಿಷ್ಟಕ್ಕೆ ಸಿಟ್ಟಿಗೇಳುತ್ತಿದ್ದಳು. ಮೆಹಬೂಬಳ ಎದುರಿಗೆ ಆಕೆ ಇನ್ನಾರಿಗೆ ಸಿಟ್ಟು ಮಾಡಿದರೂ ಅದರಲ್ಲಿ ಒಂದಂಶವು ತನಗೂ ಇದ್ದಂತೆ ಮೆಹಬೂಬಳ ಭಾವನೆಯಾಗುತ್ತಿತ್ತು. ಲಗ್ನದ ಮನೆಯಲ್ಲಿ ತನ್ನಿಂದ ಇತರರಿಗೂ ಸುಖವಿಲ್ಲ, ಇತರರಿಂದ ತನಗೂ ಇಲ್ಲ, ಎಂಬುದನ್ನು ಮೊದಲೇ ಊಹಿಸಿದ ಮೆಹಬೂಬಳು ಯಜಮಾನರಿಗೆ ತಾನು ಕೇವಲ ಅಕ್ಕೀಕಾಳಿಗೆ ಮಾತ್ರ ಬಂದು ಹೋಗುತ್ತೇನೆಂದು ಮೊದಲೇ ತಿಳಿಸಿದ್ದಳು. ಆದರೆ ರಾಘಪ್ಪ ಕೇಳಿಯಾನೆ ? ಹಟಮಾಡಿ, ರೇಗಿಗೆದ್ದು, ವೀಳ್ಯವನ್ನು ಸ್ವೀಕರಿಸದೆ, ಸೆಡವು ಮಾಡಿ, ನಾಲ್ಕು ದಿವಸವಾದರೂ ಧಾರವಾಡಕ್ಕೆ ಬಂದು ಇರುವಂತೆ ಆಕೆಯನ್ನು ಒಪ್ಪಿಸಿದನು. ಲಗ್ನದ ಮನೆಯಲ್ಲಿ ಇತರರಿಗೆ ತೊಂದರೆಯಾದೀತೆಂದು ಆಕೆ ಊಹಿಸಿದ್ದಳು ; ಆದರೆ ದಿನದಿನಕ್ಕೆ ಆಕೆಯ ಕಲ್ಪನೆ ಮೀರಿ ಕಷ್ಟವಾಗತೊಡಗಿತು. ದಿನದಿನಕ್ಕೂ ಮಡಿಮೈಲಿಗೆಯ ತಾರತಮ್ಯ, ತಾನು ಉಂಡ ಎಲೆಯನ್ನು ತಾನೇ ಹೊರಗೆ ಒಗೆದು ಬರುವದು, ತಾನೇ ಗೋಮ ಹಚ್ಚುವದು, ಯಾವುದಕ್ಕೂ ಅರ್ಧಗಂಟೆ ಮನೆಯ ಹೆಣ್ಣುಮಕ್ಕಳಿಗೆ ಚಾಲುವರಿ[೧]ಯುವುದು, ಇವೆಲ್ಲ ಆಕೆಗೆ ಬೇಸರವನ್ನುಂಟು ಮಾಡಿದವು. ಮಡಿಯ ಹೆಣ್ಣು ಮಕ್ಕಳು ಆಕೆಯನ್ನು ಅಸಹ್ಯದಿಂದ ನೋಡುವರು. ಮಂಟಪದಲ್ಲಿಯ ಉಡಾಳ ತರುಣರು ಆಕೆಯತ್ತ ಬಂದು ಎಲೆ-ಅಡಿಕೆ ಬೇಡಿ ಯಜಮಾನರ ಹೆಸರಿನಿಂದ ಗೇಲಿ ಮಾಡುವರು. ಮೆಹಬೂಬಜಾನಳಿಗೆ ದಿನಕ್ಕೆ ಇಪ್ಪತ್ತು ಸಲವಾದರೂ ಚಹ ಬೇಕು ; ಆದರೆ ಈ ಜಾತ್ರೆಯಲ್ಲಿ ದಿನಕ್ಕೆ ಎರಡು ಮೂರು

---

೧. ಬೇಡಿಕೊಳ್ಳುವದು.

ಬಾರಿ ಆಕೆಯವರೆಗೆ ಚಹ ಮುಟ್ಟುವದೇ ದುಸ್ತರ. ಯಜನಮಾನರು ಬಂದ ಸಾರಿ ಒಮ್ಮೆ ಆಕೆಗೆ ಚಹಾ ಸಿಕ್ಕುತ್ತಿತ್ತು. ತಾನಾಗಿಯೇ ಬಾಯಿ ಮುಂದೆ ಮಾಡಿ ಬೇಡುವದೂ ಆಕೆಗೆ ಬೇಸರ. ಹೀಗಾಗಿ ಚಹದ ಚಟವನ್ನು ತಂಬಾಕದ ಮೇಲೆ ಸಾಗಿಸಬೇಕಾಗಿತ್ತು. ಅಲ್ಲದೆ ಮುಂಜಾನೆಯಿಂದ ಸಂಜೆಯವರೆಗೆ ಆಕೆಗೆ ಕೆಲಸವಿಲ್ಲ...

ಆಕೆಯಿಂದ ಲಗ್ನಕ್ಕೆ ಆಗಬೇಕಾದ ಮುಖ್ಯ ಕೆಲಸ ಒಂದೇ ದಿನದಲ್ಲಿ ಮುಗಿದುಹೋಗಿತ್ತು – ಲಗ್ನ ಮಂಟಪ. ತಾನೇ ಎದುರು ನಿಂತು ಆಕೆ ಮಂಟಪವನ್ನು ಸಿಂಗರಿಸಿದಳು. ಆಕೆಯು ಆರೇಳು ವರ್ಷಗಳ ಹಿಂದೆ ಜಾತ್ರೆಯ ಸಮಯದಲ್ಲಿ ಭಾಗವಹಿಸುತ್ತಿದ್ದ ಶ್ರೀ ಶೇಷಶಾಯಿ ನಾಟಕ ಕಂಪನಿಯು ಧಾರವಾಡಕ್ಕೇ ಕ್ಯಾಂಪು ಹಾಕಿತ್ತು. ಅದನ್ನು ತಿಳಿದವಳೇ, ತಾನು ಬಂದ ದಿನವೇ, ಟಾಂಗಾ ಮಾಡಿಕೊಂಡು ಹೋಗಿ ನಾಟಕದ ಮಾಲಕ ಪರಮೇಶ್ವರಭಟ್ಟನಿಗೆ ಭೆಟ್ಟಿಯಾಗಿ, ಆಗ್ರಹಮಾಡಿ, ಕಂಪನಿಯ ಒಂದು ಕುತನಿಯ ಅರಿವೆಯ ಮಡಚುಪರದೆಯನ್ನು ತಂದು, ಮಂಟಪದ ಬಾಗಿಲಿಗೆ ನಾಟಕದ ರಂಗಸ್ಥಲದಂತೆ ಕಟ್ಟಿಸಿದಳು. ಅವರಿಂದಲೇ ಕಾಗದದ ಫರಫರೆಗಳನ್ನು ದೊರಕಿಸಿದಳು. ಚಿನ್ನಾರೆಡ್ಡಿಯೆಂಬ ಅವರ ಕಲಾವಿದನನ್ನು ಕರೆತಂದು, ಅವನಿಗೆ ಫಳಾರ ಹಾಕಿಸಿ, 'Welcome' ಎಂದು ಬಣ್ಣದ ಅರಿವೆಯ ಮೇಲೆ ಅರಳೆಯ ಅಕ್ಷರಗಳನ್ನು ವಿರಚಿಸಿ ಮಂಟಪದ ಮೇಲೆ ಎದ್ದುನಿಂತ ಕಂಬಗಳಿಗೆ ಕಟ್ಟಿಸಿದಳು. ತಾನು ಎದುರು ನಿಂತು ಅಲ್ಲಲ್ಲಿ ಕಾಗದದ ಹೂವಿನ ಕುಚ್ಚು, ಗುಂಡುಗುಳಾಪು, ತೋರಣ, ಫರಫರೆ ಇವುಗಳಿಂದ ಮಂಟಪದ ಶೋಭೆಯನ್ನು ರಚಿಸಿದಳು. ನಾಟಕ ಥಿಯೇಟರಿನ ಅಲಂಕಾರವನ್ನು ಬಹು ದಿವಸ ನೋಡಿದ ಅವಳಿಗೆ ಅದರ ಹಿಡಿತ ಅರಿಯದ್ದಲ್ಲ. ಮಂಟಪವನ್ನು ರಂಗಸ್ಥಳದಂತೆ ಅಲಂಕರಿಸಿಬಿಟ್ಟಿದ್ದಳು. ಯಜಮಾನರಾದರೂ ಅವಳ ಹೌಸಿಗೆ[೧] ಒಂದಿಷ್ಟೂ ಅಡ್ಡಬರಲಿಲ್ಲ. ಇಂತು ಲಗ್ನದ ಮುನ್ನಾದಿನವೇ ಹಾದಿಹೋಕ ಜನರು ಒಳಗೆ ಬಂದು ಬಂದು ಮಂಟಪವನ್ನು ನೋಡಿನೋಡಿ ಹೋಗಿದ್ದರು. ಇಂತು ಮಂಟಪದ ಅಲಂಕಾರವಾದಾಗ ಎಲ್ಲರೂ ಮೆಹಬೂಬಳನ್ನು ಹೊಗಳುವವರೇ! ಆದರೆ ಒಂದೆರಡು ದಿನಗಳಲ್ಲಿಯಯೇ ಲಗ್ನಕ್ಕಾಗಿ ಬಂದ ಜನರು ಹೆಚ್ಚಾದಂತೆ ಅಡಿಗೆ ಊಟಗಳ, ಮಡಿಮೈಲಿಗೆಗಳ ಗೊಂದಲವೆದ್ದು ತೊಂದರೆ ಸುರುವಾಯಿತು. ಮಂಟಪ ಮರೆತುಹೋಯಿತು ; ಆಕೆಯ ಮಹತ್ವವೂ ಮರೆಮಾತಿಗೆ ಬಿದ್ದಿತು. ಮೆಹಬೂಬಳ ಇನ್ನೊಂದು ಉಪಯುಕ್ತ ಕೆಲಸವೆಂದರೆ ವಧುವಿನ ಅಲಂಕಾರ.

---

೧. ರಸಿಕ ಉತ್ಸಾಹ.

ರತ್ನಾಗೆ ನಾಟಕೀಯ ಕೌಶಲ್ಯದಿಂದ ಒಮ್ಮೊಮ್ಮೆ ಒಂದೊಂದು ರೀತಿಯಿಂದ ಸೀರೆ ಉಡಿಸುವುದು, ಕೇಶಾಲಂಕಾರ, ಕುಂಕುಮರಚನೆ – ಇವುಗಳಲ್ಲಿ ತನ್ನ ಕಲೆಯನ್ನೆಲ್ಲ ವೆಚ್ಚಮಾಡುತ್ತಿದ್ದಳು. ಇದು ಅಂಗದಲ್ಲಿಯ ಮುದುಕಿಯರಿಗೆ ಸರಿಬರುತ್ತಿರಲ್ಲಿಲ. ಆದರೆ ರತ್ನಾಗೆ ಮಾತ್ರ ಮೆಹಬೂಬಕ್ಕ ಇಲ್ಲದೆ ಅಲಂಕಾರವೇ ಆಗುತ್ತಿರಲಿಲ್ಲ. ಯಾರು ಎಷ್ಟು ಬೈದರೂ ಕೂಡ, ಆಕೆ ಮೆಹಬೂಬಕ್ಕನ ಬಳಿಯೇ ಹೋಗಿ ಜರದ ಸೀರೆ ಉಡಿಸಿಕೊಂಡು ಬರುವಳು. ಅದಕ್ಕಾಗಿ ಪಡಸಾಲೆಯ ಎಡಗಡೆಯ ಕೋಣೆಯನ್ನು ಬಿಟ್ಟು ಎಲ್ಲಿಯೂ ಹೋಗದಿರಲು ರತ್ನಾ ಕಟ್ಟಪ್ಪಣೆ ಮಾಡಿಬಿಟ್ಟಿದ್ದಳು. ಆಕೆ ಬಂದಾಗಷ್ಟು ಮೆಹಬೂಬಳಿಗೆ ತಾನೂ ಅಷ್ಟು ಲಗ್ನಕ್ಕಾಗಿ ದುಡಿಯುತ್ತಿದ್ದೇನೆಂದು ಅನಿಸುತ್ತಿತ್ತು. ಆಕೆ ಹೋದೊಡನೆ 'ಬರಿದೋ ಬರಿದು.' ಆಕೆಗೆ ಎಲೆ ಹಾಕಿ ಕೊಂಡೇನೆಂದರೂ ಕಳವು. ತನ್ನ ಬೆಳ್ಳಿಯ ಡಬ್ಬಿಯನ್ನು ತೆಗೆದೊಡನೆ ಆಕೆಯ ಸುಣ್ಣ –ತಂಬಾಕು ತಿಕ್ಕುವ ಕ್ರಮವನ್ನಾಗಲೀ, ಎಲೆಗಳ ಸಿರಗಳನ್ನು ಕಿತ್ತುವ ನಯವನ್ನಾಗಲೀ ನೋಡಲು ಹತ್ತಿಪ್ಪತ್ತು ಚಿಕ್ಕಚಿಕ್ಕ ಮಕ್ಕಳು ಸುತ್ತಲೂ ನೆರೆಯುತ್ತಿದ್ದರು. ಅವರ ತಾಯಂದಿರು ಅಸಹ್ಯದಿಂದ ಹುಡುಗರನ್ನು ಹೊಡೆಯುತ್ತ ಬಡಿಯುತ್ತ ಅಲ್ಲಿಂದ ಎಳೆದೊಯ್ಯುವರು. ಇನ್ನೊಂದು ದೊಡ್ಡ ಸಮಸ್ಯೆ – ಮಲಗುವ ಜಾಗೆಯದು. ಮೊದಲ ದಿನ ದಣಿದು ಎಲ್ಲರೂ ತಮ್ಮತಮ್ಮ ಜಾಗೆ ಹಿಡಿದು ಮಲಗಿಬಿಟ್ಟರು. ಮೆಹಬೂಬಳಿಗೆ ತಾನೆಲ್ಲಿ ಮಲಗುವದು ಎಂದು ಯಾರಿಗೂ ಕೇಳುವದು ನಾಚಿಕೆ ಬಂದಿತು. ಕೊನೆಗೆ ಬಯಲು ಹಿತ್ತಲ ಪಡಸಾಲೆಯಲ್ಲಿ ಒಂದು ಮೂಲೆಯಲ್ಲಿ ಕಸಗುಡಿಸುವ ಬರಿಕೆಯವಳು ಮಲಗಿದ್ದಳು. ಅಲ್ಲಿಯೇ ತನ್ನ ಚಾದರ ಒಗೆದು ಹಸಿರು ಶಾಲು ಹೊದ್ದುಕೊಂಡು ಮೆಹಬೂಬ ಮಲಗಿಕೊಂಡಳು. ನಸುಕಿನಲ್ಲಿಯೇ ಎದ್ದ ರಾಘಪ್ಪನು ಆ ಶಾಲನ್ನು ಕಂಡು ಗುರುತಿಸಿ ರೇಗಿಹೋಗಿ ಹೆಂಡತಿಯ ಮೇಲೆ ಕೂಗಾಡಿದನು. ಒಂದು ರೀತಿ ಹಿತ್ತಲ ಪಡಸಾಲೆ ಸುಖವಿತ್ತು. ಆದರೆ ಇದೀಗ ರಾಘಪ್ಪನ ಕಟ್ಟಪ್ಪಣೆಯಂತೆ ಎಲ್ಲ ಸ್ತ್ರೀಯರು ಮಲಗುವ 'ಹಾಲಿ'ನಲ್ಲಿಯೇ ಒಂದು ಮೂಲೆಯಲ್ಲಿ ಮೆಹಬೂಬಳು ಮಲಗಬೇಕಾಗಿ ಬಂದು, ಅವರೆಲ್ಲರ ಕೊಂಕು, ಕಟಕಿ, ಅನಾದರ ಇವನ್ನು ಸಹಿಸಬೇಕಾಯಿತು.

ಆದರೆ ಇನ್ನೊಂದು ಮಹತ್ವದ ಕೆಲಸಕ್ಕಾಗಿ ಆಕೆ ಎಲ್ಲವನ್ನೂ ಸಹಿಸಲು ಸಿದ್ಧಳಾಗಿದ್ದಳು. ಲಗ್ನ ಮುಗಿದಮೇಲೆ ಪ್ರಸ್ತವೂ ರಾಘಪ್ಪನ ಮನೆಯಲ್ಲಿಯೇ ಆಗಬೇಕಾಗಿತ್ತು. ಕಿಟ್ಟಿಯ ಬಾಡಿಗೆಯ ಮನೆ ತೀರ ಸಣ್ಣದಾದರಿಂದ ದೇಸಾಯರು ತಮ್ಮ ಮನೆ ಕೊಡಮಾಡಿದರು. ಆದರೆ ರಾಘಪ್ಪನ ಮನೆಯಲ್ಲಿಯೇನೆ ಪ್ರಸ್ತವೂ

ಆಗಬೇಕಾಗಿ ಬಂತು. ಅಂದು ಮಂಚವನ್ನೂ ತಾನೇ ಹೂಗಳಿಂದ ಅಲಂಕರಿಸಬೇಕೆಂದು ಮೆಹಬೂಬಳ ಒಳಗಿನ ಆಸೆ. ಈ ದಿವಸಕ್ಕಾಗಿ ಮನಸ್ಸು ಕಾತರಪಡುತ್ತಿತ್ತು. ಪ್ರಸ್ತದ ಕೋಣೆಗಾಗಿ ತಾನೇ ಸ್ವತಃ ಮನೆಯಲ್ಲಿಯೇ ವಿಶೇಷ ಊದುಬತ್ತಿಗಳನ್ನು ಮಾಡಿಕೊಂಡು, ತನ್ನ ಪುಟ್ಟ ಟ್ರಂಕಿನಲ್ಲಿ ಜೋಕೆಯಿಂದ ಇಟ್ಟುಕೊಂಡು ಬಂದಿದ್ದಳು. ಆ ದಿವಸಕ್ಕಾಗಿ ಆಕೆ ಎಲ್ಲ ಕಷ್ಟಗಳನ್ನೂ ಸಹಿಸಿಕೊಂಡು ಸುಮ್ಮನಿದ್ದಳು.

ಇನ್ನು ಅಕ್ಕೀಕಾಳಿಗೆ ಒಂದು ತಾಸು ವೇಳೆಯಿತ್ತು. ರತ್ನಾಳ ಮುಡಿಯಲ್ಲಿ ಹನ್ನೊಂದು ಬಗೆಯ ಹೂಗಳ ಅರ್ಧಚಂದ್ರಾಕಾರದ ಮಾಲೆಯನ್ನು ನೀಟಾಗಿ ಇಟ್ಟು, ಇತರ ಅಲಂಕಾರ ಮಾಡಿ ಅವಳನ್ನು ಅತ್ತಿತ್ತ ತಿರುಗಿಸಿ ನೋಡಿ ಮುಂದಿನ ವಿಧಾನಗಳಿಗೆ ಕಳಿಸಿಕೊಟ್ಟು ಮೆಹಬೂಬ ತನ್ನ ಬೆಳ್ಳಿಯ ಡಬ್ಬಿಯನ್ನು ತೆಗೆಯತೊಡಗಿದಳು. ಎಲ್ಲ ಕಡೆಗೆ ನಡೆದ ಗದ್ದಲದ ಕಡೆಗೆ ಆಕೆಗೆ ಲಕ್ಷ್ಯವಿದ್ದಿಲ್ಲ. ಏಕೆಂದರೆ ಹೊರಗೆ ಓಲಗದವನು ತೋಡಿ ರಾಗವನ್ನು ಬಾರಿಸತೊಡಗಿದ್ದನು. ರಾಘಪ್ಪನು ಧಾರವಾಡಕ್ಕೆ ಉತ್ತಮ ಓಲಗದವನನ್ನು ಕರೆಸಿದ್ದನು. ರಾಗಾಲಾಪ ರಮ್ಯವಾಗಿ ಪ್ರಾರಂಭವಾಗಿತ್ತು. ಮೆಹಬೂಬಳು ಗೋಣು ಅಲ್ಲಾಡಿಸದೆ ಗೋಡೆಯತ್ತ ಮೆಳ್ಳಗಣ್ಣುಗಳಿಂದ ನೋಡುತ್ತ ಎಲೆಗೆ ಸುಣ್ಣವನ್ನು ಹಚ್ಚುತ್ತ, ಮರೆಯುತ್ತ ಓಲಗವನ್ನೇ ಕೇಳುತ್ತಿದ್ದಳು. ಕೆಳಸ್ವರಗಳ ಮೆದುವಾದ ಆಲಾಪನೆ ಸುರುಳಿಸುರುಳಿಯಾಗಿ ಹಿಂಬರಿಕೆ ಹೊರಟ ನದಿಯಂತೆ ಹರಿಯತೊಡಗಿತ್ತು... ಆದರೆ ಎಲ್ಲ, ಇದೇನು ಅಪಸ್ವರ !... ಮೆಹಬೂಬಜಾನ ಆಶ್ಚರ್ಯ ಭರದಲ್ಲಿ ಅಡಿಕೆಯಿಲ್ಲದೆ ಎಲೆಯನ್ನು ಬಾಯಲ್ಲಿ ತುಂಬಿಕೊಂಡಳು... ಅಪಸ್ವರವೇ? ಅಲ್ಲಲ್ಲ, ಮಂಟಪದಲ್ಲಿ ಏನೋ ಕೂಗಾಟ ಕೇಳಿಸತೊಡಗಿತು. ಯಾರೋ ಹೋಗಿ ಸಿಟ್ಟಿನಿಂದ ಓಲಗವನ್ನು ನಿಲ್ಲಿಸಲು ಹೇಳಿದರು. ಓಲಗ ನಿಂತಮೇಲಂತೂ ಕೂಗಾಟ ಇನ್ನೂ ಸ್ಪಷ್ಟವಾಗಿ ಕೇಳತೊಡಗಿತು....

ಆಲಸ್ಯದಿಂದ ಮೆಹಬೂಬಜಾನ ಡಬ್ಬಿಯನ್ನು ಟ್ರಂಕಿಗಿಟ್ಟು ಕೊರಳೊಳಗಿನ ಕೀಲಿಕೈ ತಿರುವಿದಳು. ತಂಬಾಕವಿಲ್ಲದೆ ಹಾಗೆಯೇ ಎದ್ದಳು. ಟ್ರಂಕಿನ ಮೇಲೆ ಮೊಳಕೈ ಊರಿ, ತಲೆಯ ಮೇಲೆ ಅರ್ಧ ಸೆರಗು ಎಳೆದುಕೊಳ್ಳುತ್ತ, 'ಅಲ್ಲಾ!' ಎಂದು ತೇಕುತ್ತ ಹೊರಗೆ ಬಂದಳು.

ಜನರೆಲ್ಲ ಒಂದು ಗುಂಪಾಗಿ ಮಂಟಪದ ಒಂದು ಬದಿಗೆ ನೆರೆದಿದ್ದರು. ಎಲ್ಲರೂ ಎದ್ದು ನಿಂತ ಮೂಲಕ ಮೆಹಬೂಬಜಾನಳಿಗೆ ಏನೂ ಕಾಣಿಸಲಿಲ್ಲ. ತನ್ನ ಹತ್ತಿರವೇ ನಿಂತ ಹೆಣ್ಣು ಮಕ್ಕಳಿಗೆ 'ಏನು?' ಎಂದು ಕೇಳಿದರೆ, ಒಬ್ಬಳಂತೂ

'ಪಿಸ್' ಎಂದಳು. ಉಳಿದವರಿಗೂ ಗೊತ್ತಿರಲಿಲ್ಲ. ಅಷ್ಟರಲ್ಲಿ ಜನರ ಸಂದಣಿಯೊಳಗಿನಿಂದ ದಾರಿ ತೆಗೆದು ಉರಿಮೋರೆಯ ವಿಧವೆಯೋರ್ವಳು ಹೊರಗೆ ಬಂದು ಮಂಟಪದ ಬಾಗಿಲದತ್ತ ಹೋಗತೊಡಗಿದಳು. ಆಕೆಯನ್ನು ಮೆಹಬೂಬ ಗುರುತಿಸಿದಳು. ಮುನ್ನಾದಿನವೇ ಯಾರೋ ಆಕೆಯನ್ನು 'ಗಂಗಕ್ಕ' ಎಂದು ಕರೆಯುವದನ್ನು ಕೇಳಿ ಮೆಹಬೂಬ ಇವಳೇ ಮದುಮಗನ ತಾಯಿ, ಚಂಪಕ್ಕನ ಹೆಸರಿನಿಂದ ನೀರು ಹಾಕಿಕೊಂಡ ಪುಣ್ಯಾತಗಿತ್ತಿ ಎಂದು ಗ್ರಹಿಸಿದ್ದಳು. ಇದೀಗ ಆಕೆಯ ಹಿಂದಿನಿಂದಲೇ ಯಜಮಾನರೂ ಜನರನ್ನು ಸರಿಸುತ್ತ ಓಡಿಬಂದು ಗಂಗಕ್ಕನನ್ನು ಅಡ್ಡಗಟ್ಟಿ ನೆಲಕ್ಕೆ ಉಪರಣಿ ಹಾಸಿದರು. ಮದುಮಗನು ಕೂಡ ಓಡಿಬಂದವನೇ 'ಅವ್ವಾ, ಹೋಗಬ್ಯಾಡ' ಎಂದು ಒದರತೊಡಗಿದನು. ಮೆಹಬೂಬಳಿಗೆ ಇದಾವುದರ ಅರ್ಥವೇ ಆಗಲೊಲ್ಲದು. ಹಿಂದಿನಿಂದ ಇನ್ನೋರ್ವ ಜರದ ರುಮಾಲು ಧರಿಸಿದ ವ್ಯಕ್ತಿ ಅಲ್ಲಿಯೇ ಬಂದು ನಿಂತಿತು. ಗಂಗವ್ವ ಆ ವ್ಯಕ್ತಿಯತ್ತ ಹೊರಳಿ ನಿಂತು ಕೈ ಮಾಡುತ್ತ ಏನೇನೋ ಆರ್ಭಟೆಯಿಂದ ಹೇಳತೊಡಗಿದ್ದಳು. ಆದರೆ ಜನರ ಗದ್ದಲದ ಮೂಲಕ ಆಕೆಯ ಧ್ವನಿ ಕೇಳಿಸುತ್ತಿತ್ತೇ ಹೊರತು ಮಾತು ಕೇಳಿಬರಲೊಲ್ಲದು. ಇಂತು ತುಸು ಆಕ್ರೋಶ, ಮಾತುಕಥೆ, ಕೂಗಾಟ, ಹಾವ ಭಾವಗಳಾದಮೇಲೆ ಎಲ್ಲವೂ ಶಾಂತವಾಯಿತು. ಗಂಗವ್ವ ಮನೆಯ ಹೊರ ಕಟ್ಟೆಯ ಮೇಲೆ ಬಂದು ಕುಳಿತಳು. ಆಕೆಯ ಸುತ್ತು ಹೆಣ್ಣುಮಕ್ಕಳು ಕುಜುಕುಜು ಮಾಡುತ್ತ ನಿಂತುಕೊಂಡರು. ಯಾವುದನ್ನೂ ಲೆಕ್ಕಿಸದೆ ಆಕೆ ಮೂಕವಾಗಿ ಕುಳಿತುಕೊಂಡಳು. ಯಜಮಾನರು ಆ ರುಮಾಲದವರನ್ನು ಕರೆದುಕೊಂಡು ಪಡಸಾಲೆಯ ಒಂದು ಬದಿಯ ಕೋಣೆಯನ್ನು ಹೊಕ್ಕರು.

ಆ ಜನಸಂದಣಿಯಿಂದ ಇತ್ತ ಒಬ್ಬ ಒಂದೇ ಹಲ್ಲಿನ ಭಟ್ಟರು ಬಂದರು. ಮೆಹಬೂಬಳಿಗೆ ಅವರ ಮುಖಪರಿಚಯವಿದ್ದಿತು ; ನಿನ್ನೆಯೇ ತನ್ನೊಡನೆ ತಂಬಾಕು ಸೇವಿಸಿ ಚೇಷ್ಟೆ ಮಾಡಿ ಹೋದವರು. ಅವರನ್ನು ತಡೆದು ಮೆಹಬೂಬಜಾನ 'ಏನಾಯಿತು?' ಎಂದು ಕೇಳಿದಳು.

'ಏನು ಆಗೋದು? ನಿನ್ನ ಯಜಮಾನನ ಕಾರಭಾರನs ಇಂಥಾದ್ದು!'

'ಯಾಕ? ಏನು ಆಗೇತಿ? ಒಂದೀಟು ಹೇಳೇ ಹೋಗರಿ. ತಂಬಾಕ ಕೊಡತೇನಿ.

'ಆಗೋದೇನು ಅರೇದ್ದಲ್ಲ. ಕಂಡದ್ದs ಅದ. ಸಾವಿರ ರೂಪಾಯಿ ವರ ದಕ್ಷಿಣಿ ಕೊಡತೇನಿ ಅಂತ ಲೇಖಿ ಬರಕೊಟ್ಟಾನ ನಿನ್ನ ಗಂಡ. ಈಗ ಅಕ್ಕಿ ಕಾಳಿಗೆ ಒಂದು ತಾಸು ಉಳಿದಾಗ, ಐನೂರs ತೊಗೊಳ್ಳರಿ, ಇನ್ನ ಒಂದು ತಿಂಗಳಿಗೆ

ಉಳದ ಐನೂರು ಕೊಡತೇನಿ ಅಂತ ಆಟಾ ಹೂಡ್ಯಾನ. ಇನ್ನೊಂದು ತಿಂಗಳಾ ಅದರ ಠ್ಯಾಂ ಅಂದಹಂಗ. ರಾಘೂಬಾ ಭರಾರೀ ಮಾತು ಅವು.'

ಆ ವೃದ್ಧ ಬ್ರಾಹ್ಮಣನಿಗೆ ತಂಬಾಕು ಕೊಡುತ್ತ ಮೆಹಬೂಬ ಇತರ ವಿವರಗಳನ್ನು ತಿಳಿದುಕೊಂಡಳು. ಅನಪೇಕ್ಷಿತವಾಗಿ ಲಗ್ನದ ಖರ್ಚು ಹೆಚ್ಚು ಬಂದ ಮೂಲಕ ವರದಕ್ಷಿಣೆಗಾಗಿ ತೆಗೆದಿಟ್ಟ ಹಣವನ್ನು ಜಯಮಾನರು ಬಳಸಿ ಬಿಟ್ಟಿದ್ದಾರೆ. ಇನ್ನೊಂದು ಕಡೆಯಿಂದ ಬರಬೇಕಾದ ಹಣ ಆಯತ ವೇಳೆಗೆ ಬರದಾಗಿದೆ. ಇದೀಗ ಸಂದುಕದಲ್ಲಿ ಉಳಿದದ್ದು ಏಳೆಂಟು ನೂರು ರೂಪಾಯಿ ಮಾತ್ರ. ಇತರ ಖರ್ಚಿಗೆ ಹಣ ಇಟ್ಟುಕೊಂಡು ಐದು ನೂರು ರೂಪಾಯಿ ಈಗ ತೆಗೆದುಕೊಳ್ಳಬೇಕೆಂದು ಯಜಮಾನರು ಬೀಗಿತ್ತಿಗೂ ರುಮಾಲದ ದೇಸಾಯರಿಗೂ ಆಗ್ರಹಪಡಿಸುತ್ತಿದ್ದಾರೆ. ದತ್ತಕದ ಬಗ್ಗೆ ಪ್ರಮಾಣ ತೆಗೆದುಕೊಂಡಿದ್ದೀರಿ, ಅದು ಆದಮೇಲೆ ಎಲ್ಲ ಆಸ್ತಿಯೇ ನಿಮ್ಮದು ಆದಂತೆ, ಇನ್ನೊಂದು ತಿಂಗಳು ಏಕೆ ತಡೆಯಬಾರದು, ಎಂಬುದು ಯಜಮಾನರವಾದ. ಆದರೆ ಮೊದಲಿನಿಂದ ಮನಸ್ತಾಪವಿದ್ದ ಮೂಲಕ, ಅಲ್ಲದೆ ಇಷ್ಟು ದಿನ ಸುಮ್ಮನಿದ್ದು ಅಕ್ಕೀಕಾಳಿಗೆ ಒಂದು ಗಂಟೆ ಉಳಿದಾಗ ಇದನ್ನು ಆಡಿದ್ದಕ್ಕೆ ಹೆಚ್ಚಿನ ಸಂದೇಹ, ಇವುಗಳ ಮೂಲಕ ಗಂಗವ್ವ ಒಂದಿಷ್ಟೂ ಹಿಂದೆ ಸರಿಯಲೊಲ್ಲಳು. ಈಗ ಒಂದು ಸಾವಿರ ರೂಪಾಯಿ ಎಣಿಸಿದರೇನೇ ಅಕ್ಕೀಕಾಳು, ಇಲ್ಲವಾದರೆ ಲಗ್ನಕ್ಕೆ ಹರಕತ್ತು, ಎಂದು ಹಟ ಹಿಡಿದಳು. ಧಡ್ಡ ಕಿಟ್ಟಿ ತಾಯಿಗೆ ಏನೋ ಸಮಾಧಾನ ಹೇಳಲಿಕ್ಕೆ ಹೋದೊಡನೆ ಆಕೆ ಇನ್ನಷ್ಟು ಕನಲಿ, 'ನನ್ನ ಬಿಟ್ಟು ನೀನು ಲಗ್ನ ಮಾಡಿಕೋ' ಎಂದು ಹೇಳಿ ಮಂಟಪ ಬಿಟ್ಟು ಒಬ್ಬಳೇ ಹೊರಟುಹೋಗಲು ಉದ್ಯುಕ್ತಳಾದಳು. ಆದರೆ ದೇಸಾಯರು ತಾವು ಈ ವಿಷಯಕ್ಕೆ ಮಾತಾಡುವದಾಗಿ ಭರವಸೆ ಕೊಟ್ಟ ಮೇಲೆ ಹೊರಗೆ ಕುಳಿತಿದ್ದಾಳೆ. ಯಜಮಾನರು ಕೋಣೆಯ ಒಳಗೆ ದೇಸಾಯರಿಗೆ ಯಾತನೆ ಕೊಡತೊಡಗಿದ್ದಾರೆ. ಆದರೆ ಎಂಥ ಅವಿವೇಕ ! ರಾಘೋಬಾ ಭರಾರಿ! ಲಗ್ನಕ್ಕ ಹರಕತ್ತು....! ಅವಮರ್ಯಾದಿ...! ಇತ್ಯಾದಿ.

ತನ್ನ ಬಂಡವಾಳವನ್ನೆಲ್ಲ ಅಕ್ಕನ ಮಗನ ಕಿರಾಣಿ ಅಂಗಡಿಯಲ್ಲಿ ತೊಡಗಿಸಿಟ್ಟ ಮೆಹಬೂಬಜಾನ, ಆಹೇರಿ[೧]ಗಾಗಿ ನೂರು ರೂಪಾಯಿ, ತನ್ನ ಸ್ವಂತದ ಖರ್ಚಿಗಾಗಿ ಇಪ್ಪತ್ತೈದು ಇವಿಷ್ಟನ್ನೇ ಮಾತ್ರ ತಂದಿದ್ದಳು !

* * *

೧. ಉಡುಗೊರೆ

ಕೋಣೆಯಲ್ಲಿ ದೇಸಾಯರನ್ನು ಎದುರಿಗೆ ಕೂಡಿಸಿಕೊಂಡು ರಾಘಪ್ಪ ಕುಳಿತುಕೊಂಡಿದ್ದನು.

'ರಾಯರs, ಗಂಗಕ್ಕ ನನಗೆ ಹೊರಗಿನಕೀನs? ಕಿಟ್ಟಣ್ಣ ನನಗ ಹೊರಗಿನಾತನs? ನನ್ನ ಅಕ್ಕನ್ನ ವಂಚನಾ ಮಾಡೋದು ಸರ್ವಥಾ ನನ್ನ ಇರಾದೆ ಇಲ್ಲ. ನೀವs ನೋಡಿದಿರಲ್ಲಾ ಲಗ್ನದ ಜಾಗಜೂಗು[೧]! ನಮ್ಮ ಒಂಟಿಹಲ್ಲಿನ ಹನುಮಂತಭಟ್ಟ ನಿನ್ನೇ ಅಂದಾ, 'ರಾಘೋಬಾ, ನಿನ್ನ ಮನಿ ಲಗ್ನದ ದುರಂಧರಿ[೨] ನೋಡಿದರ ಜಮಖಂಡಿ ಮಹಾರಾಜನ ಲಗ್ನ ನೆನಸೂಹಂಗ ಆಯ್ತು' ಅಂತ... ಏನು ಮಾಡಲಿ? ಲೆಖ್ಖ ಕೈಮೀರಿತು. ನಿನ್ನೆ ರಾತ್ರಿ ಟ್ರಂಕಿನ್ಯಾಗ ಕೈಹಾಕಿ ಎಣಿಸಿ ನೋಡತೇನಿ. ಉಳಿದಾವ ಎಂಟನೂರಾ ಹತ್ತು ರೂಪಾಯಿ. ಎಲಾ, ಕಳವು ಆಗ್ಯಾವೇನೋ ಅಂತ ಲೆಖ್ಖಪತ್ರದ ಕಾಗದಾ ತಗದು ನೋಡತೇನಿ, ಲೆಖ್ಖ ಎಲ್ಲಾ ಚೊಕ್ಕ. ಒಂದು ಬಿಲ್ಲೀ ಹೆಚ್ಚು ಕಡಿಮೆ ಆಗಿಲ್ಲ. ಆಗೋ ಖರ್ಚುs ಅಷ್ಟು ಆಗೇದ. ನಾನೂ ನಾಲ್ಕು ಮಂದಿ ದೊಡ್ಡವರನ ಬಲ್ಲವಾ, ಛಂದದ ಕೆಲಸ ಅಂತ ಕೈಬಿಟ್ಟೆ.... ಕೈಮೀರಿತು ಲೆಖ್ಖ. ನಿನ್ನೆ ರಾತ್ರೀನs ನಿಮ್ಮ ಕಡೆಗೆ ಓಡಿಬರಬೇಕಂತ ಮಾಡಿದ್ದೆ. ಆದರ ಹತ್ತೂವರಿ ಆಗಿಹೋಗಿತ್ತು ; ನಿಮ್ಮ ನಿದ್ದೀ ಯಾಕ ಕೆಡಿಸಬೇಕು ಅಂತ ಬರಲಿಲ್ಲ. ಇಂದು ಮುಂಜಾನೆ ನೀವು ಬಂದ ಕೂಡಲೇ ನಿಮ್ಮ ಎದುರು ಇದ್ದ ಹಕೀಕತ್ತು ಎಲ್ಲಾ ಇಟ್ಟೇನಿ ! ನಾ ಒಂದೂ ಮುಚ್ಚಿ ಇಟ್ಟುಗೊಂಡಿಲ್ಲಾ.... !'

'ನಿಮ್ಮದು ಬರೋಬ್ಬರಿ, ರಾಘಪ್ಪಾ. ಆದರೆ ನಿಮ್ಮದೂ ಗಂಗವ್ವನದೂ ಹೀಂಗ ದುಸುಮುಸಿ ಇದ್ದಾಗ ನೀವು ಲಗ್ನದ ವೈಭವದಕಿಂತಾ ಕರಾರಿನ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕಾಗಿತ್ತು ! ಇದರಾಗ ನಾನು ಗಂಗವ್ವಗ ಏನೂ ದೋಷ ಕೊಡೂದಿಲ್ಲ !'

'ರಾಯರs, ತಿಪ್ಪಣ್ಣನ್ನ ಬಿಂದಗೋಳಕ್ಕೆ ಓಡಿಸೇನಿ... ಹನುಮಂತ ಗೌಡನ ಕಡಿಗೆ. ಜಾಯಪ್ಪ ಶೆಟ್ಟರ ಕಡಿಗೆ ರಾಮನ್ನ ಕಳಿಸೇನಿ. ಈಗ ಒಂಬತ್ತು ಗಂಟೆ ಮುಹೂರ್ತ ಹೋದರ ಹೋಗಲಿ ; ಹನ್ನೊಂದುಕಾಲಿಗೆ ಇನ್ನೊಂದು ಇದರಷ್ಟs ಉತ್ತಮ ಮುಹೂರ್ತ ಅದ. ಎರಡು ತಾಸಿನ್ಯಾಗ ನನ್ನ ಶಕ್ತಿ ಮೀರಿ ದುಡ್ಡಿನ ಜಾಗಜೂಗ ಮಾಡಲಿಕ್ಕೆ ಪ್ರಯತ್ನ ಮಾಡತೇನಿ. ಆದರ ರಾಯರ, ಇಷ್ಟೂ ಮೀರಿ ನನ್ನ ಕೈಲೆ ಆಗಲಿಲ್ಲಾ ಅಂದರ, ಕನಿಷ್ಠ ಹನ್ನೊಂದು ಕಾಲಿನ ಮುಹೂರ್ತಕ್ಕ ಹರಕತ್ತು ಮಾಡಬ್ಯಾಡರಿ ; ಇದೊಂದು ಸರತೆ ನನ್ನ ನಂಬರಿ ; ನಿಮ್ಮ ಕಾಲು

---

೧. ವ್ಯವಸ್ಥೆ. ೨. ವೈಭವ.

ಬಿದ್ದು ಹೇಳಿಕೋತೇನಿ. ಇನ್ನೂ ಮನಿ ತುಂಬಿಸಿಕೊಳ್ಳೋದು ಅದ ; ಪ್ರಸ್ತ ಅದ; ಹೆಣ್ಣಿನವರ ಮುಗದಾಣ ಎಂದಿಗಾದರೂ ಗಂಡಿನವರ ಕೈಯಾಗs ಇರತದ... ಆದರ ಈ ಪ್ರಸಂಗದಾಗ ದೊಡ್ಡ ದೊಡ್ಡ ಮಂದಿ ಎದುರಿಗೆ ನನ್ನ ಮರ್ಯಾದಿ ಕಾಯಿರಿ. ಹ್ಯಾಂಗಾದರೂ ಈ ಪ್ರಸಂಗದಾಗಿಂದ ಪಾರು ಮಾಡಿರಿ... ಮಂಗಲ ಕಾರ್ಯದಾಗ ನಿಮ್ಮಂಥಾ ಹಿರೇರs ಮುಂದ ಬಿದ್ದು ನಮ್ಮನ್ನ ಕಾಯಬೇಕು !'

ಆದರೆ ರಾಘಪ್ಪನ ಬಗ್ಗೆ ಸಾಕಷ್ಟು ಅವಿಶ್ವಾಸ ಹುಟ್ಟಿತ್ತು ದೇಸಾಯರಿಗೆ. ಒಮ್ಮೆ 'ನಾನು ಕೊಡುತ್ತೇನೆ'ಂದು ಹೇಳಬೇಕೆಂದು ಮನಸ್ಸಾಗಿತ್ತು. ಆದರೆ ಅವರಿಗೆ ಸಂದೇಹ. ಅಲ್ಲದೆ ಕಿಟ್ಟಿಗೆ ತಾವು ಕೈಯೆತ್ತಿ ಕೊಡುವ ಮಾತು ಬೇರೆ, ರಾಘಪ್ಪನಿಗೆ ಕೊಡುವದು ಬೇರೆ, ಅದು ತಮ್ಮ ಬಾಬು[೧] ಅಲ್ಲ. ಅಲ್ಲದೆ ಹಣ ಇಟ್ಟುಕೊಂಡು ರಾಘಪ್ಪ ನಾಟಕ ಹೂಡಿರುವ ಸಂಭವವೂ ಇತ್ತು.

ಈ ವಿಷಯದಲ್ಲಿ ರಾಘಪ್ಪ ಹೇಳಿದ್ದು ಅರ್ಧಸುಳ್ಳು ಮಾತ್ರ. ಅದರಲ್ಲಿ ಸತ್ಯಾಂಶವೂ ಇತ್ತು. ರಾಘಪ್ಪನ ಕಡೆಗೆ ಎಂಟು ನೂರಾ ಹತ್ತು ರೂಪಾಯಿ ಉಳಿದದ್ದೇನೂ ಸುಳ್ಳಲ್ಲ. ಅಲ್ಲದೆ ಒಂದೆರಡು ಕಡೆಗೆ ಭರವಸೆಯಿಟ್ಟು ಕೈಸಡಿಲುಬಿಟ್ಟದ್ದೂ ಸುಳ್ಳಲ್ಲ. ಆದರೆ ಹಣ ಕೈಮೀರಿ ಖರ್ಚಾಗುತ್ತಿದ್ದದ್ದು ಅವನಿಗೆ ಹದಿನೈದು ದಿವಸಗಳ ಹಿಂದೆಯೇ ಗೊತ್ತಾಗಿತ್ತು. ಹನುಮಂತಗೌಡನಿಂದ ಹಿಂದಕ್ಕೊಮ್ಮೆ ಕೆಲಸ ಮಾಡಿಸಿಕೊಂಡದ್ದರ ಮಧ್ಯಸ್ಥಿಯ ಹಣ ತನಗೆ ಬರಬೇಕಾಗಿತ್ತು. ಅದರ ಮೇಲಿನ ಭರವಸೆಯೊಂದು ಇತ್ತು. ಇದು ಸುಳ್ಳಾಗುವ ಲಕ್ಷಣ ಕಂಡುಬಂದಿತು. ಇನ್ನು ಲಗ್ನಕ್ಕೆ ಮಾತ್ರ ಮೂರು ನಾಲ್ಕು ದಿವಸ ಉಳಿದವು. ಆಗ ರಾಘಪ್ಪ ಇನ್ನೊಂದು ಹಂಚಿಕೆಯನ್ನು ತೆಗೆದನು. ಗಂಗವ್ವ ದೇಸಾಯರ ಕಡೆಗೆ ಒಂದು ಸಾವಿರ ರೂಪಾಯಿಗಳನ್ನು ಇಟ್ಟದ್ದು ಹಾಗೂ ಕಿಟ್ಟಿಗೆ ದೇಸಾಯರು ಅದರ ವಾಸನೆಯನ್ನು ಹತ್ತಗೊಡದಿದ್ದದ್ದು, ಈ ವಿಷಯಗಳು ರಾಘಪ್ಪನಿಗೆ ಕಿಟ್ಟಿಯಿಂದ ಗೊತ್ತಾದವು. ಅಂದೊಡನೆ ಆತನು ಮನಸ್ಸಿನಲ್ಲಿಯೇ ಈ ಹಂಚಿಕೆ ಹೂಡಿದನು. ಆಯತ ವೇಳೆಗೆ ಹಣವಿಲ್ಲವೆಂದು ಕೈ ಎತ್ತತಕ್ಕದ್ದು ; ಗಂಗವ್ವನನ್ನು ಗಾಬರಿಗೊಳಿಸಿ, ಶಕ್ಯವಾದರೆ ಐದು ನೂರರ ಮೇಲೆಯೇ ಹೊಡೆಸತಕ್ಕದ್ದು. ಏಕೆಂದರೆ ಕಿಟ್ಟಿ ಪ್ರೀತಿಯುವನಾದರೂ ಒಂದು ಸಾವಿರ ರೂಪಾಯಿ ವರನಲ್ಲವೆಂಬುದು ಎಲ್ಲರೂ ಒಪ್ಪತಕ್ಕ ಮಾತೇ. ಇನ್ನೂ ಗಂಗವ್ವ ಹಟ ಹಿಡಿದರೆ ನಂತರ ಕೊಡುತ್ತೇನೆಂದು ಹೇಳಿ, ನಾಲ್ಕು ಜನರು ಆಕೆಯೇ ಖೊಟ್ಟಿಯೆಂದು

---

೧. ಸಂಬಂಧ.

ನಿರ್ಣಯಿಸುವಂತೆ ಮಾಡತಕ್ಕದ್ದು. ಎಲ್ಲರ ಕಡೆಯಿಂದ ಆಕೆಯ ನಿರ್ಭರ್ತ್ಸನೆ ಮಾಡಿಸತಕ್ಕದ್ದು. ಶಕ್ಯವಾದರೆ ದೇಸಾಯರನ್ನು ನಡುವೆ ಹಾಕಿ, ಅವರಿಂದಲೇ ಐದುನೂರು ರೂಪಾಯಿ ಕೈಗಡ ತೆಗೆದುಕೊಳ್ಳತಕ್ಕದ್ದು. ಅಂದರೆ ಮುಂದೆ ದೇಸಾಯರು ಕಿಟ್ಟಿಯ ಸಾವಿರ ರೂಪಾಯಿಗಳ ವಿಷಯದಲ್ಲಿ ವಿರುದ್ಧ ನಿಂತರೆ, ಈ ಐದುನೂರು ರೂಪಾಯಿಗಳ ಟಾಚ[೧]ನ್ನು ಅವರ ಮೇಲೆ ಇಡಲಿಕ್ಕೆ ಆಗುತ್ತದೆ.

ಲಗ್ನದ ವೈಭವದ ಸಿದ್ಧತೆಯನ್ನು ನೋಡಿದವರಿಗೆ ಈ ಒಳಗುಟ್ಟಿನ ಸಂಶಯ ಕೂಡ ಬರುವದು ಸಾಧ್ಯವಿರಲಿಲ್ಲ. ಆದರೆ ವಿನಾಕಾರಣವಾದರೂ ಗಂಗವ್ವನಿಗೆ ಮಾತ್ರ ಸಂಶಯ ಬಂದಿತ್ತು. ಆಕೆ ಅಕ್ಕೀಕಾಳಿನ ಮುನ್ನಾದಿನವೇ ದೇಸಾಯರ ಮನೆಗೆ ಹೋಗಿ ಈ ವಿಷಯವನ್ನು ಎತ್ತಿದ್ದಳು.

'ಗೋಪಣ್ಣಾ, ವರದಕ್ಷಿಣೀ ವಿಷಯಕ್ಕ ಏನಾದರೂ ಹೆಚ್ಚು ಕಡಿಮೆ ಆದರ ನಾ ಸುಮ್ಮನs ಇರೋವಾಕಿ ಅಲ್ಲ ನೋಡು !'

'ಅವನ ವೈಭವ ನನಗ ಗೊತ್ತಿಲ್ಲೇನು ಗೋಪಣ್ಣಾ ?... ಎಲಾಲ ಅದs, ಮಾಡತಾನ ಮಟ್ಟತಾನ, ಬೇಕಾದರ ತನ್ನ ರಂಡಿಗೆ ರೊಕ್ಕ ಉಚ್ಚತಾನ. ಆದರ ನಮ್ಮ ವಿಷಯಕ್ಕ ಅವ ಸಾಚಾ ಆದಾನು ಅಂತ ನನಗೇನೂ ಧೈರ್ಯ ಇಲ್ಲ ನೋಡು. ನನ್ನ ಅಪಮಾನ ಮಾಡಲಿಕ್ಕೆ ಅರ, ಒಂದಿಲ್ಲಾ ಒಂದು ಕಲ್ಲು ಒಕ್ಕೊಡತಾನ, ದತ್ತಕ ಮಾಡಿಕೋತಾರ ಅನ್ನೋ ಆಶಾಕ್ಕ ಗಂಗಕ್ಕ ಎಲ್ಲಾದಕ್ಕೂ ಬಗ್ಗಿದಳು ಅಂತ ಅವ ಜಂಭಾ ಕೊಚಿಗೋತ ಅಡ್ಡ್ಯಾಡತಾನ. ಅಪಮಾನಾ ನಾ ಸಹನ ಆಡಿಕೊಳ್ಳಲಿಕ್ಕೆ ಒಲ್ಲೆ. ನಾನಂತೂ, ಏನಾದರೂ ಹೆಚ್ಚು ಕಡಿಮೆ ಬರಲಿ, 'ಕಿಟ್ಟ್ಯಾ, ನೀ ನನ್ನ ಮಗ ಖರೆ ಹೌದಾದರ ಮಂಟಪಾ ಬಿಟ್ಟು ಹೊರಗ ನಡಿ' ಅಂತೇನಿ. ಇಷ್ಟೂ ಮೀರಿ ಆತ ಬರದಿದ್ದರ ನಾನಂತೂ ಹೊರಟು ಬರೋವಾಕಿ. ಆಗಲಿ ಲಗ್ನ ನನ್ನ ಪರೋಕ್ಷದಾಗ.'

ಗಂಗವ್ವನ ತರ್ಕದಂತೆಯೇ ಎಲ್ಲ ಸಂಗತಿಗಳು ನಡೆದಿದ್ದವು. ಈ ಸಂಭಾಷಣೆಯ ಫಲವಾಗಿ, ತಾವೇ ಕೈಗಡ ಕೊಡುವ ಮಾತನ್ನು ದೇಸಾಯರು ಎತ್ತಲಿಲ್ಲ. ಅವರ ಖಂಡತುಂಡಾಗಿ ರಾಘಪ್ಪನ ಮಾತಿಗೆ ಉತ್ತರ ಕೊಟ್ಟರು :

'ರಾಘಪ್ಪಾ, ಈ ವಿಷಯದಾಗ ಇನ್ನ ನಮ್ಮ ಜವಾಬುದಾರಿ ತೀರಿತು.'

'ರಾಘಪ್ಪನಿಗೆ ಪ್ರಸಂಗ ಕೈಮೀರುವಂತೆ ತೋರಿತು. ಅದಕ್ಕಾಗಿ ಇನ್ನಷ್ಟು ಸೂಚಕವಾಗಿ ಕೈಗಡದ ವಿಚಾರವನ್ನು ಹೇಳಿದನು : 'ರಾಯರs, ತಿಳಿದವರು

---

೧. ಹಿಡಿತದ ಮುಳ್ಳು.

ಹೀಂಗ ಮಾಡಬ್ಯಾಡಿರಿ ; ಇಬ್ಬರೂ ಕೂಡೆ ಈಗ ಹಾದಿ ಹುಡುಕೋಣ. ಎರಡು ಕಡೆ ಶಿಲ್ಕು ಅದs ಏನು ಅಂತ ಕೇಳಲಿಕ್ಕೆ ಮಂದೀನ್ನ ಓಡಿಸೇನಿ. ಆದರ ಮಂಗಲಕಾರ್ಯಕ್ಕ ವಿಘ್ನ ಬ್ಯಾಡ ಅಂತ ಇಷ್ಟs ನನ್ನ ವಿನಂತಿ. ನಾನು ನಿಮ್ಮ ಕೈಯಾಗs ಇದ್ದೇನಲ್ಲಾ !... ನಿಮ್ಮನ್ನ ಬಿಟ್ಟರ ನಮಗ ಮತ್ತ ? ಯಾರು ?... ಏನಾದರೂ ಒಂದು ಹಾದೀ ತಗೀರಿ...'

ಆದರೆ ಇಂಥ ಸ್ಪಷ್ಟ ಸೂಚನೆಯನ್ನು ಕೇಳಿ ದೇಸಾಯರು ಇನ್ನೂ ನಿಷ್ಠುರರಾದರು, ಕೇಳಿಯೂ ಕೇಳಿಸದಂತೆ ಬಿಮ್ಮನೆ ಬಿಗಿದುಕೊಂಡು ಕುಳಿತರು. ರಾಘಪ್ಪನ ಬೇರೆ ಉಪಾಯ ಕಾಣದೆ ಹೊರಗೆ ಅಕ್ಕನನ್ನು ಬಹಳ ಬಲವಂತಪಡಿಸಿ ಪಡಸಾಲೆಯೊಳಗೆ ಬಂದು ಕೂಡುವಂತೆ ಮಾಡಿದನು. ಹನ್ನೊಂದುಕಾಲು ಗಂಟೆಯ ಮುಹೂರ್ತದವರೆಗೆ ದಾರಿಕಾಯಲು ಗಂಗವ್ವ ಒಪ್ಪಿದಳು.

ಆದರೆ ನಿಮಂತ್ರಿತರು ಸಕಾಲಕ್ಕೆ ಬರತೊಡಗಿದರು. ಕಿಟ್ಟಿಗಾದರೋ ತನ್ನ ತಾಯಿಯ ಹಟದ ಬಗ್ಗೆ ಅವಮಾನವಾದಂತಾಗಿ ಸೆಡವು ಬೇಸರಗಳಿಂದ ಜಾರ್ಜಿಯೊಂದಿಗೆ ಯಾವುದೋ ಚಹದ ಅಂಗಡಿಯನ್ನು ಸೇರಿ ಕುಳಿತುಬಿಟ್ಟಿದ್ದನು. ನಿಮಂತ್ರಿಕರಿಗೆ ಕೂಡಲಿಕ್ಕೆ ಹೇಳಿ ರಾಘಪ್ಪನು ಚಹಾ ಮಾಡಿಸುವದಕ್ಕಾಗಿ ಅಡಿಗೆಮನೆಗೆ ಓಡಿದನು. ಅಲ್ಲಿ ಅಳುತ್ತ ಕುಳಿತ ಚಂಪಕ್ಕ ಅವನ ಮೇಲೆ ಹರಿಹಾಯ್ದಳು. ಹೊರಗೆ ಬರುವಷ್ಟರಲ್ಲಿ ನಿಮಂತ್ರಿತರಲ್ಲಿ ನಡೆದ ಕೇಳಬಾರದ ಊಹಾಪೋಹಗಳನ್ನು ಕೇಳಿ ರಾಘಪ್ಪನ ಕೃತಾವಸ್ಥೆಯಾಯಿತು. ಇಷ್ಟರಲ್ಲಿ ಜಾಯಪ್ಪ ಶೆಟ್ಟಿರತ್ತ ಕಳಿಸಿಕೊಟ್ಟ ಕ್ರಾಪುತಲೆಯ ರಾಮನು ಸಾಯಕಲ್ ಮೇಲಿಂದ ಧಾವಿಸಿ ಬಂದವನೇ ಎಲ್ಲರಿಗೂ ಕೇಳಿಸುವಂತೆ ವರ್ತಮಾನವನ್ನು ಹೇಳಿದನು :

'ನಾ ಐದು ನೂರು ರೂಪಾಯಿ ಶಿಲ್ಕ ಅವ ಏನು ಅಂತ ಕೇಳಿದಿನಿರಿ. ಶೆಟ್ಟರು 'ಯಾಕ ? ಮನ್ನೆ ಇನ್ನೂ ಮುನ್ನೂರರ ಗಂಟು ಒಯ್ದಾನಲ್ಲ ; ಹುಡುಗಾಟಿಕಿ ಮಾಡತಾನೇನು ?' ಅಂತ ಅಂದರರಿ. ನಿಮಗ ಬರಲಿಕ್ಕೆ ಹೇಳ್ಯಾರರೀ.'

ರಾಘಪ್ಪನಿಗೆ ತನ್ನ ಆಟ ತನ್ನ ಮೈಮೇಲೆಯೇ ಬರುತ್ತಿದ್ದಂತೆ ಭಾಸವಾಯಿತು. ಹನುಮಂತಗೌಡನತ್ತ ಕಳಿಸಿಕೊಟ್ಟ ತಿಪ್ಪಣ್ಣನಿಗೆ ಮೋಟರು ಸಿಕ್ಕರೆ ಅವನು ಇನ್ನು ಒಂದು ತಾಸಿನಲ್ಲಿರಬಹುದು. ಜಾಯಪ್ಪ ಶೆಟ್ಟಿ ತನ್ನನ್ನು ಬಯ್ದು ಕಳಿಸುವದಕ್ಕಾಗಿಯೇ ಕರೆಕಳಿಸಿದ್ದಾನೆಂಬುದು ಖಂಡಿತ. ದೇಸಾಯರಂತು ಬಲೆಯಲ್ಲಿ ಬೀಳಲೇ ಇಲ್ಲ. ಈ ಗದ್ದಲದೊಳಗಿಂತ ಪಾರಾಗಿ ಹತ್ತು ನಿಮಿಷ ಹೊರಗೆ ಹೋದರೆ ಮತ್ತೆ ಹೊಸ ಹಂಚಿಕೆಯಾದರೂ ಸುಳಿದಾವೆಂಬ ಆಸೆಯಿಂದ ಜಾಯಪ್ಪಶೆಟ್ಟಿಯ ಬಳಿಗೆ ಹೋಗಲು ನಿಶ್ಚಯಿಸಿ ಕೋಟು ರುಮಾಲು ಧರಿಸತೊಡಗಿದನು.

ರಾಘಪ್ಪ ಮಂಟಪದ ಬಾಗಿಲಿಂದ ಹೊರಗೆ ಬರುವಷ್ಟರಲ್ಲಿ ಎದುರಿನಿಂದ ಟಾಂಗಾ ಒಂದು ರಭಸದಿಂದ ಓಡಿಬಂದು ಬಾಗಿಲಿಗೇ ನಿಂತಿತು. ಅದರೊಳಗೆ ಮೆಹಬೂಬಜಾನ ಕುಳಿತಿದ್ದಳು. ತನ್ನ ಸ್ಥೂಲ ದೇಹಕ್ಕೆ ಶಕ್ಯವಾಗುವಷ್ಟು ಬೇಗನೆ ಆಕೆ ಟಾಂಗಾದಿಂದ ಕೆಳಗೆ ಇಳಿದಳು, 'ಅಲ್ಲಾ !' ಎನ್ನುತ್ತ. ಆಕೆ ತಲೆಯೆತ್ತಿ ನೋಡುವಷ್ಟಕ್ಕೆ ರಾಘಪ್ಪನೇ ಎದುರಿಗೆ ಬಂದನು. ಆಕೆ ಉತ್ಸುಕತೆಯಿಂದ 'ಎಲ್ಲಿ ಹೋಗತೀರಿ ?' ಎಂದಳು.

ರಾಘಪ್ಪನಿಗೆ ತನಗಾದ ಅವಮರ್ಯಾದೆಯನ್ನು ಆಕೆಗೆ ಹೇಳಲು ಇಷ್ಟವಿಲ್ಲ. ಆಕೆ ಟಾಂಗಾದಿಂದ ಇಳಿದುದನ್ನು ನೋಡಿ, ತನ್ನ ಈ ಫಜೀತಿಯ ಕಾಲಕ್ಕೆ ಆಕೆ ಮನೆಯಲ್ಲಿರಲಿಲ್ಲ ; ಇದಿಷ್ಟೇ ಸಮಾಧಾನ ಹಚ್ಚಿಕೊಂಡನು. 'ಮೆಹಬೂಬ, ಎಲ್ಲಿ ಹೋಗಿದ್ದಿ ?' ಎಂದಿಷ್ಟೇ ಕೇಳಿದನು, ಆಕೆಯ ಪ್ರಶ್ನೆಯನ್ನು ತಪ್ಪಿಸಲಿಕ್ಕೆ.

'ಸ್ವಲ್ಪ ಒಳಗೆ ಬಂದು ಹೋಗರಿ' ಅಂದಳು ಮೆಹಬೂಬಜಾನ. ಅವನ ಉತ್ತರಕ್ಕೂ ಕಾಯದೆ ಒಳಗೆ ಲಗುಬಗೆಯಿಂದ ಹೋದಳು. 'ಕೆಲಸ ಅದ ; ಹೋಗಿ ಬರತೇನಿ' ಎಂದು ಹೇಳಬೇಕೆಂದಿದ್ದ ರಾಘಪ್ಪನು ಆಕೆ ಹೊರಟು ಹೋದದ್ದರಿಂದ ಬೇರೆ ಉಪಾಯವಿಲ್ಲದೆ ತಾನೂ ಹಿಂದಿನಿಂದ ಮನೆಯ ಒಳಗೆ ಹೋದನು.

ಮೆಹಬೂಬ ನೇರವಾಗಿ ಒಳಗೆ ತನ್ನ ಎಡಕೋಣೆಗೆ ಬಂದವೇಳೇ ತನ್ನ ಪುಟ್ಟ ಟ್ರಂಕನ್ನು ತೆಗೆದಳು. ಅದರಲ್ಲಿ ಹತ್ತು ರೂಪಾಯಿಗಳ ಹತ್ತು ನೋಟುಗಳ ಸುರುಳೆಯನ್ನು ಹೊರಗೆ ತೆಗೆದಳು. ತನ್ನ ಕುಪ್ಪಸದಲ್ಲಿದ್ದ ಒಂದು ಕಾಗಗದದ ಪಾಕೀಟನ್ನು ಹೊರಗೆ ತೆಗೆದು ಅದರೊಳಗೆ ಒಮ್ಮೆಯೇ ಇಣಿಕಿ ನೋಡಿ, ಅದರಲ್ಲಿ ಆ ಹತ್ತರ ನೋಟುಗಳ ಸುರುಳೆಯನ್ನು ಸೇರಿಸಿ ರಾಘಪ್ಪನ ಬರವನ್ನು ಎದುರು ಕಾಯುತ್ತ ಕುಳಿತುಕೊಂಡಳು. ಅವನು ಬಂದೊಡನೆ 'ಅಕ್ಕಾ ಅವರನ್ನ ಸ್ವಲ್ಪ ಕರೀರಿ' ಎಂದಳು.

ರಾಘಪ್ಪನು ವಿಸ್ಮಿತನಾಗಿ, ತನ್ನ ಬಳಿಗೆ ನೋಡುತ್ತ ನಿಂತ ಹುಡುಗರಿಗೆ 'ಏ, ಇಕೀನ್ನ ಕರೀರ್‍ಯೊ !' ಎಂದು ಆಜ್ಞಾಪಿಸಿ, 'ಮೆಹಬೂಬ, ಯಾಕ...? ಏನು ಮಾಡಿಕೊಂಡು ಬಂದೀದಿ ?' ಎಂದು ಸಾಶಂಕವಾಗಿ ಕೇಳಿದನು.

ಮೆಹಬೂಬ ಆದಕ್ಕೆ ಉತ್ತರ ಕೊಡಲಿಲ್ಲ. ಚಂಪಕ್ಕನ ದಾರಿಕಾಯುತ್ತ ಕುಳಿತುಕೊಂಡಳು. ಹಿಂದಕ್ಕೊಮ್ಮೆ ಚಂಪಕ್ಕ ಮಾಡಿದ ಸೂಚನೆಯನ್ನು ಇಂದು ನೆರವೇರಿಸಿ ತಾನು ಋಣಮುಕ್ತಳಾಗುವ ದಿನ ಬಂದಿತ್ತು ಮೆಹಬೂಬಜಾನಳಿಗೆ.

ಚಂಪಕ್ಕ ಬಂದೊಡನೆ ಮೆಹಬೂಬಳು ಆಕೆಯ ಕೈಯಲ್ಲಿ ಆ ಪಾಕೀಟನ್ನು

ಇಟ್ಟು, 'ಕುಂಕುಮಾ ಹಚ್ಚಿಗೊಳ್ರಿ, ಅಕ್ಕಾ ಅವರ !' ಅಂದಳು. ಚಂಪಕ್ಕ ಆ ಪಾಕೀಟು ತೆಗೆದವಳೇ ಒಳಗೆ ನೋಡಿ ನೆಲಕ್ಕೆ ಕುಸಿದಳು.

ಅದರಲ್ಲಿ ನೂರು ರೂಪಾಯಿಗಳ ನಾಲ್ಕು ನೋಟುಗಳು ಇದ್ದವು ಹಾಗೂ ಹತ್ತರ ಹತ್ತು ನೋಟುಗಳು ಇದ್ದವು.

ಮೆಹಬೂಬ ರಾಘಪ್ಪನ ಕಡೆಗೆ ತಿರುಗಿ, ಅವನ ಕೈಯಲ್ಲಿ ತಾನು ಜೋಕೆಯಿಂದ ಇಟ್ಟುಕೊಂಡ ಊದುಬತ್ತಿಗಳ ಪೊಟ್ಟಣವನ್ನು ಕೊಟ್ಟಳು. ಆಕೆಯ ಕಣ್ಣುಗಳಲ್ಲಿ ನೀರು ತುಂಬಿದ್ದವು.

'ಮೆಹಬೂಬ, ಏನು ಮಾಡಿದಿ...? ಖರೆ ಹೇಳು...' ಎಂದ ರಾಘಪ್ಪ ಸಂಕಟದಿಂದ.

'ಯಾಕ...? ಆಹೇರು ಕೊಟ್ಟೀನಿ. ಆಹೇರಿಗೆ ಒಲ್ಲೆ ಅಂತೀರೇನು ?' ಎಂದಳು ಚತುರೆ ಮೆಹಬೂಬ, ಗದ್ಗದಿತಳಾಗಿ.

ಒಂಬತ್ತಕ್ಕೆ ಹತ್ತೇ ನಿಮಿಷಗಳು ಉಳಿದಿದ್ದವು. ಹೆಚ್ಚು ಚಿಕಿತ್ಸೆ ಮಾಡಲಿಕ್ಕೆ ರಾಘಪ್ಪನಿಗೆ ಸಮಯವಿರಲಿಲ್ಲ. ಅವನ ಮನಸ್ಸು ಮೂಕನೋವಿನಿಂದ ತುಂಬಿತ್ತು. ಆಸೆಬುರುಕಳಾದ ಚಂಪಕ್ಕ ಮಾತ್ರ ಏನೇನೋ ಕೃತಜ್ಞತೆಯ ಮಾತನ್ನು ಒಟಗುಟ್ಟಿದಳು. ಆದರೆ ಆ ಗಂಭೀರ ಸಮಯದಲ್ಲಿ ಮಾತಿಗಿಂತ ಮೌನವೇ ಹೆಚ್ಚು ಪ್ರಶಸ್ತವಾಗಬಹುದಿತ್ತು.

'ಒಂಬತ್ತಕ್ಕs ಅಕ್ಕೀಕಾಳು !' ಎಂದು ರಾಘಪ್ಪ ಕೂಗಿಕೊಂಡನು. ಆ ಘೋಷ ಮಂಟಪದಲ್ಲೆಲ್ಲಾ ಹಬ್ಬಿತು. ದೇಸಾಯರ ಎದುರು ಒಂದು ಸಾವಿರ ರೂಪಾಯಿಗಳು ರೋಖ ಎಣಿಸಲ್ಪಟ್ಟವು ; ಚಹದಂಗಡಿಯಿಂದ ಕಿಟ್ಟಿಯು ಕರೆಯಿಸಲ್ಪಟ್ಟನು. ಚಹಕ್ಕೆ ಎಸರು ಬಂದದ್ದು ಅಡಿಗೆಯ ಮನೆಯಲ್ಲಿಯೇ ಉಳಿಯಿತು. ಭೋರ್ ಜಗಲಿಯ ಮೇಲಿಂದ ವಾಗ್ದಾನದ ಮಂತ್ರಗಳು ಕೇಳಿಸತೊಡಗಿದವು. ಜನರು ಸುತ್ತುಮುತ್ತಲೂ ಕಿಕ್ಕಿರಿದು ನೆರೆದರು. ಈ ಗದ್ದಲದಲ್ಲಿ ಮೆಹಬೂಬ ಕೊಟ್ಟ ಊದುಬತ್ತಿಗಳು ಯಾಕೆ, ಏನು, ಎಂದು ರಾಘಪ್ಪನಿಗೆ ಕೂಡ ಕೇಳಲು ತಾಳ್ಮೆ ಉಳಿಯಲಿಲ್ಲ....

ಈ ಗದ್ದಲದಲ್ಲಿ ಸ್ಥೂಲಕಾಯಳಾದ ಮೆಹಬೂಬ ಭೋರ್ಜಗಲಿಯಿಂದ ದೂರವೇ ಉಳಿದಳು. ಆಕೆಗೆ ತನ್ನ ಆಕ್ಕೀಕಾಳುಗಳೂ ವಧೂವರರ ಮೇಲೆ ಬೀಳಲೇಬೇಕೆಂಬ ಆಸೆ... ಅವರ ಮೇಲೆ ಬಿದ್ದರೆಯೇ ಮುಬಾರಕ್ ಪೂರ್ಣವಾಯಿತೆಂಬ ದೃಢವಾದ ಕಲ್ಪನೆ... ಆದರೆ ಈ ಜನಸಮ್ಮರ್ದದಲ್ಲಿ ನುಗ್ಗಿ ಮುಂದೆ ಹೋಗಲು ಆಕೆಯ ಸುಖದ ದೇಹಕ್ಕೆ ಒಗ್ಗದು ; ಮೇಲಾಗಿ ಮಡಿ–

ಮೈಲಿಗೆಗಳ ಹೆದರಿಕೆ. ಕೊನೆಗೆ ಜನಸಂದಣಿ ಕಡಿಮೆಯಾದಮೇಲೆ ತಾನು ಸಮೀಪಕ್ಕೆಹೋಗಿ ಅಕ್ಕೀಕಾಳು ಹಾಕಬೇಕೆಂದು ನಿರ್ಧರಿಸಿಕೊಂಡಳು. ಆದರೆ ಮಂತ್ರಘೋಷಗಳು ಮುಗಿದು 'ಸುಮುಹೂರ್ತೇ ಸಾವಧಾನಃ' ಎಂದು ಕೊನೆಯ ಬಾರಿ ಬ್ರಾಹ್ಮಣರು ಅಂದೊಡನೆ ಎಲ್ಲರೂ ಅಕ್ಕೀಕಾಳು ತೂರಿ ಬಿಟ್ಟರು. ಎಲ್ಲರೂ ಒಗೆದರೆಂಬ ತವಕದಿಂದಲೋ, ಮಂತ್ರ ಮುಗಿದ ಕೂಡಲೆ ಒಗೆಯಬೇಕೆಂಬ ಕಲ್ಪನೆಯಿಂದಲೋ, ಅಥವಾ ಮಂಗಲವಾದ್ಯಗಳು ಒಮ್ಮೆಲೆ ಭೋರ್ಗರೆಯತೊಡಗಿದೊಡನೆ ವಿಚಾರದ ಸ್ತಿಮಿತ ತಪ್ಪಿಯೋ ಏನೋ ಅಂತೂ ಮೆಹಬೂಬ ತನ್ನ ಅಕ್ಕೀಕಾಳುಗಳನ್ನು ಎಲ್ಲಶಕ್ತಿ ಹಾಕಿ ಎಲ್ಲರೊಡನೆ ತೂರಿಬಿಟ್ಟಳು. ಅವು ಸಮೀಪದಲ್ಲಿಯೇ ಯಾವುದೋಪಂಡ ದುಡುಗರ ತಲೆಯ ಮೇಲೆ ಬಿದ್ದು ಹೋದವು. ಮೊದಲೇ ದುಃಖಿತಳಾಗಿದ್ದ ಮೆಹಬೂಬಳಿಗೆ ಅದರಿಂದ ಇನ್ನಷ್ಟು ದುಃಖವಾಯಿತು...

ತಾನು ಹೋಗುವ ಮೊದಲು ಆ ಊದುಬತ್ತಿಗಳನ್ನು ಪ್ರಸ್ತದ ದಿವಸ ಮಾತ್ರ ಉಪಯೋಗಿಸಬೇಕೆಂದು ಯಜಮಾನರಿಗೆ ಹೇಳಿ ಹೋಗಬೇಕೆಂದು ಮೆಹಬೂಬಳಿಗೆ ಬಹಳ ಆಸೆಯಾಯಿತು. ಆದರೆ ಯಜಮಾನರಾದರೋ ಗದ್ದಲದ ಮಧ್ಯದಲ್ಲಿದ್ದರು. ಟಾಂಗಾದವನು ಬಹಳ ಹೊತ್ತು ಹಾದಿ ಕಾಯ್ದಿದ್ದನು. ಅಕ್ಕೀಕಾಳು ಬಿದ್ದೊಡನೆ ಅವನು ಮತ್ತೆ ಬಾಗಿಲ ಬಳಿ ಬಂದು ಅತ್ತಿತ್ತ ತನ್ನ ಕಣ್ಣುಗಳಿಂದ ಮೆಹಬೂಬಳನ್ನು ಹುಡುಕಾಡತೊಡಗಿದನು. ಮೆಹಬೂಬ ಅವನನ್ನು ಕರೆದೊಯ್ದು ತನ್ನ ಪುಟ್ಟ ಟ್ರಂಕು ಹಾಸಿಗೆಗಳೊಂದಿಗೆ ಮನೆಬಿಟ್ಟು ಹೋದದ್ದು ಆ ಗದ್ದಲದಲ್ಲಿ ಯಾರಿಗೂ ತಿಳಿಯಲಿಲ್ಲ.

ಆಕೆ ಹೋದ ಅರ್ಧಗಂಟೆಯ ಮೇಲೆ ಚಂಪಕ್ಕ ಆಕೆಯನ್ನು ಫಳಾರಕ್ಕಾಗಿ ಮನೆತುಂಬ ಹುಡುಕಿದಳು. ಟ್ರಂಕು ಹಾಸಿಗೆ ಕೂಡ ಇಲ್ಲದನ್ನು ಕಂಡು ಊಟದ ಸಮಯಕ್ಕೆ ಪತಿಗೆ ತಿಳಿಸಿದಳು.

* * *

ಅಂದೇ ಸಂಜೆ ಲಗ್ನದ ಓಲಗಕ್ಕಿಂತ ದೊಡ್ಡ ಸಪ್ಪಳ ಮಾಡುತ್ತಿದ್ದ ಬ್ಯಾಂಡು ಒಂದು ಲಗ್ನದ ಮನೆಯ ಎದುರಿಗಿಂದ ಹಾಯ್ದು ಹೋಯಿತು. ಹೊರ ಜಗಲಿಯಲ್ಲಿ ಹರಟುತ್ತ ನಿಂತಿದ್ದ ಒಂಟಿಹಲ್ಲಿನ ಹನುಮಂತಭಟ್ಟನ ಕೈಯಲ್ಲಿ ನಾಟಕದ ಹ್ಯಾಂಡ್‌ಬಿಲ್ ಒಂದು ಬಿದ್ದಿತು. ಅದನ್ನು ಓದಿದವನೇ ಅವಸರ ಅವಸರದಿಂದ ಹನುಮಂತಭಟ್ಟನು ಒಳಗೆ ಬಂದು ಅದನ್ನು ರಾಘಪ್ಪನ ಕೈಗೆ

ಕೊಟ್ಟನು. ರಾಘಪ್ಪನು ಮೊದಲು ಅರ್ಧ ಬೇಸರದಿಂದ ಓದಿ ಕೊನೆಯ ಭಾಗವನ್ನು ಓದುತ್ತಲೇ ಹಣೆಯನ್ನು ಒರೆಸಿಕೊಂಡನು....

॥ಶ್ರೀ ಕುಲದೇವತಾ ಪ್ರಸೀದತು॥

**ಶ್ರೀ ಶೇಷಶಾಯಿ ನಾಟಕ ಕಂಪನಿ, ಹುಬ್ಬಳ್ಳಿ**

**ಕ್ಯಾಂಪ ಧಾರವಾಡ**

ಇವರು ಶ್ರೀ ಉಳವಿ ಬಸವೇಶ್ವರ ಜಾತ್ರಿಯ ಸಮಯದಲ್ಲಿ ಪ್ರತಿದಿನ ಈ ಕೆಳಗಿನ ಪಿಟಂಟ ನಾಟಕಗಳನ್ನು ಆಡುವವರಿದ್ದಾರೆ.

| | |
|---|---|
| ಇಂದಿನಿಂದ ಮೂರು ದಿವಸ | ವೆಂಕಟೇಶ ಪಾರಿಜಾತ |
| ಮುಂದೆ ಮೂರು ದಿವಸ | ಗುಲೇಬಕಾವಲಿ |
| ಮುಂದೆ ಮೂರು ದಿವಸ | ರುಕ್ಮಿಣೀಹರಣ |
| ಮುಂದೆ ಮೂರು ದಿವಸ | ಗಾಂಧೀಟೋಪಿ ಸಿಂಗಲ್ ಚಾ |
| ಮುಂದೆ ಮೂರು ದಿವಸ | ಸಂಗ್ಯಾಬಾಳ್ಯಾನ ನಾಟಕ |

ವಿ.ಸೂ. : (೧) ಅದರಲ್ಲಿ ಬದಲಾವಣೆ ಆಗಬಹುದು. (೨) ಮುಂದನ ಕಾರ್ಯಕ್ರಮ ಮುಂದೆ ತಿಳಿಸಲಾಗುವದು. (೩) ಒನ್ಸಮೋರ ಅಂದಾಗ ಹಾಡುವದು ಪಾರ್ಟಿದಾರನ ಮರ್ಜಿ.

ಖಾಸಾ ಜಾತ್ರಿಯ ನಿಮಿತ್ತ

**ಹುಬ್ಬಳ್ಳಿಯ ಗಾಯನಗಂಧರ್ವಿ ಮೆಹಬೂಬಜಾನ್**

**ಮಿರಜಕರ**

ಇವರು ಎಲ್ಲ ನಾಟಕಗಳಲ್ಲಿ ಮುಖ್ಯ ಸ್ತ್ರೀಪಾರ್ಟು ಮಾಡಲಿದ್ದಾರೆ. ಆರು ವರ್ಷಗಳ ತರುವಾಯು, ಖಾಸ್ ಧಾರವಾಡದ ರಸಿಕರಿಗಾಗಿ ತಮ್ಮ ಗಾನಸುಧೆಯನ್ನು ಕುಡಿಸಲಿದ್ದಾರೆ. ರಸಿಕಪ್ರೇಮೀ ಜನರು ಈ ಸುಸಂಧಿ ಕಳಕೊಳ್ಳಬಾರದು.

ಸ್ಥಳ : ಬಸಪ್ಪನ ಗುಡಿಯ ಹಿಂದೆ ಸ್ವಂತ ಮಾಲಕಿಯ ತಂಬೂ ಥೇಟರದಲ್ಲಿ.

ಆರ್.ಎಸ್. ಪರಮೇಶ್ವರಭಟ್ಟ, ಮಾಲಕ : ಶೇಷಶಾಯಿ ನಾಟಕ ಕಂಪನಿ

ರಾಘಪ್ಪನ ಮೈಯೆಲ್ಲ ಬೆವೆತಿತು. ಈ ಪರಿಣಾಮವನ್ನು ಅವನು ಎಣಿಸಿರಲಿಲ್ಲ.

ಮೆಹಬೂಬಜಾನಳಿಗೆ ಈಗೀಗ ವಯಸ್ಸೂ ಆಗಿತ್ತು ; ದೇಹವೂ ಬಂದಿತ್ತು. ಆಕೆಗೆ ಅನೇಕಬಾರಿ ತೇಕುಹತ್ತುತ್ತಿತ್ತು. ನಾಟಕದ ಶ್ರಮವನ್ನು ಸಹಿಸುವ ತ್ರಾಣ ಉಳಿದಿರಲಿಲ್ಲ. ಆದರೆ ರಾಘಪ್ಪ ಆಕೆಯನ್ನು ನಾಟಕಗಳಿಂದ ಪರಾವರ್ತಗೊಳಿಸಿದುದಕ್ಕೆ ಇದೊಂದೇ ಕಾರಣವಲ್ಲ. ಈ ಆರು ವರ್ಷಗಳ ಕೆಳಗೆ ಇದೇ ಕಂಪನಿಯಲ್ಲಿ ಆಕೆ ಕೆಲಸ ಮಾಡುತ್ತಿದ್ದಳು. ಆಗ ಹುಬ್ಬಳ್ಳಿಯ ದನದ ಜಾತ್ರೆಯಲ್ಲಿ ಹತ್ತುಹನ್ನೊಂದು ದಿವಸ ವಿಶ್ರಾಂತಿ, ನಿದ್ರೆಯಿಲ್ಲದೆ ಪ್ರತಿರಾತ್ರಿ ನಾಟಕದಲ್ಲಿ ಕೂಗಿ ಕುಣಿದು ಒಂದಿ ದಿನ ನಾಟಕ ಮುಗಿದ ಮೇಲೆ ವಾಂತಿಮಾಡಿಕೊಂಡು ಚಕ್ರ ಬಂದು ಬಿದ್ದಿದ್ದಳು. ಅದೇ ಮುಂದೆ ಟಾಯಫಾಯ್ಡಿಗೆ ಹಾಕಿಕೊಂಡು ಒಂದು ತಿಂಗಳು ನರಳಿದಳು. ಮಾಲಕ ಪರಮೇಶ್ವರಭಟ್ಟನದು ಇನ್ನೊಂದು ದುಷ್ಟ ಚಟ. ಬಹಳ ಸಲಿಗೆಯವ, ಬಹಳ ಬಲವಂತಗಾರ. ಒಳ್ಳೆಯ ನಟನಟಿಯರು ಅವನ ಕೈಯಲ್ಲಿ ಸಿಕ್ಕೊಡನೆ ಅವರಿಗೆ ತಿನಿಸು–ಉಣಿಸುಗಳಲ್ಲಿ ಬಲವಂತಪಡಿಸುವಂತೆ ಕುಡಿಯುವುದರಲ್ಲೂ ಬಲವಂತಪಡಿಸುವನು. ನಾಟಕ ಮುಗಿದ ಮೇಲೆ ದುಂಡಾಗಿ ಕುಳ್ಳಿರಿಸಿಕೊಂಡು ಅರ್ಧಗಂಟೆ ಹರಟೆ ಹೊಡೆದು ಎಲ್ಲರಿಗೂ ಸಾರಾಯಿ ಕುಡಿಸುವನು. ಚಟ್ಟಕ್ಕಾದರೂ ತನ್ನಲ್ಲಿಯೇ ಉಳಿಯಲೆಂದೋ ಅಥವಾ ನಿದ್ದೆ ಚೆನ್ನಾಗಿ ಮಾಡಿ ಮತ್ತೆ ಮರುದಿನದ ನಾಟಕಕ್ಕೆ ಹುರಿಯಾಗಲೆಂದೋ, ಏನು ಕಾರಣವೋ, ಅವನ ಬಲವಂತ ಬಹಳ. ಮೆಹಬೂಬಳಿಗೂ ತುಸು ಸಾರಾಯಿ ಆಗಬೇಕು. ಆದರೆ ಆಗ್ರಹಕ್ಕೆ ಬಿದ್ದು ಆಕೆ ಬಲು ಕುಡಿದುಬಿಡುತ್ತಿದ್ದಳು. ಅದೇ ಬೇನೆಗೆ, ಉಬ್ಬಸಕ್ಕೆ, ತೇಕಿಗೆ ಹಾಕಿಕೊಳ್ಳುತ್ತಿತ್ತು. ಇದನ್ನೆಲ್ಲ ಒಂದೆರಡು ಬಾರಿ ಕಂಡುಹಿಡಿದು ರಾಘಪ್ಪನು ತನ್ನ ರಸಿಕತೆಯನ್ನು ಬದಿಗಿಟ್ಟು ಆಗ್ರಹ ಮಾಡಿ ಮೆಹಬೂಬಳನ್ನು ನಾಟಕಗಳಿಂದ ಪರಾವರ್ತಗೊಳಿಸಿದ್ದನು... ಇಂತು ಆರು ವರ್ಷಗಳು ಜಾರಿದವು. ಮೆಹಬೂಬಳು ಇದೀಗ ಮೊದಲಿಗಿಂತ ಸ್ಥೂಲಕಾಯಳು ; ಮೊದಲಿನಷ್ಟು ಕೂಡ ಶ್ರಮ ಸಹಿಸುತ್ತಿರಲಿಲ್ಲ ; ಮೊದಲಿಗಿಂತ ತೇಕು ಹೆಚ್ಚು ; ಇಂಥದರಲ್ಲಿ ತನಗೆ ನಾಲ್ಕೈದು ನೂರು ರೂಪಾಯಿ ಕೊಡಲಿಕ್ಕೆಂದು ಈ ಪ್ರಿಯ ಜೀವನವು ಸಾವಿನ ಮನೆಯನ್ನು ಸೇರಬೇಕಾಯಿತೇ?

ರಾಘಪ್ಪ ಬಿಟ್ಟಕೆಲಸ ಬಿಟ್ಟು ಟಾಂಗಾ ಹತ್ತಿದವನೇಗ್ರ್ಯಾಂಡ್ ಹಾಟೆಲ್ಲಿಗೆ ಹೋಗಿ ಮಾಲಕ ಪರಮೇಶ್ವರಭಟ್ಟನನ್ನು ಕಂಡನು. ಈಗ ಭಟ್ಟನು ಮೆಹಬೂಬಳನ್ನು ಎದುರಿಗೆ ಕೂಡಿಸಿಕೊಂಡು ಆಕೆಯಿಂದ ಪದ್ಮಾವತಿಯ ಮಾತುಗಳನ್ನು ಮೆಲುದನಿಯಲ್ಲಿ ಒಪ್ಪಿಸಿಕೊಳ್ಳುತ್ತ ಕುಳಿತಿದ್ದನು. ಅನೇಕ ಬಾರಿ ಆಡಿದ

ನಾಕಟವಾದರೂ ಮೆಹಬೂಬಳಿಗೆ ಆರು ವರ್ಷಗಳಲ್ಲಿ ಅಲ್ಲಲ್ಲಿ ಮಾತುಗಳು ಹಿಂದೆಮುಂದಾಗುತ್ತಿದ್ದವು. ಒಂದೇ ಶಬ್ದದಿಂದ ಸುರುವಾಗುವ ಎರಡು ಭಾಷಣಗಳು ಒಂದರ ಸ್ಥಳದಿಂದ ಇನ್ನೊಂದು ಬಂದಾಗಲಿ, ಪ್ರಾಸಬದ್ಧ ಮಾತುಗಳಲ್ಲಿ ಬರುವ ಸ್ವಾಭಾವಿಕ ಪುನರುಚ್ಚಾರದಲ್ಲಿಯಾಗಲಿ ಆಕೆ ತಪ್ಪು ಮಾಡುತ್ತಿದ್ದಳು. ಆದರೆ ಪ್ರಾಂಪ್ಟದ ಸಹಾಯದಿಂದ ಎಲ್ಲ ಹೊಂದಿಸಬಹುದಾಗಿತ್ತ. ಮಾತು ಘಟ್ಟಿಮಾಡುವದರಲ್ಲಿ ಮೆಹಬೂಬ ಧಡ್ಡಿಯಲ್ಲ ; ಆದರೆ ಅವಳಿಗೆ ಅರ್ಥ ವರ್ಜ್ಯ. ಆದ್ದರಿಂದ ಒಂದು ಮಾತಿನ ಸ್ಥಳದಲ್ಲಿ ಇನ್ನೊಂದು ಬರುವದರ ಸಂಭವವು ಹೆಚ್ಚು. ಇದನ್ನರಿತ ಪರಮೇಶ್ವರಭಟ್ಟನು ಅನುಭವಿಕನಂತೆ ಅಲ್ಲಲ್ಲಿ ಸೂಚನೆ ಕೊಡುತ್ತ ಮಾತುಗಳನ್ನು ಮೆಲುದನಿಯಲ್ಲಿ ಅನಿಸಿಕೊಳ್ಳುತ್ತಿದ್ದನು. ಅನುಭವಿನಟಿಯ ಬಾಯಿಯಿಂದ ಕೂಗಿಸಿಕೊಳ್ಳುವ ಕಾರಣವೇನು ಇಲ್ಲ. ಈ ಮೂರು ನಾಲ್ಕು ತಾಸುಗಳಲ್ಲಿಯೇ ಸಾಕಷ್ಟು ಸುಧಾರಣೆಯಾಗಿ, ಕುಳಿತಲ್ಲಿಯೇ ಹೂಹೂವಿನ ಸೀರೆ ಸೊಟ್ಟಬೈತಲ ಹುಟ್ಟುಹಣೆಗಳಿರುವಾಗಲೇ, ರಂಗಸ್ಥಳದ ಮೇಲಿನ ಪದ್ಮಾವತಿಯ ಕಳೆ–ಮುಖಭಾವಗಳು ಮೆಹಬೂಬಳಲ್ಲಿ ಸೂಕ್ಷ್ಮವಾಗಿ ಗೋಚರವಾಗುತ್ತಿದ್ದವು.

ರಾಘಪ್ಪ ನೀಟಾಗಿ ಕೋಣೆಯನ್ನು ಹೊಕ್ಕನು. ಪರಮೇಶ್ವರಭಟ್ಟನಿಗೆ ರಾಘಪ್ಪನೆಂದರೆ ಆದರ, ಹೆದರಿಕೆ. ಮೆಹಬೂಬಳಿಂದ ಕಾಗದಕ್ಕೆ ಸಹಿ ಮಾಡಿಸಿಕೊಂಡಿದ್ದರೂ ಕೂಡ, ಈಗ ರಾಘಪ್ಪ 'ಮೆಹಬೂಬ, ನಡೆ ಮನೆಗೆ' ಎಂದು ಬಿಟ್ಟರೆ ಕಥೆ ಅಷ್ಟಕ್ಕೇ ಮುಗಿದು ಹೋದಂತೆಯೇ. ಲಹರಿ ಬಂದಾಗ ಕಚೇರಿ ಕಟ್ಟೆಗಳಲ್ಲಿ ರಾಘಪ್ಪ ನೆರವಾಗಲೂ ಬಲ್ಲ, ಅಡ್ಡ ಕಲ್ಲು ಹಾಕಲೂ ಬಲ್ಲ. ಭಟ್ಟ ಆದರದಿಂದ ಅವನನ್ನು ಕರೆದು ತೆಕ್ಕೆ ಕೊಡಹೋದನು. ಆದರೆ ರಾಘಪ್ಪ ನಿಂತಲ್ಲಿಯೇ ರೇಗಿಗೆದ್ದು ಗರ್ಜಿಸಿದನು : 'ಭಟ್ಪಾ, ನಾ ನಿನ್ನ ಜೋಡಿ ಮಾತಾಡಲಿಕ್ಕೆ ಬಂದಿಲ್ಲ. ಈ ಸರೆ ಮೆಹಬೂಬ ನಿನ್ನ ಕೈಗೆ ಸಿಕ್ಕಾಳ ; ಹೋಗಲಿ. ಅದರ ಬ್ರ್ಯಾಂಡಿದಶಿಂದ ಆಕೀಗೆ ಆಗ್ರಹಮಾಡು, ನಿನ್ನ ಎರಡು ದಿನದಾಗ ಈ ಊರು ಬಿಟ್ಟು ಓಡಿಸತೀನಿ ; ನಿನ್ನ ತಂಬೂಕ್ಕ ಬಿಂಕಿ ಹಚ್ಚಿಸತೀನಿ, ಜ್ವಾಕಿ !' ಹೋದ ಬಾರಿ ಮೆಹಬೂಬಳಿಗೆ ಜಡ್ಡಾದೊಡನೆ ರಾಘಪ್ಪ ತಂತ್ರ ಮಾಡಿ ಭಟ್ಟನ ಲಾಯಸೆನ್ಸ ರದ್ದು ಮಾಡಿಸಿದ್ದನು. ಸದ್ಯಕ್ಕೆ ಮೆಹಬೂಬಳನ್ನು ಸೆಳೆದು ಒಯ್ದು ತನ್ನ ನಾಟಕ ಹಾಳುಮಾಡಲಿಲ್ಲ. ಇದಿಷ್ಟೇ ಭಟ್ಟನಿಗೆ ಸಾಕಷ್ಟು ಹಿಗ್ಗು ಮಾಡಿತ್ತು. ಭಟ್ಟನು ತಾನೂ ಎದ್ದುನಿಂತು 'ಛೆ, ಛೆ, ರಾಘಪ್ಪಣ್ಣಾ, ಇದು ಎಂಥ ಮಾತು ?... ಮೆಹಬೂಬಜಾನ ತಮ್ಮ ವಸ್ತು ; ತಮ್ಮ ಅಪ್ಪಣೆ ಇದ್ದಂತೆ ಆಗಲಿ... ಆಕೆ

ಬೇಡಿದರೂ ಕೊಡಕೂಡದಷ್ಟೇ?... ಏನೊಂದನ್ನೂ ಖಂಡಿತ ಹೇಳಿಬಿಟ್ಟು ಹೋಗಿಬಿಡಿರಿ !' ಎಂದನು.

'ಆಕಿ ಬೇಡಿದರ ಬೇಡಿದಷ್ಟು ಕೊಡು. ನೀ ಎದುರಿಗೆ ಕೂತು ಆಗ್ರಹ ಮಾಡಿದ್ದು ಗೊತ್ತಾದರ ನಿನ್ನ ಗತಿ ಯಾರಿಗೂ ಬ್ಯಾಡ, ಹಂಗ ಮಾಡಿಸತೇನಿ.'

ಮೆಹಬೂಬಳ ಜೊತೆಗೆ ಮಾತಾಡಲು, ಆಕೆಯ ಕಡೆಗೆ ನೋಡಲು ರಾಘಪ್ಪನಿಗೆ ಆಗಲಿಲ್ಲ. ಅಷ್ಟಕ್ಕೇ ತಿರುಗಿ ಅಲ್ಲಿಂದ ಹೊರಟುಹೋದನು.

* * *

ಇರುವವರೆಗೆ ಲಗ್ನದ ಮನೆಯಲ್ಲಿ ಮೆಹಬೂಬ ಕೀಸರಾಗಿದ್ದಳು ; ಹೋದ ಮೇಲೆ ಲಗ್ನಕ್ಕೆ ಕಳೆಗುಂದಿತು. ರಸಿಕ ಭಟ್ಟರಿಗೆ, ಉಡಾಳ ತರುಣರಿಗೆ, ಚೇಷ್ಟೆಯ ವಿಷಯವಿಲ್ಲದಂತಾಗಿತ್ತು ; ಹೆಣ್ಣುಮಕ್ಕಳಿಗೆ, ಯಾರ ಮೇಲಿನ ಸಿಟ್ಟನ್ನು ತೀರಿಸಿಕೊಳ್ಳಲೂ ಸಹಾಯಕವಾದ ವಸ್ತು ಕಣ್ಮರೆಯಾಗಿತ್ತು ; ಮಡಿಯ ವಿಧವೆಯರು ಕೂಡ 'ಮಂಟಪದ ತುಂಬ ಕೂಡತಿತ್ತು, ಪಾಪ, ಭಣಭಣ ಆಗೇದ' ಅನ್ನುತ್ತಿದ್ದರು. ಮದುಮಗಳು ಬಟ್ಟೆ ಧರಿಸುವಾಗೊಮ್ಮೆ ಆಕೆಯನ್ನು ನೆನೆಸುವಳು ; ಹೆಣ್ಣು ಮಕ್ಕಳು ಮೆಹಬೂಬಳಿಗೆ 'ಕ್ರಿಯಾವಂತಿ' ಎಂದು ಆಡಿಕೊಳ್ಳುವದನ್ನು ಕೇಳಿ ಚಂಪಕ್ಕನಿಗೆ ಅವಮರ್ಯಾದೆ – ಅಸೂಯೆಗಳು ಆದಂತಾಗಿದ್ದವು ; ರಾಘಪ್ಪನ ಉತ್ಸಾಹವಂತೂ ಅಳಿದೇಹೋಗಿತ್ತು. ಯಾರಿಗೋ ಪೇಚುಹಾಕಲು ಹೋಗಿ ಇದೇನು ಆಯಿತಲ್ಲ, ಎಂದು ಅವನು ಮರಮರನೆ ಮರುಗುತ್ತಿದ್ದನು. ಮೆಹಬೂಬ ಅವನ ಪ್ರೀತಿಯ ವಿಷಯವಷ್ಟೇ ಅಲ್ಲ, ಅಭಿಮಾನಕೇಂದ್ರ ಕೂಡ. ಅವಳ ಪಲಾಯನದಿಂದ ಅವನ ಜೀವನದ ಸಾಮರ್ಥ್ಯವೇ ಉಡುಗಿದಂತಾಗಿತ್ತು. ರಾತ್ರಿ ನಿದ್ರೆ ಕೂಡ ಚನ್ನಾಗಿ ಹತ್ತದಾಯಿತು. ಲಗ್ನಮಂಟಪದ ಕಳೆಯೇ ತೊಲಗಿಹೋಯಿತು.

* * * *

# ೨೦ : ಕಿಟ್ಟಿಯ ಗೃಹಸ್ಥಾಶ್ರಮ

ಸೊಸೆಯು ಮನೆಗೆ ಬಂದಳು ; ಮನೆತುಂಬ ಆದಳು. ಗಂಗವ್ವ ಆಕೆಯನ್ನು ಪ್ರೇಮದಿಂದ ಸ್ವಾಗತಿಸಿದಳು. ಶಕ್ಯವಿದ್ದಷ್ಟು ತನ್ನ ನಿರುತ್ಸಾಹವನ್ನು ತೋರಗೊಡಲಿಲ್ಲ. ದೇಸಾಯರ ಉಪದೇಶದಂತೆ ಆಕೆ ವರ್ತಿಸಲು ಯತ್ನಿಸುವಳು. ಸೊಸೆಯ ಲೋಪದೋಷಗಳು ಕಂಡುಬಂದರೆ ಮೊದಮೊದಲು ಗಂಗವ್ವ ತನ್ನ ಮನಸ್ಸನ್ನೇ ಪರೀಕ್ಷಿಸಿ ನೋಡುತ್ತಿದ್ದಳು, ರಾಘಪ್ಪನ ಮೇಲಿನ ಸಿಟ್ಟಿನ ಮೂಲಕ ಹಾಗೆ ತನಗೇನಾದರೂ ತೋರುತ್ತದೆಯೋ ಹೇಗೆ ಎಂದು. ಆದರೆ ದಿನಕಳೆದಂತೆ ಪರಿಸ್ಥಿತಿ ಬದಲಾಗತೊಡಗಿ ಗಂಗವ್ವನಿಗೆ ಚಿಂತೆ–ಚಿಂತನಗಳನ್ನು ಬಿಡಬೇಕಾಯಿತು. ಮೊದಮೊದಲು ಗಂಗವ್ವನಿಗೆ ತುಸು ನೋವಾಯಿತು.... ಕಿಟ್ಟಿ ಮೂರುನಾಲ್ಕು ವರ್ಷ ತನ್ನ ಕಡೆಗೆ ಲಕ್ಷ್ಯವನ್ನೇ ಕೊಟ್ಟಿರಲಿಲ್ಲ ; ಮನೆಗೆ ಬಂದಾಗಲೂ ಹೆಚ್ಚು ಮಾತುಕಥೆ ಇರಲಿಲ್ಲ. ಆದರೆ ಇದೀಗ ಹೆಂಡತಿ ಮನೆಗೆ ಬಂದೊಡನೆ ಕಿಟ್ಟಿಗೆ ಮತ್ತೆ ಮಾತು ಹುಟ್ಟಿದವು. ಆಕೆಯೊಡನೆ ತಲೆತುಂಬ ಮಾತಾಡುವದು ಹಾಗೂ ತನ್ನನ್ನು ಅಲಕ್ಷ್ಯಮಾಡುವದು – ಇದು ಹೊಸ ಅನುಭವ. ಎರಡು ತಿಂಗಳಲ್ಲಿಯ ಸೊಸೆಯ ವರ್ಚಸ್ಸು ಮಗನ ಮೇಲೆ ಹೆಚ್ಚಾದದ್ದು ಕಂಡುಬರತೊಡಗಿತು. ಆಕೆಯ ಆಗ್ರಹದಿಂದಲೇ ಮನೆಯಲ್ಲಿ ಪ್ರತ್ಯಕ್ಷ ಮಾತು ಆರಂಭವಾಗಿವೆಯೆಂದು ಆಕೆಗೆ ಸಂದೇಹ. ಈ ಹೊಸ ಅನುಭವಕ್ಕೆ ಮನಸ್ಸನ್ನು ಹೊಂದಿಸಿಕೊಳ್ಳುವದು ಬಲು ಕಠಿಣವಾಗತೊಡಗಿತು. ಏನನ್ನೋ ಕಳಕೊಂಡಂತೆ ಕೆಲದಿನ ಆಕೆಗೆ ಜೀವನವು ಶೂನ್ಯವೆನಿಸತೊಡಗಿತು. ಇಲ್ಲ ಮನಸ್ಸಿನಲ್ಲಿ ಕೆಟ್ಟ ವಿಚಾರಗಳು, ಇಲ್ಲ ಅದಕ್ಕೂ ಭಯಾನಕ ಶೂನ್ಯತೆ, ಒಂಟಿತನ. ಸೊಸೆಯೊಡನೆ ಒಪ್ಪಂದ ಮಾಡಿಕೊಳ್ಳುವ ಇನ್ನೊಂದು ಮಾರ್ಗವನ್ನು ಗಂಗವ್ವ ಹುಡುಕಿದಳು. ನಾಲ್ಕೆಂಟು ದಿನ ಆಕೆಯನ್ನು ಕರೆದುಕೊಂಡು ಹಳೆಯ ಗುರುತಿನವರ ಮನೆಗೆ ಹೋಗಿ ತೋರಿಸಿಕೊಂಡು ಬಂದಳು. ಆದರೆ ಅದರಲ್ಲೂ ತುಸು ದಿನದಲ್ಲಿಯೇ ಸ್ವಾಭಾವಿಕ ದೋಷಗಳು ಕಂಡುಬಂದವು ; ಆಕೆಯ ತಂದೆಯ ಬಗ್ಗೆ ಯಾರು ಏನು ಕೇಳಿದರೂ ಕುಕಲ್ಪನೆ ಮಾಡಿಕೊಂಡು ರತ್ನಾ ಬಹಿರಂಗವಾಗಿ ತನ್ನ ಬೇಸರವನ್ನು ತೋರಿಸಿಬಿಡುವಳು. ಒಂದೆರಡು ಬಾರಿ ಹೊಸತಿಲು ದಾಟಿದಮೇಲೆ ಆಯಾ ಮನೆಯವರು 'ಬಡಕ

ಇದ್ದಾಳ ಸೊಸಿ !' 'ಜಬರ ಇದ್ದಾಳ ಸೊಸಿ !' ಎಂದು ಉದ್ಗಾರ ತೆಗೆದದ್ದು ಕೇಳಿದ ಮೇಲಂತೂ ರತ್ನಾ ಇನ್ನಷ್ಟು ಖತಿಗೊಂಡಳು. ಇನ್ನೂ ಅನೇಕ ಚಿಕ್ಕಪುಟ್ಟ ಅನುಭವಗಳು ಗಂಗವ್ವನ ಮನದ ಶೂನ್ಯತೆಯನ್ನು ಹೆಚ್ಚುಗೊಳಿಸುತ್ತಿದ್ದವು. ಸಣ್ಣ ಮನೆ ; ಅನಾನುಕೂಲ ; ಒಂದು ಪಡಸಾಲೆ ; ಒಂದು ಅಡಿಗೆಮನೆ. ಇದೀಗ ಗಂಗವ್ವ ಆ ತೇವು ಅಡಿಗೆಯ ಮನೆಯಲ್ಲಿಯೇ ಮೂರು ಮಣೆಗಳನ್ನು ಜೋಡಿಸಿ ಅದರ ಮೇಲೆ ಹಾಸಿಗೆ ಹಾಕಿಕೊಂಡು ಮಲಗತೊಡಗಿದ್ದಳು. ಆದರೆ ದಿನಕಳೆದಂತೆ ಕಿಟ್ಟಿಯ ಕೋಣೆಯ ಸಮೀಪದಲ್ಲಿ ಮಲಗುವದು ಅಸಹ್ಯವಾಗತೊಡಗಿತು....

ಚಿಕ್ಕಪುಟ್ಟ ವಿಷಯಗಳಲ್ಲಿ ಮೆಲ್ಲನೆ ಕಲಹಗಳು ಏಳತೊಡಗಿದವು. ರತ್ನಾ ತನ್ನ ತಾಯಿಯ ಬಾಯಿಯಿಂದ ಕೇಳಿದ ಗಂಗವ್ವನ ಅತಿರಂಜಿತ ವರ್ಣನೆಗಳ ಮೂಲಕ ಅವನ ಬಗ್ಗೆ ಏನೋ ಭಯಾನಕ ಕಲ್ಪನೆಗಳನ್ನು ಮಾಡಿಕೊಂಡುಬಿಟ್ಟಿದ್ದಳು. ಗಂಗವ್ವನದೊಂದು ಅಕರಾಳ ವಿಕರಾಳ ಚಿತ್ರವು ಆಕೆಯ ಬಗೆಯಲ್ಲಿ ಮನೆಮಾಡಿಕೊಂಡುಬಿಟ್ಟಿತ್ತು. ಅವಳ ಬಗ್ಗೆ ಅರ್ಧ ಭೀತಿ, ಅರ್ಧ ದ್ವೇಷ. ಐದು ನೂರು ರೂಪಾಯಿಗಳಿಗಾಗಿ ಲಗ್ನಕ್ಕೇ ಕಲ್ಲು ಹಾಕಲು ನಿಂತ ಕುರೂಪಿಯಾದ ಮುದುಕಿಯ ಬಗ್ಗೆ ಹರೆಯದ ಹುಡಿಗೆಯಲ್ಲಿ ಇನ್ನಾವ ಕಲ್ಪನೆ ಇರಬೇಕು? ಮೊದಮೊದಲಿಗೆ ಆಕೆಯ ಅನುಕೂಲಕ್ಕಾಗಿಯೇ ಕೊಟ್ಟ ಉಪದೇಶಗಳನ್ನು ರತ್ನಾ ದುಃಶಬ್ದಗಳೆಂದೇ ಭಾವಿಸಿ ಒಳಗೊಳಗೇ ಉರಿಯುತ್ತಿದ್ದಳು. ಆದರೆ ಎದುರು ಮಾತಾಡುತ್ತಿರಲಿಲ್ಲ. ಏಕೆಂದರೆ ಆಕೆಯನ್ನು ಅತ್ತೆಯ ಮನೆಗೆ ಕಳಿಸುವಾಗ ಚಂಪಕ್ಕ ಕಣ್ಣೀರಿಟ್ಟು, 'ಆಕಿ ಏನು ಬೇರಾದ್ದು ಮಾಡವಲ್ಲಳ್ಯಾಕ ; ತಿರುಗಿ ಉತ್ತರ ಕೊಡಬ್ಯಾಡ' ಎಂದು ಕೊಟ್ಟ ಉಪದೇಶವನ್ನು ತನ್ನ ಒಳಸಂತಾಪದಿಂದ ಮರೆತುಬಿಡಲು ರತ್ನಾಗೆ ಒಂದೆರಡು ತಿಂಗಳು ಬೇಡವೇ? ಮೊದಮೊದಲು ಗಂಗವ್ವ ಸವಿ ಮಾತಾಡಿದರೆ ಅದರಲ್ಲಿ ಏನಾದರೂ ಕೊಂಕು ಅರ್ಥವಿದೆಯೋ ಎಂದು ವಿಚಾರಮಾಡಿ ನೋಡುತ್ತಿದ್ದಳು. ಬಹಳ ಬಾರಿ ಇದ್ದಂತೆ ಭಾಸವಾಗಿ ಒಳಗೇ ಕನಲಿರುತ್ತಿದ್ದಳು. ಯಾವಾಗಾದರೊಮ್ಮೆ ಕೊಂಕು ಕಾಣದೆ ಇರಲು, ತನಗೆ ಹೊಳೆಯದಷ್ಟು ಆಳವಾದ ಅರ್ಥವಿದ್ದೆ ಅದರಲ್ಲಿ, ಎಂಬ ವಿಚಾರದಿಂದ ಅವಳ ಭೀತಿ ಹೆಚ್ಚಾಗುತ್ತಿತ್ತು. ತಾನು ಗಂಗವ್ವನೊಡನೆ ಮಾತಾಡುವಾಗ ತನ್ನಿಂದೇನೂ ತಪ್ಪು ಆಗಲಿಲ್ಲವೆಂಬ ಸ್ವಸಂರಕ್ಷಕ ಧ್ವನಿಯೇ ಅವಳಲ್ಲಿ ಇರುತ್ತಿತ್ತು.

'ರತ್ನಾ, ಹೊಸಾ ಸೀರಿ ಉಟಗೊಂಡು ಮುಸರೀ ತಿಕ್ಕಬಾರದು.'

'ಬೈಲಾಗ ಹರಕ ಸೀರಿ ಉಟುಗೊಂಡು ಕೂಡಲೇನು? ಆಯ್ತು, ನಾಳಿಂದ ಹಂಗs ಆಗಲಿ.'

'ರತ್ನಾ, ಉಪ್ಪು ಈ ಕಡೆ ಹಾಕಬಾರದು.'

'ನೀವು, ಹೇಳಿದ ಕಡೆ ಹಾಕತೇನಿ. ನಡುವ ಸರಸಲೇನು?'

'ರತ್ನಾ, ಅಡಿಗೀಮನ್ಯಾಗ ಹಿಕ್ಕೋಬ್ಯಾಡ ; ಅಡಿಗ್ಯಾಗ ಕೂದಲು ಬರತಾವ.'

'ಪಡಸಾಲ್ಯಾಗ ಅವರು ಕೂತಾರ. ಅಲ್ಲೇ ಹಿಕ್ಕೊ ಅಂದರ ಹಿಕ್ಕೋತಿನಿ.'

ಇಂಥ ಮಾತುಕಥೆಗಳಲಿಲ್ಯ ಅಸುಖಕರವಾದ ಕೊಂಕು ಸಂದೇಹ ಬಿಗುಮಾನಗಳು ಮೆಲ್ಲನೆ ಸುರುವಾಗಿ ಅತ್ತೆ–ಸೊಸೆದಿರ ನಡುವಿನ ಅಂತರವನ್ನು ಹೆಚ್ಚು ಮಾಡುತ್ತಿದ್ದವು. ರತ್ನಾ ತನ್ನನ್ನು 'ಅವ್ವಾ' ಎಂದು ಸಂಬೋಧಿಸಬಹುದೆಂದು ಬಂದ ಹೊಸತಾಗಿ ಗಂಗವ್ವ ತಿಳಿಸಿದಳು. ಆದರೆ ರತ್ನಾ ಒಮ್ಮೆಯೂ ಆಕೆಯನ್ನು 'ಅವ್ವಾ' ಎಂದಾಗಲೀ, 'ಅತ್ಯಾ' ಎಂದಾಗಲೀ ಸಂಬೋಧಿಸಲಿಲ್ಲ. ಕರೆಯುವ ಪ್ರಸಂಗ ಬಂದರೆ ಸಮೀಪಕ್ಕೆ ಹೋಗಿ ಗಟ್ಟಿಯಾಗಿ 'ಭಂಡಿಕಾಯಿ ಹೆಚ್ಚಲ್ಯೋ ಹ್ಯಾಂಗ?' 'ಒಲೀಗೆ ಉರೀ ಮಾಡಲೇನು?' ಇತ್ಯಾದಿಯಾಗಿ ಕಿವುಡರಿಗೆ ಕೂಗುವಂತೆ ಕೂಗುವಳು.

ಇಂತು ಗುಪ್ತಗಾಮಿನಿಯಾಗಿ ಹರಿಯುತ್ತಿದ್ದ ವಿಷನದಿಯು ಒಮ್ಮೆಲೇ ಅನಪೇಕ್ಷಿತವಾಗಿ ಹೊರಗೆ ಬಂದಿತು, ಯಾರ ತರ್ಕಕ್ಕೂ ನಿಲುಕದ ರೀತಿಯಲ್ಲಿ.

ಒಂದು ದಿನ ಗಂಗವ್ವ ಸಹಜವಾಗಿ, 'ಕಿಟ್ಟಣ್ಣಾ, ತುಪ್ಪೀರಿಕಾಯಿ ಬಂದಾವಂತ ಪ್ಯಾಟ್ಯಾಗ ; ಒಂದು ದಿವಸ ತೊಗೊಂಡು ಬಾ ಅಲ್ಲಾ! ಬುರ ಬುರಿ ಕರಿಯೋಣ!' ಎಂದಳು.

ಗಂಡ–ಹೆಂಡಿರು ಈ ಮಾತು ಕೇಳಿ ಫಕ್ಕನೆ ಒಬ್ಬರನ್ನೊಬ್ಬರು ನೋಡಿದರು... ಮುನ್ನಾದಿನ ರಾತ್ರಿ ಇದೇ ಮಾತನ್ನು ರತ್ನಾ ಗಂಡನಿಗೆ ಉಸುರಿದ್ದಳು. ತಮ್ಮ ಅಪ್ಪನ ಮನೆಯಲ್ಲಿ ತುಪ್ಪೀರಿಕಾಯಿಯ ಬುರಬುರಿಯನ್ನು ಕರೆದಿದ್ದರೆಂದೂ, ತಾವೂ ತಂದು ಕರಿಯಬೇಕೆಂದೂ, ಸೊಗಸಾಗಿರುತ್ತವೆ ಎಂದೂ, ವಿಸ್ತಾರವಾಗಿ ಹೇಳಿದ್ದಳು.

ಗಂಗವ್ವನ ಮಾತಿಗೆ ಕಿಟ್ಟಿ ಉತ್ತರವನ್ನೇ ಕೊಡಲಿಲ್ಲ.

ಅಡಿಗೆಯ ಮನೆಗೆ ಕಿಡಿಕಿಗಳಿರಲಿಲ್ಲವಾದ್ದರಿಂದ ರಾತ್ರಿ ಸೆಕೆಯಾಗುತ್ತಿದ್ದರೂ, ಗಂಗವ್ವ ಪಡಸಾಲೆಯ ಬಾಗಿಲಿನಿಂದ ಆದಷ್ಟು ದೂರವಾಗಲಿ ಎಂದು ಒಲೆಯ ಹತ್ತಿರಕ್ಕೇ ಮಲಗುತ್ತಿದ್ದಳು. ಆದರೆ ಅಂದು ಅಷ್ಟು ದೂರದಿಂದ ಕೂಡ 'ಮೆಲ್ಲಗೆ ಮಾತಾಡ್ರಿ, ಬಾಗಿಲ ಸಂದ್ಯಾಗಿಂದ ಕೇಳಿತಿರತಾರ' ಎಂಬ ಪಿಸುಮಾತು ಗಂಗವ್ವನ ಕಿವಿಗೆ ಬಿದ್ದಿತು.

ಇಡೀ ರಾತ್ರಿ ಆಕೆಗೆ ನಿದ್ದೆಹತ್ತಲಿಲ್ಲ... ಮರುದಿನದಿಂದ ಅಡಿಗೆಯ ಮನೆಯಲ್ಲಿ

ಸೆಕೆ ಬಹಳ ಎಂದು ಜೋರಾಗಿ ತಕರಾರು ಮಾಡಿ ಗಂಗವ್ವ ತನ್ನ ಹಾಸಿಗೆ ಸುರುಳಿಯನ್ನು ಕಾಶೀತಾಯಿಯ ಮನೆಯಲ್ಲಿ ಇಟ್ಟು ಬಂದಳು. 'ಅಂತೂ ರಾತ್ರಿ ಮಟ್ಟಿಗೆ ಮನಿ ಬಿಡಿಸಿದಳು. ಇನ್ನ ಹಗಲಿಗೆ ಯಾವಾಗ ಚಕ್ರಾ ತರತಾಳ ನೋಡೋಣ' ಎಂದು ಸಂಕಟಪಡುತ್ತ, ಗಂಗವ್ವ ದೇಸಾಯರ ಮಾತನ್ನು ನೆನೆದು ಸುಮ್ಮನಿರುತ್ತಿದ್ದಳು. 'ನಿನ್ನದಽ ಹಲ್ಲ, ನಿನ್ನದಽ ನಾಲಿಗಿ' ಎಂದು ತನ್ನ ಜೀವಕ್ಕೆ ತಾನೇ ಬುದ್ದಿ ಹೇಳಿಕೊಳ್ಳುವಳು.

ರತ್ನಾಳಲ್ಲಿ ತಾಯಿಯ ಸಾತ್ವಿಕ ಅಂಶಗಳೊಡನೆ ತಂದೆಯ ಒಂದೆರಡು ಕುಹಕ ಗುಣಗಳೂ ಇದ್ದವು. ಆಕೆಯ ಒಟ್ಟಂದದ ನಡುವಳಿಯಲ್ಲಿ ಅವು ಬಹಿರಂಗವಾಗಿ ತೋರಿಬರುತ್ತಿದ್ದಿಲ್ಲವಾದರೂ ಅವಶ್ಯವಿದ್ದಾಗ ಆ ಗುಪ್ತಾಸ್ತ್ರಗಳನ್ನು ಹೊರಗೆ ತೆಗೆಯುವಳು. ಅಂದು ರಾತ್ರಿ ಆಕೆ ಆಡಿದ ಮಾತು ಬುದ್ಧಿ ಪುರಸ್ಸರವಾಗಿಯೇ. ಗಂಡನಿಗೂ ತಿಳಿಯದಂತೆ ಅವನೆದುರಿಗೇ ಒಗೆದ ಕಲ್ಲು ಅತ್ತೆಗೆ ಹೋಗಿ ತಾಗಿದ್ದನ್ನು ಕಂಡು, 'ಔಷಧಿ ನಾಟಿತು' ಎಂದು ಹಿಗ್ಗಿದ್ದಳು. ತನಗೂ ತನ್ನ ಅತ್ತೆಯನ್ನು ಎದುರಿಸಬಲ್ಲ ದುಷ್ಟಬುದ್ಧಿಯನ್ನು ದೇವರು ಕೊಟ್ಟಿದ್ದಾನೆಂದು ಅಭಿಮಾನವೂ ಹುಟ್ಟಿತು. ಗಂಗವ್ವನಾದರೋ ಅನೇಕ ಮನೆಯ ಸೊಸೆಯಂದಿರನ್ನು ಕಂಡವಳು ; ಇದರಲ್ಲಿ ಹೊಸತೇನೂ ಕಾಣಲಿಲ್ಲ. ಆದರೆ ಎಲ್ಲರಂತೆ ಇದೂ ಆಯಿತಲ್ಲ, ಎಂದು ಮಾತ್ರ ಬಹಳ ವ್ಯಸನವಾಯಿತು. ಆದರೆ ಆ ಇಕ್ಕದ ಪೇಚನ್ನು ತಾನೇ ನುಂಗಬೇಕೇ ಹೊರತು ಉಸುರು ಒಡೆದರೆ ಅರ್ಥವಿಲ್ಲ....

ಕಾಶೀತಾಯಿಯ ಮನೆಗೆ ಮಲಗಲು ಹೋಗತೊಡಗಿದನಂತರ ಹೊಸತೊಂದರೆಗಳು ಉದ್ಭವಿಸತೊಡಗಿದವು. ಗಂಗವ್ವನಿಗೆ ಮುಂಜಾನೆ ಐದಕ್ಕೆ ಏಳುವ ರೂಢಿ. ಕೂಗಿ ಕೂಗಿ ಬಾಗಿಲು ತೆಗೆಯಿಸಿಕೊಳ್ಳಲು ಅರ್ಧಗಂಟೆ ಬೇಕಾಗತೊಡಗಿತು. ಅಷ್ಟು ಬೇಗ ಎಬ್ಬಿಸಿದ್ದಕ್ಕಾಗಿ ಕಿಟ್ಟಿ ಗೊಣಗುತ್ತಿದ್ದನು. ಈ ಜೊತೆಗೆ ತಾನು ಮನೆಯ ಮುಂದೆ ನಿಂತು ಬಾಗಿಲು ಬಡಿಯುವದನ್ನು ಅದೇ ವೇಳೆಗೆ ಎದ್ದ ನೆರೆಹೊರೆಯ ಹೆಣ್ಣುಮಕ್ಕಳು ನೋಡುವದನ್ನೂ, ನಗುವದನ್ನೂ, ಒಮ್ಮೊಮ್ಮೆ ಚೇಷ್ಟೆಮಾಡುವದನ್ನೂ ಗಂಗವ್ವ ಸಹಿಸುವದು ಅಸಾಧ್ಯವಾಗತೊಡಗಿತು. 'ಗಂಗವ್ವಾ, ಸೊಸಿ ಮನೀಗೆ ಬಂದಳಂದರ ಅತ್ತೀದು ಹಿಂಗಽ ನೋಡು !' ಎಂದು ಏನೂ ಅರಿಯದ ಯಾವ ಲಕ್ಷ್ಮಂಬಾಯಿ ಸೀತಾಬಾಯಿ ಅಂದರೂ ಕೂಡ, ಗಂಗವ್ವನ ಅಭಿಮಾನ ಅಳುಕುವದು. ಸೊಸೆ ನಿಜವಾಗಿ ತನ್ನ ಕೈಯಲ್ಲಿದ್ದರೆ ಈ ಹಾಸ್ಯಕ್ಕೆ ತಾನೂ ನಗಬಹುದು. ಆದರೆ ನಿಜ ಸಂಗತಿಯನ್ನು ಯಾರು

ತಿಳಿದಿದ್ದಾರೋ ಎಂಬ ಸಂಗತಿಯಿಂದ ಗಂಗವ್ವ ಬೇಸರಗೊಳ್ಳುವಳು.

ಕೊನೆಗೊಮ್ಮೆ ಬೇಸತ್ತು ಕಿಟ್ಟಿಗೆ ಈ ವಿಷಯವನ್ನು ಗಂಗವ್ವ ಹೇಳಿ ಅಡಿಗೆಮನೆಗೆ ಹೊರಗಡೆಯಿಂದ ಬೀಗ ಹಾಕಿಕೊಂಡು, ಕೈಯನ್ನು ತನ್ನ ಕಡೆಗೆ ಇಟ್ಟುಕೊಂಡು ಮಲಗಲು ಹೋಗತೊಡಗಿದಳು. ಅದು ಸುಖವಾಗಿ ಕೆಲವು ದಿನ ಸಾಗಿತು. ಆದರೆ ಒಂದಿ ದಿನ ಬೀಗದ ಕೈ ಎಲ್ಲಿಯೋ ಬಿದ್ದು ಕಳೆದುಹೋಯಿತು. ಗಂಗವ್ವ ಅದನ್ನು ಹುಡುಕಿ ಹುಡುಕಿ ಗೋಳಾಡಿದಳು. ಕೆಲಸಕ್ಕೆ ತೊಂದರೆಯಾಗತೊಡಗಿತು. ಕೀಲಿಕೈ ಸಿಗಲೇ ಇಲ್ಲ. ಕೊನೆಗೆ ಆ ಭದ್ರವಾದ ರೇಲ್ವೆ–ಕೀಲಿಯನ್ನು ಮುರಿಯಿಸಬೇಕಾದರೆ ನಾಲ್ಕು ತಾಸು ಬೇಕಾದವು. ಮೊದಲೇ ನಿರ್ವಿಣ್ಣಳಾದ ಗಂಗವ್ವನಿಗೆ ಕಿಟ್ಟಿಯು ರತ್ನಾಳ ಎದುರಿನಲ್ಲಿಯೇ ನಾಲ್ಕು ಉದ್ಧಟಮಾತುಗಳನ್ನು ಆಡಿದನು ; ಕಣ್ಣೀರು ಕಪಾಳಕ್ಕೆ ಬರುವಂತೆ ಮಾಡಿದನು.

ಸೊಸೆಯೊಡನೆ ಮೂಕ ತಿಕ್ಕಾಟಗಳು ಜಗಳಗಳಾಗಿ ಪರಿಣಮಿಸ ತೊಡಗಿದವು. ರತ್ನ ತನ್ನ ಅಳತೆಯೊಳಗೆ ಇದ್ದಾಗ ಎದುರುತ್ತರ ಕೊಡುವಳು. ತನ್ನ ಎಲ್ಲೆಮೀರಿದೊಡನೆ ಮುಳುಮುಳು ಅಳುತ್ತ ಮೂಲೆ ಹಿಡಿಯುವಳು. ಇತ್ತಿತ್ತ ಮಧ್ಯಾಹ್ನ ಅಪ್ಪನ ಮನೆಗೆ ಹೋಗಿ ಮೂರುಸಂಜೆಯ ಮುಂದೆ ಹಿಂತಿರುಗಿ ಬರತೊಡಗಿದಳು. ಆದರೆ ಅದೇ ಸಂಜೆ ಕಿಟ್ಟಿ ಟಾಂಗಾ ಮಾಡಿಕೊಂಡು ಹೆಂಡತಿಯೊಡನೆ ತಾನೇ ಸರಸದಿಂದ ಬಿಂದುಬಿಟ್ಟನು. ಸೊಸೆಗೆ ಹಾಗೆ ಹೋಗಲು ಅಧಿಕಾರ–ಮುದ್ರೆ ಸಿಕ್ಕಿದಂತಾಯಿತು. ಇಂತು ಗಂಡನ ಬೆಂಬಲದಿಂದ ರತ್ನಾ ಮಾತನ್ನು ಗೆದಿಸತೊಡಗಿದಳು. ಮನೆಯಲ್ಲಿ ಹಬ್ಬ ಹುಣ್ಣಿಮೆಗಳಿದ್ದಾಗ ನೆರೆಹೊರೆಯವರನ್ನು ಆಮಂತ್ರಿಸಲು ಒಲ್ಲೆನೆನ್ನ ತೊಡಗಿದಳು. ಒಂದು ದಿನ ಕಿಟ್ಟಿಯೇ ಹೇಳಿ ದೇಸಾಯರ ವೇಣೂಬಾಯಿಯನ್ನು ಅರಿಶಿಣ ಕುಂಕುಮಕ್ಕೆ ಕರೆಯಲು ಕಳಿಸಿದನು. ಅಲ್ಲಿ ಹೋದಾಗ ವೇಣೂಬಾಯಿ ಯಾವದೇ ಮುಚ್ಚುಮರೆಯಿಲ್ಲದೆ, 'ಯಾಕs ಹುಡಿಗಿ, ಅತ್ತೀ ಜೋಡಿ ರಸಖಿಸಿ ಮಾಡತೀಯಂತಲ್ಲಾ?... ಇದು ತರ ಅಲ್ಲ ನೋಡು. ಆಕೆ ಬಹಳ ಅನುಭೋಗಿಸಿದಾಕಿ. ಆಕೀನ್ನ ನೀ ತಾಯಿಹಂಗ ಸಾಕಬೇಕು' ಎದು ಹೇಳಿಬಿಟ್ಟಿದ್ದರಿಂದ ಕಾಮದಾರನ ಹೆಂಡತಿಯಾದ ರತ್ನಾಗೆ ಬಹಳ ಅವಮರ್ಯಾದೆಯೆನಿಸಿಬಿಟ್ಟಿತು. ಮುಂದಿನ ಬಾರಿ ವೇಣೂಬಾಯಿ ಹೂವೀಳ್ಯಕ್ಕೆ ಹೇಳಿಕಳಿಸಿದರೆ ರತ್ನಾ ಗಂಡನ ಆಗ್ರಹಕ್ಕೂ ಹೋಗಲಿಲ್ಲ. ನೆರೆಹೊರೆಯವರೊಡನೆ ಯಾರೊಡನೆಯೂ ಆಕೆಗೆ ಮಾತೇ ಇಲ್ಲ. ಕಿಟ್ಟಿ ಏನಾದರೂ ಹೇಳಿದರೆ, 'ಈ

ಜಗಾನs ಛಲೋ ಇಲ್ಲ. ಕಾಮದಾರನಾಗಿ ಇಂಥಾ ಮನ್ಯಾಗ ಇದ್ದದ್ದಕ್ಕ ಎಲ್ಲಾರೂ ನಮ್ಮನ್ನ ನೋಡಿ ನಗತಾರ. ನಮ್ಮನ್ನ ಗೀಳು ಮಾಡ್ಯಾರ. ಬ್ಯಾರೆ ಕಡೆ ಮನಿ ಹಿಡೀರಿ'– ಅಂತ ತಿರುಗಿ ತಾನೇ ತನ್ನ ಅವ್ವನಿಂದ ಪಡೆದ ಸೂಚನೆಯನ್ನು ಸೂಚಿಸಿದಳು.

ಬಾಯಿಗೆ ಬಾಯಿ ಬೆಳೆಯತೊಡಗಿತು. ಒಂದು ದಿನ ರತ್ನಾ ಎಲ್ಲೇ ಮೀರಿದಳು. 'ಗಂಡಾ ಹೇಣ್ತಿ ಪ್ರೀತಿ ಇದ್ದದ್ದು ನೋಡಿ ಸಂಕಟ!' ಎಂದು ಬೆರಳು ಮುರಿದಳು. ಅಂದು ರಾತ್ರಿ ಗಂಗವ್ವ ತನ್ನ ಫರಾಳವನ್ನು ಸ್ವೀಕರಿಸಲಿಲ್ಲ. ಕಿಟ್ಟಿ ಹೆಂಡತಿಯನ್ನು ಹೊಡೆದನು. ಆಕೆ ರಾತ್ರಿಯೆಲ್ಲ ಅತ್ತು, ಗಂಡ ಸಮಾಧಾನ ಮಾಡಲು ಬರಲು, 'ಗಂಡಗ ಮಾಟಾ ಮಾಡಿಸೀದಿ' ಎಂದು ಅತ್ತೆ ಅಂದಳೆಂದೂ, ಅದಕ್ಕೆ ತಾನು ಪ್ರತ್ಯುತ್ತರ ಕೊಟ್ಟದ್ದು ನಿಜವೆಂದೂ ಹೇಳಿದಳು. ಕಿಟ್ಟಿಗೆ ಇಂಥ ಜಗಳದಲ್ಲಿ ನಿರ್ಣಯ ಕೊಡುವದೇ ಅಸಾಧ್ಯವಾಗತೊಡಗಿತು. ಇಬ್ಬರೂ ತೀರ ವಿರುದ್ಧ ಸಂಗತಿಗಳನ್ನು ನಿಜವೆಂದೇ ಹಿಡಿದು, ತಮ್ಮ ಹಟದಲ್ಲಿ ಒಂದು ಹೆಜ್ಜೆಯೂ ಹಿಂಜರಿಯುತ್ತಿರಲಿಲ್ಲ. ಗಂಗವ್ವ ಮಗನ ಮುಂದೆ ಕಂಠಶೋಷಣೆ ಮಾಡಿಕೊಳ್ಳುವದು; ರತ್ನಾ ಗುಮ್ಮನಗುಸುಕಿಯಾಗಿದ್ದು ಎರಡೇ ಮಾತಾಡಿ, 'ಆದದ್ದು ಹೀಂಗ ; ಆದರ ಹೇಳಿಕೇಳಿ ಬಿಂದಗೋಳ ರಾಘಪ್ಪನ ಮಗಳು ; ನನ್ನ ಮ್ಯಾಲ ನೀವು ಹೆಂಗ ನಂಬೀರಿ?' ಎಂದು ತನ್ನ ಅಳುವಿನ ಪ್ರತಾಪದ ಮೇಲೆಯೇ ಗೆಲುವನ್ನು ಪಡೆಯುವಳು. ಯಾವ ನಿರ್ಣಯವನ್ನೂ ಕೊಡಲಾಗದೆ ಕಿಟ್ಟಿ ಮಂಕಾಗುತ್ತಿದ್ದನು. ಹೆಂಡತಿಗೆ ತನ್ನ ತಾಯಿಯು ಮಾಡಿದ ಉಪಕಾರಗಳ ಬಗ್ಗೆ ಒಂದು ರಹಸ್ಯ ಭಾಷಣ ಮಾಡುವನು. ಅದಕ್ಕೆ ರತ್ನಾಳ ಉತ್ತರ : 'ಮೊದಲs ನನ್ನ ಅಪ್ಪಾ ಅವ್ವನಿಂದ ಹಿಡಕೊಂಡು ನನ್ನ ಮ್ಯಾಲ ಕೆಂಡಾಕಾರತಾರ. ನಿಮ್ಮ ಅವ್ವನ ಕೈಲೆ ಗೋಳುಹೋಯಿಸಲಿಕ್ಕೇ ಅಂತ ನನ್ನ ಮಾಡಿಕೊಂಡಿರೇನು? ಅತ್ತೆಯವರು ತಾವಾಗಿ ಹೆಂಗs ಇರವಲ್ಲರ್ಯಾಕ. ನೀವು ಅಷ್ಟು ಪುಸಲತ್ತು ಕೊಟ್ಟು ತನ್ನ ಕೆರಿಭಾವಿ ಪಾಲಾಗೂ ಹಂಗ ಮಾಡಬ್ಯಾಡಿರಿ.'

ಆದರೆ ಈ ಎಲ್ಲ ಜಗಳ–ರಂಭಾಟಗಳ ಮಧ್ಯೆ ಗಂಗವ್ವ ಒಂದು ಕಠೋರ ವ್ರತವನ್ನು ಕೈಗೊಂಡಿದ್ದಳು. ದಿನದಿನಕ್ಕೂ ಅದನ್ನು ಸ್ಮರಣೆಗೆ ತಂದುಕೊಂಡು ತನ್ನ ಬುದ್ಧಿಯನ್ನು ಸ್ತಿಮಿತಕ್ಕೆ ತರುವಳು. ಆ ವ್ರತದ ಪ್ರಶಾಂತತೆಯ ಎದುರಿಗೆ ದಿನದ ಸಿಟ್ಟುಸೆಡವುಗಳು, ಸುಳ್ಳುಮೋಸಗಳು, ಸಹನೆ ಸಂಕಟಗಳು ಸಾಗರದ ಮೇಲಿನ ತೆರೆಗಳಂತೆ ಕ್ಷುದ್ರವಾಗಿ ತೋರುವವು. ಆ ವ್ರತವೆಂದರೆ, ಏನೇ ಆಗಲಿ, ಕಿಟ್ಟಿಯ ಕೈಬಿಡಬಾರದು... ಸೊಸೆ ಎಷ್ಟೇ ಕುಹಕಳಾಗಿರಲಿ, ಮನೆ ಬಿಡುವಂತೆ

ಯಾವ ಬಲೆಯನ್ನಾದರೂ ಎಸೆಯಲಿ, ಪ್ರತ್ಯಕ್ಷ ಕಿಟ್ಟಿಯೇ ತನ್ನನ್ನು ತಿರಸ್ಕರಿಸಲಿ... ಮನೆ ಬಿಡಕೂಡದು. ಮನೆ ಬಿಟ್ಟರೆ, ಕಿಟ್ಟಿಯಿಂದ ಅಗಲಿದರೆ, ತನ್ನ ಹೇವವೇನು ಉಳಿಯಿತು...? ಒಮ್ಮೆ ಬೆನ್ನಿಗೆ ಹಾಕಿಕೊಂಡ ಮಗನು ಒದ್ದಾಡುತ್ತಾನೆಂದು ನಡುನೀರಿನಲ್ಲಿ ಕೈಬಿಟ್ಟಾರೆ?... ಇನ್ನೂ ರಾಘಪ್ಪನ ದತ್ತಕವೊಂದಿದೆ. ರಾಘಪ್ಪನೀಗ ಸಮೀಪದಿಂದ ದ್ವೇಷ ಸಾಧಿಸುವವನು. ಆತನ ಆಟ ಸಾಗಗೊಡಬಾರದು. ಎಷ್ಟು ಅಪಮಾನವಾದರೂ, ಎಷ್ಟು ಕಷ್ಟಬಟ್ಟರೂ, ಈ ದುರ್ಬಲ ಮಗನ ಹಿತ ಆಗುವದು ತನ್ನಿಂದಲೇ... ಆದ್ದರಿಂದ ಅವನ ಸಾಮೀಪ್ಯ ಬಿಡಕೂಡದು...! ಇಂದು ತಾನು ಅವನ ಕೈಬಿಟ್ಟರೆ ನಾಳೆಯೇ ರಾಘಪ್ಪ ಅವನನ್ನು ನುಂಗಿಯೇ ಬಿಡುವನು!

* * * *

## ೨೧ : ದೇಸಾಯರ ಸುಖದುಃಖಗಳು

ದೇಸಾಯರ ಎಲ್ಲಕ್ಕೂ ಹಿರಿಯ ಮಗ ಅಚ್ಯುತ ಮುಂಬೈಗೆ ಬಿ.ಕಾಮ್. ಕಲಿಯಲಿಕ್ಕೆ ಹೋಗಿ ಈಗ ಎರಡು ವರ್ಷಗಳಾದವು. ಕಿರಿಯ ಮಗ ಪುರುಷೋತ್ತಮ ಇನ್ನೂ ಚಿಕ್ಕವನು. ಇಂಗ್ಲೀಷ ಶಾಲೆಯಲ್ಲಿ ಇದೀಗ ಐದನೆಯ ಇಯತ್ತೆಯಲ್ಲಿ ಕಲಿಯುತ್ತಿದ್ದನು. ಈ ಹುಡುಗನು ಕುಶಾಗ್ರಬುದ್ಧಿಯವನು. ಅವನಿಗಾಗಿ ಇನ್ನು ಎರಡು ವರ್ಷ ಧಾರವಾಡದಲ್ಲಿ ಮನೆ ಇಡಬೇಕೆಂಬ ವಿಚಾರದಲ್ಲಿ ಇದ್ದವರು ಹಳ್ಳಿಯಿಂದ ಬಂದ ಸುದ್ದಿಗಳನ್ನು ಕೇಳಿ ತಮ್ಮ ಯೋಚನೆಗಳನ್ನು ಬದಲಿಸಬೇಕೆಂದು ಆಲೋಚಿಸತೊಡಗಿದ್ದರು. ಪುರೋಷೋತ್ತಮನನ್ನು ಅಚ್ಯುತರಾಯನ ಕಡೆಗೆ ಮುಂಬೈಗೆ ಕಳಿಸಿಕೊಟ್ಟು ತಾವು ಸ್ವತಃ ದೇಸಗತಿಯ ಗ್ರಾಮಕ್ಕೆ ಹೋಗಬೇಕೋ ಹೇಗೆ ಎಂದು ಚಿಂತಿಸತೊಡಗಿದರು. ಆದರೆ ಈ ಚಿಂತೆಯಲ್ಲಿಯೇ ದಿನ ಕಳೆಯತೊಡಗಿದವು. ಶಹರದ ವಾಸಕ್ಕೆ ಒಮ್ಮೆ ಮೆಚ್ಚಿದಮೇಲೆ ಒಮ್ಮೆಲೇ ಕಿತ್ತಿಕೊಂಡು ಹೋಗುವದು ಆಗುತ್ತದೆಯೇ...? ಅಂತೂ ಸುಗ್ಗಿ ಬಂದಿತು. ತನ್ನೊಡನೆ ಹೊಸ ವರ್ತಮಾನವನ್ನೂ ತಂದಿತು.

ವಸಂತರಾಯನ ಬಗ್ಗೆ ಏನಿಲ್ಲೊಂದು ಸುದ್ದಿ ಹದಿನೈದು ದಿನಕ್ಕೊಮ್ಮೆ ದೇಸಾಯರಿಗೆ ಮುಟ್ಟಿಯೇ ಇರುವದು ; ಇನ್ನೂ ಮುಟ್ಟಬಾರದ ಸುದ್ದಿಗಳು ಅನೇಕವಿದ್ದವು ; ಅವನ್ನೂ ದೇಸಾಯರು ತರ್ಕಿಸಿ ಬಲ್ಲರು. ಸುದ್ದಿ ತರುವ ಹಳ್ಳಿಯ ವೃದ್ಧ ರೈತರು ತಂದೆಯ ಎದುರು ಹೇಳಬಲ್ಲುದಿಷ್ಟನ್ನು ಆದಷ್ಟು ಮೆತ್ತಗೆ ಮಾಡಿ ಹೇಳುವರು. ದೇಸಾಯರು ತಮ್ಮ ಅಭಿಮಾನಕ್ಕೆ ತಕ್ಕಷ್ಟೇ ಮಾತಿಗೆ ಆಸ್ಪದಕೊಟ್ಟು, ಸಿಕ್ಕ ಸುದ್ದಿಯನ್ನೇ ಕಲ್ಪನಾಶಕ್ತಿಯಿಂದ ಪೂರ್ಣಗೊಳಿಸಿ ತಮ್ಮದೇ ಅರ್ಥ ಮಾಡಿಕೊಳ್ಳುವರು. ಉಡಾಳರ ಮೇಳಕಟ್ಟಿ ಇಸ್ಪೀಟು ಆಡುವದರಲ್ಲಿ ವೇಳೆಗಳೆಯುತ್ತಾನೆ ಎಂಬುದನ್ನು ರೈತರು ಹೇಳಿದ್ದರು. ವಸಂತರಾಯನ ಸಂಗಡಿಗರ ಹೆಸರು ಕೇಳಿದಮೇಲೆ ತುಸು ಕುಡಿಯುವ ಚಟವೂ ಇದ್ದಿರಬೇಕೆಂದೂ ದೇಸಾಯರ ಅಂದಾಜು. ಹಳ್ಳಿಯನ್ನು ಹೊಕ್ಕೊಡನೆ ತುಸು ದಿನಗಳಲ್ಲಿಯೇ ಹಳ್ಳಿಯ ಸುಖದುಃಖ ವಿಶೇಷಗಳಲ್ಲಿ ವಸಂತನು ಹಳ್ಳಿಗರಿಗಿಂತ ಹುಂಬ ಉತ್ಸಾಹವನ್ನು ತಳೆದಿದ್ದನು. ಸಾಮಾನ್ಯ ಹಳ್ಳಿಗನಿಗೆ ಎತ್ತುಗಳು ಅಭಿಮಾನ ಬಹಳ. ಆದರೆ

ಅವರನ್ನು ಕಂಡು ತಾನೂ ಎತ್ತುಗಳನ್ನು ಪ್ರೀತಿಸತೊಡಗಿ, ಅವುಗಳಿಗೆ ಹದಿನೈದು ದಿವಸಕ್ಕೊಮ್ಮೆ ಧಾರವಾಡದ ಲೈನ್ ಬಝಾರ ಫೇಡೆಗಳನ್ನು ತಿನಿಸುತ್ತಿದ್ದನು ! ಈ ಆಹಾರವು ಅವನದೇ ವೈಶಿಷ್ಟ್ಯ ; ಕಲ್ಪಕತೆಯ ಕುರುಹು. ಅದರಂತೆ ಹೊಲಗಳ ಬಗ್ಗೆಯೂ ಅಭಿಮಾನವನ್ನು ತಳೆದು ಸುಗ್ಗಿಯ ಕಾಲಕ್ಕೆ ಒಮ್ಮೊಮ್ಮೆ ಹೊಲಕ್ಕೇ ಮಲಗಲು ಹೋಗತೊಡಗಿದನು. ಬೆಳಗು ಮುಂಜಾನೆ ನಾಲ್ಕು ಜೋಳದ ತೆನೆಗಳನ್ನು ಮುರಿದುಕೊಂಡ ನೆರೆಯ ಹೊಲದ ಹುಡುಗನನ್ನು ಚಾವಡಿಗೆ ಎಳೆದು ತಂದು ವಸಂತರಾಯ ಮೊಚ್ಚೆಯಿಂದ ಹೊಡೆದನು. ಇದರಿಂದ ಊರ ತುಂಬ ಹಾಹಾಕಾರವೆದ್ದಿತು. ವಸಂತರಾಯನ ಹುಂಬತನದ ಪರಿಣಾಮುವಾಗಿ ಊರಲ್ಲಿಯು ದ್ವೇಷಕಲಹಗಳು ಮೆಲ್ಲನೆ ಬೆಳೆದು ಬಣಗಳಾಗತೊಡಗಿದ್ದವು. ಈ ಸುದ್ದಿ ದೇಸಾಯರಿಗೆ ಮುಟ್ಟಿತ್ತು. ಆದರೆ ಇತ್ತಿತ್ತ ವಸಂತನ ವಿಷಯದಲ್ಲಿ ಸತ್ಯದ ಬಗ್ಗೆ ದೇಸಾಯರಿಗೆ ಮುಟ್ಟಿತು. ಆದರೆ ಇತ್ತಿತ್ತ ವಸಂತನ ವಿಷಯದಲ್ಲಿ ಸತ್ಯದ ಬಗ್ಗೆ ದೇಸಾಯರಿಗೆ ಹೆದರಿಕೆ ಸುರುವಾಗಿತ್ತು. ಎಲ್ಲ ಸತ್ಯವನ್ನು ತಿಳಿದುಕೊಂಡರೆ ಅದನ್ನು ಸಹಿಸುವದು ತಮ್ಮಿಂದ ಸಾಧ್ಯವೇ ? ಇದೇ ಭೀತಿಯಿಂದ ಅವರು ವಸಂತನನ್ನು ಅವನ ಪಾಡಿಗೇ ಬಿಟ್ಟುಕೊಟ್ಟು, ಅವನನ್ನು ಸುಧಾರಿಸುವ ಇಲ್ಲವೆ ಅವನಿಂದಾದ ದುಷ್ಪರಿಣಾಮಗಳನ್ನು ಲೋಪಗೊಳಿಸುವ ಗೋಜಿಗೇ ಹೋಗಲಿಲ್ಲ. ತಮಗೆ ತಿಳಿದಷ್ಟು ಸತ್ಯವನ್ನೇ ಇನ್ನೂ ಮೆಲ್ಲಿತ್ತಾಗಿ ಮಾಡಿ ಹೆಂಡತಿಗೆ ಹೇಳಿದರು ; ಇಲ್ಲವಾದರೆ ತಮಗೆ ತಿಳಿದಷ್ಟು ಸತ್ಯದಲ್ಲಿ ನೂರರ ಹತ್ತು ಪಾಲನ್ನು ಕೂಡ ತಮ್ಮ ಸಹಧರ್ಮಿಣಿ ಸಹಿಸಲಾರಳು ಎಂಬುದು ಅವರಿಗೆ ಗೊತ್ತು. 'ಮೇಳ ಕಟ್ಟಿದ್ದಾನೆ' ಎಂಬುದನ್ನೇ 'ನಾಲ್ಕು ಸ್ನೇಹಿತರನ್ನು ಗಳಿಸಿದ್ದಾನೆ'ಯೆಂದಲೂ, 'ಹೊಲ ಕಾಯಲು ಹೋಗಿ ಯಾರಿಗೋ ಮೊಚ್ಚೆಯಿಂದ ಹೊಡೆದ'ನೆಂಬಿದರ ಬದಲು, 'ಹೊಲಗಳ ಕಡೆಗೆ ಲಕ್ಷ್ಯಹಾಕುತ್ತಿದ್ದಾನೆ'ಯೆಂದೂ ಹೇಳಿದರು. ಅದಿಷ್ಟರ ಸುಂದರ ಸ್ವಪ್ನಗಳಲ್ಲಿಯೇ ಆ ಅಲ್ಪ ಸಂತೋಷಿಯಾದ ವೇಣೂಬಾಯಿ ಕಾಲಹಾಕುತ್ತಿದ್ದಳು.

ಆದರೆ ಇದೀಗ ಬಂದ ಸುದ್ದಿ ಇನ್ನೂ ಕಠಿಣವಾಗಿತ್ತು. ವಸಂತ ಮನೆಯಲ್ಲಿಯ ಧಾನ್ಯದ ಚೀಲಗಳನ್ನು ಮಾರಿಕೊಂಡನಿಷ್ಟೇ ಅಲ್ಲ, ಒಂದೆರಡು ಹಗೆಗಳನ್ನು ಸಟ್ಟಾ ಮಾರಿಬಿಟ್ಟನೆಂದೂ, ಊರೊಳಗಿನ ಅವನ ಶಕುನಿಯಂಥ ಸ್ನೇಹಿತರು ಧಾರವಾಡಕ್ಕೆ ಸುದ್ದಿ ಮುಟ್ಟೀತೆಂಬ ಹೆದರಿಕೆಯಿಂದ ಧಾನ್ಯವನ್ನು ಕೂಡಲೆ ತಮ್ಮ ತಮ್ಮ ಮನೆಗೆ ಸಾಗಿಸಿಬಿಟ್ಟಿದ್ದಾರೆಂದೂ ಗೊತ್ತಾಯಿತು. ಊರೊಳಗಿನ ಮರ್ಯಾದೆವಂತ ಮನೆತನದವರು ದೇಸಾಯರಿಗೆ ಎರಡು

ಬಗೆಯಲೊಲ್ಲದೆ ಆ ಕಡಿಮೆ ಬೆಲೆಯ ಲಾಭ ತಕ್ಕೊಳ್ಳಲು ಒಲ್ಲೆನೆಂದರೆಂದರೆ ಅಂಥವರ ಮೇಲೆ ವಸಂತ ಕೆಂಡಕಾರುತ್ತಿದ್ದಾನೆಂದೂ ಸುದ್ದಿ. ಇದರ ಮೇಲೆ ದೇಸಾಯರು ಸತ್ಯಕ್ಕೆ ಹೆದರಿ ದೂರ ಉಳಿಯುವದು ಸಾಧ್ಯವೇ ಇರಲಿಲ್ಲ. ಹೆಂಡತಿಗೆ ಇದಾವುದನ್ನೂ ತಿಳಿಸದೆ, 'ಸುಗ್ಗಿ ನೋಡಿ ಬರುತ್ತೇನೆ' ಎಂದು ಹೇಳಿ ಊರಿಗೆ ಹೋದರು.

ಹೊರಗಿನವರಿಗೆ ಪರಿಸ್ಥಿತಿಯ ಉತ್ಕಟಕ್ಕೆ ಹೊಳೆಯುತ್ತಿರಲಿಲ್ಲ. ಆದರೆ ವಸಂತನನ್ನು ಸಾಮೀಪ್ಯದಿಂದ ನೋಡುವ ದೇಸಾಯರಿಗೆ ಕೂಡಲೆ ಅದರ ಅರಿಕೆಯಾಯಿತು. ಊರಲ್ಲಿ ಬಣಗಳೆದ್ದಿದ್ದವು. ರಾಮನಗೌಡನೂ ದೊಡ್ಡ ಕಮತಿಗನು. ಮುಲ್ಕೀ ಪರೀಕ್ಷೆ ಪಾಸಾದ ಅವನ ಹಿರಿಯ ಮಗನಿಗೂ ಮ್ಯಾಟ್ರಿಕ್ ನಪಾಸಾದ ವಸಂತಿಗೂ ಬದ್ಧ ದ್ವೇಷ ; ಅವರಿಬ್ಬರೂ 'ನಾಲ್ಕು ಬುಕ್ಕು' ಓದಿದವರು; ಇಬ್ಬರೂ ಸಿರಿವಂತರು ; ಇಬ್ಬರೂ ಕಮತಿಗರು ! ಪೈಪೋಟಿಯಿಂದ ಆರಂಭವಾದದ್ದು ದ್ವೇಷಕ್ಕೆ ಹಾಕಿತ್ತು. ಅವನು ಇದೀಗ ತನ್ನ ಓಣಿಯ ಮೇಳವನ್ನು ಕೂಡಿಸಿ ಬಯಲಾಟವನ್ನು ಮಾಡಬೇಕೆಂದು ಸಿದ್ಧತೆ ಮಾಡತೊಡಗಿದೊಡನೆ ವಸಂತನ ಉಡಾಳ ಮಿತ್ರರು ಅವನನ್ನು ಹುರಿಗೊಳಿಸಿದರು. ಗೌಡ ಬಯಲಾಟ ಮಾಡಿಸಿದರೆ ತಾನು ನಾಟಕ ಹೊಡಿಸಿಯೇಬಿಡಬೇಕೆಂದು ನಿಶ್ಚಯಿಸಿ ಸಮೀಪದ ಊರಿಂದ ಓರ್ವ ಸಂಗೀತದ ಭಾಗವತನನ್ನು ಊರಿಗೆ ಬರಮಾಡಿಕೊಂಡು ಮನೆಯಲ್ಲಿಯೇ ಮೇಳ ಹೂಡಿದ್ದನು. ಭಾಗವತನಾದ ಅಪ್ಪಣಭಟ್ಟನು ರಾತ್ರಿಯೆಲ್ಲ ಮೇಳದವರಿಗೆ ಮಾತು–ಹಾಡು ಹೇಳಿಕೊಡುತ್ತಿದ್ದನು. ಮನೆಯಲ್ಲಿ 'ಧುರಂಧರೀ ಜಾತ್ರಿ' ನಡೆದಿತ್ತು. 'ನಿದ್ದೆಗಿರಲಿಲ್ಲ ರಾತ್ರಿ.' ಆದರೆ ದ್ವೇಷದಲ್ಲಿ ಹುಟ್ಟಿದ ಈ ಸೊಗಸು ಶೃಂಗಾರದಲ್ಲಿ ಅಷ್ಟಿಷ್ಟಕ್ಕೆ ಸಂದೇಹ, ತಕರಾರುಗಳು ಏಳುತ್ತಿದ್ದವು.

ದೇಸಾಯರು ಊರಿಂದ ಬಂದೊಡನೆ ಮನೆಯೊಳಗಿನ ಗದ್ದಲವಡಗಿತು, ಅದರೊಡನೆ ವಸಂತನೂ ಅಡಗಿದನು. ಅವನು ಮನೆಯಲ್ಲಿ ಇದ್ದರೂ ತಂದೆಯ ಮುಖದರ್ಶವಾಗದಂತೆ ಮನೆಯಲ್ಲಿಯೇ ತಪ್ಪಿಸಾಡುತ್ತಿದ್ದನು. ದೇಸಾಯರು ಹಿತ್ತಲದತ್ತ ಇದ್ದಾಗ ತಾನು ಮುಂಚೀ ಕಡೆಗೆ, ಅವರು ಮುಂಚೀ ಕಡೆಗಿದ್ದಾಗ ತಾನು ಹಿತ್ತಲ ಕಡೆಗೆ ; ಹೀಗೆ 'ಯಾ ನಿಶಾ ಸರ್ವ ಭೂತಾನಾಂ' ನಡೆದಿತ್ತು. ಭೀತಿಯಿಂದ ನಾಟಕದ ಗೆಳೆಯರು ಮನೆಯಿಂದ ಓಡಿದ ಮೂಲಕ ನಾಟಕದ ಆಟ ಅಷ್ಟಕ್ಕೇ ಮುಗಿಯಿತೆಂದು ದೇಸಾಯರು ಕಲ್ಪಿಸಿದರು. ಆದರೆ ಎರಡು ದಿನಗಳಲ್ಲಿಯೇ ಓಣಿಯ ಮೂಲೆಯಲ್ಲಿದ್ದ ದೆವ್ವನ ಮನೆಯೊಂದು ಹೆಸರಾದ ಸ್ಥಾನದಲ್ಲಿ ಈ ಯಾಮಪೂಜೆ ಒಂದೂ ದಿನದ ಭಂಗವಿಲ್ಲದೆ ಮುಂದುವರಿದದ್ದು

ತಿಳಿದುಬಂದಿತು. ದೇಸಾಯರು ವಸಂತನನ್ನು ಕರೆಕಳಿಸಿದಂತೆ ಆತ ಕಣ್ಮರೆಯಾಗುತ್ತಿದ್ದನು. ಕರೆಯಲು ಕಳಿಸಿದ ಆಳುಮಕ್ಕಳಿಗೆ ಅವನು 'ಬರೂದಿಲ್ಲ ಅಂತ ಹೇಳ ಹೋಗಲೆ !' ಎಂದು ಜಂಭದಿಂದ ಆಡಿದರೂ ಕೂಡ, ದೇಸಾಯರಿಗೆ ಹೆದರಿಯೋ, ತಮ್ಮ ಬುದ್ಧಿಯಿಂದಲೋ ಏನೋ, ಆಳುಮಕ್ಕಳು, 'ಈಗ ಬರತೇನಿ ಅಂದು ಹೋದರರೀ !' 'ನಾ ಸಿಗಲಿಲ್ಲ ಅಂತ ಹೇಳು ಹೋಗಲೆ ; ಅಂತ ಅಂದರರೀ !' 'ಕರೀತಾರ ಬರ್ರಿ ಗೌಡರ ಅಂದರ ಹಿತ್ತಲ ಕಡೀಸಲೆ ಎಲ್ಲ್ಯೋ ಹೋದರರಿ !' ಇತ್ಯಾದಿ ವರದಿ ಮಾಡುವರು. ಒಮ್ಮೆ ಹಿಡಿದು ತರಿಸಲೋ, ಎಂಬ ವಿಚಾರ ಸುಳಿಯಿತು ದೇಸಾಯರಲ್ಲಿ. ಆದರೆ ನಾಳೆ ವಸಂತನೂ ಬಹದ್ದೂರ ದೇಸಾಯರ ಗಾದಿ ಏರುವವನು, ಎಂಬ ವಿಚಾರದಿಂದ ಅಷ್ಟು ದೀರ್ಘಕ್ಕೆ ಹೋಗಲಿಲ್ಲ. ಬೇರೊಂದು ಉಪಾಯವನ್ನೇ ತೆಗೆದರು. ಅವನೊಡನೆ ಕಣ್ಣುಮುಚ್ಚಾಲೆಯನ್ನು ಅಷ್ಟಕ್ಕೇ ಬಿಟ್ಟುಬಿಟ್ಟರು. ಆದರೆ ಓಲೆಕಾರರೊಂದಿಗೆ ಭಾಗವತದಾಟದ ಅಪ್ಪಣಭಟ್ಟನನ್ನು ಕರೆತರಿಸಿದರು. ಅವನ ಕೈಯಲ್ಲಿ ಹದಿನೈದು ರೂಪಾಯಿಗಳನ್ನು ಇಟ್ಟು, ಅವನಿಗೆ ಊರು ಬಿಟ್ಟು ಹೊರಟುಹೋಗಲು ಕಟ್ಟಪ್ಪಣೆ ಮಾಡಿದರು. ಅಪ್ಪಣಭಟ್ಟ ಓಡಿದ ಸುದ್ದಿ ಊರೊಳಗೆ ಹಬ್ಬಲು ರಾಮನಗೌಡನ ಮನೆಯಲ್ಲಿ ಹಬ್ಬವಾಯಿತು ; ವಸಂತನಿಗೆ ಅವಮಾನವಾಯಿತು. ಅವನು ನೊಂದುಕೊಂಡ. ತಾನಾಗಿಯೇ ತಂದೆಯನ್ನು ಕಾಣಲು ಬಂದನು. ದೇಸಾಯರು ಅವನಿಗೆ ಸಿಟ್ಟುಮಾಡಿ, ಇನ್ನೊಮ್ಮೆ ತಮಗೆ ತಿಳಿಸದೆ ಕಾಲು ಮಾರಕೂಡದೆಂದು ವಿಧಿಸಿ, ಅವನಿಗೆ ಅಪ್ಪಣಭಟ್ಟನನ್ನು ತಿರುಗಿ ಕರೆಸಿಕೊಳ್ಳಲು ಅನುಮತಿ ಕೊಟ್ಟುಬಿಟ್ಟರು. ಮಾರಿದ ಹಣದಲ್ಲಿ ಇನ್ನೂ ತುಸು ಹಣ ಅವನ ಬಳಿ ಉಳಿದಿತ್ತು, ಅದನ್ನು ಅವನಿಗೇ ಬಿಟ್ಟರು. ತಮ್ಮ ರೈತರನ್ನು ಕರೆಯಿಸಿ ಅವರಿಗೆ ವಸಂತನ ಮೇಲೆ ಕಣ್ಣಿಡಲು ಹೇಳಿದರು. ಅವರಿಂದ ಬರತಕ್ಕ ಹಣವನ್ನು ವಸೂಲು ಮಾಡಿಕೊಂಡು ಹದಿನೈದು ದಿನಗಳಲ್ಲಿ ಹಿಂತಿರುಗಿದರು.

ಧಾರವಾಡದಲ್ಲಿ ಅವರಿಗಾಗಿ ಒಂದು ಪತ್ರ ಕಾಯುತ್ತಿತ್ತು.

ಕ್ಷೇಮ ॥ಶ್ರೀ॥ ಬುಧವಾರ, ತಾ. ೨೩

ಮುಂಬೈ

ತೀರ್ಥರೂಪರ ಪೂಜ್ಯ ಚರಣಾರವಿಂದದಲ್ಲಿ ಚಿ. ಅಚ್ಯುತನ ಶಿರಸಾಷ್ಟಾಂಗ ನಮಸ್ಕಾರಗಳು. ನಾನು ಕ್ಷೇಮದಿಂದ ಇದ್ದೇನೆ. ಈಗ ಕಾಮರ್ಸ ಕಾಲೇಜ ಬಿಟ್ಟಿರುತ್ತೇನೆ. ಬೇರೆ ಶಿಕ್ಷಣ ತೆಗೆದುಕೊಳ್ಳುತ್ತೇನೆ. ಕಾಲೇಜ ಕಲಿಯುವದರಲ್ಲಿ ಯಾವ ಅರ್ಥವೂ ಇಲ್ಲವೆಂದು ಅನಿಸಿತು. ಅದಕ್ಕಾಗಿ ಬಿಟ್ಟಿದ್ದೇನೆ. ನಿಮಗೆ ತಿಳಿಸದಿದ್ದಕ್ಕಾಗಿ ಕ್ಷಮಿಸಬೇಕು. ಆದರೆ ಬೇರೆ ಉದ್ಯೋಗ ಕಲಿಯತೊಡಗಿದ್ದೇನೆ. ಹೊಸದಾಗಿ

ಸೇರಿಕೊಂಡು ಮೂಲಕ ಹಣದ ಅಡಚಣೆ ಆಗಿದೆ. ಅದಕ್ಕಾಗಿ ದಯವಿಟ್ಟು ಕೆಳಗಿನ ಪತ್ತೆಗೆ ೧೦೦ ರೂ. ಕಳಿಸಿಕೊಡಬೇಕು. ವಿಲಂಬ ಮಾಡಬಾರದು. ಬಾಕಿ ಕ್ಷೇಮ. ಮಾತೋಶ್ರೀಯವರಿಗೆ ಶಿ.ಸಾ.ನ.ಗಳು. ಅವರ ಹಾಗೂ ಚಿ. ತಮ್ಮಂದಿರ ಕ್ಷೇಮಸಮಾಚಾರ ತಿಳಿಸಬೇಕು.

ಇಂತೀ,

**ಅಚ್ಯುತ**

ಪತ್ತೆ : A.G.B. Desai c/o Devidas Flour Mill, No. 10021, Lalbag, Bombay.

ದೇಸಾಯರಿಗೆ ಆ ಪತ್ರದ ಅರ್ಥವೇ ಆಗದಾಯಿತು. ಕಾಲೇಜ ಬಿಟ್ಟದ್ದೇಕೆ?... ತಾನೇ ಆರ್ಟ್ಸ ಕಲಿಯುವದರಲ್ಲಿ ಅರ್ಥವಿಲ್ಲವೆಂದು ಕಾಮರ್ಸಕ್ಕೆ ಹೋಗಲು ಹಟಮಾಡಿ ಹೋದವನು ಈಗ ಕಾಲೇಜದಲ್ಲಿ ಅರ್ಥವಿಲ್ಲವೇಕೆ...? ಹೊಸ ಉದ್ಯೋಗ ಏನು....? ಈ ಹೊಸ ಪತ್ತೆ ಯಾವದು...? ಹಿಟ್ಟಿನ ಗಿರಣಿಯಲ್ಲಿ ಇವನದೇನು ಕೆಲಸ? ಮತ್ತೇನು ಅವಿವೇಕ ಮಾಡಿರಲಿಕ್ಕಿಲ್ಲವಷ್ಟೇ...? ಏಕೆಂದರೆ ಮುಂಬೈಯ ಸಾಕಷ್ಟು ಸುದ್ದಿಗಳು ಈಗಾಗಲೆ ವೃತ್ತ ಪತ್ರಗಳಲ್ಲಿ ಬರತೊಡಗಿದ್ದವು. ಏನೇ ಆಗಲಿ, ತಾವೇ ಪ್ರತ್ಯಕ್ಷ ಹೋಗಿ ನೋಡಬೇಕೆಂದು ವಿಚಾರಮಾಡಿದರು. ತಾರ–ಮನಿ–ಆರ್ಡರ ಮಾಡಿ, ಒಂದೆರಡು ದಿನಗಳಲ್ಲಿಯೇ ತಾವೇ ಮುಂಬೈಗೆ ಹೊರಟರು, 'ಅಚ್ಯುತನ ಭೆಟ್ಟಿ ಆಗಿ ಬರತೇನಿ' ಎಂದಿಷ್ಟೇ ಕುಟುಂಬಕ್ಕೆ ಹೇಳಿ.

ಬೋರೀಬಂದರಕ್ಕೆ ಇಳಿದೊಡನೆ ಲಾಲಬಾಗದ ವಿಚಾರವನ್ನು ಬಿಟ್ಟುಕೊಟ್ಟು ದೇಸಾಯರು ಮೊದಲು ಕಾಮರ್ಸ ಕಾಲೇಜಿನ ಹಾಸ್ಟೆಲ್ಲಿಗೆ ವಿಕ್ಟೋರಿಯಾ ಒಯ್ದರು. ಹಾಸ್ಟೆಲಿನ ಸುಪರಿಂಟೆಂಡೆಂಟರನ್ನು ಭೆಟ್ಟಿಯಾದರು. ಅಚ್ಯುತನ ಅವಿವೇಕದ ವರ್ತಮಾನ ಕೂಡಲೇ ಸಿಕ್ಕಿತು.

ಉಪ್ಪಿನ ಸತ್ಯಾಗ್ರಹ !

ಅಚ್ಯುತನು ಇಬ್ಬರು ಸಂಗಡಿಗರೊಡನೆ ಕಾಲೇಜದ ಎದುರು ಒಮ್ಮೆ ಪಿಕೆಟಿಂಗ್ ಮಾಡಿದ ಸಂಶಯದ ಮೇಲಿಂದ ಕಾಲೇಜ ಅಧಿಕಾರಿಗಳು ಅವನಿಗೆ ಒಂದು 'ವಾರ್ನಿಂಗ್' (ಎಚ್ಚರಿಕೆ) ಕಳಿಸಿದರು. ಮರುದಿನ ಬಂದು ತಾನು ಊರಿಗೆ ಹೋಗಿಬರುತ್ತೇನೆಂದು ಸುಪರಿಂಟೆಂಡೆಂಟರಿಗೆ ಹೇಳಿದನಂತೆ. ಅವರಿಗೆ ಸಂದೇಹ ಬಂದು ಅವನನ್ನು ಪ್ರಶ್ನಿಸಿದರಂತೆ. ಆದರೆ ಅವನಿಗೆ ಉಪದೇಶ ಕೊಡಲು ಅವಕಾಶವನ್ನೇ ಕೊಡದೆ, ಆತ 'ಊರಿಗೇ ಹೋಗುತ್ತೇನೆ, ಇನ್ನೆಲ್ಲಿ ಇಲ್ಲ' ಎಂದ ಹೇಳಿ, ಹಾಸ್ಟೆಲ್‌ನಿಂದ ಹೋದವನು ಸತ್ಯಾಗ್ರಹದಲ್ಲಿ ಪ್ರತ್ಯಕ್ಷ ಬಹಿರಂಗವಾಗಿಯೇ ಭಾಗವಹಿಸಿದನಂತೆ, ಅವನ ಇಬ್ಬರು ಸಂಗಡಿಗರು ಜೇಲಿನಲ್ಲಿ

ಮೂರು ದಿವಸ ಇದ್ದು ಕ್ಷಮಾಪಣೆ ಬೇಡಿ ಬಿಡಲ್ಪಟ್ಟರು. ಮತ್ತೆ ಅವರನ್ನು ಕಾಲೇಜಿನಲ್ಲಿ ಸೇರಿಸಿಕೊಳ್ಳಲಾಯಿತು ; ಪುನಃ ಹಾಸ್ಟೆಲ್ಲಿನಲ್ಲಿ ಕೂಡ ಜಾಗೆ ಕೊಡಲಾಯಿತು. ಆದರೆ ಅಚ್ಯುತ ಮಾತ್ರ ಕ್ಷಮೆ ಬೇಡದ್ದಕ್ಕೆ ಒಂದು ತಿಂಗಳು ಜೇಲುವಾಸವನ್ನು ಅನುಭವಿಸಿದನು ! ಜೇಲಿನಿಂದ ಬಿಟ್ಟ ಮೇಲೆ ಮತ್ತೆ ಕಾಲೇಜಿಗೆ ಬಂದನಂತೆ. ಆದರೆ ಸರಕಾರದವರು ಮೊದಲೇ ಕಾಲೇಜಿಗೆ ರಿಪೋರ್ಟ ಕಳಿಸಿದ್ದ ಮೂಲಕ ಅವನನ್ನು ಸೇರಿಸಿಕೊಳ್ಳಲಿಲ್ಲ. ಹಾಸ್ಟೆಲ್ಲಿನಿಂದ ತನ್ನ ಗಂಟುಮೂಟೆ ಕಟ್ಟಿಕೊಂಡು ಅವನು ಹದಿನೈದು ದಿವಸಗಳ ಕೆಳಗೇ ಎಲ್ಲಿಂರೋ ಹೊರಟುಹೋದನು....

ದೇಸಯರು ಅಚ್ಯುತನ ಇಬ್ಬರು ಸಂಗಡಿಗರನ್ನು ಕರೆಯಿಸಿಕೊಂಡು ಅವರಿಂದ ಮಾಹಿತಿ ತಿಳಿದುಕೊಂಡರು.... ಅದೇ ಕಥೆ. ಜೇಲಿನಲ್ಲಿ ಅವರಿಬ್ಬರೂ ಎಷ್ಟು ಒತ್ತಾಯಮಾಡಿದರೂ ಹಟದಿಂದ ಅಲ್ಲಿಯೇ ಉಳಿದನೆಂದೂ, ಅವನು ಸದ್ಯಕ್ಕೆ ಎಲ್ಲಿದ್ದಾನೆಂದು ತಮಗೆ ತಿಳಿಯದೆಂದೂ, ಅವರು ಹೇಳಿದರು. ಇದಲ್ಲದೆ ತಂದೆಗೆ ಈ ವಿಷಯಕ್ಕೆ ಏನೂ ಬರೆಯಕೂಡದೆಂದು ತಮಗೆ ಕಟ್ಟಪ್ಪಣೆ ಮಾಡಿದ್ದನೆಂಬುದೂ ಗೊತ್ತಾಯಿತು.

ಸುಪರಿಂಟೆಂಡೆಂಟರಿಗೆ ದೇಸಾಯರು ಶಕ್ಯವಿದ್ದಷ್ಟು ನಮ್ರತೆಯಿಂದ, 'ಬರೆದಂತೆ ಇದೆಯಲ್ಲ ; ನಾನೇ ಡ್ರಾಫ್ಟ ಮಾಡಿದೆ, ಪ್ರಿನ್ಸಿಪಾಲರು ಸಹಿ ಮಾಡಿದರು' ಎಂದು ತಮ್ಮ ಔಟವರ್ಡ ರಿಜಿಸ್ಟರ ನೋಡತೊಡಗಿದರು ; ಸಿಕ್ಕಿತು. ಪತ್ರವನ್ನು ಸರಕಾರದಿಂದ ರಿಪೋರ್ಟ ಬಂದೊಡನೆ ಹಾಕಿದೆ ; ಆದರೆ ಪತ್ರ ಏಕೆ ಸಿಕ್ಕಿರಲಿಕ್ಕಿಲ್ಲ?... ದೇಸಾಯರು ಕುತೂಹಲದಿಂದ ರಜಿಸ್ಟರ ನೋಡಿದರು ; ತಮ್ಮ ಹೆಸರೇನೋ ಸರಿಯಾಗಿದೆ. ಆದರೆ ಊರ ಹೆಸರು ಧಾರವಾಡ ಬದಲು ಪತ್ತೆ ಧಾರಿವಾಲ ಎಂದು ಬಿದ್ದಿದೆ. ಸರಿ, ಧಾರವಾಲದಲ್ಲಿ ಪತ್ರ ತಿರುಗಾಡಿ ಈಗಾಗಲೆ ಸತ್ತ ಪತ್ರಗಳ ಕಚೇರಿಯನ್ನು (Dead Letter Office) ಸೇರಿಸಬೇಕು!

ಯಾರಿಗೂ ದೋಷ ಕೊಡುವ ಮನಃಸ್ಥಿತಿಯಲ್ಲಿಲ್ಲದ ದೇಸಾಯರು ಸುಪರಿಂಟೆಂಡೆಂಟರಿಗೆ, 'ಈಗ ಕ್ಷಮೆ ಬೇಡಿದರೆ ಕಾಲೇಜಿಗೆ ಸೇರಿಸಿಕೊಳ್ಳುತ್ತೀರಾ?' ಎಂದು ಕೇಳಿದರು. ಅವರಿಗೆ ಒಮ್ಮೆಲೆ ಉತ್ತರ ಕೊಡಲು ಧೈರ್ಯವಾಗಲಿಲ್ಲ. ಸರಕಾರದ ರಿಪೋರ್ಟ ಅಂತೂ ನಿಃಸಂದಿಗ್ಧವಾಗಿ ವಿರೋಧಕವಾಗಿತ್ತು. ಆದರೆ ಪ್ರಿನ್ಸಿಪಾಲರಿಗೆ ಆಗಲಿ, ಸುಪರಿಂಟೆಂಡೆಂಟರಿಗೆ ಆಗಲಿ ಅಚ್ಯುತನ ಬಗ್ಗೆ ಅಭಿಮಾನ... ಆತ ಒಬ್ಬ ಒಳ್ಳೆಯ ವಿದ್ಯಾರ್ಥಿಯೆಂದು. ಪ್ರಿನ್ಸಿಪಾಲರೊಡನೆ ಚರ್ಚಿಸಿ ಬಂದರು. 'ಅವನ ಹಾಜರಿ ಬಹಳ ಹೋಗಿರಬಹುದು. ಅಲ್ಲದೆ ಸರಕಾರವೂ ಈ ವಿಷಯಕ್ಕೆ

ಈಗೀಗ ಬಹಳ ಕಠೋರವಾಗಿದೆ. ಕ್ಷಮೆ ಬೇಡಿ ಬಂದ ವಿದ್ಯಾರ್ಥಿಗಳು ಮತ್ತೆ ಚಳವಳಿಯಲ ಸೇರಿಕೊಂಡ ಮೂಲಕ. ಆದರೆ ಅಚ್ಯುತನ ಬಗ್ಗೆ ನಮ್ಮೆಲ್ಲರಿಗೂ ಒಳ್ಳೆಯ ಅಭಿಪ್ರಾಯವಿದ್ದ ಮೂಲಕ ಅವನಿಗೆ ಸ್ಪೆಶಲ್ ರಿಕಮೆಂಡೇಶನ್ ಕೊಟ್ಟು ಸೇರಿಸಿಕೊಳ್ಳಬಹುದು. ಆದರೆ ಇನ್ನು ಮುಂದೆ ರಾಜಕಾರಣದಲ್ಲಿ ಬೀಳುವದಿಲ್ಲವೆಂದು ಬರೆದುಕೊಡಬೇಕು' ಎಂದು ತಿಳಿಸಿದರು.

ಅಚ್ಯತನು ಕಾಲೇಜಿನಲ್ಲಿ ಎಲ್ಲರಿಗೂ ಬೇಕಾದವನಾಗಿದ್ದನೆಂಬುದು ತಿಳಿದೊಡನೆ ದೇಸಾಯರಿಗೆ ಆನಂದ–ಅಭಿಮಾನ–ಚಿಂತೆಗಳು ಹೆಚ್ಚಿದವು. ಜೇಲಿನಲ್ಲಿ ಸೇರಿದುದು ಧಾರವಾಡದಲ್ಲಿ ಇಂದಿಲ್ಲ ನಾಳೆ ತಿಳಿದರೆ ಹೇಗೆ, ಎಂಬ ಭಯವೂ ಆವರಿಸಿತು. ಕ್ಷಮಾಪಣೆ ಬೇಡಲಿಲ್ಲವೆಂಬ ವಿಚಾರದಿಂದ 'ಅವನೂ ಬಹದ್ದೂರ ದೇಸಾಯಿ !' ಎಂದು ಅವರ ಎದೆ ಉಬ್ಬಿತು. 'ಜೇಲವಾಸ' ಎಂದೊಡನೆ ಅವಮರ್ಯಾದೆಯ ಹೆದರಿಕೆ...

ಸುಪರಿಂಟೆಂಡೆಂಟರು ಕೊನೆಗೆ ಇಂಥ ಉತ್ತಮ ವಿದ್ಯಾರ್ಥಿಯ ವಿದ್ಯಾ ಜೀವನ ಹಾಳಾಗುವದನ್ನು ಕಂಡು ತಮಗೂ ಪ್ರಿನ್ಸಿಪಾಲರಿಗೂ ಅದ ಹಳ ಹಳಿಯನ್ನು ಇನ್ನೊಮ್ಮೆ ವ್ಯಕ್ತಗೊಳಿಸಿ, 'ಕ್ಷಮಾಪತ್ರವೊಂದನ್ನು ತನ್ನಿರಿ ; ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ' ಎಂಬ ಆಶ್ವಾಸನವನ್ನು ಕೊಟ್ಟು ಕಳಿಸಿಕೊಟ್ಟರು.

ದೇಸಾಯರು ಮರುಮಾತಾಡದೆ ಅಲ್ಲಿಂದ ಲಾಲಬಾಗಕ್ಕೆ ಬಂದರು. ಲಾಲಬಾಗದಲ್ಲಿ ಟಾಂಗಾ ತೆಗೆದುಕೊಂಡು ದೇವಿದಾಸ ಫ್ಲೋರ್ ಮಿಲ್ಲನ್ನು ಹುಡುಕಿದರು. ಮಧ್ಯಾಹ್ನ ಒಂದು ಹೊಡೆದಿತ್ತು. ಲಾಲಬಾಗದಲ್ಲಿ ಮನೆ ಹುಡುಕುವದೊಂದು ಬಲು ಕೆಟ್ಟ ಕೆಲಸ. ಅರ್ಧ ಮೈಲುಗಳವರೆಗೆ ಗಿರಣೀ ಫ್ಯಾಕ್ಟರಿಗಳ ಚಚ್ಚೌಕ ಕಂಪೌಂಡು, ನಂತರ ಸೊಟ್ಟಪಟ್ಟ ಮನೆಗೆ ಗುಡಿಸಲುಗಳು ಚೆಲ್ಲಾಪಿಲ್ಲಿಯಾಗಿ. ಕೊನೆಗೆ ಪೋಸ್ಟಮನ್ನನ ಸಹಾಯವನ್ನು ಪಡೆದು ದೇವಿದಾಸ ಫ್ಲೋರ್ ಮಿಲ್ ಹುಡುಕಿ ತೆಗೆದರು.

ಅದೊಂದು ಗುಡಿಸಲಿನಂಥ ಮನೆ. ಹೊರಗೆ ಮಖಾಳ ಅಕ್ಷರದಲ್ಲಿ ಗುಜರಾಥಿ ಅಕ್ಷರಗಳಲ್ಲಿ 'ದೇವಿದಾಸ ಫ್ಲೋರ್ ಮಿಲ್' ಎಂದು ಬರೆದಿತ್ತು. ತಗಡಿನ ಚಪ್ಪರ. ಸಮೀಪದಲ್ಲಿ ಅರಳೆಯ ವ್ಯಾಪಾರ ಮುಂತಾದುವು ನಡೆಯುತಿದ್ದ ಮೂಲಕ ಆ ತಗಡು–ಗೋಡೆಗಳಿಗೆಲ್ಲ ಹಂಜಿಹಂಜಿಯಾಗಿ ಅರಳೆ ಹತ್ತಿಕೊಂಡಿತು. ಎಲ್ಲವೂ ಹಳೆಯದು, ಮಾಸಿಹೋಗಿದ್ದು. ಒಳಗೆ ಗಿರಾಕಿಗಳಿಲ್ಲದ್ದಕ್ಕಾಗಿ ನೊಣ ಜಾಡಿಸುತ್ತ ಒಂದು ವಿಚಿತ್ರ ವ್ಯಕ್ತಿ ಕುಳಿತುಕೊಂಡಿತ್ತು. ತ್ರಿಕೋಣಾಕಾರದ ಪೂರ್ಣ

ಮುಂದಿನ ತಲೆ, ಚೂಪನೆಯ ಮೂಗು, ಗುಲಗಂಜಿಯಂತೆ ಕೆಂಪಾದ ದೊಡ್ಡ ಕಣ್ಣುಗಳು, ತಲೆಯ ಮೇಲೆ ಬಿರುಸಾಗಿ ಎದ್ದುನಿಂತ ನರಗಳು, ಹೀಗೆ ಎಲ್ಲವೂ ವಿಚಿತ್ರವಾಗಿತ್ತು. ಆದರೆ ಅವನನ್ನು ಕಂಡೊಡನೆ ಇವನನ್ನು ಮೊದಲು ಎಲ್ಲೋ ನೋದಂತೆ ಭಾಸವಾಗತೊಡಗಿತು. ಅವನು ಭಯ್ಯಾಜನರಂತೆ ತೋಳಿಲ್ಲದ ಲಂಡ ಅಂಗಿ, ಲಂಡ ಧೋತರ ಉಟ್ಟಿದ್ದನು. ಆದರೆ ಅವುಗಳ ಮೇಲೆ ಮಾತ್ರ ಒಂದಿಷ್ಟು ಕೂಡ ಧೂಳಿಯ ಕಣಗಳಿರಲಿ. ಮುಂಬೈಯ ಇಂಥ ಹೊಲಸು ಭಾಗದಲ್ಲಿ, ಇಂಥ ಹಿಟ್ಟಿನ ಗಿರಣಿಯಲಿಲ, ತಾನು ಇಂಥವನಾಗಿದ್ದುಕೊಂಡೂ ಅವನ ಎಲ್ಲ ವಿಚಿತ್ರ ಗುಣಗಳಲ್ಲಿ ಇದೂ ಒಂದು. ಆದ್ದರಿಂದ ಅವನು ಪೂರ್ಣ ಭಯ್ಯಾನಂತೆಯೂ ಕಾಣಿಸುತ್ತಿರಲಿಲ್ಲ. ದೇಸಾಯರು ಬಂದದ್ದನ್ನು ನೋಡಿ ಅವನಿಗೂ ಆಶ್ಚರ್ಯವಾದಂತೆ ತೋರಿತು. ಅವರತ್ತ ನೋಡುತ್ತ, 'ಕ್ಯಾ ಹೈ?' ಎಂದು ಗಡಸು ದನಿಯಲ್ಲಿ ಅಂದನು.

'ಇಧರ ಕೋಯಿ ಬಹಾದ್ದೂರ ದೇಸಾಯಿ ನಾಮವಾಲಾ ಆದಮಿ ಹೈ? (ಇಲ್ಲಿ ಬಹದ್ದೂರ ದೇಸಾಯಿ ಎಂಬ ಹೆಸರಿನ ಮನುಷ್ಯನಿದ್ದಾನೆಯೇ)'

'ಯಾರು ನೀವು...? ಅವರ ಹಿರೇರೇನು....?' ಒಮ್ಮೆಲೇ ಆ ಭಯ್ಯಾ ಅಚ್ಚ ಕನ್ನಡದಲ್ಲಿ ಮಾತಾಡಿದ್ದನ್ನು ಕೇಳಿ ದೇಸಾಯರು ಅಪ್ರತಿಭರಾದರು. ಅವನಿಗೆ ಎಡವಟ್ಟರಂತೆ ಗಡಿಬಿಡಿಯಿಂದ ಮಾತಾಡುವ ಚಟವಿದ್ದಿತು.

'ಹೌದು – ಇದ್ದಾರೇನು?'

'ಇನ್ನೂ ಇದs ಹೋದರು... ಇಕಾ ಈಗ ಇದs ಹೋದರು... ಇನ್ನೂ ತನಕಾ ಇಲ್ಲೇ ಇದ್ದರು. ಇಕಾ ಇದs ಈ ಪಟ್ಟಾ ರಿಪೇರಿ ಮಾಡಿದರು... ಮಾಡಿದವರುs ಹೋದರು...'

'ಎಲ್ಲಿ ಹೋದರು?'

'ವರ್ತಮಾನಪತ್ರಕ್ಕs. ಒಂಬತ್ತರಿಂದ ಹನ್ನೆರಡರ ತನಕಾ ನಮ್ಮಲ್ಲೆ, ಎರಡರಿಂದ ಐದರ ತನಕಾ ವರ್ತಮಾನಪತ್ರಕ್ಕ.'

'ಯಾವ ವರ್ತಮಾನಪತ್ರದಾಗ?'

'ಅದೆಲ್ಲಾ ನಮಗ ಗೊತ್ತಿಲ್ಲ.'

ಈ ವ್ಯಕ್ತಿಯನ್ನು ಸಿಟ್ಟಿಗೆಬ್ಬಿಸಿ ತರವಲ್ಲವೆಂದು ದೇಸಾಯರು ಅವನನ್ನು ರಮಿಸಲೆಂದು ಕೇಳಿದರು :

'ನಿಮ್ಮ ಹೆಸರು ಏನು? ನಿಮ್ಮ ದು ಯಾವೂರು?'

'ಅದೆಲ್ಲಾ ನಮಗ ಗೊತ್ತಿಲ್ಲ !' ವ್ಯಕ್ತಿ ಇನ್ನೂ ಕೆರಳಿದಂತೆ ತೋರಿತು.

'ಅವರು ಯಾವಾಗ ಭೆಟ್ಟಿ ಆದಾರು ?'

'ರಾತ್ರಿ ಯೋಳಕ್ಕ ಬರ್ರಿ ಯೋಳಕ್ಕ.[೧] ಇಲ್ಲಿಲ್ಲ, ಯೇಳೂವರಿಗೆ ಬರ್ರಿ ಯೇಳೂವರೀಗೆ... ಅಷ್ಟೊತ್ತಿಗೆ ಬರತಾರ ಅವರು ; ನಮ್ಮ ಮನ್ಯಾಗs ಮಲಕೋತಾರ...'

ಆಯಿತು, ಮಗನ ಪತ್ತೆ ಇಷ್ಟಾದರೂ ಸಿಕ್ಕಿತು ; ಸಂಜೆಯೇ ಬರೋಣ ಎಂದುಕೊಂಡು, ದೇಸಾಯರು 'ಬರತೇನಿ' ಎಂದು ಹೇಳಿ ಅಲ್ಲಿಂದ ಹೊರಡಲು ಅನುವಾದರು. ಆದರೆ ಆ ವ್ಯಕ್ತಿ ಅಷ್ಟಕ್ಕೇ ಬಿಡಲಿಲ್ಲ.

'ಸಂಜಿಗೆ ಬರ್ರಿ.... ಬಂದು ಭೆಟ್ಟಿ ಆಗಿ ಹೋಗರಿ... ಮತ್ತ ಮಲಕೊಳ್ಳಿಕ್ಕೆ ಜಾಗಾ ಕೊಡೋದು ಅವರ ಒಬ್ಬರಿಗೇ.. ಜಾಗಾ ಇಲ್ಲ ನಮ್ಮಲ್ಲೇ... ನಮ್ಮ ಮಲಕೊಳ್ಳೋ ವ್ಯವಸ್ಥಾ... ನಿಮ್ಮದು ನೀವs ನೋಡಿಕೊಳ್ಳೋದs ಮತ್ತ...'

ದೇಸಾಯರಿಗೆ ಅವನ ಖಂಡತುಂಡತನವನ್ನು ಕೇಳಿ ನಗು ಬಂದಿತು. ಅಂತು ಅವನ ಕೈಯಿಂದ ದೇಸಾಯರು ಜಾರಿದರು. ಸಂಜೆಯಾದರೂ ಭೆಟ್ಟಿಯಾಗುವದೆಂದು, ಅಚ್ಯುತ ವಸಂತನಂತೆ ತಪ್ಪಿಸಿ ಓಡಾಡುವವನಲ್ಲವಾದ್ದರಿಂದ, ಅವರಿಗೆ ಯಾವ ಹೆದರಿಕೆಯೂ ಇರಲಿಲ್ಲ. ಈವರೆಗೆ ಕುತೂಹಲದಲ್ಲಿ ಅನುಭವಕ್ಕೆ ಬಾರದ ದಣಿವು–ಹಸಿವುಗಳು ಒಮ್ಮೆಲೇ ಕಾಡತೊಡಗಿದವು. ದೇಸಾಯರು ಬಸ್ಸಿನಿಂದ ಕೋಟೆಗೆ ಹೋಗಿ ಅಲ್ಲಿ ತಾವು ಇಳಿದ ಖಾನಾವಳಿಯಲ್ಲಿ ಸ್ನಾನ–ಊಟಗಳನ್ನು ತೀರಿಸಿದರು. ಎರಡು ತಾಸು ಚೆನ್ನಾಗಿ ನಿದ್ರೆ ಮಾಡಿ ಮತ್ತೆ ಸಂಜಿಗೆ ಲಾಲಬಾಗಕ್ಕೆ ಬಂದು ಹಜರ ಆದರು. ಏಳು ಗಂಟೆಗೆ ದೇವಿದಾಸ ಫ್ಲೋರ್ ಮಿಲ್ಲಿಗೆ ಬಂದರು. ಅದರ ಎದುರು ಒಂದು ಖಿಗ್ಗಳ[೨] ಇರಾಣಿ ಹಾಟೇಲು ಇತ್ತು. ಅದನ್ನು ಸೇರಿ ಚಹವನ್ನು ತರಿಸಿ, ಅದರಲ್ಲಿಯ ಒಂದು ಹನಿಯನ್ನೂ ಈಂಟದೆ ಬಾಗಿಲ ಹೊರಗೆಯೇ ನೋಡುತ್ತ ಕುಳಿತರು.

ಸುಮಾರು ಏಳೂವರೆಗೆ ಖಾದಿ ಪಾಯಜಾಮೆ ಖಾದಿ ಟೊಪ್ಪಿಗೆ ಧರಿಸಿದ ಅಚ್ಯುತರಾಯನು ಚಪ್ಪಲು ಹರಿದ ಮೂಲಕ ಸೊಟ್ಟಸೊಟ್ಟ ಕಾಲು ಹಾಕುತ್ತ ಬೇಗಬೇಗ ಬಂದು ಗಿರಣಿ ಸೇರಿದನು. ದೇಸಾಯರಿಗೆ ಗುರುತು ಸಿಕ್ಕಿತಾದರೂ ಅಂತರವೂ ಒಮ್ಮೆಲೇ ಹೊಳೆಯಿತು. ತಂದೆಯ ಅಂತಃಕರಣದ ಕಣ್ಣುಗಳಿಂದ ಅವರಿಗೆ ಅವನ ನೇತಾಡುವ ಅಂಗಿಯ ಒಳಗೆ ಸೊರಗಿಹೋದ ದೇಹದ ಪರಿಚಯವು ಒಮ್ಮೆಲೇ ಆಯಿತು. ಬಟ್ಟೆಯ ಮೂಲಕ ಅವನು ತುಸು

---

೧. ಏಳು ಗಂಟೆಗೆ. ೨. ಬಹಳ ಹಳೆಯ

ತುಂಬಿಕೊಂಡಂತೆ ಕಂಡರೂ ದೇಸಾಯರಿಗೆ ನಿಜಸಂಗತಿ ಒಂದು ನೋಟದಲ್ಲಿಯೇ ತಿಳಿದುಹೋಯಿತು. ಅವನ ಬೆನ್ನುಹಿಂದೆಯೇ ಅವರೂ ಗಿರಣಿಯ ಒಳಗೆ ಬಂದು ಈ ಸಂಭಾಷಣೆಯನ್ನು ಹೇಳಿದರು.

'ಯಾಕಽ? ಪಟ್ಟಾ ಕೆಲಸಾ ಕೊಡತದ ಏನು ?'

'ನಿನಿನಿನಿನಿಮ ಹಪ್ಪಾ[೧] ಬಂದಾರ !'

'ಯಾರು?'

ದೇಸಾಯರು ಹಿಂದಿನಿಂದ ಹೋಗಿ ಅಚ್ಯುತನ ಭುಜ ತಟ್ಟಿದರು.

* * *

ಚೌಪಾಟಿಯ ಉಸುಕಿನಲ್ಲಿ ಕುಳಿತು ತಂದೆ–ಮಗ ಬಹಳ ಹೊತ್ತು ಮಾತಾಡಿದರು. ಕ್ಷಮಾಪಣೆ ಕೇಳಿಕೋ ಎಂದು ದೇಸಾಯರು ಬಾಯಿ ಬಿಚ್ಚಿ ಹೇಳಬೇಕೆಂದು ಎಷ್ಟು ಗಟ್ಟಿ ಮನಸ್ಸು ಮಾಡಿದರೂ ಅವನ ಎದುರು ಬಾಯಿ ಬಿಚ್ಚಲು ಸಾಧ್ಯವಾಗಲಿಲ್ಲ. ಅವನಿಂದಲೇ ಸಾದ್ಯಂತ ವರ್ತಮಾನ ಕೇಳಿಕೊಂಡರು. ಅಚ್ಯುತನಿಗೆ ತನ್ನ ಪರಾಕ್ರಮಗಳನ್ನು ಹೇಳಲು ನಾಚಿಕೆ. ತಂದೆಯಾದರೋ ಯಾವ ಸಿಟ್ಟನ್ನೂ ವ್ಯಕ್ತಗೊಳಿಸದೆ ಎಲ್ಲವನ್ನೂ ಕೇಳಲು ಸಿದ್ಧನಾಗಿದ್ದಾನೆ. ಆದರೆ ದೇಶಾಭಿಮಾನದ ವಾತಾವರಣದಲ್ಲಿ ಇನೂ ಇದೇ ಮೈಚಳಿ ಬಿಟ್ಟ ಅಚ್ಯುತನಿಗೆ ಆ ವಿಷಯವೊಂದನ್ನು ಬಿಟ್ಟು ಬೇರೆ ಮಾತೇ ಹೊಳೆಯಲೊಲ್ಲವು. ಅಂತೂ ನಾಚುತ್ತಲೇ ಎಲ್ಲ ಹೇಳಿದನು. ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದ ವಾರ್ತೆ, ಅವರ ದಾಂಡೀ ಕೂಚು, ಇವುಗಳ ದಿನದಿನದ ವೃತ್ತಗಳು ವರ್ತಮಾನಪತ್ರಗಳಲ್ಲಿ ಬರತೊಡಗಿದಂತೆ ಮುಂಬೈಯಲ್ಲೂ ಲೋಕಕ್ಷೋಭವುಂಟಾಯಿತು. ಅದರಲ್ಲಿ ಕಾಲೇಜ ವಿದ್ಯಾರ್ಥಿಗಳ ಉತ್ಸಾಹ ಬಹಳ. ರಾಜಕೀಯ ಚಳವಳಿಯೇ ಆಗಲಿ, ಧಾರ್ಮಿಕ ಸಂಘ ಸಂಸ್ಥೆಯೇ ಆಗಲಿ, ವಿದ್ಯಾರ್ಥಿಗಳೇ ಆಗ ಮುಂದೆ ಬೀಳುವರು. ಎಲ್ಲ ಕಾಲೇಜುಗಳಲ್ಲಿ, ಕಾಮರ್ಸ ಕಾಲೇಜಿನಲ್ಲಿಯೂ, ಪಿಕೆಟಿಂಗ್ ಒಂದು ದಿನ ಜೋರಾಗಿ ನಡೆಯಿತು. ಆದರೆ ಅದರಲ್ಲಿ ಭಾಗವಹಿಸಿದವರಿಗೆ ವಾರ್ನಿಂಗ್ ಬರತೊಡಗಿದೊಡನೆ ಸಂಘಟನೆ ಮುರಿಯಿತು. ಅದರಲ್ಲಿ ಕಾಮರ್ಸದಂಥ ಚಿಕ್ಕ ಕಾಲೇಜಿನಲ್ಲಿ ಒಬ್ಬರ ಬಗ್ಗೆ ಇನ್ನೊಬ್ಬರು ಚಾಡಿ ಹೇಳುವದು ಬಹಳ. ಆದರೂ ಚಳವಳಿ ಒಳಗಿಂದೊಳಗೇ ಸಾಗಿತ್ತು. ಕಾಲೇಜನ್ನು ಮುಚ್ಚಿಸುವ ವೃಥಾಪ್ರಯತ್ನವನ್ನು ದಿನದಿನವು ಮಾಡುತ್ತ ಕೂಡುವುದು ಅಚ್ಯುತನಿಗೆ ಬೇಸರ. ಕಾಲೇಜದಿಂದ

---

೧. ನಿಮ್ಮಪ್ಪ

ಹೊರಬಿದ್ದ ವಿದ್ಯಾರ್ಥಿಗಳು ಸಿನೇಮಾಗೃಹವನ್ನಾಗಿ, ಮನೆಯನ್ನಾಗಲಿ, ಸೇರುವುದನ್ನು ನೋಡಿಯಂತೂ ಅದರ ವ್ಯರ್ಥತೆ ಅಚ್ಯುತನಿಗೆ ಚುಚ್ಚತೊಡಗಿತು. ಆದ್ದರಿಂದ ಪ್ರತ್ಯಕ್ಷ ಉಪ್ಪಿನ ಸತ್ಯಾಗ್ರಹದಲ್ಲ ವಿದ್ಯಾರ್ಥಿಗಳು ಭಾಗವಹಿಸಿಬೇಕೆಂದು ಪ್ರಚಾರ ನಡೆಸಿದನು. ಅದನ್ನು ಇತರ ದೇಶಭಕ್ತ ವಿದ್ಯಾರ್ಥಿಗಳು ವಿರೋಧಿಸಿ, ಗಾಂಧೀಜಿಯವರೇ ವಿದ್ಯಾರ್ಥಿಗಳಿಗೆ ಸತ್ಯಾಗ್ರಹ ಮಾಡದಿರಲು ಸೂಚಿಸಿರುವರೆಂದು ವಾದ ಹೂಡಿದರು. ಆದರೆ ಅಚ್ಯುತನಿಗೆ ಗಾಂಧೀಜಿಯವರು ಹೇಳಿದುದು ನಂತರ ತಕರಾರು ಮಾಡುವ ಅಳಬುರಕ ವಿದ್ಯಾರ್ಥಿಗಳಿಗೆಂದೂ, ಸದಸದ್ವಿವೇಕ ಬುದ್ಧಿಯಿಂದ ಸತ್ಯಾಗ್ರದ ಬೆಲೆ ತೆತ್ತಲು ಸಿದ್ಧರಾದವರು ವಿದ್ಯಾರ್ಥಿಗಳೇ ಆದರೂ ಸತ್ಯಾಗ್ರಹದಲ್ಲಿ ಭಾಗವಹಿಸಬಹುದೆಂದೂ ಅನಿಸಿತು. ಆ ಕಾಮರ್ಸ ಕಾಲೇಜಿನಲ್ಲಿ ಒಬ್ಬಿಬ್ಬರೇ ದೊರಕಿದರೂ ಇತರ ಕಾಲೇಜುಗಳಿಂದ ಸತ್ಯಾಗ್ರಹಮಾಡಲು ಸಿದ್ಧರಿದ್ದ ನೂರಾರು ವಿದ್ಯಾರ್ಥಿಗಳ ತಂಡವೊಂದು ಸಮುದ್ರದ ದಂಡೆಗುಂಟ ಹೋಗುವ ರಸ್ತೆಯ ಮೇಲೆ ಮೆರವಣಿಗೆಯಾಗಿ ಹೋಗಿ ಉಪ್ಪಿನ ಲೂಟಿ ಮಾಡಿತು. ಜೇಲಿನಲ್ಲಿ ಕ್ಷಮೆ ಬೇಡಿ ಪಾರಾದವರು ಕೆಲವರು. ಆದರೆ ಸಂತೋಷದಿಂದ ಜೇಲುವಾಸವನ್ನೇ ಸ್ವೀಕರಿಸಿದವರೂ ಕಡಮೆಯಿರಲಿಲ್ಲ. ಅಂತೂ ಇದೀಗ ಶಿಕ್ಷಣ ಬೇಸರವಾಗಿದೆ...

'ನೋಡು ; ಒಮ್ಮೆ ನಿನ್ನ ಡಿಗ್ರೀ ತೊಗೊಂಡಮ್ಯಾಲ ಬೇಕಾದಹಂಗ ಈ ರಾಜಕಾರಣ ಮಾಡು. ಆದರ ಈಗ ನಿನ್ನ ಶಿಕ್ಷಣ ಬಿಡಬೇಕಂತ ನಿನ್ನ ಮನಸ್ಸು ಅದs ಏನು ?'

'ಕಾಲೇಜಿನವರು ನನ್ನ ತಿರಿಗಿ ತೊಗೊಂಡಿದ್ದರ ಇದೊಂದು ಕೋರ್ಸು ಮುಗಿಸತಿದ್ದೆ.'

'ಅವರು ಕರಕೊಳ್ಳಲಿಕ್ಕೆ ತಯಾರ ಇದ್ದಾರ. ಮುಂಜಾನೆ ನಿಮ್ಮ ಸುಪರಿಂಟೆಂಡೆಂಟರ ಭೆಟ್ಟಿಯಾಗಿ ಬಂದೆ...'

'ಆದರೆ...'

'ಹೌದು ; ಕ್ಷಮಾಪತ್ರ ಬರಕೊಡಬೇಕು.'

'ಯಾತರ ದಶಿಂದ ಕ್ಷಮಾ ಬೇಡೋದು, ಅಪ್ಪಾ...?' ಮುಂದೆ ಮಾತಾಡಲು ಅಚ್ಯುತನಿಗೆ ನಾಚಿಕೆ. ತನ್ನ ಸ್ನೇಹಿತರ ಎದುರಿಗೆ ದೇಶಾಭಿಮಾನದ ತತ್ವಜ್ಞಾನದ ವಕ್ತವ್ಯಗಳ ಸುರುಳೆಗಳನ್ನು ಅಪ್ಪನ ಮುಂದೆ ಬಿಚ್ಚಿ ಇಡಲು ಅವನಿಗೆ ಎದೆಯೇ ಇಲ್ಲ. ತನ್ನ ಸುಶಿಕ್ಷಿತ ಪಾಂಡಿತ್ಯವು ಅಪ್ಪನ ಅರ್ಧಶಿಕ್ಷಿತ ಬುದ್ಧಿಶಕ್ತಿಯ, ಚಾರಿತ್ರ್ಯಶಕ್ತಿಯ, ವ್ಯಕ್ತಿತ್ವಶಕ್ತಿಯ ಎದುರು ಕುಂಟುವಂತೆ, ಅವನಿಗೆ ಯಾವಾಗಲೂ ಭಾಸವಾಗುವದು.

ಧಾರವಾಡದಲ್ಲಿ ಮನೆಯಲ್ಲಿದ್ದಾಗಂತೂ ತಂದೆಯೊಡನೆ ಮಾತೇ ಕಡಿಮೆ. ಏನಾದರೂ ತಾಯಿ ಅವನ ಸ್ನೇಹಿತಳು. ಆದರೆ ಬಹುದಿನದ ಮೇಲೆ ಭೆಟ್ಟಿಯಾಗಿದ್ದರಿಂದಲೋ, ಅವನೇ ತುಸು ಇದೀಗ ಬೆಳೆದು ಜೇಲುವಾಸದಿಂದ ವ್ಯಕ್ತಿತ್ವವನ್ನೂ ಪಡೆದಿದ್ದನೆಂದೋ, ಪರಸ್ಥಳವೆಂದೋ ಇಷ್ಟಾದರೂ ಎದುರಿಗೆ ಕುಳಿತು ಮಾತಾಡಿದ್ದು. ಈಗ ಫಕ್ಕನೆ ಹೀಗೆ ತನ್ನ ಬಾಯಿಂದ ಮಾತು ಬರುವದಕ್ಕೂ, ದೇಸಾಯರು ಅವನ ಮೀಸೆ, ಗಾಂಧಿ ಟೊಪ್ಪಿಗೆ, ಉತ್ಸುಕವಾದ ಮುಖ, ಇವುಗಳ ಕಡೆಗೆ 'ಬೆಳೆದಿದ್ದಾನೆ !' ಎಂಬ ಭಾವದಿಂದ ನೋಡುವದಕ್ಕೂ ಸರಿಹೋಯಿತು. ಅಷ್ಟಕ್ಕೆ ಅಚ್ಯುತ ಗೋಣು ಕೆಳಗೆ ಹಾಕಿದನು. ಅವನ ಹಿಂಸೆಯನ್ನು ನೋಡಲಾರದೆ ದೇಸಾಯರು,

'ನಿನ್ನ ಮನಸ್ಸಿನ್ಯಾಗ ಇಲ್ಲದಿದ್ದರ ಬ್ಯಾಡ' ಎಂದರು.

ಸ್ವಲ್ಪ ಹೊತ್ತು ಮೌನ ವ್ಯಾಪಿಸಿತು.

'ಮುಂದ ನಾನು ಮಾಡಬೇಕೆಂತ ಮಾಡೀದಿ ?'

'ಈಗಂತೂ 'ಬಾಂಬೆ ಗ್ಯಾಝೆಟ್' ವರ್ತಮಾನಪತ್ರದಾಗ ಕೆಲಸಕ್ಕೆ ಇದ್ದೇನಿ. ವರ್ತಮಾನಪತ್ರ ಹೊಸಾದು. ಅದರ ಒಬ ಸಬ್–ಎಡಿಟರನದು ಜೇನ್ಯಾಗ ಗುರುತು ಆಗಿತ್ತು. ಅವನ ಕಡಿಗೆ ಮೂರು ತಾಸು ಕೆಲಸಾ ಮಾಡತೇನಿ...'

'ಯಾ ಕೆಲಸ ?'

'ಸಹಸಂಪಾದಕನ ಕೆಲಸs ; ಇಪ್ಪತ್ತೈದು ರೂಪಾಯಿ ಕೊಡತಾರ. ಎರಡರಿಂದ ಐದರ ತನಕಾ ಆ ಕೆಲಸಾ ಮಾಡತೇನಿ. ಅಮ್ಯಾಲ ಅದs ಪೇಪರಿನ ಪ್ರಿಂಟಿಂಗ್ ಪ್ರೆಸ್ ಅದ. ಅಲ್ಲೇ ಯಂತ್ರದ ಕೆಲಸಾನೂ ಈಗೀಗ ಕಲೀಲಿಕ್ಕೆ ಹತ್ತೇನಿ.'

'ಮತ್ತ ಆ ಗಿರಣ್ಯಾಗ ?'

'ಛೀ, ಅಲ್ಲೇನು ಕೆಲಸ ಇಲ್ಲ. ಆದರೂ ಅವನ ಗುರುತು ಆಗೇದ. ಅವನ ಕೋಣೆಯೊಳಗs ಇರತೇನಿ. ಹಂಗs ಯಾವಾಗರ ಗಿರಣೀ ಕೆಲಸಾನೂ ನೋಡತಿರತೇನಿ. ಒಮ್ಮೆ ಯಂತ್ರದ ಹುಚ್ಚು ಹೊಕ್ಕಿತಂದರ...'

'ಇದನ್ನೆಲ್ಲಾ ಕಲೀಲಿಕ್ಕೆ ಇನ್ನೂ ಎಷ್ಟು ದಿವಸ ಬೇಕು ?'

'ನಿಮ್ಮ ವಿಚಾರ ಏನು ಅದs... ಇಲ್ಲೇ, ಇದs ವರ್ತಮಾನ ಪತ್ರದಾಗ ಕೆಲಸಾ ಮಾಡಿಕೋತ ಇರಲಿಕ್ಕೂ ಬರತದ. ಯಾಕಂದರ ವರ್ತಮಾನಪತ್ರ ನಮ್ಮದs ಇದ್ದ ಹಂಗ ಅದs. ಹೆಸರಿಗೆ ನೌಕರಿ.. ಅಲ್ಲೆ ಕೆಲಸಾ ಮಾಡುವವರು ಯಾರೂ ಅದನ್ನ ನೌಕರಿ ಅಂತ ತಿಳಿದೇ ಇಲ್ಲ...'

ಅಚ್ಯುತ ಸೂಚಕವಾಗಿ ಸುಮ್ಮನಾದನು. ದೇಸಾಯರೂ ಸೂಚಕವಾಗಿಯೇ ಉತ್ತರ ಕೊಟ್ಟರು...

'ಹೌದು ಖರೆ. ಆದರ ನೀ ಇಲ್ಲೆ ಇದ್ದರ ಹೊಲಾ ಮನಿ ಕಮತಾ ಯಾರು ನೋಡಿಕೋಬೇಕು ?... ಅದರ ಅನುಭವನೂ ನಿನಗ ಬೇಕಲ್ಲಾ ?'

'ಹಂಗಾದರ ಹೆಂಗ ಮಾಡಲಿ ?...' ಅಚ್ಯುತ ತನ್ನ ಮನದ ಬಯಕೆಯನ್ನು ತಂದೆಯ ಬಾಯಿಂದಲೇ ಹೊರಡಿಸಬೇಕೆಂದು ಸುಮ್ಮನಾದನು.

ದೇಸಾಯರು ತುಸು ವಿಚಾರ ಮಾಡಿ ಹೇಳಿದರು :

'ಇಲ್ಲಿ ನಿನಗ ಏನು ಕಲೀಬೇಕಾಗೇದ ಕಲಕೊ. ಆಮ್ಯಾಲ ಅಲ್ಲೇ ಧಾರವಾಡದಾಗ ಒಂದು ಕನ್ನಡ ವರ್ತಮಾನಪತ್ರ ತಗಿಯುವಂತ.'

'ನಾನೂ ಆದs ವಿಚಾರದಲೆ ಛಾಪಖಾನೆ ಕೆಲಸಾ ಕಲೀಲಿಕ್ಕೆ ಹತ್ತಿದ್ದೆ.'

'ಛಾಪಖಾನೆಕ್ಕ ಎಷ್ಟು ರೊಕ್ಕ ಹತ್ತಬಹುದು? ನೀನು ವಿಚಾರಮಾಡಿಯೇನು?'

'ಹೊಸಾವಕ್ಕ ಆದರ ಮೂರು ಮೂರುವರಿ ಸಾವಿರ ಬೀಳಬಹುದು. ಆದರೆ ಸಣ್ಣ ಪ್ರಮಾಣದ ಒಂದು ಯಂತ್ರ ಬುಕ್‌ವರ್ಕಿಗೆ ಅಂತ ನಮ್ಮ ಛಾಪಖಾನೆದಾಗ ಇಟ್ಟಾರ. ಆದರ ಬುಕ್‌ವರ್ಕಿನಿಂದ ಏನೂ ಫಾಯದೆ[೧] ಆಗವೊಲ್ಲದು ಅಂತ ನಮ್ಮ ಸಂಪಾದಕ ಅಂತಿರತಾನ. ಅದನ್ನ ಕೊಟ್ಟರೂ ಕೊಡಬಹುದು. ಫೋರಮನ್ನನ ಕೇಳಿದೆ... ಅದರ ಈಗ ಕಿಮ್ಮತ್ತು ದೀಡ ಸಾವಿರದಷ್ಟು ಆದೀತು ಅಂತ ಅಂತಿದ್ದ...'

'ಅದು ನಾದುರುಸ್ತ ಏನೂ ಇಲ್ಲ ಹೌದಲ್ಲೊ?'

'ಇಲ್ಲ. ಅದು ಹಳೇದು ಆದ ಹಂಗ ಹೆಚ್ಚು ಛಲೋ ಕೆಲಸಾ ಕೊಡಲಿಕ್ಕೆ ಹತ್ತೇದ.'

ದೇಸಾಯರು ತತ್‌ಕ್ಷಣ ನಿರ್ಣಯ ಕೈಕೊಂಡರು :

'ಹಂಗಾರ ಹೀಂಗ ಮಾಡು. ಇನ್ನೊಂದು ವರ್ಷ ಎರಡು ವರ್ಷ ನೀ ನಿನ್ನ ಕೆಲಸಾ ಕಲಕೊ. ನೀ ಇನ್ನೂ ಸಣ್ಣವ. ಈಗs ಸ್ವತಂತ್ರ ವರ್ತಮಾನ ಪತ್ರ ತಕಿಯೋ ಕೆಲಸ ನಿನ್ನಿಂದ ನೀಗಲಿಕ್ಕಿಲ್ಲ. ಅದು ಒಳ್ಳೆದೂ ಅಲ್ಲ. ಒಬ್ಬರ ಕೈಕೆಳಗೆ ಕೆಲಸಾ ಮಾಡಿ ನಿನ್ನ ಕೈ ಹಣ್ಣು ಆತು ಅಂದರ ನಿನ್ನ ವರ್ತಮಾನ ಪತ್ರಕ್ಕ ಬೆಲೆ ಬಂದೀತು. ಹಂಗs ಊರ ಹರಟಿ ಹೊಡಿಯೋ ವರ್ತಮಾನಪತ್ರ ಆಗಬಾರದು ನಿನ್ನದು. ನಿನ್ನ ಅಭಿಪ್ರಾಯಕ್ಕ ಮರ್ಯಾದೆ ಸಿಗಬೇಕು. ನೀ ಕೆಲಸಾ ಮಾಡಿಕೋತ ಹೋದ ಹಂಗ ಕಾಯದೆ ಕಾನೂನಿನ ಹಿಡಿತ, ಭಾಷಾದ ವಜನು,[೨] ಹಿಂದುಮುಂದಿನ ವಿಚಾರ, ಎಲ್ಲಾ ತಾನs ಹಿಡಿತಕ್ಕ ಬರತಾವ. ಅದಕ್ಕs ನಿನ್ನ

---

೧. ಹಣದ ಪ್ರಯೋಜನ. ೨. ಪ್ರಭುತ್ವ.

ಶಿಕ್ಷಣ ಪೂರ್ಣ ಆಗಿದ್ದರ ಒಳ್ಳೆಯದಾಗತಿತ್ತು, ಅಂತ ಅನ್ನೋದು. ಇಲ್ಲಿ ಇದರ ವಿಷಯಕ್ಕ ವಿಶ್ವಾಸ ಆನಿಸಲಿಕ್ಕೆ ಹತ್ತಿತೂ ಅಂದರ ಧಾರವಾಡಕ್ಕ ಬಾ, ಪ್ರೆಸ್ಸಿನದೂ ಏನಾರ ವಿಚಾರ ಮಾಡಿರೋಣ. ಅಲ್ಲೆ ಇತ್ತಲಾಗ ಪ್ರೆಸ್ ನಡೆಸು, ಅತ್ತಲಾಗ ಕಾಲೇಜ ಸೇರಿ ಒಂದು ಡಿಗ್ರೀ ತೊಗೊ. ಆಮ್ಯಾಲ ಬೇಕಾದರ ವರ್ತಮಾನಪತ್ರ ತೆಗೆಯುವಂತೆ.'

ಅಚ್ಯುತ ಹಿರಿಹಿರಿ ಹಿಗ್ಗಿದನು. ಆದರೆ ಅಷ್ಟು ದಿನ ತಡೆಯವದೂ ಅವನಿಗೆ ಸಹನವಾಗಲಿಲ್ಲ.

'ಇಲ್ಲೇ ಆರ್ಟ್ಸ್‌ಕ್ಕ ಮುಂದಿನ ವರ್ಷದಿಂದ ತುಂಬಲೇನು ?'

'ನಿನಗ ಎರಡೂ ಮೂರು ಕೆಲಸ ಆದೀತೇನು ? ವರ್ತಮಾನಪತ್ರ ; ಪ್ರೆಸ್ಸು ; ಅಭ್ಯಾಸಾ ?'

'ಅಗತsದ'

'ಇಲ್ಲೀ ಹವಾ ಕೆಟ್ಟ. ಶ್ರಮಾ ಬಹಳ ತೊಗೋಬಾರದು.'

'ಇಲ್ಲ. ಪ್ರೆಸ್ಸಿನ ಕೆಲಸ ಈ ನಾಲ್ಕಾರು ತಿಂಗಳದಾಗ ಕಲಕೊಂಡುಬಿಟ್ಟಿರತೇನಿ. ಮುಂದಿನ ಜೂನದಿಂದ ಕಾಲೇಜು, ವರ್ತಮಾನಪತ್ರ ಇಷ್ಟs.'

'ನಿನ್ನ ಪ್ರಕೃತಿಗೆ ಎರಡೂ ನೀಗಿದರ ಮಾಡು' ಎಂದರು ದೇಸಾಯರು. ಕಳವಳದಿಂದ. 'ನಿಮ್ಮವ್ವ ನಿನ್ನ ದಶಿಂದ ಬಹಳ ಚಿಂತೀ ಮಾಡತಿರತಾಳ. ಇಲ್ಲೇ ನೀನು ಹಿಟ್ಟಿನ ಗಿರಣಿ, ಛಾಪಖಾನಿ ಅಂತ ಓಡ್ಯಾಡತೀ...'

ಹುಟ್ಟಾ ಸಿರಿವಂತನಾದರೂ ಗಾಂಧೀಜಿಯವರ ಪ್ರಭಾವದಿಂದ ದರಿದ್ರ ಲಕ್ಷ್ಮಿಯ ಸೇವಕನಾಗಿದ್ದ ಅಚ್ಯುತನಲ್ಲಿ ಒಮ್ಮೊಮ್ಮೆ ಭಯಾನಕ ಶೂನ್ಯತೆ ಒಡಮೂಡುತ್ತಿತ್ತು. ಆ ಗಂಡುದೇಹದಲ್ಲಿ, ಆ ಹರವಾದ ಎದೆಯಲ್ಲಿ ಯಾವುದೋ ಒಂದು ಮೂಲೆಯಲ್ಲಿ ಹೆಣ್ಣು ಮನಸ್ಸೊಂದು ಆಗಾಗ್ಗೆ ಮಿಡಿಯುತ್ತ ಅಚ್ಯುತನ ಧೀರತೆಯನ್ನೇ ಕದಡಿಬಿಡುತ್ತಿತ್ತು. ಅದು ವಿಧವಿಧವಾಗಿ ಬೇರೆಬೇರೆ ಕಾಲಕ್ಕೆ ಬರುವದು. ಒಮ್ಮೊಮ್ಮೆ ತಂದೆತಾಯಿಗಳ ಅಗಲಿಕೆಯ ರೂಪವಾಗಿ, ಅವರ ನೆನಪಿನ ರೂಪವಾಗಿ ಬರುತ್ತಿತ್ತು. ಒಮ್ಮೊಮ್ಮೆ ತನ್ನ ಚಟುವಟಿಕೆಗಳಿಂದ ತನ್ನ ತಂದಗೆ ತಾನು ಎಲ್ಲಿ ಸುಳ್ಳಾಗುತ್ತಿದ್ದೇನೋ ಎಂಬ ನೈತಿಕ ಒಳತೋಟಿಯಾಗಿ ಬರುತ್ತಿತ್ತು. ಮುಂಬೈಯ ಕ್ಲಿಷ್ಟವಾದ ಸಮಷ್ಟಿ ಜೀವನದಲ್ಲಿ ಒಂದು ಕೋಣೆಯಲ್ಲಿ ಒಬ್ಬನೇ ಮಲಗೇನೆಂದರೆ ಸಾಧ್ಯವಾಗುವುದಿಲ್ಲ. ಆದರೆ ಒಮ್ಮೊಮ್ಮೆ ಮುಸುಕುಹಾಕಿದಾಗ ಚಾದರದ ಆ ದಪ್ಪಳತೆಯಷ್ಟರಲ್ಲಿ ಆಗ ಬರುವ ಒಂಟಿಗತನದ ಕಟುತ್ವವನ್ನೂ ಉತ್ಕಟತೆಯನ್ನೂ ಬಲ್ಲವನೇ ಬಲ್ಲ. ಮುಂಬೈಯೆಂದರೆ ಮನುಷ್ಯರ

ಅಡವಿ! ಮನುಷ್ಯರ ನಡುವೆಯೇ ಮನುಷ್ಯ ಒಂಟಿಯಾಗಿರುತ್ತಾನೆ. ಈ ಕಠೋರಏಕಾಕಿತನದ ಕ್ಷಣಕ್ಕೆ ಒಮ್ಮೊಮ್ಮೆ 'ಮುಂಬೈ ಜ್ವರ'ವೆಂದು ಉತ್ಪ್ರೇಕ್ಷೆಯಿಂದ ಹೇಳುವದುಂಟು.

ಇಂಥ ಭೀಕರ ಕ್ಷಣಗಳು ಬಂದಾಗ ಅಚ್ಯುತನು ತನ್ನ ಕೋಣೆಯಲ್ಲಿ ಮುಖದ ಮೇಲೆ ಮುಸುಕು ಎಳೆದುಕೊಂಡು ಮಲಗಿ ಒಳಗಿಂದೊಳಗೇ ಕಂಬನಿಗರೆಯುತ್ತಿದ್ದನು. ಅವನ ಹಾಸ್ಟೆಲ್ಲಿನ ಸ್ನೇಹಿತರು ಅವನ ಮುಸುಕು ಎಳೆದು ಚೇಷ್ಟೆಮಾಡುತ್ತ 'ಶ್ರೀಮಂತಿಕೆಯ ಜಡ್ಡು' ಎಂದು ಮೂದಲಿಸುತ್ತಿದ್ದರು. ಅಚ್ಯುತನಿಗೆ ಅದು ನಿಜವೆಂದು ಅನಿಸುವದು. 'ಬಡವರಿಗೆ ಎಲ್ಲಿಯ ತಂದೆ ; ಎಲ್ಲಿಯ ತಾಯಿ ? ತಾವೇ ತಾವು, ದುಡುತವೇ ದುಡಿತ ! ಅಂಥ ಕಠೋರತೆ ತನ್ನಲ್ಲಿ ಬರಬೇಕು' ಎಂಬ ತತ್ವಜ್ಞಾನವನ್ನು ತಾವೇ ಶೋಧಿಸಿಕೊಂಡು ದೈಹಿಕ ಶ್ರಮದಲ್ಲಿ ತನ್ನ ಮಾನಸಿಕ ದೌರ್ಬಲ್ಯವನ್ನು ಮರೆಯಲು ಯತ್ನಿಸುವನು. ತಂದೆತಾಯಿಯರ ಅಗಲಿಕೆಯ ನೋವನ್ನು ತನ್ನಷ್ಟಕ್ಕೆ ತಾನೇ ಚೇಷ್ಟೆ ಮಾಡಿಕೊಂಡಾಗಲಿ, ಇತರರ ಚೇಷ್ಟೆ ಮಾಡಿಯಾಗಲೀ ಅದರ ನೋವನ್ನು ಮರೆಯಲು ಯತ್ನಿಸುವನು. ಇತರ ಸ್ನೇಹಿತರಿಗೆ ಅವರ ತಾಯಿ–ತಂಗೆಂದಿರು ಅವರ ಚಿಂತೆ ವಹಿಸುವದರ ಬಗ್ಗೆ ಚೇಷ್ಟೆ ಮಾಡುವನು ; ಆದರೆ ಅವರು ಇವನ ತಂದೆತಾಯಿಯರ ಹೆಸರು ಎತ್ತಿದರೆ ಒಂದಿಷ್ಟೂ ಸಹಿಸುತ್ತಿದ್ದಿಲ್ಲ. ಈ ಒಳಗಿನ ನೋವು ಮರೆಯುವದಕ್ಕಾಗಿ ಅವನು ಪ್ರೆಸ್, ಗಿರಣಿ ಎಂದು ಓಡಾಡುವದು. ಅದಕ್ಕೆಂದೇ ಪ್ರೆಸ್ಸಿನ ಫೋರಮನ್, ಗಿರಣಿಯ ವಿಕ್ಷಿಪ್ತ, ಇವರೊಡನೆ ಇದ್ದ ಸ್ನೇಹ.

ತಾಯಿಯ ನೆನಪ ಮತ್ತೆ ಕರುಳನ್ನು ಹಿಂಡತೊಡಗಿತು.

ಅವನು ಶೂನ್ಯದೃಷ್ಟಿಯಿಂದ ಸಮುದ್ರದತ್ತ ನೋಡುತ್ತಿದ್ದುದನ್ನು ದೇಸಾಯರು ಒಮ್ಮೆಲೇ ದೃಷ್ಟಿಸಿದರು. ಅಚ್ಯುತನ ಈ ದೌರ್ಬಲ್ಯ ಅವರಿಗೆ ಮೊದಲಿನಿಂದಲೂ ಗೊತ್ತು. ಅವರಿಗೂ ಒಂದು ಕ್ಷಣ ತೂಕ ತಪ್ಪದೆ ಹೋಗಿದ್ದರೆ ಹೀಗೆ ತಾಯಿಯ ಬಗ್ಗೆ ಅಚ್ಯುತನಿಗೆ ಅವರು ಮಾತಾಡುತ್ತಿರಲಿಲ್ಲ. ಅವನು ಮುಂಬೈಗೆ ಕಾಮರ್ಸ ಕಲಿಯಲು ಹೋಗುತ್ತೇನೆಂದಾಗ ದೇಸಾಯರು ವಿಚಾರಮಾಡಿ, ಒಂಟಿಗನಾಗಿ ಇದ್ದು ಎದೆಗಾರನಾದರೂ ಆಗಲಿ ಎಂಬ ಒಳಗಿನ ಉದ್ದೇಶದಿಂದಲೇ ಒಪ್ಪಿದ್ದರು. ಈಗ ಅವನ ನೊಂದ ನರದ ಮೇಲೆ ಬೆರಳಿಟ್ಟು ದೇಸಾಯರು ತಪ್ಪು ಮಾಡಿದ್ದರು. ಅದಕ್ಕಾಗಿ ಮಾತು ಮರೆಸಲಿಕ್ಕೆಂದು 'ಆ ಗಿರಣ್ಯಾಗಿನವ ಕನ್ನಡ ಮಾತಾಡತಾನೇನು?' ಎಂದು ಕೇಳಿದರು.

'ಹೌದು ; ಧಾರವಾಡದ ಕಡೆಯವನs. ಇಲ್ಲಿ ಬಂದು ಬಹಳ ದಿವಸ ಆದವು. ಅರಹುಚ್ಚನ ಹ್ಯಂಗ ಇದ್ದರೂ ಬಹಳ ಒಳ್ಳೆಯವ. ಆ ಗಿರಣಿಯ

ಶೇಠನದು ಅವನ ಮ್ಯಾಲ ವಿಶ್ವಾಸ ಬಹಳ. ಅವನ್ಽ ಒಂದು ಕೋಣೆ ಕೊಟ್ಟಾನ ಇರಲಿಕ್ಕೆ.'

'ಅವನದು ಎಲ್ಲಿ ಗುರುತು ಆಯ್ತು ನಿನಗ ?'

'ಒಮ್ಮೆ ಗಾಡ್ಯಾಗ ಒಂದು ಕನ್ನಡ ಕಾದಂಬರಿ ಓದತಿದ್ದೆ. ಅದರ ಮ್ಯಾಲ ನನ್ನ ಹೆಸರು ಹಾಕಿ 'ಧಾರವಾಡ' ಅಂತ ಬರೆದಿದ್ದೆ. ಅವಾ ಎದುರಿಗೇ ಕೂತವ 'ನೀವು ಧಾರವಾಡದವರು ಏನು' ಅಂತ ಕೇಳಿ ತನ್ನ ಗಿರಣಿ ನೋಡಲಿಕ್ಕೆ ಬರಲಿಕ್ಕೆ ಹೇಳಿದ. ಆ ಗಿರಣಿ ಅಂದರ ಅವನ ಜೀವ ಇದ್ದ ಹಂಗ. ಹೊರಗ ಹೊರಗ ನೋಡಲಿಕ್ಕೆ ಎಷ್ಟು ಹೊಲಸು ಇರವಲ್ಲದ, ಯಂತ್ರಕ್ಕೆ ಎಣ್ಣೆ ಹಾಕಿ, ವಾರಕ್ಕೊಮ್ಮೆ ಎಲ್ಲಾ ಕಿತ್ತಿ ನೋಡಿ, ಸ್ವಚ್ಛ ಇಟ್ಟಿರತಾನ. ಹುಣ್ಣಿವಿಗೆ ಒಮ್ಮೆ ಯಂತ್ರದ ಷೋಡಶೋಪಚಾರಪೂಜಾ ಮಾಡತಾನ. ಅದನ್ನ್ಽ ಹಚ್ಚಿಗೊಂಡು ಇದ್ದಾನ. ಶೇಠನ ಮನ್ಯಾಗ ಶ್ರಾದ್ಧ ಪಕ್ಷ ಇದ್ದಾಗ ಇವಗ ಕರದು ಊಟಕ್ಕ ಹಾಕತಾರ... ಸುಖದಿಂದ ಇದ್ದಾನ' ಎಂದನು.

'ಬುದ್ಧಿ ಇದ್ದವರಿಗೆ ದುಃಖ ಇದ್ದದ್ದು ; ಇಂಥವರಿಗೆ ಎಲ್ಲಿಯ ದುಃಖ ? ಇವರು ದೇವರು ಇದ್ದ ಹಾಗೆ – ಎಂಬ ಭಾವ ಅಡಗಿತ್ತು ಅವನ ಮಾತಿನಲ್ಲಿ.'

'ಅವನ್ನ ನಾ ಮೊದಲ ಎಲ್ಲ್ಯೋ ನೋಡಿದ ಹಂಗ ಆಗೇದ – ಏನು ಅವನ ಹೆಸರು ?'

'ಬಿಂದಗೋಳ ವೆಂಕಟರಾಯ.'

'ಬಿಂದಗೋಳ ರಾಘಪ್ಪಗ ಏನಾದರೂ ಆಗಬೇಕೇನು ?'

'ಅದೇನೊ ಗೊತ್ತಿಲ್ಲ ನನಗ. ತನಗೊಬ್ಬ ಅಣ್ಣ ಇದ್ದಾನ ಅಂತ ಹಿಂದಕ ಏನೋ ಅಂತಿದ್ದ...'

ದೇಸಾಯರು ಅಚ್ಯುತನಿಗೆ ವಸಂತರಾಯನ ಕೆಲವು ಲೀಲೆಗಳನ್ನು ಸಂಕ್ಷಿಪ್ತವಾಗಿ ಹೇಳಿದರು. ತಂದೆಮಗ ದೇಸಾಯರು ಇಳಿದುಕೊಂಡ ಖಾನಾವಳಿಗೆ ಬಂದು ಊಟ ಮಾಡಿ ಮತ್ತೆ ಎರಡು ಗಂಟೆಯವರೆಗೆ ಮಾತಾಡಿದರು. ದೇಸಾಯರು ಆರೋಗ್ಯದತ್ತ ಲಕ್ಷ್ಯಗೊಡಲು ಮೇಲಿಂದಮೇಲೆ ಅವನಿಗೆ ಹೇಳಿದರು. ಮರುದಿನ ತಂದೆಯೊಡನೆ ಮಲಬಾರ–ಹಿಲ್ ಮುಂತಾದ ಸುಂದರ ಸ್ಥಳಗಳನ್ನು ಸಂದರ್ಶಿಸಿ, ಒಳ್ಳೆಯ ಹೋಟೆಲುಗಳಲ್ಲಿ ಫರಾಳ ಮಾಡಿ, ಸಂಜೆ ಅವರನ್ನು ಬೀಳ್ಕೊಂಡನು. ಎರಡೇ ದಿನಗಳು ತುಂಬಿದಂತಾದವು.

ಮತ್ತೆ ಅಗಲಿಕೆ... ಒಂಟಿಗತನ...

# ಭಾಗ : ಎರಡು

## ೨೨ : ಹುಳಿಮಧುರ

ವಿವಾಹವು ತಾರುಣ್ಯಕ್ಕೂ ಪ್ರೌಢಾವಸ್ಥೆಗೂ ಇರುವ ಇಳಿಜಾರು ಸೇತುವೆ. ವಿವಾಹವಾದ ಮೇಲೆ ಬದಲಾಗದ ವ್ಯಕ್ತಿ ಅಪರಿಪೂರ್ಣವೆಂದೇ ಹೇಳಬೇಕು. ಹೊಸ ಆಕಾಂಕ್ಷೆ–ಆದರ್ಶಗಳು ನಾಲ್ಕಾರು ವರ್ಷಗಳಲ್ಲಿ ತಲೆದೋರಿ ತಿಳಲಿನ ಕಸುಕನ್ನು ಮೆಲ್ಲನೆ ಹುಳಿಮಧುರಗೊಳಿಸತೊಡಗುತ್ತವೆ. ಆದರೆ ಇನ್ನ ಹಣ್ಣಾಗುವ ದಿವಸ ದೂರ ಇವೆ. ಇದೀಗ ಪಾಡಾಗಲು ಮೊದಲಾಗುತ್ತದೆ, ಅಷ್ಟೆ.

ಕಿಟ್ಟಿ ತನ್ನ ಚಿಕ್ಕ ಪರಿಘದಲ್ಲಿಯೇ ಅಂತರ್ಮುಖಿಯಾಗತೊಡಗಿದ್ದನು. ಆ ಪರಿಘವನ್ನು ಮೀರುವ ಯೋಗ್ಯತೆ, ಅದರ ಗೋಡೆಗಳಿಗಿಂತ ಎತ್ತರವಾಗಿ ನೋಡುವ ಹಂಬಲ, ಅವನಲ್ಲಿ ಇಲ್ಲ. ಆದರೆ ಇದ್ದ ಪರಿಮಿತಿಯಲ್ಲಿಯೇ ಅವನು ತನ್ನ ಆಗುಹೋಗುಗಳ ವಿಚಾರ ಮಾಡತೊಡಗಿದ್ದನು. ವಿವಾಹದ ಮೊದಲ ದಿನಗಳಲ್ಲಿ ಭಾವನೆಯ ಬೇಡಿಕೆ ಪೂರ್ಣಗೊಂಡ ಮೇಲೆ ಪ್ರಣಯವು ಬಹುಮಟ್ಟಿಗೆ ದೇಹದ ಬೇಡಿಕೆಯಾಗಿ ಮುಂದುವರಿಯುವದು. ದೇಹವೂ ಬೇಸತ್ತ ಮೇಲೆ (ದೇಹ ಬೇಸರ ಕಳೆಯವದು, ಬುದ್ಧಿ ಕಳೆಯಲಾರದು.) ದಂಪತಿಗಳು ಹೆಚ್ಚಿನ ಆಂತರಿಕ ಒಲುಮೆಯ ಸಮನ್ವಯವನ್ನು ಕಾಣಲು ಮಕ್ಕಳಾಗದಿದ್ದರೆ ಮಕ್ಕಳ ಅಭಾವದ ನೋವಾಗಿ ಈ ಸಮನ್ವಯವೇ ದಂಪತಿಗಳನ್ನು ಪರಸ್ಪರ ಕರುಣೆಯಲ್ಲಿ ಒಂದುಗೂಡಿಸುವದು.

ಲಗ್ನವಾಗಿ ಐದು ವರ್ಷಗಳಾದರೂ ಮಕ್ಕಳ ಸುದ್ದಿಯಿಲ್ಲ. ದಿನದಿನಕ್ಕೆ ದೇಹದ ಆಸೆಯು ಮಕ್ಕಳ ಆಸೆಯಾಗಿ ಪರಿಪಾಕಗೊಳ್ಳತೊಡಗಿತು. ಕಿಟ್ಟಿಯ ಮುಖ ಕಾತರದಿಂದ ಬಳಲುತ್ತಿತ್ತು. ಈ ಮೂಕ ಅಳಲು ರತ್ನಾಗೂ ಉಂಟು. ಆಕೆಗಾದರೂ ಕಾತರ. 'ನನ್ನ ಜೋಡೀ ಅವರೆಲ್ಲಾ ಎರಡು ಮಕ್ಕಳನ್ನ ಕರಕೊಂಡು ಅಡ್ಡಾ್ಯಡತಾರ' ಎಂದು ಯಾವಾಗಾದರೊಮ್ಮೆ ಬಾಯಿ ಬಿಚ್ಚುತ್ತಿದ್ದಳು. ಗೋದಾವರಿಯದೂ ಲಗ್ನವಾಗಿ ಆ ಗಂಡುಬೀರಿಗೆ ಎರಡು ಮಕ್ಕಳಾಗಿದ್ದವು. ತವರು ಮನೆಗೆ ಬಂದಾಗ ತನ್ನ ಕುರೂಪಿ ಮಕ್ಕಳೊಡನೆ ರಾಘಪ್ಪನಲ್ಲಿ ಬಂದು ರತ್ನಳನ್ನು ಕಂಡು ಹೋಗುತ್ತಿದ್ದಳು. ಆ ಮಕ್ಕಳನ್ನು ಕಂಡ ರತ್ನಾಗೆ ಜಿಗುಪ್ಸೆ, ಅಸೂಯೆ, ಆಸೆ, ಪ್ರೀತಿ, ಎಲ್ಲ ಕೂಡಿಬರುತ್ತಿದ್ದವು.

ಮಕ್ಕಳಿಗಾಗಿ ಕಿಟ್ಟಿಯ ಮನಸ್ಸು ದೇವರತ್ತ ಹೊರಳಿತು. ಆ ಸಕಾಮ ಕಾರ್ಯಸಾಧಕ ಭಕ್ತಿಯಲ್ಲಿ ಹೆಚ್ಚು ಹುರುಳಿಲ್ಲವೇನೋ ನಿಜ ; ಆದರೆ ದೇವಭಕ್ತಿಯ ಪರಿಣಾಮವಾಗಿ ತುಸು ಮಾತೃಭಕ್ತಿಯ ಝಳುಕು ಹುಟ್ಟಿ, ತಾಯಿಯ ಬಗ್ಗೆ ಮತ್ತೆ ಅರ್ಜವದ ರೂಪವಾಗಿ ವ್ಯಕ್ತವಾಗುತ್ತಿತ್ತು. ಮೊಮ್ಮಕ್ಕಳಿಗಾಗಿ ಆಕೆಗೂ ಕಾತರ. ಇಂತು ಚಿಕ್ಕ ಮಕ್ಕಳ ಅಭಾವವು ಮೂವರಲ್ಲೂ ತುಸು ಆಂತರಿಕ ವಿಶ್ವಾಸವನ್ನು ಹುಟ್ಟಿಸಿದಂತಾಗಿತ್ತು. ಆದರೆ ಇದಲ್ಲದೆ ವಿಶೇಷ ಪ್ರಾಸಂಗಿಕ ಕಾರಣವೊಂದು ಇದಕ್ಕೆ ಪ್ರಾರಂಭಬಿಂದುವಾಗಿ ಬಂದಿತು.

ಕಿಟ್ಟಿಯ ಮನೆಯ ದೇವರಲ್ಲಿ ತಂದೆ ಪೂಜಿಸುತ್ತಿದ್ದ ಅಚ್ಚಕರಿಯ ಬಣ್ಣದ ಶಾಲಿಗ್ರಾಮವೊಂದಿತ್ತು. ಅದನ್ನು ತಂದೆಯ ಮರಣದ ಕಾಲದಿಂದ ಪೆಟ್ಟಿಗೆಯಲ್ಲಿ ಹಾಕಿಟ್ಟು, ಕೇವಲ ಕೆಲವೇ ದೇವರುಗಳನ್ನು ದಿನದ ಪೂಜೆಗೆ ಹೊರಗೆ ಇಟ್ಟಿದ್ದರು. ಕಿಟ್ಟಿಯ ಮುಂಜಿವೆಯಾದಂದಿನಿಂದ ಈ ದೇವತೆಗಳ ಪುಟ್ಟಗಣದ ಪೂಜೆಯನ್ನು ಅವನೇ ಮಾಡುತ್ತಿದ್ದನು. ನವರಾತ್ರಿಗೊಮ್ಮೆ ದೇವತೆಗಳ ಪರಿವಾರವೆಲ್ಲ ಆ ಪೆಟ್ಟಿಗೆಯೊಳಗಿಂದ ಹೊರಕ್ಕೆ ಬಂದು ವರಾಹ–ಕೇಶದ ತಿಕ್ಕಾಟದಿಂದ ಶುದ್ಧರಾಗಿ, ಪೂಜೆ ಪಡೆದು, ಮತ್ತೆ ಸ್ವಸ್ಥಾನಕ್ಕೆ ತೆರಳುತ್ತಿದ್ದರು. ಕಿಟ್ಟಿಗೆ ಶಾಲಿಗ್ರಾಮವನ್ನು ಕಂಡರೆ ತುಸು ಭಯ. ಅದರ ಬಣ್ಣ, ಆಕಾರ, ಚಿತ್ರವಿಚಿತ್ರ ಗೆರೆಗಳು, ತನ್ನ ತಾಯಿ ಅದಕ್ಕೆ ಕೊಡುವ ವಿಶೇಷ ಮರ್ಯಾದೆ – ಇವೆಲ್ಲವುಗಳ ಚಿಕ್ಕಂದಿನ ಚಿತ್ರ ಅವನ ಮನದ ಮೇಲಿಂದ ಮಸುಕಾಗಿರಲಿಲ್ಲ.

ಒಂದು ದಿನ ಆ ಶಾಲಿಗ್ರಾಮ ಕಳೆದುಹೋಯಿತು.

ಅದೆಂತೆಂದರೆ, ಕಿಟ್ಟಿ ಬೆಣ್ಣೀಹಳ್ಳದ ರೇಲ್ವೆ ಪೂಲಿನ ಮೇಲಿಂದ ದೇವರ ಪೆಟ್ಟಿಗೆಯನ್ನು ತಲೆಮೇಲೆ ಇಟ್ಟುಕೊಂಡು ಗಾಡಿಯ ಹಳಿಯ ಮೇಲಿಂದಲೆ ಸಾಗಿದ್ದ. ಸಾಗುಸಾಗುತ್ತಲೇ ಹಿಂದಿರುಗಿ ನೋಡಲಾಗಿ ಸದ್ದಿಲ್ಲದೆ ಮೇಲ್‌ಗಾಡಿಯು ಅವನ ಮೈಮೇಲೆ ಬಂದಿತು. ಕಿಟ್ಟಿ ಹಳಿಯ ಮೇಲಿಂದಲೇ ಹಾಗೇ ಜೋರಾಗಿ ಓಡಿದನು. ಆದರೆ ಗಾಡಿಯ ವೇಗದ ಮುಂದೆ ಅವನ ಎಷ್ಟು ಓಡಿಯಾನು ? – ಮೇಲಾಗಿ ಕೈಯಲ್ಲಿ ದೇವರ ಪೆಟ್ಟಿಗೆ. ಪೂಲಿನ ಎರಡು ಮಗ್ಗುಲಿನ ಕಂಟಾಂಜನಗಳು ಮುಂದೆ ಹೋದಂತೆ ಇನ್ನೂ ಕಿರಿಯಗಲವಾಗಿ ಒಂದೆಡೆಗೆ ಒರಗಿ ನಿಲ್ಲಲು ಕೂಡ ಜಾಗೆ ಇಲ್ಲದಂತಾಯಿತು. ಎಷ್ಟು ಓಡಿದರೂ ಪೂಲು ಮುಗಿಯಲೇ ಒಲ್ಲದು. ಕೊನೆಗೆ ಕಿಟ್ಟಿ ದೇವರ ಹೆಸರು ಹೇಳುತ್ತ ಪೂಲಿನ ಒಂದು ಕಟಾಂಜನದ ಮೇಲೆ ಒರಗಿ ತುದಿಬೆರಳ ಮೇಲೆ ನಿಂತನು. ಕೈಗಳಲ್ಲಿ ದೇವರ ಪೆಟ್ಟಿಗೆಯನ್ನು ಹಿಡಿದು ಹಳ್ಳದ ಮೇಲೆ ಚಾಚಿದ್ದನು. ಅಷ್ಟರಲ್ಲಿ ಗಾಡಿ

ಬಂದದ್ದೇ ಧಡಧಡ ಹೋಗತೊಡಗಿತು. ಅದರ ಸಪ್ಪಳಕ್ಕೆ ಹೆದರಿ ಕಿಟ್ಟಿ ಉಸಿರು ಗಟ್ಟಿಯಾಗಿ ಹಿಡಿದು ಮೈಯೆಲ್ಲ ಜೋರಾಗಿ ಬೆವತನು. ಇನ್ನೇನು ಪಾರಾದೆನಪ್ಪಾ ಎನ್ನುವಷ್ಟರಲ್ಲಿ ಗಾರ್ಡನ ಡಬ್ಬಿ ಬಂತು. ಅದರಲ್ಲಿ ಜಾರ್ಜಿ, ಹೆಡ್ ಕಾರಕೂನ ಜೋಶಿ, ಅಂಗಡಿ ಮಾಮಲೇದಾರರು, ದೇಸಾಯರು, ಗಾರ್ಡನ ಜೊತೆಗೆ ನಿಂತಿದ್ದರು. ಜಾರ್ಜಿ ಗಾರ್ಡನ ಒಂದು ಕೈ ಹಿಡಿದು ಜಗ್ಗುತ್ತ ಏನೋ 'ಬೇಡ, ಬೇಡ' ಎಂದು ಅನ್ನುತ್ತಿದ್ದನು. ಆದರೆ ಗಾರ್ಡನು ಕೈ ಕೊಸರಿಕೊಂಡು ತನ್ನ ಕೈಯಲ್ಲಿಯ ದಪ್ಪನೆಯ ಬೆತ್ತದಿಂದ ಹಿಡಿದು ಕಿಟ್ಟಿಯ ಬೆನ್ನಿಗೆ ಹೊಡೆದನು. ಗಾಡಿ ಮುಂದೆ ಸಾಗಿತು. ಕಿಟ್ಟಿ ಸಾವರಿಸಿಕೊಳ್ಳುವಷ್ಟರಲ್ಲಿ ಕೈಯಲ್ಲಿಯ ದೇವರ ಪೆಟ್ಟಿಗೆಯ ಮುಚ್ಚಳ ತೆರೆದುಬಿಟ್ಟಿತು. ಒಳಗಿನ ದೇವರೆಲ್ಲ ಹಾರಿ ಬೆಣ್ಣಿಹಳ್ಳಕ್ಕೆ ಬಿದ್ದವು. ಕಿಟ್ಟಿ ಅವನ್ನು ಅಂತರಾಳದಲ್ಲಿಯೇ ಹಿಡಿಯಲೆಂದು ಕೈಚಾಚಿದನು. ಆದರೆ ಅವನ ಕೈಗೆ ಶಾಲಿಗ್ರಾಮವೊಂದೇ ಸಿಕ್ಕಿತು.

'ಸಾಕು ಬಿಡು ; ಶಾಲಿಗ್ರಾಮವೊಂದಿದ್ದರೆ ಸಾಕು. ಉಳಿದ ದೇವರು ಹೋಗಲಿ' ಎಂದು ಕಿಟ್ಟಿ ಶಾಲಿಗ್ರಾಮವನ್ನು ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದುಕೊಂಡನು. ಕಿಸೆಗೆ ಹಾಕಬೇಕೆನ್ನುವಾಗ ಕೈಯಲ್ಲಿಯೇ ಶಾಲಿಗ್ರಾಮ ಉಲುಕಿತು.

'ಎಲ ! ಜೀವವಿದೆಯೇ ಇದಕ್ಕೆ ?' ಎನ್ನುತ್ತ ಕಿಟ್ಟಿ ತನ್ನ ಮುಷ್ಟಿ ಬಿಚ್ಚಿ ನೋಡಿದನು.

'ನನ್ನನ್ನು ಏಕೆ ಹಿಡಿದಿ? ನನ್ನ ಪೂಜೆ ಮಾಡಿದೆಯಾ ಇಷ್ಟು ದಿನ? ಬಿಟ್ಟುಬಿಡು ನನ್ನ ! ಹಳ್ಳದಲ್ಲಿ ದಿನಾ ಒಂದಿಷ್ಟು ಮೈಮೇಲೆ ನೀರಾದರೂ ಹೋದಾವು !' ಎನ್ನುತ್ತ ಶಾಲಿಗ್ರಾಮ ಕೈಯಲ್ಲಿ ಹರಿದಾಡತೊಡಗಿತು – ಅದು ಬಿದ್ದೀತೆಂಬ ಭಯದಿಂದ ಕಿಟ್ಟಿ ಮತ್ತೆ ಗಟ್ಟಿಯಾಗಿ ಮುಷ್ಟಿ ಮುಚ್ಚಿದನು. ಆದರೆ ಬೇಡಬೇಡವೆಂದು ಕಿಟ್ಟ ಎಷ್ಟು ಅಂಗಲಾಚಿದರೂ ಶಾಲಿಗ್ರಾಮವು ಉಲುಕುತ್ತ ಉಲುಕುತ್ತ ದಡದ ಗುಂಟ ಹರಿದುಬಂದು ಹೊರಕ್ಕೆ ಸಿಡಿದು ಹೋಯಿತು. ಆ ಕಾಲಕ್ಕೆ, ಅದರ ತಂಪು ಜೀವಂತ ಸ್ಪರ್ಶಕ್ಕೆ ಕಿಟ್ಟಿ ಥರಥರ ನಡುಗಿದನು. ಮೈಯೆಲ್ಲ ಜೋರೆಂದು ಬೆವೆತಿತು. 'ಹುಂ ಉಂ ಉಂ' ಮಾಡುತ್ತ ಎದ್ದು ಕುಳಿತುಕೊಂಡನು.

ರತ್ನಾಗೂ ಕಿಟ್ಟಿಯ ನರಳಾಟಕ್ಕೆ ಎಚ್ಚರಿಕೆಯಾಯಿತು. ಅವಳೂ ಅದೇ ಎದ್ದು ಕುಳಿತು ಭಯದಿಂದ ಗಂಡನ ಕಡೆಗೆ ನೋಡುತ್ತಿದ್ದಳು. ಕಿಟ್ಟ 'ಕೆಟ್ಟ ಕನಸು ಬಿದ್ದಿತ್ತು' ಎಂದು ಹೇಳಿ ಬ್ಯಾಟ್ರಿ ಹಚ್ಚಿ ಗಡಿಯಾರ ನೋಡಿದನು. ಇನ್ನೂ ರಾತ್ರಿ

ಎರಡು ಹೊಡೆದಿತ್ತು. ಕನಸನ್ನು ವಿವರವಾಗಿ ಹೇಳುವದರಲ್ಲಿ ವಿಶೇಷ ಅರ್ಥವಿರಲಿಲ್ಲ. ಅಲ್ಲದೆ ಭೀತಿಯ ನಡುಕ ಇನ್ನೂ ಮನಸ್ಸಿನಲ್ಲಿ ಹಾಗೆಯೇ ಇತ್ತು. ಕಿಟ್ಟಿ ಬಾಗಿಲು ತೆಗೆದವನೇ ಹೋಗಿ ತಾಯಿಯನ್ನು ಎಬ್ಬಿಸಿದನು.

ಎಷ್ಟೋ ದಿನಗಳಿಂದ ಕಿಟ್ಟಿ ತಾಯಿಯೊಡನೆ ಅಂತಃಕರಣಪೂರ್ವಕವಾಗಿ ಮಾತೇ ಆಡಿರಲಿಲ್ಲ. ಹೆಂಡತಿಯೊಡನೆ ಮಾತಾಡಿದರೆ ತಾಯಿ ಸಿಟ್ಟಿಗೇಳುವಳೆಂಬ ವಿಚಾರದಿಂದ ಹೆಂಡತಿಯೊಡನೆ ಕೂಡ ಬಹಿರಂಗವಾಗಿ ಮಾತು ಕಡಿಮೆ ಮಾಡಿದ್ದನು. ಆದರೆ ಅಂದು ತಾಯಿಯನ್ನು ಎಬ್ಬಿಸಿ ತನ್ನ ಕನಸನ್ನು ಸವಿಸ್ತಾರವಾಗಿ ವರ್ಣಿಸಿ ಹೇಳಿದನು. ಭಯಭೀತಳಾದ ರತ್ನಾ ಕೂಡ ಅಡಿಗೆಮನೆಯನ್ನು ಸೇರಿ ಗೋಡೆಗೆ ಆತುಕೊಂಡು ಎಲ್ಲ ಕೇಳಿದಳು. ಭಯದಿಂದ ಮೂವರೂ ಒಂದಾಗಿದ್ದರು.

ಗಂಗವ್ವನೂ ಅನೇಕ ದಿನಗಳನಂತರ ಪ್ರಥಮ ಬಾರಿ ಮನಃಪೂರ್ವಕ ಬಾಯಿಬಿಚ್ಚಿದ್ದು ಅಂದೇ. ಮಗನ ಭಯವನ್ನು ಕಂಡವಳೇ ಆಕೆ ಧೈರ್ಯಕೊಟ್ಟಳು:

'ಕಿಟ್ಟಣ್ಣ, ನೀ ಹೆದರಬ್ಯಾಡ. ಶಾಲಿಗ್ರಾಮ ನಮ್ಮ ಮುಖ್ಯ ದೇವರು. ಅವರು ಇರೂತನಕಾ ಅದರ ಮ್ಯಾಲ ಬಹಳ ಜೀವ ಇತ್ತು. ನೀ ಸಣ್ಣವ ಇದ್ದಿ ಅವರು ಹೋದಾಗ. ಅದರ ಪೂಜಾದಾಗ ಹೆಚ್ಚು ಕಡಿಮಿ ಆಗಲಿ ಬಿಡಲಿ ಅಂತ ನಾನs ಬೇಕಂತ ಒಳಗ ಇಡಿಸಿದ್ದೆ. ಯಾ ದೇವರೂ ಸಿಟ್ಟಿಗೆ ಏಳೂದಿಲ್ಲ; ಭಕ್ತಿ ಒಂದು ಇದ್ದರ ಎಲ್ಲಾ ದೇವರೂ ಶಾಂತ ಇರತಾರ. ನೀ ಏನೂ ಹೆದರಬ್ಯಾಡ. 'ಇನ್ನ ನೀ ದೊಡ್ಡವ ಅದಿ, ನನಗ ದಿವಸಾ ಪೂಜಿ ಕಾಣಿಸು' ಅಂತ ನಮ್ಮಪ್ಪ ಶಾಲಿಗ್ರಾಮ ತಾನಾಗೇ ತಿಳಿಸಿ ಹೋಗ್ಯಾನ. ಅದು ನಿನ್ನ ಹಿರೇರ ಪುಣ್ಯಾ ಅಂತ ತಿಳಿಕೊ. ನೀ ಸಣ್ಣವ, ಶಾಲಿಗ್ರಾಮನ ಮರತಿದ್ದೀ. ನಾ ಹೆಂಗ ಮರ್ರೀಲ್ಯಪಾ? – ನಮಗ ಹಿಂದಕ ದೌಲತ್ತು ಕೊಟ್ಟವನೂ ಅವನs, ಬಡ ತನದಾಗ ಕಾಯ್ದವನೂ ಅವನs. ನಿನ್ನ ಪೂಜಿ. ಆದಮ್ಯಾಲ ದಿವಸಾ ನಾನು ಶಾಲಿಗ್ರಾಮದ ಹೆಸರಿಲೇ ಒಂದು ತುಪ್ಪದ ದೀವಿಗಿ ಹಚ್ಚಿ ಇಡತಿದ್ದೆನಪಾ. ಅವ ಸಿಟ್ಟಿಗೆದ್ದರೂ ಬಹಳ ಸಿಟ್ಟಿಗೇಳೂದಿಲ್ಲ ಬಿಡು !' ಎಂದಳು.

'ಆ ದೀವಿಗಿ ಶಾಲಿಗ್ರಾಮಗ ಅಂದs ಇಡತಿದ್ದಿ ಏನು?'

'ಹೌದು' ಎಂದು ತಾಯಿ ಗೋಣುಹಾಕಿದಳು.

ಈ ಮಾತು ಕೇಳಿ, ಭಯಭೀತಳಾದ ರತ್ನಾಳಲ್ಲಿ ಈ ದುರ್ಮುಖಿಯಾದ ಮುದಿಕೆಯ ಬಗ್ಗೆ ಆದರ ಹುಟ್ಟಿತು. ಕಿಟ್ಟಿಗಂತೂ 'ಅವ್ವನೇ ನನ್ನನ್ನು ಕಾಯ್ದಳು' ಎಂದೇ ಕಲ್ಪನೆಯಾಯಿತು. ತಮ್ಮ ಕುಲಧರ್ಮ–ಕುಲಾಚಾರದ ಜೀವಂತ

ದೀವಿಗೆಯಂತೆ ತಾಯಿ ಕಂಡಳು. ಅಂದೇ ಶಾಲಿಗ್ರಾಮ ಆ ಪೆಟ್ಟಿಗೆಯನ್ನು ಬಿಟ್ಟು ಹೊರಗೆ ಬಂದು ತನ್ನ ಪೂರ್ವದ ತಾಮ್ರದ ತಟ್ಟೆಯಲ್ಲಿ ಪ್ರಸ್ಥಾಪಿತನಾದನು ; ಗಂಗವ್ವನೂ ಸಹ ಮಾತೃಸ್ಥಾನದಲ್ಲಿ ಪ್ರಸ್ಥಾಪಿತಳಾದಳು.

ಕಚೇರಿಗೆ ಹೊರಡುವ ಮುನ್ನ ಕಿಟ್ಟಿ ಶಾಲಿಗ್ರಾಮವನ್ನು ನೆನೆದು, 'ಇಂದು ನನ್ನಿಂದ ಯಾವ ತಪ್ಪೂ ಆಗದಿರಲಿ ; ನನ್ನ ಬುದ್ಧಿ ಚೆನ್ನಾಗಿ ನಡೆಯಲಿ ; ನನ್ನ ವರ್ಚಸ್ಸು ಕಡಿಮೆಯಾಗದಿರಲಿ ; ಕಿಸೆಗೆ ತುಸು ಹಣ ಬೀಳಲಿ.' ಮುಂತಾಗಿ ಮನದಲ್ಲಿ ಪ್ರಾರ್ಥಿಸಿ ಹೊಸ್ತಿಲ ಹರಕ್ಕೆ ಕಾಲಿಡತೊಡಗಿದನು. ಒಮ್ಮೊಮ್ಮೆ ಶಾಲಿಗ್ರಾಮದ ನಿರ್ಮಾಲ್ಯ ತುಳಸಿಯ ಪತ್ರವನ್ನು ತನ್ನ ಕಿಸೆಯಲ್ಲಿ ಇಟ್ಟುಕೊಳ್ಳುವನು.

* * *

ದೈವೀಪಾತಳಿಯ ಮೇಲೆ ಶಾಲಿಗ್ರಾಮ, ಮನೆತನದ ಪಾತಳಿಯ ಮೇಲೆ ತಾಯಿ, ಇವರು ವಿಭೂತಿಗಳಾಗಿದ್ದಂತೆ, ಕಚೇರಿಯ ಕೆಲಸದಲ್ಲಿ ಜಾರ್ಜಿ ಕಿಟ್ಟಿಗೆ ವಿಭೂತಿಯಾಗಿದ್ದನು. ಕಿಟ್ಟಿಯ ಲಗ್ನವಾದ ಮೂರುನಾಲ್ಕು ತಿಂಗಳುಗಳಲ್ಲಿಯೇ ಜಾರ್ಜಿಯ ಲಗ್ನವೂ ಆಗಿತ್ತು. ಇದೀಗ ಅವನಿಗೊಂದು ಮಗು ಕೂಡ ಆಗಿತ್ತು. ಜಾರ್ಜಿ ಸ್ಥಾಣುವಿನಂತೆ ಅಚಲನು. ಅಧೀರತೆ, ಚಂಚಲತೆಯ ಕೈಯಲ್ಲಿ ಸಿಕ್ಕು ತೊಳಲಾಡುವ ಕಿಟ್ಟಿಗೆ ತನ್ನ ಜೀವನಸ್ಥೈರ್ಯದಿಂದ ಮೂಕವಾಗಿ ಅಣಕವಾಡುತ್ತಿದ್ದನು. ಮನೆಯಲ್ಲಿ ಶಾಲಿಗ್ರಾಮಕ್ಕೆ ತುಪ್ಪದ ದೀವಿಗೆಯನ್ನು ಇಡಲು ಮರೆಯದ ತಾಯಿಯಿದ್ದಂತೆ ಕಚೇರಿಯಲ್ಲಿ ಸಂಜೆ ಎರಡು ಬಾರಿ ಚಹ ಕುಡಿಯದ, ಕೆಲಸ ಮಾಡದೆ ಹಣ ತೆಗೆದುಕೊಳ್ಳದ, ಆಶೆಯ ಮೇಲಿನ ಪ್ರಭುತ್ವವನ್ನು ಕಳಕೊಳ್ಳದ, ಯಾರಿಗೂ ಬುದ್ಧಿ ಹೇಳದ, ಜಾರ್ಜಿ ಇದ್ದನು. ಇಂಥವರು ಒಂದೊಂದು ಪಾತಳಿಯಲ್ಲಿ ಕಿಟ್ಟಿಗೆ ಕಣ್ಮಿಟುಕಿ ಕರೆಯುವ ಆದರೆ ಕೈಮೀರಿ ಜಾರುವ ಆದರ್ಶವಾಗಿದ್ದರು. ನೀತಿಯ ಉಗಮವೆಲ್ಲಿ, ಎಂಬುದಕ್ಕೆ ತತ್ವಜ್ಞಾನಿಗಳು ಏನೇನೋ ಉತ್ತರ ಕೊಟ್ಟಿರಬಹುದು. ನೀತಿ ಸಮಾಜಜೀವನದ ಆವಶ್ಯಕತೆಗಳ ಮೂಲಕ ಹುಟ್ಟಿದ್ದರೆ, ಬೇರೆ ಬೇರೆ ಸಮಾಜಗಳಲ್ಲಿ ನೀತಿಯೂ ಬೇರೆಬೇರೆಯಾಗುವ ಕಾರಣವಿಲ್ಲ. ನೀತಿಯ ಉಗಮ 'ಯದ್ಯದಾಚರತಿ ಶ್ರೇಷ್ಠಃ' ಎಂಬಲ್ಲಿ ಇದೆ. ಕೆಲವರು ಯತ್ನಪೂರ್ವಕವಾಗಿ ಪಾಠ ಕಲಿಯದೆ ನೀತಿಪರರಾಗಿರುತ್ತಾರೆ. ಅವರು ಸ್ವಾಭಾವಿಕವಾಗಿ ಜೀವನದಲ್ಲಿ ಯಶಸ್ಸು ಪಡೆಯುತ್ತಾರೆ. ಅವರ ಬಾಳಿನ ಸ್ಥಿರತೆಯನ್ನು ಕಂಡು ಚಾಂಚಲ್ಯದಲ್ಲಿ ತೊಳಲಾಡುವ ದುಃಖಿಗಳು 'ಸ್ಥಿರತೆಯಲ್ಲಿ ಸುಖ' ಎಂಬ ತತ್ವ ಕಂಡುಹಿಡಿಯುತ್ತಾರೆ. ಕದಾಚಿತ್ 'ಸಂಜೆ ಒಂದೇ ಬಾರಿ ಚಹ ಕುಡಿದರೆ ಸುಖ' ಎಂಬ ತತ್ವವನ್ನೂ ಹುಡುಕಿ ತೆಗೆಯಬಹುದು. ಹಾಗಾದರೆ ಅದು

ಅಂಧನೀತಿಯಾಗುತ್ತದೆ, ಮೂಢಕಲ್ಪನೆಯಾಗುತ್ತದೆ. ಅಥವಾ ಈ ಯಾವ ತತ್ವವನ್ನೂ ಹುಡುಕಲು ಯತ್ನಿಸದೆ ಜಾರ್ಜಿಯಂಥ ವ್ಯಕ್ತಿಯನ್ನೇ ತಮ್ಮ ಜೀವನದ ಕೂಟಸ್ಥವನ್ನಾಗಿ ಮಾಡಬಹುದು. ಅಂಥ ಪ್ರಸಂಗದಲ್ಲಿ ವ್ಯಕ್ತಿಪೂಜೆ ಆರಂಭವಾಗುತ್ತದೆ. ಕಿಟ್ಟಿಯಂಥ ಲೌಕಿಕರು ತಮ್ಮ ಕ್ಷುದ್ರತೆಯನ್ನು ಹಳಿಯುತ್ತ ಅಂಥವರ ಮನದ ಔದಾರ್ಯವನ್ನು ಹೊಗಳುತ್ತ, ಅಸೂಯೆಪಡುತ್ತ, ತಮ್ಮ ಜೀವನದ ಬಗ್ಗೆ ಹೇಸಿಗೆ ತಳೆಯುತ್ತಾರೆ. ಕದಾಚಿತ್ ಸುದೈವದಿಂದ ಶಾಲಿಗ್ರಾಮವು ಅರ್ಧಕ್ಕೆ ನೆರವಾದರೆ ಇಂಥವರೂ ವಿಪರೀತ ರೀತಿಯಲ್ಲಿ ಒಂದಿಷ್ಟು ಸ್ಥೈರ್ಯವನ್ನು ಪಡೆದರೂ ಪಡೆಯಬಹುದು.

ತಾನರಿಯದೆಯೇ ಜಾರ್ಜಿ ಕಿಟ್ಟಿಯನ್ನು ಆತ್ಮಪರೀಕ್ಷಣೆಗೆ ಹಚ್ಚುತ್ತಿದ್ದನು. ಒಂದು ದಿನ ಒಂದು ದೊಡ್ಡ ಸ್ಟೇಟಮೆಂಟನ್ನು ಅಂದೇ ತಯಾರು ಮಾಡಿ ಮನೆಗೆ ಹೋಗುವ ಪ್ರಸಂಗ ಬಂದಿತು ಕಿಟ್ಟಿಗೆ. ಕಚೇರಿ ಮುಗಿದ ಕೂಡಲೆ ಜಾರ್ಜಿ ಕಿಟ್ಟಿಯನ್ನು ಕಾಣಲು ಬಂದನು. ಕಿಟ್ಟಿ ಚೇಷ್ಟೆಮಾಡುತ್ತ 'ಜಾರ್ಜಿ, ಇದನ್ನಿಷ್ಟು ಓದಿ ಹೇಳು. ನಾನು ಬರೀತೇನಿ. ನೀ ಓದಿ ಹೇಳಿದರ ಕೃಷ್ಣಪ್ಪನ ದೋಸೆ' ಎಂದನು. ಜಾರ್ಜಿ ಮುಗುಳುನಗೆ ನಗುತ್ತ ನಿಂತಲ್ಲಿಯೇ ಓದಿ ಹೇಳತೊಡಗಿದನು. ಸ್ಟೇಟಮೆಂಟ ದೊಡ್ಡದು. ಅಲ್ಲಿಯೇ ಒಂದೂವರೆ ತಾಸು ಕಳೆದುಹೋಯಿತು. ಏಳು ಬಡಿದುಹೋಗಿತ್ತು. ಕೆಲಸ ಮುಗಿದ ಮೇಲೆ ಕಿಟ್ಟಿಗೆ ಸಂಕಟ ಬಂದಿತು. 'ಜಾರ್ಜಿಯಾದರೋ ಸಂಜೆ ಏನೂ ತಿನ್ನಲಾರ ; ಆದರೆ ಒಂದೂವರೆ ತಾಸು ತನಗಾಗಿ ನಿಂತು ದುಡಿದಿದ್ದಾನೆ ; ಅದರಲ್ಲಿ ತಾನು ಮಾತು ಆಡಿದ್ದೇನೆ. ಏನೇ ಆಗಲಿ, ಇಂದು ಆಗ್ರಹ ಮಾಡಿ ದೋಸೆ ತಿನ್ನಿಸಿಯೇಬಿಡಬೇಕು' ಎಂದು ಮನಸ್ಸಿನಲ್ಲಿಯೇ ಚರ್ಚಿಸಿ ಜಾರ್ಜಿಯೊಡನೆ ಹೊರಟನು. ಮಿಶನ್ ಕಂಪೌಂಡಿಗೆ ಹೊರಳುವ ದಾರಿಯಲ್ಲಿ ಜಾರ್ಜಿ ಹೊರಳಿದ. ಕಿಟ್ಟಿ ಹೋಟೆಲಿನತ್ತ ಅವನನ್ನು ಎಳೆಯಲು ಆಗ್ರಹ ಮಾಡತೊಡಗಿದ. ಜಾರ್ಜಿ ಒಲ್ಲೆ ಎನ್ನತೊಡಗಿದ. ಇದರಿಂದ ಕಿಟ್ಟಿಗೆ ಸಂತಾಪ ಬರತೊಡಗಿತು. ಅದನ್ನು ಕಂಡು ಜಾರ್ಜಿ ನಿಜವನ್ನು ಉಸುರಿದನು. 'ಮನ್ಯಾಗ ಸ್ಟೆಫನ್ ಅಜಾರಿ ಅದಾನ. ಹಿಂಗ ಹೋಗೆ ಅಲ್ಲೆ ಕೂತರ ಮನಿ ಮುಟ್ಟಲಿಕ್ಕೆ ಲೇಟ ಆಗತದ.'

ಜಗತ್ತೆಲ್ಲ ತನ್ನನ್ನು ನಾಚುವಂತೆ ಮಾಡಲು ಒಳಸಂಚು ಹೂಡಿದಂತೆ ಅನಿಸಿತು. ಸ್ಟೆಫನ್ (ಜಾರ್ಜಿಯ ಒಂದು ವರ್ಷದ ಮಗು) ಅಜಾರಿ ಇದ್ದಾಗ ಜಾರ್ಜಿ ತನಗೆ ಹೇಳಲಿಲ್ಲ ; ನಗುನಗುತ್ತ ಒಂದೂವರೆ ತಾಸು ನಿಂತು ಕೆಲಸ ಮಾಡಿಕೊಟ್ಟ. ಅದಕ್ಕೆ ತಾನು ದೋಸೆ ತಿನಿಸಲು ಹೊರಟಿದ್ದೆ !... ಎಂಬ ವಿಚಾರದಲ್ಲಿ

ಕಿಟ್ಟಿ ಕಸಿವಿಸಿಬಟ್ಟನು.

ಒಮ್ಮೆ ಕ್ರಿಸ್‌ಮಸ್‌ದಲ್ಲಿ ಕಿಟ್ಟಿ ಅವರ ಮನೆಗೆ ಹೋಗಿದ್ದನು. ಅಲ್ಲಿ ಸಾರಮ್ಮನ ಹಿಂದಿನಿಂದ ಆಕೆಯ ಅಪ್ಪಣೆಗಳನ್ನು ಸ್ವೀಕರಿಸುತ್ತ ಓಡಾಡುವ ಜಾರ್ಜಿಯನ್ನು ನೋಡಿ 'ಸತಿಭಕ್ತ ಶಿರೋಮಣಿ' ಎಂದುಕೊಂಡಿದ್ದನು. ಮನೆಯಲ್ಲಿ ಹೆಂಡತಿಯದೇ ಎಲ್ಲ ಕಾರಭಾರ, ಎಂಬುದಾದರೂ ಒಂದು ದೋಷ ಜಾರ್ಜಿಯಲ್ಲಿ ಸಿಕ್ಕಿತಲ್ಲಾ, 'Hen-pecked' ಇದ್ದಾನೆ, ಇಷ್ಟಕ್ಕೆ ಕಿಟ್ಟಿಗೆ ಸಂತೋಷ. ಕಿಟ್ಟಿ–ಮನೆಯಲ್ಲಿ ತದ್ವಿರುದ್ಧ ಪರಿಸ್ಥಿತಿ. ಲಗ್ನವಾದ ಹೊಸದರಲ್ಲಿ ಹೆಂಡತಿಯ ಬಗ್ಗೆ ಇದ್ದ ಉತ್ಸಾಹ ಕಡಿಮೆಯಾಗಿ ಇದೀಗ ರತ್ನಾ ಎಲ್ಲ ಹೆಂಡಂದಿರ ಹಾಗೆ ಆಗಿದ್ದಳು. ಆದರೆ ಹೆಂಡತಿಗೆ ತುಸು ಜಡ್ಡು ಆದೊಡನೆ ಮಾತ್ರ ಕಿಟ್ಟಿಗೆ ಹಗಲಿರುಳು ಚಿಂತೆ. ಕಚೇರಿಯ ಕೆಲಸ ಕೂಡ ಅಂದು ಚೆನ್ನಾಗಿ ಆಗುತ್ತಿರಲಿಲ್ಲ.

ಆದರೆ ಸಾರಮ್ಮನ ಹೆರಿಗೆಯ ಸಮಯದಲ್ಲಿ ಕಿಟ್ಟಿ ಸಾಯಕಲ್ ಮೇಲಿಂದ ಸಿವಿಲ್ ಹಾಸ್ಪಿಟಲ್ಲಿಗೆ ಬಂದನು. ವೇಟಿಂಗ್ ರೂಮಿನಲ್ಲಿ ಜಾರ್ಜಿ ವರ್ತಮಾನ ಪತ್ರವನ್ನು ಓದುತ್ತ ಕುಳಿತಿದ್ದನು. ನೆರೆಯ ವಾರ್ಡಿನಲ್ಲಿ ಸಾರಮ್ಮನ ನರಳುವ ಧ್ವನಿ ಕೇಳಿಸುತ್ತಿತ್ತು. ಅದನ್ನು ಕೇಳಿ ಕಸಿವಿಸಿಬಟ್ಟನು ಕಿಟ್ಟಿ. ಜಾರ್ಜಿಯ ಮುಖವನ್ನು ನೋಡಿದರೆ ಜಾರ್ಜಿ ಸಚಿತ್ರ ವೃತ್ತಪತ್ರದಲ್ಲಿ ನಿಶ್ಚಿಂತನಾಗಿ ಮಗ್ನನಾಗಿದ್ದ.

## ೨೩ : ಕಿಟ್ಟಿಯ ಫಿರತಿ

ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।
ಅನಿಚ್ಛನ್ನಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥

'ಇಚ್ಛೆಯಿಲ್ಲದಿದ್ದರೂ ಮನುಷ್ಯನಿಂದ ಪಾಪ ಮಾಡಿಸಲು ಬಲವಂತವಾಗಿ ಹಚ್ಚಿಸುವ ಆ ಶಕ್ತಿ ಯಾವುದು ?' – ಎಂಬ ಪ್ರಶ್ನೆಯನ್ನು ತ್ರೇತಾಯುಗದಿಂದ ನರನು ಕೇಳುತ್ತ ಬಂದಿದ್ದಾನೆ. ಅದಕ್ಕೆ ಉತ್ತರಗಳು ಏನೇ ಇರಲಿ ; ಕೆಲಸ ಜರುಗಿಹೋದಮೇಲಾದರೂ ಅನುತಾಪವಾದರೆ ಅವನು ಪುಣ್ಯವಂತನೆಂದೇ ಹೇಳಬೇಕು. ಅದರಲ್ಲಿ ಫಿರತೀ ದಿನಗಳಲ್ಲಿ ಕಾಲು ಜಾರದ ಸರಕಾರೀ ಕೆಲಸಗಾರನು ಧರ್ಮರಾಜನೇ ಆಗಿರಬೇಕು ; ಇಲ್ಲ ಶತಮೂರ್ಖನಾಗಿರಬೇಕು.

ಫಿರತಿ (tour) ದಿನಗಳಲ್ಲಿ ಆಗಿನ ರೆವ್ಹೆನ್ಯೂದವರೆಂದರೆ ಯುದ್ಧದ ಸಮಯದಲ್ಲಿ ಪಾಳೆಯ ಬಿಟ್ಟ ಸೈನಿಕರಂತೆ. ಮನೆ ಬಿಟ್ಟು ದೂರ ಬಂದದ್ದು, ದಿನವೊಂದಕ್ಕೆ ಸವಿಸವಿ ಊಟ, ಜನರ ಮೇಲೆ ಅಧಿಕಾರ, ಹಾಳುಹರಟೆ, ತಮ್ಮ ದರ್ಪವನ್ನು ಮೇಲಿಂದಮೇಲೆ ಪರೀಕ್ಷಿಸಿ ನೋಡುವ ಹವ್ಯಾಸ, ಇವೆಲ್ಲವೂ ಕೂಡಿ 'ಏಕೈಕಮಪ್ಯನರ್ಥಾಯ' ಎಂಬಂತಾಗುತ್ತದೆ. ಅಧಿಕಾರಿಗಳ ಸಮೀಪ ಸಂಬಂಧ ಬರುತ್ತದೆ ; ಕೈಕೆಳಗೆ ಓಲೆಕಾರರು, ಗೌಡ–ಕುಲಕರಣಿಯರು ದೂತರಾಗಿ ಓಡಾಡುತ್ತಿರುತ್ತಾರೆ. ಇಂಥ ನಿರಕುಂಶ ದಿನಗಳಲ್ಲಿ ಬಂದ ಕಾರಕೂನರಲ್ಲಿ ಒಂದು ಅನುಭವಿಕ ವ್ಯಕ್ತಿ ಸೇರಿಬಿಟ್ಟರೆ ಸಾಕು.

ಈ ಸಾರೆಯ ಫಿರತಿಯಲ್ಲಿ ಹೆಡ್ ಕಾರಕೂನ ಜೋಶಿ ರಾಮರಾಯನ ಜೊತೆಗೆ ಕಿಟ್ಟಿಗೆ ಹೋಗಬೇಕಾಗಿಬಂದಿತು. ಅವನ ಫಿರತಿಗಳು ಹೆಸರಾಗಿದ್ದವು. ಅವನ ಪರಾಕ್ರಮಗಳು ರೆವ್ಹೆನ್ಯೂದ ಖಾಸಗಿ ರೆಕಾರ್ಡುಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡತಕ್ಕವು. ಒಮ್ಮೆ ಅವನು ಜೋಳದ ಹೊಲದಲ್ಲಿ 'ನಿನ್ನ ಮ್ಯಾಲ ಖಟ್ಲೆ ಹಾಕತೇನಿ' ಎಂದು ಒಬ್ಬ ಹಳ್ಳಿಯ ಹೆಂಗಸನ್ನು ಹೆದರಿಸಿದ್ದನಂತೆ. ಇನ್ನೊಮ್ಮೆ ಮಾಮಲೇದಾರರನ್ನು ಚಾವಡಿಯಲ್ಲಿ ಕೂಡಿಸಿ ಹಿಂದೆಯೇ ಪ್ರಣಯಲೀಲೆ ಸಾಧಿಸಿದ್ದನಂತೆ. ಇಂಥ ಕಥೆಗಳು ಅವನ ಬಗ್ಗೆ ತುಂಬ ಉಂಟು. ಅನೇಕ ಬಾರಿ

ರಾತ್ರಿ ಇಸ್ಪೀಟು ಆಡಲಿಕ್ಕೆ ಕುಳಿತಾಗ ಅವನ ಸ್ನೇಹಿತರು ಅವನ ಕೀರ್ತಿಯ ಬಗ್ಗೆ ಚೇಷ್ಟೆಮಾಡುತ್ತಿದ್ದರು. ಅದಕ್ಕೆ ಅವನ ಉತ್ತರವೆಂದರೆ 'ಏ, ನಿಮ್ಮದೂ ಒಂದೆರಡು ಕಥಿ ಹೇಳಲೇನು ?' ಅಂಥವಾ, 'ನಿಮ್ಮ ಕೀರ್ತಿ ಏನು ಬಣ್ಣಿಸಲೆಪಾ!' ಹೀಗೆಯೇ ಹೊರತು, ಆ ಕಥೆಗಳು ಸುಳ್ಳೆಂದು ಒಮ್ಮೆಯೂ ಅನ್ನುತ್ತಿರಲಿಲ್ಲ. ಒಂದು ಮಾತಿಗೆ ಮಾತು ಬಿದ್ದು ಕಿಟ್ಟಿಯೂ ಇದೇ ಬಗೆಯಿಂದ ಚೇಷ್ಟೆ ಮಾಡಹೋದನು. ಆದರೆ ಜೋಶಿ ರಾಮರಾಯನಿಗೆ ಯಾಕೋ ಜ್ಯುನಿಯರ–ಮೋಸ್ಟನಿಂದ ಚೇಷ್ಟೆ ಮಾಡಿಸಿಕೊಳ್ಳುವದು ಸರಿಬರಲಿಲ್ಲ. ಒಮ್ಮೆಲೆ ಅವನ ಕಡೆಗೆ ತಿರುಗಿ ಕುಳಿತು 'ಏ ಕೃಷ್ಣಾಜಿ, ನೀ ಮಂದಿನ್ನಪ ಕಂಡು ಸಂಕಟಪಡಬ್ಯಾಡ ; ಉಂಡ ಅನ್ನ ಪಚನ ಆಗಲಿಕ್ಕಿಲ್ಲ. ನಿನಗೂ ಆಗಬೇಕೇನು ಹೇಳು?' ಎಂದು ಆಹ್ವಾನವನ್ನೇ ಕೊಟ್ಟನು. ಕಿಟ್ಟಿ 'ಅದೆಲ್ಲಾ ನಿಮಗs ಇರಲಿ' ಅಂದೊಡನೆ ರಾಮರಾಯನು ಹಿಂದುಮುಂದು ನೋಡದೆ 'ಏ, ನನಗ ಗೊತ್ತೊ ! ನೀ ಗಂಡಸs ಅಲ್ಲ' ಎಂದುಬಿಟ್ಟನು. ಇಸ್ಪೀಟುಗಾರರೆಲ್ಲ ಖೊಳ್ಳೆಂದು ನಕ್ಕುಬಿಟ್ಟರು. ಅದು ರಾಮರಾಯನ ಪ್ರತಿಸಲದ ಚೇಷ್ಟೆ. ಆದರೆ ಆ ಪರಿಹಾಸವು ತನ್ನ ನಿಪುತ್ರಿಕತೆಯನ್ನು ವ್ಯಂಗ್ಯವಾಗಿ ಸೂಚಿಸಿದಂತೆ ಕಿಟ್ಟಿಗೆ ಅನಿಸಿದ ಮೂಲಕ ಅವನ ಮುಖ ಗಂಭೀರವಾಯಿತು. ಸಾಲದುದಕ್ಕೆ ಇನ್ನೊಬ್ಬ ಕಾರಕೂನನು ಅವನ ಮನಸ್ಸಿನ ವಿಚಾರವನ್ನು ತರ್ಕಿಸಿದವನಂತೆ, 'ರಾಮಣ್ಣಾ, ಯಾಕ ಗಡಿಬಿಡಿ ಮಾಡತೀದಿ. ಮಕ್ಕಳು ಇದ್ದವರ ಸುಖಾ ಏನು ಅದ ಅನ್ನೋದು ನಿನಗ ಗೊತ್ತಿಲ್ಲೇನು? ನಾಕು ದಿನಾ ಆಟಾ ಆಡಲಿ ಹುಡುಗಾ. ಒಮ್ಮೆ ಹಡೀಲಿಕ್ಕೆ ಸುರುವು ಮಾಡಿದಾ ಅಂದರ ನಿನ್ನ ಸುದ್ದಾ ಹಿಂದ ಒಗದಾನು' ಎಂದನು. ಇನ್ನೊಬ್ಬ ಬೇರೆ ಹಾದಿ ತೆಗೆದು, 'ಏ ಕೃಷ್ಣಾಜಿ, ನೋಡೋ. ನಿನ್ನ ಮಾವನ್ನ ನೋಡಿ ನಾಚೋ. ಮುದುಕ ಆದ, ಇನ್ನೂ ಹವ್ಯಾಸ ಹೋಗಿಲ್ಲ. ಅಂಥವನ ಅಳಿಯ ಆಗಿ ನೀ ಏನು ಬಿರದು ಎತ್ತತೀದಿ !' ಎಂದನು.

ಆದರೆ ಜೋಶಿ ರಾಮರಾಯನಿಗೆ ಬರಿ ಮಾತಿನಿಂದ ಕಿಟ್ಟಿಯನ್ನು ಹಣ್ಣು ಮಾಡುವ ವಿಚಾರವಿರಲಿಲ್ಲ. ಅವನದೊಂದು ತಂತ್ರ. ಅವನ ಬಲೆಗೆ ಬಿದ್ದ ಕಾರಕೂನರೆಲ್ಲ ಒಂದಿಲ್ಲ ಒಂದು ಸಮಯಕ್ಕೆ ಅವಿವೇಕ ಮಾಡಿ ರಾಮರಾಯನಿಗೊಂದು 'ಕಥೆ' ಕೊಟ್ಟಿದ್ದರು. ರಾಮರಾಯನ ವಿಷಯಕ್ಕೆ ಚೇಷ್ಟೆ ಸುರುವಾಯಿತೆಂದರೆ, ಅದರ ಕಥೆಯನ್ನು ತಾನು ಹೇಳುತ್ತೇನೆಂದು ಹೇಳಿ ಅವರನ್ನು ತೆಪ್ಪಗೆ ಕೂಡಿಸುತ್ತಿದ್ದನು. ಕಿಟ್ಟಿಯ ವಿಷಯದಲ್ಲಿ ಕೂಡ ರಾಮರಾಯ ತನ್ನ ಆಪ್ತಮಿತ್ರರ ಎದುರು, 'ಬಹಳ ಸೊಕ್ಕಿಗೆದ್ದಾನ ಹುಡುಗ. ಈ ಸರೆ ಅವನ ಮುಂಜಿ ಮಾಡಸತೇನಿ !' ಎಂದು ಪ್ರತಿಜ್ಞೆಗೈದೇ ಬಂದಿದ್ದನು.

ಮುಂಜಿವೆಯಾಯಿತು.

ಆ ಭಯಾನಕ ಅನುಭವ ಕಿಟ್ಟಿಯನ್ನು ಬುಡದವರೆಗೆ ಅಲುಗಾಡಿಸಿತು. ಅದೇಕೆ ಅವನು ಅದಕ್ಕೆ ಬಾಗಿದನೋ, ಅವನಿಗೇ ತಿಳಿಯದು. ಆ ಹೊಲಸು, ಆ ಹೇಸಿಕೆಯನ್ನು ಕಂಡಾದರೂ ತಾನೂ ಹೇಗೆ ಹಿಂಜರಿಯಲಿಲ್ಲವೋ, 'ರಾಘಪ್ಪನ ಅಳಿಯ'ನೆಂಬ ಹೆಮ್ಮೆಯೋ, ಫಿರತಿಯ ತಲೆಹೋಕ ಮನೋವೃತ್ತಿಯೋ, ರಾಮರಾಯನ ಕೆಟ್ಟಕಾಟವೋ, ತನಗೆ ಇಲ್ಲದ ಅನುಭವವನ್ನು ಪಡೆಯುವ ಆಸೆಯೋ – ಅದಾವುದೂ ತಿಳಿಯದಾಯಿತು. ತನ್ನಿಂದ ಇದು ಹೇಗಾಯಿತು ಎಂದು ಅವನು ಪುನಃಪುನಃ ಪ್ರಶ್ನಿಸಿಕೊಂಡನು. ಆ ಗೌಪ್ಯ, ಆ ಭೀತಿ, ಆ ಹೇಸಿಗೆ, ಆ ಹೊಲಸು, ಆ ಜುಗುಪ್ಸೆ !... ಒಂದೊಂದು ದೃಶ್ಯವು ನೆನಪಾದಂತೆ ಮೈಯೆಲ್ಲ ನಡುಗುತ್ತಿತ್ತು. ಒಂದೊಂದು ಮಾತೂ ಮನದ ಬಯಲಲ್ಲಿ ಗುಮ್ಮೆಂದು ತಿರುಗುತ್ತಿತ್ತು. 'ಕೃಷ್ಣಾಜಿ, ನೀ ಮೊದಲ ಹೋಗಿ ಬಾ, ನಾ ನಿಂತಿರತೇನಿ'... ಥೂ, ಥೂ, ಥೂ, ಥೂ, ಸ್ಮರಣೆಯನ್ನು ಉಗುಳಹೋದನು. ಸ್ಮರಣೆ ಉಗುಳಾಗಿ ಮೈಗೆ ಅಂಟಿಕೊಂಡಿತು. ಮೈ ತುಂಬ ಉಗುಳಿಕೊಳ್ಳಬೇಕೆಂಬ ಅನಿವಾರ್ಯ ಇಚ್ಛೆಯಾಗುತ್ತಿತ್ತು. ಥೂ, ಎಂದು ತನ್ನಷ್ಟಕ್ಕೆ ತಾನೇ ಅನ್ನುವನು. ಕಾರಕೂನರ ನಡುವೆ ಸುದ್ದಿ ಹರಡಿತು. ಅವರ ಎದುರಿಗೇ ತನ್ನ ಕಾಗದಗಳ ಕಡೆಗೆ ನೋಡುತ್ತ ಥೂ ಎನ್ನುವನು ಕಿಟ್ಟಿ. ತಾನು ಇಷ್ಟು ಹೇಸಿಗೆ ತಡೆಯಬಲ್ಲೆನೇ ?...

ಕಿಟ್ಟಿಗೆ 'ಥೂ ಕುಲಕರ್ಣಿ' ಎಂಬ ಅಡಕನಾಮವು ರಾಮರಾಯನ ಗುಂಪಿನಲ್ಲಿ ಹಬ್ಬಿತು.

* * *

ಕ್ಯಾಂಪು ಮುಗಿಯುವ ದಿನ ಬಂದಿತು. ಇಷ್ಟೆಲ್ಲ ಮಾಡಿದರೂ ಮಡಿವಂತರಾದ ಎಲ್ಲ ಕಾರಕೂನರು ಅಂದು ತುಪ್ಪದಲ್ಲಿ ಕರಿದ ಬುರಬುರಿ, ಮೊಸರು ತಿಂದು ತಮ್ಮ ಕ್ಯಾಂಪನ್ನು ಕೊನೆಗಾಣಿಸಬೇಕೆಂದು 'ಪ್ಲ್ಯಾನ್' ಹಾಕಿದ್ದರು. 'ಗೌಡರ, ಇಂದ ಶ್ರೇಷ್ಠ ಬೆಣ್ಣಿ ಬರತಕ್ಕದ್ದು... ಒಂದs ಮನ್ಯಾಗಿನ ಬೆಣ್ಣಿ ತಂದು ಕೊಡಿರಿ... ಅಲ್ಲಿಂದ ಇಲ್ಲಿಂದ ದಲಾಲರ ಹಂಗ ಕೂಡಿಸಿ, ಅರ್ಧಾ ಆಕಳ ಬೆಣ್ಣಿ, ಅರ್ಧ ಎಮ್ಮಿ ಬೆಣ್ಣಿ, ಅರ್ಧ ಕುರೀದು, ಅರ್ಧಾ ಕತ್ತೀದೂ ಕೂಡಿಸಿ ತಂದರ ಅಮಲದಾರರು ಹೆಂಗ ತಿಂದಾರು ? ನಿಮ್ಮದು ನೀವs ವಿಚಾರಮಾಡ್ರಿ' ಎಂದು ರಾಮರಾಯ ಗೌಡರಿಗೆ ಬಜಾಯಿಸಿದನು. ಗೌಡರು ಆ ಅಪ್ಪಣೆಯಂತೆ ತಮ್ಮ ಕೇವಲ ವಿಶ್ವಾಸದ ಒಬ್ಬ ರೈತನ ಮನೆಯ ಬೆಣ್ಣೆಯನ್ನೇ ತಂದು ಕೊಟ್ಟರು. ತವನಪ್ಪನ ಬೆಣ್ಣೆಯೆಂದರೆ ಊರಿಗೇ ಪ್ರಸಿದ್ಧಿ. ಬೆಣ್ಣೆ ಕಾಯಿಸಲು ಇಡಲಾಯಿತು.

ಬೆಣ್ಣೆ ಖಳಖಳ ಕುದಿಯುತ್ತ ಅಪರೂಪದ ಕಂಪು ಬೀರತೊಡಗಿತು. ರಾಮರಾಯನು 'ಏ, ಇಂದಿನಂಥಾ ಶ್ರೇಷ್ಠ ತುಪ್ಪಾ ನಾ ಇಷ್ಟು ಸರತೇದ ಕ್ಯಾಂಪಿನ್ಯಾಗ ಕಂಡಿದ್ದಿಲ್ಲ. ಹೋಗೂಮುಂದ ಈ ಬೆಣ್ಣೆ ಕೊಟ್ಟವಗ ಗೌಡನ ಕಡೆಯಿಂದ ಎರಡು ರೂಪಾಯಿ ಇನಾಮ ಕೊಡಿಸತಕ್ಕದ್ದು' ಎಂದು ಸಾರಿದನು. ಅಷ್ಟರಲ್ಲಿ ಲಚ್ಚಪ್ಪನಿಗೆ ಒಂದು ವಿಚಾರ ಹೊಳೆಯಿತು – 'ರಾಮಣ್ಣ, ಇಂಥಾ ತುಪ್ಪದಾಗ ಒಂದೆರಡು ಅಂಬಾಡಿ ಎಲಿ ಒಗದರ ಏನು ಸುಖಾ ಹೇಳಲ್ಯೋ...!' ಎಂದ ಲಚ್ಚಪ್ಪ. ಹುಡುಕಾಡಿದರೆ ಮುನ್ನಾದಿನವೆ ಅಂಬಾಡಿ ಎಲೆಗಳ ಸಂಗ್ರಹ ತೀರಿಹೋಗಿತ್ತು. ರಾಮರಾಯ ಓಲೆಕಾರರನ್ನು ಎಲೆತರಲು ಓಡಿಸಿದನು. ಓಲೆಕಾರ ಊರ ತುಂಬ ಅಡ್ಡಾಡಿ ಕೊನೆಗೆ ಅಂಬಾಡಿ ಎಲೆ ಸಿಗದ್ದಕ್ಕಾಗಿ ಕರಿಯ ಎಲೆಗಳನ್ನು ತೆಗೆದುಕೊಂಡು ಬಂದನು. ಸ್ವಲ್ಪ ಮುಂಚೆಯೇ ಗೊತ್ತಾಗಿದ್ದರೆ ಓಲೆಕಾರರನ್ನು ಸಮೀಪದ ಇನ್ನೊಂದು ಊರಿಗಾದರೂ ಓಡಿಸಿ ಎಲೆ ತರಿಸಬಹುದಾಗಿತ್ತು. ಆದರೆ ತುಪ್ಪವಾದರೊ ಖಳಖಳ ಕುದಿಯತೊಡಗಿತ್ತು.

'ಹಾಕರ್ಯೋ, ಕರೆ ಎಲೀನs. ಹಾಕರಿ ! ಚಟಾ ಯಾರ ಮನೀದು– ' ಎಂದು ಕೂಗಿದ ರಾಮರಾಯ. ಅವನ ಸಂಗಡಿಗರು ನನಗೊಂದು ನನಗೆರಡು ಎನ್ನುತ್ತ ಕುದಿಯುವ ಬೆಣ್ಣೆಯಲ್ಲಿ ಇಪ್ಪತ್ತು ಮೂವತ್ತು ಎಲೆಗಳನ್ನು ಒಗೆದರು. ತುಪ್ಪದ ಕಂಪಿನೊಡನೆ ಎಲೆಗಳ ಕಂಪೂ ಚಾವಡಿಯ ತುಂಬ ಇಡುಗಿತು. ಒಲೆಯ ಮೇಲಿಂದ ಕೊಳಗವನ್ನು ಕೆಳಗೆ ಇಳಿಸಿದರು. ತುಪ್ಪದ ಖಳಖಳ ಕಡಿಮೆಯಾಗುತ್ತ ಬುರುಗುಟ್ಟತೊಡಗಿತು... ಆದರೆ ಇದೇನು? .... ತುಪ್ಪವೆಲ್ಲ ಹಸಿರುಗಟ್ಟತೊಡಗಿತಲ್ಲ!....

'ತುಪ್ಪ ಏನು ಮಾಡೀತರ್ಯೋ ಒಂದು ಪಿಚ್ಚಿ ವಿಳೇದೆಲಿ ಒಗದರ....?' ಎಂದನು ರಾಮರಾಯ.

'ವಿಷಾ–ಗಿಷಾ ಹಾಕಿ ಕೊಟ್ಟಿಲ್ಲ ಹೌದಲ್ಲೋ ಬೆಣ್ಣ್ಯಾಗ?' ಎದು ಕೂಗಿದ ಲಚ್ಚಪ್ಪ.

ಅದನ್ನು ಕೇಳಿದವನೇ ರಾಮರಾಯನು ಎದ್ದವನೇ ಕೇಕೆ ಹೊಡೆದು, 'ಕರಸರ್ಯೋ ಅವನ್ನ!' ಎಂದು ಕೂಗಿಕೊಂಡ. ಓಲೆಕಾರ ಬಂದೊಡನೆ, 'ಈ ಬೆಣ್ಣಿ ಕೊಟ್ಟವನ್ನ ಕರಕೊಂಡು ಬಾ ಹೋಗು. ಹಂಗs ಬರತ ನಿಮ್ಮ ಗೌಡರನ್ನು ಕರಿ. ಲಗೂ ಹೋಗು' ಎಂದು ರೌಡು ಮಾಡಿದನು.

ಆ ಒಕ್ಕಲಿಗ ಊಟಕ್ಕೆ ಕುಳಿತವನು ಗಾಬರಿಯಾಗಿ ಓಡಿಬಂದನು. ಗೌಡರಾದರೂ ಅಲ್ಲಿಯೇ ಬಂದು ನಿಂತಿದ್ದರು. ರಾಮರಾಯ ವಿಚಾರಣೆಯನ್ನು

ತನ್ನ ಕೈಯಲ್ಲಿ ತೆಗೆದುಕೊಂಡ.

'ಏನಪ್ಪಾ, ನಿನ್ನ ಹೆಸರು ಏನು?'

'ತವನಪ್ಪನರಿ.'

'ಇದs ಊರವ ಏನು?'

'ಹೌದರಿ ಯಪ್ಪಾ.'

'ನಮಗ ಇವತ್ತ ಮುಂಜಾನೆ ಬೆಣ್ಣಿ ಕೊಟ್ಟವ ನೀನs ಏನು?'

'ಹೌದರಿ ಯಪ್ಪಾ.'

'ನಿನ್ನ ಹೊಲದ ಹಪ್ತೆ ಏನರ ಈ ಸರೆ ಹೆಚ್ಚು ಆಗೇತೇನು ?'

ಸಾಹೇಬರು ತನ್ನ ಬೆಣ್ಣೆಗೆ ಮೆಚ್ಚಿ ಹಪ್ತೆ ಕಡಿಮೆ ಮಾಡಿಯಾರೆಂಬ ಹಿಗ್ಗಿನಿಂದ ತವನಪ್ಪ ಹೇಳಿದನು :

'ಹೌದರಿ ಯಪ್ಪಾ.'

'ಅಂತs ನಮಗ ವಿಷಾ ಹಾಕಬೇಕೆಂತ ಮಾಡಿದ್ದೇನು?'

'ಏನ್ರಿ ಯಪ್ಪಾ?' ತವನಪ್ಪ ಹಿಂದುಮುಂದಿನದು ತಿಳಿಯದೆ ಗಾಬರಿಗೊಂಡು ಕೇಳಿದನು. ರಾಮರಾಯ ಒಮ್ಮೆಲೇ ಕನಲಿದವರಂತೆ,

'ವಿಸಾನೋ ನಿನ ಹೇಣ್ತಿನ, ವಿಸಾ ತಿಂದರ ಸಾಯತಾರ ನೋಡು.... ಅದs!... ಹುಚನಾಯಿಗೆ ಹಾಕತಿರತೀರಿ ನೋಡು, ಅದs!... ಬೆಣ್ಣ್ಯಾಗ ವಿಸಾ ಹಾಕಿ ಅಮಲದಾರನ ಎಲ್ಲಾ ಕೊಲಬೇಕೆಂತ ಮಾಡದ್ದಿಯೇನು?... ಖರೆ ಹೇಳು... ಖಬರದಾರ ಬದ್ಮಾಷ್!... ನೋಡು ಆ ಕೊಳಗದಾಗ!...'

ತವನಪ್ಪ ಕಕ್ಕಾವಿಕ್ಕಿಯಾಗಿ ಆ ಕೊಳಗದತ್ತ ನೋಡುತ್ತ ತುಪ್ಪದ ಅಚ್ಚಹಸಿರು ಬಣ್ಣವನ್ನು ನೋಡಿ ಬೆದರಿಹೋದನು.

'ಯಪ್ಪಾ, ಏನು ಆಗೇತ್ಯೋ ನನಗ ಗೊಂತು ಆಗವಲ್ಲದರಿ...'ಎಂದು ಹೇಳಿದನು.

'ಗೌಡರs, ಹೇಳ್ರಿ ಅವಗ, ಏನು ಮಾಡ್ಯಾನs ಅನ್ನೋದು...'

ಗೌಡರು ತವನಪ್ಪನಿಗೆ ತಿಳಿಹೇಳಿದರು. ಸರಕಾರಿ ಅಮಲದಾರರಿಗೆ ಹಪ್ತೆ ಹೆಚ್ಚು ಮಾಡಿದ್ದರ ದ್ವೇಷಕ್ಕಾಗಿ ವಿಷ ಹಾಕಲು ಪ್ರಯತ್ನಿಸಿದ್ದಾನೆ, ಎಂದು ಅವನ ಮೇಲೆ ಫೌಜದಾರಿ ಖಟ್ಲೆ ಹಾಕಲಾಗುತ್ತದೆಂದು... ತವನಪ್ಪ ಗಾಬರಿಯಾಗಿ ರಾಮರಾಯನ ಪಾದಕ್ಕೆ ಬೀಳತೊಡಗಿದನು. ರಾಮರಾಯನ ಕೈಬೆರಳುಗಳ ಸೂಚಿಯ ಮೇರೆಗೆ ಗೌಡರು ಅವನಿಗೆ ಇಪ್ಪತ್ತೈದು ರೂಪಾಯಿ ದಂಡ ತರಲಿಕ್ಕೆ ವಿಧಿಸಿದರು. ತವನಪ್ಪ ನಾಗಾಲೋಟದಿಂದ ಮನೆಗೆ ಹೋಗಿ ಹತ್ತು ಒಳಗಿಂದ,

ಹತ್ತು ಇನ್ನೊಬ್ಬರಿಂದ, ಹೀಗೆ ಹಣ ಕೂಡಿಸಿಕೊಂಡು ಬಂದವನೇ ರಾಮರಾಯನ ಮುಂದೆ ಇಟ್ಟು ಕೈಜೋಡಿಸಿದನು. ರಾಮರಾಯ ಅವನಿಗೆ ಗಂಭೀರವಾಗಿ, 'ಬರೇ ದಂಡಾ ಕೊಟ್ಟರ ಆಗಲಿಲ್ಲ, ತವನಪ್ಪಾ. ಇನ್ನೊಮ್ಮೆ ಹಿಂಗ ಮಾಡೂದಿಲ್ಲ ಅಂತ ನಿನ್ನ ಕುಲದೇವರ ಹೆಸರಲೆ ಅಣಿಮಾಡು' ಎಂದು ಹೇಳಿದನು. ತವನಪ್ಪ ಎದೆ ಮುಟ್ಟಿ ಆಣೆ ಮಾಡಿ, ದೊಡ್ಡ ಕುತ್ತಿನಿಂದ ಪಾರಾದವನಂತೆ ಅಲ್ಲಿಂದೊಮ್ಮೆ ಜಾರಿದನು.

ಗೌಡರನ್ನೂ ಮನೆಗೆ ಕಳಿಸಿಕೊಟ್ಟು ಅದೇ ಘ್ರುತದಲ್ಲಿ ಅಂಬೋಡಿಗಳನ್ನು ಕರಿದು ಅಮಲದಾರರೆಲ್ಲ ತವನಪ್ಪನನ್ನು ಹರಸುತ್ತ ಸುಗ್ರಾಸಭೋಜನ ಮಾಡಿದರು. ಇಪ್ಪತ್ತೈದು ರೂಪಾಯಿ ದಕ್ಷಿಣೆಯೆಂದು ಸರಿಯಾಗಿ ಹಂಚಿಕೊಂಡರು.

ಕಿಟ್ಟಿಯ ಕೈಗೆ ಮೂರು ರೂಪಾಯಿಗಳು ಹತ್ತಿದವು. 'ಆತ್ಯು ; ನಾಚಿಕೆ ಬಿಟ್ಟಿದ್ದೇನೆ ; ಇದೂ ಬರಲಿ' ಎಂದು ಅದಿಷ್ಟನ್ನೂ ಕಿಸೆಗೆ ಸೇರಿಸಿಕೊಂಡನು.

* * *

ಊರಿಗೆ ಮರಳಿ ಬಂದಮೇಲೆ ಕಚೇರಿಯಲ್ಲಿ ರಾಮರಾಯ ಕಿಟ್ಟಿಯ ಬೆನ್ನು ತಟ್ಟಿ 'ಖರೆ ಗಂಡಸುಮಗಾ ನೀನs. ನಮ್ಮಂಥಾ ನಾವು ಸುದ್ದಾ ಮೊದಲನೇ ಕ್ಯಾಂಪಿನ್ಯಾಗ. ಇಷ್ಟು ಉದ್ದ ನೀರಿಗೆ ಹೋಗಲಿಲ್ಲ. ರೆಕಾರ್ಡ ಬ್ರೆಕ್ ಮಾಡಿದವ ನೀನs' ಎಂದು ಹೊಗಳಿದನು. ಕಿಟ್ಟಿಯನ್ನು ಉಳಿದವರೂ ಇದೇ ರೀತಿಯಿಂದ ಶ್ಲಾಘಿಸಿ, 'ನಿನ್ನ ಧೈರ್ಯ ನಮಗಿಲ್ಲ' ಎಂದರು. ಎಲ್ಲರೂ ಮಾಡುವದನ್ನೇ ತಾನೂ ಮಾಡಿರಬಹುದು ಎಂದು ಭಾವಿಸಿದ ಕಿಟ್ಟಿಗೆ ತಾನು ಎಲ್ಲರಿಗಿಂತ ಮುಂದೆ ಹೋದೆನೆಂಬುದರ ಅರಿವಾಯಿತು.

ಕಿಟ್ಟಿಯಲ್ಲಿ, ತಾನು ಎಷ್ಟು ಕೆಟ್ಟರೂ ತನ್ನ ಕಚೇರಿಯಲ್ಲಿ ಜಾರ್ಜಿಯನ್ನು ಬಿಟ್ಟರೆ, ಉಳಿದವರಿಗಿಂತ ಎಷ್ಟೋ ಪಾಲು ಒಳ್ಳೆಯವನೇ, ಎಂಬ ಒಂದು ಗುಪ್ತ ಗರ್ವವಿತ್ತು. ತಾನು ತಪ್ಪಿನಲ್ಲಿ ಸಿಕ್ಕಾಗ, ಉಳಿದವರಿಂದ ಬೈಯಿಸಿಕೊಂಡಾಗ ಈ ಗುಪ್ತಗರ್ವವು ಅವನ ನೈತಿಕಧೈರ್ಯವನ್ನು ಕಾಯುತ್ತಿತ್ತು. ಆದರೆ ಇದೀಗ ಅದು ಕೂಡ ಸಪ್ರಮಾಣವಾಗಿ ಸುಳ್ಳು ಎಂಬುದು ಸಿದ್ಧವಾಯಿತು. ತಾನು ರಾಮರಾಯನಿಗಿಂತ ನೀತಿಯಲ್ಲಿ ಕೆಳಗೆ ಎಂಬುದನ್ನು ಅವನ ಮನಸ್ಸು ಒಪ್ಪಿಕೊಳ್ಳಲು ನಿರಾಕರಿಸಿತು. ಆದರೆ ಇದ್ದ ಸಂಗತಿಯನ್ನು ಅಲ್ಲಗಳೆಯುವದೆಂತು ?.... ತನ್ನ ಸುತ್ತಲೂ ಕುಳಿತ ನೀತಿಗೇಡಿಗಳ ಒಳಗೆ ಅವರಿಗೇ ಗೊತ್ತಿಲ್ಲದ ನೀತಿಯ ತಳಗಲ್ಲು ಇದೆ ; ತನಗೆ ಅದೂ ಇಲ್ಲವೆ?– ಪುನಃ ಪುನಃ ಅವನು ಪ್ರಶ್ನಿಸಿಕೊಂಡನು. ಆದರೆ ಉತ್ತರ ದೊರಕದಾಯಿತು.

ರತ್ನಾಳ ಸಾಮೀಪ್ಯಕ್ಕೆ ಮನಸ್ಸು ಹೆದರತೊಡಗಿತು. ತಾಯಿಯೊಡನೆ ಮಾತಾಡಲು ನಾಚಿಕೆಯಾಗತೊಡಗಿತು. ಶಾಲಿಗ್ರಾಮವನ್ನು ಪೂಜೆಗೆಂದು ಮುಟ್ಟಿದ್ದರೆ ಅದಕ್ಕೆಲ್ಲಿ ಮೈಲಿಗೆಯಾದೀತೋ ಎಂದು ಭೀತಿ ಬರತೊಡಗಿತು... ಜೀವನವೇ ನೀರಸವಾಯಿತು. ನಿದ್ರೆ ಚೆನ್ನಾಗಿ ಹತ್ತಲೊಲ್ಲದು. ನಿದ್ದೆಯಲ್ಲಿ ಬಡಬಡಿಸುವ ಚಟ ಬೆಳೆಯತೊಡಗಿತು. ಶೂನ್ಯಮನಸ್ಕನಾಗಿ ಮಾತಿಲ್ಲದೆ ಕುಳಿತುಬಿಡಬೇಕೆಂದು ಅಷ್ಟಿಷ್ಟಕ್ಕೆ ಅನಿವಾರ್ಯ ಇಚ್ಛೆಯಾಗತೊಡಗಿತು. ಈ ತಾಮಸ ಮೌನದೊಳಗಿಂದ ಯಾರಾದರೂ ಅವನನ್ನು ಮಾತಾಡಿಸಿ ಎಬಿಬ್ಬಿಸಿದರೆ ರಜೋಗುಣವೆಲ್ಲ ಸಿಟ್ಟಿಗೆದ್ದು ಬರುತ್ತಿತ್ತು....

ಕಚೇರಿಯ ತುಂಬ ಅವನ ಪರಾಕ್ರಮದ ಕೀರ್ತಿ ಹಬ್ಬಲಿಕ್ಕೆ ತಡ ಹತ್ತಲಿಲ್ಲ. ಅದೇಕೋ ಇತರರು ಇವನಂತೆ ರಾಮರಾಯನ ತಂತ್ರಕ್ಕೆ ಬಲಿಯಾದಾಗ ಯಾವ ವಿಶೇಷ ಬೊಬ್ಬಾಟವಾಗಿರಲಿಲ್ಲ. ಆದರೆ ಕಿಟ್ಟಿಯ ನೈತಿಕ ದುರಭಿಮಾನದ ಮೂಲಕವೊ, ಅವನ ಚಿಕ್ಕ ವಯಸ್ಸಿನ ಮೂಲಕವೊ, ಅಥವಾ ಅನುತಾಪವು ಸುವ್ಯಕ್ತವಾಗಿ ಅವನ ಮುಖದ ಮೇಲೆ ಕಾಣುತ್ತಿದ್ದ ಮೂಲಕವೊ, ಕಿಟ್ಟಿಯ ಬಗ್ಗೆ ಹೆಚ್ಚಿನ ಕುತೂಹಲವು ಜನಿಸಿತು.

ಜಾರ್ಜಿಯ ಕಿವಿಗೆ ಈ ವಿಷಯ ಮುಟ್ಟಿರಬಹುದೆಂದು ಕಿಟ್ಟಿಯ ಭಯ. ತನ್ನ ಪರೋಕ್ಷವಾಗಿ ಮುಟ್ಟುವದಕ್ಕಿಂತ ತಾನೇ ಹೇಳುವದು ಒಳ್ಳೆಯದೆನಿಸಿತು. ಜೊತೆಗೆ ಜಗತ್ತಿನಲ್ಲಿ ತಾನಾಗಿಯೇ ಈ ವಿಷಯವನ್ನು ಯಾರೆದುರಿಗಾದರೂ ಇಡುವದಾದರೆ ಅದು ಜಾರ್ಜಿಯ ಎದುರಿಗಲ್ಲದೆ ಏನು ? ಒಂದು ದಿನ ಜಾರ್ಜಿಯೆದುರಿಗೆ ಎಲ್ಲ ಬಿಚ್ಚಿ ಇಟ್ಟನು. ತನ್ನ ಈಗಿನ ಮಾನಸಿಕ ಸ್ಥಿತಿಯನ್ನೂ ಶಕ್ಯವಿದ್ದಮಟ್ಟಿಗೆ ಹೇಳಿದನು. ಆಫೀಸಿನ ತುಂಬ ಎಲ್ಲರಿಗೂ ಈ ಕಥೆ ಗೊತ್ತಾಗಿದ್ದರೂ ಜಾರ್ಜಿಗೆ ಯಾರೂ ಹೇಳಿರಲಿಲ್ಲ. ಆದರೆ ಕಿಟ್ಟಿಯ ನೈತಿಕ ಸಮಸ್ಯೆಗೆ, ಅವನ ಮಾನಸಿಕ ಕಷ್ಟಕ್ಕೆ ಜಾರ್ಜಿಯಲ್ಲೂ ಉತ್ತರವಿರಲಿಲ್ಲ. ಉಪದೇಶ ಕೊಡುವ ಸಾಮರ್ಥ್ಯ ಅವನದಲ್ಲ. ತನ್ನ ನಿರ್ಮಲ ಜೀವನದ ಚಿತ್ರವನ್ನು ಮಾತ್ರ ನೋಡುವವರ ಎದುರು ಇಡಬಲ್ಲನು. ನೋಡಿದವರು ನೋಡಿದಷ್ಟನ್ನೇ ಪಡೆದಂತೆ, ಕಿಟ್ಟಿಯ ಈ ಎಲ್ಲ ಮಾನಸಿಕ ಗೋಳಿನ ಅರ್ಥವೇ ಅವನಿಗಾಗಲಿಲ್ಲ. 'ನಿಮ್ಮ ಹೆಲ್ಥ ಕಡೆ ನೀವು ಕಾಳಿಜಿ ಹಾಕಬೇಕರಿ' ಎಂದಿಷ್ಟೇ ಅವನು ಮಾಡಿದ ಉಪದೇಶ.

## ೨೪ : ದೇಸಾಯರೊಡನೆ ಯುದ್ಧ

'ಇಂಥಾ ಬಣವಿ ಹಿರೇರನ್ನ[೧] ಮೊದಲ ಹಾದಿಗೆ ತರಬೇಕು. ದುಡ್ಡಿನ ವಿಷಯದಾಗ ಸೈಲ ಬಿಟ್ಟು ಉಪಯೋಗವಿಲ್ಲ. ಈಗ ಮರ್ಯಾದಿ ಹೋದರ ನಿನ್ನದು ಹೋಗತದೊ ಆ ದೇಸಾಯಿದು ಹೋಗತದೋ?' ರಾಘಪ್ಪ ಎಲೆ ಹಾಕಿಕೊಳ್ಳುವದನ್ನು ಅರ್ಧಕ್ಕೆ ಬಿಟ್ಟು ಆವೇಶದಿಂದ ಹೇಳಿದನು.

'ಮನೀ ರೊಕ್ಕಾನೂ ಬುಡಕ ಹಾಕ್ಯಾನ, ವರದಕ್ಷಿಣೀ ರೊಕ್ಕಾನೂ ಬುಡಕ ಹಾಕ್ಯಾನ... ಹೀಂಗs ಎಲ್ಲಾ ಎತ್ತಿಹಾಕಿಬಿಟ್ಟಾನು. ನೀನು ಅಲ್ಲಿ ಸಾಲದ ಬಡ್ಡಿ ಅಂತ ತೇಕಬೇಕು, ಮ್ಯಾಲೆ ಅಂದದ್ದ ಅನಿಸಿಕೋಬೇಕು – ಇದೆಲ್ಲೀ ನ್ಯಾಯ ? ನೀ ಮಾತು ಅಂತೂ ಎತ್ತು. ನಮ್ಮ ತನಕಾ ಬಂತು ಅಂದರ ಮುಂದ ಮಾಡೋ ಉಪಾಯ ಮಾಡೇವು.'

ಅದು ಆದದ್ದು ಹೀಗೆ : ಗಂಗವ್ವ ವರದಕ್ಷಿಣೆಯಾಗಿ ಬಂದ ಎಲ್ಲ ರೂಪಾಯಿಗಳನ್ನು ತಾನೇ ತೆಗೆದುಕೊಂಡು ಯಥಾಪ್ರಕಾರ ತನ್ನ ತಿಜೋರಿಯಾದ ದೇಸಾಯರ ಕಡೆಗೆ ತಂದು ಕೊಟ್ಟುಬಿಟ್ಟಿದ್ದಳು. ವರದಕ್ಷಿಣೆಯ ಹಣದ ಧೈರ್ಯದ ಮೇಲೆ ಕಿಟ್ಟಿ ಸಾಲ ತೆಗೆದದ್ದು ; ಆದರೆ ಲಗ್ನವಾದ ಸಂತೋಷದಲ್ಲಿ ತಾಯಿಗೆ ಯಾವ ಮಾತನ್ನೂ ಆಡದೆ ಕಿಟ್ಟಿ ಸುಮ್ಮನಿದ್ದನು. ಒಂದು ಬಗೆಯಿಂದ ಒಳ್ಳೆಯದೇ ಆಯಿತು, ಸಾಲವನ್ನು ತನ್ನ ಪಗಾರದಿಂದ ತುಸು ತುಸು ಮುಟ್ಟಿಸುತ್ತ ಇರಬೇಕು, ಈ ಹಣ ಉಳಿದದ್ದು ಉಳಿಯುತ್ತದೆ, ಎಂಬ ಉತ್ಸಾಹದಲ್ಲಿ ಕಿಟ್ಟಿ ಬಾಳು ಪ್ರಾರಂಭಿಸಿದನು. ಆದರೆ ಮೊದಲೇ ರೊಕ್ಕ ಸಾಲದ ಕಿಟ್ಟಿಗೆ ಇದೀಗ ಭಾರ ಎರಡಾಯಿತು. ಕೆಲವು ತಿಂಗಳು ಕಷ್ಟಪಟ್ಟು ಕೊಟ್ಟ ಹಣ ಮುಟ್ಟಿದ್ದಷ್ಟೇ. ಆದರೆ ಕಷ್ಟ ಬಡಲು ಇದೀಗ ಜೀವಕ್ಕೆ ಒಲ್ಲೆಯಾಗಿದೆ. ಲಂಚದ ಹಣ ಚಹದಂಗಡಿಗೆ. ಹೀಗಾಗಿ ವರ್ಷ ಎರಡು ವರ್ಷದಲ್ಲಿ ಸಾಲದ ಬಡ್ಡಿಯನ್ನು ಕೊಡುವದೂ ಬೇಸರವಾಗಿ ಮೂರು ತಿಂಗಳಿಗೊಮ್ಮೆ ಬಡ್ಡಿ ತುಂಬಲು ಹೋಗುವಾಗ ಮನೆಯಲ್ಲಿ ಅಕ್ಕಸಪಡುತ್ತ ಹೋಗುವ ಪ್ರಸಂಗ ಬರತೊಡಗಿತು. ಲಗ್ನದ ಉತ್ಸಾಹವೂ

---

೧. 'ಹಿರಿಯರು' ಶಬ್ದದ ವ್ಯಂಗ್ಯ, ಬಣವೆಯನ್ನು ಹಿರಿಯುವ ಕಳ್ಳರು.

ಮರೆಮಾತಿಗೆ ಬಿದ್ದಿತ್ತು ; ತನ್ನ ಕಷ್ಟವನ್ನು ನೋಡಿಯಾದರೂ ತನ್ನ ವರದಕ್ಷಿಣೆ ಹಣವನ್ನು ತಾಯಿ ತಾನಾಗಿಯೇ ಕೊಟ್ಟಾಳೆಂದರೆ ಆಕೆ ಈ ವಿಷಯಕ್ಕೆ ಕಠೋರ ಮೌನವನ್ನು ತಳೆದಿದ್ದಳು.

ಇತ್ತ ರಾಘಪ್ಪನಿಗೆ ಈ ವಿಷಯ ಗೊತ್ತು. ರತ್ನಾ ಮನೆಯಲ್ಲಿ ಆಗಾಗ ಈ ಮಾತು ಹೇಳುವಳು. ಆದರೆ ತಾನಾಗಿಯೇ ಇದರಲ್ಲಿ ಬಾಯಿ ಹಾಕಿ ಮುಂದೆ ಬೀಳುವದು ಅವನಿಗೆ ಸರಿಬಂದಿರಲಿಲ್ಲ. ಕಿಟ್ಟಿಯಿಂದ ಈ ಮಾತು ಬರಲಿ ಎಂದು ದಾರಿಕಾಯುತ್ತಿದ್ದನು. ದೇಸಾಯರ ಅವಾಸ್ತವ ವರ್ಚಸ್ಸು ರಾಘಪ್ಪನಿಗೆ ಎಳ್ಳಷ್ಟೂ ಸರಿಬಂದಿರಲಿಲ್ಲ. ಅವರ ಕೋಟೆಯಂಥ ವ್ಯಕ್ತಿತ್ವವು ರಾಘಪ್ಪನ ಚಪಲತಂತ್ರಗಳನ್ನು ಮೂಕವಾಗಿ ಅಣಕಿಸುವಂತೆ ಅವನಿಗೆ ಭಾಸವಾಗುತ್ತಿತ್ತು. ದೇಸಾಯರಾದರೋ ಗಂಗವ್ವನ ಇಚ್ಛೆಯಂತೆ ಲಗ್ನವಾದ ಒಂದು ವರ್ಷದ ಮೇಲೆ ರಾಘಪ್ಪನನ್ನು ಕರೆಸಿಕೊಂಡು ಕಿಟ್ಟಿಯ ದತ್ತಕದ ವಿಚಾರವಾಗಿ ಅವನಿಗೆ ನೆನಪು ತಂದುಕೊಟ್ಟರು. ಆದರೆ ಲಗ್ನ ಮುಗಿದ ಮೇಲೆ ರಾಘಪ್ಪನ ಆರ್ಜವವೂ ಕಡಿಮೆಯಾಗಿತ್ತು. ರಾಘಪ್ಪನು ತನ್ನ ಎರಡನೆಯ ಮಗಳ ಲಗ್ನವಾದಮೇಲೆ ದತ್ತಕ, ಎಂದು ಉತ್ತರ – ಕೊಟ್ಟಿದ್ದನು. ಹಾಗೆ ಕರಾರು ಮೊದಲು ಇರಲಿಲ್ಲವೆಂದು ದೇಸಾಯರು. ಅದೇ ಲೌಕಿಕದ ರೂಢಿ, ಎಂದು ರಾಘಪ್ಪ. ದೇಸಾಯರಿಗೆ ಅದೂ ಸರಿ ಕಂಡಿತು. ಆದರೂ ಆಗ್ರಹಕ್ಕೆಂದು 'ನಿನ್ನ ಎರಡನೆಯ ಮಗಳ ಸಲುವಾಗಿ ಬೇಕಾದಷ್ಟು ಖರ್ಚು ಮಾಡು, ಆದರೆ ದತ್ತಕ ಈಗಲೇ ಆಗಲಿ' ಎಂದರು. 'ಇಲ್ಲ, ಲಗ್ನವಾಗಲಿ ; ಮುಂದೆ ಎಲ್ಲ ಕಿಟ್ಟಣ್ಣನದೇ –' ಎಂದ ರಾಘಪ್ಪ. ದೇಸಾಯರು ನಿರುತ್ತರರಾಗಬೇಕಾಗಿ ಬಂದಿತು. ಮೇಲಾಗಿ ಇನ್ನೊಂದು ನಾಲ್ಕಾರು ವರ್ಷಗಳ ಪ್ರಶ್ನೆಯಿಷ್ಟೇ. ಈ ವಿಚಾರದಿಂದ ದೇಸಾಯರು ಗಂಗವ್ವನಿಗೇ ಸಮಾಧಾನ ಹೇಳಿದರು.

ಹೀಗೆ ದೇಸಾಯರಿಗೆ ಪೂರ್ಣ ಸೋಲಾಗದಿದ್ದರೂ, ತುಸುಮಟ್ಟಿಗೆ ಅಭಿಮಾನಭಂಗವೂ, ಸಾಕಷ್ಟು ಮಟ್ಟಿಗೆ ಸಂದೇಹವೂ ಉಂಟಾಗಿದ್ದವು – ತುಸು ನೊಂದವರೇ ಆಗಿ ರಾಘಪ್ಪನ ಎದುರಿಗೇ ಗಂಗವ್ವನಿಗೆ ಸಮಾಧಾನ ಹೇಳುತ್ತ, 'ಆಯ್ತು. ಎರಡನೇ ಲಗ್ನ ಅರ ಎಷ್ಟು ದೂರ ಅದs? ಈಗಂತೂ ಕರಾರು ಖಾತ್ರೀ ಆದಹಂಗ ಆಯ್ತಲ್ಲಾ !... ಅದರ ಇದರ ಮ್ಯಾಲೂ ಕರಾರು ಮುರದರ ರಾಘಪ್ಪಾ ಅವರನ್ನು ಘಟ್ಟಿಯಾಗೇ ಕೇಳೋಣ !' ಎಂದರು. 'ಎಲಾ ದೇಸಾಯಿ, ನನ್ನ ಘಟ್ಟಿಯಾಗಿ ಕೇಳಿತಿಯಾ?' ಎಂದು ಮನಸ್ಸಿನಲ್ಲಿಯೇ ಖಂಗು[೧] ತುಂಬಿದ

೧. ದ್ವೇಷ.

ರಾಘಪ್ಪನು ದೇಸಾಯರನ್ನು ಒಂದು ಇರುಕಿನಲ್ಲಿ ತರುವದಕ್ಕಾಗಿ ಸಂಧಿಯನ್ನೇ ಹುಡುಕುತ್ತಿದ್ದನು.

ಅವನ ಮರುಳ ಅಳಿಯನಿಗೆ ರಾಘಪ್ಪ ಬೇಡಿ ಬಯಸಿದ ಸಂಧಿಯನ್ನು ಒದಗಿಸಲಿಕ್ಕೆ ಇಷ್ಟು ವರ್ಷ ಬೇಕಾದವು. ಅಂತೂ ಕೊನೆಗೊಮ್ಮೆ ಕಿಟ್ಟಣ್ಣ ಆ ಸಂಧಿಯನ್ನು ಒದಗಿಸಿದನು. ತಾನೇ ಒಮ್ಮೆ ಮಾವನನ್ನು ಭೆಟ್ಟಿಯಾಗಿ ತನ್ನ ಸಾಲದ ವಿಷಯವನ್ನೂ, ತನ್ನ ವರದಕ್ಷಿಣೆಯ ವಿಷಯವನ್ನೂ ವಿವರವಾಗಿ ಬಣ್ಣಿಸಿ ಹೇಳಿದನು. ತನ್ನ ತಾಯಿಯ ಬುದ್ಧಿಶಕ್ತಿಯ ಬಗ್ಗೆ ತನಗೆ ಗೌರವವಿದೆ. ಆಕೆ ಮಾಡುವದು ತನ್ನ ಹಿತಕ್ಕಾಗಿಯೇ ನಿಜ ; ಆದರೆ ಈಗ ತಾನು ಬಡ್ಡಿ ತೆತ್ತಬೇಕು ; ಒಂದು ಬಗೆಯಿಂದ ಜಾರ್ಜಿಗೆ ಸುಳ್ಳಾಗಬೇಕು ; ಮೇಲಾಗಿ ದೇಸಾಯರಲ್ಲಿ ಹಣ ಇಟ್ಟ ಬಗ್ಗೆ ಯಾವದೇ ಕಾಗದಪತ್ರಗಳಿಲ್ಲ ; ಇಂದಿನ ಕಾಲದಲ್ಲಿ ಎಲ್ಲ ಕಾಗದಪತ್ರ ಗಟ್ಟಿಯಿದ್ದರೂ ಟಕ್ಕು[೧] ತಿನ್ನುವ ಪ್ರಸಂಗ ಬಂದಿರುತ್ತವೆ; ದಿನಾಲು ತಮ್ಮ ಕಚೇರಿಯಲ್ಲಿ ತಾವು ಅಂಥವೇ ಕೇಸು ನೋಡುತ್ತಿರುತ್ತೇವೆ ; ದೇಸಾಯರೂ ಒಳ್ಳೆಯವರು ; ಆದರೆ ದಿವಸ ಕಾಲ ಕಠಿಣ – ಇತ್ಯಾದಿ ಗೋಣಗಿದನು.

ರಾಘಪ್ಪ ಕಿಟ್ಟಿಯನ್ನು ದೇಸಾಯರ ಮೇಲೆ ಛೂಬಿಡುವ ವಿಚಾರವನ್ನು ಎಂದೋ ಮಾಡಿ ಇಟ್ಟಿದ್ದನು. ಮೊದಲನೆಯದಾಗಿ, ದತ್ತಕವನ್ನು ಮುಂದೆ ಹಾಕಿದ್ದಕ್ಕೆ ಕಿಟ್ಟಿಯ ಮನಸ್ಸಿನಲ್ಲಿ ತನ್ನ ಬಗ್ಗೆ ಶಂಕೆ ಉಂಟಾಗಿ ದೇಸಾಯರ ವರ್ಚಸ್ಸು ಹೆಚ್ಚಾಗಿದ್ದರೆ ಅದನ್ನು ಮುರಿದೊಗೆಯುವ ಹಾಗೂ ಕಿಟ್ಟಿಯನ್ನು ಪೂರ್ತ ತನ್ನ ಕಿಸೆಗೆ ಹಾಕುವ ಹಂಚಿಕೆಯೂ ಅದರಲ್ಲಿ ಅಡಗಿತ್ತು. ಇದೇ ಪ್ರಸಂಗ ನೋಡಿ, ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. 'ಕಿಟ್ಟಣ್ಣಾ, ನಾ ನಿನ್ನ ವಂಚನಾ ಮಾಡೋದಿಲ್ಲಾ. ನೀ ಏನು, ನಮ್ಮ ರತ್ನಾ ಏನು, ನನಗ ತಾರತಮ್ಯ ಇಲ್ಲ. ನೀ ನನ್ನ ಮಗಾ ಇದ್ದ ಹಂಗs ಅಂತ ನಾ ತಿಳಿದೇನಿ' ಎಂದು ಮೋರೆಯ ಮೇಲೆ ಕೈ ಎಳೆದನು. ಮೊದಲು ದೇಸಾಯರಿಗೆ ಕೈಗಡ ಬೇಡಬೇಕು. ಅವರು ಕೊಟ್ಟರೆ, ತಮ್ಮ ಕೈಯಲ್ಲಿ ಸಿಕ್ಕಂತೆ ಆಗುತ್ತದೆ ; ಇಲ್ಲ, ಸ್ವಷ್ಟ ಕೇಳಿಯೇಬಿಡಬೇಕು – ಹೀಗೆ ಉಪದೇಶ ಮಾಡಿದನು. ಅವನನ್ನು ದೇಸಾಯರೊಡನೆ ಖಾಡಾಖಾಡಿಗಾಗಿ ಹುರಗೊಳಿಸಿದನು. ನಾಳೆ ದೇಸಾಯರೊಡನೆ ಕಿಟ್ಟಿ ಕಾದಾಡುವಾಗ ತಾನು ಮಧ್ಯಸ್ಥನಾಗಿ ಬಂದು ದೇಸಾಯರ ಮೇಲೆ ನಿರ್ಣಯ ಕೊಡುವ ಪ್ರಸಂಗ

---

೧. ಮೋಸಹೋಗುವ.

ಬರಲಿ, ಎಂಬುದು ಅವನ ಒಳಗಿನ ಹಂಬಲು.

ಕಿಟ್ಟಿ ಎರಡೇ ದಿನಗಳಲ್ಲಿ ತನ್ನ ಧೈರ್ಯವನ್ನೆಲ್ಲ ಒಂದುಗೂಡಿಸಿ ದೇಸಾಯರ ಮನೆಗೆ ಬಂದನು. ತಾನು ದೇಸಾಯರೊಡನೆ ಮಾತನಾಡುವದರ ಬಗ್ಗೆ ತಾಯಿಗೆ ಏನನ್ನೂ ಹೇಳಿರಲಿಲ್ಲ.

ದೇಸಾಯರು ಪಂಚಾಂಗ ನೋಡುತ್ತ ಕುಳಿತಿದ್ದರು. ಕಿಟ್ಟಿಯನ್ನು ಅವರು ನಿರುತ್ಸಾಹದ ಮುಗುಳುನಗೆಯಿಂದ ಸ್ವಾಗತಿಸಿದರು. ಕಿಟ್ಟಿ ಕೃತ್ರಿಮವಾಗಿ ಕ್ಷೇಮಸಮಾಚಾರ ಕೇಳಿದಂತೆ ಮಾಡಿ, ಸುಳ್ಳುವಿನಯ ನಟಿಸುತ್ತ ತನ್ನ ಸಾಲದ ವಿಷಯವನ್ನು ದೇಸಾಯರ ಎದುರು ಎತ್ತಿದನು.

‘ಎಷ್ಟು ಮಾಡಿದ್ದೀ ಸಾಲಾನ?’ ದೇಸಾಯರು ಕೇಳಿದರು.

‘ಐದು ನೂರು ರೂಪಾಯಿ.’

‘ನನ್ನ ಕೇಳಿದ್ದರ ನಾನs ಕೊಡತಿದ್ದೆನಲ್ಲಾ?... ಅದು ಹೋಗಲಿ. ಆ ಮಾತು ಆಗಿ ಈಗ ನಾಕೈದು ವರ್ಷ ಆದವು. ಇಷ್ಟರಾಗ ನೀ ಎಷ್ಟು ಮುಟ್ಟಸೀದಿ?’

‘ರೊಕ್ಕಾನs ಉಳಿಯೋದಿಲ್ಲ. ಅಸಲಿನ್ಯಾಗ ನಾಲ್ವತ್ತು ರೂಪಾಯಿ ಮುಟ್ಟಿಸೇನಿ. ಬಡ್ಡಿ ಅಷ್ಟು ತುಂಬಿಕೋತs ಇದ್ದೇನಿ.’

‘ನಾಚಿಗಿ ಬರೂದಿಲ್ಲೇನು ಹೇಳಲಿಕ್ಕೆ?’ ದೇಸಾಯರು ಒಮ್ಮೆಲೇ ಸಂತಪ್ತರಾದರು.

ವರದಕ್ಷಿಣೆಯ ವಿಷಯವನ್ನು ಹೇಗೆ ತೆಗೆಯಬೇಕೆಂಬುದೇ ಕಿಟ್ಟಿಗೆ ಹೊಳೆಯಲೊಲ್ಲದು. ದೇಸಾಯರು ಮುಂದುರಿದರು :

‘ಏನೋ ಒಳ್ಳೇ ಹುಡುಗ ಆಗಿ ಸಂಸಾರ ಮಾಡತಿ ಅಂತ ನಾವು ನಡುವ ಬಿದ್ದು ಏನೇನೊ ಮಾಡಿದಿವಿ. ನಿನಗ ನಿನ್ನ ಹೇಣ್ತೇನ್ನ ನಿನ್ನ ಕೈಯಾಗ ಇಟ್ಟುಗೋಳಿಕ್ಕೆ ಬರೂದಿಲ್ಲ ; ನಿನ್ನ ತಾಯಿಗೆ ಊಟಾ ಮಾಡೀದೇನವಾ ಅಂತ ನಿನ್ನ ಬಾಯಿಂದ ಒಂದು ಮಾತು ಬರೋದಿಲ್ಲ ; ನೌಕರಿ ಮಾಡತಿ... ಐದು ನೂರು ರೂಪಾಯಿ ಚಲ್ಲಲಿಕ್ಕೆ ಬರೂದಿಲ್ಲ? ನಾನು ಏನು ಹೇಳಲಿ ಇದರಾಗ...’

‘ವರದಕ್ಷಿಣಿ ಬಂದ ಕೂಡಲೆ ಅವರದು ಅವರಿಗೆ ಮುಟ್ಟಿಸಿಬಿಡಬೇಕು ಅಂತ ವಿಚಾರದಾಗ ಇದ್ದೆ. ಆದರ ಈಗ ಬರೆಬಡ್ಡಿ ತುಂಬಿಕೋತ ಕೂಡಬೇಕಾಗೇದ. ನೌಕರೀ ಅದ ಅಂತ ಕೊಟ್ಟವರೂ ಸುಮ್ಮನs ಇದ್ದಾರ. ಇಲ್ಲಾ ಅಂದರ....’ ಕಿಟ್ಟಿಯೂ ಕನಲಿ ನಾಚಿಗೆ ಬಿಟ್ಟು ಅಂದನು.

‘ನೌಕರೀ ಯಾತಕ್ಕೆ ಮಾಡತಿ? ಬಿಟ್ಟುಬಿಡು. ನಿಮ್ಮವ್ವ ಹೆಂಗಾದರೂ ಮಾಡಿ ನಿನಗ ನಿನ್ನ ಹೇಣ್ತಿಗೆ ಮನ್ಯಾಗ ಕೂಡಿಸಿ ಹೊಟ್ಟಿಗೆ ಹಾಕತಾಳ...’

ದೇಸಾಯರು ಕಿಟ್ಟಿಯ ಮಾತಿನ ಧೋರಣೆಯನ್ನು ಅರಿತು ಇನ್ನೂ ಕ್ರೋಧಸಂತಪ್ತರಾಗಿದ್ದರು. ಅವರ ರೌಸಿಗೆ[೧] ವಿವೇಕ ತಪ್ಪಿ ಕಿಟ್ಟಿ ತನ್ನ ಮಾವನ ಉಪದೇಶವನ್ನು ತಪ್ಪು ಕ್ಷಣಕ್ಕೆ ಉಪಯೋಗಿಸಹೋದನು.

'ಈಗ ನೀವು ನಾನೂರಾ ಅರವತ್ತರ ಗಂಟು ಕೊಟ್ಟರ ಅವರದು ಅವರಿಗೆ ಮುಟ್ಟಿಸಿ ಬರತೇನಿ. ಪಗಾರದಾಗ ಅಷ್ಟಷ್ಟs ಇಲ್ಲೇ ಮುಟ್ಟಿಸಿಗೋತ ಹೋಗತೇನಿ. ನಡುವ ಆದವರಿಗಾರ ಖರೆ ಆದಹಂಗ ಆಗತದ.'

'ಈ ವಿಚಾರ ಮೊದಲs ಯಾಕ ಬರಲಿಲ್ಲ!.... ಮೇಲಾಗಿ ನೀನು ನಿನ್ನ ತಾಯಿಯ ಯಾತ್ರಾದ್ದು ಬಾಕಿ ಮುಟ್ಟಿಸಿದೆಲ್ಲಾ?... ಅದು ಹೋಗಲಿ. ಈಗ ಇಲ್ಲೀದು ಒಯ್ದು ಅಲ್ಲಿ ಹಾಕಿದರ ಏನು ಫಾಯದೆ ಆಗತದ?...'

'ಫಾಯದೆ ಏನೂ ಇಲ್ಲ...'

ಒಮ್ಮೆಲೇ ಕಿಟ್ಟಿಗೆ ತನ್ನ ಮಾವನ ಉಪದೇಶದ ಸುಳಿವು ದೇಸಾಯರಿಗೆ ಹತ್ತಿರಬಹುದೇ? ಎಂದು ಸಂದೇಹ ಬಂದಿತು. ದೇಸಾಯರು ತಾವು ಈ ಅಳೆಯ ಮಾವಂದಿರ ಕೈಯಲ್ಲಿ ರೊಕ್ಕದ ವಿಷಯವಾಗಿ ಸಿಕ್ಕುಬೀಳಬಾರದೆಂದು ಎಂದೋ ನಿರ್ಣಯಿಸಿಕೊಂಡಿದ್ದರು. ಅವರಿಗೆ ಈಗಲೇ ತರ್ಕಮಾಡಬೇಕಾದ ಆವಶ್ಯಕತೆ ಏನೂ ಇರಲಿಲ್ಲ. ನಿರುಪಾಯನಾಗಿ ಕಿಟ್ಟಿ ಮತ್ತೆ ವಿಷಯದತ್ತ ತಿರುಗಿದನು.

'ಲಗ್ನಾ ಮಾಡಿಕೊಂಡವ ನಾನs ಮೂರ್ಖ. ಸಾಲಾ ತಗದದ್ದೂ ಲಗ್ನದ ಖರ್ಚಿನ ದರೆಂದನs. ಆದರ ನನ್ನ ವರದಕ್ಷಿಣೆ ನನ್ನ ಕೈಗೇ ಹತ್ತಬಾರದೂ ಅಂದರ...'

ದೇಸಾಯರು ಒಳಗಿಂದೊಳಗೇ ಸಂತಾಪದಿಂದ ಚಿಲಿಪಿಲಿಯಾಗಿ ಸೆಟೆದು ಕುಳಿತರು. ಅವನಿಂದ ಇನ್ನೊಂದು ಹೆಜ್ಜೆ ಮುಂದೆ ಬೀಳಲಿ, ಎಂದು ದಾರಿ ನೋಡತೊಡಗಿದರು.

ಕೊನೆಗೆ ತುಸು ಹಿಂದೆ ಮುಂದೆ ನೋಡಿ, ತಡವರಿಸುತ್ತ ಕಿಟ್ಟಿ ಉಚ್ಚರಿಸಿದ: 'ಅವ್ವ ವರದಕ್ಷಿಣೆ ಗಂಟು, ಹಿಂದಕಿನ ಒಂದು ಸಾವಿರ ರೂಪಾಯಿ ಇಷ್ಟೆಲ್ಲಾ ನಿಮ್ಮ ಕಡೇನs ಇಟ್ಟಾಳ, ಅಂತ ಸುದ್ದಿ ಇತ್ತು....'

'ಖಬರದಾರ ! ಏನು ಅಂತ ತಿಳಿಕೊಂಡೀ?'

'ಅಲ್ಲಾ, ನಾ ಕೊಡಿರಿ ಅನ್ನಲಿಲ್ಲ. ಆದರ ಇಟ್ಟ ಹಕೀಕತ್ತು ಖರೆ ಏನು?'

'ಇಲ್ಲ ; ಇಟ್ಟಿಲ್ಲ !' ಎಂದು ದೇಸಾಯರು ಜೋರನೆ ಬೆವತು ಸ್ವಲ್ಪವೂ ಬಾಗದೆ ಪಂಚಾಂಗದತ್ತ ನೋಡತೊಡಗಿದರು...

೧. ಆವೇಶಕ್ಕೆ

ಕಿಟ್ಟಿ ಅವರಿಂದ ಮತ್ತೇನಾದರೂ ಮಾತು ಬಂದೀತೆಂದು ಹದಿನೈದು ನಿಮಿಷ ದಾರಿ ನೋಡಿದನು. ಆದರೆ ಅವರು ಸೆಟೆದು ಕುಳಿತು ಪಂಚಾಂಗದತ್ತ ನೋಡುತ್ತಿದ್ದವರು ಸ್ವಲ್ಪವೂ ಮುಖವನ್ನು ಅಲುಗಾಡಿಸಲಿಲ್ಲ.

'ಹಂಗಾದರ ಬರತೀನಿ....!' ಕಿಟ್ಟಿ ಆ ಕಠೋರಮೌನಕ್ಕೆ ಬೇಸತ್ತು ಅಂದನು.

'ಹುಂ.'

ಕಿಟ್ಟಿ ಸೆಡವಿನಿಂದ ಕಾಲು ಅಪ್ಪಳಿಸುತ್ತ ಬಾಗಿಲವರೆಗೆ ಹೋದನು. ಒಮ್ಮೆ ಮೈಚಳಿ ಬಿಟ್ಟ ಮೇಲೆ ಪೂರ್ಣ ಮಾತಾಡದೆ ಇದ್ದದ್ದಕ್ಕೆ ಅವನು ವಿಚಾರಶಕ್ತಿಯೆಲ್ಲ ತಾಂಡವವಾಡತೊಡಗಿತ್ತು. ಮತ್ತೊಂದು ವಿಚಾರ ಹೊಳೆದವನೇ ಬಾಗಿಲಿನಿಂದ ಈಚೆ ಬಂದು ನಿಂತಲ್ಲಿಯೇ ಮಾತನಾಡಿದನು. ಅವನ ಮೈಕೈ ನಡುಗುತ್ತಿದ್ದವು.

'ಅವ್ವನ್ನ ಹೊರಗ ಇಡೂದಿಲ್ಲ ಅಂತ ನನ್ನಿಂದ ಆಣಿ ಮಾಡಿಸಿದಿರಿ. ದತ್ತಕ ಮಾಡಿಕೋತೇನಿ ಅಂತ ನನ್ನ ಮಾವನಿಂದ ಆಣಿ ಮಾಡಿಸಿದಿರಿ. ಎಲ್ಲಾರ ಕಡಿಂದ ದೇವರ ಆಣಿ ಮಾಡಿಸತಿರತೀರ.... ರೊಕ್ಕಾ ಇಟ್ಟುಗೊಂಡಿಲ್ಲಾ ಅಂತ ನೀವು ಆಣಿ ಮಾಡತೀರ್‍ಯಾ ?'

'ಪ್ರಸಂಗ ಬಿದ್ದರ ಮಾಡತೀನಿ !' ಎಂದರು ದೇಸಾಯಿಯರು.

ಕೆಲ ಪ್ರಸಂಗಗಳಲ್ಲಿ ದೈವವನ್ನೂ ಕೆಣಕುವ ಮಟ್ಟಿಗೆ ಅವರು ಕಠೋರ ಎದೆಯವರಾಗಿದ್ದರು. ಕಿಟ್ಟಿ ಮರುಮಾತನಾಡದೆ ಇನ್ನು ಬಾಗಿಲು ದಾಟುವವ, ಅಷ್ಟರಲ್ಲಿ ದೇಸಾಯರು ಅವನನ್ನು ಕೂಗಿ ಕರೆದರು. ವಿಷಾದದ ಮಿಣುಕುನಗೆ ನಗುತ್ತ ಹೇಳಿದರು :

'ಕೃಷ್ಣಾ, ಒಂದಿಷ್ಟು ಬಂದು ಹೋಗು. ನಿನಗೆ ಬಹಳ ಹಿಂದಿನ ಸುದ್ದಿ ಒಂದು ಹೇಳತೇನಿ. ನಿನಗ ಗೊತ್ತಿರಲಿ. ನಮ್ಮದು ಧಾರವಾಡದಾಗ ಹೊಸಾಯಲ್ಲಾಪುರದಾಗ ಒಂದು ಮನಿ ಇತ್ತು, ಹಿಂದಕ. ನಾ ಬ್ಯಾಡಾ ಬ್ಯಾಡಾ ಅಂತಿರಲಿಕ್ಕೆ ನಮ್ಮ ಅಪ್ಪ ಅದನ್ನ ಮಾರಿದ. ನಾನು ಇವತ್ತಿಗೂ ನಮ್ಮ ಅಪ್ಪನ ಶ್ರಾದ್ಧಾ ಮಾಡೂದಿಲ್ಲ...! ಅಲ್ಲಲ್ಲ, ನಿನಗೆ ಗೊತ್ತಿರಲಿ ಅಂತ ಹೇಳತೇನಿ...'

ಕಿಟ್ಟಿಗೆ ಈ ಮಾತಿನ ಅರ್ಥ ತಿಳಿಯಲು ಒಂದು ನಿಮಿಷ ಬೇಕಾಯಿತು. ಇನ್ನು ಹೊರಡುವವನು, ಅಷ್ಟರಲ್ಲಿ ದೇಸಾಯರು ಇನ್ನೊಂದು ಬಾಣ ಬಿಟ್ಟರು:

'ಈ ಸುದ್ದಿ ನಿನ್ನ ಮಾವನಿಗೂ ಹೇಳಿ ಇಟ್ಟಿರು.... ಗೊತ್ತಿರಲಿ.'

ದೇಸಾಯರ ಈ ಮಾತು ತಿಳಿದನಂತರ ರಾಘಪ್ಪ, 'ಇಂದಿರಂದ ನನ್ನದೂ ದೇಸಾಯಿದೂ ಯುದ್ಧ ಸುರು ಆಯ್ತು...' ಎಂದು ನುಡಿದನು. ಕಿಟ್ಟಿಗೆ ಜಗಳದ ಬಗ್ಗೆ ಹೆದರಿಕೆ. ಆದರೆ ರಾಘಪ್ಪ, 'ನೀ ಸುಮ್ಮನಿರು. ನಾನು ನನ್ನಿಂದ ಆಗೋದನ್ನ

ಮಾಡತೇನಿ. ರಾಘಪ್ಪನ ಕೆಣಕಿದವರು ಬದಕೂದಿಲ್ಲ ಅಂತ ನನ್ನ ಖ್ಯಾತಿ ಆದ. ದೇಸಾಯಿಗೂ ಅಷ್ಟು ಗೊತ್ತಾಗಲಿ !' ಎಂದು ಮೀಸೆಯನ್ನು ಹುರಿಮಾಡಿಕೊಂಡನು.

## ೨೫ : ರಾಘಪ್ಪನ ಗಂಡಭೇರುಂಡ ಮುಖ

ಈ ನಾಲ್ಕೈದು ವರ್ಷಗಳಲ್ಲಿ ರಾಘಪ್ಪನೂ ಸಾಕಷ್ಟುಮಟ್ಟಿಗೆ ಬದಲಾಗಿದ್ದನು. ಅದಕ್ಕೆ ಮುಖ್ಯ ಕಾರಣ ಮೆಹಬೂಬಜಾನಳ ಮರಣವೆಂದೇ ಹೇಳಬೇಕು. ಆಕೆಯ ಮರಣದನಂತರ ರಾಘಪ್ಪನಿಗೆ ಜೀನದಲ್ಲಿಯ ಸೊಗಸೇ ಹೊರಟುಹೋಯಿತು. ರಾಘಪ್ಪ ಯತ್ನಮಾಡಿದ್ದು ದೇಸಾಯರನ್ನು ಇರುಕಿನಲ್ಲಿ ತರಲು. ಆದರೆ ದೇಸಾಯರಂತೂ ಸಿಕ್ಕಲೇ ಇಲ್ಲ. ತನ್ನ ಪ್ರೀತಿಯ ಮೆಹಬೂಬ ಮಾತ್ರ ಜೀವಕ್ಕೆ ಎರವಾದಳು.

ಆಕೆಯ ಮರಣವೂ ಒಂದು ಕಥೆಯೆ. ಒಂದು ತಿಂಗಳು ನಾಟಕ ಕಂಪನಿಯಲ್ಲಿ ಸತತ ದುಡಿತವನ್ನು ಮಾಡುವ ತ್ರಾಣ ಅವಳಲ್ಲಿ ಇರಲಿಲ್ಲವೆಂಬುದು ಸ್ಪಷ್ಟವಾದದ್ದೆ. ರಾಘಪ್ಪನಿಗೆ ಕೊಟ್ಟ ವಚನದ ಪ್ರಕಾರ ಪರಮೇಶ್ವರಭಟ್ಟನೇನೋ ತಾನಾಗಿ ಸರಾಯಿ ಕೊಡಲು ಆಗ್ರಹಪಡಿಸುತಿತ್ರಲಿಲ್ಲ ನಿಜ. ಆದರೆ ಇದೀಗ ಶ್ರಮವನ್ನು ತಡೆಯಲಾರದೆ ಮೆಹಬೂಬ ತಾನೇ ಬೇಡತೊಡಗಿದಳು. ಪ್ರತಿದಿನವೂ ನಿದ್ದೆಗೇಡು. ನಿದ್ದೆಗೇಡಿನ ರೂಢಿ ತಪ್ಪಿ ಬಹಳ ದಿವಸಗಳಾಗಿದ್ದವು. ಯಥಾಪ್ರಕಾರ ವಾಂತಿ–ಎದೆಶೂಲಿ ಪ್ರಾರಂಭವಾದವು. ಬ್ಲಡ್‌ಪ್ರೆಶರಿನ ಝಳುಕು ಹಾಯ್ದುಹೋಯಿತು. ನಾಟಕ ಕಂಪನಿಯ ಅಳಿಗಾಲವು ಆಗಲೇ ಪ್ರಾರಂಭವಾಗಿತ್ತೋ ಏನೋ, ಈ ಬಾರಿ ಪರಮೇಶ್ವರಭಟ್ಟನಿಗೆ ಸಾಕಷ್ಟು ಲಾಭವಾಗಲಿಲ್ಲ. ಧಾರವಾಡ ಪಟ್ಟಣವೆಂದರೆ ಕಳ್ಳ ಉಸುಕು ಇದ್ದಂತೆ. ಯಾವಾಗ ಕಡಿತ ಕೊಡುತ್ತದೆಯೋ ಹೇಳಲಿಕ್ಕೆ ಬರುವದಿಲ್ಲ. ನರಳುವ ಪರಮೇಶ್ವರಭಟ್ಟನನ್ನು ನೋಡಲಾರದೆ ಮೆಹಬೂಬ ಎಷ್ಟು ಕಷ್ಟವಾದರೂ, ಇನ್ನೊಂದು ಡೋಜ್ ಚಹಾ ಕುಡುದು ಕೆಲಸಕ್ಕೆ ಸಿದ್ಧಳಾಗುತ್ತಿದ್ದಳು. ಭಟ್ಟನೂ ಅವಳ ಶ್ರಮವನ್ನು ನೋಡಿ ಹಗುರಾಗಿ ಹಾಡಲು ಅಪ್ಪಣೆಕೊಟ್ಟಿದ್ದ. ಮೊದಲಿನ ಹಾಗೆ ಎರಡು ಆವರ್ತದ ತಾನು ಹೊಡೆಯುವದು ಈಗ ಸಾಧ್ಯವಿರಲಿಲ್ಲ ಅಂತೂ ಒಂದು ತಿಂಗಳು ಈ ದಿವ್ಯದೊಳಗಿಂದ ಪಾರಾಗಿ ಬಂದಳು.

ಬಂದೊಡನೆ ಬ್ಲಡ್‌ಪ್ರೆಶರಿಗೆ ಹಾಕಿಕೊಂಡಿತು. ಎದ್ದು ನಿಂತೊಡನೆ ಕಣ್ಣಿಗೆ ಚಕ್ರ ಬರುವದು ಪ್ರಾರಂಭವಾಯಿತು. ಉಂಡ ಅನ್ನ ಮೈಗೆ ಹತ್ತದಾಯಿತು.

ರಾಘಪ್ಪ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದನು. ಅಲ್ಲಿ ಎರಡು ತಿಂಗಳು ಇದ್ದು ಸ್ವಲ್ಪ ಗುಣಮುಖವಾದೊಡನೆ ತಿರುಗಿ ಮನೆಗೆ ಬಂದಳು. ಹದಿನೈದು ದಿನಗಳಲ್ಲಿ ಮತ್ತೆ ಯಥಾಪ್ರಕಾರ ಪ್ರಾರಂಭವಾಯಿತು. ಈ ಬಾರಿ ಆಕೆ ಆಸ್ಪತ್ರೆಗೆ ಹೋಗಲಿಕ್ಕೆ ಒಪ್ಪಲಿಲ. 'ಅಲ್ಲಾನ ಖುಷಿಗೆ ತಿಳಿದಂತೆ ಆಗಲಿ' ಎಂದು ಸದೋದಿತ ದೇವರ ಧ್ಯಾನದಲ್ಲಿ ಕಾಲಕಳೆಯತೊಡಗಿದಳು. ಒಮ್ಮೊಮ್ಮೆ ದೇವರ ಸಾನ್ನಿಧ್ಯದಿಂದ ಆಕೆಯ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಹರಿಯುವದು. ರಾಘಪ್ಪನಾದರೂ ಕ್ರಿಯಾವಂತನಾಗಿ ನಡೆದುಕೊಂಡನು. ತನಗಾಗಿ ಆಕೆ ಈ ಕಷ್ಟಪಟ್ಟಿದ್ದು, ಎಂಬ ನೋವಿನಿಂದ ಆಕೆಯನ್ನು ಬದುಕಿಸಿಕೊಳ್ಳಲು ಶತಪ್ರಯತ್ನ ಮಾಡಿದನು. ದಿವಸ ಎರಡು ದಿವಸಕ್ಕೆ ಹುಬ್ಬಳ್ಳಿಗೆ ಬಂದ ಎದುರಿಗೆ ಕುಳಿತು ಆಕೆಗೆ ಔಷಧ, ಹಣ್ಣು, ಹಾಲು ಕುಡಿಸುವನು.

ಹತ್ತುಹನ್ನೆರಡು ತಿಂಗಳಲ್ಲಿ ಬೇನೆ ಎಂದಿಗಿಂತ ಜೋರಾಗಿ ಪ್ರಾರಂಭವಾಯಿತು. ಕಫ–ಪಿತ್ತ–ಜ್ವರ ಪ್ರಾರಂಭವಾದವು. ಹೀಗೆ ಜೋರಾದೊಡನೆ ರಾಘಪ್ಪ ಹುಬ್ಬಳಿಗೇ ಒಂದು ತಿಂಗಳು ಬಂದು ನಿಂತನು. ಎದುರು ನಿಂತು ಶುಶ್ರೂಷೆ ಮಾಡತೊಡಗಿದನು. ರಾಘಪ್ಪನು ತನ್ನ ಮನೋಬಲವನ್ನೆಲ್ಲ ಹಾಕಿ ಮೃತ್ಯುವಿನೊಡನೆ ಯುದ್ಧಮಾಡಿದನು. ಅವನ ದಾರುಣ ಮನೋಧೈರ್ಯಕ್ಕೆ ಮೃತ್ಯುವೇ ಹೆದರಿತೋ ಏನೋ. ಹದಿನೈದು ದಿವಸ ಮೃತ್ಯು ಮುಖದಲ್ಲಿ ಪ್ರವೇಶಿಸಿದ ಮೆಹಬೂಬ ಒಂದು ದಿನ ಮುಂಜಾನೆ ನಾಲ್ಕು ಗಂಟೆಗೆ ಜೋರನೆ ಬೆವೆತು, ಜ್ವರದಿಂದ ಪಾರಾದಳು !

ಆದರೆ ಜೀವವು ಹೊರಟುಹೋಗುವಾಗ ತನ್ನ ಮುದ್ರೆಯನ್ನು ಒತ್ತಿ ಹೋಯಿತು. ಮೆಹಬೂಬ ಒಮ್ಮೆಲೆ ಕುರೂಪಿಯಾದಳು. ವಯಸ್ಸಾದರೂ ಹೆಣ್ಣು ಸೌಂದರ್ಯದಿಂದಲೂ ಶಾಂತಿಯಿಂದಲೂ ತುಂಬಿ ತುಳುಕುವ ಆಕೆಯ ಮುಖದ ಮೇಲೆ ಈಗ ಅಲ್ಲಲ್ಲಿ ಕಪ್ಪು ತಗ್ಗುಗಳಾದವು. ಒಂದು ಕಣ್ಣು ಮೇಲೆ ಹೋಗಿತ್ತು. ಹುಬ್ಬು ಕೆಂದುಬಣ್ಣದವಾಗಿ ಅಲ್ಲಲ್ಲಿ ಕೂದಲು ಉಚ್ಚಿದ ಚಿಹ್ನೆಗಳನ್ನು ತೋರತೊಡಗಿದವು. ತುಟಿಗಳು ಅಲ್ಲಲ್ಲಿ ಬಿರಿದಂತೆ ಆದವು.

ಆಕೆಯ ಸ್ವಭಾವದಲ್ಲಿ ವಿಶೇಷ ಬದಲಾವಣೆಯಾಗಿರಲಿಲ್ಲ. ಉಳಿದವರೊಡನೆ ತುಸು ಸಿಡುಕುತನದಿಂದ ಆಕೆ ವರ್ತಿಸುತ್ತಿರಬಹುದು. ಆದರೆ ಯಜಮಾನರೊಡನೆ ಮಾತ್ರ ಎಂದಿನಂತೆ ಇದ್ದಳು. ಆದರೆ ಮನುಷ್ಯನ ತಾಳ್ಮೆಗೂ ಒಂದು ಪರಿಮಿತಿಯುಂಟು. ಇಷ್ಟು ದಿನ ಶುಶ್ರೂಷೆ ಮಾಡಿದ ರಾಘಪ್ಪನಿಗೆ ಇದೀಗ ಬೇಸರ ಬರತೊಡಗಿತು. ಈ ಜೊತೆಗೆ, ತನ್ನಲ್ಲಿ ಉಂಟಾದ ಸ್ಥಿತ್ಯಂತರಗಳನ್ನು

ಅರಿತುಕೊಂಡ ಮೆಹಬೂಬಳಿಗೂ ಭಯವಾಯಿತು. ಆಕೆ ಅಳುತ್ತ ರಾಘಪ್ಪನ ಕಾಲಿಗೆ ಬಿದ್ದು, 'ಇಷ್ಟು ದಿನ ಕಷ್ಟಪಟ್ಟು ನನ್ನ ಯಾಕ ಬದುಕಿಸಿಕೊಂಡಿರಿ ?... ಇನ್ನೊಮ್ಮೆ ಬ್ಯಾನಿ ಬಂತು ಅಂದರ ನನ್ನ ಬದುಕಿಸಿಕೊಳ್ಳಲಿಕ್ಕೆ ಹೋಗಬ್ಯಾಡರಿ. ನಾ ಸುಮ್ಮನs ಕಣ್ಣು ಮುಚ್ಚತೇನಿ. ಹಿಂಗ ಬದುಕಲಾರೆ' ಎಂದಳು.

ರಾಘಪ್ಪನಿಗೆ ತುಂಬ ವ್ಯಸನವಾಯಿತು. ಆದರೆ ಅದರ ಜೊತೆಗೆ ಇನ್ನು ಆಕೆ ಬದುಕುವದರಲ್ಲಿ ಆಕೆಗೂ ಸುಖವಿಲ್ಲವೆಂಬುದು ಮನವರಿಕೆಯಾಯಿತು.

ಮುಂದೆ ಇಪ್ಪತ್ತೇ ದಿನಗಳಲ್ಲಿ ಕೊನೆಯ ಬಾರಿ ಹದ್ದು ಬಂದು ಎರಗಿತು. ಆವಾಗಲೂ ರಾಘಪ್ಪ ಯಂತ್ರದಂತೆ ಹೋದನು. ಆದರೆ ಸಹನೆಗೂ ಮೇರೆಯುಂಟು. ಎರಡನೆಯ ದಿನವೇ ಮೆಹಬೂಬಳ ಸಾನ್ನಿಧ್ಯವೇ ಕೀಸರಿಟ್ಟುಕೊಂಡಿತು. ತನ್ನ ಮನಸ್ಸಿಗೆ ವಿಶ್ರಾಂತಿ ಕೊಡಲೆಂದು ರಾಘಪ್ಪನು ಇನ್ನೊಬ್ಬ ಹಾಡುಗಾರ್ತಿಯ ಮನೆಗೆ ಬಂದು ಗಾಯನ ಕೇಳಲು ಕುಳಿತುಕೊಂಡನು. ಅವನು ಇತ್ತ ಬಂದ ಒಂದು ತಾಸಿನಲ್ಲಿ ಅತ್ತ ಮೆಹಬೂಬ ಯಜಮಾನರನ್ನೇ ನೆನೆಸುತ್ತ ಕಣ್ಣು ಮುಚ್ಚಿದಳು.

ಮರುದಿನ ಈ ಸುದ್ದಿ ಕೇಳಿ ರಾಘಪ್ಪನಿಗೆ ಜೀವ ಹಿಡಿದಂತಾಯಿತು. ಸಾಯುವಾಗ ನೆನೆಸಿದಳಂತೆ. ಇಷ್ಟು ದಿವಸ ಅಲ್ಲಿ ಇದ್ದು ಇದೊಂದು ದಿವಸ ಇರಲಿಲ್ಲವಲ್ಲ, ಎಂಬ ಪಶ್ಚಾತ್ತಾಪದಿಂದ ಅವನಿಗೆ ಹಣೆ ಜಜ್ಜಿಕೊಳ್ಳುವಂತಾಯಿತು. ಮುಂದೆ ಹದಿನೈದು ದಿನ ರಾಘಪ್ಪನು ಹೊಟ್ಟೆಬೇನೆ ಹತ್ತಿ ಹಾಸಿಗೆ ಹಿಡಿದನು. ಅವನು ನೆಟ್ಟಗಾದರೂ ಕೂಡ ಮೊದಲಿನ ರಾಘಪ್ಪನಾಗಿ ಉಳಿದಿರಲಿಲ್ಲ. ಒಳಗಿಂದೊಳಗೆ ದೊಡ್ಡ ಮನೋದೌರ್ಬಲ್ಯ ಬಂದುಬಿಟ್ಟಿತ್ತು.

ಮೆಹಬೂಬ ಸತ್ತಮೇಲಾದರೂ ಮನೆಯಿಂದ ಆಕೆಯ ಮನೆ ಸೇರಿದ ಸಂಪತ್ತು ತಿರುಗಿ ಬಂದೀತೆಂಬ ಹುಚ್ಚು ಆಸೆಯನ್ನು ಇಟ್ಟಕೊಂಡಿದ್ದ ಚಂಪಕ್ಕನ ಆಸೆ ವಿಫಲವಾಯಿತು. ಎಲ್ಲ ಹಣವನ್ನೂ ತನ್ನ ಅಕ್ಕನ ಮಗನ ಅಂಗಡಿಯಲ್ಲಿ ಮೆಹಬೂಬ ಹಾಕಿಬಿಟ್ಟಿದ್ದಳು. ರಾಘಪ್ಪ ಆ ವಿಷಯಕ್ಕೆ ಏನೂ ಮಾಡಲು ಒಪ್ಪಲಿಲ್ಲ. ಎರಡನೆಯ ಬಾರಿ ಬೇನೆ ಬಿದ್ದು ನೆಟ್ಟಗಾದ ಹೊಸತರಲ್ಲಿ ಮೆಹಬೂಬ ತಾನಾಗಿಯೇ ತನ್ನ ಕೊರಳಲ್ಲಿಯ ಚಂದ್ರಹಾರವನ್ನು ಚಂಪಕ್ಕನಿಗೆ ಕಳಿಸಿಕೊಟ್ಟು, 'ಶಾಂತಕ್ಕನ ಲಗ್ನದಾಗ ಆಕಿಗೆ ಮುಟ್ಟಿಸರಿ' ಎಂದು ಹೇಳಿಕಳಿಸಿದ್ದಳು. ಅದಷ್ಟೇ ಮನೆಗೆ ಬಂದದ್ದು.

ರಾಘಪ್ಪನಲ್ಲಿ ದಿನಕಳೆದಂತೆ ಮೊದಲಿನ ವರ್ಚಸ್ಸು ಕಡಿಮೆಯಾಗುತ್ತ ಬಂದಿತ್ತು. ಮೊದಲಿನ ಉತ್ಸಾಹ, ತ್ರಾಣ, ಚಾಪಲ್ಯ ಯಾವವೂ ಕಡಿಮೆಯಾಗದೇ

ಇರಲಿಲ್ಲ. ಮೊದಲಿನ ದೈತ್ಯಶಕ್ತಿಯಿಂದಲೂ ಬುದ್ಧಿ ಮತ್ತೆಯಿಂದಲೂ ಅವನ ಕುಹಕಗಳು ಕೂಡ ಜನರಲ್ಲಿ ಪವಾಡಗಳಾಗಿ ಮೆರೆಯುತ್ತಿದ್ದವು. ಆಗ ರಾವಣನಂತೆ ಪ್ರಚಂಡಸಾಮರ್ಥ್ಯದಿಂದ ನೆಲವನ್ನು ತುಳಿಯುವವನು ಇದೀಗ ಕೀಳುಕುಹಕಿಯ ಹಾಗೆ ಕಾಣುತ್ತಿದ್ದನು. ತನ್ನ ಅಲೌಕಿಕ ವ್ಯಕ್ತಿತ್ವವನ್ನೇ ಕಳಕೊಂಡು ನಿಸ್ತೇಜನಾಗಿದ್ದನು. ಇದರ ಅರಿವು ಅವನಿಗೂ ಇತ್ತು. ಯಾವಾಗಾದರೂ ರಸ್ತೆಯಲ್ಲಿ ಅಡ್ಡಾಡುವಾಗ ತನ್ನ ಹಿಮ್ಮಡಗಳು ಒಂದಕ್ಕೊಂದು ತಾಕಲಾಡಿದರೆ, 'ಎಲ್ಲ, ಹಿಂದಕ ಹಿಂಗ ಎಂದೂ ಆಗಿದ್ದಿಲ್ಲ !' ಎಂದುಕೊಳ್ಳುವನು. ಮೊದಲು ತಾನು ಮಾಡಿದ ಕಾರ್ಯಕ್ಕಾಗಿ ಎಂದೂ ಪಶ್ಚಾತ್ತಾಪ ಪಡದವನು ಈಗೀಗ ಯಾವುದಾದರೊಂದು ಅನುತಾಪಕ್ಕೆ ಎಡೆಯಾಗುವನು. ಮರಣದ ಶಕ್ತಿಯೇ ಅಂಥದು. ಅನುತಾಪವನ್ನು ಅರಿಯದ ಕಬ್ಬಿಣದ ಎದೆಗೆ ಮರಣವು ಒಮ್ಮೆ ಮರುಗಲು ಕಲಿಸಿದಮೇಲೆ, ಅದು ಯಾವ ವಿಷಯಕ್ಕೆ ಮರುಗೀತೆಂಬ ನಿಯಮವಿಲ್ಲ. ರಾಘಪ್ಪ ಇದೀಗ ಕಲ್ಪನೆಗಳ ಗುಂಗಿನಲ್ಲಿ ಇರತೊಡಗಿದನು. ಕಾಲ್ಪನಿಕ ದುಃಖಗಳಿಗಾಗಿ ಕಷ್ಟಪಡತೊಡಗಿದನು. ತನ್ನ ಬುದ್ಧಿ ಮತ್ತೆ ತನಗೆ ಎಲ್ಲ ಕಡೆಗೆ ಸಮನಾಗಿ ಲಾಭ ತಂದುಕೊಡಲಿಲ್ಲವಲ್ಲ, ಎಂಬುದು ಅವನ ಮೊದಲನೆಯ ಮರುಗು ; ತನ್ನ ಜೀವಾಳದ ವಿಷಯಗಳಲ್ಲಿ ತನ್ನ ಬುದ್ಧಿಮತ್ತೆ ಕೆಡುಕನ್ನೇ ಮಾಡಿತಲ್ಲಾ, ಎಂಬುದು ಎರಡನೆಯದು ; ತನ್ನ ಬುದ್ಧಿಮತ್ತೆಯೇ ಕಳೆಗುಂದತೊಡಗಿದೆಯಲ್ಲಾ, ಎಂಬುದು ಮೂರನೆಯದು.

ಇಂತು, ಇದೀಗ ಉಳಿದದ್ದು ರಾಘಪ್ಪನ ನೆಳಲು ಮಾತ್ರ. ಮೊದಲಿನ ಪ್ರಚಂಡ ರಾಘೋಬಾ ಭರಾರಿ ಮೆಹಬೂಬಜಾನಳೊಂದಿಗೆ ಮಾಯವಾಗಿದ್ದನು.

'ಈ ದೇಸಾಯಿ ಸ್ವಲ್ಪ ಮುಂಚೆ ಸಿಗಬೇಕಾಗಿತ್ತು, ನನ್ನ ಕೈಯಾಗ. ಈಗ ನನ್ನ ಮೈಯಾಗಿನ ತ್ರಾಣನೂ ಕಡಿಮೆ ಆಗೇದ. ಆಗ ಸಿಕ್ಕಿದ್ದರ ಹದಿನೈದು ದಿನದಾಗ ಇವನ್ನ ಏಳು ಕೆರಿ ನೀರು ಕುಡಿಸತಿದ್ದೆ...!' ಹೆಂಡತಿಯ ಮುಂದೆ ಕೊಚ್ಚುವನು. ದೇಸಾಯರು ಹಾಗೂ ಗಂಗವ್ವ ಇವರು ರಾಘಪ್ಪನ ಮನೆಯಲ್ಲಿ ಕಟುವಾದ ಹಾಸ್ಯದ ಮುಖ್ಯ ವಿಷಯಗಳು. ಬೀಗತನವಾದಮೇಲೂ ಒಮ್ಮೆಯೂ ಮನೆಗೆ ಕಾಲಿಕ್ಕದ ಗಂಗವ್ವ, ತಾತ್ವಿಕವಾಗಿ ಆಕೆಯ ಬೆನ್ನು ತಟ್ಟುವ ದೇಸಾಯರು, ಇಬ್ಬರೂ ಮನೆತನದ ಕಟ್ಟಾವೈರಿಗಳೇ. ಅದರಲ್ಲಿ ಈಗ ಕಿಟ್ಟಿಯ ಸಾಲ, ಬಡತನ ಹಾಗೂ ದೇಸಾಯರ ಬಳಿಯಲ್ಲಿ ಇಡಲ್ಪಟ್ಟ ಗಂಟು, ಇವುಗಳ ಸುದ್ದಿಯನ್ನು ಬಹಿರಂಗವಾಗಿ ಚರ್ಚಿಸಲು ಅವಕಾಶ ದೊರಕಿದ ಮೂಲಕ ಕಟುತ್ವವೂ ಹೆಚ್ಚಾಗಿತ್ತು.

ಆದರೆ ಎಷ್ಟು ತ್ರಾಣ ಕಡಿಮೆಯಾದರೂ 'ಭರಾರಿ'ಯ ಚಟುವಟಿಕೆಗಳು ನಿಲ್ಲಲಿಲ್ಲ. ಆ ವರ್ಷ ದೇಸಾಯರ ಕೆಲವು ಹೊಲಗಳ ಮೇಲಿನ ಹಪ್ತೆ ಒಂದಕ್ಕೆ

ದೀಡಪಟ್ಟು ಏರಿ ದೇಸಾಯರಿಗೆ ನೂರು ನೂರಾಐವತ್ತು ರೂಪಾಯಿಗಳ ಹಾನಿಯಾಯಿತು. ಅಲ್ಲದೆ ದೇಸಾಯರ ಕೆಲವು ಹೊಲಗಳಲ್ಲಿ ದೊಡ್ಡ ಪ್ರಮಾಣದ ಕಳವುಗಳಾದವು.

ದೇಸಾಯರ ಊರಿನಿಂದ ಧಾರವಾಡಕ್ಕೆ ಸಂತೆಗೆ ಬರುವ ಹಳ್ಳಿಗರೊಡನೆ ರಾಘಪ್ಪನು ಸ್ನೇಹಮಾಡಿದನು. ಇನ್ನೂ ಅವನ ಉದ್ದೇಶಗಳು ಏನೇನೋ ಇದ್ದವು – ಅಷ್ಟರಲ್ಲಿ ಇನ್ನೊಂದು ಉಪಾಯ ಹೊಳೆದು, ಹುಂಬ ಕೆಲಸಗಳಿಗೆ ಕೈಹಾಕಲು ಯತ್ನಿಸಲಿಲ್ಲ.

ದೇಸಾಯರ ಮಗ ವಸಂತ ಇನ್ನೂ ಗುಟ್ಟಾಗಿ ಕಾಳು ಮಾರಿಕೊಳ್ಳುವ ಚಟವನ್ನು ಬಿಟ್ಟಿರಲಿಲ್ಲ. ಅವನು ಹಿಂದಕ್ಕೆ ನಾಟಕ ಮಾಡಲು ಯತ್ನಿಸಿದುದನ್ನೂ, ಅದಕ್ಕಾಗಿ ಹಗೆಗಳನ್ನು ಹಾರುಹೊಡೆದುದನ್ನೂ, ದೇಸಾಯರು ಊರಿಗೆ ಓಡಿಬಂದದ್ದನ್ನೂ, ರಾಘಪ್ಪನ ಒಬ್ಬ ಕೇವಲ ಶಿಷ್ಯನು ಅವನಿಗೆ ಹೇಳಿದನು. ಇದೀಗ ಆಗಿನಂತೆ ವಸಂತರಾಯ ಬಹಿರಂಗವಾಗಿ ಕಾಳು ಮಾರಿಕೊಳ್ಳುತ್ತಿದ್ದಿಲ್ಲ. ಆದರೆ ಕಾಯಂ ಗಿರಾಕಿಗಳಿಗೆ ಸಣ್ಣ ಪ್ರಮಾಣದಲ್ಲಿ ಮೂರು ಸಂಜೆಯ ತರುವಾಯ ದಿನಕ್ಕೆ ಒಂದು ಒಂದೂವರೆ ಚೀಲದಂತೆ ಕೊಡುತ್ತಿದ್ದನು. ರಾಘಪ್ಪನ ಚಾಣಾಕ್ಷ ಶಿಷ್ಯ ಬಸವಣ್ಣಿಯು ನಾಲ್ಕು ಇಯತ್ತೆ ಪ್ರಾಥಮಿಕ ಶಾಲೆ ಕಲಿತವನು ; 'ಧಾರವಾಡದಾಗ ನಿಮ್ಮ ಜಾತಿಯವರೇ ಒಬ್ಬರು ದೊಡ್ಡ ಅಳತಿಯ ಮೇಲೆ ಖರೀದಿ ಹಿಡಿಯಲಿಕ್ಕೆ ಸಿದ್ಧರಿದ್ದಾರೆ' ಎಂದು.

ಚಾಣಾಕ್ಷ ಬಸವಣ್ಣಿಯು ಎಲ್ಲ ಉಪ್ಪುಕಾರ ಹಚ್ಚಿ ವಸಂತರಾಯನಿಗೆ ಆಶೆ ತೋರಿಸಿದನು. ಬಸವಣ್ಣಿ ನಡುವಿನವ. ಕಾಳು ಸಿಕ್ಕೊಡನೆ ಹಣ ಕೊಡುವವನು. ತನ್ನ ಚಕ್ಕಡಿಯೊಳಗಿಂದ ಒಂದೇ ರಾತ್ರಿಯಲ್ಲಿ ಧಾರವಾಡಕ್ಕೆ ಕಾಳನ್ನು ಸಾಗಿಸುವವನು. ಇನ್ನೊಬ್ಬರಿಗೆ ಒಂದು ತುಟಿ ಎರಡು ಮಾಡುವವನಲ್ಲ.. ಈ ಯೋಜನೆ ಒಂದು ತಿಂಗಳಲ್ಲಿಯೇ ಫಲಕಾರಿಯಾಯಿತು ರಾಘಪ್ಪನಿಗೆ ಹದಿನೈದು ಚೀಲ ಜೋಳ ದೊರಕಿದವು. ಅವನ್ನು ಧಾರವಾಡಕ್ಕೆ ಸಾಗಿಸು ಖರ್ಚು, ಬಸವಣ್ಣಿಯ ದಲಾಲಿ, ಹಾಗೂ ಇತರ ಖರ್ಚು ಹೋಗಲಾಗಿ ರಾಘಪ್ಪನ ಕಿಸೆಗೆ ಇಪ್ಪತ್ತು ಇಪ್ಪತ್ತೆರಡು ರೂಪಾಯಿಗಳು ಬಿದ್ದವು.

ಆದರೆ ರಾಘಪ್ಪನಿಗೆ ಈ ಚಿಕ್ಕಪುಟ್ಟ ಬಗೆಗಳು ಮನಸ್ಸಿಗೆ ಬರಲಿಲ್ಲ. 'ಛಿ, ಇಪ್ಪತ್ತು ರೂಪಾಯಿ !.... ನಾಚಿಗೆಗೇಡು !... ಮೆಹಬೂಬ ಇದ್ದಾಗಿನ ದಿನಾ ಆಗಿದ್ದರ ಇವನ್ನ ತೂರಿಬಿಡತಿದ್ದೆ' ಎಂದುಕೊಂಡನು. ಇದಕ್ಕೂ ಸಲಭ ಉಪಾಯ ಹುಡುಕತೊಡಗಿನು. 'ದೇಸಾಯಿ ನನ್ನ ಕೈಯಾಗ ಸಿಗಬೇಕಾದರ ಅವನ ಮಗನ್ನ

ಹಿಡೀಲಿಕ್ಕೆಬೇಕು. ಕಿರಬಟ್ಟು ಹಿಡದರ ಇಡೀ ವೈಯೇ ಬರತsದ' ಎಂದುಕೊಳ್ಳುವನು. ಇದಕ್ಕಾಗಿ ವಸಂತನ ಪ್ರತ್ಯಕ್ಷ ಗುರುತು ಮಾಡಿಕೊಳ್ಳಬೇಕು. ವಸಂತನಿಗೆ ನಾಟಕ ಕಂಪನಿ ಅಂದರೆ ಹಿಂದಕ್ಕೆ ಹುರುಪು ಇದ್ದಿ ತಷ್ಟೇ ? ತಾನಾದರೂ ಅದರಲ್ಲಿ ಸಾಕಷ್ಟು ನಿಷ್ಣಾತ. ಅದಕ್ಕಾಗಿ ವಸಂತನನ್ನು ತನ್ನ ಕಡೆಗೆ ನಾಟಕದ ಹುರುಪು ತುಂಬಿಸಿ ಕರಕೊಂಡು ಬರಲು ಬಸವಣ್ಣಿಗೆ ಹೇಳಿಬಿಟ್ಟನು. ಅವನ ಬರುವ ದಿನವನ್ನೇ ಎದುರು ನೋಡತೊಡಗಿದನು.

* * *

ಇದು ರಾಘಪ್ಪನ ಒಂದು ಮುಖವಾಯಿತು.

ಇನ್ನು ಎರಡನೆಯ ಮುಖ : ಕಿಟ್ಟಿಯ ಕಡೆಗೆ ನೋಡುವ ಮುಖ.

ಕಿಟ್ಟಿಯನ್ನು ದತ್ತಕ ತೆಗೆದುಕೊಳ್ಳುವ ವಿಷಯದಲ್ಲಿ ರಾಘಪ್ಪನ ಮನಸ್ಸು ಬದಲಾಗತೊಡಗಿತ್ತು. ಅವನು ಈ ವಿಚಾರವನ್ನು ಎಂದಿಗೂ ಮನಃಪೂರ್ವಕವಾಗಿ ಯೋಚಿಸಿರಲಿಲ್ಲ. ಆದರೆ ತನ್ನ ಮಗಳನ್ನು ಕೊಡುವ ಮಾತು ನಡೆದಾಗ ಇದೊಂದು ಆಶೆ ಗಂಗವ್ವನನ್ನು ಬಗ್ಗಿಸೀತು ಎಂದು ಈ ಉಪಾಯ ಹುಡುಕಿದ್ದನು. ಆದರೆ ವಿಚಾರವು ಗಂಗವ್ವನ ಹಟದ ಮೂಲಕ ಬಲಿಯುತ್ತಲೇ ನಡೆಯಿತು. ರಾಘಪ್ಪ ಆಗ ಬುದ್ಧಿಯಿಂದ ತರುಣನು. ತಾನು ದತ್ತಕ ತೆಗೆದುಕೊಳ್ಳುವ ಯೋಚನೆಯೇ ಅವನಿಗೆ ಹಾಸ್ಯಾಸ್ಪದವೆನಿಸುತ್ತಿತ್ತು. ಪ್ರಸಂಗದ ಆಗ್ರಹದ ಮೂಲಕವೊ ಏನೋ, 'ಆಗಲಿ, ದತ್ತಕ ಆದರೂ ಆಗಲಿ !' ಎಂದು ತನ್ನ ಮನಸ್ಸಿಗೇ ತಾನು ಸಮಾಧಾನ ಹೇಳಿಕೊಳ್ಳುವನು. ಎಲ್ಲರ ಎದುರು ಪ್ರಮಾಣ ಬೇರೆ ಮಾಡಿದ್ದನು. ಅಲ್ಲದೆ ಚಂಪಕ್ಕ ಕಿಟ್ಟಿಯನ್ನು ಬಹಳ ಹಚ್ಚಿಕೊಂಡಿದ್ದಳು. ಇವೆಲ್ಲ ಕಾರಣಗಳಿಂದಲೆ ರಾಘಪ್ಪ ಲಗ್ನಕ್ಕಿಂತ ಮೊದಲು ಕೆಲದಿನ ದತ್ತಕದ ಮಾತಿಗೆ ತಲೆಬಾಗಿದನು.

ಲಗ್ನವಾಯಿತು. ಅದರ ನಂತರ ದತ್ತಕದ ಅವಶ್ಯಕತೆಯೂ ಕೆಲವು ದಿನವಾದ ಮೇಲೆ ಗಂಗವ್ವ ತನ್ನ ದ್ವೇಷವನ್ನು ಬಿಡುವಳೆಂದು ಎಣಿಸಿದ ರಾಘಪ್ಪನ ಅಪೇಕ್ಷೆಗಳು ಸುಳ್ಳಾದವು. ಗಂಗವ್ವ ಒಮ್ಮೆಯೂ ತಮ್ಮ ಮನೆಗೆ ಬರಲಿಲ್ಲ ; ತಮ್ಮನ್ನೂ ಕರೆಯಲಿಲ್ಲ. ರತ್ನಾಗಾದರೋ ಮನೆಯಲ್ಲಿ ಸುಖ ಅಷ್ಟಕ್ಕಷ್ಟೆ. ತನ್ನ ಮೇಲಿನ ಸೇಡನ್ನು ಹುಡಿಗೆಯ ಮೇಲೆ ತೀರಿಸುತ್ತಿದ್ದಾಳೆ ಗಂಗವ್ವ, ಎಂಬ ಕಲ್ಪನೆ ರಾಘಪ್ಪನಲ್ಲಿ ಸ್ಥಿರವಾಯಿತು. ಹೀಗಾಗಿ ಗಂಗವ್ವ ಭೀತ್ಯಾಸ್ಪದ ವಸ್ತುವಾದಳು. ಕಿಟ್ಟಿಯಾದರೊ, ಈ ನಾಲ್ಕೈದು ವರ್ಷಗಳಲ್ಲಿ ರಾಘಪ್ಪನ ವಾರಸುದಾರನಾಗುವ ಯಾವ ಲಕ್ಷಣವನ್ನೂ ತೋರಿದ್ದಿಲ್ಲ. ರಾಘಪ್ಪನ ಬಾಲಾಗಸಿಯೇನೋ ಆಗಿದ್ದನು. ಆದರೆ ಯೋಗ್ಯತೆಯಿಲ್ಲದ ಬಾಲಾಗಸಿಗಳ ಬಗ್ಗೆ 'ರಾಘೋಬಾ ಭರಾರಿ'ಗೆ ಆದರವಿಲ್ಲ.

'ನಾ ಆಗಿದ್ದರ, 'ನಮ್ಮವ್ವಾ, ನನ್ ತಾಯಿ' ಅಂತ ಅಂದು ಸಾಷ್ಟಾಂಗ ನಮಸ್ಕಾರಾ ಹಾಕಿ, ಮನಿ ಬಿಟ್ಟು ಹೊರಗ ಹಾಕತಿದ್ದೆ !' ಎಂದು ಹೆಂಡತಿಯ ಎದುರು ಗರ್ಜಿಸುವನು.

ಇಂಥ ಪರಿಸ್ಥಿತಿಯಲ್ಲಿ ದೇಸಾಯಿಯರು ಕರೆಕಳಿಸಿ ದತ್ತಕದ ಮಾತು ಆಡತೊಡಗಿದೊಡನೆ ರಾಘಪ್ಪನ ಸಿಟ್ಟು ಬ್ರಹ್ಮಾಂಡಕ್ಕೆ ಏರಿತ್ತು. ತನ್ನ ಮನಸ್ಸಿನಲ್ಲಿದ್ದ ಬೇಸರವನ್ನೂ ರಾಘಪ್ಪ ದೇಸಾಯರಿಗೆ ತಿಳಿಸಿದನು. 'ದೇಸಾಯರ, ಲಗ್ನ ಆಗಿ ಒಂದೂವರಿ ವರ್ಷ ಆತು. ಒಂದು ದಿನಾ ಗಂಗಕ್ಕ ನಮ್ಮ ಮನಿಗೆ ಬರಲಿಲ್ಲ. ಹಬ್ಬ ಇರತದ, ಹುಣ್ಣಿವಿ ಇತರದ. ಹಿಂಗ ದ್ವೇಷಾ ಸಾಧಿಸಿದರ ನಮಗೂ ಒಂದು ನಂಬಿಗಿ ಹುಟ್ಟಬೇಕೊ ಬ್ಯಾಡೋ?' ಅದಕ್ಕೆ ದೇಸಾಯರು, 'ನೀವs ಅದಕ್ಕ ಮೊದಲು ಒಪ್ಪಿಗೀ ಕೊಟ್ಟವರು. ಲಗ್ನದ ಕಾಲಕ್ಕ ನೀವು ಇನ್ನಷ್ಟು ಮುಂದ ಬಿದ್ದು, ಇಲ್ಲಿಗೆ ನಮ್ಮ ಮನಸ್ತಾಪ ಮುಗೀಲಿ ಅಂತ ನಾಲ್ಕು ಜನರಿಗೆ ಹೇಳಲಿಲ್ಲ. ನಿಮ್ಮ ಹುರುಪಿನ್ಯಾಗs ನೀವು ಬಾಯಾಗ ಕಡುಬು ಹಾಕಿಕೊಂಡು ಕೂತಿರಿ' ಎಂದು ಹೇಳಿಬಿಟ್ಟರು.

ಹೀಗೆ ಸೋಲುತ್ತ ನಡೆದು ರಾಘಪ್ಪನು ಇಮ್ಮಡಿ ಖತಿಗೊಂಡನು. ಕಿಟ್ಟಿಯ ದತ್ತಕ ತೆಗೆದುಕೊಳ್ಳುವದರಲ್ಲಿ ಇನ್ನೂ ದೋಷಗಳಿದ್ದವು. ಎರಡನೆಯ ಅಳಿಯ ಕಿಟ್ಟಿಗಿಂತ ಉತ್ತಮನು ಸಿಕ್ಕರೆ...? ಕಿಟ್ಟಿಯನ್ನು ದತ್ತಕ ಮಾಡಿಕೊಂಡಮೇಲೆ ಗಂಗವ್ವ ಮಗನನ್ನು ಒಲಿಸಿಕೊಂಡು ತನ್ನ ಘಾತ ಮಾಡಿದರೆ...? ಈ ಎರಡನೆಯ ವಿಚಾರವು ರಾಘಪ್ಪನಿಗೆ ಭಯಾನಕವಾಗಿ ತೋರುತ್ತಿತ್ತು. ಯಾರಿಗೂ ಹೆದರದ ಅವನಲ್ಲಿ ಅಕ್ಕನ ಬಗ್ಗೆ ತುಸು ಮೊದಲಿನಿಂದಲೂ ಅಳುಕು. ಅದೀಗ ಅವನ ಮಾನಸಿಕ ದೌರ್ಬಲ್ಯದ ಮೂಲಕ ಪ್ರತ್ಯಕ್ಷ ಭಯವೇ ಆಗತೊಡಗಿತ್ತು. 'ಆ ಗಂಗೀ ಕೈಯಾಗ ನಾ ಸಿಕ್ಕೆ ಅಂದರ ನನ್ನ ನುಚ್ಚುನುರಿ ಮಾಡತಾಳ !' ಎಂದು ಮೇಲಿಂದ ಮೇಲೆ ಅಂದುಕೊಳ್ಳುತ್ತಿದ್ದನು. ಗಂಗವ್ವನ ಬಗ್ಗೆ ರಾಘಪ್ಪನಲ್ಲಿ ವಿರೋಧಭಕ್ತಿಯೇ ಸುರುವಾಗಿತ್ತು. ಅವನ ಅಕ್ಕನೇ ಅವನ ಈ ಮೂರು ವರ್ಷಗಳ ಮುಖ್ಯ ವಿಚಾರದ ವಿಷಯವಾಗಿದ್ದಳು. ಅವನ ಬಗ್ಗೆ ಇನ್ನೊಂದು ಗಾಯತ್ರಿ ಅವನ ಕಿವಿಯಲ್ಲಿ ಯಾವಾಗಲೂ ಮೊರೆಯತೊಡಗಿತ್ತು : 'ಗಂಗೀ, ಇನ್ನೂ ನನ್ನ ದ್ವೇಷ ಮುಗಿದಿಲ್ಲ. ನಿನ್ನ ಗತೀಗ ಹಚ್ಚಿ, ನೀ ದೆವ್ವ ಆಗಿ ನಮಗ ಬಡಕೊಳ್ಳೋಹಂಗ ಮಾಡಿದಮ್ಯಾಲ ನಾ ಕೈ ಊರತೇನಿ !'

ಇದೀಗ ಈ ದತ್ತಕಕ್ಕೆ ಹೇಗಾದರೂ ಅರದಾಳವನ್ನು ಹಚ್ಚಿದರೆ ಗಂಗವ್ವ ಹಾಗು ದೇಸಾಯರನ್ನು ಕನಲಿಸಿದ ಸುಖ ಸಿಗುವದು. ಆದರೆ ನಾಲ್ಕು ಜನರ

ಎದುರು ಪಣ ಬೇರೆ ಮಾಡಿದ್ದಾನೆ. ಸದ್ಯಕ್ಕೆ ಇನ್ನೊಂದು ಎರಡು ವರ್ಷ ಮುಂದೆಬಿದ್ದಂತಾಗಿದೆ, ಶಾಂತಾನ ಲಗ್ನದವರೆಗೆ. ಆದರೆ ಸ್ವಗತವಾಗಿ, 'ರಾಘ್ಯಾ, ನೀ ಅರಗಚ್ಚೆ ಅರಗಚ್ಚೆ ಉಪಾಯಾ ಹುಡುಕೋದು ಬಿಟ್ಟುಬಿಡು. ನೀ ರಾಘ್ಯಾ ಖರೆ ಆಗಿದ್ದರ ಈ ದತ್ತಕ ಪ್ರಕರಣ ಇನ್ನೊಮ್ಮೆ ತಲಿ ಎತ್ತದ ಹಂಗ ನುಗ್ಗುಬಡಿ' ಎಂದು 'ಮನಸ್ಸಿಗುಪದೇಶ' ಮಾಡಿಕೊಂಡನು.

ದತ್ತಕ ವಿಷಯದಲ್ಲಿ ರಾವಣನಂತೆ ರಾಘಪ್ಪ ವಿಚಾರಮಾಡತೊಡಗಿದನು. ತನಗೇ ಗಂಡು ಹುಟ್ಟಿದರೇ ...?

ಶಾಂತಾ ಹುಟ್ಟಿದಮೇಲೆ ಡಾಕ್ಟರರ ಸಲಹೆಯ ಮೇರೆಗೆ ರಾಘಪ್ಪನಿಗೆ ಪತ್ನೀಸಂಬಂಧ ತಪ್ಪಿಹೋಗಿತ್ತು. ಇನ್ನೊಂದು ಪ್ರಸೂತಿಯಾದರೆ ಪತ್ನಿಯ ಜೀವದ ಪ್ರಶ್ನೆಯಿದೆಯಂದು ಡಾಕ್ಟರು ಕಟ್ಟುನಿಟ್ಟಾಗಿ ಹೇಳಿದ್ದರು. ಇದೀಗ ತನಗೆ ಐವತ್ತು ವರ್ಷ ವಯಸ್ಸು. ಹೆಂಡತಿಗೆ ನಲ್ವತ್ತರ ಸಮೀಪಕ್ಕೆ ಬಂದಿದೆ. ತನಗಿರುವ ವೇಳೆ ಬಹಳ ಕಡಿಮೆ. ಶಾಂತಾಳ ಲಗ್ನ ಮುಂದೆ ಹಾಕುತ್ತ ಹೋಗುವದರಲ್ಲಿ ಅರ್ಥವಿಲ್ಲ... ವಯಸ್ಸು ಮೀರಿದರೆ ಆಕೆಗೆ ಲಗ್ನವೇ ಇಲ್ಲದಂತಾದೀತು ...!

ಏನೇ ಆಗಲಿ, ಕೊನೆಗೆ ಕನಿಕರವನ್ನು ಬದಿಗೊತ್ತಿ ಹಲ್ಲುಗಟ್ಟಗರಿಸುತ್ತ ರಾಘಪ್ಪ ನಿಶ್ಚಯಿಸಿದನು : 'ನನ್ನ ಹೆಂಡತೀ ಜೀವs...? ಒಂದು ಗಂಡಸು ಮಗನ್ನ ಕೊಟ್ಟು ಇಕೀನೂ ತನ್ನ ತಿಕೀಟು ತಗೀಲಿ...!'

ಡಾಕ್ಟರರಿಗಾದರೂ ಏನು ತಿಳಿಯುತ್ತದೆ ? ಒಂದು ಇದ್ದದ್ದು ಹತ್ತು ಮಾಡಿ ಹೇಳಿರುತ್ತಾರೆ !

* * *

ಚಂಪಕ್ಕನಿಗೆ ತನ್ನ ಗಂಡನು ಒಂದು ಮಾತನ್ನೂ ಆಡಿ ಹೇಳದಿದ್ದರೂ ಎಲ್ಲವೂ ಪುಸ್ತಕದಲ್ಲಿ ಓದಿದಂತೆ ಸ್ಪಷ್ಟವಾಗಿ ಕಂಡಿತು. ಗಂಡನ ಮನಸ್ಸಿನ ಪದರುಗಳ ಅರಿಕೆಯಿಲ್ಲದೆ ಆಕೆ ಇಷ್ಟು ದಿನ ಜೀವನ ಮಾಡಿರಲಿಲ್ಲ... ಆಕೆ ಕೊನೆಯ ಸ್ವಾರ್ಥತ್ಯಾಗಕ್ಕಾಗಿ ಇನ್ನೊಂದು ನುಡಿಯದೆ ಸಿದ್ಧಳಾದಳು... ರತ್ನಾಳ ಬಗ್ಗೆ ತುಸು ಕನಿಕರ ಹುಟ್ಟಿತು... ಆದರೆ ಪತಿಯೇ ದೈವ. ಅವನ ಪ್ರೀತಿದ್ವೇಷಗಳೆಲ್ಲ ತನ್ನವು, ತಾನು ಸಿದ್ಧಳಾಗಲೇಬೇಕು.

# ೨೬ : ಅಚ್ಯುತನ ಉತ್ತರ

ದೇಸಾಯರ ಕಿವಿಗೆ ತುಸು ದಿನಗಳಲ್ಲಿಯೇ ಮನೆಯ ಹದಿನೈದು ಚೀಲ ಜೋಳ ಧಾರವಾಡಕ್ಕೆ ಬಂದು ಮಾರಾಟವಾದ ಸುದ್ದಿ ಬಿದ್ದಿತು. ಈ ಮೊದಲೇ ಬೆಳೆ ಕಳುವಾದುದರ ಸಂತಾಪವೂ ಹಪ್ತೆ ಹೆಚ್ಚಾದುದರ ಸಂತಾಪವೂ ಅವರ ಮನಸ್ಸಿನಲ್ಲಿ ಉಳಿದಿತ್ತು. ತಮ್ಮ ಹಪ್ತೆಯ ಏರಿಕೆಯಲ್ಲಿ ರಾಘಪ್ಪನ ಕೈವಾಡವೇ ಇರಬೇಕೆಂಬ ಅವರ ಸಂದೇಹವು ಇದೀಗ ಖಂಡಿತವಾಯಿತು. ದೇಸಾಯರು ತಮ್ಮ ಹಿರಿಯರು ಜೀವದಿಂದ ಇದ್ದ ಕಾಲಕ್ಕೆ ತಮ್ಮ ಶಕ್ತಿ ಸರ್ವಸ್ವವನ್ನು ಹಾಕಿ ರಾಜಕಾರಣ – ಯುದ್ಧ – ಬಂಡಾಯಗಳನ್ನು ಮಾಡಿದವರು. ಆದರೆ ಕಳೆದ ಇಪ್ಪತ್ತು ವರ್ಷ ಅವರು ಸಾಮಾನ್ಯವಾಗಿ ನಿವೃತ್ತ ಸಿಪಾಯಿಯಂತೆ ಶಾಂತಿಯಲ್ಲಿ ಜೀವನ ಕಳೆದವರು. ಅವರಿಗೆ ಅವರ ಕಣ್ಣು ತುಂಬುವಂಥ ಶತ್ರುಗಳು ಯಾರೂ ಈ ಇಪ್ಪತ್ತು ವರ್ಷಗಳಲ್ಲಿ ಎದುರಾಗಿದ್ದಿಲ್ಲ. ತಮ್ಮಷ್ಟಕ್ಕೆ ತಾವು ದರ್ಪದಿಂದ ಮದಗಜದಂತೆ ಇರುವ ದೇಸಾಯರಿಗೆ ತೀರ ಸಲಿಗೆಯ ಮಿತ್ರರೂ ಕಡಿಮೆ, ತೀರ ಕಟುವಾದ ಶತ್ರುಗಳೂ ಇಲ್ಲ. ಆದರೆ ಈಗ ಮಾತ್ರ ನಿಷ್ಕಾರಣ ರಾಘಪ್ಪನ ಕೀಟಕುಪದ್ರವಕ್ಕೆ ಅವರು ಸಂತಪ್ತರಾದರು. ಬಹುದಿನಗಳಿಂದ ದ್ವೇಷ – ಹೇವಗಳಿಗೆ ಬಗ್ಗದ ಅವರು ಈಗ, 'ಸರಕಾರಕ್ಕೆ ಎರಡು ಪಟ್ಟು ಹಪ್ತೆ ತುಂಬೇನು ಆದರೆ ಈ ರಾಘಪ್ಪನ ಕೈಗೆ ಎರಡು ಬಿಲ್ಲಿ ಹಚ್ಚಿ ಕೊಟ್ಟರ ನಾ ಬಹದ್ದೂರ ದೇಸಾಯಿ ಅಲ್ಲ!' ಎಂದು ಮೀಸೆಗೆ ಕೈಹಚ್ಚಿಕೊಂಡರು. ಇನ್ನೂ ರಾಘಪ್ಪ ಪ್ರತ್ಯಕ್ಷ ಕಣಕ್ಕೆ ಇಳಿದ ಬಳಿಕ ತಾವು ಸುಮ್ಮನೆ ಕುಳಿತು ಫಲವಿಲ್ಲೆಂದು ಯೋಚಿಸಿ, ಮೊದಲ ಸಿಟ್ಟಿನ ಭರದಲ್ಲಿಯೇ ಅಚ್ಯುತನಿಗೆ ಒಂದು ಪತ್ರ ಗೀಚಿಹಾಕಿದರು. ಅದರಲ್ಲಿ ನಡೆದ ಸಂಗತಿಯನ್ನು ಸ್ವಲ್ಪದರಲ್ಲಿಯೇ ವಿವರಿಸಿ. ವೆಂಕಟರಾಯನು ರಾಘಪ್ಪನಿಗೆ ತಮ್ಮನಾಗಬೇಕೋ ಹೇಗೆ, ಹಾಗು ಇತರ ಸಂಗತಿಗಳು ಏನಾದರೂ ಸಿಗುತ್ತವೆಯೇ ನೋಡಲು ಹೇಳಿದರು. ಈ ವಿಷಯದಲ್ಲಿ ತಮಗೆ ಮನಃಪೂರ್ವಕ ಆಸಕ್ತಿ ಇದೆಯೆಂದೂ, ಇದನ್ನು ಮಗನ ಕರ್ತವ್ಯವೆಂದು ತಿಳಿದು ಲಕ್ಷ್ಯಪೂರ್ವಕ ಯತ್ನಮಾಡಬೇಕೆಂದೂ ಬರೆದರು. ಅವರು ಅಚ್ಯುತನಿಗೆ ಇಷ್ಟು ಕಳಕಳಿಯಿಂದ ಎಂದೂ ಬರೆಯಲಿಲ್ಲ.

ಅಚ್ಯುತನಿಗೆ ಕಷ್ಟವಾಗಿರಬೇಕು. ಏಕೆಂದರೆ ಅವನಿಂದ ಉತ್ತರ ಬರಲು ನಾಲ್ಕೈದು ದಿನಗಳು ಹಿಡಿದವು. ಉತ್ತರ ಮಾತ್ರ ಸವಿಸ್ತರವಾಗಿತ್ತು.

ಕ್ಷೇಮ ಶ್ರೀ ದೇವೀದಾಸ ಫ್ಲೋರ್ ಮಿಲ್
ಲಾಲಬಾಗ

ರಾ.ರಾ. ತೀರ್ಥರೂಪರ ಚರಣಾರವಿಂದಗಳಿಗೆ ಅನೇಕ ಶಿರಸಾಷ್ಟಾಂಗ ನಮಸ್ಕಾರಗಳು. ತಮ್ಮ ಪತ್ರ ಮುಟ್ಟಿತು. ನಾನು ಕ್ಷೇಮದಿಂದ ಇದ್ದೇನೆ. ಇಲ್ಲಿ ಕೆಲಸ ಚೆನ್ನಾಗಿ ನಡೆದಿದೆ. ಈಗ ನನಗೆ ಸಂಪಾದಕರು ಜವಾಬದಾರಿಯ ಕೆಲಸವನ್ನು ಕೊಡತೊಡಿದ್ದಾರೆ. ಈಗಾಗಲೆ ಸಂಪಾದಕೀಯಗಳನ್ನು ಬರೆಯಲು ಒಂದೆರಡು ಬಾರಿ ಸಂಧಿ ಕೊಟ್ಟಿದ್ದರು. ಆದರೆ ನಾನು ಬರೆದದ್ದನ್ನು ಓದಿ ನೋಡಿ ಬೇಡವಾದದ್ದನ್ನು ತೆಗೆದುಹಾಕುತ್ತಾರೆ. ಈಗ ಮೂರುನಾಲ್ಕು ವರ್ಷ ನಾನು ಕೆಲಸ ಮಾಡಿತೊಡಗಿದ್ದ ಮೂಲಕ ಚಿಕ್ಕವರಲ್ಲಿ ಸೀನಿಯರ್ ನಾನೇ ಆಗಿದ್ದೇನೆ. ಪತ್ರಿಕೆಯ ಸಾಂಪತ್ತಿಕ ಸ್ಥಿತಿ ತುಸು ಚಿಂತಾಜನಕವಾಗಿದ್ದು, ಪ್ರತಿವರ್ಷ ಅರ್ಧ ಪಗಾರದ ಮೇಲೆ ಕಾಲೇಜ ವಿದ್ಯಾರ್ಥಿಗಳನ್ನೇ ಉಪಸಂಪಾದಕರೆಂದು ನಿಯಮಿಸಿಕೊಳ್ಳುತ್ತಾರೆ. ಆದ್ದರಿಂದ ವರ್ಷವರ್ಷಕ್ಕೆ ಹೊಸ ಮುಖಗಳು ಬರುವದರ ಮೂಲಕ ಇದ್ದುದರಲ್ಲಿ ನಾನೇ ಹಳಬನಾಗಿದ್ದು, ನನ್ನ ಮೇಲೆ ಸಂಪಾದಕರು ತುಸು ವಿಶ್ವಾಸವನ್ನೂ ಇಟ್ಟಿದ್ದಾರೆ. ಬಿ.ಎ.ದ ಅಭ್ಯಾಸವೂ ಚೆನ್ನಾಗಿ ನಡೆದಿದೆ. ಯಾವ ಕಾಳಜಿ ಮಾಡಬಾರದು. ಗಿರಣಿಯಲ್ಲಿ ನಾನು ಈಗ ಹೋಗುವದನ್ನು ಕಡಿಮೆ ಮಾಡಿದ್ದೇನೆ. ಪ್ರೆಸ್ಸಿಗೆ ಕೂಡ ವಾರಕ್ಕೆ ಒಂದೆರಡು ಬಾರಿ ಮಾತ್ರ ಹೋಗಿ ಯಂತ್ರದ ಮಾಹಿತಿಯನ್ನು ತಿಳಿದುಕೊಳ್ಳುತ್ತೇನೆ. ಅಲ್ಲಿ ಕೂಡ ಈಗ ದೈಹಿಕ ಶ್ರಮ ವಹಿಸುವುದಿಲ್ಲ. ಯಾವ ಚಿಂತೆ ಇರಕೂಡದು. ಮಾತೋಶ್ರೀಯವರಿಗೆ ಈ ವಿಷಯ ತಿಳಿಸಿ ನಿಶ್ಚಿಂತರಾಗಿ ಇರಲಿಕ್ಕೆ ಹೇಳಬೇಕು.

ಇನ್ನು ನೀವು ಬರೆದ ವಿಷಯ. ವೆಂಕಟರಾಯನಿಗೆ ನನ್ನು ತಿಳಯ ಹೇಳುವದೂ ಕಠಿಣ. ಉದ್ದೇಶಪೂರ್ವಕವಾಗಿ ಪ್ರಶ್ನೆಗಳನ್ನು ಕೇಳತೊಡಗಿದೊಡನೆ ಅವನು ಸಂಶಯದಿಂದ ಅಡ್ಡ ಎಳೆಯತೊಡಗುತ್ತಾನೆ. ಈ ಮೊದಲು ವೆಂಕಟರಾಯನು ನನಗೆ ಅನೇಕ ಬಾರಿ ತನ್ನ ಬಳಿಯಲ್ಲಿ ಇದ್ದ ಒಂದು ಕಾಗದವನ್ನು ಮೇಲಿಂದಮೇಲೆ ತೋರಿಸುತ್ತಿದ್ದನು. ಬಹಳ ಬಾರಿ ಅವನು ತೋರಿಸಿದ್ದ ಮೂಲಕವೊ, ಅವನ ವಿಚಿತ್ರ ವರ್ತನೆಯನ್ನು ದುರ್ಲಕ್ಷ್ಯ ಮಾಡುವ ನನ್ನ ಅಭ್ಯಾಸದ ಮೂಲಕವೊ ನಾನು ಒಮ್ಮೆ ಓದಿದವನು ಮತ್ತೆ ಓದಿರಲಿಲ್ಲ. ಆದರೆ ಈಗ ಅದನ್ನು ಮತ್ತೆ ಕೇಳಲಾಗಿ ಅವನು ಇಲ್ಲದ ಸಂಶಯದಿಂದ ಕೊಡಲೊಲ್ಲನು. ಅವನನ್ನು ರಮಿಸಬೇಕಾದರೆ ಸಾಕುಬೇಕಾಗಿಹೋಯಿತು. ಅವನಿಗೆ

ಲಹರಿ ಬಂದಾಗ ಕಂಡಕಂಡವರಿಗೆ ಆ ಕಾಗದವನ್ನು ತಾನೇ ತೋರಿಸುತ್ತಾನೆ. ತುಸು ಕನ್ನಡ ಬಲ್ಲವರಾಗಿ ಅವನೊಡನೆ ತುಸು ಕಳಕಳಿ ಮಾಡುವವರಿಗೆ ಆ ಕಾಗದವನ್ನು ತೋರಿಸಿ, 'ನನ್ನ ಹಿಸೆ ನನಗ ಸಿಕ್ಕೀತೇನರಿ ?' ಎಂದು ಪ್ರಶ್ನೆ ಕೇಳುವದು ಅವನ ಚಟ. ಆ ಕಾಗದವನ್ನು ನೋಡಿದವರೆಲ್ಲ, 'ಇದೇನು, ಬಕ್ಷೀಸಪತ್ರ ಮಾಡಿಕೊಟ್ಟೀರಿ. ಇನ್ನು ಹೇಗೆ ಸಿಕ್ಕೀತು ?' ಎಂದೇ ಉತ್ತರ ಕೊಡುತ್ತಾರೆ. ಆ ಕಾಗದವನ್ನು ಅವನಿಂದ ಪಡೆದು ಲಕ್ಷ್ಯಪೂರ್ವಕ ಓದಿದ ಮೇಲೆ ನನಗೂ ಹಾಗೆಯೇ ಕಲ್ಪನೆಯಾಯಿತು. ಇಲ್ಲಿಯ ಒಬ್ಬ ವಕೀಲ ಮಿತ್ರರನ್ನು ಕೇಳಲಾಗಿ ಅವರೂ ಹಾಗೇ ಹೇಳಿದರು.

ಇದು ಆ ಪತ್ರ :

ಶ್ರೀ

ಮ.ರಾ.ರಾ. ಸ್ವಾಮಿರಾವ ಕೃಷ್ಣಾಜಿರಾವ ಕುಲಕರ್ಣಿ, ಸಾಕೀನ ಧಾರವಾಡ, ಇವರಿಗೆ – ವೆಂಕಟೇಶ ವಾಮನ ಬಿಂದಗೋಳ, ಸಾಕೀನ ಬಿಂದಗೋಳ, ಹಾಲಿವಸ್ತಿ ಪುಣೆ, ಉದ್ಯೋಗ ನೌಕರಿ, ನಾನು ಬರೆದುಕೊಡುವ ಬಕ್ಷೀಸುಪತ್ರ ಏನೆಂದರೆ – ನಾನು ಹಾಗೂ ನನ್ನ ಅಣ್ಣಂದಿರಾದ ಮ.ರಾ.ರಾ. ರಾಘವೇಂದ್ರ ವಾಮನ ಬಿಂದಗೋಳ ಇವರು ಏಕತ್ರ ಘರಾಣೆದಾರರು ಇದ್ದು, ನಮ್ಮ ತಂದೆಯವರಿಗೆ ಇತರ ಗಂಡು ಸಂತತಿ ಇಲ್ಲದ ಮೂಲಕ ನಮ್ಮ ಪಿತ್ರಾರ್ಜಿತ ಆಸ್ತಿಗೆ ನಾವಿಬ್ಬರೇ ವಾರಸುದಾರರು ಇರುತ್ತೇವೆ. ಆದರೆ ನಾನು ಪರಸ್ಥಳದಲ್ಲಿ ನೌಕರಿಗಾಗಿ ಇರುತ್ತಿದ್ದ ಕಾರಣ ನನ್ನ ಅಣ್ಣಂದಿರಾದ ಸದರಿ ರಾಘವೇಂದ್ರ ವಾಮನ ಬಿಂದಗೋಳ ಅವರೇ ನಮ್ಮ ಬಿಂದಗೋಳ ಮೌಜೆಯಲ್ಲಿ ಇರುವ ಏಕತ್ರ ಆಸ್ತಿಯ ವಹಿವಾಟು ಮಾಡುತ್ತ ಬಂದಿರುತ್ತಾರೆ. ನಾವು ಅಣ್ಣತಮ್ಮಂದಿರು ಇನ್ನೂ ವಾಟಣಿ[೧] ಮಾಡಿಕೊಂಡಿರುವದಿಲ್ಲ. ಆದರೆ ಈಗ ನನ್ನ ಮೇಲೆ ಒಂದು ಬೋಜೆ[೨] ಬಂದಿದ್ದು, ಆ ಬೋಜೆಯನ್ನು ನೀವೇ ಖುಷಿಯಿಂದ ಹೊತ್ತಿದ್ದೀರಿ. ಆ ಉಪಕಾರಕ್ಕೆ ಪ್ರತಿಯಾಗಿ ನಾನು ನನ್ನ ಪಾಲಿಗೆ ಬರತಕ್ಕ ಎಲ್ಲಾ ಪಿತ್ರಾರ್ಜಿತ ಆಸ್ತಿಯನ್ನು ಸ್ವಂತ ಖುಷಿಯಿಂದ ನಿಮಗೆ ಬಕ್ಷೀಸು ಅಂತಾ ಈ ಮೂಲಕ ಬರಕೊಡತ್ತೇನೆ. ಅದನ್ನು ನೀವು ಹಾಗೆ ನಿಮ್ಮ ವಂಶಜರು ಯಾವ ತಕರಾರು ಇಲ್ಲದೇ ಉಪಭೋಗ ಮಾಡಬಹುದು. ನಾನು ಅವಿವಾಹಿತನಿದ್ದು ಈ ಆಸ್ತಿಯ ಮೇಲೆ ಇತರ ಯಾರ ಹಕ್ಕೂ ಇರುವದಿಲ್ಲ. ನನ್ನ ಅಗರ[೩] ನನ್ನ ಅಣ್ಣಂದಿರ ವಂಶಜರ ಪೈಕಿ ಯಾರದೂ ಈ ಆಸ್ತಿಯ ಮೇಲೆ ಹಕ್ಕು ನಡೆಯಲಾರದು. ನನ್ನ ಹಿಸೆಗೆ ಎಷ್ಟು ಆಸ್ತಿ ಬರಬೇಕು ಎಂಬುದನ್ನು ನೀವು ಮೂವರು

---

೧. ಪಾಲು  ೨. ಭಾರ.  ೩. ಇಲ್ಲವೆ.

ಪಂಚರ ಸಮಕ್ಷಮ ನಿರ್ಣಯ ಮಾಡಿಸಿ, ಬೇಕಾದಾಗ ಹಾಲೀ ವಹಿವಾಟದಾರ ರಾಘವೇಂದ್ರ ವಾಮನ ಬಿಂದಗೋಳ ಅವರಿಂದ ಪಡೆಯತಕ್ಕದ್ದು. ಈ ಕಾಗದ ರಾಘವೇಂದ್ರ ವಾಮನ ಬಿಂದಗೋಳ ಇವರ ಸಮಕ್ಷಮ ಮಾಡಲ್ಪಟ್ಟಿದ್ದು ಇದಕ್ಕೆ ತಮ್ಮ ಕಬೂಲಾತಿಯ ಸೂಚಕವಾಗಿ ಸಹಿ ಮಾಡುತ್ತಾರೆ ಅಂತಾ ಬರಕೊಟ್ಟ ಬಕ್ಷೀಸುಪತ್ರ.

ಸಹಿ. ತಾ. ೧೩–೫ ವೆಂಕಟೇಶ ವಾಮನ ಬಿಂದಗೋಳ
ಸಾಕ್ಷಿ : ಸ್ವಾಮಿರಾವ ಕೃಷ್ಣಾಜಿ ಕುಲಕರ್ಣಿ
ಶಾಂತಪ್ಪಾ ಶಿವಪ್ಪಾ ಶೆಟ್ಟರ ರಾಘವೇಂದ್ರ ವಾಮನ ಬಿಂದಗೋಳ

ಆದರೆ ಕಾಗದದ ಮೇಲೆ ರೆಜಿಸ್ಟ್ರೇಶನ್ನದ ಗುರುತು ಎಲ್ಲಿಯೂ ಇಲ್ಲ.

ಈ ಕಾಗದವನ್ನು ಓದಿ ನೋಡಿದವರಿಗೆಲ್ಲ ಇದು ಭದ್ರವಾಗಿಯೇ ಕಾಣಿಸುತ್ತದೆ. ಆದರೆ ನನಗೆ ಒಂದೇ ಒಂದು ಸಂದೇಹ ಮಾತ್ರ ಬರುತ್ತದೆ. ಕಾಗದವನ್ನು ದಟ್ಟನೆಯ ಕಪ್ಪು ಮಶಿಯಲ್ಲಿ ಬರೆದಿದ್ದಾರೆ ಅದು ಹಳೆಯದಾಗಿದೆ. ಕಾರಣ ಇಡೀ ಕಾಗದವು ನೋಡುವವರಿಗೆ ಮೂಲ ಕಾಗದದ ಪ್ರತಿ[೧]ಯಾಗಿ ಕಾಣಿಸುತ್ತದೆ. ಆದರೆ ನಾನು ಸಹಿಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದೆ. ಸಹಿಯ ಅಕ್ಷರಗಳು ಬೇರೆಬೇರೆ ಇದ್ದ ಮೂಲಕ, ಇದು ಪ್ರತಿ ಅಲ್ಲ, ಮೂಲ ಕಾಗದವೇ, ಎಂದು ನನಗೆ ಅನಿಸುತ್ತದೆ ; ಮಶಿ ದಟ್ಟಕಪ್ಪು ಇದ್ದ ಮೂಲಕ ಸಹಿಗಳೆಲ್ಲ ಒಮ್ಮೆಲೇ ಒಂದೇ ಕೈಬರಹದಲ್ಲಿ ಕಂಡರೂ ಕೂಡ ಸೂಕ್ಷ್ಮವಾಗಿ ನೋಡಲಾಗಿ ಅವು ಮೂಲ ಸಹಿಗಳೇ ಇರುವದು ತಿಳಿಯುತ್ತದೆ.

ಇದು ಮೂಲ ಕಾಗದವೇ ಆಗಿದ್ದರೆ, ಮುಂದಿನ ಸಂಶಯ. ಇದು ನಿಜವಾಗಿ ನೋಡಿದರೆ ಸ್ವಾಮಿರಾವ ಕೃಷ್ಣಾಜಿ ಕುಲಕರ್ಣಿ ಇವರ ವಶದಲ್ಲಿ ಇರತಕ್ಕದ್ದು. ವೆಂಕಟರಾಯನ ವಶದಲ್ಲಿ ಏಕೆ, ಹೇಗೆ, ಯಾವಾಗ ಬಂದಿತು ? ರೆಜಿಸ್ಟ್ರೇಶನ್ ಆಗದ ಕಾಗದ – ಅಂದಮೇಲೆ ಸ್ವಾಮಿರಾವ ಕುಲಕರ್ಣಿಯವರೇ ಅದನ್ನು ಜಪ್ಪಿಸಿ ಇಟ್ಟುಕೊಳ್ಳಬೇಕಾಗಿತ್ತಲ್ಲವೇ ?

ಈ ಪ್ರಶ್ನೆಯ ಅರ್ಥವನ್ನು ಸೂಜ್ಞರಿಗೆ ವಿಸ್ತರಿಸಿ ಬರೆಯುವ ಕಾರಣವಿಲ್ಲ. ಇತರ ಸಂಗತಿಗಳ ವಿವರಗಳನ್ನು ವೆಂಕಟರಾಯನಿಂದ ಪಡೆಯುವದು ಕಠಿಣದ ಕೆಲಸ. ಈ ಕಾಗದವನ್ನು ಓದುತ್ತ ಕೆಲವು ವಿವರಗಳನ್ನು ಕೇಳಿದೆ. ಅವನು 'ಯಾವ ಬೋಜೆ ?' ಎಂದು ಕೇಳಿದರೆ ಉತ್ತರವನ್ನೇ ತಪ್ಪಿಸುತ್ತಾನೆ ; ಇಲ್ಲವೇ

---

೧. ನಕಲು.

ಸಿಟ್ಟಿಗೇಳುತ್ತಾನೆ. ಕಾಗದವನ್ನು ಕೂಲಂಕಷವಾಗಿ ನಾನು ಓದಿದುದಕ್ಕೂ ಆತನಿಗೆ ಸಹನೆಯಿಲ್ಲ. ಅವನ ಸ್ವಭಾವವನ್ನು ನೀವು ಐದೇ ನಿಮಿಷವಾಗಲಿ, ಪ್ರತ್ಯಕ್ಷ ಅನುಭವಿಸಿದ್ದೀರಿ.

ಆದರೆ ಈ ವಿಷಯದಲ್ಲಿ ತಮಗೆ ಇತರ ವಿವರಗಳು ಗೊತ್ತಿದ್ದು, ಅದರ ನಿಷ್ಕರ್ಷೆಯನ್ನು ಮಾಡುವ ಇಚ್ಛೆ ತಮಗಿದ್ದಲ್ಲಿ, ಅವುಗಳನ್ನು ತಿಳಿಸಿದರೆ ಇಲ್ಲಿಯ ನನ್ನ ಕೆಲವು ವಕೀಲ ಮಿತ್ರರಿಗೆ ಕೇಳಿ ಅವರ ಅಭಿಪ್ರಾಯ ತಿಳಿಸುತ್ತೇನೆ. ನಾನೂ ಯಥಾಶಕ್ತಿ ವಿಚಾರಮಾಡುತ್ತೇನೆ.

ಮಾತೋಶ್ರೀಯವರ ಹಾಗೂ ತಮ್ಮಂದಿರ ಕ್ಷೇಮಸಮಾಚಾರ ತಿಳಿಸಿರಿ. ಇಂತಿ ಶಿ.ಸಾ.ನ.ಗಳು.

ತಮ್ಮ ಪ್ರೀತಿಯ,

**ಅಚ್ಯುತರಾಯ**

ಪತ್ರವನ್ನು ಓದುತ್ತಲೇ ದೇಸಾಯರ ಮನಸ್ಸು ಹೊಯ್ದಾಡತೊಡಗಿತು. ತಮಗೆ ಗೊತ್ತಿದ್ದ ವಿವರಗಳೊಡನೆ ಈ ಕಾಗದವನ್ನು ಒರೆಹಚ್ಚಿ ನೋಡಿದರೆ ಒಮ್ಮೆ ಝಗ್ಗನೆ ಪ್ರಕಾಶ ಹೊಳೆದಂತಾಗಿ, ಮತ್ತೆ ಸಂದೇಹದ ಕತ್ತಲೆ ಪಸರಿಸುತ್ತಿತ್ತು. ಇನ್ನೂ ಅರೆಮನಸ್ಸಿನಿಂದ ದಂಡೆಯ ಮೇಲೆ ನಿಂತ ದೇಸಾಯರನ್ನು ಈ ಪತ್ರ ಒಳಗೆ ಧುಮ್ಮಿಕ್ಕಲು ಆಮಂತ್ರಿಸಿದಂತಾಯಿತು. ಜೊತೆಗೆ ಮಗನ ಬುದ್ಧಿಯಾಟದ ಮೋಹಕ ಲೀಲೆ. ಅಂತು ತಾವು ಹಾಗು ತಮ್ಮ ಮಗ ಅಚ್ಯುತ ಈ ಗೊಂದಲದಲ್ಲಿ ಕೈಹಾಕಿ ಇದ್ದ ಗುಟ್ಟನ್ನು ಹೊರಗೆಡವಿಯೇ ಬಿಡಬೇಕೆಂಬ ಚಪಲಕ್ಕೆ ಅವರ ಮನಸ್ಸು ಅಣಿಯಾಯಿತು. ಮೊಟ್ಟಮೊದಲು ಇದ್ದ ಮೈತಪ್ಪಿಸಿಕೊಳ್ಳುವ ಇಚ್ಛೆ ಈ ಪತ್ರದಿಂದ ಪೂರ್ಣ ನಾಶವಾಗಿ ಅದರ ಬದಲು ದೇಸಾಯರ ಶಾಂತ ಜೀವನದಲ್ಲಿ ಪ್ರಚಂಡ ಕಾರ್ಯಾಸಕ್ತಿ ಉಕ್ಕೇರಿತು. ಏಕೆಂದರೆ ಈ ಪ್ರಶ್ನೆ ಕೇವಲ ತಮ್ಮ ಮೇಲೆ ವಿಶ್ವಾಸವಿಟ್ಟ ಒಬ್ಬ ಅಸಹಾಯ ವಿಧವೆಯ ಯೋಗಕ್ಷೇಮವಿಷ್ಟೇ ಅಲ್ಲ ; ಒಬ್ಬ ಮರುಳ ಹುಡುಗನ ಕಲ್ಯಾಣವಿಷ್ಟೇ ಅಲ್ಲ ; ತಮ್ಮ ಪ್ರತಾಪಕ್ಕೆ ಆಹ್ವಾನವನ್ನು ಈಯಬಲ್ಲ ಚತುರ ಎದುರಾಳಿ ದೇಸಾಯರಿಗೆ ತಮ್ಮ ತಂದೆಯ ಮರಣದ ತರುವಾಯ ಭೆಟ್ಟಿಯಾಗಿರಲಿಲ್ಲ ; ಇಂದು ಭೆಟ್ಟಿಯಾದನು. ನೋಡನೋಡುತ್ತಲೇ ಅವನು ಕಣಕ್ಕೆ ಇಳಿದನು. ತಾವೂ ತಮಗೆ ತಿಳಿಯದೆ ಅರ್ಧ ತೋಳು ಏರಿಸಿದ್ದಾರೆ. ಇನ್ನೇಕೆ ಹಿಂದುಮುಂದ ನೋಡುವದು?....

ದೇಸಾಯರು ಮತ್ತೆ ಹರೆಯದವರಾದರು.

## ೨೭ : ವಸಂತ – ರಾಘಪ್ಪರ ಸಂವಾದ

ರಾಘಪ್ಪನ ಸೂಚನೆಯಂತೆ ಬಸವಣ್ಣಿ ವಸಂತನಿಗೆ ಧಾರವಾಡಕ್ಕೆ ಬಂದು ರಾಘಪ್ಪನನ್ನು ಭೆಟ್ಟಿಯಾಗುವಂತೆ ಮನವೊಲಿಸಿದನು. 'ನಾ ಹೇಳಿದ್ನಿರೇ, ನಮ್ಮ ಗೌಡರದು ನಾಟಕಾ ಅಂದರ ಬಲು ಜೀವಾ ಅಂತ. 'ಅಂತೂ ಹುರುಪಿನವರು ಇದ್ದಾರ ಬಿಡು ನಿಮ್ಮ ಗೌಡರು. ಹಂಗಾರ ನಮ್ಮದೂ ಅವರದೂ ಕೂಡತೈತಿ ಏಳು' ಅಂತ ಈ ಅಂದರರಿ. ಅವರವs ಎರಡು ನಾಟಕ ಕಂಪನಿ ಇದ್ದವು ಅಂತರಿ. ಅವರು ಎಷ್ಟೋ ಸರೆ ಮಾತು ಕಲಿಸಿಕೊಟ್ಟಾರ ಅಂತರಿ. 'ನಿಮ್ಮ ಗೌಡರ ನೆರವು ಆದರ ಇನ್ನೊಂದು ನಾಟಕಾ ಹೊಡೆದುಬಿಡೋಣ' ಅಂತ ಅಂತಿದ್ದರು. ನಿಮ್ಮನ್ನ ನೋಡಿದಮ್ಯಾಗಂತೂ ಅವರು ನಾಟಕದಾಗ ನಿಮಗs ರಾಜಾನ ಪಾರ್ಟ ಕೊಡತಾರ ನೋಡ್ರಿ. ನನಗ ಅಂತು ಬಲೇ ಖಾತ್ರಿ ಅನಸತತಿ. ನಿಮ್ಮನ್ನ ಕಂಡಗಸೀಲೆ ನನಗ ಗಸಕ್ಕನ ಅದs ಧ್ಯಾಸಕ್ಕ ಬರತೈತಿ. ನಿಮ್ಮನ್ನ ಕಂಡರ ರಾಜಾನ್ನ ಕಂಡಂಗs ಆಗತೈತಿ.' ಹೀಗೆ ಒಂದರೆಡು ಬಾರಿ ಬಸವಣ್ಣಿ ಇಷ್ಟಗಲ ಮುಖ ಮಾಡಿಕೊಂಡು ಹೇಳಿದೊಡನೆ ವಸಂತ ಒಂದು ದಿನ 'ನಡೀಲೇ ಬಸವಣ್ಣಿ ; ಒಂದಿನಾ ಧಾರವಾಡಕ್ಕ ಹೋಗಿಬರೂಣ. ಬಾಳ ದಿನಾ ಆತ್ಯು ಶಾರದೂರಾಗ[೧] ಅಡ್ಡಾಡದ...' ಎಂದು ತಾನೇ ಹೇಳಿದನು.

ವಸಂತನು ಅಪಕೀರ್ತಿಗೆ ಅಂಜಿ ಧಾರವಾಡವನ್ನು ಬಿಟ್ಟವನು ಹಳ್ಳಿಯ ರಾಜಕಾರಣದಲ್ಲಿ ಸೇರಿದಂತೆಲ್ಲ ಧಾರವಾಡವನ್ನು ಪೂರ್ಣ ಮರೆತು ಅಲ್ಲಿಯೇ ರಮಮಾಣನಾಗಿದ್ದನು. ಹಳ್ಳಿಯ ವ್ಯಸನಗಳು ಕಡಿಮೆಯವಲ್ಲ. ಎತ್ತು, ಹೊಲ, ಏರಾಟಕೆ ಇವುಗಳ ಆಸಕ್ತಿಯಲ್ಲಿ ವಸಂತನಿಗೆ ಹಳ್ಳಿಯನ್ನು ಬಿಟ್ಟು ಕಾಲುಕೀಳುವದೇ ಅಸಾಧ್ಯವಾಗಿತ್ತು. ಅಂಥಿಂಥ ಆಸೆಗಾಗಿ ಅವನು ಹಳ್ಳಿಯಿಂದ ಹೊರಗೆ ಬರಲು ಒಲ್ಲನು. ಆದರೆ ನಾಟಕದಲ್ಲಿ ರಾಜನಾಗಬಲ್ಲನಾದರೆ... ಅದರ ಮುಂದಿನ ಭಾಗ್ಯ ಇನ್ನೇನು? ಹಿಂದೆ ಒಮ್ಮೆ ನಾಟಕದಲ್ಲಿ ಪೂರ್ಣ ಆಸಕ್ತಿ ಹಾಕಿದಾಗ ಅಪ್ಪ ಬಂದು ಎಲ್ಲವನ್ನು ಸುಳ್ಳು ಮಾಡಿದ್ದನು. ಆ ಅಪೂರ್ಣ ಆಸಕ್ತಿ ಈಗ ಅನಾಯಾಸ

---

೧. ಶಹರ.

ಕೈಗೂಡುವಂತಿದ್ದರೆ ಏಕ ಕೈಹಾಕಿ ಯತ್ನ ಮಾಡಬಾರದು ? ಹೀಗೆ ಧಾರವಾಡಕ್ಕೆ ಬಂದು ಹೋಗಲು ವಸಂತ ಹುರಿಯಾದನು. ಆದರೆ ತಂದೆಗೆ ಗೊತ್ತಾದೀತು ಎಂಬ ಭಯದಿಂದ ಧಾರವಾಡಕ್ಕೆ ರಾತ್ರಿ ಮುಟ್ಟುವ ಬಸ್ಸಿನಿಂದ ಬಸವಣ್ಣಿಯೊಂದಿಗೆ ಬಂದನು. ಬಸವಣ್ಣಿ ನೇರವಾಗಿ ಅವನನ್ನು ರಾಘಪ್ಪನ ಮನೆಗೆ ಕರೆದೊಯ್ದನು.

ರಾಘಪ್ಪ ಅವನನ್ನು ಸ್ವಾಗತಿಸಿ ಮೊದಲು ಚಹಾ, ನಂತರ ಸಮೀಚೀನ ಊಟ, ಉಣಿಸಿದನು. ಗೋಡಂಬಿ, ಮನೂಕ, ಮುಂಬೈಯ ಪಿಸ್ತೆ ಹಾಗೂ ಹತ್ತೆಂಟು ಹಣ್ಣುಗಳ ಶೀಕರಣಿಯನ್ನು ತಿನ್ನುವಾಗ ವಸಂತರಾಯನ ಆದರ ವಿನಯಗಳು ಉಕ್ಕೇರಿದವು. ಮನೆಯಲ್ಲಿ ಶ್ರೀಮಂತಿಕೆ ಬೇಕಾದಷ್ಟು ; ಆದರೆ ಅದು ಗೋದೀಹುಗ್ಗಿಯ ಶ್ರೀಮಂತಿಕೆ. ವೇಣೂಬಾಯಿಯ ಅಡಿಗೆಯಲ್ಲಿ ಗುಣಕ್ಕಿಂತ ಪರಿಮಾಣ ಹೆಚ್ಚು. ರಾಘಪ್ಪನ ಮನೆಯಲ್ಲಿ ಫ್ರೂಟ್ ಸ್ಲಾಲಡ್ ಅನ್ನಿಸಿಕೊಳ್ಳುವ ಈ ಹೊಸಬಗೆಯ ಶೀಕರಣಿಯು ವಸಂತನ ಇಡೀ ದೇಹಕ್ಕೆ ವಿಶ್ರಾಂತಿಯನ್ನು ತಂದಿತು. ರಾಘಪ್ಪನಾದರೊ ಭೀಮಸೇನನಂತೆ ಆಗ್ರಹ ಮಾಡುವವನು ; ಒಂದು ಬಾರಿ ಆಡಿದ ಮಾತನಂತೆ ಇನ್ನೊಂದು ಬಾರಿ ಮಾತು ಇಲ್ಲ. ಅಪ್ಪನ ಮನೆಯಲ್ಲಿ ಊಟಕ್ಕೆ ಕುಳಿತಾಗ ಹೀಗೆ ನಗಲು, ಕೆಲೆಯಲು ಅಪ್ಪಣೆ ಇರುತ್ತಿರಲಿಲ್ಲ.

ಊಟವಾದಮೇಲೆ ಪಡಸಾಲೆಯಲ್ಲಿ ರಾಘಪ್ಪ ತನ್ನ ಚತುರ ಹರಟೆಯಿಂದ ರಾತ್ರಿ ಎರಡು ಘಂಟೆಯವರೆಗೆ ವಸಂತನನ್ನು ರಂಜಿಸಿದನು. ತಾನು ಆಸಕ್ತಿ ವಹಿಸಿದ ನಾಟಕ ಕಂಪನಿಗಳ ಚಿತ್ರವಿಚಿತ್ರ ಅನುಭವಗಳನ್ನು ರಸವತ್ತಾಗಿ ಬಣ್ಣಿಸಿದನು. ಸುಪ್ರಸಿದ್ಧ ಮೆಹಬೂಬಜಾನನಳ ಯಜಮಾನರು ಇವರೇ ಎಂಬ ವಿಷಯ ಗೊತ್ತಾದಂತೆ ವಸಂತನ ಆದರ ಇನ್ನೂ ಹೆಚ್ಚಿತು. ರಂಗಭೂಮಿಯ ಮೇಲೆ ಕನಸಿನಂತೆ ಬಂದು ಕಣ್ಮರೆಯಾಗುವ ಹ್ಯಾಂಡಬಿಲ್ಲಿನಲ್ಲಿ ಬರಿಯ ಹೆಸರಾಗಿ ತೋರುವ ಪ್ರಸಿದ್ಧ ನಟರು, ರಾಘಪ್ಪ ಕತೆ ಹೇಳಿದಂತೆಲ್ಲ ಜೀವಂತ ವ್ಯಕ್ತಿಗಳಾಗಿ ಮೆರೆಯತೊಡಗಿದರು. ಮೆಹಬೂಬಜಾನಳ ತಪ್ಪುಉಚ್ಚಾರಗಳನ್ನು ತಾನು ಸರಿಗೊಳಿಸಿದ ಕೆಲವು ಉದಾಹರಣೆಗಳಿಂದ ಪ್ರಸಿದ್ಧ ನಟರೂ ತಪ್ಪು ಉಚ್ಚಾರ ಮಾಡುತ್ತಿರುತ್ತಾರೆಂಬುದು ವಸಂತನಿಗೆ ಗೊತ್ತಾಯಿತು. ಬೇರೆ ಬೇರೆ ಊರಲ್ಲಿ ಆದ ಫಜೀತಿಗಳು, ತಂಬು ಹರಿದದ್ದು, ಕುಡುಕರನ್ನು ಹೊರಗೆ ಹಾಕಿಸಿದ್ದು, ಸುಳ್ಳು ಹೇಳಿ, ಹೆದರಿಕೆ ಹಾಕಿ ಲಾಯಸೆನ್ಸ ಪಡೆದದ್ದು, ಸ್ಟೇಜಿನಲ್ಲಿ ಪ್ರಾಂಪ್ಟ ಮರೆತ ಮೂಲಕ ಉಂಟಾಗುವ ಫಜೀತಿ, ಆಯತ ಸಮಯಕ್ಕೆ ನಟರು 'ಪಗಾರ ಕೊಡದಿದ್ದರೆ ನಾನು ಬಣ್ಣ ಹಚ್ಚಿಕೊಳ್ಳುವದಿಲ್ಲ' ಎಂದು ಹಟಹಿಡಿದು ಕುಳಿತುಕೊಳ್ಳುವ ಪರಿಪಾಠ, ಪಡದೆ – ರಂಗಸ್ಥಳಗಳ ಶೃಂಗಾರ, ಒಂದೇ, ಎರಡೇ? ಹೇಗಿದ್ದರೂ

ಸೊಗಸುಗಾರನಾದ ರಾಘಪ್ಪ ಇಂದು ಪ್ರಯತ್ನ ಪೂರ್ವಕ ಸೊಗಸು ಹುಟ್ಟಿಸಲು ಕುಳಿತಿದ್ದನು. ತನ್ನ ಇಡಿಯ ಜೀವನದ ಅನುಭವಗಳನ್ನು ವಸಂತನ ರಂಜನೆಗಾಗಿ ಕತೆ ಮಾಡಲು ಸಿದ್ಧನಾಗಿದ್ದನು. ಅವನ ಹಾಸ್ಯಕ್ಕೆ ನಕ್ಕುನಕ್ಕು ವಸಂತನ ಹೊಟ್ಟೆ ಚಿಟಗುಡತೊಡಗಿತ್ತು.

ರಾಘಪ್ಪನ ಈ ಎಲ್ಲ ಸವಿಗಾರಿಕೆಗೆ ಇದೀಗ ಇನ್ನೊಂದು ಆಂತರಿಕ ಪ್ರೇರಣೆ ಕಾರಣವಾಯಿತು. ವಸಂತರಾಯ ಸುಸ್ವರೂಪಿ. ಅವನನ್ನು ಪ್ರತ್ಯಕ್ಷ ಕಂಡೊಡನೆ ಕನ್ಯಾಪಿತೃವಾದ ರಾಘಪ್ಪನಿಗೆ ಫಕ್ಕನೆ 'ಇವನೇ ನಮ್ಮ ಶಾಂತಾಳಿಗೆ ಏಕೆ ವರನಾಗಬಾರದು ?' ಎಂಬ ವಿಚಾರ ಹೊಳೆಯಿತು. ವಸಂತ ತನ್ನ ಮೋಹಕ್ಕೆ ಹೆಚ್ಚು ಹೆಚ್ಚು ಒಳಗಾದಂತೆ ರಾಘಪ್ಪನಿಗೂ ಅವನನ್ನು ತನ್ನ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂಬ ನಿಶ್ಚಯ ಮನಸ್ಸಿನಲ್ಲಿ ಸ್ಥಿರವಾಗತೊಡಗಿತು. ಇಂತು ದೇಸಾಯರ ಮೇಲಿನ ದ್ವೇಷವು ಕೊನೆಗೆ ರಾಘಪ್ಪನಿಗೆ ಆಸ್ತಿವಂತ ಅಳಿಯನನ್ನು ದೊರಕಿಸಿಕೊಟ್ಟರೆ, ಅದರಲ್ಲಿ ತಪ್ಪೇನು ?...

'ನೀವು ಏನೋ ಹಳ್ಳ್ಯಾಗ ನಾಟಗಾ ಮಾಡಸತೀರ್‍ಯಂತಲಾ ?... ಹಳ್ಳೀ ಊರಾಗಿನ ನಾಟಕಾ ಅಂದರ ಮಾರವಾಡಿ ಮಂದಿ ರುಮಾಲ ಇದ್ದಹಂಗ. ಅದನ್ನ ಹೆಂಗ ಸುತ್ತಿದರೂ ನಡೀತದ.. ಆಗೋದು ಒಂದs. ಆ ಮಂದೀ ಬಾಯಿಗೆ ಎರಡು ಮಾತು ಹಚ್ಚೂದರೊಳಗ ಮಾಡಸೋ ಅವನದು ಇತಿಶ್ರೀ ಆಗತದ. ನಾಟಕ ಅಂದರ ಶಹರದ ಊರ ನಾಟಕನs ನಾಟಕ. ಒಂದು ಬಿಲ್ಲಿ ಚೆಲ್ಲೂ ಅಲ್ಲೆ ಎರಡು ಬಿಲ್ಲಿ ಚೆಲ್ಲಿದರ ನಾಟಕದ ಶೋಭಾನs ಬದಲು ಆಗತದ. ಮುಖ್ಯ ನೋಡಿರಿ... ಅನುಭವಿ ನಟರು ಇರಬೇಕು ; ಹೆಣ್ಣು ಪಾರ್ಟ ಹೆಂಗಸರs ಮಾಡತಕ್ಕದ್ದು... ಇದರಾಗ ನಾ ಗಂಧರ್ವ ಸುದ್ಧಾ ಇನ್ನೂ ಹಳ್ಳಿಯವನs ಅಂತೇನಿ ನೋಡಿರಿ.. ಉತ್ತಮ ಸಂಗೀತ ಬಲ್ಲವರು ಮೂರು ನಾಲ್ಕು ಮಂದಿಅರ ಇರಬೇಕು ; ಚೆಂದನ್ನ ಪಡದೆ ಇರಬೇಕು ; ಇಷ್ಟು ಇಡರಿ, ವಸಂತರಾವ್... ನೀವು ಎಂಟು ಎಂಟು ಆಣೆ ತಿಕೀಟು ಇಟ್ಟರೂ ಮಂದಿ ಓಡಿಬರತಾರ. ನಾಟಕ ಅಂದರ ರಂಗಿನ ಕೆಲಸ. ಭಗಸೀಲೆ ದುಡ್ಡು ಹಾಕಬೇಕು, ಸಲಕೀಲೆ ಎಳೀಬೇಕು, ಅಂದರ ನಾಟಕ. ಬರೆ ಚುರುಮುರಿ ಖಾರದಾಣಿ ತಿನಿಸಿ, ಹಲಗೀಮ್ಯಾಲ ಕುಣಿಸಿದರ, ದುಡ್ಡಿಗೆ ದುಡ್ಡು ಹೋತು, ಕೀರ್ತಿಗೆ ಕೀರ್ತಿ ಹೋತು...'

ವಸಂತ ಅವನ ಅಭಿಪ್ರಾಯಕ್ಕೆ ಸಂಪೂರ್ಣ ತಲೆದೂಗಿದನು. ಅದರ ಜೊತೆಗೆ ತನ್ನ ಮಟ್ಟಿಗೆ ತಿಳಿದ ಒಂದು ಸಂಶಯವನ್ನೂ ಎತ್ತಿದನು. 'ರಾಜಾನ ಪಾರ್ಟಹಾಕಲಿಕ್ಕೆ ಸ್ವಲ್ಪ ದೇಖಣಾ ಮನಶ್ಯಾ ಬೇಕಾಗತಾನಲ್ಲ, ರಾಘಪ್ಪಾ ?'

ವಸಂತನ ಮನಸ್ಸಿನ ಲವಲವಿಕೆ ವಾಸನೆ ಹಿಡಿದು ರಾಘಪ್ಪ ಹೇಳಿದನು : 'ಛೆ, ಅಂಥಾ ದೇಖಣಾ ಏನು ಬ್ಯಾಡ. ಬಣ್ಣದಲೆ ಎಂಥಾ ಒಂದು ಕತ್ತೀನ ಸುದ್ಧಾ ರಾಜಾನ್ನ ಮಾಡಲಿಕ್ಕೆ ಬರತsದ. ಆದರ ಸ್ವಲ್ಪ ಗಂಭೀರ ಧನಿ ಇರಬೇಕು ; ಎತ್ತರ ಬೇಕು ಆಳು ; ಸ್ವಚ್ಛ ಮಾತು ಆಡತಿರಬೇಕು ; ಮಿಶ್ರತೀತ ಅಭಿನಯ ಬರತಿರಬೇಕು.. ಅವೆಲ್ಲಾ ತಾವs ಬರೂದಿಲ್ಲ, ವಸಂತ ರಾಯಾ... ಕಲೀಬೇಕಾಗತದ. ಅನುಭವೀ ಮಂದೀ ಕಾಲು ಹಿಡೀಬೇಕು, ಹೇಳಿಸಿಗೋಬೇಕು. ಅದೂ ಒಂದು ಕಲಾ ಅದ. ತಿಶ್ರ ಅಭಿನಯಾ ಅಂದರ ಎಷ್ಟು ಕಠಿಣ ಅದs ಗೊತ್ತು ಅದs ಏನು?... ನಿನ್ನಂಥಾ ಹುಶಾರ ಹುಡುಗಗ ಕಲಿಸಲಿಕ್ಕೆ ಕನಿಷ್ಠ ಹದಿನೈದು ದಿವಸ, ದಿನಾ ಆರಾರು ತಾಸು ಪ್ರ್ಯಾಕ್ಟೀಸ್ ಕೊಡಬೇಕಾದೀತು... ಸುಮ್ಮನs ಅಲ್ಲ. ಇಷ್ಟೆಲ್ಲಾ ಇದ್ದು, ಮ್ಯಾಲ ಆಳು ದೇಖಣಾ ಇದ್ದರ ಅದಕ್ಕ ಭಂಗಾರಕ್ಕ ಬಣ್ಣಾ ಕೊಟ್ಟಹಂಗ ಆಗತದ. ಈಗ ನಿನ್ನದs ಉದಾಹರಣಿ ಎತ್ತಿ ತೊಗೊಳ್ಳೋಣ. ನೀ ನನ್ನ ಕಡೆ ಬಂದು, ನಾ ದೇಖಣಾ ಇದ್ದೇನಿ, ನನಗ ರಾಜಾನ ಪಾರ್ಟ ಕೊಡು ಅಂದರ, ನಾ ಸಾಫ ಒಲ್ಲೆ ಅಂತೇನಿ. ಆದರ ನಿನ್ನ ಬುದ್ಧಿಶಕ್ತಿ, ನಿನ್ನ ಕಲಿಯೋ ಲವಲವಿಕಿ ಇವನ್ನ ನೋಡಿದಮ್ಯಾಲ, ಆಗಲಿ, ಹುಡುಗ ದೇಖಣಾ ಇದ್ದಾನ, ಇಂದಿಲ್ಲ ನಾಳೆ ಕಲತs ಕಲೀತಾನ, ಅಂತ ನಾನು 'ಹೂಂ...' ಅಂತೂ ಅನಬಹುದು...'

'ನಾ ಕಲೀಲಿಕ್ಕೆ ತಯಾರ ಇದ್ದೇನಿ. ಆದರ ನನಗ ಬಂದೀತು ಅಂತ ಅನಸತದೇನು?'

'ಹಿಂಗ ಬಾರೋ, ಗೆಣೆಯಾ, ಕಲೀಲಿಕ್ಕೆ ತಯಾರ ಆಗು. ನಿನ್ನಂಥವ ತಯಾರು ಅದರ ಯಾವ ವಿದ್ಯಾ ಬರೋದಿಲ್ಲ? ನಾನೂ ನೀನೂ ಕೂಡಿ ಒಂದು ಅರ್ ಭಾಟ ಕಂಪನೀನ ಸುರುವು ಮಾಡಿಬಿಡೋಣ. ನಾಲ್ಕು ದಿವಸ ಇಲ್ಲಿ ಬಂದು ಹೋಗು ; ಅದರ ಸೊಗಸು ನಿನ್ನದು ನಿನಗs ತಿಳೀತದ. ಅಭಿನಯ ಅಂದರ ಅದೂ ಒಂದು ವಿದ್ಯಾ ಅದ. ಸಾಮಾನ್ಯ ಅಭಿನಯದಿಂದ ಮಿಶ್ರಕ್ಕ ಹೆಂಗ ಹೋಗಬೇಕು, ಮಿಶ್ರದಿಂದ ತಿಶ್ರಕ್ಕ ಹೆಂಗ ಹೋಗಬೇಕು, ತಿಶ್ರದಿಂದ ಸಾಮಾನ್ಯಕ್ಕ ಹೆಂಗ ತರಬೇಕು, ಒಂಟಿಹುಬ್ಬು ಯಾವಾಗ ಹಾರಿಸಬೇಕು, ಪ್ರವೇಶ ಹೆಂಗ ಮಾಡಬೇಕು, ಬಣ್ಣ ಕೆಡದಹಂಗ ಹಣಿಮ್ಯಾಲ ಹೆಬ್ಬಟ್ಟು ಹೆಂಗ ಒತ್ತಬೇಕು, ಮೀಶಿ ಬಿಚ್ಚದ ಹಂಗ ಮೀಶೀಮ್ಯಾಲ ಕೈ ಹೆಂಗ ಎಳೀಬೇಕು, ಕಣ್ಣಾಗ ನೀರು ಹೆಂಗ ತರಬೇಕು, ಮಂದೀ ತಲಿ ಒಡೀದ ಹಂಗ ಗದಾ ಹೆಂಗ ತಿರುವಬೇಕು.... ಇವೆಲ್ಲ ಸಣ್ಣ ಪುಟ್ಟ ಮಾತು ಆದರೂ ಒಂದಕ್ಕ ಒಂದು ಕೂಡಿದರ ಹನ್ನೊಂದು

ಆಗತಾವ, ಏನಪಾ..... ನೋಡು, ಇಷ್ಟೆಲ್ಲಾ ಅವ. ಇಂಥಾದಕ್ಕೆಲ್ಲಾ ನೀ ಬಹದ್ದೂರ ದೇಸಾಯ ಘಟ್ಟಿ ಇದ್ದರ....'

'ನೀವು ಡೊಂಬರಹಂಗ ಕುಣಿ ಅಂದರೂ ನಾ ತಯಾರ ಇದ್ದೇನಿ. ವಿದ್ಯಾಯಾರ ಮನೀದು !' ಎಂದ ವಸಂತರಾಯ, ಶಿಷ್ಯಸ್ನೇಹಂ ಭಾವದಿಂದ. ಆದರೆ ಒಳಗಿಂದೊಳಗೆ ತನ್ನನ್ನು ತಾನೇ ರಾಜಾ ಪಾತ್ರದಲ್ಲಿ ಚಿತ್ರಿಸಿಕೊಳ್ಳುತ್ತಾ .... ಮುಂಜಾನೆ ಚುಮುಚುಮು ಬೆಳಗಿನಲ್ಲಿ ಬಸವಣ್ಣಿಯೊಂದಿಗೆ ವಸಂತ ರಾಯ ಹೊರಟನು. ಚಹಾದ ಕಾಲಕ್ಕೆ ಶಾಂತಾಳ ಪ್ರಥಮ ದರ್ಶನವೂ ಆಯಿತು.

* * *

ಅಂದಿನಿಂದ ವಸಂತ ಗುಪ್ತವಾಗಿ ಧಾರವಾಡಕ್ಕೆ ವಾರಕ್ಕೆ ಒಂದೆರಡು ಬಾರಿ ಬಂದು ಹೋಗತೊಡಗಿದನು. ರಾಘಪ್ಪ ಅವನನ್ನು ಮದರ್ ವೇಂಕಾಸಾನಿ, ಹಿರೋಯಿನ್ ಸುಂದರಾಸಾನಿ, ಹಾಸ್ಯ ಶಿಖಾಮಣಿ ತುಳಜಾರಾಮ, ವ್ಹಿಲನ್ ರಾಜಶೇಖರಪ್ಪ, ಹೀರೋ ಮದ್ದುರಾವ ಡಬ್ಬಗಳ್ಳಿ, ಸಂಗೀತ ಮಾರ್ತಾಂಡ ಗಣೂಬುವಾ ಇಂಥವರ ಪರಿಚಯ ಮಾಡಿಕೊಟ್ಟನು. 'ಮುಂದಿನ ವರ್ಷ ದೇಸಾಯರು ಕಂಪನಿ ತಗೀತಾರ. ನೀವು ಬರಲಿಕ್ಕೆ ಒಲ್ಲೆ ಅನಬಾರದು' ಎಂದು ಮಾತಾನಾಡಿದನು. ಸುಂದ್ರಾಸಾನಿಯ ಮನೆಯಲ್ಲಿ ಚಿಕ್ಕ ಬೈಠಕ ಕೂಡ ಆಗಿ ವಸಂತರು ಆಕೆಯ ವೀಳ್ಯಕ್ಕೆ ಪ್ರತಿಯಾಗಿ ಐದು ರೂಪಾಯಿ ನೋಟನ್ನು ಆಕೆಯ ಕೈಗೆ ಹೊಡೆದನು. ಕಾಲಪೇಟಿಗಾರ ಚಂದ್ರಯ್ಯನ ಭೆಟ್ಟಿಯಾಗಿ, ಯಾವ ಕಂಪನಿಯ ಕಾಲಪೇಟಿ ಒಳ್ಳೆಯವು, ಅವುಗಳ ಬೆಲೆ ಏನು, ಅವುಗಳ ಗುಣಾವಗುಣಗಳು ಯಾವುವು, ಇದರ ಚರ್ಚೆಯಾಯಿತು. ಈ ಎಲ್ಲ ಗುಪ್ತವಿದ್ಯೆಗಳಲ್ಲಿ ಬೆಲೆಯಿಂದ ಮೊದಲುಮಾಡಿಕೊಂಡು ಶ್ರುತಿಯಲ್ಲಿಯ ಕೂದಲೆಳೆಯಷ್ಟು ದೋಷದವರೆಗೆ ರಾಘಪ್ಪನಿಗೆ ಮಾಹಿತಿ ಇದ್ದುದನ್ನು ಕಂಡಮೇಲೆ ವಸಂತರಾಯನಿಗೆ ತನ್ನ ಗುರುವಿನ ಬಗ್ಗೆ ಖಾತ್ರಿಯಾಯಿತು. ಬಣಕಾರ ಫಕೀರಪ್ಪನಲ್ಲಿ ಫ್ರಂಟ್ ಪಡದೆ, ರಸ್ತಾಸೀನು, ಅಡವೀ ಸೀನು ಇತ್ಯಾದಿ ಎಂಟು ಪಡದೆಗಳಿಗೆ ಕೂಡಿ ಒಟ್ಟು ಮಕ್ತೆ ಹಣ ಎಷ್ಟಾದೀತು, ನಾಲ್ಕೇ ಆದರೆ ಎಷ್ಟು, ಆರು ಆದರೆ ಎಷ್ಟು, ಇತ್ಯಾದಿ ವಿವರಗಳನ್ನು ಚರ್ಚಿಸಿ ಆಯಿತು. ಎಲ್ಲವನ್ನು ಲೆಕ್ಕಮಾಡಿ ನೋಡಲಾಗಿ ನಟರ ಪಗಾರ, ಅನ್ನ ಖರ್ಚು ಮುಂತಾದ ತಾತ್ಕಾಲಿಕ ಖರ್ಚು ಬಿಟ್ಟರೂ ಕೇವಲ ಸ್ಥಾವರಸಾಮಗ್ರಿಗೇ ಎರಡು ಸಾವಿರದ ಲೆಕ್ಕಕ್ಕೆ ಬರುವಂತಾಯಿತು. ಬರಿಯ ಟೋಪಣುಗಳೇ ಒಂದು ನೂರು ರೂಪಾಯಿಯನ್ನು ಸಹಜ ನುಂಗುವಂತೆ ತೋರಿದವು. ವಸಂತನಿಗೆ ಈ ಅಂಕಿಯನ್ನು ನೋಡಿ ತುಸು ಕಣ್ಣು ಬೆಳ್ಳಗಾದವು. ನೂರು ರೂಪಾಯಿಗಳಲ್ಲಿ

ಹಳ್ಳಿಯ ನಾಟಕವೆಲ್ಲ ಆಗಿ ಮೇಲೆ ಒಂದು ಊರ ಪ್ರಸ್ತಕ್ಕೆ ಸಾಕಾಗುವಂತಿತ್ತು. ಈಗ ಬರಿ ಟೋಪಣುಗಳೇ....

ಆದರೆ ರಾಘಪ್ಪ 'ನಿಮಗೇನು ಆಗೇದ, ದೇಸಾಯರಿಗೆ... ನಿಮ್ಮಷ್ಟು ಆಸ್ತಿ ನನಗ ಇದ್ದರ ಒಂದು ವರ್ಷದಾಗ ಅದರ ದುಪ್ಪಟ್ಟು ಫಳಿಸಿ ತೋರಿಸತಿದ್ದೆ !' ಎಂದು ಆಸೆ–ಹೇವಗಳನ್ನು ಹುಟ್ಟಿಸಿದನು.

ಮನೆಯಲ್ಲಿಯ ಕಾಳಿನ ಚೀಲ–ಹಗೆಗಳ ವಿಕ್ರಯದ ಸೂಚನೆಗೆ ರಾಘಪ್ಪನಲ್ಲಿ ಬಹಳ ಆಸಕ್ತಿ ಇದ್ದಂತೆ ತೋರಲಿಲ್ಲ. ಏಕೆಂದರೆ ಅದು ಎಷ್ಟು ಕೊಟ್ಟೀತು ?... ಸದ್ಯಕ್ಕೆ ಅದೂ ಸ್ವಲ್ಪ ಪ್ರಮಾಣದಿಂದ ಸಹಾಯ ಮಾಡೀತು, ನಿಜ. ಆದರೆ ಇಂಥ ಚಿಲ್ಲರೆ ಉಪಾಯಗಳು 'ಧಂದೆ'ದವರಿಗೆ ಶೋಭಿಸುವುದಿಲ್ಲ...

'ಅದರಿಂದನೂ ಬಂದಷ್ಟು ಬರಲಿ... ಆದರೆ ದೇಸಾಯರs, ಇನ್ನು ಮುಂದ ಹಿರೇರಿಂದ ಈ ಮಾತು ಗುಪ್ತ ಇಟ್ಟು ಎಷ್ಟು ದಿವಸ ಸಾಗತೀರಿ... ನೀವೂ ಈಗ ವಯಸ್ಸಿಗೆ ಬಂದಿರಿ.. ಅದರಾಗ ನೀನರ ಈಗ ಹಾಳುಮಾಡಲಿಕ್ಕೆ ನಿಂತಿಲ್ಲ. ಇದೂ ಒಂದು ಧಂದೆ ಅದ. ಭಂಡವಲ ಹಾಕಿ ಭಂಡವಲ ತಗಿಯೋ ಕೆಲಸ ; ಇದರಾಗ ಯಾರೂ ಏನೂ ನಾಚೋ ಕಾರಣ ಇಲ್ಲ.. ಆ ನಾಚೋ ದಿವಸ ಹೋದವು !.... ಇನ್ನ ಕೆಲವು ಜನರು ಹೆಸರು ಇಡತಾರ.. ಇಡಲಿ. ಆದರ ಈ ಧಂದೇದಾಗ ನೀವು ಎಷ್ಟು ಶುದ್ಧ ಆಚರಣಿ ಇಡತೀರಿ, ಎಷ್ಟು ಶಾಣೇತನದಲೆ ಕೆಲಸಾ ಸಾಗಿಸಿಕೊಂಡು ಹೋಗತೀರಿ ಅಷ್ಟು ಫಾಯದೇ ಅದ.... ಇಲ್ಲದ ಚಟಕ್ಕ ಬಿದ್ದು ಮಂದೀ ಕೈಯಾಗ ಬುದ್ಧೀ ಕೊಟ್ಟರೀ ಅಂದರ ಅವರು ನಿಮಗ ಚಂಡು ಹಾಕೇ ಹಾಕತಾರ.. ಅಡ್ಡಹಾದಿ ಬೀಳೋ ಅವ ಮನ್ಯಾಗ ಕೂತರೂ ಟಾಂಗಮೇಲs ಕೂಡತಾನ... ದೇಸಾಯರs, ನಾನೂ ಚಟ ಮಾಡಿದವ ಇದ್ದೇನಿ ; ಆದರ ನನಗ ಏನು ಆಗೇದs, ಹೇಳಪಾ... ಮನಶ್ಯಾ ಚಟ ಮಾಡಿದರೂ, ಚಟದ ಮ್ಯಾಲ ತೇಲತ ಇರಬೇಕು. ಒಳಗ ಮುಳುಗಿದೀ ಅಂದರ ಹೋತ್ಯು... ಅಷ್ಟು ವಿವೇಕ ಹಿಡಿದೀ ಅಂದರ ನೀನು ಯಾರಿಗೂ ನಾಚೂ ಕಾರಣ ಇಲ್ಲ, ಹೆದರೂ ಕಾರಣ ಇಲ್ಲ, ಗುಪ್ತ ಇಡೋ ಕಾರಣ ಇಲ್ಲ. ನಾಟಕ ಅಂದರ ಧಂದೆ ಅದ, ಚೈನೀ ಅಲ್ಲ... !'

ಈ ಅರ್ಥಗಾಂಭೀರ್ಯದ, ಅರ್ಥಸಲುಗೆಯ ಏಕವಚನ–ಬಹುವಚನ ಮಿಶ್ರಿತ ಉಪದೇಶದ ಅರ್ಥವನ್ನು ಮನಸ್ಸಿನಲ್ಲಿಯೇ ಮೆಲುಕಾಡಿಸುತ್ತ ವಸಂತ ರಾಯ ಊರ ಮೋಟರನ್ನು ಹಿಡಿದನು.

## ೨೮ : ಚಂಪಕ್ಕನ ಚಿಂತೆಗಳು

ಚಂಪಕ್ಕನಿಗೆ ಈಗೀಗ ದೀರ್ಘ ವಿಚಾರಗಳು ಬರತೊಡಗಿದವು. ಮನೆಗೆ ಮನೆಯೇ ಮೊದಲಿನ ಚೆಲ್ಲಾಟವನ್ನು ಕಳೆದುಕೊಂಡಂತಾಗಿತ್ತು. ಅದರ ಸೂಕ್ಷ್ಮ ಅನುಭವವನ್ನು ಬೇನೆಯಿಂದ ಸೂಕ್ಷ್ಮಗೊಂಡ ಮನಸ್ಸಿನವಳಾದ ಚಂಪಕ್ಕನಲ್ಲದೆ ಇನ್ನಾರು ಅಷ್ಟು ತೀಕ್ಷ್ಣವಾಗಿ ಅನುಭವಸಿಯಾರು ? ಆಕೆಗೀಗ ಮೂವತ್ತೇಳು ಮೂವತ್ತೆಂಟು ವರ್ಷ ವಯಸ್ಸು. ಕಳೆದ ಇಪ್ಪತ್ತು ವರ್ಷ ಸಂಸಾರ ಮಾಡಿದ ಅವಳು ಅನೇಕ ಸಂಗತಿಗಳನ್ನು ಕಂಡಿದ್ದಳು. ಮನೆಯಲ್ಲಿ ಸುಖವನ್ನೂ ಕಂಡವಳು; ದುಃಖವನ್ನೂ ಕಂಡವಳು. ಆದರೆ ಈಗ ತೋರುವ ಶೂನ್ಯತೆಯ ಅನುಭವ ಬೇರೆ ಬಗೆಯದು. ಆಕೆ ಗಂಡನನ್ನು 'ಕೊರಳ ಗೆಳತಿ'ಯಂತೆ ತೀರ ಸಾಮೀಪ್ಯದಿಂದ ಇಷ್ಟು ದಿವಸ ನೋಡುತ್ತ ಬಂದವಳು. ಅವನ ಮೊಗದ ಒಳಮೊಗವನ್ನು ಕಂಡವಳು; ಅವನ ಆನಂದಿಯಾದ ಮುಖದ ಹಿಂದೆ ನಡೆದ ಗುಪ್ತವಿಚಾರಗಳ ಸೇನೆಯನ್ನೂ ಕಂಡವಳು. ಅಂತೆಯೇ ಈಗ ತನ್ನ ಪತಿಯಲ್ಲಿ ಆಗುತ್ತಿದ್ದ ಬದಲಾವಣೆಗಳು ಇತರರ ಕಣ್ಣಿಗೆ ಸ್ಪಷ್ಟವಾಗಿ ತೋರದಿದ್ದರೂ ಅವಳಿಗೆ ಮಾತ್ರ ಒಮ್ಮೆಲೇ ಎದ್ದು ಕಾಣಿಸತೊಡಗಿದವು. ಅವನ ಚಿತ್ತಭಿತ್ತಿಗಳಲ್ಲಿ ಬಿಟ್ಟ ಬಿರುಕುಗಳನ್ನು ಸ್ಪಷ್ಟವಾಗಿ ಕಂಡ ಅವಳು ಮೂಕ ಅಳಲಿನಲ್ಲಿ ದೀನಳಾಗಿ ಕಾಲಕಳೆಯತೊಡಗಿದ್ದಳು. ಅವಳ ಪತಿ ಸೋಲತೊಡಗಿದ್ದನು.

ವೃದ್ಧಾಪ್ಯವೇ? ... ಊಟ ಕಡಿಮೆಯಾಗಿತ್ತು ; ಬಟ್ಟೆಬರೆಗಳ ಮೇಲೆ ಒಂದು ಕಣ ಧೂಳಿ ಕಂಡರೆ ಅವನ್ನು ಬಿಸುಟಿ ಬೇರೆ ಬಟ್ಟೆಗಳನ್ನು ಧರಿಸುವ ರಾಘಪ್ಪನ ಕಾಲರಿನ ಮೇಲೆ ಇದೀಗ ಹೆಬ್ಬೆರಳಿನ ಗುರುತುಗಳು ಮುಖಾಳವಾಗಿ ತೋರತೊಡಗಿದ್ದವು. ದೇಹವೇನೋ ಮೊದಲಿನಂತೆಯೇ ಸುದೃಢವಾದದ್ದೇ. ಆದರೆ ಮುಖದ ಮೇಲೆ ಆನಂದೀವೃತ್ತಿ ಮಾಯವಾಗಿತ್ತು. ಮುಖದ ರೇಖೆಗಳು ಸ್ಪಷ್ಟವಾಗಿ ಗೆರೆ ಕೊರೆದಂತೆ ಕಾಣಿಸತೊಡಗಿದ್ದವು. ಹೊರಗಿನವರಿಗೆ ಇವು ಯಾವುದೂ ಕಾಣಿಸಲಾರವು. ಆದರೆ ಚಂಪಕ್ಕನ ಕಣ್ಣಿಗೆ ಇವೆಲ್ಲ ಭಯದ ಪೂರ್ವಸೂಚನೆಗಳು. ನಾಳೆಯೇ ಹೊಟ್ಟೆಗೆ ಏನೂ ಇರದಿದ್ದರೂ ಇದ್ದ ಚಿಂತೆಯನ್ನೆಲ್ಲ ತಿಳಿಗೊಳಿಸಿ ಕ್ಷಣಾರ್ಧದಲ್ಲಿ ತೊಲೆಯಂತೆ ಮಲಗಿಕೊಳ್ಳುವ

ಪತಿರಾಯನ ಈಗಿನ ರಾತ್ರಿ ಎರಡು ಹೊಡೆದರೂ ನಿಟ್ಟುಸಿರು ಬಿಡುತ್ತ ನಿದ್ದೆ ಬಾರದ್ದಕ್ಕೆ ಹೊರಳಾಡುತ್ತಾನೆ.

ಇನ್ನೊಂದು ! ಈವರೆಗೆ ಚಂಪಕ್ಕನಿಗೆ ತನ್ನ ಗಂಡನ ಧೋರಣೆಗಳನ್ನು ತಿಳಿದುಕೊಳ್ಳಲು ಅವನ ಕೃತಿಗಳ ಮೇಲೆಯೇ ಅವಲಂಬಿಸಬೇಕಾಗುತ್ತಿತ್ತು... ಯಾವಾಗಲೂ ಮುಗುಳುನಗೆ ನಗುತ್ತಿದ್ದ ಪತಿ ಏನಾದರೂ ಕೆಲಸ ಮಾಡಿದಮೇಲೆಯೇ, ಓಹೋ ಇತ್ತ ಹೊರಟಿದೆ ಸವಾರಿ, ಎಂದು ಚಂಪಕ್ಕನಿಗೆ ತಿಳಿಯಬೇಕಾದುದು. ಆದರೆ ಈಗೀಗ ಪತಿಯು ತನ್ನಷ್ಟಕ್ಕೆ ತಾನೇ ಮಾತಾಡತೊಡಗಿದ್ದಾನೆ. ಮೊದಲು ಮನಸ್ಸಿನಲ್ಲಿ ನಡೆದ ವಿಚಾರಚಕ್ರ ಮುಖದಲ್ಲಿ ಯಾವ ಬದಲನ್ನೂ ತರುತ್ತಿರಲಿಲ್ಲ. ಈಗ ಮುಖವಂತೂ ಗುಂಗಿನಲ್ಲಿಯೇ ಇರುತ್ತದೆ ; ಆದರೆ ಅದರ ಜೊತೆಗೆ ಅವನ ತುಟಿಗಳು ಪುಟುಪುಟು ತಮ್ಮಷ್ಟಕ್ಕೆ ತಾವೇ ಅಸ್ಪಷ್ಟ ಮಾತು ಆಡುತ್ತವೆ ಆಗಾಗ್ಗೆ.

ಕೊನೆಗೊಮ್ಮೆ ಚಹಕ್ಕೆ ಕುಳಿತಾಗ ಸ್ಪಷ್ಟವಾಗಿಯೇ ಮಾತು ಬಂದವು : 'ನಾ ಜೀವ ಹೋದರೂ ಅವರ ಕೈಯ್ಯಾಗ ಸಿಗಲಾರೆ!'

ಶಾಂತಾ ಹಾಗೂ ಚಂಪಕ್ಕ ಇಬ್ಬರೂ ಆ ಮಾತು ಕೇಳಿದರು. ಚಂಪಕ್ಕ ಅಷ್ಟೊಂದು ಸುಸ್ಪಷ್ಟವಾದ ಮಾತನ್ನು ಕೇಳಿ ತನಗೆಯೇ ಗಂಡ ಏನನ್ನೋ ಹೇಳುತ್ತಿದ್ದಾನೆಯೆಂಬ ಕಲ್ಪನೆಯಿಂದ, 'ಯಾಕ?... ಏನು ಆತ್ಯ?' ಎಂದು ಕೇಳಿದಳು.

'ಏನು?' ಆಶ್ಚರ್ಯಗೊಂಡವನಂತೆ ರಾಘಪ್ಪ ಕೇಳಿದನು.

'ನೀನು ಏನೋ ಅನ್ನಲಿಲ್ಲ?' ಎಂಳು ಚಂಪಕ್ಕ.

'ನಾ ಎಲ್ಲೆ ಮಾತಾಡಿದೆ? ..... ಯಾಕ ಹುಚ್ಚುಗಿಚ್ಚು ಹಿಡಿದದೇನು?'

ಅಪ್ಪನ ಮಾತಿನ ಗುಡುಸಿಗೆ ಚಕಿತಳಾದ ಶಾಂತಾ ಸಕ್ಕರೆಯ ಡಬ್ಬಿಯನ್ನು ಕಪಾಟಿನಲ್ಲಿ ಇಡಲು ಎದ್ದವಳು ಹಾಗೆಯೇ ನಿಂತಿದ್ದಳು.

'ನೀ ಕೇಳಲಿಲ್ಲೇನ ಶಾಂತಾ?'

'ಹೌದು. ಯಾರದೋ ಕೈಯ್ಯಾಗೆ ಸಿಗಲಿಕ್ಕೆ ಒಲ್ಲೆ ಅಂತ ಅಂದ' ಎಂದು ಶಾಂತಾ ಸಾಕ್ಷಿ ಕೊಟ್ಟಳು.

ರಾಘಪ್ಪ ಸಂತಪ್ತನಾಗಿ 'ನಾ ಯಾರಿಗೂ ಏನೂ ಹೇಳಿಲ್ಲ..... ನೀನು ಹೆಚ್ಚು ಮಾತಾಡಿ ಸಿಟ್ಟಿಗೆಬ್ಬಿಸಬ್ಯಾಡ್ರಿ' ಎಂದು ಕೂಗಿದನು.

'ಯಾಕ? ಏನಾಗೇದ ನಿಮಗ ?..... ಹಿಂಗ್ಯಾಕ....'

'ಖಬರ್‌ದಾರ್ !' ......ರಾಘಪ್ಪ ಕಪ್ಪಿನಲ್ಲಿಯ ಚಹ ಗಟಗಟನೆ ಕುಡಿದು ಅಲ್ಲಿಂದ ಎದ್ದೇ ಹೋದನು.

ಅಂದಿನಿಂದ ಅವನ ಸ್ವಗತ ಮಾತುಗಳನ್ನು ಕೇಳಿಯೂ ಕೂಡ ಚಂಪಕ್ಕ ಕೇಳದವರಂತೆ ನಟಿಸತೊಡಗಿದಳು. ಈ ಸ್ವಾತಂತ್ರ್ಯದಿಂದ ರಾಘಪ್ಪನ ಸ್ವಗತಗಳು ಇನ್ನೂ ಬಲಿಯತೊಡಗಿದವು. ಪತಿ ವೃದ್ಧಾಪ್ಯದತ್ತ ಧಾವಿಸುತ್ತಿದ್ದಾನೆಯೆಂದು ಚಂಪಕ್ಕನ ಹೆದರಿಕೆ. ಒಂದು ದಿನ ಶಾಂತಾಳ ಎದುರು, 'ನಿನ್ನದೊಂದು ಲಗ್ನಾ ಮಾಡಿಕೊಟ್ಟಮ್ಯಾಲ, ಅವರಕಿಂತಾ ಮೊದಲ ನನ್ನ ಕಣ್ಣು ಮುಚ್ಚಸಪಾ ದೇವರs, ಅಂತ ಬೇಡಿಕೋತೇನಿ ನೋಡು, ಶಾಂತಿ. ಇನ್ನ ಬಹಳ ದಿವಸ ನಾ ಬದಕಲಿಕ್ಕೆ ಒಲ್ಲೆ. ಹೋಗಿದ್ದರ, ನಿನ್ನ ಹುಟ್ಟs ಹೋಗಿ, ಇಷ್ಟೊತ್ತಿಗೆ ಹದಿನೈದು ಐಧಾನವಮಿ[೧] ಕಂಡಿರತಿದ್ದೆ. ಏನು ಮಾಡಲಿ?' ಎಂದು ಕಣ್ಣೀರು ತೆಗೆದಳು.

ಇದು ಒಂದು ಚಿಂತೆಯಾಯಿತು. ಇನ್ನೊಂದು... ತಾನು ಈ ವಯಸ್ಸಿನಲ್ಲಿ ಗರ್ಭಿಣಿಯಾದರೆ?...

ಮೊದಲನೆಯದು, ಮರಣದಯ, ನೋವಿನ ಭಯ ಆದರೆಬೇಸರದಲ್ಲಿಯೇ ಎಲ್ಲ ಜೀವನವನ್ನು ಕಳೆದವಳು ಬೇಸರದಲ್ಲಿಯೇ ಎಲ್ಲವನ್ನೂ ಸ್ವೀಕರಿಸಲು ಸಿದ್ಧಳಾಗಿದ್ದಳು... ಡಾಕ್ಟರರು ಇಷ್ಟು ಕಟ್ಟುನಿಟ್ಟಾಗಿ ಹೇಳಿದ್ದಾರೆಯೆಂದ ಮೇಲೆ ಮರಣ ಖಂಡಿತ. ಅಥವಾ ಆ ಮಾತಿಗೆ ಇದೀಗ ಹದಿನೈದು ವರ್ಷ ದಾಟಿದವು, ತಾನು ಬದುಕಲೂಬಹುದು. ಆದರೆ ಗಂಡು ಹುಟ್ಟೀತೆಂಬ ನಿಯಮವೇನು?... ಒಂದು ವೇಳೆ ಗಂಡೇ ಹುಟ್ಟಿದರೂ, ತಾನು ಸತ್ತರೆ... ಆಸೆಪಟ್ಟು ಪಡೆದ ಗಂಡು ಮಗನನ್ನು ಪರದೇಶಿಯಾಗಿ ಮಾಡಿ ತಾನು ಸತ್ತರೆ? ಇಂಥ ಮರಣ–ಜೀವನಗಳ ಅತಿವಾಸ್ತವವಾದ ವಿಚಾರಗಳು ಆಕೆಗೆ ತಲೆಭಾರವಾಗಿ ಕೊನೆಗೆ ಅದೆಲ್ಲ ಚಿಂತೆ ಮಕ್ಕಳನ್ನು ಬಯಸಿ ನಿತ್ಯ ಬರುವ ಪತಿಗೆ, ಅದರ ಹೊಣೆ ತನ್ನದಲ್ಲ – ಎಂದುಕೊಂಡು ಸುಮ್ಮನಾಗುವಳು. ಆದರೆ ಮತ್ತೆ ಅವೇ ವಿಚಾರಗಳು ಆಕೆಯ ಚೇತನೆಯನ್ನೆಲ್ಲ ಮುಸುಕಿ ತಾಂಡವವಾಡುವವು.

ಇನ್ನೂ ಒಂದು ಚಿಂತೆ. ಮಕ್ಕಳಾಗದಿದ್ದ ರತ್ನಾಳ ಎದುರು ವೃದ್ಧೆಯಾದ ತಾನು ಗರ್ಭಿಣಿಯಾಗಿ ಆಕೆಯ ಮನಸ್ಸಿಗೆ ನೋವು ಉಂಟುಮಾಡಬೇಕು ಇಷ್ಟೇ ಅಲ್ಲ, ಆಕೆಯ ಬಾಯಲ್ಲಿಯ ತುತ್ತು ಕಸಿದುಕೊಳ್ಳುವದಕ್ಕಾಗಿ ತಾನು ಗರ್ಭಿಣಿಯಾಗಬೇಕು. ಅಯ್ಯೋ, ಅಯ್ಯೋ....

ಭಾರತ–ಭಾಗವತಗಳನ್ನು ತುಸುಮಟ್ಟಿಗೆ ಓದಿಕೊಂಡಿದ್ದ ಚಂಪಕ್ಕನಿಗೆ ತನ್ನ ಪತಿಯು ಈ ದೀರ್ಘಸೂತ್ರಗಳಿಂದ ಅಧೋಗತಿಗೆ ಹೋಗುವವನಲ್ಲಾ,

---

೧. ಅವಿಧವಾನವಮಿ ಶ್ರಾದ್ಧ.

ಎಂಬ ಹೆದರಿಕೆ. ಆದರೆ ಈ ವಿಷಯದಲ್ಲಿ ಹೆಂಡತಿಯಾಗಿ ತಾನು ಏನು ಮಾಡಿಯಾಳು?

ಮೆಹಬೂಬಜಾನಳ ಜೊತೆಗೆ ಸಂಬಂಧವಿದ್ದ ಸುದ್ದಿ ಗೊತ್ತಾದಾಗ ಚಂಪಕ್ಕನಿಗೆ ದುಃಖವಾದರೂ ಅದನ್ನು ಸಹಿಸುವ ತ್ರಾಣವಿದ್ದಿತು. ಆದರೆ ಈಗ ಬಂದ ನೈತಿಕ ಪ್ರಶ್ನೆಯೇ ಬೇರೆ. ಇದೆಲ್ಲದುದರ ಜೊತೆಗೆ ಅಭೇದ್ಯ ಕೋಟೆಯಂತಿದ್ದ ಪತಿರಾಯನು ತನ್ನ ಎದುರಿಗೆಯೇ ಹೋಳಾಗುತ್ತಿದ್ದುದನ್ನು ಕಂಡು ಅವಳ ಕರುಳು ಮಿಡುಕಿ ಮಿಡುಕಿ ಸಾಯತೊಡಗಿತ್ತು... ಅದು ದಿನದ ಸಾವು.

ಬಿರುಕು ಬಿಟ್ಟ ಮನೆಯನ್ನು ನೋಡುವಾಗ ಯಾವ ನೋವು ಆಗುತ್ತದೆಯೋ ಅಂಥದೇ ನೋವು, ಅದರ ಸಹಸ್ರಪಟ್ಟು ಪ್ರಮಾಣದಲ್ಲಿ ಒಬ್ಬ ಖಂಬೀರ ಮನುಷ್ಯನು ಹಾಳಾಗತೊಡಗುವದನ್ನು ನೋಡುವಾಗ ಉಂಟಾಗುತ್ತದೆ. ಅಂತೆಯೇ ಕಾಳಿದಾಸನು ಅಜರಾಜನ ಶೂನ್ಯವೃದ್ಧಾಪ್ಯವನ್ನು ವರ್ಣಿಸುವಾಗ 'ಪ್ಲಕ್ಷಪ್ರರೋಹ ಇವ ಸೌದತಲಂ ಬಿಭೇದ' (ಆಲದ ಗಿಡವು ಅರಮನೆಯ ಗೋಡೆಯಲ್ಲೂ ಬಿರುಕು ಬಿಡುಸುವಂತೆ ಅಜನ ಹೃದಯವನ್ನು ಇಂದುಮತಿಯ ವಿರಹವು ಹೋಳುಮಾಡಿತು) ಎಂದು ವರ್ಣಿಸಿದ್ದಾನೆ.

* * *

ಚಂಪಕ್ಕನ ಚಿಂತೆಗಳು ಇಷ್ಟಕ್ಕೇ ಮುಗಿಯಲಿಲ್ಲ. ಇನ್ನೊಂದು ಚಿಂತೆ ಶಾಂತಾಗಾಗಿ.

ಶಾಂತಾಳಾದರೋ ದಿನದಿನಕ್ಕೆ ಎತ್ತರಳಾಗುತ್ತ ಗುಲಾಬಿಯ ಮೊಗ್ಗೆಯಂತೆ ತೆಳುವಾಗಿಯೂ ಪುಷ್ಟವಾಗಿಯೂ ಕಾಣತೊಡಗಿದ್ದಳು. ರತ್ನಾಗಿಂತ ಆಕೆ ಅರ್ಧ ಫೂಟು ಎತ್ತರವಾಗಿರಬೇಕು. ಆಕೆ ಹದಿನೈದೇ ವರ್ಷಕ್ಕೆ ಇಷ್ಟು ಸುಂದರಿಯಾದಾಳೆಂದು ಯಾರಿಗೂ ಅನಿಸಿರಲಿಲ್ಲ. ತಂದೆತಾಯಿಗಳು ಇಬ್ಬರೂ ಚೆಲುವರು. ಆದರೆ ಶಾಂತಾಳ ವಿಪುಲಯೌವನದ, ಗೌರವರ್ಣದ, ದೀರ್ಘದೇಹಯಷ್ಟಿಯ ಬಗೆಯೇ ಬೇರೆ. ಆಕೆಯನ್ನು ಕಂಡವರು 'ಇವಳ ಕೈಹಿಡಿಯುವವನು ಭಾಗ್ಯವಂತನೆ !' ಎಂದುಕೊಳ್ಳುವರು. ತನ್ನ ಮಗಳ ಸೌಂದರ್ಯದ ಬಗ್ಗೆ ಸಾಕಷ್ಟು ಅಭಿಮಾನವಿದ್ದರೂ ಕೂಡ ತಾತ್ವಿಕವಾಗಿ ಚಂಪಕ್ಕನಿಗೆ ಎಲ್ಲ ಸೌಂದರ್ಯದ ವಿಷಯಕ್ಕೂ ಒಳಗಿಂದೊಳಗೆ ಸಂಶಯ, ಭಯ. ತಾನೂ ಚೆಲುವೆ ; ತನ್ನ ಚೆಲ್ವಿಕೆಗಾಗಿ ಕಷ್ಟಪಟ್ಟವಳು. ಅದಕ್ಕಾಗಿ ಒಮ್ಮೆ ಕೂಡ ಅಪ್ಪಿತಪ್ಪಿ ಶಾಂತಾಳ ಎದುರಿಗಾಗಲೀ, ಪರೋಕ್ಷದಲ್ಲಾಗಲೀ ಅವಳ ಸೌಂದರ್ಯವನ್ನು ಹೊಗಳಿರಲಿಲ್ಲ.

ಆದರೆ ಚಲುವೆಯಾದ ಮಗಳೆಂದು ಕಾಜಿನ ಕಪಾಟಿನಲ್ಲಿ ಇಡಲು ಆಗುತ್ತದೆಯೆ? ತಾಯಿ ಅವಳಿಗೆ ಈ ವಿಷಯಕ್ಕೆ ಎಷ್ಟು ಅಹಂಕಾರವನ್ನು ಕಡಿಮೆಗೊಳಿಸಲೂ ಯತ್ನಿಸಿದರೂ, ಸ್ವಲ್ಪವಾದರೂ ಹೊರಗಿನ ವಾತಾವರಣದ ಪರಿಣಾಮವಾಗಿ ಶಾಂತಾಳಲ್ಲಿ ಅದು ಉತ್ಪನ್ನವಾಗುವದು ಸ್ವಾಭಾವಿಕ.

ಶಾಂತಾ ರತ್ನಾಗಿಂತ ಒಂದೆರಡು ಬುಕ್ಕು ಹೆಚ್ಚು ಕಲಿತವಳು. ಆದರೆ ಎಷ್ಟು ಕಲಿತವಳು ಎಂಬುದು ಮಹತ್ವದ ವಿಷಯವಲ್ಲ. ಯಾವಾಗ ಕಲಿತಳು ಎಂಬುದು ಹೆಚ್ಚು ಮಹತ್ವದ ವಿಷಯ.

ರತ್ನಾಳ ಶಾಲಾದಿನಗಳಿಗೂ ಶಾಂತಾಳ ಶಾಲಾದಿನಗಳಿಗೂ ಅಜಗಜಾಂತರ – ಐದೇ ವರ್ಷಗಳ ಅಂತರವಾದರೂ ಸಾಮಾಜಿಕ ನಡತೆಗಳು ಬದಲಾವಣೆಯಾಗಿದ್ದವು. ಉಪ್ಪಿನ ಸತ್ಯಾಗ್ರಹದ ವೇಳೆಗೆ ಶಾಲೆ ಕಾಲೇಜುಗಳಲ್ಲಿ ಹರತಾಳ ನಡೆದಾಗ ತನ್ನ ಶಾಲೆಯ ಚಟುವಟಿಕೆಗಳಲ್ಲಿ ಶಾಂತಾ ಭಾಗವಹಿಸುತ್ತಿದ್ದಳು. ಇಡೀ ಶಾಲೆಯಲ್ಲಿ ವಿದ್ಯಾರ್ಥಿನಿಯರು ಹನ್ನೆರಡು ಜನರು. ಅದರಲ್ಲಿ ಕೆಲವರು ಹದಿನಾರು ವರ್ಷ ಮೀರಿದವರಾಗಿದ್ದ ಮೂಲಕ ಅವರು ನಾಚಿಕೆಯಿಂದ ಮೆರವಣಿಗೆ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಛೆಪಡುತ್ತಿರಲಿಲ್ಲ. ಇನ್ನುಳಿದವರು ಮನೆಯಿಂದ ಬಹಳ ಹಳೆಯ ಕಾಲದ ವಾತಾವರಣದಲ್ಲಿ ಬೆಳೆದವರು; ತಾವು ಹೀಗೆ ಏನಾದರೂ ಮಾಡಿದರೆ ತಮ್ಮ ತಂದೆ–ತಾಯಿಗಳು ತಮ್ಮನ್ನು ಶಾಲೆ ಬಿಡಿಸಿಬಿಟ್ಟಾರೆಂಬ ಭಯದಿಂದ. ಇನ್ನುಳಿದವರೂ ಭಾಗವಹಿಸುತ್ತಿರಲಿಲ್ಲ. ಆದರೆ ಶಾಂತಾಗೆ ಮನೆಯಲ್ಲಿ ಸ್ವಾತಂತ್ರ್ಯವಿತ್ತು. ಆಗ ವಯಸ್ಸೂ ಚಿಕ್ಕದು. ಇನ್ನೂ ಹನ್ನೆರಡು ವರ್ಷದ ಹಸುಳೆ. ಆದ್ದರಿಂದ ಈ ಚಳವಳಿಯಲ್ಲಿ ಭಾಗವಹಿಸಲು ನಾಚಿಕೆ ಅನಿಸಲಿಲ್ಲ. ಆಕೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಇನ್ನೋರ್ವ ಹುಡಿಗೆ, ಹೀಗೆ ಇಬ್ಬರೇ, ವಿದ್ಯಾರ್ಥಿಗಳ ಮೆರವಣಿಗೆಯಲ್ಲಿ ಎಲ್ಲಕ್ಕೂ ಮುಂದೆ ಕೈಯಲ್ಲಿ ಝೇಂಡಾಗಳನ್ನು ಹಿಡಿದುಕೊಂಡು, 'ಝೇಂಡಾ ಊಂಚಾ...' ಹಾಡುತ್ತ, ಜಯ ಜಯಕಾರ ಮಾಡುತ್ತ, ದೊಡ್ಡ ರಸ್ತೆಗಳಲ್ಲಿ ಅಡ್ಡಾಡಿದ್ದರು. ಸಭೆಗಳಲ್ಲಿ ಯಾವುದಾದರೂ ಭಾಷಣಕಾರನು 'ನಮ್ಮ ಚಳವsಳದಾಗ ಸ್ತ್ರೀಯರೂ ಭಾಗವಹಿಸಿ ಸ್ವಾತಂತ್ರ್ಯಕ್ಕಾಗಿ ಲಢಾಸತಾರ. ಇದನ್ನ ನೋಡಿ...' ಇತ್ಯಾದಿ ಮಾತಾಡುತ್ತಿರಲು ಶಾಂತಾ ಇದೆಲ್ಲ ತನ್ನದೇ ಹೊಗಳಿಕೆಯೆಂದು ಸಂತೃಪ್ತಳಾಗಿರುತ್ತಿದ್ದಳು.

ಇಂತು ಕಾಲಕ್ಕನುಸಾರವಾಗಿ ತನ್ನ ಚಿಕ್ಕ ವಯಸ್ಸಿನಲ್ಲಿಯೇ ಸ್ವಾತಂತ್ರ್ಯವನ್ನು ಉಂಡ ಶಾಂತಾ ಮನೆಯಲ್ಲಿ ರತ್ನಾಳಷ್ಟು ಬಾಗಿ ನಡೆಯುವದು ಸಾಧ್ಯವೇ

ಇರಲಿಲ್ಲ. ಇನ್ನೊಂದು ಎರಡು ವರ್ಷಗಳಲ್ಲಿ ಶಾಂತಾ ಒಮ್ಮೆಲೇ ಬೆಳೆದಳು. ಪುಟ್ಟ ತರುಣಿಯಾಗಿ ತೋರತೊಡಗಿದಳು. ಪರಕಾರದ ಬದಲು ಸೀರೆ ಧರಿಸತೊಡಗಿದಳು. ಚೆಲುವೆಯೂ ಆದಳು. ನೆರೆಹೊರೆಯವರು, ಗೆಳತಿಯರು, ಆಕೆಯನ್ನು ಹೊಗಳಲೂ ತೊಡಗಿದರು. ಸುದೈವದಿಂದ ಮನೆಯಲ್ಲಿ ತಾಯಿ ಈ ವಿಷಯಕ್ಕೆ ತೀರ ಅಲಕ್ಷ್ಯವನ್ನು ತೋರಿಸಿದ ಮೂಲಕ ಶಾಂತಾ ದುರಹಂಕಾರಿಯಾಗಲಿಲ್ಲ. ಆದರೂ ಒಂದು ಪ್ರಸಂಗವು ಮಾತ್ರ ಆಕೆಯ ಮನಸ್ಸನ್ನೇ ಬದಲಿಸಿತು. ಅವಳಲ್ಲಿ ಆತ್ಮಪ್ರತೀತಿಯನ್ನು ತಂದು ಕೊಟ್ಟಿತು. ಆಕೆಯ ಹುಡುಗತನವನ್ನು ಕಳೆದು ಪ್ರೋಕ್ತತನ[೧]ವನ್ನು ಕಲಿಸಿಕೊಟ್ಟಿತು.

ಆಕೆಯ ವರ್ಗಕ್ಕೆ ಕಲಿಸುತ್ತಿದ್ದ ಓರ್ವ ತರುಣ ರಾಷ್ಟ್ರೀಯ ಮಾಸ್ತರನು ಶಾಂತಾಳ ಸೌಂದರ್ಯದಿಂದಲೂ ಆಕೆಯ ಸ್ವದೇಶಾಭಿಮಾನಪರ ನಿಬಂಧಗಳಿಂದಲೂ ಮನಸೋತು ವಿವಾಹೇಚ್ಛುವಾದನು. ಒಂದು ದಿನ ಯಾವ ವಿಚಾರ ಮಾಡದೆ, ಯಾರನ್ನೂ ನಡುವೆ ಹಾಕದೆ, ತಾನೇ ಅವಳ ಪ್ರೋಗ್ರೆಸ್ ರಿಪೋರ್ಟಿನೊಡನೆ ಅನಾವಶ್ಯಕವಾಗಿ ರಾಘಪ್ಪನ ಮನೆಗೆ ಬಂದು, ಅವಳ ಅಭ್ಯಾಸವನ್ನು ಕೊಂಡಾಡಿ, ಅವಳ ಬಗ್ಗೆ ಬೇಡಿಕೆ ಹಾಕಿದನು. 'ಕನಿಷ್ಠ ಭಾರತಾಂಬೆಯ ಹಿತದ ದೃಷ್ಟಿಯಿಂದಾದರೂ....' ಎಂದು ಅಂಗಲಾಚಿದನು, ಕಂಬನಿ ಮಿಡಿದನು. ಆದರೂ ರಾಘಪ್ಪ ನಿರಾಕರಿಸಿ, 'ಹೆಡ್‌ಮಾಸ್ತರರಿಗೆ ರಿಪೋರ್ಟ ಮಾಡತೇನಿ' ಎಂದು ಹೆದರಿಸಲಾಗಿ, ಮರ್ಯಾದೆಗೆ ಅಂಜಿ, ಬೇಗನೆ ರಾಜೀನಾಮೆ ಕೊಟ್ಟು ಬೇರೆ ಊರಿಗೆ ಓಡಿಹೋದನು ಇದೆಲ್ಲ ಯಾವ ಮಧ್ಯಸ್ಥರೂ ಇಲ್ಲದೆ ನಡೆದುಹೋದ ಕಾರಣ ಊರಲ್ಲಿ ವಿಶೇಷ ಊಹಾಪೋಹಗಳು ಆಗಲಿಲ್ಲ. ಆದರೆ ತನಗಾಗಿ ಒಬ್ಬ ಮಾಸ್ತರರು ನೌಕರಿ ಕಳಕೊಂಡರೆಂಬ ವಿಚಾರದಿಂದ ಶಾಂತಾಳಲ್ಲಿ ಯಾವಾಗಾದರೊಮ್ಮೆ ಅಹಂಕಾರ ಸುಳಿದುಹೋಗುವದು. ಆಕೆ ರತ್ನಾಳಂತೆ ಪೂರಾ ತಾಯಿಯ ಅಂಕೆಯಲ್ಲಿ ಇರಲಿಲ್ಲ. ತಾಯಿಯೊಡನೆ ಆಕೆಗೆ ಒಂದು ಸಹಜ ಸಖ್ಯವೇ ಹೊರತು ರತ್ನಾಳಂತೆ ತಾಯಿತಂದೆಗಳೆಂಬ ವಿಶೇಷ ಭಾವನೆ ಕಡಿಮೆ. ಜೊತೆಗೆ ಚಂಪಕ್ಕನೂ ಹೆಚ್ಚು ಅಶಕ್ತಳಾಗಿದ್ದ ಮೂಲಕ ಶಾಂತಾ ಮನೆತುಂಬ ಅಡ್ಡಾಡಿ ತುಸುಮಟ್ಟಿಗೆ ಯಜಮಾನತಿಯೂ ಆಗಿದ್ದಳು.

ಶಾಂತಾಳನ್ನು ವಸಂತನಿಗೆ ಕೊಡಬೇಕೆಂಬ ರಾಘಪ್ಪನ ವಿಚಾರದ ವಾಸನೆ ಚಂಪಕ್ಕನಿಗೆ ಎರಡೇ ದಿನಗಳಲ್ಲಿ ಹೊಳೆಯಿತು. ಅದರಿಂದ ಅವಳು

---

೧. ನಡತೆಯಲ್ಲಿ ಗೌರವ.

ಒಳಗಿಂದೊಳಗೇ ಹಿಗ್ಗಿದಳು. ಶಾಂತಾಳ ರೂಪವೇ ಅಂಥದು. ಇನ್ನು ವಸಂತರಾಯನ ತಂದೆ ಒಪ್ಪಲಿಕ್ಕಿಲ್ಲ. ಆದರೆ ಅದು ತನ್ನ ವಿಷಯವಲ್ಲ. ಹತ್ತು ಸುಳ್ಳು ಆಡಿಯಾದರೂ ತನ್ನ ಪತಿ ಆ ಕಾರ್ಯವನ್ನು ನಿರ್ವಹಿಸುವನು. ಜೊತೆಗೆ ಇನ್ನೊಂದು ಆನಂದದ ವಿಷಯ. ವಸಂತ ಆಸ್ತಿವಂತ. ಸುದೈವದಿಂದ ತಾನು ಗರ್ಭಿಣಿಯಾಗದಿದ್ದರೆ ವಸಂತನೇನೂ ತಮ್ಮ ಪುಟ್ಟ ಆಸ್ತಿಯ ಆಸೆಗಾಗಿ ಕಿಟ್ಟಿಗೆ ಅಡ್ಡ ಬಂದು ರತ್ನಾಳ ತುತ್ತನ್ನು ಕಸಿದುಕೊಳ್ಳಲಾರ... ಇದೇ ವಿಚಾರದಿಂದ ಅವಳಿಗೆ ತುಸು ಸಮಾಧಾನವಾಗಿತ್ತು.

ಆದರೆ ಚಂಪಕ್ಕನ ಕಷ್ಟಬಟ್ಟ ಮನಸ್ಸಿಗೆ ಇಲ್ಲದ ಸಂಶಯ. ವಸಂತ ಸಿರಿವಂತ. ಕಿಟ್ಟಿ ಬರುವಾಗ ಚಂಪಕ್ಕನಿಗೆ ಭಯವಿರಲಿಲ್ಲ. ಆದರೆ ರಾಘಪ್ಪನ ಅನುಜ್ಞೆಯಂತೆ ವಸಂತ ಮನೆಗೆ ಬರಹೋಗತೊಡಗಲು ಏಕೋ ಚಂಪಕ್ಕನಿಗೆ ಅಸ್ವಸ್ಥ. ಇಂಥ ಸಿರಿವಂತ ತಮಗೆ ದಕ್ಕಿಯಾನೆ ?... ಅವನ ಬಗ್ಗೆ ತಾನು ವಿಶ್ವಾಸ ತಳೆಯಬಲ್ಲೆನೇ?...

* * *

ಚಂಪಕ್ಕನ ವಿವಾಹವು 'ಧಾರವಾಡದಲ್ಲಿಯ ಪ್ರಥಮ ಪ್ರೇಮವಿವಾಹ !' ಎಂದು ಒಂದು ತಲೆಮಾರಿನವರೆಗೂ ಹೆಸರಾಗಿತ್ತು. ಜನರು ಚಂಪಕ್ಕನ ಬಗ್ಗೆ ತೀರ ತಪ್ಪು ತಿಳಿವಳಿಕೆ ಮಾಡಿಕೊಂಡಿದ್ದರು. ಹೆರವರ ವಿಷಯದಲ್ಲಿ ಶಾರ್ಜ್ಗರವನಷ್ಟು ನಿಷ್ಠುರವಾಗಿ ಮಾತಾಡುವದು ಜನತೆಯ ಸ್ವಭಾವ. ಆಕೆಯ ಮರ್ಯಾದೆವಂತ ಜೀವನ ಕಂಡು ಕೆಲವು ಮುಪ್ಪಾನ ಹುಲುಜನರು 'ಯಾರೋ ಮುಪ್ಪಾಗಿ ಜೋಗತಿ' ಎಂದೂ ಆಡಿಕೊಂಡದ್ದುಂಟು. ಆದರೆ ಚಂಪಕ್ಕನ ಸುಸಂಸ್ಕೃತ ಮನಸ್ಸು ಎಲ್ಲದರಿಂದಲೂ ಪಾಠಕಲಿತಿತ್ತು. ಕೇವಲ ಕ್ಷಣದ ಅಜಾಗರೂಕತೆಗಾಗಿ ತಾನು ತನ್ನ ಕೌಮಾರ್ಯವನ್ನು ಕಳೆದುಕೊಂಡದ್ದು, ಅದರಿಂದ ಸಮಾಜದಲ್ಲಿ ಉಂಟಾದ ಕೋಲಾಹಲ, ತಾಯಿ ಬಾವಿ ಹಾರಿಕೊಳ್ಳಲು ಹೊರಟದ್ದು, ತನ್ನ ಪತಿ ಮೊದಲ ಬಾರಿ ತನ್ನನ್ನು ನಿರಾಕರಿಸಿದ್ದು, ತನಗಾದ ಭಯಂಕರ ಅನುತಾಪ, ತಾಯಿ ನವೆದು ಕೊನೆಗೆ ಜೀವ ನೀಗಿದ್ದು, ಇವೆಲ್ಲವುಗಳನ್ನು ಕಂಡು ಉಂಡ ಅವಳ ಮನಸ್ಸಿಗೆ ಮಕ್ಕಳ ಬಗ್ಗೆ ತಲೆ ತಿರುಗುವಷ್ಟು ಚಿಂತೆಯಾಗುತ್ತಿತ್ತು.

## ೨೯ : ಪ್ರತ್ಯಕ್ಷ ಮತ್ತು ಪರೋಕ್ಷ ಯುದ್ಧ

ರಾಘಪ್ಪನದೂ ದೇಸಾಯರದೂ ಪ್ರತ್ಯಕ್ಷಭೇಟಿಯಾಗದೆ ಬಹುದಿನಗಳಾದವು. ಆದರೆ ಪರೋಕ್ಷವಾಗಿ ರಾಘಪ್ಪನ ಅಸ್ತಿತ್ವವು ಮೇಲಿಂದಮೇಲೆ ದೇಸಾಯರ ಅನುಭವಕ್ಕೆ ಬರತೊಡಗಿತು. ವಸಂತ ಧಾರವಾಡದವರೆಗೆ ಬಂದು ಮನೆಗೆ ಬಾರದಿರುವ ಹಾರಿಕೆಯ ಸುದ್ದಿಯನ್ನು, ಯಾರೋ ಅವನನ್ನು ಕಂಡವರು ಇನ್ನಾರಿಗೋ ಹೇಳಿದ್ದು, ಹೇಗೋ ಬಂದು ಅದು ವೇಣೂಬಾಯಿಗೆ ಮುಟ್ಟಿತು. ಆಕೆ ಅದನ್ನು ದೇಸಾಯರಿಗೆ ಹೇಳಿದಳು. ದೇಸಾಯರು ಗಂಭೀರ ಮುಖ ಮಾಡಿಕೊಂಡು ಇನ್ನೊಂದು ಮಾತಾಡದೆ ಕುಳಿತುಕೊಂಡರು. ವಸಂತನಿಗೆ ಪತ್ರ ಹಾಕಿ ಕರೆಸಿಕೊಳ್ಳಬೇಕೆಂಬ ಆಕೆಯ ವಿನಂತಿಗೂ ಅವರೂ ಒಪ್ಪಲಿಲ್ಲ. ಇದೆಲ್ಲವನ್ನು ನೋಡಲಾರದೆ ವೇಣೂಬಾಯಿ ಒಮ್ಮೆ ದೇಸಾಯರಿಗೆ ಅಂದಳು :

'ಆ ರಾಘಪ್ಪ ಅರ ಎಂಥಾ ದುಷ್ಟ ಇದ್ದಾನವಾ. ಗಂಗವ್ವ ಸುಮ್ಮನ ಅವನ ನೆರಳು ಬ್ಯಾಡಾ ಅಂತಿದ್ದಿಲ್ಲ. ಆದರ ನೀವರ ಯಾಕ ಅವನ ಸಂಗತಿ ಸೆಣಿಸ್ಯಾಡತೀರಿ?... ಅವರದು ಅವರಿಗೆ ಕೊಟ್ಟುಬಿಡರಿ. ಎಲ್ಲ್ಯಾರ ಹುಡುಗನ ಬುದ್ಧಿ ಕೆಡಿಸಿ ಇಟ್ಟಗಿಟ್ಟಾನು. ಆ ಎರಡು ಸಾವಿರ ರೂಪಾಯಿ ದಶಿಂದ ಇಷ್ಟೆಲ್ಲಾ ಮಾಡತಾನ ಹೌದಲ್ಲೋ ?... ಅವರದು ಅವರಿಗೆ ಕೊಟ್ಟುಬಿಡರಿ. ಒಮ್ಮೆ ನಿಮ್ಮ ಚಿಂತಿಅರ ತಪ್ಪೀತು.'

'ರಾಘಪ್ಪ ಬಂದು ಕಾಲುಬಿದ್ದು ಬೇಡಲಿ ; ಕೊಡತೇನಿ. ಹುಡುಗಾಟಕೀ ಮಾಡತಾನೇನು ?... ನನ್ನ ಜೋಡಿ ಕುಸ್ತಿ ಹಿಡೀತಾನಽ ? ಹಿಡೀಲಿ. ಒಂದು ಕೈ ನೋಡೇಬಿಡತೇನಿ. ಆ ಕಿಟ್ಟ್ಯಾನ್ನ ಕಳಿಸಿಕೊಡತಾನ. ಈ ವಾಸ್ಯಾಗ ಬುದ್ಧಿ ಹೇಳತಾನ. ಒಮ್ಮೆ ಎದುರಾ ಹತ್ತಲಿ, ಇವನ್ನ ಖಂಬಕ್ಕ ಬಿಗಸತೇನಿ.'

'ಅಲ್ಲಾ, ಮೊದಲ ಈ ವ್ಯವಹಾರ ಒಲ್ಲೆನೋ ಅಂತ ಗೋಳ್ಯಾಡತಿದ್ದರಿ, ಈಗ್ಯಾಗ ಈ ಹ್ಯಾಂವಾ, ಈ ಪಂಥಾ ?... ಆಗಿನ ದಿನಾನಽ ಸುಖಾ ಇದ್ದವು ಅನಿಸಲಿಕ್ಕೆ ಹತ್ತೇದ'

'ಆ ದಿನಾ ಹೋದವು ಈಗ. ನಾವು ಸುಮ್ನ ಕೂತರೂ ಅವ ನಮಗ

ಕಾಡತಾನ ಅಂದಮ್ಯಾಲ ಮಕಾಬಲಿ[೧] ಆಗೇ ಹೋಗಲಿ, ನೋಡೋಣ !' ಎಂದರು ದೇಸಾಯರು.

'ಅವನ ಜೋಡಿ ನೀವು ಏನಾರ ಮಾಡರಿ. ಆದರ ವಸಂತಗ ಒಂದು ಪತ್ರಾ ಹಾಕಿ ಕರಿಸಿಗೊಳ್ಳರಲ್ಲಾ. ಕಾಯೋ ಅವಗ ಬಿಟ್ಟರೂ ಕಟ್ಟೋ ಅವಗ ಬಿಡತದೇನು?... ಇಲ್ಲಾ, ನನ್ನ ಅಕ ಕಳಿಸಿಕೊಡರಿ. ನೀವು ಅಲಕ್ಷ್ಯ ಮಾಡಿದ ಹಂಗ ಅವ ರಾಘಪ್ಪನ ಬಲಿಗೆ ಬೀಳತಾನ. ಇನ್ನೂ ಹುಡುಗ, ಪಾಪ. ನಾ ಎರಡು ದಿನಾ ಹೋಗಿ ಬರತೇನಿ....

ದೇಸಾಯುರಿಗೆ ತಡೆಯಲು ಆಗಲಿಲ್ಲ. ತಾವು ಏಕೆ ಸುಮ್ಮನೆ ಕುಳಿತಿದ್ದೇವೆಂಬುದನ್ನು ತಮ್ಮ ಹಂಡತಿಗೆ ಹೇಳಿಯೇಬಿಡಬೇಕೆಂದು ಎಣಿಸಿ, ಈಗ ಎರಡು ಮೂರು ದಿನದ ಹಿಂದೆ ಬಂದ ವಸಂತ ಕಾಗದವನ್ನು ತಿಜೋರಿಯಿಂದ ತೆಗೆದು 'ನಿನ್ನ ಮಗ, ಇನ್ನೂ ಹುಡುಗ !... ಅಪ್ಪಗ ಪತ್ರಾ ಬರದಾನ ನೋಡು !' ಎಂದು ವಸಂತರಾಯನ ಪತ್ರವನ್ನು ಓದಿ ಹೇಳಿದರು :

ಶ್ರೀ ಇನಾಮ ಗ್ರಾಮ

ಸುಣ್ಣದ ಮನಿ

ತೀ॥ ರಾ॥ ರಾ॥ ಗೋಪಾಳರಾವ ದೇಸಾಯಿ, ಧಾರವಾಡ ಇವರಿಗೆ ಸಾ॥ ನ॥ ವಿ॥ ವಿ॥

ತರುವಾಯ ಈ ಪತ್ರ ಬರೆಯಲಿಕ್ಕೆ ಕಾರಣ ಏನಂದರೆ, ನಾನು ಈಗ ವಯಸ್ಸಿಗೆ ಬಂದು ಎರಡು ವರ್ಷ ಆಗಿಹೋದರೂ ಸುದ್ಧಾ ನನ್ನ ಹಿಸೆಯನ್ನು ನನಗೆ ಕೊಡದೆ, ಅದರ ಉಪಭೋಗವನ್ನು ನೀವು ಮಾಡುತ್ತಿದ್ದೀರಿ. ನಿಮಗೆ ಮೂವರು ಗಂಡುಮಕ್ಕಳಿದ್ದು, ಆ ಮೂವರಲ್ಲಿ ನಾನು ನಡುವಿನವನು ಇರುತ್ತೇನೆ. ನನಗೆ ಕಾಯ್ದೇಶೀರ ಪಿತ್ರಾರ್ಜಿತ ಆಸ್ತಿಯಲ್ಲಿ ಎಷ್ಟು ಭಾಗ ಬರಬೇಕೋ ಅದನ್ನು ಆದಷ್ಟು ಬೇಗನೆ ನನಗೆ ಬಿಟ್ಟುಕೊಡಬೇಕು. ಇದಕ್ಕೆ ನಿಮ್ಮ ಒಪ್ಪಿಗೆ ಇದ್ದರೆ, ನಾಲ್ಕು ಮಂದಿ ಹಿರೇರನ್ನು ಕೂಡಿಸಿ ಸಮವಾಟಣಿ ಮಾಡಿಕೊಂಡು ನನಗೆ ಬರತಕ್ಕ ಹಿಸೆಯನ್ನು ತೆಗೆದುಕೊಳ್ಳಲು ನನ್ನ ಕಬುಲಾಯತಿ[೨] ಇರುತ್ತದೆ. ಆದರೆ ಉಳಿದ ನನ್ನ ಅಣ್ಣ ಅಚ್ಯುತರಾಯನಾಗಲಿ, ನನ್ನ ಅಲ್ಪವಯಿ ತಮ್ಮ ಪುರುಷೋತ್ತಮನಾಗಲೀ ತಮ್ಮ ಹಿಸೆಯನ್ನು ಬೇಡಲಿ ಬಿಡಲಿ, ಅದಕ್ಕೆ ನನ್ನ ಸಂಬಂಧ ಇರುವದಿಲ್ಲ. ಅದನ್ನು ನಾಲ್ಕು ಪಾಲಿನದು ನನಗೆ ಬಿಟ್ಟು ಕೊಡಬೇಕು. ಯಾವದೇ ಕಾರಣವಾಗಿ

---

೧. ನಿರ್ಣಾಯಕ ಯುದ್ಧ. ೨. ಒಪ್ಪಿಗೆ.

ನನ್ನ ಹಿಸೆ ಕೊಡುವದಕ್ಕೆ ಈ ಪತ್ರ ಮುಟ್ಟಿದ ತಾರೀಖಿನಿಂದ ಮೂರು ತಿಂಗಳ ಒಳಗಾಗಿ ನೀವು ವ್ಯವಸ್ಥೆ ಮಾಡದಿದ್ದ ಪಕ್ಷಕ್ಕೆ ಮುಂದೆ ಆಗುವ ಯಾವುದೇ ಅನರ್ಥ ಪರಿಣಾಮಗಳಿಗೆ ನೀವೇ ಜವಾಬುದಾರರಿರುತ್ತೀರಿ. ಹಾಗೆ ತಡ ಆದರೆ ಅದಕ್ಕೆ ಯೋಗ್ಯ ಉತ್ಪನ್ನವನ್ನು ನೀವು ನನಗೆ ಕೊಡಬೇಕಾಗುತ್ತದೆ. ಆ ಕಾರಣ ಈ ಕೆಲಸವನ್ನು ಬೇಗ ಮುಗಿಸುವದು ಎಲ್ಲರಿಗೂ ಹಿತಾವಹ. ಇದಕ್ಕೆ ನಿಮ್ಮ ಒಪ್ಪಿಗೆ ಇದ್ದರೆ ನಾನು ಹಿತಚಿಂತಕರೊಡನೆ ನಿಮ್ಮನ್ನು ಭೆಟ್ಟಿಯಾಗಲು ಬರುತ್ತೇನೆ. ಆದರೆ ತಾವು ತಮ್ಮ ಅಭಿಪ್ರಾಯ ತಿಳಿಸಲಿಕ್ಕೆ ಹೈಗೈ[೧] ಮಾಡದೆ ಬೇಗನೆ ತಿಳಿಸಬೇಕೆಂದು ಸವಿನಯ ಪ್ರಾರ್ಥನೆ. ಬಾಕಿ ಕ್ಷೇಮ. ಈ ಪತ್ರ ನೋಟೀಸು ಅಲ್ಲದಿದ್ದರೂ ಇದನ್ನೇ ನೋಟೀಸು ಅಂತಾ ತಿಳಕೊಂಡು ವಿಚಾರ ಮಾಡಿ ಹದಿನೈದು ದಿವಸಗಳಲ್ಲಿ ಉತ್ತರ ಬರೆಯಬೇಕಾಗಿ ಬಿನ್ನಹ. ತಮ್ಮ ಕ್ಷೇಮಕ್ಕೆ ಬರೆಯಬೇಕು.

ಇಂತಿ ತಮ್ಮ ದ್ವಿತೀಯ ಚಿರಂಜೀವ,
**– ವಸಂತರಾವ (ಬ) ದೇಸಾಯಿ**

ವೇಣೂಬಾಯಿಗೆ ತನ್ನ ಮಗನ ಪತ್ರದ ವಿಷಯವನ್ನು ಕೇಳಿದೊಡನೆ ಮನಸ್ಸಿಗೆ ತುಂಬ ಅಪಮಾನವಾದಂತೆನಿಸಿತು. ತನ್ನ ಗಂಡನು ಎಷ್ಟು ರೀತಿಯಿಂದ ನವೆಯಬೇಕಾಗುತ್ತದಲ್ಲಾ ಎಂದು ಮನಸ್ಸು ಕರಗಿ ಕಂಬನಿ ಹರಿಯತೊಡಗಿದವು.

'ನಾ ಹೇಳೇ ಹೇಳತಿದ್ದೆ.... ವಶ್ಯಾ, ಹಂಗ ಅಲ್ಲೋ ; ಕೆಟ್ಟ ಚಟಕ್ಕ ಬೀಳಬ್ಯಾಡೋ... ಕೆಟ್ಟ ಮಂದೀ ಸಂಗತಿ ಮಾಡಬ್ಯಾಡೋ ; ನಿಮ್ಮಪ್ಪ ದೇವರು ಅಂತ ತಿಳಕೋಳೊ ಅಂತ. ಅಂತೂ ಇಲ್ಲಿಗೆ ಬಂತs ಮಜಲು ?.... ಕಲ್ಲಿಗೆ ಬುದ್ಧಿ ಹೇಳಿದಹಂಗ ಆತ್ಯು... ಅವ ಪೂರ್ವಜನ್ಮದ ಭಾಗಾದಿ, ಮಗಾ ಆಗಿ ಹುಟ್ಯಾನ... ನಿಮಗ ಜೀವಕ್ಕ ಏನೂ ಸುಖಾ ಇಡಗೊಡೋದಿಲ್ಲ...!'

'ನನಗೇನು ಮಾಡತಾನ ? ತನ್ನದು ತಾ ಅನುಭೋಗಸತಾನ. ಈ ಪತ್ರಾ ಬರೀಲಿಕ್ಕೆ ಯಾರ ಉತ್ತೇಜನ ಅದ ಅನ್ನೋದು ನನಗ ಏನು ತಿಳಿಯೋದಿಲ್ಲೇನು?... ಆ ಗುರೂನ ಕುತ್ತಿಗ್ಗೇ ಕೈ ಹಾಕತೇನಿ, ಈ ವಶ್ಯಾ ಕಿಟ್ಯಾ ಎಲ್ಲಾರೂ ಹಾದಿಗೆ ಬರತಾರ...'

ದೇಸಾಯರು ಕೂಡಲೇ ನಿರ್ಣಯ ತೆಗೆದುಕೊಂಡು ಈ ಪತ್ರವನ್ನು ಬರೆದರು :

---

೧. ಹಿಂದೆಮುಂದೆ ನೋಡು.

ಕ್ಷೇಮ ಶ್ರೀ ಧಾರವಾಡ

ಚಿ॥ ವಸಂತರಾಯನಿಗೆ, ಆಶೀರ್ವಾದಗಳು. ನಿನ್ನ ಪತ್ರ ಮುಟ್ಟಿತು. ನಾವೆಲ್ಲಾ ಕ್ಷೇಮದಿಂದ ಇದ್ದೇವೆ. ನೀನೂ ನನ್ನ ಮಗನೇ ಎಂಬುದನ್ನು ನಾನು ಮರೆತಿಲ್ಲ. ನಿನ್ನ ಹಿತಚಿಂತಕನನ್ನು ಕರೆದುಕೊಂಡು ಬಾ.

ಇಂತೀ ಆಶೀರ್ವಾದಗಳು.

**ಗೋಪಾಳರಾವ್**

ವಸಂತರಾಯನಿಗೆ ಈ ಪತ್ರ ಮುಟ್ಟಿದ ಕೂಡಲೇ ಭಯವಾಯಿತು. ಏಕೆಂದರೆ ಅದರಲ್ಲಿ ಮುಖ್ಯ ವಿಷಯದ ಉಲ್ಲೇಖವೇ ಇರಲಿಲ್ಲ. ತಾನು ಬರೆದ ಪತ್ರವನ್ನು ಭಾಗವತರಾಟದ ಅಪ್ಪಣಭಟ್ಟನಿಂದ ಬರೆಯಿಸಿಕೊಂಡಿದ್ದನು. ಆದರೆ ಇಷ್ಟು ಬೇಗ ತಂದೆಯಿಂದ ಉತ್ತರ ಬಂದೀತೆಂದು ವಸಂತರಾಯ ನಿರೀಕ್ಷಿಸಿರಲಿಲ್ಲ. ಇನ್ನು ಅಪ್ಪಣ್ಣಭಟ್ಟನಿಗೆ ಹೇಳಿಕಳಿಸಬೇಕು. ನಂತರ ತಾನು ಬರೆದ ಕಾಗದದ ವಿಚಾರಮಾಡಬೇಕು – ಹೀಗೆಲ್ಲ ವಸಂತ ನಿಶ್ಚಯಿಸಿ ತಾನು ಬರೆದ ಕಾಗದದ ನಕಲು ಹಾಗೂ ತಂದೆಯ ಉತ್ತರ ಇವೆರಡನ್ನೂ ಭದ್ರವಾಗಿ ಕೋಟಿನಲ್ಲಿ ಇಟ್ಟುಕೊಂಡು ಧಾರವಾಡಕ್ಕೆ ರಾಘಪ್ಪನ ಭೆಟ್ಟಿಗೆ ಬಂದನು.

ರಾಘಪ್ಪನಿಗೆ ತಾನು ಊರಿದ ಬೀಜ ಇಷ್ಟು ಅನಪೇಕ್ಷಿತವಾಗಿ ಹಾಗೂ ಇಷ್ಟು ಬಹಿರಂಗವಾಗಿ ಫಲಕಾರಿಯಾದೀತೆಂಬ ಕಲ್ಪನೆ ಇರಲಿಲ್ಲ. ದೇಸಾಯರೊಡನೆ ಅವನಿಗೆ ಇಷ್ಟು ಬಹಿರಂಗ ವೈರವನ್ನು ಕಟ್ಟಿಕೊಳ್ಳುವ ಇಚ್ಛೆ ಇರಲಿಲ್ಲ. 'ಎಡಗೈಗುದಿಕೆ'[೧]ಯನ್ನು ಕೊಟ್ಟು ಹಣ್ಣು ಮಾಡುವ ಹಂಚಿಕೆ ಅವನದು. ಆದರೂ ಯಾವ ಭಾವವನ್ನೂ ವ್ಯಕ್ತಪಡಿಸದೆ ಎರಡೂ ಕಾಗದಗಳನ್ನೂ ಓದಿ ನೋಡಿದನು. ಅಪ್ಪಣಭಟ್ಟ ಬರೆದುಕೊಟ್ಟ ಕಾಗದವನ್ನು ಶ್ಲಾಘಿಸಿದನು. 'ಶಾಣ್ಯಾ ಇದ್ದಾನ ಬ್ರಾಹ್ಮಣಾ. ಲೇಖದ ಬಿಗತ ಅದ' ಎಂದು ದೇಸಾಯರ ಉತ್ತರವನ್ನು ಕೂಲಂಕಷವಾಗಿ ಓದಿ ನೋಡಿದನು. ವಸಂತ ರಾಯನ ಕಣ್ಣಿಗೆ ಬೀಳದ ಒಂದು ಸೂಕ್ಷ್ಮ ವಿವರವು ರಾಘಪ್ಪನ ದೃಷ್ಟಿಗೆ ಬಿದ್ದಿತು. ವಸಂತನು 'ನಾನು ನನ್ನ ಹಿತಚಿಂತಕರೊಡನೆ ನಿಮ್ಮನ್ನು ಭೆಟ್ಟಿಯಾಗಲು...' ಇತ್ಯಾದಿ ಬಹುವಚನದಲ್ಲಿ ಬರೆದದ್ದಕ್ಕೆ ದೇಸಾಯರ ಉತ್ತರ ದಲ್ಲಿ 'ನಿನ್ನ ಹಿತಚಿಂತಕನನ್ನು ಕರೆದುಕೊಂಡು ಬಾ' ಎಂದು ಏಕವಚನದಲ್ಲಿ ಸಂಬೋಧನೆಯಾಗಿತ್ತು. ರಾಘಪ್ಪನು ಅದರ ಸೂಚನೆಯನ್ನು ತಿಳಿದುಕೊಂಡನು. ಎದುರಾಗಯೇ ತಾನು ನಿಲ್ಲುವದಂತೂ ರಾಘಪ್ಪನಿಗೆ ಸರ್ವಥಾ ಒಪ್ಪಿಗೆಯಿರಲಿಲ್ಲ.

---

೧. ಅಪ್ರತ್ಯಕ್ಷ ಹೊಡೆತ.

'ಆದರ ವಸಂತರಾವ್, ನಿಮ್ಮಪ್ಪನ ಚೀಟೀಮ್ಯಾಲಿಂದ ಅವರೇನು ಹೀಂಗ ಸೈಲು ಬಿಟ್ಟಾರು ಅನಿಸೂದಿಲ್ಲ.'

'ಯಾಕ, ಬಾ ಅಂತ ಬರದಾರಲ್ಲ !'

'ಇಷ್ಟು ಲಗೂ ನಿಮ್ಮನ್ನ ಕರೀತಾರs ಅಂದಮ್ಯಾಲ ಅವನ ಮನಸ್ಸಿನ್ಯಾಗ ಈ ವಿಷಯ ನಾಟಿದಹಂಗ ಕಾಣಿಸೂದಿಲ್ಲ. ನಿಮ್ಮಪ್ಪ ಹಂಗ ಕೈಚಲ್ಲಿ ಕೂಡೋ ಮನುಷ್ಯ ಅಲ್ಲ. ನಾನೂ ಕಂಡೇನಿ ಅವರನ.'

'ಆದರ ಕರೆದಾರ ಅಂದಮ್ಯಾಲ ಹೋಗಿ ಅಭಿಪ್ರಾಯ ತಿಳಿಕೋಳಿಕ್ಕೆ ಏನು ಅಡ್ಡಿ ಅದ ?'

'ಓಹೋ ! ತಿಳಿದುಕೊಂಡು ಬರ್‍ರೆಲ್ಲಾ. ಜರೂರ ಹೋಗಿ ಬರ್‍ರಿ.'

'ನೀವೂ ಬರಬೇಕು ಮತ್ತ...' ವಸಂತರಾಯನಿಗೆ ರಾಘಪ್ಪ ಮುಖ ತಪ್ಪಿಸಿಕೊಳ್ಳುತ್ತಿದ್ದಾನೆಯೇ ಎಂಬ ಸಂದೇಹ ಬರತೊಡಗಿತ್ತು.

'ತಂದೀ ಮಗನ ಮಾತಿನ್ಯಾಗ ನಾವು ಬರೋದು ಗೈರ[೧] ಆಗತದ.'

ಇದರಿಂದ ವಸಂತನು ಖಿನ್ನಮುಖವನ್ನು ಮಾಡಿದುದನ್ನು ಕಂಡವನೇ ರಾಘಪ್ಪ ಸಹಾಯಕ್ಕಾಗಿ ಧಾವಿಸಿದನು.

'ವಸಂತರಾವ್, ನಾ ನಿಮ್ಮ ಕೈಬಿಟ್ಟಿಲ್ಲಾ... ನೀವು ಹಾಂಗ ತಿಳಿಕೋ ಬ್ಯಾಡ್ರಿ, ನಾ ನಿಮ್ಮ ಬೆನ್ನಿಗೆ ಯಾವಾಗಲೂ ಇದ್ದೇನಿ... ಯಾಕಂದರ ಒಮ್ಮೆ ನಾಟಕ ಕಂಪನಿ ತಗೀಬೇಕು ಅಂತ ನಿಶ್ಚಯ ಆಗೇದ. ಅಂದಮ್ಯಾಲ ನನ್ನ ವಚನನs ನನ್ನ ಪ್ರಮಾಣ... ಆದರ ಈಗs ನಾ ಬಂದರ ನಿಮಗ ಫಾಯದೇ ಇಲ್ಲ. ನಾ ಕಡೀ ಗುಂಡು. ಮೊದಲ ನೀವು ನಿಮ ಚಿಕ್ಕಪುಟ್ಟ ಆಯುಧ ಉಪಯೋಗ ಮಾಡರಿ. ನಿಮಗ ಈ ಪತ್ರಾ ಬರಕೊಟ್ಟ ಬ್ರಾಹ್ಮಣನ್ನ ಕರಕೊಂಡು ಹೋಗರಿ. ಅವನೂ ಶ್ಯಾಣ್ಯಾ ಕಾಣಿಸತಾನ. ನಿಮ್ಮ ತಂದೀ ಅಭಿಪ್ರಾಯ ಕೇಳಿಕೊಳ್ರಿ. ಅವರು ಸಿಟ್ಟಿಗೆದ್ದರ ನೀವು ಸಿಟ್ಟಿಗೇಳಬ್ಯಾಡ್ರಿ. ಅವರು ರಮಿಸಲಿಕ್ಕೆ ಬಂದರ ನೀವು ಘಟ್ಟಿ ಹಿಡೀರಿ. ನಿಮ್ಮ ತಂದೀನೂ ಲಡ್ಡ[೨] ಮನುಷ್ಯ ಅಲ್ಲ. ಮೊದಲ ನಿಮಗ ಆಶಾ ಹಚ್ಚಿ, ಅಚ್ಚಾಮಾಡಿ, ಹೆದರಿಕೀ ಹಾಕಿ, ಮಾಡೋ ಉಪಾಯಾ ಮಾಡತಾನ. ಆ ಪರೀಕ್ಷಾದಾಗ ನೀವು ಪಾರಾಗಿ ನಿಮ್ಮ ತತ್ವಾ ಘಟ್ಟಿಗೆ[೩] ಹಚ್ಚಿದಿರೆಂದರ, ಮುಂದ ಮುನ್ನ ಕರಸರಿ. ನಿಮಗ ಲುಕ್ಸಾನ ಆಗದ ಹಂಗ ನಾನು ಎಲ್ಲಾ ಬಗಿಹರಿಸಿಕೊಂಡು ಬರತೇನಿ. ಬೇಕಾದಂಥ ವಕೀಲ ಬರಲಿ, ನಿಮಗ ಮೋಹ ಆಗದ ಹಂಗ

---

೧. ಅಯೋಗ್ಯ. ೨. ಪೊಳ್ಳು, ೩. ಸಿದ್ಧಮಾಡಿ ತೋರಿಸು.

ನೋಡಿಕೋತೇನಿ. ಆದರ ಈಗ ಮೊದಲು ಹೋಗಿ ನಿಮ್ಮ ಅಪ್ಪ ಯಾಕಡೆ ಹೊಂಚು ಹಾಕ್ಯಾರ ಅನ್ನೋದರ ಸುಳುವು ತಿಳಕೊಂಡು ಬರ್ರಿ. ನನಗ ಸ್ವಲ್ಪ ವಾಸನಿ ಬಡೀಲಿ ; ಮುಂದ ಏನು ಮಾಡೋದು ಅದsು ಅದನ್ನ ಮಾಡೋಣ. ಯಾಕಂದರ ಕೈಹಾಕೀರಿ ಅಂದಮ್ಯಾಲ ಕೆಡದಹಂಗ ಕೆಲಸಾ ಮಾಡಬೇಕಾಗತದ ನೋಡ್ರಿ.'

ಇದರಿಂದ ವಸಂತನಿಗೆ ಸಾಕಷ್ಟು ಧೈರ್ಯ ಬರದಿದ್ದರೂ ತುಸುಮಟ್ಟಿಗೆ ಉತ್ಸಾಹವುಂಟಾಯಿತು. ರಾಘಪ್ಪನ ಯುಕ್ತಿವಾದವೂ ಸರಿಯಾದದ್ದೇ. ಕೆಲಸದಲ್ಲಿ ಘಟ್ಟಗಳಿವೆ. ಆಯಾ ಘಟ್ಟಕ್ಕೆ ತಕ್ಕಂತೆ ಆಯಾ ಜನರನ್ನು ಉಪಯೋಗಿಸಬೇಕು. ಆದರೂ ತನಗೆ ಇಲ್ಲದ ಧೈರ್ಯಕ್ಕಾಗಿ ಒಂದು ಅನುಮಾನ.

'ಅಪ್ಪಣಭಟ್ಟ ಚಾಳಕ[೧] ಬ್ರಾಹ್ಮಣ ಖರೆ. ಆದರ ಬಹಳ ಪುಕ್ಕ. ಹೆದರಿಸಿದರ ಹೆದರತಾನ. ಈಗ ಬರಲಿಕ್ಕೆ ಒಲ್ಲೆ ಅಂದರ....?'

'ಹತ್ತು ರೂಪಾಯಿ ಚೆಲ್ಲರಿ ; ಬರದ ಏನು ಮಾಡತಾನ. ನಾಟಕದವ, ಓಡಿಬರತಾನ.'

ರಾಘಪ್ಪ ಮುಖ ತಪ್ಪಿಸಲು ಹೀಗೆ ಹೇಳುತ್ತಾನೋ, ನಿಜವಾಗಿ ಹೇಳುತ್ತಾನೋ ತಿಳಿಯದಾಯಿತು. ಕೊನೆಗೆ, ಅಪ್ಪಣಭಟ್ಟ ಬರದಿದ್ದರೆ ರಾಘಪ್ಪ ಬರಬೇಕೆಂದು ವಸಂತ ಅವನಿಂದ ಆಶ್ವಾಸನ ಪಡೆದನು, ನಂತರ ಅಪ್ಪಣ ಭಟ್ಟನ ಶೋಧಾರ್ಥವಾಗಿ, ಊಟಕ್ಕೆ ಕೂಡ ನಿಲ್ಲದೆ ವಸಂತರಾಯ ಹಳ್ಳಿಗೆ ತೆರಳಿದನು.

* * *

ಅಪ್ಪಣಭಟ್ಟನು ವೇದಾಂತಿ ಆದರೆ ತಿಳುವಳಿಕೆಯಿಲ್ಲದ ದಿನಗಳಲ್ಲಿ ವೇದಾಂತ ಕಲಿಯಲು ಯತ್ನಿಸಿ ಅತಿಪರಿಚಯದಿಂದ ಈಗ ಅದನ್ನು ಉದ್ಯೋಗವಾಗಿ ಮಾಡಿಕೊಂಡವನು. ಅವನು ಕವಿಯೂ ಹೌದು. 'ಮಮತೆಯ ಬಿಡು ಮನುಜಾ' ಎಂದು ಅವನು ಪೀಲು ರಾಗದಲ್ಲಿ ಕಟ್ಟಿದ ಪದವು ಹಳ್ಳಿಗಳಲ್ಲಿ ಎಷ್ಟೋ ದಿನ ಲೋಕಪ್ರಿಯವಾಗಿತ್ತು. ಕೀರ್ತನದಲ್ಲಿ 'ಅಹಂಕಾರವನ್ನು ಮಹಾಯೋಗಿ ಬಿಡುವಂತೆ ಸೀತಾನ್ನ ರಾಮ ಬಿಟ್ಟುಬಿಟ್ಟ !' ಎಂದು ಹೇಳಿ ಶಹರಗಳಲ್ಲಿ ಕೂಡ ವಹವ್ವಾ ಅನಿಸಿಕೊಂಡವನು. ಆದರೆ ದೇಸಾಯರ ಎದುರು ಪ್ರತ್ಯಕ್ಷ ಹೋಗಬೇಕೆಂದೊಡನೆ ಅವನ ಕೈಕಾಲ ಸಂದುಗಳೇ ಬಿಗಿದುಕೊಂಡವು. ಈ ವೇದಾಂತಿಗೆ 'ದೊಡ್ಡ ದೇಸಾಯ'ರು ಎಂದರೆ ದೊಡ್ಡ ದೇವರಿಗಿಂತ ಹೆದರಿಕೆ. ಆದರೆ ಹತ್ತು ರೂಪಾಯಿ

---

೧. ಚತುರ.

ದಕ್ಷಿಣೆಗಾಗಿ ಆಸೆಬಟ್ಟನು. 'ಸ್ವಧರ್ಮಮಪಿ ಚಾವೇಕ್ಷ್ಯ ವಿಕಂಪಿತುಮರ್ಹಸಿ' ಎಂದು ಧೈರ್ಯ ಹೇಳಿಕೊಂಡನು. ಅಲ್ಲದೆ ನಾಲ್ಕು ವರ್ಷದ ಹಿಂದೆ ನಾಟಕ ಕಲಿಸಲು ಸುಣ್ಣದ ಮನೆಗೆ ಹೋದಾಗ ನಾಟಕ ಕಲಿಸಿದ್ದಕ್ಕಾಗಿ ಮಗನಿಂದ ಹದಿನೈದು ರೂಪಾಯಿ, ಕಲಿಸುವದನ್ನು ಬಿಟ್ಟುಬಿಡಲಿಕ್ಕಾಗಿ ತಂದೆಯಿಂದ ಹದಿನೈದು ರೂಪಾಯಿ, ಹೀಗೆ ಎಂಟೇ ದಿನಗಳಲ್ಲಿ ಮೂವತ್ತು ರೂಪಾಯಿ ; ಮೇಲೆ ಅರ್ಧ ಚೀಲ ಜೋಳ, ಸುಮೀಚೀನ ಭೋಜನ, ಮೊಸರುಗಡಿಗೆ, ಇಂತು ಅನೇಕ ಸುಖಗಳನ್ನು ಕಂಡ ವೇದಾಂತಿಗೆ ಮತ್ತೆ ಆಸೆಯಾಯಿತು. ಅವನು ವಸಂತನೊಡನೆ ಬರಲು ಒಪ್ಪಿಕೊಂಡನು.

ಅಂತೂ ವಸಂತನೂ ಅವನ ಹಿತಚಿಂತಕನೂ ಧಾರವಾಡಕ್ಕೆ ಬಂದರು. ಉಡುಪೀ ಫರಾಳದ ಅಂಗಡಿಯಲ್ಲಿ ಫೇಡೆ, ಹಲವಾ, ಅಂಟಿನ ಉಂಡಿ ಮುಂತಾದ ಮಡಿಯ ಪದಾರ್ಥಗಳು ಬಿದ್ದ ಮೂಲಕ ಭಟ್ಟನ ಹೆದರಿಕೆ ಸ್ವಲ್ಪ ಮುರಿದು ವಸಂತರಾಯನಿಗೆ ಮನ ಹಿಗ್ಗುವಂತೆ ಕೆಲಸ ಮಾಡಿಕೊಡಲು ಅಂತರಾತ್ಮನ ಪ್ರೇರಣೆಯಾಗಿತ್ತು. ರಾಘಪ್ಪನ ದರ್ಶನ ತೆಗೆದುಕೊಂಡಮೇಲೆ ಸ್ವಲ್ಪ ಧೈರ್ಯವೂ ಬಂದಿತು. ಅಲ್ಲಿಂದ ದೇಸಾಯರ ಮನೆಗೆ ಹೋಗಲು ಟಾಂಗಾ ಹಿಡಿದದ್ದಾಯಿತು. ಆದರೆ ಅರ್ಧದಾರಿಯಲ್ಲಿ ತಾನೇ ಇಚ್ಛೆ ಪ್ರಕಟ ಮಾಡಿ ಭಟ್ಟನು, ಉಡುಪಿ ಅಂಗಡಿಗೆ ಟಾಂಗಾ ತರುಬಿಸಿ, ಪ್ರಸ್ತ ಮಾಡಿಸಿಕೊಳ್ಳುವ ಮದುಮಗನಂತೆ, ಒಂದು ಗ್ಲಾಸು ಮಸಾಲೆ ಹಾಲು ಕುಡಿದನು. ಅವನೊಡನೆ ತಾನೂ ಲೆಮನ್ ಕುಡಿಯುತ್ತ ವಸಂತರಾಯ, 'ಬಟ್ಟಾ, ಚಲೋ ಕೆಲಸಾ ಮಾಡಿಕೊಡು, ನಿನ್ನ ಕುದುರೀ ಮ್ಯಾಲ ಮೆರವಣಿಗೆ ತಗಸತೇನಿ' ಎಂದು ಚಹದಂಗಡಿಯಲ್ಲಿ ಕೊನೆಯ ಆಶ್ವಾಸನಕೊಟ್ಟನು. ಅಂತೂ ಅವರ ಟಾಂಗಾ ದೇಸಾಯರ ಮನೆಯ ಮುಂದೆ ಬಂದು ನಿಂತಿತು.

ಮನೆಯ ಬಾಗಿಲು ಮುಚ್ಚಿತ್ತು. ಹೊರಗೆ ಆಳುಮನುಷ್ಯರು ಯಾರೂ ಇರಲಿಲ್ಲ. ವಸಂತನಿಗೆ ಅಪ್ಪನನ್ನು ಹೇಗೆ ಒದರಬೇಕೆಂಬುದು ತಿಳಿಯದಾಯಿತು. ಅದು ದೇಸಾಯರು ನಿದ್ದೆ ಮಾಡುವ ಸಮಯ. ಬಂದದ್ದು ಹಿಸೆ ಕೇಳಲು ; ಆದರೂ ಕೂಡ ನಿದ್ದೆಗೆಡಿಸುವದು ತುಸು ದುಸ್ತರ ಕೆಲಸ. ವಸಂತ ಪುಟಪುಟನೆ ಅರಗಚ್ಚೆ ಮಾತಾಡತೊಡಗಿದನು. ಕೊನೆಗೆ ಹಿತ್ತಲಿಗೆ ಹೋಗಿ ಅವ್ವನನ್ನು ಕಾಣಬೇಕೆಂಬ ಆಸೆಯಾಯಿತು. ಆದರೆ ಅಪ್ಪಣಭಟ್ಟ, 'ರಾಯರ಼, ನೀವು ಹೀಂಗೆಲ್ಲಾ ಮಾಡಿದರ ಕೆಲಸ ಕೆಡತ಼ದ. ಬಂದ ಕಾವಿನ್ಯಾಗ ಎರಡು ಒದರ್ಯಾಡಿ ಹೋದರ ರೂಪಾಯದಾಗ ದೋನಣೆ ಆದರ, ಕೆಲಸ ಆದೀತು ಅಂತ ಆಶಾ. ನೀವು

ಅವ್ವನ ಜೋಡಿ ಮಾತಾಡತೇನಿ, ಅಕ್ಕನ ಸಲ್ಲಾ ತೊಗೋತೀನಿ. ಅಜ್ಜಿಯ ರಮಿಸತೇನಿ ಅಂತ ಕೂತರ ಬಂದ ಕೆಲಸ ಅಲ್ಲೆ ಉಳೀತದ' ಎಂದನು. ವಸಂತ ಬೇರೆ ಉಪಾಯ ಕಾಣಿಸದೆ ತಲೆಬಾಗಿಲನ್ನು ಗಟ್ಟಿಯಾಗಿ ತಟ್ಟಿದನು.

ಬಾಗಿಲ ಸಪ್ಪಳ ಕೇಳಿ ಭರಮು ಓಡಿಬಂದನು, ದೇಸಾಯರಿಗೆ ನಿದ್ದೆಗೇಡಾದೀತೆಂದು. ಆದರೆ ಅವನು ಬಾಗಿಲು ತೆಗೆಯುವಷ್ಟರಲ್ಲಿ ದೇಸಾಯರಿಗೆ ಎಚ್ಚರವಾಗಿಯೇಬಿಟ್ಟಿತ್ತು. ಅವರು ಕಣ್ಣೊರೆಸಿಕೊಳ್ಳುತ್ತ ಪಡಸಾಲೆಗೆ ಬಂದರು. ಗಾಬರಿಯಿಂದ ನಾಲಿಗೆಯನ್ನು ಕಚ್ಚಿ ನಿಂತ ತಮ್ಮ ಪುತ್ರನನ್ನೂ, ಅವನ ಹಿಂದೆಯೇ ಅಡ್ಡ ಗಂಧ, ಲಂಡಧೋತರ, ಸುಳ್ಳುವಿನಯದ ನಗೆ ಇವುಗಳಿಂದ ವಿಭೂಷಿತನಾದ ಅಪ್ಪಣಭಟ್ಟನನ್ನೂ ನೋಡಿದರು. ವಸಂತ ತಾನು ಒಳಗೆ ಹೋಗಬೇಕೋ ಬೇಡವೋ ಎಂಬ ಸಂಕೋಚದಲ್ಲಿ ಹೊಸ್ತಿಲ ಹೊರಗೆಯೇ ತಡವರಿಸುತ್ತ ನಿಂತಿದ್ದನು. ಆದರೆ ದೇಸಾಯರು ಅವರಿಗೆ ಒಳಗೆ ಬರಲು ಹೇಳದೆಯೇ ತಾವೇ ಬಾಗಿಲವರೆಗೆ ಹೋದರು. ಅಲ್ಲಿ ಒಮ್ಮೆ ವಸಂತನತ್ತ ನೋಡಿದವರೇ ಮುಖ ಹೊರಳಿಸಿ ಅಪ್ಪಣಭಟ್ಟನು ಮುಖವನ್ನು ಮಿಕಿಮಿಕಿ ನೋಡತೊಡಗಿದರು. ಇದರಿಂದ ಅಪ್ಪಣ್ಣಭಟ್ಟನಿಗೆ ತನ್ನ ಪರಿಚಯ ಮಾಡಿಕೊಡಲು ಸಂಧಿ ದೊರಕಿತು.

'ರಾಯರs, ಯಾಕ, ಗುರುತು ಸಿಗಲಿಲ್ಲೇನು?... ನಾ ಅಪ್ಪಣಭಟ್ಟ, ದೇಶಾವರಿ ಬ್ರಾಹ್ಮಣಾ. ಹಿಂದಕ ನಿಮ್ಮ ಚಿರಂಜೀವರ ಕಂಪನಿಗೆ ಮಾತು ಕಲಿಸಲಿಕ್ಕೆ ಬರತಿದ್ದೆನಲ್ಲಾ, ಸುಣ್ಣದಮನಿಗೆ. ನೀವs ಸಂಭಾವನಿ ಮಾಡಿ ಕಳಿಸಿದ್ದಿರಿ...'

ದೇಸಾಯರು ನಿರ್ವಿಕಾರವಾಗಿ ಎಲ್ಲವನ್ನೂ ಕೇಳಿಕೊಂಡು ಭರಮನತ್ತ ನೋಡಿ, 'ಏ, ಅವರಿಗೆ ಒಂದು ಮುಷ್ಟಿ ಜೋಳಾ ಹಾಕಿ ಕಳಿಸು' ಎಂದರು.

'ಅಲ್ಲಲ್ಲ ರಾಯರs, ನಾ ದೇಶಾವರಿಗೆ ಬಂದಿಲ್ಲ...'

'ತಿಳೀತು, ತಿಳೀತು... ಹುಂ, ನೀವs ವಸಂತನ ಹಿತಚಿಂತಕರೇನು?... ವಸಂತಾ, ನಿನ್ನ ಖರೆ ಹಿತಚಿಂತಕನ್ನ ಕರಕೊಂಡು ಬಾರೋ... ಈ ವೈದಿಕ ಬ್ರಾಹ್ಮಣನ್ನ ಯಾಕ ಕರಕೊಂಡು ಬಂದಿ?'

ದೇಸಾಯರ ಒಂದೊಂದು ರೀತಿಯನ್ನು ನೋಡನೋಡುತ್ತ ವಸಂತನ ಕೈಕಾಲೇ ಹೋಗಿದ್ದವು. ಈಗಲೂ ಅವನ ಬಾಯಿಂದ ಮಾತು ಹಾಯಲೊಲ್ಲವು. ಆದರೆ ಮೆರವಣಿಗೆ ಹೋಗಲಿ, ತನ್ನ ಹತ್ತು ರೂಪಾಯಿಗಳನ್ನಾದರೂ ದುಡಿದೇ ತೀರಬೇಕೆಂದು ಗಟ್ಟಿಮನಸ್ಸು ಮಾಡಿದ ಅಪ್ಪಣಭಟ್ಟನು ಒಂದು ಹೆಜ್ಜೆ ಮುಂದಿಟ್ಟನು.

"'ರಾಯರs, ತಮ್ಮ ಚಿರಂಜೀವರಿಗೆ 'ನಿನ್ನ ಹಿಸೆ ನೀ ತೊಗೊಂಡು ಹೋಗಿ ಬಿಡು' ಅಂತ ಪತ್ರಾ ಬರದಿದ್ದರಿ... ಯಾಕ ಒಮ್ಮೆಲೇ ಇಷ್ಟು ಮಗನ

ಮ್ಯಾಲ ಸಿಟ್ಟು? ತಂದೀ–ಮಗ ಹಿಸೆ ಆಗೋದು ಮೊದಲ ಸರೇನs? ಅಂತ ಏನೋ ತಮಗ ಒಂದೆರಡು ಸಮಾಧಾನದ ಮಾತು ಹೇಳಲಿಕ್ಕೆ ಈ ಬಡ ಬ್ರಾಹ್ಮಣನ್ನ ಕರಕೊಂಡು ವಸಂತರಾಯರು ಬಂದಾರ... ತಮ್ಮಿಂದ ಸಂಭಾವನೆ ಆಗಲಿ ಬಿಡಲಿ, ಅದು ಮುಖ್ಯ ವಿಷಯ ಅಲ್ಲ. ಆದರ ಈ ಗೃಹ ಕಲಹ ಇಲ್ಲೇ ನಿಲ್ಲಲಿ. ಇಷ್ಟs, ನಮ್ಮಂಥ ಆಶ್ರಿತಜನರ...' ಅಪ್ಪಣಭಟ್ಟನ ನಾಟಕೀಯ ಭಾಷಣ ಇನ್ನೂ ಮುಂದುವರಿಯುವದಿತ್ತು. ಆದರೆ ಎಲ್ಲವನ್ನೂ ಸುಮ್ಮನೇ ನೋಡುತ್ತ ಚಕಿತನಾಗಿ ನಿಂತ ಭರಮನ ಕಡೆಗೆ ದೇಸಾಯರು ಸಂತೃಪ್ತರಾಗಿ ನೋಡುತ್ತ, 'ಲೇ, ನಿನ್ನ ಕಿವಿಗಿವಿ ಹೋಗ್ಯಾವೇನು?... ಆ ಬ್ರಾಹ್ಮಣಗ ಒಂದು ಮುಷ್ಟಿ ಜೋಳಾ ಹಾಕಿ ಕಂಪೌಂಡ ಬಿಟ್ಟು ಹೊರಗ ಹಾಕು...' ಎಂದು ಕೂಗಿದರು.

ಹೆದರಿದ ಭರಮ ಜೋಳ ತರುವದಕ್ಕಾಗಿ ಭರದಿಂದ ಒಳಗೆ ಓಡಿದನು. ವಸಂತನಿಗೆ ಇದೀಗ ಮಾತು ಹುಟ್ಟಿತು. 'ಅಪ್ಪಣಭಟ್ಟನ್ನ ನಾನs ಕರಕೊಂಡು ಬಂದೇನಿ.'

ದೇಸಾಯರು, 'ಸಿಕ್ಕಸಿಕ್ಕವರನ್ನ ಕರಕೊಂಡು ಬರಲಿಕ್ಕೆ ಇದೇನು ಧರ್ಮ ಸಾಲ್ಯೇನು?... ಕರಕೊಂಡು ಬರೋದಾದರ ಆ ಹಿತಚಿಂತಕ ರಾಘಪ್ಪನ್ನ ಕರಕೊಂಡು ಬಾ.' ಇಷ್ಟು ಹೇಳಹೇಳುತ್ತಲೇ ಕ್ರೋಧಸಂತಪ್ತರಾಗಿ ಮೈಯೆಲ್ಲ ನಡುಗುತ್ತ 'ಹಿಸೇ ಬೇಕs ನಿನಗ ಹಿಸೇ?... ತೊಗೊ ನಿನ್ನ ಹಿಸೆ !' ಎಂದವರೇ ತಮ್ಮ ಕಡೆಗೆಯೇ ಮರೆಮಾಸಿನಿಂದ ನೋಡುತ್ತ ನಿಂತ ವಸಂತ ರಾಯನ ಕೆನ್ನೆಗೆ ಫಳೀರನೆ ಬಿಗಿದರು. ಆ ಹೊಡೆತಕ್ಕೆ ವಸಂತನು ದೆವ್ವ ಬಡಿದವನಂತೆ ಸ್ತಬ್ಧನಾಗಿ ಕೆನ್ನೆಯನ್ನು ಹಿಡದುಕೊಂಡೇ ನೆಲಕ್ಕೆ ಕುಳಿತನು.

ಈ ಬಣ್ಣವನ್ನು ನೋಡಿ ಈಗಾಗಲೇ ಅಪ್ಪಣಭಟ್ಟ ಗೇಟಿನತ್ತ ಅರ್ಧಹಾದಿ ಕಂಡಿದ್ದನು. ಆದರೆ ಗೌಡರಿಂದ ಎಂದಿಗೂ ಬೈಯಿಸಿಕೊಳ್ಳದ ಅಜ್ಞಾಧಾರಕ ಭರಮನು ಸೆಡವಿನಿಂದ ಅವನ ಬೆನ್ನುಹತ್ತಿ ಓಡಿಬಂದು, ಅವನನ್ನು ನಿಲ್ಲಿಸಿ, ಅವನ ಧೋತರದ ಚುಂಗಿನಲ್ಲಿ ಒಂದು ದೊಡ್ಡ ಮುಷ್ಟಿ ಜೋಳ ಹಾಕಿ ಗಂಟು ಕಟ್ಟಿ, ಗೇಟಿನವರೆಗೆ ಮುಟ್ಟಿಸಿ ಬಂದನು.

ಈ ಎಲ್ಲ ಗದ್ದಲಕ್ಕೆ ಹೊರಗೆ ಬಂದ ವೇಣೂಬಾಯಿ ಮೆಟ್ಟಲ ಮೇಲೆ ಮುದ್ದೆಯಂತಾಗಿ ಕುಸಿದು ಕುಳಿತ ಮಗನನ್ನು ಮೈದಡವಿ ಎಬ್ಬಿಸಲು ಯತ್ನಿಸಿದಳು ಅವನು ಏಳಲೊಲ್ಲನು. ಎಡಗೆನ್ನೆಗೆ ಅವನು ಬಿಗಿಯಾಗಿ ಹತ್ತಿಕ್ಕಿಕೊಂಡ ಕೈಯನ್ನು ಪ್ರಯತ್ನಪೂರ್ವಕ ಬಿಡಿಸಿದಳು. ಅವನ ಹುಡುಗ ಕೆನ್ನೆಯ ಮೇಲೆ ದೇಸಾಯರ ಮೂರು ಬೆರಳುಗಳು ಸ್ಪಷ್ಟವಾಗಿ, ಕಿರು ಬೆರಳು ತುಸು ಮಸುಕಾಗಿ ಮೂಡಿದ್ದವು.

ದೇಸಾಯರ ಮೂರನೆಯ ಬೆರಳಿನಲ್ಲಿದ್ದ ಅಷ್ಟಪೈಲು ಉಂಗುರದ ಪಟ್ಟಿ ಕೂಡ ಸ್ಪಷ್ಟವಾಗಿ ಕಾಣಿಸುತ್ತಿತ್ತು. ತಾಯಿಯನ್ನು ಕಂಡೊಡನೆ ದಂಗುಬಡಿದು ಕುಳಿತ ವಸಂತ ಬಿಕ್ಕಿ ಬಿಕ್ಕಿ ಅಳತೊಡಗಿದನು. ಭರಮನ ಸಹಾಯದಿಂದ ವೇಣಕ್ಕ ಅವನನ್ನು ಒಳಗೆ ಕರದೊಯ್ದು ತನ್ನ ಹಾಸಿಗೆಯ ಮೇಲೆ ಮಲಗಿಸಿ, ಕೆನ್ನೆಗೆ ಒಳ್ಳೇಯೆಣ್ಣೆಯನ್ನು ಭರಮನ ಸಲಹೆಯ ಮೇರೆಗೆ ಸವರಿದಳು. ಬಿಸಿನೀರು ಕಾಯಿಸತೊಡಗಿದಳು. ಆಕೆಗೆ ಏನೂ ಮಾತಾಡಲಿಕ್ಕೆ ಆಗದಾಯಿತು. ಕಣ್ಣಿನಿಂದ ನೀರು ಧಾರಾಕಾರವಾಗಿ ಸುರಿಯುತ್ತಿತ್ತು.

ಆಕೆಯ ಪ್ರತಿಧ್ವನಿಯೆಂಬಂತೆ ವಸಂತ ಮೊದಲು ಬಿಕ್ಕಿಬಿಕ್ಕಿಸಿ, ನಂತರ ಎಲ್ಲ ಸಂಕೋಚ ಬಿಟ್ಟು ರಾಗವಾಗಿ ಅಳತೊಡಗಿದನು.

ಉದ್ಧತನಾದ ವಸಂತ ಹೀಗೆ ಹೊಡೆಸಿಕೊಂಡು ಸುಮ್ಮನೇಕೆ ಆದನು ಎಂದು ವಾಚಕರು ನನ್ನನ್ನು ಕೇಳುವ ಕಾರಣವಿಲ್ಲ. ಅಡ್ಡಹಾದಿ ಬಿದ್ದು ಉದ್ಧತರಾದವರು, ಅದರಲ್ಲಿ ಸಿರಿವಂತಿಕೆಯ ವಿಚಾರಶೂನ್ಯತೆಯಿಂದ ಅಡ್ಡ ಹಾದಿಗೆ ಬಿದ್ದವರು, ಶಾರೀರಿಕ ನೋವಿಗೆ ಎಷ್ಟು ಹೆದರುತ್ತಾರೆಂಬುದು ಅನುಭವವಿದ್ದವರಿಗೆ ಅರಿಯದ ವಿಷಯವಲ್ಲ.

* * *

ತಾಯಿಯ ಮಡಲಿನಲ್ಲಿ ತಲೆಯಿಟ್ಟು ಒಂದೆರಡು ತಾಸು ಶುಶ್ರೂಷೆ ಹೊಂದಿದಮೇಲೆ ವಸಂತರಾಯನಿಗೆ ಮೈಚಳಿ ಹಿಡಿಸಿದ ಹೆದರಿಕೆ ತುಸು ಕಡಿಮೆಯಾಯಿತು. ಕೆನ್ನೆ ಇನ್ನೂ ನೋಯಿಸುತ್ತಿತ್ತು. ಸಪ್ಪಳಕ್ಕೆ ಕಿವಿ ಗಡಚಿಕ್ಕಿದಂತಾಗಿತ್ತು. ಆದರೆ ಭಾವನಾಜೀವಕ್ಕೆ ಉಂಟಾದ ಗಾಯ ಕಡಿಮೆಯಾಯಿತು. ಭರಮ ಇಷ್ಟರಲ್ಲಿ ವಸಂತನ ಅಟ್ಟದ ಕೋಣೆಯನ್ನು ಸಜ್ಜುಮಾಡಿ ಬಂದಿದ್ದನು. ತಾಯಿಯ ಉಪದೇಶದ ಮೇರೆಗೆ ವಸಂತ ತನ್ನ ಕೋಣೆಗೆ ಹೊರಡುವ ಮೊದಲು ದೇಸಾಯರ ಕೋಣೆಗೆ ಬಂದು, ಅವರ ಪಾದಕ್ಕೆ ಬಿದ್ದು, 'ನನ್ನ ತಪ್ಪಾಯಿತು' ಎಂದನು. 'ನನಗೆ ನಿನ್ನ ಮೇಲೆ ನಂಬಿಗೆಯಿಲ್ಲ ; ತಪ್ಪಾಗಿದ್ದರೆ ನಡತೆಯಿಂದ ತೋರಿಸು' ಎಂದು ಉತ್ತರ ಕೊಟ್ಟು ಸುಮ್ಮನಾದರು.

* * *

ಈ ವಿಷಯಕ್ಕೆ ಇನ್ನೊಮ್ಮೆ ಚರ್ಚೆಯಾಗಲಿಲ್ಲ. ತಾನು ಇಷ್ಟೆಲ್ಲ ಹಾರಾಡಿದರೂ ಮತ್ತೆ ಇನ್ನೊಂದು ಚಕಾರವಿಲ್ಲದೆ ತಂದೆಯ ಮನೆ ತನ್ನನ್ನು ಸ್ವೀಕರಿಸಿತು, ಇಷ್ಟೇ ವಸಂತನಿಗೆ ಸಂತೋಷ. ತಂದೆ ಇನ್ನೊಮ್ಮೆ ರಾಘಪ್ಪನ ಹೆಸರು ಎತ್ತಲಿಲ್ಲ. ವಸಂತ ತಾನು ಹಳ್ಳಿಗೆ ತಿರುಗಿ ಹೋಗುವೆನೆಂಬ ಮಾತನ್ನೂ ಆಡಲಿಲ್ಲ. ಮತ್ತೆ

ಸುಖದ ದಿನಗಳು ಸುರುವಾದವು. ಸುಖಕ್ಕೆ ಬೆಲೆ ತೆತ್ತಬೇಕಾಗುತ್ತದೆಂಬ ವಿಚಾರ ವಸಂತನಿಗೆ ಬಲುಬೇಗ ಮರೆತುಹೋಯಿತು. ಅವನಿನ್ನೂ ಕೌಮಾರಾವಸ್ಥೆಯನ್ನೇ ದಾಟಿರಲಿಲ್ಲ. ಇನ್ನೂ ಐವತ್ತು ವರ್ಷಗಳಾದರೂ ದಾಟುವ ಸಂಭವವಿರಲಿಲ್ಲ. ತಾತ್ಕಾಲಿಕ ನೋವಿನ ಪರಿಣಾಮವಾಗಿ ರಾಘಪ್ಪನ ಮನೆಗೆ ಮಾತ್ರ ಕಾಲುಹಾಕುವದನ್ನು ಬಿಟ್ಟನು.

# ೩೦ : ರಾಘಪ್ಪನ ವಿಜಯ

ದೇಸಾಯರ ಮನೆಯಲ್ಲಿ ಮುಷ್ಟಿ ಜೋಳವನ್ನು ಗಳಿಸಿ ಹೊರಬಿದ್ದ ವೇದಾಂತಿ ಅಪ್ಪಣಭಟ್ಟನು 'ಆತ್ಯು, ಈಶ್ವರನ ಕೃಪಾ ! ನಮ್ಮನ್ನಾರ ಜೀವಂತ ಬಿಟ್ಟ' ಎಂದು ಮನಸ್ಸಿಗೆ ಸಮಾಧಾನ ಹೇಳಿಕೊಂಡನು. ಅವನಿಗೆ ಮುಂದೇನು ಮಾಡಬೇಕೆಂಬುದು ತಿಳಿಯದಾಯಿತು. ಅವನು ವಸಂತರಾಯನ ಆಶ್ರಯದಲ್ಲಿ ಧಾರವಾಡಕ್ಕೆ ಬಂದ ಮೂಲಕ ತನ್ನ ಜೊತೆಗೆ ಒಂದು ಪೈ ಕೂಡಾ ತಂದಿರಲಿಲ್ಲ. ಆದರೆ ವಸಂತರಾಯನಂತೂ ನಡುನೀರಿನಲ್ಲಿ ಕೈಬಿಟ್ಟನು. ಅತ್ತ ರಾಘಪ್ಪನ ಮನೆಯ ಪತ್ತೆಯೂ ಅವನಿಗೆ ನೆನಪಿರಲಿಲ್ಲ. ಅವನ ಮನೆಯ ಎದುರು ಒಂದು ಬಸರೀಗಿಡವಿದ್ದ ಗುರುತೊಂದೇ ನೆನಪು. ರಾಘಪ್ಪನ ಅಡ್ಡ ಹೆಸರು ಕೂಡ ಮರೆತುಹೋಗಿತ್ತು. ಆದರೆ ಅವನ ಸುದೈವದಿಂದ ಅವನನ್ನು ಮಧ್ಯಾಹ್ನ ದೇಸಾಯರ ಮನೆಗೆ ತಂದ ಟಾಂಗೇವಾಲಾ ಎದುರು ಬಂದನು. ಅಪ್ಪಣಭಟ್ಟ ಇದೇ ತನ್ನ ಮೋಕ್ಷಕಾಲವೆಂದು ಜೀವದ ಪರಿವೆಯಿಲ್ಲದೆ ಟಾಂಗಾದ ಎದುರುನಿಂತು ಕೂಗಿಕೊಂಡನು. ಟಾಂಗಾ ನಿಂತಿತು. ಟಾಂಗೇ ವಾಲನ ಕಡೆಯಿಂದ ಯಾವ ಮನೆಯಿಂದ ಹೊರಟನೆಂದೂ, ಅದರತ್ತ ಹೋಗಲು ಯಾವ ದಾರಿ ಹಿಡಿಯಬೇಕೆಂದೂ ಕೇಳಿಕೊಂಡು, ಆ ದಾರಿ ಗುಂಟ ಸುತ್ತಾಡಿ ಕಷ್ಟಬಟ್ಟು ಕೊನೆಗೆ ಬಸರೀಗಿಡದ ಎದುರಿಗೆ ಇದ್ದ ರಾಘಪ್ಪನ ಮನೆಯನ್ನು ಹುಡುಕಿ ತೆಗೆದನು. ಅಲ್ಲಿ ಎರಡು ತುತ್ತು ಊಟದ ಶಾಸ್ತ್ರ ಮುಗಿಸಿ, ದೇಸಾಯರ ಮನೆಯಲ್ಲಿ ನಡೆದ ವರ್ತಮಾನವನ್ನು ಸಾದ್ಯಂತವಾಗಿ ವಿವರಿಸಿದನು. ರಾಘಪ್ಪನಿಂದ ಆರು ಆಣೆ ಗಾಡೀ ಖರ್ಚು ಇತರ ಖರ್ಚು ಎಂದು ಸಂಭಾವನೆ ಪಡೆದು, ಮುಷ್ಟಿ ಜೋಳದೊಡನೆ 'ಹರಿ ಹರಿ' ಎನ್ನುತ್ತ ತಮ್ಮೂರ ಮೋಟರ ಹಿಡಿದನು.

ರಾಘಪ್ಪ ವಸಂತನ ಬರುವಿಕೆಗಾಗಿ ಹದಿನೈದು ದಿವಸ ಹಾದಿಕಾಯ್ದನು. ಆದರೆ ವಸಂತನ ಸುಳಿವೇ ಇಲ್ಲ. ಸಂತೆಗೆ ಬರುವ ಊರವರು ವಸಂತರಾಯ ಸುಣ್ಣದ ಮನೆಗೆ ಬಂದೇ ಇಲ್ಲವೆಂದು ಹೇಳಿದರು. ಹಾಗಾದರೆ ವಸಂತ ಹೋದ ನೆಲ್ಲಿ ? ಧಾರವಾಡದಲ್ಲಿ ತಂದೆಯ ಮನೆಯಲ್ಲಿಯೇ ಇದ್ದುಕೊಂಡು ತನ್ನೊಡನೆ ಭೆಟ್ಟಿಯಾಗುವದನ್ನು ತಪ್ಪಿಸುತ್ತಾನೆಯೇ ? ನಾಚಿಕೆಯಿಂದಲೊ ತಂದೆಯ

ಭಯದಿಂದಲೊ ? ನಾಟಕದ ನಾಟಕವು ಹಾಳಾಗಿಹೋಗಲಿ, ಆದರೆ ಹೀಗೆ ಸಡಿಲುಬಿಟ್ಟರೆ ವಸಂತರಾಯ ತನ್ನ ಅಪ್ಪನ ಮಗನಾಗಿ ತಾನು ಅವನಿಗೆ ತನ್ನ ಮಗಳನ್ನು ಕೊಡುವ ಕನಸು ಕನಸಾಗಿಯೇ ಉಳಿದೀತು. ದಾರಿಯಲ್ಲಿ ಕೂಡ ಅಪ್ಪಿತಪ್ಪಿ ವಸಂತ ಕಾಣದಾದನು. ಅಬ್ಬಾ, ಅಪ್ಪನ ದರ್ಪವೇ ? ದಿನ ಕಳೆದಂತೆ ರಾಘಪ್ಪನ ಆತುರ ಹೆಚ್ಚಾಗತೊಡಗಿತು. ವಸಂತ ಹೊರಗೆ ಬರದಿದ್ದರೆ ತಾನೇ ದೇಸಾಯರ ಮನೆಯ ಮೇಲೆ 'ದಾಳಿ' ಮಾಡಬೇಕು. ಹೇಗಾದರೂ ಒಮ್ಮೆ ಅವನನ್ನು ನೋಡಬೇಕು. ಮುಂದಿನ ಉಪಾಯ ಅಲ್ಲಿಯೇ ಹೊಳೆಯುವವು. ಹೀಗೆ ದೇಸಾಯರ ಮನೆಯನ್ನು ಹೊಗುವದಕ್ಕಾಗಿ ಒಂದು ನೆವ ಹುಡುಕುತ್ತಿರಲಾಗಿ ಒಂದು ಉತ್ಕೃಷ್ಟ ನೆವವು ತಾನಾಗಿಯೇ ನಡೆಯುತ್ತ ಬಂದಿತು.

ಒಂದು ದಿನ ಚಂಪಕ್ಕ ಉಂಡದ್ದನ್ನೆಲ್ಲ ವಾಂತಿ ಮಾಡಿಕೊಂಡಳು.

ರಾಘಪ್ಪ ಟಣ್ಣನೆ ಜಿಗಿದನು. 'ಎಷ್ಟು ದಿನ ಆತ್ಯು ವಾಂತಿ ಸುರುವು ಆಗಿ?' ಎಂದು ಪ್ರಶ್ನಿಸಿದನು. ಚಂಪಕ್ಕ ಕಣ್ಣೀರು ತೆಗೆದು 'ಈಗ ಮೂರು ದಿನ ಆದವು' ಎಂದಳು.

ಅಂದೇ ಮಧ್ಯಾಹ್ನ ಅವಳನ್ನು ಟಾಂಗಾ ಮಾಡಿಕೊಂಡು ಸಿವಿಲ್ ಆಸ್ಪತ್ರೆಗೆ ಕರೆದೊಯ್ದು ಲೇಡಿ ಡಾಕ್ಟರರಿಗೆ ತೋರಿಸಿ ಅವರಿಂದ ಲೇಖಿ ಅಭಿಪ್ರಾಯ ತೆಗೆದುಕೊಂಡನು – ಮೂರು ತಿಂಗಳು ಆಗಿರಬಹುದು !

'ರಾಘೋಬಾ ಭರಾರೀಕಿ ಜೈ !' ಎಂದಕೊಂಡ ರಾಘಪ್ಪ.

ಈ ಸುದ್ದಿಯನ್ನು ದೇಸಾಯರಿಗೆ ಮುಟ್ಟಿಸದೇ ರಾಘಪ್ಪನ ಮನಸ್ಸು ಶಾಂತವಾದೀತೇ?... ಮರುದಿನವೇ ದೇಸಾಯರ ಮನೆಯ ಮೇಲೆ ದಾಳಿ ಮಾಡಿದನು.

ದೇಸಾಯರಿಗೆ ರಾಘಪ್ಪ ಏಕೆ ಬಂದಿದ್ದಾನೆಂಬುದು ತೋಚದಾಯಿತು. ಆದರೆ ತಮ್ಮ ಮಗನ ವಿಷಯ ತೆಗೆಯಲಿ, ರಾಗಪ್ಪನನಿಗೆ ಒಂದು ಕೈ ತೋರಿಸಿಯೇ ಬಿಡುತ್ತೇನೆ, ಎಂದುಕೊಳ್ಳುತ್ತ ಅವನನ್ನು ತಮ್ಮ ಕೋಣೆಯಲ್ಲಿ ಆದರದಿಂದ ಬರಮಾಡಿಕೊಂಡು, ತಮ್ಮ ಪ್ರೀತಿಯ ಕುತನಿಯ ತೆಕ್ಕೆ ಕೊಟ್ಟು, ವೀಳ್ಯ ತಂಬಾಕ ಮುಂದೆ ಸರಿಸಿ, ಅವನ ಕ್ಷೇಮಸಮಾಚಾರ ಕೇಳಿದರು. ನಂತರ ಅವನ ಮಾತು ಕೇಳಲು ಸಿದ್ಧರಾದರು. ರಾಘಪ್ಪನಾದರೂ ಅತ್ಯಂತ ನಯದಿಂದಲೂ ಭಕ್ತಿಯಿಂದಲೂ ಅರ್ಧ ತಕ್ಕೆಗೆ ಆನುತ್ತ, ಅರ್ಧ ಮುಖವನ್ನು ದೇಸಾಯರ ಸಮೀಪ ಕೊಂಕಿಸಿ, ಕಿವಿಯಲ್ಲಿ ಆಡುವವರಂತೆ ಮಾತು ಪ್ರಾರಂಭಿಸಿದನು :

'ರಾಯರಃ, ತಮ್ಮಂಥವರ ಕೃಪಾದಿಂದ ಎಲ್ಲಾ ಸುಖದಿಂದ ಸಾಗೇದ.

ಆದರೂ ದುರ್ದೈವ ನೋಡರಿ ; ತಮಗ ಸುಳ್ಳು ಆಗೋ ಪ್ರಸಂಗ ಎಲ್ಲಿ ನನ್ನ ಮ್ಯಾಲ ಬರತದೋ ಅಂತ ನನಗ ಹಗಲುರಾತ್ರಿ ನಿದ್ದಿಹತ್ತವಲ್ಲದು. ಯಾಕ ಅಂದರ ನೋಡ್ರಿ, ಮನುಷ್ಯನ ಬೆಲೆ ಇರೋದು ಅವನ ನಾಲಿಗ್ಗಾ. ಒಮ್ಮೆ ನಾಲಿಗಿ ಹೋತ್ಯು ಅಂದರ ಅದು ಸುಳಳ್ಳಾಗಬಾರದು. ಇದು ಸನಾತನಧರ್ಮ... ಆದರ ದೇವರs ಬಂದು ಕೊಟ್ಟ ಮಾತು ಸುಳ್ಳಾಡಿದರ ಹೆಂಗ ?... ಆಗ ಬರತದ ಖರೇ ಧರ್ಮಸಂಕಟ !... ಅಲ್ಲಲ್ಲಾ ; ನನ್ನ ಮಾತು ಸುಳ್ಳು ಆಗದಿರಲಿ ಅಂತ ಭಗವಂತನ್ನ ನಾ ಕೈಜೋಡಿಸಿ ಪ್ರಾರ್ಥಿಸಿಗೋತೇನಿ... ಆದರ ದೇವರs ಟೊಂಕಾ ಕಟ್ಟಿದರ...!'

ತನ್ನ ದೀರ್ಘ ಚರ್ವಿತಚರ್ಣವನ್ನು ದೇಸಾಯರು ಮುಗುಳುನಗೆ ನಗುತ್ತ ಸುಮ್ಮನೆ ಕೇಳಿಕೊಳ್ಳುತ್ತಿರುವದನ್ನು ಕಂಡವನೇ ರಾಘಪ್ಪನಿಗೆ ಬ್ರಹ್ಮಾಂಡಸಿಟ್ಟುಬಂದಿತು.... 'ಎಲಾ ದೇಸಾಯಿ, ನಗತೀಯಲ್ಲ !' ಎಂದು ಮನಸ್ಸಿನಲ್ಲಿಯೇ ಅಂದುಕೊಂಡು, ತನ್ನ ಪೂರ್ವಪೀಠಿಕೆಯನ್ನು ಅಲ್ಲಿಯೇ ನಿಲ್ಲಿಸಿ, ಉಗುಳು ನುಂಗುತ್ತ ಮುಂದುವರಿದನು :

'ಭಗವಂತನ ಲೀಲಾ ನೋಡಿರಿ, ದೇಸಾಯರ !... ಕನಸುಮನಸಿನ್ಯಾಗ ಎಣಿಸಿದ್ದಿಲ್ಲ ; ಈ ಇಳಿವಯಸ್ಸಿನ್ಯಾಗ ಮತ್ತ ಸಂತಾನಪ್ರಾಪ್ತಿಯ ಯೋಗ ಬಂದೀತು ಅಂತ ಯಾರಾದರೂ ಚತುರ ಜ್ಯೋತಿಷಿಗಳು ಹೇಳಿದ್ದರ ನಾ ಬಲ್ಲೆ ನಕ್ಕುಬಿಡತಿದ್ದೆ.. ಆದರ ಅದs ಖರೇ ಆಗಬೇಕs?'....

ದೇಸಾಯರ ನಗೆ ಅಡಗಿದ್ದನ್ನು ನೋಡಿ ಒಳಗಿಂದೊಳಗೆ ರಾಘಪ್ಪ, 'ಹೀಂಗ ಬಾರೋ ದೇಸಾಯಿ !' ಎಂದುಕೊಂಡನು. ದೇಸಾಯರು ಏನೂ ಮಾತಾಡಲಿಲ್ಲ. ರಾಘಪ್ಪ ಅವರ ಎದುರು, 'ಇಕಾ, ಲೇಡಿ ಡಾಕ್ಟರರಿಗೆ ತೋರಿಸಿಕೊಂಡು ಬಂದೆ' ಎಂದು ಸರ್ಟಿಫಿಕೇಟು ಹಿಡಿದನು. ದೇಸಾಯರು ಅದನ್ನು ದಿಟ್ಟಿಸಿ ನೋಡಲಿಲ್ಲ.

'ದೇಸಾಯರs, ನೀವು ನಂಬರಿ, ಬಿಡರಿ ; ನಾ ದೇವರಿಗೆ ಬೇಡಿಕೊಳ್ಳೋದು ಏನು ಅಂದರs – ದೇವಾ, ನನಗ ಗಂಡಸುಮಗಾ ಬ್ಯಾಡಾ... ಯಾಕs ಅಂದೀರಿ!... ಅಲ್ಲಾ, ನಮ್ಮ ಕಿಟ್ಟಿ ನನಗ ಹೊರಗಿನವನs?... ಇತ್ತಲಾಗ ಅಕ್ಕನ ಮಗ, ಅತ್ತಲಾಗ ಅಳಿಯ. ಆ ಹುಡುಗನ್ನ ಕಂಡ ಲಾಗಾಯಿತು ಅವನನ್ನ ಮಗನs ಅಂತ ಏಕೋಭಾವದಿಂದ ನೋಡಿಕೋತ ಬಂದೇನಿ !... ನನಗ ಇದ್ದಷ್ಟು... ಅದು ಎಷ್ಟs ಇರಲಿ, ಒಂದು ಬಿಲ್ಲಿ ಆದರೂ ಸರಿ, ಒಂದು ರಾಜ್ಯಾ ಆದರೂ ಸರಿ... ಅವಗs ಮುಟ್ಟಿಸಿ ನಾ ಕಣ್ಣು ಮುಚ್ಚಬೇಕು ಅಂತ ಸರಳ ಮಾರ್ಗದಾಗ ಅಡ್ಡಕಲ್ಲು

ಒಗೀಲಿಕ್ಕಿಲ್ಲಾ, ಅಂತ ನನ್ನ ವಿಶ್ವಾಸ ಅದ... ಆದರ ರಾಯರs, ದೈವರ ಆಟ ಹಿಂಗs ಅಂತ ನಮಗ ಗೆರಿ ಕೊರದು ಹೇಳಲಿಕ್ಕೆ ಬರತದೇನು?.... ನಾ ಯಾಕ ಇಷ್ಟು ಕಕಲಾತಿ[೧]ಯಿಂದ ಹೇಳತೀನಿ ಅಂದರ ನಾಳೆ 'ಸುಳ್ಳಾ' ಅಂತ ಲೋಕದ ಜನರು ಹೆಸರು ಇಟ್ಟು ಕರದರೂ ಸಹಿತ ತಮ್ಮಂಥ ಜಯಮಾನರ ಕಣ್ಣಿಗಾದರೂ ಖರೆ ಹಕೀಕತ್ತು ಬಿದ್ದಿದ್ದರ ಅದs ನಮ್ಮ ಕವಚಕುಂಡಲ...'

ದೇಸಾಯರು ಮತ್ತೆ ಮುಗುಳುನಗೆ ನಗುತ್ತ, 'ನಿಮಗ ಗಂಡಸುಮಗ ಹುಟ್ಟಿದರ ನಾ ಫೇಡೆ ಹಂಚಸತೇನಿ... ರಾಘಪ್ಪಾ, ನೀವು ಈ ದತ್ತಕದ ಕಾಳಜೀ ಬಿಡರಿ. ನಿಮ್ಮ ಆಸ್ತಿ ಕೃಷ್ಣಗ ಹೋಗೋದs ಬ್ರಹ್ಮಲಿಖಿತ ಇದ್ದರ ನೀವು ಎಷ್ಟು ಪ್ರಯತ್ನ ಮಾಡಿದರೂ ಹೋಗೋದು ತಪ್ಪೂದಿಲ್ಲ... ಆದರ ಸಿಗಬಾರದು ಅಂತ ದೇವರ ಮನಸು ಇದ್ದರ ಅವ ಏನು ತಿಪ್ಪರಲಾಗಾ ಒಗದರೂ ಅವಗ ಹತ್ತೂದಿಲ್ಲ... ಅದಕ್ಕ ಇಂಥಾ ವಿಷಯದಾಗ ನಿಮ್ಮಂಥ ಲೌಕಿಕ ಬಲ್ಲವರು 'ನನಗ ಮಗನs ಬ್ಯಾಡ ; ದತ್ತಕನs ತೊಗೋತೇನಿ' ಅಂದರ ಅದಕ್ಕ ದೇವರು ಮೆಚ್ಚೂದಿಲ್ಲ. ಲೌಕಿಕ ರೂಢಿ ಪ್ರಕಾರ ನೀವು, 'ದೇವರ, ನನಗ ಮಗನ್ನೇ ಕೊಟ್ಟು ವಂಶ ಉದ್ಧಾರ ಮಾಡು' ಅಂತ ಬೇಡಿಕೊಳ್ಳೋದs ಚಂದ. ದೇವರ ಮನಸ್ಸಿನ್ಯಾಗ ಏನು ಅದs ಯಾರಿಗೆ ಗೊತ್ತು ?' ಎಂದರು.

ರಾಘಪ್ಪ ಮನಸ್ಸಿನಲ್ಲಿಯೇ, 'ಹೌದಪಾ, ಖರೆ ಚತುರ ನೀನು !' ಎನ್ನುತ್ತ ಮತ್ತೆ ತನ್ನ ರಗಳೆಯನ್ನು ಊದತೊಡಗಿದನು :

'ರಾಯರs ಹೆಣ್ಣs ಆಗಲಿ, ಗಂಡs ಆಗಲಿ... ಯಾರ ಕೈಯಾಗಿನ ಮಾತೂ ಅಲ್ಲ. ನೀವು ಅನ್ನೋ ಪ್ರಕಾರ ಲೋಕರೂಢಿಗೆ ಮರ್ಯಾದೆ ಕೊಟ್ಟು ನಾನೂ ಗಂಡು ಹುಟ್ಟಲಿ ಅನ್ನೋದು ಶ್ರೇಯಸ್ಕರ ಖರೆ... ಆದರ ನನಗ ಸುಖಾ... ಇಲ್ಲರಿ... ನನ್ನ ಹೇಣ್ತಿ ಅಶಕ್ತ ಹೆಂಗಸು... ತಾ ಏನು ಮಾಡಿಕೋತಾಳೋ ಅಂತ ನನಗ ಚಿಂತಿ ಹತ್ತೇದ....!'

'ಏನೂ ಇಲ್ಲ ಏಳರಿ... ನೀವು ಭೀತಿ ಬಿಡರಿ. ದೇವರ ಮ್ಯಾಲ ವಿಶ್ವಾಸ ಇಡರಿ... ಎಲ್ಲಾ ಒಳ್ಳೇದs ಆಗತದ....'

ದೇಸಾಯರು ಯಾವ ವಿಕಾರವನ್ನೂ ತೋರಿಸದೆ ತನ್ನ ಪಕ್ಷವನ್ನೇ ಎತ್ತಿಹಿಡಿದು ತನ್ನ ಹಿಡಿತದಿಂದ ಪಾರಾದರೆಂದು ರಾಘಪ್ಪನಿಗೆ ಅನಿಸಿತು. ದೇಸಾಯರು ಸಿಟ್ಟಿಗೇಳದ್ದಕ್ಕಾಗಿ ಅವನಿಗೆ ಸಿಟ್ಟುಬಂತು. 'ಎಲ, ನನ್ನ ಹಳೇ ಶಕ್ತಿ

---

೧. ಕಕ್ಕುಲತೆ, ಪ್ರೀತಿ.

ಇದ್ದರ ಇನ್ನೂ ಏನಾದರೂ ಉಪಾಯ ತೆಗೆದು ಈ ದೇಸಾಯಿನ ಸಿಟ್ಟಿಗೆ ಎಬ್ಬಿಸತಿದ್ದೆ. ಈಗ ನನ್ನ ಕೈ ನಡೀ ಒಲ್ಲದು !' ಎಂದುಕೊಂಡನು. ವಿಚಾರ ಮಾಡಿದಂತೆಲ್ಲಾ ವಿಚಾರಗಳು ಸೋಲತೊಡಗಿದವು ಸ್ಫೂರ್ತಿಯಿಲ್ಲದೆ ಕವಿತೆ ಬರೆಯಲು ಕುಳಿತ ಕವಿಯಂತೆ ರಾಘಪ್ಪನಿಗೆ ಮೈತುಂಬ ದಣಿವಾಯಿತು. ಇನ್ನೊಂದು ವಾಟಕ ನೀರು ಕುಡಿದು ಹೊರಡಬೇಕೆನ್ನುವಷ್ಟರದಲ್ಲಿ ತೋಟದಲ್ಲಿ ಪೇರಲಗಿಡವನ್ನು ಏರಿ ಕಾಯಿಗಳನ್ನು ಹರಿಯುತ್ತಿದ್ದ ವಸಂತರಾಯನು ಕಿಡಿಕಿಯೊಡಗಿಂದ ಕಂಡನು.

ಇನ್ನು ಸಂಪ್ರದಾಯಕ್ಕೆ ಅನುಗುಣವಾಗಿ, ಅವರಲ್ಲಿ ಆಸಕ್ತಿದೋರಿ, ದೇಸಾಯರ ಮುಖಾಂತರ ಅವನು ತಮ್ಮ ಚಿರಂಜೀವನೆಂದು ಹೇಳಿಸಿಕೊಂಡು ನಂತರ ಅವನನ್ನು ಕರೆಯಿಸಿಕೊಳ್ಳುವದು ಅನಿಶ್ಚಿತ. ಅಲ್ಲದೆ ಬೆರ್ಕಿ ದೇಸಾಯಿ ತನ್ನ ಸವಿಮಾತುಗಳ ಮೇಲೆ ತಣ್ಣೀರು ಸುರುವಿ ತಪ್ಪಿಸುವ ಸಂಭವವೂ ಉಂಟು. ಹಿಂಗೆಂದುಕೊಂಡು ಹಿಂದುಮುಂದೆ ನೋಡದೆ ರಾಘಪ್ಪ ಕುಳಿತಲ್ಲಿಂದಲೇ ಕೂಗಿಕೊಂಡನು : 'ಏ ವಸಂತರಾಯಾ, ಹೋ ವಸಂತರಾವ್!' ತನ್ನನ್ನು ಯಾರು ಕರೆಯುತ್ತಿದ್ದಾರೋ ತಿಳಿಯದೆ ವಸಂತ ಬೇಗಬೇಗನೇ ಗಿಡ ಇಳಿಯತೊಡಗಿದನು.

'ನಿಮಗೆ ನಮ್ಮ ವಸಂತನ ಗುರುತು ಇದೆಯೇ? ಹೇಗೆ ಆಯಿತು? ಎಲ್ಲಿ ಆಯಿತು?' ಮುಂತಾಗಿ ದೇಸಾಯರು ತನ್ನನ್ನು ಕೇಳಿಯಾರೆಂದು ರಾಘಪ್ಪನ ಬಾಯಲ್ಲಿ ನೀರೂರಿತ್ತು. ಹಾಗೆ ಅವರು ಕೇಳಿದ್ದರೆ ವಸಂತ ನಾಟಕದಲ್ಲಿ ರಾಜಾ ಪಾರ್ಟು ಮಾಡಲು ಹವ್ಯಾಸಬಟ್ಟದ್ದು, ಪಡದೆ–ಪೇಟಗಳ ಬಗ್ಗೆ ವಿಚಾರಿಸಿದ್ದು, ಸುಂದ್ರಾಸಾನಿಯ ಮನೆಯಲ್ಲಿ ಗಾಣೆ ಕೇಳಿದ್ದು – ಇವೆಲ್ಲವುಗನ್ನು ರಂಗುಮಾಡಿ ಹೇಳಿ ದೇಸಾಯರ ಮುಖ ತಗ್ಗುವಂತೆ ಮಾಡಬೇಕೆಂದು ರಾಘಪ್ಪನ ಹವ್ಯಾಸ. ಆದರೆ ದೇಸಾಯರು ಅದಾವುದನ್ನೂ ಕೇಳಲಿಲ್ಲ. ಏನೂ ಅಗದವರಂತೆ, ಎಲ್ಲವನ್ನೂ ತಿಳಿದು ಹಳೆಯ ವಿಷಯವಾದವರಂತೆ, ಸುಮ್ಮನೇ ಕುಳಿತುಬಿಟ್ಟರು.

ವಸಂತರಾಯ ಕೋಣೆಯೊಳಕ್ಕೆ ಬಂದವನೇ ರಾಘಪ್ಪನನ್ನು ಕಂಡು ಪೆಚ್ಚುಮುಖ ಮಾಡಿಕೊಂಡು ನಿಂತನು. ಆದರೆ ಅದಕ್ಕೆ ಹೆಚ್ಚು ಆಸ್ಪದ ಕೊಡದೆ ರಾಘಪ್ಪ, 'ಏನು ವಸಂತರಾವ್, ನಮ್ಮ ಗುರುತಾ ಮರೆತಿರೇನು? ಹುಬ್ಬಳ್ಳೀ ದನದ ಜಾತ್ರ್ಯಾಗ ನಾನಾsಆ ಎರಡು ಮೂಡಲಹೋರಿ ತೋರಿಸಿದ್ದೆ.. ಅಲ್ಲ, ಆಗ ಧಾರವಾಡಕ್ಕೆ ಬಂದಾಗ ನಮ್ಮ ಮನಿಗೆ ಬರತೇನಿ ಅಂತ ಹೇಳಿ ಯಾ ದಿವಸ ಆತ್ಯು.. ಇಲ್ಲೇ ಲೈನಬಜಾರದಾಗ ಅದ ನಮ್ಮ ಮನಿ. ಒಮ್ಮೆ ಬಂದು

ಹೋಗಲ್ಲಾ... ವಚನಾ ಮರೀಬ್ಯಾಡ... ಯಾಕ, ನಿಮ್ಮಪ್ಪ ಬ್ಯಾಡ ಅಂತಾರೇನು ಮತ್ತ?.. ನಾ ಎಲ್ಲಾ ಹೇಳೇನಿ ಅವರಿಗೆ, ನಿಮ್ಮ ಮಗನ ಪಾದದ ಧೂಳಿ ಒಮ್ಮೆ ಆದರೂ ನಮ್ಮ ಮನಿಗೆ ಹತ್ತಲಿ ಅಂತ!... ನಾಳೆ ಬಂದು ಹೋಗು!' ಎಂದು ಫಡಪೋಶಿತನ[೧]ದಿಂದ ಹೇಳಿ ದೇಸಾಯರತ್ತ ನೋಡುತ್ತ ಹುಚ್ಚುನಗೆ ನಕ್ಕು, 'ನಾ ಬರತೇನಿ' ಅನ್ನುತ್ತ ಎದ್ದನು. ದೇಸಾಯರು ಸುಮ್ಮನಿದ್ದರು. ಅವನು ಹೋದಮೇಲೂ ಅವರು ವಸಂತನಿಗೆ ಏನೂ ಹೇಳಲಿಲ್ಲ.

ಆದರೆ ಮನೆಯತ್ತ ವಿನಾಕಾರಣ ಭರದಿಂದ ನಡೆದ ರಾಘಪ್ಪನಿಗೆ ಮೈಯೆಲ್ಲ ನಾಚಿಕೆಯಾಗಿತ್ತು, ತನ್ನ ಈ ಕಡೆಯ ವಾಚಾಟಿಕೆಗಾಗಿ. 'ಎಲ, ರಾಘೋಬಾ ಭರಾರಿ ನಾನು ; ಹೀಗೆ ಖುದ್ದರಗೇಡಿ ಸುಳ್ಳು ಹೇಳಲಿಕ್ಕೆ ಎಂದು ಕಲಿತೆ? ಈಗ ಸುಳ್ಳು ಹೇಳುವ ಕಾರಣ ಏನಿತ್ತು? ಬರೀ ಮನೆಗೆ ಬಾ ಎಂದು ಹೇಳಿದ್ದರೆ ಆಗುತ್ತಿದ್ದಿಲ್ಲವೆ? ಹೀಗೆ ಕ್ಷುದ್ರ ಲಿಗಾಡು[೨]ಗಳನ್ನು ಕಟ್ಟುವ ಚಟ ಈಗ ಏಕೆ ಹೊಕ್ಕಿತು?'

ರಾಘಪ್ಪನ ದಿನಗಳು ಬದಲಾಗುತ್ತಿದ್ದುದು ಅವನಿಗೆ ಹೆಜ್ಜೆಹೆಜ್ಜೆಗೆ ಅನುಭವಕ್ಕೆ ಬರುವದು. ದೇಸಾಯಿಯಂಥವರೊಡನೆ ಸೆಣಸಾಡುವಾಗ ಆಡಬೇಕಾಗುವ ಸುಳ್ಳಿನ ಪಾತಳಿಯೇ ಬೇರೆ. ಇಂಥ ಚಿಲ್ಲರೆ ಸುಳ್ಳು ಆಡಿದ್ದಕ್ಕಾಗಿ ರಾಘಪ್ಪನಿಗೆ ತನ್ನ ಮೇಲೆ ತನಗೇ ಸಿಟ್ಟುಬಂದಿತು. 'ಅಯ್ಯೋ' ಅಂದುಕೊಂಡನು.

---

೧. ಮುಂದೆ ಬಿದ್ದು ಮಾತಾಡುವುದು. ೨. ಸುಳ್ಳುಕತೆ

# ೩೧ : ಔಷಧ

ಮರುದಿನ ಮಧ್ಯಾಹ್ನ ಊಟ ಮುಗಿಸಿದಮೇಲೆ, ಒಂದು ತಾಸು ನಿದ್ದೆ ಮಾಡಿದಂತೆ ನಟಿಸಿ, ವಸಂತರಾಯ ತನ್ನ ಕೋಣೆಯಲ್ಲಿ ಗಂಜಿಯ ಅರಿವೆಗಳನ್ನು ಧರಿಸಿ ಸಿಂಗಾರಾಗಿ, ಮೂರು ಗಂಟೆಯ ಸುಮಾರಿಗೆ, ಕಳ್ಳಹೆಜ್ಜೆ ಹಾಕುತ್ತ ಸದ್ದಿಲ್ಲದೆ ಪಡಸಾಲೆಯ ಬಾಗಿಲ ತೆಗೆಯುವ ಹಂಚಿಕೆಯಲ್ಲಿದ್ದಾಗ, ನಿದ್ದೆ ಮಾಡುತ್ತಿರಬಹುದೆಂದು ಅವನು ಭಾವಿಸಿದ ದೇಸಾಯರು, ತಮ್ಮ ಕೋಣೆಯ ಬಾಗಿಲು ತೆಗೆದು ನೀಟಾಗಿ ಅವನ ಕಡೆಗೇ ಬಂದರು. ದೇಸಾಯರ ಕೈಯ ಬಿರುಸನ್ನೂ ರಟ್ಟೆಯ ತ್ರಾಣವನ್ನೂ ವಸಂತ ಹೋದ ಬಾರಿ ಕಂಡಾಗಿನಿಂದ ಅವರ ಬಗ್ಗೆ ಅವನಲ್ಲಿ ಅಪೂರ್ವ ಆದರ ಹುಟ್ಟಿತ್ತು. ಈಗಂತೂ ಆದರದಿಂದ ಅವನು ಥರಥರ ನಡುಗತೊಡಗಿನು. ಸಾಲದುದಕ್ಕೆ ದೇಸಾಯರು ತೀರ ಸಮೀಪಕ್ಕೆ ಬಂದು ನಿಂತು, 'ರಾಘಪ್ಪನ ಮನೀಗೆ ಹೋಗತೀಯೇನು?' ಎಂದ ನೀಟಾಗಿ ಅವನನ್ನು ಕೇಳಿದರು.

ಅವನು ಗಾಬರಿಯಿಂದ 'ಹೌದು – ಇಲ್ಲ' ಮಾಡತೊಡಗಿದನು. ಒಂದು ಸುಳ್ಳು ಹುಟ್ಟಿಸಲು ಕೂಡ ಅವನ ಮನಸ್ಸು ನಿಶ್ಶಕ್ಯವಾಗಿತ್ತು. ಆದರೆ ದೇಸಾಯರು ಹೆಚ್ಚು ಗಾಬರಿಗೆ ಅವಕಾಶಕೊಡದೆ, 'ನೀ ಹೋಗತಿದ್ದರ ಈ ಚೀಟಿ ಒಯ್ದು ರಾಘಪ್ಪಗ ಮುಟ್ಟಿಸು. ನೀ ಬ್ಯಾರೆ ಕಡೆ ಹೋಗತಿದ್ದರ ಭರಮನ ಜೋಡಿ ಕೊಟ್ಟು ಕಳಿಸತೇನಿ' ಎಂದರು.

ಸ್ವಾರ್ಥವಿಲ್ಲದೆ, ಪೂಜ್ಯಪಾದ ತಂದೆಯವರ ಸೇವೆಯೂ ಘಡಾಯಿಸುತ್ತದೆ ಎಂಬ ಹಿಗ್ಗಿನೊಡನೆ ತನ್ನ ಸಹಜ ಸುಳ್ಳನ್ನು ಬೆರೆಸುತ್ತ ವಸಂತ, 'ಅದs ಹಾದಿಗೆ ಹೋಗತೇನಿ. ಬರತ ಬೇಕಾದರ ಕೊಟ್ಟು ಬರತೇನಿ...' ಎಂದು ಅಂದನು.

ದೇಸಾಯರು ಹೆಚ್ಚು ಚಿಕಿತ್ಸೆ ಮಾಡದೆ ತಮ್ಮ ಕೈಯಲ್ಲಿದ್ದ ಒಂದು ಮಡಿಚಿದ ಕಾಗದವನ್ನು ಕೊಟ್ಟರು. ಅದಕ್ಕೆ ಕವ್ಹರ ಕೂಡ ಇರಲಿಲ್ಲ. ಹೋಗುವಾಗ, 'ನಮ್ಮಪ್ಪ ಕೊಟ್ಟಾರ, ಇಷ್ಟs ಹೇಳು' ಎಂದು ಹೇಳಿದರು.

ವಸಂತನಿಗೆ ಈ ಪತ್ರವೆಂದರೆ ರಾಘಪ್ಪನ ಮನೆಗೆ ನಿರಾತಂಕವಾಗಿ ಹೋಗಲು ಸರಕಾರಿ ಪರವಾನಿಗೆ ಸಿಕ್ಕಂತಾಯಿತು. ಆದರೆ ತನ್ನ ಬಗ್ಗೆ ಏನಾದರೂ

ಇದೆಯೇ ಆ ಪತ್ರದಲ್ಲಿ, ಎಂಬ ಶಂಕೆಯಿಂದ ಅದನ್ನು ಅರ್ಧ ದಾರಿಯಲ್ಲಿ, ಗಿಡದ ಬುಡಕ್ಕೆ ನಿಂತು ಓದಿ ನೋಡಿದನು. ಅದರಲ್ಲಿ ತನ್ನ ಹೆಸರು ಕೂಡ ಇರಲಿಲ್ಲ.

ಏಕೆಂದರೆ ಅದು ಅಚ್ಯುತನು ಮುಂಬೈಯಿಂದ ಕಳಿಸಿಕೊಟ್ಟ ವೆಂಕಟರಾಯನ ಬಕ್ಷೀಸುಪತ್ರದ ಪ್ರತಿಯ ಪ್ರತಿ. ದೇಸಾಯರು ಮುಂಜಾನೆಯೇ ಅದರ ನಕಲು ಮಾಡಿಟ್ಟುಕೊಂಡು ವಸಂತ ಹೋಗುವ ಹಾದಿಯನ್ನೇ ನೋಡುತ್ತಿದ್ದರು. ವಸಂತನ ಮುಖಾಂತರವೇ ಅದನ್ನು ರಾಘಪ್ಪನಿಗೆ ಕಳಿಸಿಬೇಕೆಂದು ಅವರ ಬೇತು. ಅಂತೆಯೇ ಅವನು ಬಚ್ಚಲಕ್ಕೆ ಮುಖ ತೊಳೆಯಲಿಕ್ಕೆ ಬಂದಾಗಲೇ ಎಚ್ಚರಾದವರು ಅವನ ಬೆಕ್ಕಿನ ಹೆಜ್ಜೆಯ ಸದ್ದನ್ನು ಕೇಳಿ ಬಾಗಿಲ ಬಳಿ ಸಂಧಿದ್ದರು. ರಾಘಪ್ಪನಿಗೆ ಒಂದು ಬೆದರು ಗುಂಡು ಒಗೆದು ನೋಡೋಣ, ಎಂಬ ಉದ್ದೇಶ.

ವಸಂತರಾಯ ಉತ್ಸುಕತೆಯಿಂದ ನೇರವಾಗಿ ರಾಘಪ್ಪನ ಮನೆಗೇ ಹೋದನು. ರಾಘಪ್ಪನ ಹಸನ್ಮುಖ ಅವನನ್ನು ಸ್ವಾಗತಿಸಿತು. ಅವನು ಬಂದೊಡನೆ ಉತ್ಕೃಷ್ಟ ಗೋಡಂಬಿಯ ಉಪ್ಪಿಟ್ಟು ತಯಾರಿಸಲು ಅಪ್ಪಣೆ ಅಡಿಗೆಮನೆಗೆ ಹೋಯಿತು. ರಾಘಪ್ಪ ಅವನಿಗೆ ತೆಕ್ಕೆ ಕೊಟ್ಟು ಕೂಡಿಸಿ ನರ್ಮವಾಗಿ ಚೇಷ್ಟೆ ಮಾಡತೊಡಗಿದನು.

'ಅದಕ್ಕs ನೋಡಪಾ, ತಂದೀ–ಮಗಾ ಅನ್ನೋದು. ನಿನಗೆ ಹಿಸೆ ಕೊಡಿಸಲಿಕ್ಕೆ ಹೋಗಿ ನಾವು ಕೆಟ್ಟವರು ಆದೆವು. ನೀವು–ನೀವು ಒಂದs. ನೀರು ಬೆತ್ತಾ ಹೊರಗ ಒಕ್ಕೂಟ್ಟಹಂಗ ನಮ್ಮನ್ನು ಹೊರಗ ಒಗದಿರಿ...!'

ಮತ್ತೆ ಆ ಮಾತು ಈ ಮಾತು ಆದವು. ವಸಂತ ಹೆದರುತ್ತಿದ್ದ ಕಪಾಳಮೋಕ್ಷನ ಮಾತು ಬಿಟ್ಟು ರಾಘಪ್ಪ ಉಳಿದ ಹರಟೆ ಹೊಡೆದನು. ಕೊನೆಗೆ ನಾಟಕದ ವಿಷಯ ಬಂದಿತು. ನಾಟಕದಲ್ಲಿ ಯಾ ಯಾ ಕಂಪನಿಯವರು ಎಷ್ಟೆಷ್ಟು ಗಳಿಸಿದರು, ಹೇಗೆ ಮಣ್ಣು ಮುಕ್ಕಿದರು, ಎಂಬುದನ್ನು ರಸವತ್ತಾಗಿ ಬಣ್ಣಿಸುತ್ತ ರಾಘಪ್ಪ, 'ಅಂತೂ ನಿನ್ನ ಕಂಪನಿ ಹುಟ್ಟೂದರಕಿಂತಾ ಮೊದಲs ಸತ್ತಿತು ಅನ್ನು !' ಎಂದನು.

ವಸಂತ ಮರ್ಮಾಹತನಾಗಿ, 'ರಾಘಪ್ಪಾ, ಈಗ ಏನs ಆಗಲಿ. ಇಂದಿಲ್ಲ ನಾಳೆ ಆದರೂ ನಾ ಒಂದು ಕಂಪನಿ ತಗಿಯೋವನs !' ಎಂದನು.

'ಆಗಲೆಪಾ, ತಗೀವಂತಿ. ಆದರ ನಿನ್ನ ಕಂಪನಿ ಹುಟ್ಟೋದರಾಗ, ನಮ್ಮಂಥ ಗೃಧ್ರಗಳು ಕಣ್ಣು ಮುಚ್ಚಿರತೇವಿ... ಹೋಗಲಿ ಬಿಡು. ಅಷ್ಟೊತ್ತಿಗೆ ನಿನಗ ಮತ್ತ ಯಾರಾದರೂ ಗುರುಗಳು ಸಿಕ್ಕs ಸಿಗತಾರ... ಈಗಿನ ಕಾಲಕ್ಕ ಗುರುಗಳಿಗೆ ಏನು ಕಡಿಮಿ?'

'ನಿಮಗ ಏನು ಹೇಳಲಿ, ರಾಘಪ್ಪಾ?..... ಅಂದ ಎಲ್ಲಾ ಕೆಲಸಾ ಕೆಡಿಸಿದವರು ನೀವs. ಈಗ ನನಗs ಹಂಗಸತೀರಿ... ಅಂದ ಅಪ್ಪಣಭಟ್ಟನ ಬದಲಿ ನೀವs ಬಂದಿದ್ದರ....'

'ಬಂದಿದ್ದರ ನಮಗೂ ಒಂದು ಮುಕ್ಕ ಜೋಳ ಲಾಭ ಆಗುತ್ತಿತ್ತು....!'

'ಏ, ನಿಮ್ಮ ದಶಇಂದ ನಮ್ಮ ಅಪ್ಪಗ ಮರ್ಯಾದೆ ಬಹಳ ಆದ. ನಿನ್ನೆ ನಮಗ ಆ ಕುತನಿ ತೆಕ್ಕೆ ಕೊಟ್ಟದ್ದನಲ್ಲ, ಅದನ್ನ ಅವ ಯಾರಿಗೂ ಕೊಡೂದಿಲ್ಲ. ತೀರ ದೊಡ್ಡವರು, ಅಥವಾ ಆಪ್ತರು ಬಂದರ ಕೊಡತಿರತಾನ....'

'ನಿಮ್ಮಪ್ಪ ಎಲ್ಲಾದಕ್ಕೂ ಒಪ್ಪ್ಯಾನು... ಆದರ ನಿನಗ ಹಿಸೆ ಕೊಟ್ಟಾನು ಅಂತ ನನಗ ಮಾತ್ರ ಅನಸವಲ್ಲದು ಬಿಡು.... ಇನ್ನೊಂದು ವಸಂತರಾಯ, ಅದಕ್ಕೂ ಹಸಿವಿ ಬೇಕಾಗತದ. ಹಸಿವಿ ಇಲ್ಲದ ಯಾ ಕೆಲಸನೂ ಆಗೂದಿಲ್ಲ.

ನೀ ಇನ್ನೂ ಸಣ್ಣವ. ನಿನಗ ಇದರ ಬಿಸಿ ಒಳತನಕ ಹತ್ತಿಲ್ಲ. ನಾಳೆ ಲಗ್ನ ಆಗಿ ಎರಡು ಚ್ಯಾಂ ಮ್ಯಾಂ ಹುಡುಗರು ಹುಟ್ಟಿದವಂದರ ಅಪ್ಪನ ಚಪ್ಪರದಾಗ ಎಷ್ಟು ದಿವಸ ಇರೋದು ಅಂತ ಸಂಕಟ ಆಗತದ. ಆಗ ಖರೆ ಹಿಸೆ ಬೇಡಲಿಕ್ಕೆ ಹತ್ತತೀದಿ. ಹಂಗ ಖರೆ ಸಂಕಟದಲೇ ಬೇಡಿದಾಗ ಹಿಸೆ ಸಿಕ್ಕರ ಸಿಗಬೇಕು. ಸುಳ್ಳs ನಾಟಕ ಕಂಪನಿ ತಗೀತೇನಿ ಅಂತ ಪೋಕಳ[೧] ಹುರುಪಿನ್ಯಾಗ ಬೇಡಿದರ ಏನು ಕೆಲಸ ಆಗಬೇಕು?.....'

ವಸಂತರಾಯ ತನ್ನಲ್ಲಿ ಹಿಸೆಯ ಬಗ್ಗೆ ನಿಜವಾದ ಸಂಕಟ ಹುಟ್ಟಿಲ್ಲವೇ, ಎಂದು ತನ್ನ ಮನಸ್ಸಿನಲ್ಲಿಯೇ ಹಣಿಕಿ ಹಾಕಿ ನೋಡಿದನು. ರಾಘಪ್ಪ ಹೇಳಿದ್ದು ನಿಜವೆನಿಸಿತು. ಆದರೆ ಕಪಾಳಮೋಕ್ಷ ಇನ್ನೂ ಮರೆತಿರಲಿಲ್ಲವಾದುದರಿಂದ ಈ ವಿಷಯವನ್ನು ಈಗಲೇ ಮುಂದುವರಿಸುವದು ವಸಂತನಿಗೆ ಸರಿಬರಲಿಲ್ಲ. ಮತ್ತೆ ಬೇರೆ ವಿಷಯ ಎತ್ತಿದನು. ಆ ವಿಷಯ ಈ ವಿಷಯ ಎತ್ತಿ ಹರಟೆಯಾಯಿತು. ಉಪ್ಪಿಟ್ಟು ಚಹವಾಗಿ, ವಸಂತ ಹೊರಡಲು ಅನುವಾದನು. ಅಷ್ಟರಲ್ಲಿ ಅಪ್ಪ ಕೊಟ್ಟ ಚೀಟಿಯ ನೆನಪಾಯಿತು. ಅದನ್ನು ರಾಘಪ್ಪನ ಕೈಗೆ ಕೊಟ್ಟು, 'ನಮ್ಮಪ್ಪಾ ಕೊಟ್ಟಾನ...' ಎಂದು ಹೇಳಿದನು.

'ನಿಮ್ಮಪ್ಪ ನನಗ ಚೀಟಿ ಕೊಟ್ಟಾರs?... ಅದ್ಯಾಕಪಾ? ಇಂದೇನು ಗುರು–ಮಂಗಳ ಯುತಿ ಅದs ಏನು?' ಎನ್ನುತ್ತ ಆ ಕಾಗದವನ್ನು ಬಿಡಿಸಿ ನೋಡಿದನು. 'ಎಲ !' ಎನ್ನುತ್ತ ಅದರಲ್ಲಿಯೇ ಮನಸ್ಸಿಟ್ಟು ಕಣ್ಣು ಕೆಕ್ಕರಿಸಿ ಓದಿದನು.

---

೧. ಪೊಳ್ಳು.

'ಅಂದಲ್ಲೇ ದೇಸಾಯಿ ನನಗ ಬಗ್ಗವಲ್ಲ !' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ ವಸಂತನನ್ನು ಬೀಳ್ಕೊಂಡನು.

* * *

ಮುಂದೆ ವಸಂತರಾಯ ರಾಘಪ್ಪನ ಮನೆಗೆ ಅನೇಕ ಬಾರಿ ಹೋಗಿ ಬಂದನು. ಹೋದ ಬಾರಿಗೊಮ್ಮೆ ಅವನಿಗೆ ತಿನಿಸು ಉಣಿಸು ಚೆನ್ನಾಗಿ ಬೀಳುತ್ತಿತ್ತು. ಆದರೆ ಇನ್ನೊಂದು ವಿಚಿತ್ರ ಅನುಭವ ಬರತೊಡಗಿತು. ರಾಘಪ್ಪನ ಮಾತುಗಳು ನೀರಸವಾಗತೊಡಗಿದ್ದವು.

ರಾಘಪ್ಪನ ನಾಟಕಗಳ ಸುದ್ದಿಯನ್ನೇ ಎತ್ತದಾದನು. ಹಿಸೆಯ ವಿಷಯವಂತೂ ವಸಂತ ತಾನಾಗಿಯೇ ತೆಗೆದರೂ ತಪ್ಪಿಸತೊಡಗಿದನು. ವಸಂತನಿಗೆ ಆಶ್ಚರ್ಯ. ರಾಘಪ್ಪ ಹೀಗೇಕೆ ಮೈ ಕದಿಯತೊಡಗಿದ್ದಾನೆ, ಎಂದು. ತನ್ನ ಬಗ್ಗೆ ಅನಾದರವಾಗಿದೆಯೇ?... ತಿನಿಸು–ಉಣಿಸಿನಲ್ಲಿ ಎಂದಿಗಿಂತಲೂ ಹೆಚ್ಚು ಆದರ. ಆದರೆ ಮೊದಲು ರಂಗು ತುಂಬುವ ವಿಷಯಗಳಲ್ಲಿ ಮಾತ್ರ ರಾಘಪ್ಪ ಔದಾಸೀನ್ಯ ತಳೆದಿದ್ದಾನೆ ; ಇಷ್ಟೇ ಏಕೆ, ಮಾತೇ ಹಾರಿಸುತ್ತಾನೆ. ಬಹುತರ ರಾಘಪ್ಪ ಕೂಡ ತಮ್ಮ ಅಪ್ಪನಿಗೆ ಹೆದರಿರಬೇಕೆಂದು ಕೊನೆಗೆ ವಸಂತರಾಯ ಧೂರ್ತ ತರ್ಕವನ್ನು ಮಾಡಿದನು.

ಇದರಿಂದ ಅಪ್ಪನ ಬಗ್ಗೆ ಅವನ ಆದರ ಹೆಚ್ಚಿತು. ರಾಘಪ್ಪನೇ ಕೈ ಊರಿದ ಮೂಲಕ ಮನೆಯಲ್ಲಿ ಹಿಸೆ ಮುಂತಾದ ಅಮಂಗಳ ಮಾತನ್ನು ವಸಂತ ತನ್ನ ತಾಯಿಯ ಎದುರಿಗೆ ಕೂಡ ಎತ್ತಲಿಲ್ಲ. ತಿರುಗಿ ಹಳ್ಳಿಗೆ ಕೂಡ ಹೋಗುತ್ತೇನೆಂದು ಇಚ್ಛೆ ಪ್ರಕಟಿಸಲಿಲ್ಲ. ಸಿನೇಮಾಕ್ಕೆ ಹೋಗುವಾಗ ಅವ್ವನ ಕಡೆಯಿಂದ ಸಿಕ್ಕಷ್ಟು ಹಣ ಇಸಿದುಕೊಳ್ಳುವನು. ಕೆಳಗಿನ ದರ್ಜೆಗೆ ಹೋಗಿ ಒಂದು ಸಿನೇಮಾದ ಹಣದಲ್ಲಿ ಎರಡು ಸಿನೇಮಾ ನೋಡುವನು. ಹಳ್ಳಿಯಲ್ಲಿ ತಂಬಾಕು ಹಾಕಿಕೊಳ್ಳುವ ಚಟ ಇದ್ದಿತ್ತು. ಆದ್ದರಿಂದ ಇತ್ತಿತ್ತ ಚಹದಂಗಡಿಯ ಖರ್ಚು ಕೂಡ ಕಡಿಮೆಯಾಗಿತ್ತು. ಮನೆಯಲ್ಲಿ, ಸ್ನೇಹಿತರಲ್ಲಿ, ಇಲ್ಲವೆ ರಾಘಪ್ಪನಲ್ಲಿ ಆದಷ್ಟೇ ಚಹ. ಅಂಗಡಿಗೆ ಹೋಗುವದು ಕ್ವಚಿತ್ತಾಗಿತ್ತು.

ದೇಸಾಯರೂ ವೇಣಕ್ಕನಿಗೂ ಹೇಳಿಟ್ಟಿದ್ದರು. 'ಬಹುತೇಕ ಇನ್ನ ವಸಂತ ಹಿಸೆ–ಪಸೆದ ಸುದ್ದಿ ಬಿಟ್ಟಬಿಡತಾನ. ಹಿಸೆ ಕೊಡಸು, ಹಳ್ಳಿಗೆ ಹೋಗತೇನಿ, ಹೀಂಗ ಅವ ಏನಾದರೂ ಮಾತು ಎತ್ತಿದರ ನನಗ ತಿಳಿಸು. ನಾ ಏನೂ ಅವಗ ಹೊಡೆಯೋದಿಲ್ಲ, ಬಡಿಯೋದಿಲ್ಲ. ವಸಂತನೊಳಗ ಏನಾದರೂ ಬದಲು ಕಾಣಿಸತದೇನು ನೋಡಬೇಕಾಗೇದ... ಅಲ್ಲಲ್ಲ, ವಸಂತಗ ರಾಘಪ್ಪನ ಮನಿಗೆ

ಹೋಗಗೊಡಬಾರದು ಆಂತ ನೀನು ಅನ್ನೋದು ಸರಿಯಲ್ಲ. ಬೇಡಾ ಅಂದರ ಅವ ನಮ್ಮನ್ನ ತಪ್ಪಿಸಿ ಹೋಗತಾನ. ದೊಡ್ಡ ಹುಡುಗನ್ನ ಎಷ್ಟು ಕಾಯಬೇಕು?... ಆದರ ಅವ ಹೋದರೂ ಏನೂ ಆಗಿರಬಾರದು ಅಂತ ವ್ಯವಸ್ಥಾ ಮಾಡೇನಿ. ವಸಂತನ ಹೊಟ್ಟಿಸೂಲಿಗೆ ರಾಘಪ್ಪಗ ಅಜವಾನಾ ಮುಕ್ಕಿಸೇನಿ ! ಅದರ ಪರಿಣಾಮ ಏನು ಆಗೇದ ನೋಡಬೇಕಾಗೇದ. ಅವಗ ರಾಘಪ್ಪನಲ್ಲೆ ಹೋಗಲಿಕ್ಕೆ ಬೇಡ ಅನ್ನಬೇಡ. ಆದರೆ ಮೊದಲಿನ ಕೀಟಕುಪದ್ರ[೧] ತಗದರ ಒಂದು ಹೇಳು' ಎಂದು ಹೇಳಿ ಇಟ್ಟಿದ್ದರು.

ವಸಂತನಿಂದ ಹದಿನೈದು ದಿವಸವಾದರೂ ಯಾವ ಮಾತೂ ಬಾರದ್ದನ್ನು ನೋಡಿ 'ಔಷಧ ನಾಟಿದ ಹಂಗ ಕಾಣಿಸತದ ; ನೋಡಬೇಕು' ಅಂದುಕೊಂಡರು.

* * *

ಔಷಧ ನಾಟಿತ್ತು ನಿಜ. ಆದರೆ ಬೇರೆ ಇನ್ನೊಂದು ಕಡೆಯಿಂದ ವ್ಯಕ್ತವಾಗತೊಡಗಿತ್ತು.

ರಾಘಪ್ಪ ವಸಂತನಿಂದ ಚಿಲ್ಲರೆ ಲಾಭಪಡೆಯುವ ವಿಚಾರವನ್ನೇ ಬಿಟ್ಟು ಬಿಟ್ಟನು. ಲಾಭ ಮಾಡಿಕೊಳ್ಳುವದು ಶಕ್ಯವೂ ಇರಲಿಲ್ಲ. ವಸಂತ ಶಹರವನ್ನೇ ಹಿಡಿದಮೇಲೆ ಕಾಳು ಮಾರುವವರಾರು ?... ಆದರೆ ಅದರ ಬದಲು ವಸಂತನನ್ನು ಇನ್ನಷ್ಟು ಪೂರ್ಣವಾಗಿ ತನ್ನ ಮಡಿಲಿಗೆ ಹಾಕಿಕೊಳ್ಳಬೇಕೆಂಬ ಉಪಾಯವನ್ನು ರಾಘಪ್ಪ ತೆಗೆದನು. ಚಹಾ ಫರಾಳದ ವ್ಯವಸ್ಥೆ ಚೆನ್ನಾಗಿ ಇಟ್ಟನು. ಒಂದೆರಡು ಬಾರಿ ವಸಂತನೊಡನೆ ಸಿನೇಮಾಕ್ಕೆ ಹೋಗಿಬಂದನು. ಪ್ರತಿಬಾರಿ ಚಹ ತರುವ ಕೆಲಸ ಶಾಂತಾಳದು. ಚಹ ಕುಡಿಕುಡಿಯುತ್ತ ಶಾಂತಾಳ ಚಹ ಮಾಡುವ ಕೈಯನ್ನು ರಾಘಪ್ಪ ಹೊಗಳಿದನು.

ಒಂದು ಸುಸಮಯ ನೋಡಿಕೊಂಡು ರಾಘಪ್ಪ ಚುಚುಂದ್ರಿ ಬಿಟ್ಟನು. 'ವಸಂತಾ, ನಮ್ಮ ಶಾಂತಾ ಮನಸ್ಸಿಗೆ ಬಂದಳು. ಆಕಿ ಲಗ್ನದ ವಿಚಾರದಾಗ ನನಗ ಇನ್ನೊಂದು ಹೊಳೇಒಲ್ಲದಾಗೇದ. ಈಗ ಒಂದು ವರಗ ತೋರಿಸೇವಿ. ವರಾ ಶಾಂತಾನ್ನ ಪಸಂದ ಮಾಡ್ಯಾನ... ವರ ನಮಗೂ ಪಸಂದ ಬಿದ್ದಾನ. ಆದರ ವಿಚಿತ್ರ ನೋಡು, ನಮ್ಮ ಶಾಂತಾ, ಆ ವರ ಒಲ್ಲೆ ಅನಲಿಕ್ಕೆ ಹತ್ಯಾಳ.... ಅಲ್ಲಾ, ನಮ್ಮ ಹಿರೇ ಮಗಳು ರತ್ನಾ ಇನ್ನೊಂದು ಚಕಾರ ಮಾತಾಡದ ತನಗ ಗೊತ್ತಾದ ವರಕ್ಕ ಹುಂ ಅಂದಳು. ರತ್ನಾಗ ನಾನು ಅತ್ತೀಮನ್ಯಾಗ ಎಷ್ಟು ತ್ರಾಸ

---

೧. ಚಿಲ್ಲರೆ ಉಪದ್ರವ.

ಆದೀತು ಅನ್ನೋ ವಿಷಯ ಎಲ್ಲಾ ಮೊದಲs ಬಿಡಿಸಿಟ್ಟು ಹೇಳಿದೆ : 'ನಿನ್ನ ಅತ್ತಿ ಖಂಗಿ[೧]ನವಳು ; ನಿನಗ ತ್ರಾಸು ಕೊಟ್ಟಾಳು ; ನೀ ಸಹನ ಮಾಡಿಕೋಬೇಕಾಗತದ ಆದರ ವರ ನಮ್ಮ ಮನಸಿಗೆ ಬಂದsದ. ನಿನ್ನ ಅಭಿಪ್ರಾಯ ಏನು?... ಅಂತ ಕೇಳಿದರ, ಆಕಿ ಏನು ಉತ್ತರ ಕೊಟ್ಟಳು ಗೊತ್ತದ ಏನು?... 'ನನ್ನ ಲಗ್ನಾ ಮಾಡೋ ಅವರು ನೀವು, ನನಗ ಯಾಕ ಆ ವಿಚಾರ?' ಅಂತ ಸ್ಪಷ್ಟ ಹೇಳಿದಳು. ಆಕೀನೂ ನಮ್ಮ ಮಗಳs ; ಆಕೀಗೆ ಇಕೀಗೆ ಬಹಳ ಅಂದರ ಐದಾರು ವರ್ಷದ ಅಂತರ... ಆದರ ಶಾಂತಾ ಈಗಿನ ಕಾಲದ ದೇಶಭಕ್ತಿ, ಚಳವಳಿ, ಇಂಥಾದರಾಗೆಲ್ಲಾ ಪುಢಾರಿ ಇದ್ದಾಕಿ. ನನಗ ಖಾದಿ ಹಕ್ಕೊಳ್ಳೋ ವರ ಬೇಕು, ನನಗ ಸರಕಾರಿ ನೌಕರಿ ಇದ್ದ ವರ ಬ್ಯಾಡ, ಹಿಂಗೆಲ್ಲಾ ಹಟ ಹಿಡಿದಾಳ. ಆ ವರಗ ಛಲೊ ಸರಕಾರಿ ನೌಕರಿ ಅದ ಅಂತ ನಾನು ಅಡರಾಸಿ ಅವನ್ನ ಹಿಡಕೊಂಡು ಬಂದರೆ ಆಕಿ, ನಾ ಸರ್ವಥಾ ಒಲ್ಲೆ ಅಂತ ಅಂದುಬಿಟ್ಟಳು... ಅಲ್ಲಾ, ಅದು ತಪ್ಪು ಅನ್ನೋದಿಲ್ಲ ನಾನು. ಆದರ ರತ್ನಾಂದು ಒಂದು ರೀತಿ ಚಂದ ಕಾಣಿಸಿತು, ಶಾಂತಾನದು ಇನ್ನೊಂದು ರೀತಿ ಚಂದ. ಕಾಲಮಾನಕ್ಕ ತಕ್ಕ ಹಂಗ ಶೋಭಾನೂ ಬದಲು ಆಗತದ ನೋಡು. ಈಗಿನ ಕಾಲಕ್ಕ ದೇಶಭಕ್ತೀನೂ ಬೇಕು ನೋಡು ಮನಶ್ಯಾಗ. ಏನಂತಿ ನೀ ವಸಂತರಾಯಾ?'

'ಬೇಕs ಬೇಕು ಬಿಡರಿ !' ಎಂದು ವಸಂತರಾಯ ಮರುದಿನವೇ ಒಂದು ಗಾಂಧೀ ಟೋಪ್ಪಿಗೆ ಖರೀದಿ ಮಾಡುವ ವಿಚಾರ ಮಾಡುತ್ತ ಹೇಳಿದನು.

'ಅದಕ್ಕ ನೀನು ನಾಲ್ಕು ಸ್ನೇಹಿತರನ್ನು ಗಳಿಸಿಕೊಂಡವ. ನಿನಗ ಯಾವದಾದರೂ ಮನೆತನಸ್ಥ ವರ.. ಆಸ್ತಿಪಾಸ್ತಿ ಇದ್ದು ಸ್ವಲ್ಪ ದೇಶಾಭಿಮಾನದ ಮಾತು ಆಡಲಿಕ್ಕೆ ಬರತಿರಬೇಕು ನೋಡು... ಅಂಥಾತ ಯಾರಾದರೂ ಗೊತ್ತು ಇದ್ದರ ತಿಳಿಸು. ನಾನೂ ಒಂದು ನೋಡಿ ಇಟ್ಟೇನಿ. ಛಲೋ ವರಾ ಅದ. ಉತ್ಪನ್ನ, ಆಸ್ತಿ, ಮನ್ಯಾಗ ನಾಕು ಎತ್ತಿನ ಕಮತ, ಹೊರಗ ಒಂದು ಸರಾಫಿ ಅಂಗಡಿ, ಇಂಥಾದ್ದೊಂದು ವರ ಅದ. ವರದಕ್ಷಿಣೆ ಹೊಡೆತ ಬಹಳ ಆದ ಅಂತ. ಆದರ ನಾ ಅದಕ್ಕ ಹೆದರೂದಿಲ್ಲ. ಬೇಕಾದಷ್ಟು ವರದಕ್ಷಿಣಿ ವರ ಇರಲಿ, ನಮ್ಮ ಶಾಂತಾನ್ನ ನೋಡಿದಮ್ಯಾಲ ಹಟ ಕಡಿಮಿ ಆಗತದ ಅನ್ನೋದು ನನಗ ಖಾತ್ರಿ ಅದ. ಏನs ಆಗಲಿ, ಆಕೀದೊಂದು ಲಗ್ನ ಆತ್ಯು ಅಂದರ ನಮ್ಮ ಚಿಂತಿ ತಪ್ಪತದ. ಅದಕ್ಕ ನಿನ್ನ ಗೊತ್ತಿನ್ಯಾಗ ಛಲೊ ವರಾ ಇದ್ದರ ನನಗ ಹೇಳಪಾ. ನನ್ನ

---

೧. ವೈರತ್ವ ಸಾಧಿಸು.

ಶಿಷ್ಯ ಅಂದಮ್ಯಾಲ ಇಷ್ಟು ಸೇವಾ ಮಾಡೋದು ಹೆಚ್ಚು ಏನು ? ಅಂದರ ದೇವರು ನಿನ್ನ ಕಲ್ಯಾಣ ಮಾಡಿ ಲಗೂ ನಿನ್ನ ಲಗ್ನಾನೂ ಮಾಡಸತಾನ !' ಎಂದು ದೊಡ್ಡ ದನಿಯಿಂದ ರಾಘಪ್ಪ ನಕ್ಕನು.

ಒಂದು ವಾರದಲ್ಲಿಯೇ ವಸಂತ ಗಾಂಧೀ ಟೊಪ್ಪಿಗೆ ನೆಹ್ರೂ ಶರ್ಟು ಹಾಕತೊಡಗಿದುದನ್ನು ಕಂಡು ವೇಣೂಬಾಯಿಗೆ ವಸಂತ ತನ್ನ ಅಣ್ಣನ ಕಿತ್ತೆ ತೀಡ ತೊಡಗಿದ್ದಾನೆಂದು ಭಾವನೆಯಾಯಿತು. ರಾಘಪ್ಪನಿಗೆ ಒಳಗೇ ಹಿಗ್ಗಾಯಿತು. 'ದೇಸಾಯೀ, ನೀ ನನ್ನ ಮೀರಿಲ್ಲ. ನಿನ್ನ ಮೆಟ್ಟಿಹಾಕತೇನಿ!' ಎಂದು ಅಂದುಕೊಂಡನು.

# ೩೨ : ಗಜೇಂದ್ರ ಮೋಕ್ಷ

ಶಾಲಿಗ್ರಾಮದ ಪೂಜೆಯಿಂದ ಮನೆಯಲ್ಲಿ ಉಂಟಾದ ಶಾಂತಿ ಬಲು ದಿವಸ ಬಾಳಲಿಲ್ಲ. ಮನೆಯಲ್ಲಿ ಮತ್ತೆ ಕಲಹ ಸುರುವಾಗಿತ್ತು. ಆದರೆ ಗಂಗವ್ವ ಬಹಳ ದಿವಸ ಅದನ್ನು ವೇಣಕ್ಕನಿಗೆ ಬಿಚ್ಚಿ ಹೇಳಲಿಲ್ಲ. 'ಎಲ್ಲಾ ತಿಳಿದದ್ದs ಅದ ಅಲ್ಲ' ಎಂದು ಆಕೆ ಎಲ್ಲವನ್ನೂ ಸಹನ ಮಾಡಿದಳು. ವೇಣಕ್ಕನಿಗಾದರೂ ಆಕೆ ಏನು ಸಹನಮಾಡುತ್ತಿರಬಹುದೆಂದು ತುಸು ಕಲ್ಪನೆ ಇತ್ತು. ಆದರೆ ದಿನದಿನದ ಹಾಡನ್ನೇ ಹಾಡುವದೂ ಬೇಸರ, ಕೇಳುವದೂ ಬೇಸರ. ಸಿರಿವಂತರ ಕೆಲಸ. ತನ್ನ ಮಾತಿಗೆ ವೇಣಕ್ಕ ಎಲ್ಲಿ ಬೇಸರ ಮಾಡಿಯಾಳೊ ನಿಯಮವಿಲ್ಲ. ಅದಕ್ಕಾಗಿ ಗಂಗವ್ವ ಸುಮ್ಮನಿದ್ದಳು. ಜೊತೆಗೆ ಲಗ್ನ ಮಾಡಿಸಿದವರು ದೇಸಾಯರೇ ಅದ ಮೂಲಕ ಬಹಳ ದೂರು ಹೇಳುವದೆಂದರೆ ಅವರ ಮೇಲೇ ಆರೋಪವಿಟ್ಟಂತೆ ಸರಿ. ಆ ಅವ್ಯಕ್ತ ಸೂಚನೆಯಿಂದ ಅವರಿಗೆ ಮನಸ್ಸಿಗೆ ನೋವಾದೀತೆಂದು ಗಂಗವ್ವನ ಹೆದರಿಕೆ. ಇತ್ತ ವೇಣಕ್ಕ, ಎಲ್ಲರ ಮನೆಯಲ್ಲಿಯೂ ಮಣ್ಣ ಒಲೆ, ಹೆಚ್ಚು ಕುತೂಹಲ ತೋರಿಸಿ ವಿಚಾರಿಸಬೇಕೇಕೆ, ಎಂದು ಸುಮ್ಮನಿದ್ದಳು. ಯಾವಾಗಾದರೂ 'ಮನ್ಯಾಗ ನೆಟ್ಟಗ ಏನವಾ, ಗಂಗವ್ವಾ ?' ಇಷ್ಟೇ ಪ್ರಶ್ನೆ ಕೇಳುವಳು ಗಂಗವ್ವ ಅದರ ಅರ್ಥವನ್ನು ಆರೋಗ್ಯದ ಕಡೆ ತಿರುಗಿಸಿ, 'ನೆಟ್ಟಗ ಅದ... ನಿನ್ನೆ ಕಿಟ್ಟಣ್ಣಗ ಅಷ್ಟು ನೆಗಡಿ ಬಂದಿತ್ತು...' ಹೀಗೆ ಉತ್ತರ ಕೊಡುವಳು. ಮನೆಯಲ್ಲಿ ನಡೆದುದನ್ನು ಮಂದಿಗೆ ಹೇಳುವದು ಎಷ್ಟು ಸ್ವರೂಪಗೇಡಿಯೆಂಬುದರ ಅನುಭವ ವೇಣಕ್ಕನಿಗೂ ಸಾಕಷ್ಟು ಇತ್ತು. ಗಂಗವ್ವ ತನ್ನ ಸುಖದುಃಖ ಹೇಳುವಾಗ ವೇಣಕ್ಕನಿಗೆ ತನ್ನ ಸುಖದುಃಖಗಳೇ ಕಣ್ಣುಕಟ್ಟುತ್ತಿದ್ದವು. ಜೀವ ಬೇಸರವಾಗುತ್ತಿತ್ತು. ಅತ್ತ ಉಪವಾಸ–ವನವಾಸ–ಜೇಲು ಎಂದು ಜಿಗಿದಾಡುವ ಅಚ್ಯುತ, ಇತ್ತ ಹಿಸೆ–ಇಸ್ಪೀಟು–ಸಿನೇಮಾ ಎಂದು ಜಿಗಿದಾಡುವ ವಸಂತ... ನೆನೆಸಿದಷ್ಟು ವೇಣಕ್ಕನಿಗೂ ಶ್ರೀಮಂತರಿಗೆ ಆಗಬೇಕಾದಷ್ಟು ದುಃಖ. ಇಂತು ತಮ್ಮ ತಮ್ಮ ನೋವುಗಳನ್ನು ಹೆಚ್ಚು ಮಾತಾಡಿಕೊಳ್ಳಬಾರದೆಂದು ಅವರಿಬ್ಬರಲ್ಲಿ ಮೂಕ ಒಪ್ಪಂದವಾದಂತಿತ್ತು.

ಆದರೆ ಇದೀಗ ಗಂಗವ್ವನಿಗೆ ಸಹನೆ ಮಿರುವ ಪ್ರಸಂಗ ಬರತೊಡಗಿದವು. ಶಾಲಿಗ್ರಾಮದ ಕೃಪೆಯಿಂದ ನೆಲೆಸಿದ ಗೃಹಶಾಂತಿಯು, ಕಿಟ್ಟಿ ತನ್ನ ವರದಕ್ಷಿಣೆಯ

ಹಣವನ್ನು ದೇಸಾಯಯರಲ್ಲಿ ಕೇಳಲಿಕ್ಕೆ ಬಂದು ಅವಮಾನಿತನಾಗಿ ಹಿಂದಿರುಗಿದಮೇಲೆ ಉಳಿಯಲಿಲ್ಲ. ದೇಸಾಯರು ಇಷ್ಟು ನಿಷ್ಠುರವಾಗಿ ತನ್ನ ಪಕ್ಷ ಕಟ್ಟಿದುದನ್ನು ವೇಣಕ್ಕನಿಂದ ಕೇಳಿ ಗಂಗವ್ವನಿಗೆ ಸಂತಸವಾಯಿತು. ಆದರೆ ದೇಸಾಯರ ಮೇಲಿನ ಸಿಟ್ಟನ್ನು ಕಿಟ್ಟಿ ತನ್ನ ಮೇಲೆ ಹಾಕಿಯಾನೆಂದು ಆಕೆ ಎಣಿಸಿರಲಿಲ್ಲ. ರಾಘಪ್ಪ ಹಾಗೂ ಕಿಟ್ಟಿ ಕೂಡಿ ಕಾರಸ್ಥಾನ ಮಾಡಿ ದೇಸಾಯರ ಹಪ್ತೆ ಏರಿಸಿ ಅವರಿಗೆ ಹಾನಿ ಮಾಡಿದ ಸುದ್ದಿಯನ್ನು ದೇಸಾಯರು ತಮ್ಮ ಹೆಂಡತಿಗೂ ಹೇಳಿರಲಿಲ್ಲ. ವಸಂತ ರಾಘಪ್ಪನಿಗೆ ಕಾಳು ಮಾರಿಕೊಂಡ ಸುದ್ದಿ ವೇಣಕ್ಕನಿಗೆ ಗೊತ್ತಿದ್ದರೂ ಕೂಡ, ಆಕೆ ಅದನ್ನು ಗಂಗವ್ವನಿಗೆ ಹೇಳಲಿಲ್ಲ. 'ನಾವು ಲಗ್ನಮಾಡಿಸಿದಿವಿ. ನಾವು ಅನುಭೋಗಸತೇವಿ' ಎಂಬ ವಿಚಾರ. ಕಾರಣ ಗಂಗವ್ವ ಎಂದಿನಂತೆ ಸಂಕೋಚವಿಲ್ಲದೆ ದೇಸಾಯರ ಮನೆಗೆ ಹೋಗಿಬರುತ್ತಿದ್ದಳು. ಶಾಲಿಗ್ರಾಮದ ಪ್ರಸಂಗವಾದ ಮೇಲೆ ಹತ್ತು ಇಪ್ಪತ್ತು ದಿನ ಕಿಟ್ಟಿ ತಾಯಿಯ ಯೋಗಕ್ಷೇಮವನ್ನು ತೆಗೆದುಕೊಳ್ಳುತ್ತಿದ್ದನು. ಇದರಿಂದ ಅಸೂಯೆಯಗೊಂಡ ರತ್ನಾ ಒಳಗಿಂದೊಳಗೆ ಅಸಮಾಧಾನ ಪಟ್ಟಿದ್ದಳು. ಸ್ವಲ್ಪ ದಿವಸಗಳ ಮೇಲೆ ವರದಕ್ಷಿಣೆ ವಿಷಯದಲ್ಲಿ ಕಿಟ್ಟಿಗೆ ಮಂಗಳಾರತಿಯಾಯಿತು. ಇದರಿಂದ ರೇಗಿಕೊಂಡ ಕಿಟ್ಟಿ ತಾಯಿಗೆ ಅನಾದರ ಮಾಡಲು ಪ್ರಾರಂಭಿಸಿದನು. ಒಂದೆರಡು ಬಾರಿ ವಿವೇಕ ತಪ್ಪಿ ಕೂಗಾಡಿದನು. ರಾಘಪ್ಪ ಕೈಚಳಕದಲ್ಲಿ ತಾನೂ ಸಹಾಯ ಮಾಡಿ ದೇಸಾಯರಿಗೆ ತುಸು ತೊಂದರೆ ಕೊಟ್ಟದ್ದಕ್ಕಾಗಿ ಕಿಟ್ಟಿಗೆ ವೈಯಕ್ತಿಕವಾಗಿ ಏನೂ ಸಮಾಧಾನವಿರಲಿಲ್ಲ. ಇದೊಂದು ಲೋಕದ ರೂಢಿ, ಎಂದಿಷ್ಟೇ ಅದಕ್ಕೆ ಬಾಗಿದ್ದನು ಮಾತ್ರ. ಆದರೆ ಅದೂ ಮನಸ್ಸು ತಿನ್ನುತ್ತಿತ್ತು. ತನ್ನ ಸಾಲ ತೀರಲಿಲ್ಲ. ತನಗೆ ಬಡ್ಡಿ ತುಂಬುವದು ತಪ್ಪಲಿಲ್ಲ. ಒಂದು ದಿವಸ ಗಂಗವ್ವ ದೇವರ ಮುಂದೆ ಪೋಥಿ ಹಿಡಿದುಕೊಂಡು ಕುಳಿತಾಗ ಕಿಟ್ಟಿ ಮೈತುಂಬ ಉರಿಯುತ್ತ ಬಂದು ಆಕೆಯ ಮುಂದೆ ಇಪ್ಪತ್ತು ರೂಪಾಯಿ ಚಿಲ್ಲರು ಸುರುವಿ, 'ನಿನ್ನ ಹೆಸರಿಗೆ ಈ ಬಡ್ಡಿ ತುಂಬಿ ಬರತೇನಿ !' ಎಂದು ಒದರಿಸಿದನು.

ಗಂಗವ್ವನೂ ಸಂತಪ್ತಳಾದಳು 'ನೀ ಈ ಹೆಣ್ಣುಸೋಗು ಬಿಟ್ಟುಬಿಡು. ಈ ಮೂರು ನಾಕು ವರ್ಷದಾಗ ಬಡ್ಡಿ ಮುಟ್ಟಿಸಿ ಮ್ಯಾಲ ಒಂದು ನೂರ ಇನ್ನೂರ ರೂಪಾಯಿ ಮುಟ್ಟಿಸಲಿಕ್ಕೆ ನಿನಗ ಆಗತಿತ್ತೋ ಇಲ್ಲೋ ?... ನೀ ಅಷ್ಟು ಮುಟ್ಟಿಸಿ, 'ಅವ್ವಾ, ಆದಷ್ಟು ಮಾಡಿದೆ ; ಉಳಿದದ್ದು ಮುಟ್ಟಿಸಿ ಬಿಡೋಣ ಅಂದಿದ್ದರ ನಾ ಒಲ್ಲೆ ಅಂತಿದ್ದೆನೇನು ? ಘಳಿಸಿದ ಪಗಾರ ಸಾಲೂದಿಲ್ಲ ಅಂತ ಅಳತೀದಿ. ಆದರ ನಾ ಇಷ್ಟೂ ಇಲ್ಲದ, ಹತ್ತು ವರ್ಷ ಮನಿ ಸಾಗಿಸಿದಿನ್ಯೊ ಇಲ್ಲೋ ?... ಕೇಳು

ನಾಕು ಮಂದಿಗೆ – ಲಢಾಯೀ ದಿನದಾಗ ರೂಪಾಯಿಗೆ ಒಂದು ಸೇರು ಜೋಳ ಆದಾಗ ನಾ ಅರಹೊಟ್ಟಿ ಉಂಡು ನಿನ್ನ ಹೊಟ್ಟಿಗೆ ಹಾಕಿದೆ. ನಿನಗ ಸಾಲಿ ಕಲೀಲಿಕ್ಕೆ ಕಡಿಮೆ ಆಗಗೊಡಲಿಲ್ಲ. ಈಗ ಪಗಾರ ಬಂದು ನಿನಗ ಸಾಲವಲ್ಲದು? ಈಗ ನಿನ್ನ ಘಳಿಕೆಗೆ ನೀಗದಂಥಾ ಒಜ್ಜಾ ನಿನ್ನಮ್ಯಾಲ ಏನು ಬಂದsದ?... ಆಕೀನ ಒಬ್ಬಾಕಿ ಹೌದಲ್ಲೊ !'

ಗಂಗವ್ವ ಒಂದೊಂದು ಮಾತಿನಲ್ಲೂ ಎರಡೆರಡು ಅರ್ಥ ಹುಡುಕಲು ಕಲಿತಿದ್ದ ಕಿಟ್ಟಿ – ರತ್ನಾರಿಗೆ ಈ ಎಲ್ಲ ಮಾತುಗಳು ದುಷ್ಟವಾಗಿ ಕಂಡವು. ಅದರಲ್ಲೂ ಕೊನೆಯ ಮಾತು ಮರ್ಮಕ್ಕೆ ನಟ್ಟಿತು. ಕಿಟ್ಟಿಗಂತೂ ತಾಯಿ ತನ್ನ ಮನಸ್ಸು ನೋಯಿಸುವದಕ್ಕಾಗಿಯೇ ಈ ಮಾತು ಅಂದಳೆಂದೂ ಕೊಂಡನು.ಅದಕ್ಕಾಗಿ ತಾನೂ ಮನ ನೋಯಿಸಹೋದನು – 'ಯಾತಕ್ಕಬಂದೀತು ನನ್ನ ಪಗಾರ?... ನಿಮ್ಮೆಲ್ಲರ ಹೊಟ್ಟಿಗೆ ಹಾಕೋದಕ್ಕs ಹೋಗತದ' ಅಂದನು.

'ಬಿಡಪಾ ನನ್ನ ಹೊಟ್ಟಿಗೆ ಹಾಕೋದು. ನಾ ಒಲ್ಲೆ ಒಲ್ಲೆ ನಿನ್ನ ಅನ್ನಾನ... ಯಾಕಲಾ, ಇವತ್ತ ನೀ ನಿನ್ನ ನೌಕರಿ ಬಿಡು. ನಿನಗsನಿನ್ನ ಹೇಣ್ತಿಗೆ ಕೂಡಿಸಿ ಊಟಕ್ಕ ಹಾಕತೇನಿ !' ಎಂದು ಗಂಗವ್ವ ಗರ್ಜಿಸಿದಳು.

ಗಂಗವ್ವನಿಗೆ ಇಷ್ಟು ಮಾತಾಡಲು ಬಲು ಪ್ರಯಾಸವಾಯಿತು. 'ನನ್ನ ಪೋಟಗಿ ನನಗ ಚೆಲ್ಲು, ನಿನ್ನ ಮನ್ಯಾಗ ನಾ ನಿಲ್ಲೂದಿಲ್ಲ. ವಾಡಿಗರs ಗಾಣಗಾಪುರಕ್ಕಅರ ಹೋಗಿಬಿಡತೇನಿ' ಎಂದು ಹೇಳಿಯೇ ಬಿಡಬೇಕೆಂದು ಮನಸ್ಸಿನಲ್ಲಿ ಬಂದಿತು. ಬಲು ಪ್ರಯಾಸದಿಂದ ಬಿಗಿಹಿಡಿದಳು. ಏನಾದರೂ ಕೂಡ ಗೃಹತ್ಯಾಗ ಮಾತ್ರ ಮಾಡಬಾರದೆಂದು ತನ್ನ ಪ್ರತಿಜ್ಞೆಯನ್ನು ನೆನೆಸಿಕೊಂಡಳು.

ಅಂದು ಗಂಗವ್ವ ಊಟ ಮಾಡಲಿಲ್ಲ. ಕಿಟ್ಟಿಯೂ ಸಿಟ್ಟಿನ ದುಸುಮುಸಿಯಲ್ಲಿಯೇ ಕಚೇರಿಗೆ ಹೋಗಿಬಿಟ್ಟನು. ಸಂಜೆಯವರೆಗೆ ಗಂಗವ್ವ ಊಟ ಮಾಡಲಿಲ್ಲ. ಅಂತೆಯೇ ರತ್ನಾಳೂ ಊಟ ಮಾಡಲಿಲ್ಲ. ಅವರ ಕೂಗಾಟಕ್ಕೆ ಓಣಿಗೆ ಓಣಿಯೇ ರಾವುಹೊಡೆದಂತಾಗಿತ್ತು. ಕಿಟ್ಟಿ ಸಂಜೆ ಮನೆಗೆ ಬಂದು ನೋಡಿದಾಗ ತಾಯಿ ದೇವರ ಮುಂದೆ ಕೃಷ್ಣಾಜಿನ ಹಾಕಿಕೊಂಡು ಮಲಗಿದ್ದು ಕಂಡಿತು. ಹೆಂಡತಿ, 'ಅವರೂ ಊಟಾ ಮಾಡಿಲ್ಲ. ಅದಕ್ಕ ನಾನೂ ಮಾಡಿಲ್ಲ. ನನಗೇನೂ ಉಪವಾಸ ಬೀಳಲಿಕ್ಕೆ ಬರೂದಿಲ್ಲೇನು?' ಎಂದು ಹೇಳಿದಳು.

ಕಿಟ್ಟಿ ಗಾಬರಿಯಿಂದ ತಾಯಿಯ ಹತ್ತಿರ ಹೋಗಿ, 'ಅವ್ವಾ, ನನ್ನ ತಪ್ಪು ಆತ್ಯು. ರೊಕ್ಕಾ ಕೈಬಿಡಬೇಕಾದರ ನನಗ ಬಹಳ ಸಂಕಟ ಆಗಿತ್ತು. ಸಹನ ಆಗಲಿಲ್ಲ' ಎಂದು ಬಹಳ ಸಮಾಧಾನ ಹೇಳಿದನಂತರ ಗಂಗವ್ವ ಎದ್ದು ಊಟ ಮಾಡಿದಳು.

ಆದರೆ ಕಿಟ್ಟಿ ಮರೆತರೂ ರತ್ನಾ ಅತ್ತೆಯ ಮಾತು ಮರೆತಿರಲಿಲ್ಲ. ಗಂಗವ್ವ ದಿನಬಳಕೆಯಿಂದ ರತ್ನಾಗಿದ್ದ ಭೀತಿ ಎಲ್ಲಾ ಮಾಯವಾಗಿತ್ತು. ತಿರಸ್ಕಾರವು ಹೆಚ್ಚಾಗಿತ್ತು. 'ನನ್ನ ಗಂಡನನ್ನು ಬೆಳೆಸಿದ ಉಪಕಾರ ನಾನು ಹೊರಬೇಕೆ?... ಇಷ್ಟು ಕಷ್ಟಬಟ್ಟು ಅವರನ್ನು ಬೆಳೆಸಿದ ಅತ್ತೆ ಈಗ ಅವನ ಮಾನಮರ್ಯಾದೆಗೆ ಕುಂದಾಗುವಂತೆ ಏಕೆ ನಡೆಯುತ್ತಾಳೆ?... ನನಗೆ ಮಕ್ಕಳಾಗದಿದ್ದದ್ದು ನನ್ನ ತಪ್ಪೆ?.... ಅದಕ್ಕೂ ನನ್ನನ್ನು ಹಂಗಿಸಬೇಕೆ?' ಈ ವಿಚಾರದಿಂದ ರತ್ನಾ ಅಂದಿನಿಂದ ಹೊಸ ಶಕ್ತಿಯಿಂದ ಅತ್ತೆಯ ವಿರುದ್ಧ ಬಂಡಾಯ ಹೂಡಿದಳು.

ಮನೆಯಲ್ಲಿ ಕಿಸೆಯಲ್ಲಿಟ್ಟ ಹಣ ಹೋಗತೊಡಗಿತು. ಕಿಟ್ಟಿಗೆ ಯಾರಿಗೆ ಏನು ಅನ್ನಬೇಕು ತಿಳಿಯದಾಯಿತು. ನೆರೆಹೊರೆಯವರ ಎದುರು ರತ್ನಾ ಪ್ರಗಲ್ಭೆಯಾಗಿ ಮಾತಾಡುತ್ತ ತನ್ನ ಅತ್ತೆ ತನಗೆ ಮಾಟ ಮಾಡಿಸಿ ತನಗೆ ಮಕ್ಕಳು ಆಗದಂತೆ ಮಾಡಿಸಿದ್ದಾಳೆಂಬ ಸುದ್ದಿ ಹಬ್ಬಿಸಲು ಯತ್ನಿಸಿದಳು. ನೆರೆ ಮನೆಯ ಹೆಂಗಸರಿಗೆ ಈ ಹೊಸ ಸೋಗು ಮೋಜಿನದೆನಿಸಿತು. ರತ್ನಾಳನ್ನು ಮಧ್ಯಾಹ್ನಕ್ಕೆ ಕರೆಯಿಸಿಕೊಂಡು ಎರಡು ಒಳ್ಳೆಯ ಮಾತಾಡಿ, ಸಹಾನುಭೂತಿ ತೋರಿಸಿ, ಆಕೆಯಿಂದ ಈ ಮಾತು ಆಡಿಸುವರು. ಈ ಸುದ್ದಿ ಗಂಗವ್ವನಿಗೆ ತಿಳಿದೊಡನೆ ಕಿಟ್ಟಿಯ ಅಧ್ಯಕ್ಷತೆಯಲ್ಲಿ ರತ್ನಾಳನ್ನು ಎದುರಿಗೆ ಕೂಡಿಸಿ, ತಾನು ಎಲ್ಲಿ, ಯಾವ ಮಾಂತ್ರಿಕನಲ್ಲಿ, ಯಾವಾಗ, ಏನೆಂದು ಮಾಟ ಮಾಡಿಸಿದ್ದೇನೆ ಎಂಬುದನ್ನು ತನ್ನ ಪದರಿಗೆ ಹಾಕಲಿಕ್ಕೆ ಆಹ್ವಾನ ಕೊಟ್ಟಳು. ಕಿಟ್ಟಿಗೆ ಸಮಾಧಾನ ಹೇಳುವದೇ ಕಠಿಣವಾಯಿತು. ರತ್ನಾ ತಾನು ಹಾಗೆ ಅಂದೇ ಇಲ್ಲವೆಂದು ಆಣೆ-ಚೂರಿ ಮಾಡಿ ಸಾಧಿಸಿದಳು. ಇನ್ನು ಸಾಕ್ಷಿಯನ್ನು ಕರತರಬೇಕು. ಗಂಗವ್ವ ಕಾಶೀತಾಯಿಯನ್ನು ಕರತಂದಳು. ಕಾಶೀತಾಯಿ ಈ ನಾಟಕವೆನ್ನೆಲ್ಲ ಸೊಗಸಾಗಿ ನೋಡಿ, ಎರಡೂ ದಂಡೆಯ ಮೇಲೆ ಕೈಯಿಟ್ಟು, ತಾನು ಯಾವುದನ್ನೂ ಹೇಳದೆ ಸುದ್ದಿಯನ್ನು ಇತರರಿಗೆ ಅರುಹಲು ಅಲ್ಲಿಂದ ಜಾರಿದಳು. ಈ ವರೆಗೆ ರತ್ನಾ ಗಂಡನ ಆಜ್ಞೆಯನ್ನಾದರೂ ಪಾಲಿಸಿ, ತನ್ನ ತಪ್ಪು ಇಲ್ಲದಿದ್ದರೂ 'ತಪ್ಪಾಯಿತು' ಎಂದು ಕಾಟಕಳೆಯುವದಕ್ಕಾದರೂ ಹೇಳಲು ಒಪ್ಪುತ್ತಿದ್ದಳು. ಆದರೆ ಈಗ 'ತಪ್ಪಾಯಿತು' ಎನ್ನಲು ಸ್ಪಷ್ಟವಾಗಿ ನಿರಾಕರಿಸತೊಡಗಿದಳು. ಒಂದಿ ದಿನ ಕಿಟ್ಟಿ ಒಂದು ಢಡೆ ಬೆಲ್ಲ ಬಳಕೆಗೆ ತಂದನು. ಸಂಜೆಯನ್ನು ವಷ್ಟರಲ್ಲಿ ಬೆಲ್ಲದ ದೊಡ್ಡದೊಂಡು ಪೆಂಟಿಯೇ ಮಾಯವಾಗಿತ್ತು. ಅತ್ತೆ ಮನೆಯಲ್ಲಿಯ ಸಾಮಾನನ್ನು ಯಾರಿಗೋ ಮಾರಿಕೊಳ್ಳುತ್ತಾಳೆ ಎಂದು ಸೊಸೆಯ ವಾದ ; ಸೊಸೆ ಅಪ್ಪನ ಮನೆಗೆ ಚೀಲದಲ್ಲಿ ಬಚ್ಚಿಟ್ಟುಕೊಂಡು ಮನೆಯ ಸಾಮಾನು ಸಾಗಿಸುತ್ತಾಳೆ ಎಂದು

ಅತ್ತೆಯ ವಾದ. ಹೀಗೆ ಅರ್ಧ ಗಂಟೆ ಹಾಕಾಡಿದಮೇಲೆ ರತ್ನಾ ಮೆಲ್ಲನೆ ಗಂಡನಿಗೆ ಕಪಾಟಿನಲ್ಲಿ ಅತ್ತೆಯವರು ಮಡಿಕೆ ಹಾಕಿ ಇಟ್ಟ ಮಡಿಯ ಸೀರೆ ಉಬ್ಬಿದಂತೆ ಕಾಣುತ್ತದೆ, ಎಂದು ಸಂದೇಹ ವ್ಯಕ್ತಮಾಡಿದಳು. ಎತ್ತಿನೋಡುವಷ್ಟರಲ್ಲಿ ಕೆಳಗೆ ಆ ದೊಡ್ಡ ಪೆಂಟಿ ಇದ್ದಿತು. ಮತ್ತೆ ಹೊಸ ವಾದ. ತನ್ನ ಮೇಲೆ ಅಪವಾದ ತರಲೆಂದು ಸೊಸೆಯೇ ಇಟ್ಟಿದ್ದಾಳೆಂದು ಗಂಗವ್ವ. 'ಮಡಿಯ ಸೀರೆಯನ್ನು ನಾನೇಕೆ ಮುಟ್ಟಲಿ, ಬಂಜೆಯೆಂಬ ಹೆಸರಿಟ್ಟು ನನಗೆ ಮೈಲಿಗೆಯವಳನ್ನಾಗಿ ಮಾಡಿದ್ದೀರಲ್ಲಾ ಎಂದು ರತ್ನಾ. 'ನಿನಗೆ ಮಡಿಮೈಲಿಗೆಯ ಎಗ್ಗು ಇದ್ದರೆ ಹೀಗೇಕೆ ಆಗುತ್ತಿತ್ತು' ಎಂದು ಗಂಗವ್ವ 'ನೀವು ಇಷ್ಟು ಮಡಿ ಮಾಡುವವರು ನಿನ್ನೆ ರಾತ್ರಿ ತಂಗುಳ ಬಕ್ಕರಿಯನ್ನೇಕೆ ಕದ್ದು ತಿಂದಿರಿ ?' ಎಂದು ಬಿಟ್ಟಳು ರತ್ನಾ.

ವಾದಕ್ಕೆ ಅನುಕೂಲವಾಗುವಂತೆ ಸುಳ್ಳು ಹುಟ್ಟಿಸಬಹುದು. ಆದರೆ ರತ್ನಾಳ ಕೊನೆಯ ಮಾತು ತೀರ ಅಸಹ್ಯವಾಗಿದ್ದವು. ಗಂಗವ್ವ ಈ ಹುಚ್ಚು ಆರೋಪದಿಂದ ಅಪ್ರತಿಭಳಾದಳು. ಯಾವ ಉತ್ತರ ಕೊಡದೆ ಊಟ ಬಿಟ್ಟು ಕುಳಿತಳು. ಕಿಟ್ಟಿ ಮೊದಲು ಹೆಂಡತಿಗೆ 'ತಪ್ಪಾಯಿತು' ಎಂದು ಅನ್ನಿಸಲು ಯತ್ನಿಸಿದನು. 'ತಪ್ಪಾಯಿತು, ಇಷ್ಟು ನನ್ನ ದಶಿಂದ ಅನ್ನು' ಎಂದು ಎಷ್ಟು ಹೇಳಿದರೂ ರತ್ನಾ ಒಪ್ಪಲಿಲ್ಲ. 'ಇದ್ದದ್ದೇ ನಿಜವೆಂದಮೇಲೆ ನಾನೇಕೆ ಅನ್ನಲಿ?' ಎಂದು ರತ್ನಾ ಎದುರು ನಿಂತಳು. ಹೆಂಡತಿಯ ಈ ವಿರೋಧಕ್ಕೆ ಸೋತು ಕಿಟ್ಟಿ ಕೊನೆಗೆ ತಾಯಿಗೆ ಸಮಾಧಾನ ಮಾಡಲು ಹವಣಿಸಿದನು. ಅವಳಿಗೇ 'ಊಟ ಮಾಡು' ಎಂದು ನೋಟೀಸು ಜಾರಿಮಾಡಿದನು. ತನ್ನ ಹೆಂಡತಿಗಾದರೆ ರಮಿಸಿ ಹೇಳುವುದು, ತನಗೆ ಆದರೆ ಗೆರೆ ಕರೆದಂತೆ ಆಜ್ಞೆ ಮಾಡುವುದು, ಇದನ್ನೇಕೆ ಗಂಗವ್ವ ಸಹನ ಮಾಡಿಯಾಳು? 'ನನ್ನ ಮ್ಯಾಲೆ ಜಬರು ಮಾಡೋವ ನೀ ಎಷ್ಟರವ?... ಬಹಳ ದಿನ ಆತ್ಯು, ನಾ ಬಿಗೀ ಹಿಡಿಲಿಕ್ಕೆ ಹತ್ತಿ. ಆದರ ಇನ್ನು ನಾ ಸುಮ್ಮನ ಇರೊದಿಲ್ಲ. ಗೋಪಣ್ಣಗ ಹೇಳತೀನಿ, ಇದು ಹೌದು ಏನು ಅಂತ !' ಎಂದವಳೇ ಮನೆಯಿಂದ ಹೊರಟು ದಾಸಾಯರ ಮನೆ ಸೇರಿದಳು, ಮಟಮಟ್ಟ ಮದ್ಯಾಹ್ನ ಮೂರು ಗಂಟೆಗೆ.

'ಗೋಪಣ್ಣಾ, ಇಂದ ನಾ ಕಿಟ್ಯಾನ ಕೈಬಿಟ್ಟರೆ ನಾಳೆ ರಾಘ್ಯಾ ಅವನ್ನ ಕರಡಿ ಮಾಡಿ ಕುಣಿಸತಾನ ಅಂತ ನಾ ಅಲ್ಲೇ ಇದ್ದೇನಿ ನೋಡು. ಅವಕಾಲಿಲೇ ಒದ್ದರೂ ಬಾಗಲ ಚೌಕಟ್ಟು, ಹಿಡಿಕೊಂಡು ಅಲ್ಲೇ ಕೊಡತೇನಿ..... ಖರೆ ಹೇಳು ಗೋಪಣ್ಣಾ, ನಾ ಯಾಕ ಬದಕಬೇಕು ಅಂತ ಆಗೇದ ನೋಡು. ಮಗನ್ನ ಬೆಳಸಿದೆ, ಲಗ್ನಾ ಮಾಡಿದೆ, ಮಮ್ಮಕ್ಕಳನ್ನ ಅಷ್ಟು ನೋಡಿದ್ದರ ಆಗತಿತ್ತು.... ದೇವರ ಮನಸಿನ್ಯಾಗ ಈಗ ಇಲ್ಲ, ಹೋಗಲಿ.... ಆದರ ಹೀಂಗ ಆದೀತು

ಅನಿಸಿದ್ದಿಲ್ಲ ನೋಡು. ಹೋದ ಸರೆ ನನ್ನ ಕಾಶಿಗೆ ಕರಕೊಂಡು ಹೋದ ಹಂಗ ಇನ್ನೊಂದು ಸರೆ ನನ್ನ ಬದರಿಗೆ ಅಷ್ಟು ಕರಕೊಂಡು ಹೋಗಪಾ. ನಾರಾಯಣನ ದರ್ಶನಾ ತೊಗೋತೇನಿ. ಆಮ್ಯಾಲ, ಅಲ್ಲಿ ಗುಡ್ಡದಾಗಿಂಗ ಗಂಗಾ ಹರೀತಾಳಂತಲ್ಲ, ಎಲ್ಲಿಂದಾರ ನಾ ಗಂಗಾದಾಗ ಹಾರಿಕೊಂಡು ಈ ನರಜನ್ಮದಾಗಿಂಗ ಪಾರಾಗತೇನಿ. ನನಗ ಖರೇ ಈ ಜನ್ಮ ಸಾಕಾತು ನೋಡು.....' ಎಂದು ದುಃಖಿಸಿದಳು. ಗಂಗವ್ವನಿಗೆ ಸಂಶಯ, ಈಗ ಕಿಟ್ಟಿ ದೇಸಾಯರನ್ನೂ ಮೀರಿದ್ದಾನೆ ; ದೇಸಾಯರು ಕರೆಸಿದರೂ ಅವನು ಬರೆದಿದ್ದರೆ ದೇಸಾಯರ ಮರ್ಯಾದೆಗೇಡು. ಅದಕ್ಕಾಗಿ ಆದದ್ದನ್ನೆಲ್ಲ ತೋಡಿ ಕೊಂಡಳು. ಕಳೆದ ವರ್ಷ ಎರಡು ವರ್ಷದ ಅನುಭವ, ಅಲ್ಲದೆ ಕಟ್ಟಕಡೆಯ ಸಂದರ್ಭಗಳನ್ನು ವಿಸ್ತಾರವಾಗಿ ಹೇಳಿದ ಮೇಲೆ 'ನಾನು ಇಷ್ಟು ದಿವಸ ಮುಚ್ಚಿ ಇಟಗೊಂಡಿದ್ದೆ. ಇಂದ ನಿನ್ನ ಎದುರಿಗೆ ಅಷ್ಟು ಹೇಳಬೇಕಂತ ಕಾಂಕ್ಷಾ ಆಗಿತ್ತು ; ಅಷ್ಟು ಹೇಳಿದೆ. ನೀ ಯಾವದೂ ಮನಸ್ಸಿನ್ಯಾಗ ಹಿಡೀಬ್ಯಾಡಪ್ಪಾ. ನನಗೆ ಅವನ ಬಿಟ್ಟರ ಗತಿ ಏನು ಅದ?..... ನಾ ತಿರಗಿ ಹೋಗತೇನಿ, ಉಪವಾಸರ ಕೆಡವಲಿ, ವನವಾಸರ ಕೆಡವಲಿ, ನಾ ಅದೇ ಮುನಿಯಾಗ ಕಿಟ್ಟಿಗೆ ಸಮಾಧಾನ ಹೇಳುವುದೇ ಕಠಿಣವಾಯಿತು. ರತ್ನಾ ತಾನು ಹಾಗೆ ಅಂದೇ ಇಲ್ಲವೆಂದು ಆಣೆ–ಚೂರಿ ಮಾಡಿ ಸಾಧಿಸಿದಳು. ಇನ್ನು ಸಾಕ್ಷಿಯನ್ನು ಕರತರಬೇಕು. ಗಂಗವ್ವ ಕಾಶೀತಾಯಿಯನ್ನು ಕರತಂದಳು. ಕಾಶೀತಾಯಿ ಈ ನಾಟಕವನ್ನೆಲ್ಲ ಸೊಗಸಾಗಿ ನೋಡಿ, ಎರಡೂ ದಂಡೆಯ ಮೇಲೆ ಕೈಯಿಟ್ಟು ತಾನು ಯಾವುದನ್ನೂ ಹೇಳದೆ ಸುದ್ದಿಯನ್ನು ಇತರರಿಗೆ ಅರುಹಲು ಅಲ್ಲಿಂದ ಜಾರಿದಳು. ಈ ವರೆಗೆ ರತ್ನಾ ಗಂಡನ ಆಜ್ಞೆಯನ್ನಾದರೂ ಪಾಲಿಸಿ, ತನ್ನ ತಪ್ಪು ಇಲ್ಲದಿದ್ದರೂ 'ತಪ್ಪಾಯಿತು' ಎಂದು ಕಾಟಕಳೆಯುವದಕ್ಕಾದರೂ ಹೇಳಲು ಒಪ್ಪುತ್ತಿದ್ದಳು. ಆದರೆ ಈಗ 'ತಪ್ಪಾಯಿತು' ಬಿದ್ದು ಸಾಯತೇನಿ !....' ಎಂದಳು.

ಆದರೆ ದೇಸಾಯರು ಬಿಡಲಿಲ್ಲ. 'ಗಂಗವ್ವಾ, ನೀ ಹೆದರಬ್ಯಾಡ. ಇವತ್ತ ನೀ ಇಲ್ಲೇ ಮೈ ತೊಳಕೊಂಡು ಒಂದು ಅನ್ನಾ – ಝುಣಕಾ ಮಾಡಿಕೊಂಡು ಉಣ್ಣು. ನಾಳೆ ನಿನ್ನ ಮಗ–ಸೊಸಿ ನಿನ್ನ ಕಾಲಿಗೆ ಬಿದ್ದು ನಿನ್ನ ಮನೀಗೆ ಕರಕೊಂಡು ಹೋಗುಹಂಗ ಮಾಡತೇನಿ !' ಎಂದರು.

ಆದರೂ ಗಂಗವ್ವನಿಗೆ ಸಂದೇಹ, ಇಲ್ಲಿ ಒಂದು ದಿನ ಇದ್ದರೆ ನಾಳೆ ಮಗ ಕರೆಯಲು ಬಂದೇಬರುವನೆಂಬ ನಿಯಮವೇನು ?..... ಅವನು ಬರದಿದ್ದರೆ, ನಾಳೆ ತಾನಾಗಿಯೇ ತಿರುಗಿ ಮನೆಗೆ ಹೋಗುವದು ಇನ್ನೂ ಮರ್ಯಾದೆ

ಗೇಡು. ಅದಕ್ಕಾಗಿ 'ಒಲ್ಲೆ ಬಿಡು ! ಸ್ತ್ರೀಜನ್ಮ ; ಅನುಭೋಗಿಸತೇನಿ' ಎಂದು ಎದ್ದಳು.

ಆದರೆ ದೇಸಾಯರು ಬಿಡಲಿಲ್ಲ. ಆಗ್ರಹಪಡಿಸಿ ಮನೆಯಲ್ಲಿಯೇ ನಿಲ್ಲಿಸಿಕೊಂಡರು. ಸಂಜೆ ವಸಂತನ ಮುಖಾಂತರ ರಾಘಪ್ಪನಿಗೆ ಒಂದು ತೋಂಡೀ[೧] ಸಂದೇಶ ಕಳಿಸಿಕೊಟ್ಟರು. 'ಗಂಗವ್ವ ನಮ್ಮಲ್ಲಿ ಇದ್ದಾಳೆ. ನಾಳೆ ಮುಂಜಾನೆ ಅಳಿಯ– ಮಗಳು ಇಬ್ಬರೂ ಬಂದು ಮನೆಗೆ ಕರೆದೊಯ್ಯಬೇಕು' ಎಂದು ದೇಸಾಯರ ಗುರಿ ನೀಟಾಗಿ ಮುಟ್ಟಿತು. ಮರುದಿನ ಮಗ ಸೊಸೆ ಇಬ್ಬರೂ ತಾಯಿಯ ಕ್ಷಮಾಯಾಚನೆ ಕೇಳಿದರು.

ಗಂಗವ್ವನಿಗೆ ಇವರ ಗುಟ್ಟೇ ತಿಳಿಯದಾಯಿತು. ಸೊಸೆಯೂ ತನ್ನ ಕಾಲು ಬಿದ್ದ ಸೋಜಿಗವೆಂತು !

ಅಷ್ಟರಲ್ಲಿ ದೇಸಾಯರು ನಗುತ್ತ, 'ಇನ್ನ ದುಸುಮುಸಿ[೨] ಬಿಡರಿ. ಚಹಾ ಕುಡಿದೀರ್ಯೋ ಇಲ್ಲೋ? .... ಇನ್ನ ಎಲ್ಲಾರೂ ನಗಬೇಕು. ಯಾಕಂದರ ನಾ ಒಂದು ಆನಂದದ ಸುದ್ದಿ ಹೇಳಬೇಕಾಗೇದ' ಎಂದರು.

'ಕೃಷ್ಣಾ, ನಿನ್ನ ಮಾವ ನಿನಗೆ ಇಲ್ಲೆ ಬಂದು ಅವ್ವನ್ನ ಕರಕೊಂಡು ಹೋಗಲಿಕ್ಕೆ ಬಹಳ ಆಗ್ರಹಮಾಡಿದನೇನು?' ಎಂದು ನಗುನಗುತ್ತಲೇ ಕೇಳಿದರು.

ಕಿಟ್ಟಿ, ಇಲ್ಲ, ಉಂಟು, ಎಂದು ಗೊಂದಲಗೊಂಡಿರಲು, ಅವರು ಇನ್ನೂ ಗಟ್ಟಿಸಿನಗುತ್ತ, 'ಇನ್ನ ಮುಂದ ನೀ ನನ್ನ ಮಾವಗ ಸಲಾಂ ಹೊಡಿಯೋ ಕಾರಣಿಲ್ಲ ಇನ್ನ ನೀ ಖರೆ ಅಳಿಯ ಆದಿ. ಇನ್ನೇನು ರಾಘಪ್ಪ ನಿನ್ನ ದತ್ತಕ ತೊಗೊಳ್ಳೋ ವಿಚಾರದಾಗ ಇಲ್ಲ. ಇನ್ನ ಯಾಕ ಅವನ ಭಿಡೆ!' ಎಂದರು. ಗಂಗವ್ವ, ರತ್ನಾ ಎಲ್ಲರೂ 'ಆಂ!' ಎಂದು ಉದ್ಗರಿಸಿದರು.

ದೇಸಾಯರು ಸುಮ್ಮನೆ ನಕ್ಕರು.

ಗಂಗವ್ವ, 'ಚ್ಯಾಷ್ಟಿ ಮಾಡತೀಯೋ ಏನು?' ಎಂದು ಕೇಳಿದಳು.

'ಏ, ನಾನ್ಯಾಕ ಚ್ಯಾಷ್ಟಿ ಮಾಡಲಿ ರಾಘಪ್ಪ ತಾನ ಬಂದು ಈಗ ಒಂದು ಹದಿನೈದು ಇಪ್ಪತ್ತು ದಿನದ ಹಿಂದೆ ಹೇಳಿ ಹೋದ' ಎಂದರು.

'ಹಂಗಾರ ಯಾರನ್ನ ತೊಗೋತಾನಂತ?' ಗಂಗವ್ವ ಕೇಳಿದಳು.

'ರಾಘಪ್ಪಗ ದತ್ತಕ ಮಕ್ಕಳ ಮ್ಯಾಲ ನಂಬಿಕೆ ಹಾರಿಹೋಗೇದ' ಎಂದು ಹೇಳಿ, ಅವರಿಗೆ ಇನ್ನೂ ಗೊಂದಲಕ್ಕೆ ಕೆಡವಿ, ಕೊನೆಗೆ ಹೇಳಿದರು:

---

೧. ಬಾಯಿಮಾತು ೨. ಜಗಳ

'ಸ್ವಂತ ಮಗ ಆಗತಿರಲಿಕ್ಕೆ ದತ್ತಕ ಮಗ ಯಾಗ, ಅಂತ ರಾಘಪ್ಪನ ವಿಚಾರ.' ಅಷ್ಟರಲ್ಲಿ ವೇಣೂಬಾಯಿ ಹೊಸ್ತಿಲ ಹೊರಗಿಂದಲೇ ಭಾಷ್ಯಮಾಡಿ ಹೇಳಿದಳು : 'ಚಂಪಾಬಾಯಿಗೆ ಈಗ ಮೂರು ತುಂಬಿ ನಾಕರಾಗ ಅದ ಅಂತ.'

ರತ್ನಾಳ ಆಶ್ಚರ್ಯಕ್ಕಂತೂ ಸೀಮೆಯೇ ಉಳಿಯಲಿಲ್ಲ. ತಾನು ಈ ಮೂರು ನಾಲ್ಕು ತಿಂಗಳು ವಾರಕ್ಕೆ ಎರಡು ಮೂರು ಬಾರಿಯಾದರೂ ತವರುಮನೆಗೆ ಹೋಗಿಬರುತ್ತೇನೆ.... ಯಾರೂ ಮಾತೇ ಆಡಿಲ್ಲವಲ್ಲ !..... ಶಾಂತಾಗೆ ಕೂಡ ಗೊತ್ತಿರಲಿಲ್ಲವೇ ?

ಶಾರೀರಿಕ ಅಶಕ್ತತೆಯ ಮೂಲಕ, ಗರ್ಭವತಿಯಾದರೂ ಚಂಪಕ್ಕನಲ್ಲಿ ಯಾವ ಬದಲಾವಣೆಗಳೂ ಸ್ಪಷ್ಟವಾಗಿ ಒಡಮೂಡಿರಲಿಲ್ಲ. ಶಾಂತಾಗೆ ಗೊತ್ತಿತ್ತು; ಆದರೆ ರತ್ನಾ ಮನಸ್ಸಿಗೆ ಖೇದ ಮಾಡಿಕೊಂಡಾಳೆಂಬ ಕಲ್ಪನೆಯಿಂದ ಚಂಪಕ್ಕ ಶಾಂತಾಗೆ ರತ್ನಾಳೆದುರು ಈ ವಿಷಯ ಉಸಿರು ಒಡೆಯದಿರಲು ಹೇಳಿ ಇಟ್ಟಿದ್ದಳು. ಅದಕ್ಕಾಗಿ ಶಾಂತಾ ಕೂಡ ಹೇಳಿರಲಿಲ್ಲ.

ಅ ಪುಟ್ಟ ಕುಟುಂಬಕ್ಕೆ ದೈವವು ತಮ್ಮನ್ನು ಅ ರೀತಿಯಲ್ಲಿ ವಂಚನೆ ಮಾಡೀತೆಂದು ಕಲ್ಪನೆ ಬರುವುದು ಕೂಡ ಸಾಧ್ಯವಿರಲಿಲ್ಲ. ರಾಘಪ್ಪನಿಗೆ ಇನ್ನು ಮೇಲೆ ಮಕ್ಕಳಾಗುವದು ಅಸಾಧ್ಯಕಲ್ಪನೆ, ಇಷ್ಟೇ ಏಕೆ, ಹಾಸ್ಯಾಸ್ಪದ ಕಲ್ಪನೆ ; ಇದೀಗ ಸತ್ಯ. ರತ್ನಾಳ ರಾಜಕೀಯ – ಸಾಮಾಜಿಕ ಆರ್ಥಿಕ ಬೆಲೆ ಸರ್ರನೆ ಇಳಿಯಿತು. ಅವಳಿಗೂ ತಂದೆಯ ವಿಷಯಕ್ಕೆ ಸಂತಾಪ ಬಂದಿತು. ಆಕೆಯ ಪ್ರತ್ಯಕ್ಷ ನೋವನ್ನು ಕಂಡವಳು.... 'ದೇವರೇ ಕಾಯಲಿ!' ಅಂದು ಕೊಂಡಳು. 'ಆ ಗರ್ಭ ತನ್ನದಿದ್ದರೆ....' ಎಂದು ತುಸು ಅಸೂಯೆಯೂ ಆಯಿತು. ಆ ಹುಚ್ಚು ಅಸೂಯೆಗಾಗಿ ತನ್ನ ಮೇಲೆ ತನಗೇ ಸಿಟ್ಟು ಕೂಡ ಬಂದಿತು.

ಕಿಟ್ಟಗೆ ಅರ್ಧ ನಗೆ, ಅರ್ಧ ಅಸೂಯೆ. ಅವನು ದತ್ತಕಕ್ಕೆ ಬಹಳ ಮಹತ್ವ ಕೊಟ್ಟವನಲ್ಲ. ಹೆಣ್ಣಿಗೆ ಒಲಿದವನು. ಅವಳು ತರುವ ಆಸ್ತಿಯ ಮೂಲಕ ತನ್ನ ಹೆಂಡತಿಯ ತಲೆಯ ಮೇಲೆಏರಿಸಿದ ಹೆಚ್ಚಿನ ಹೂಗಳು ಕೆಳಗುರುಳಿದಂತಾಗಿದ್ದವು. 'ರಂಗೇಲಿ ರಾಘಪ್ಪ !' ಎಂಬ ಕಲ್ಪನೆಗೆ ನಗೆಯೂ ಬರತೊಡಗಿತು.

ಗಂಗವ್ವನಿಗೆ ನಿಜವಾದ ಕಸಿವಿಸಿ. ಆದರೆ ಅವಳೂ ಈ ಸುಮಧುರ ಪ್ರಸಂಗದ ಬಗ್ಗೆ ಹೇಗೆ ವಿಷಮ ನುಡಿಯನ್ನು ಆಡಿಯಾಳು?

ಅಂತೂ ಬಹಿರಂಗದಲ್ಲಿ ಆನಂದಕರವಾದರೂ ಅಂತರಂಗದಲ್ಲಿ ಚಿಂತಾಜನಕವಾದ ಈ ಹಾಸ್ಯಮಯ ಸುದ್ದಿಯ ಸಂಕೀರ್ಣ ಭಾವನೆಗಳಲ್ಲಿ ಮನಸಾ ಒಂದಾಗಿ ಆ ಪುಟ್ಟ ಕುಟುಂಬವು ಮನೆಯತ್ತ ಸಾಗಿತು.

..... ಮರುದಿನ ರತ್ನಾ ತವರು ಮನೆಗ ಮತ್ತೆ ಬಂದಳು.

.... ರತ್ನಾ ಏನೆಂದು ಜಗಳಾಡಬೇಕು?....

ಅವಳಿಗೆ ಯಾರೂ ತನಗೆ ಈ ಸುದ್ದಿ ಹೇಳಲಿಲ್ಲವಲ್ಲಾ, ಎಂಬ ಸಂಕಟವೇ ಪ್ರಧಾನ ರಂಗಸ್ಥಳ. ಈ ಕಾರಣ ಕ್ಷುಲ್ಲಕವಾಗಬಹುದು. ಆದರೆ ಸ್ತ್ರೀಯರು ಕ್ಷುಲ್ಲಕ ಕಾರಣಕ್ಕಾಗಿ ಜಗಳಾಡತೊಡಗಿದೊಡನೆ, ಅದರ ಹಿಂದೆ ಇನ್ನಾವುದೋ ಆಡಲು ಬಾರದ ಕಾರಣವಿದೆಯೆಂಬುದನ್ನು ಲೋಕಜ್ಞರು ತಿಳಿದುಕೊಳ್ಳುತ್ತಾರೆ.

ರತ್ನಾ ಕಾಲಪ್ಪಳಿಸುತ್ತ ಬಂದವಳೇ ಏಕಾಕಿಯಾಗಿ ಎಲ್ಲರ ಮೇಲೆ ದಾಳಿ ಮಾಡಿದಳು. ತನಗೆ ಸತ್ಯಸಂಗತಿಯನ್ನು ಹೇಳಬಾರದೆ? ಹೇಳಿದ್ದರೆ ತಾನು ಕಸಿದೊಯ್ಯುತ್ತಿದ್ದೆನೇ?.... ತನ್ನ ಮನೆಯ ಮಾತನ್ನು ಮಂದಿಬಾಯಿಂದ ಕೇಳಿ ತಿಳಿದುಕೊಳ್ಳಬೇಕೆ?.... ತಾನು..... ತಾನು ಮನೆಯವಳಲ್ಲವೆ? ತನ್ನನ್ನು ತಂದೆ–ತಾಯಿ ದೂರವಿಟ್ಟಂತಾಯಿತೇ?... ತನ್ನ ಕಾಟ ಕಳೆದುಕೊಳ್ಳಲಿಕ್ಕೆಂದೇ ಲಗ್ನಮಾಡಿಕೊಟ್ಟರೇ.....? ತನ್ನ ಒಡಹುಟ್ಟಿದವಳೂ ತನಗೆ ಎರಡುಬಗೆದಳೇ?...... ಅತ್ತೆಯ ಮನೆಯಲ್ಲಿ ಅನುಭೋಗಿಸುವಾಗ ತವರು ಮನೆಯ ಧೈರ್ಯವೊಂದು ಇತ್ತು. ಈಗ ಅದೂ ಹೊರತಾಯಿತೇ.....? ತಾನು ತನ್ನ ಗಂಡ ಬಡವರಾದರೂ ಕೂಡ ಸರಕಾರೀ ನೌಕರಿ ಇಲ್ಲವೇ...? ತಾವು ತವರುಮನೆಯ ಆಸ್ತಿಯನ್ನೇ ಅವಲಂಬಿಸಿರುವೆವೆ? ಗಂಡಸುಮಗ ಹುಟ್ಟಿದರೆ ತನಗೂ ತಮ್ಮ ಹುಟ್ಟಿದಂತೆ ಆಗುವದಿಲ್ಲವೇ...? ಅದಕ್ಕೆ ತಾನೂ ಸಕ್ಕರೆ ಹಂಚಲು ಬಾಧ್ಯಸ್ಥಳಲ್ಲವೆ...? ಪ್ರತಿಯೊಂದು ಪ್ರಶ್ನೆಗೂ ಆಕೆಯ ಧ್ವನಿ ಏರುತ್ತಿತ್ತು. ಅವಳ ಆವೇಶಕ್ಕೆ ರಾಘಪ್ಪನಿಗೆ ಕೂಡ ಅವಳನ್ನು ಸಮಾಧಾನ ಮಾಡುವದಾಗಲಿಲ್ಲ.

ಇಷ್ಟೆಲ್ಲ ಕೂಗಾಡಿ, ಅತ್ತು, ಚಹದ ಕಪ್ಪನ್ನು ಉರುಳಿಸಿ, ಇನ್ನೊಮ್ಮೆ ತವರುಮನೆಗೆ ಕಾಲುಹಾಕುವದಿಲ್ಲವೆಂಬ ಪ್ರತಿಜ್ಞೆಮಾಡಿ, ಹೆಣ್ಣು ಹುಟ್ಟಿದರೂ ಕೂಡ ತನ್ನ ಗಂಡನನ್ನು ದತ್ತಕ ತೆಗೆದುಕೊಳ್ಳಬಾರದೆಂದೂ, ತೆಗೆದುಕೊಂಡರೆ ತನ್ನನ್ನು ಕೊಯ್ದು ತಿಂದಂತೆ ಎಂದೂ, ಆಣೆ ಹಾಕಿ, ಅಲ್ಲಿಂದ ಬಿರಬಿರನೆ ಹೊರಟು ಮನೆ ಸೇರಿದಳು.

ಅಂದಿನಿಂದ ಕಿಟ್ಟಿಯ ಮನೆಯ ಜಗಳ ಪೂರ್ಣ ಹೋಯಿತೆಂದಲ್ಲ – ಆದರೆ ರತ್ನಾ ತವರುಮನೆಯ ಅಭಿಮಾನವನ್ನು ಮನಃಪೂರ್ವಕ ಬಿಟ್ಟು ಕೊಟ್ಟಿದ್ದರಿಂದ ಅವಳಲ್ಲಿ ತನ್ನ ಗಂಡನ ಮನೆಯ ಅಭಿಮಾನ ಸೇರಿಕೊಂಡಿತು. ತನ್ನ ಗಂಡನ ಹೊರತು ತನಗೆ ಯಾರೂ ಇಲ್ಲ ; ಗಂಡನನ್ನೇ ನಂಬಬೇಕೇ ಹೊರತು ತಂದೆ–ತಾಯಿ ಯಾರೂ ತನ್ನವರಲ್ಲ, ಎಂದು ಆಕೆ ಮನಸ್ಸು

ಗಟ್ಟಿಮಾಡಿಕೊಂಡಳು. ಗಂಗವ್ವನನ್ನೂ ತನ್ನ ಪಾಲಿನ ದೈವ ಒಂದು ಅಂಗವೆಂದು ಸ್ವೀಕರಿಸಿದಳು.

# ೩೩ : ಅಚ್ಯುತನ ಎರಡನೆಯ ಪತ್ರ

ಅಚ್ಯುತನ ಎರಡನೆಯ ಪತ್ರ ಬರಲು ಒಂದು ತಿಂಗಳ ಅವಕಾಶ ಬೇಕಾಯಿತು. ಏಕೆಂದರೆ ವೆಂಕಟರಾಯನಿಂದ ಅವನ ಕತೆಯನ್ನು ಪಡೆಯುವದು ಅಸಾಧ್ಯದ ಮಾತೇ. ಆದರೆ ತಿಂಗಳೊಪ್ಪತ್ತಿನಲ್ಲಿ ಅಚ್ಯುತ ಅಸಾಧ್ಯವನ್ನೂ ಸಾಧ್ಯವನ್ನಾಗಿ ಮಾಡಿದನು. ಹುಂಬನಂತೆ ಕಂಡರೂ ವೆಂಕಟರಾಯ ಬಹಳ ಸಂಶಯಿ ; ಬಹಳ ಹಟಮಾರಿ. ತನ್ನದೇ ರೀತಿಯಲ್ಲಿ ಬೆರ್ಕಿಯವನೂ ಹೌದು. ಒಮ್ಮೆಮ್ಮೆ ಅಚ್ಯುತ ತುಸು ದೀರ್ಘದ ಪ್ರಶ್ನೆ ಹಾಕಿದರೆ, 'ನಮಗ ನಮ್ಮ ಹಿಸೆ ಬ್ಯಾಡ ಬ್ಯಾಡ, ಬ್ಯಾಡ' ಎಂದು ಬಿಡುವನು. ಇಲ್ಲವೆ ಒಮ್ಮೆ ಹೇಳಿದುದನ್ನು 'ಸುಳ್ಳ ಪಳ್ಳ ..... ಸುಳ್ಳ ಪಳ್ಳ' ಎಂದು ಕೈತಿರುವುತ್ತ ನಿಂತುಬಿಡುವನು. ಒಮ್ಮೆಮ್ಮೆ 'ಏನು ದೇಸಾಯರು! ದೇಶದ ಕಾರಭಾರ ಮಾಡಾವರು!' ಎಂದು ಅಣಕಿಸುವನು. ಆದರೆ ಅಚ್ಯುತ ಅವನ ಬೆನ್ನುಬಿಡಲಿಲ್ಲ. ಅವನಿಗೆ 'ನಮ್ಮ ಅಪ್ಪ ನಿನಗೆ ಹಿಸೆ ಕೊಡಿಸತಾರ' ಎಂದು ಕೇಳಿ ಅವನನ್ನು ಒಲಿಸಿ, ದುಂಬಾಲುಬಿದ್ದು, ಬೇರೆ ಬೇರೆ ವೇಳೆಗೆ ಅವನ ಕಡೆಯಿಂದ ಚೂರು ಚೂರು ಕಥೆಯನ್ನು ಪಡೆದು, ಅದರ ನೋಟ್ಸ ಮಾಡಿ ಇಡುತ್ತಿದ್ದನು. ಒಂದು ತಿಂಗಳ ನಂತರ ಸಿಕ್ಕ ಎಲ್ಲ ವಿವರಗಳನ್ನೂ ಒಂದು ಗೂಡಿಸಿ ದೇಸಾಯರಿಗೆ ಈ ಪತ್ರ ಬರೆದನು.

ಕ್ಷೇಮ ಶ್ರೀ ಮುಂಬೈ

ರಾ॥ ರಾ॥ ತೀರ್ಥರೂಪರ ಚರಣಾವಿಂದಗಳಿಗೆ ಚಿ. ಅಚ್ಯುತರಾಯನ ಶಿ.ಸಾ. ನಮಸ್ಕಾರಗಳು. ನಿಮ್ಮ ಪತ್ರ ಬಂದು ಮುಟ್ಟಿತು. ನಿಮ್ಮ ಪತ್ರದ ಮುಖಾಂತರ ಶ್ರೀ ವೆಂಕಟರಾಯನು ಫೋರ್ಜರಿ ಕೆಲಸದಲ್ಲಿ ಸಿಕ್ಕ ವಿಷಯ ಗೊತ್ತಾಯಿತು ನಾನು ಅದನ್ನೇ ಉಪಯೋಗಿಸಿ, 'ನೀನು ಖೊಟ್ಟಿ ಸಿಹಿ ಮಾಡಿದ್ದೆಯಂತೆ, ಹೌದೇನು?' ಎಂದು ಒಮ್ಮೆಲೆ ಅವನನ್ನು ಕೇಳಿ ಗಾಬರಿ ಮಾಡಿದೆನು. ಅವನು ತೀರ ಪ್ರಾಮಾಣಿಕನು. ದೇವರ, ತಾಯಿಯ ಆಣೆಗಳನ್ನು ತೆಗೆದುಕೊಂಡು ತಾನು ಮಾಡಿಲ್ಲವೆಂದು ಹೇಳ ತೊಡಗಿದನು. ಹೀಗೆ ಬೇರೆ ಬೇರೆ ವೇಳೆಯಲ್ಲಿ ಸಿಕ್ಕ ಮಾಹಿತಿಯನ್ನು ಕೆಳಗೆ ಬರೆದಿದ್ದೇನೆ.

ಮಾಹಿತಿ ಅಪೂರ್ಣವಿದೆ. ಆದರೂ ಅದರಲ್ಲಿ ಬಹಳಷ್ಟು ಹೀಗೆಯೇ ಆಗಿರಬಹುದೆಂದು ನನ್ನ ಅಂದಾಜು.

ವೆಂಕಟರಾಯನು ಈಗ ಹದಿನೈದು ಇಪ್ಪತ್ತು ವರ್ಷಗಳ ಹಿಂದೆ ಪುಣೆಯಲ್ಲಿ ಒಬ್ಬ ಸೇಠ ತಾಖತ್‌ಮಲ್ಲ ಎಂಬ ವ್ಯಾಪಾರಸ್ಥನ ಕೈಯಲ್ಲಿ ನೌಕರಿ ಮಾಡುತ್ತಿದ್ದನಂತೆ. ಅವನು ಮನೆಯ ನೌಕರಚಾಕರರಲ್ಲಿ ವೆಂಕಟರಾಯನೊಬ್ಬನೇ ದಕ್ಷಿಣೀ ಬ್ರಹ್ಮಣನಾಗಿದ್ದ ಮೂಲಕ ಸೇಠನಿಗೆ ಇವನ ಮೇಲೆ ವಿಶ್ವಾಸ ಬಹಳ. ಮನೆಯ ಹಿಂದೆಯೇ ಒಂದು ಕೋಣೆ ಕೊಟ್ಟು ಇಟ್ಟಿದ್ದನಂತೆ. ವೆಂಕಟರಾಯ ಹುಚ್ಚನಂತೆ ಕಂಡರೂ ಕೊಠೋರ ಪ್ರಾಮಾಣಿಕ ನಿದ್ದದ್ದು ನಿಮ್ಮ ಅನುಭವಕ್ಕೆ ಬಂದಿದೆ. ಪ್ರಾಮಾಣಿಕತೆಗಾಗಿ ಪ್ರಸಂಗದಲ್ಲಿ ಅವನು ತೀರ ಚತುರನೂ ಆಗಬಲ್ಲನು. ಸೇಠನ ಮನೆಯಲ್ಲಿ ಪೂಜೆ ಪುನಸ್ಕಾರ ವೆಂಕಟರಾಯನದೇ. ಶ್ರಾದ್ಧ ಪಕ್ಷಗಳನ್ನೂ ವೆಂಕಟರಾಯನೇ ಸಾಗಿಸುವನು. ಸೇಠಾಣಿಗಂತೂ ವೆಂಕಟರಾಯನ ಮುಗ್ಧಮನೋ ವೃತ್ತಿಗೆ ಅವನು ದೇವರ ಅವತಾರವೆಂದೇ ಕಲ್ಪನೆ. ಅವನಿಗೆ ಸಮೀಚೀನ ಉಣಿಸುವದೇ ಅವಳ ಅನಂದ. ಮುಂದೆ ಕೆಲವು ದಿನಗಳಾದಮೇಲೆ ವಿಶ್ವಾಸ ಬಹಳ ಕುಳಿತು, ಸೇಠನು ಬ್ಯಾಂಕಿಗೆ ಹಣ ಒಯ್ದು ತುಂಬುವ ಚೆಕ್ಕು ಮುರಿಸುವ, ಮುಂತಾದ ಕೆಲಸಗಳನ್ನು ವೆಂಕಟರಾಯನಿಗೆ ಒಪ್ಪಿಸಿ ಬಿಟ್ಟನು. ಹೀಗಾಗಿ ಈ ಗುಲಗಂಜಿ ಕಣ್ಣಿನ ಕೊರಡು – ಮರಾಠಿ, ವಿಚಿತ್ರ ಹಿಂದಿ ಮಾತಾಡುವ ನಿಷ್ಠುರವಾದಿಯಾದ ವಿಕ್ಷಿಪ್ತನು ಬ್ಯಾಂಕಿನಲ್ಲಿ ಪರಿಚಿತ ವ್ಯಕ್ತಿಯಾಗಿರಬೇಕು. ಬ್ಯಾಂಕಿಗೆ ಕೆಲಸಕ್ಕೆ ಹೋದಾಗ ಅಲ್ಲಿಯ ಕಾರಕೂನರು 'ಇಂದು ಸೇಠಾಣಿ ಏನು ತಿನಿಸಿದಳು?... ಕಚೋರಿಯನ್ನೋ ಉಂಡಿಯನ್ನೋ?' ಎಂದು ಕೇಳಿ ಚೇಷ್ಟೆ ಮಾಡುತ್ತಿದ್ದರೆಂದು ಅವನೇ ಹೇಳಿದನು. ಅದಕ್ಕೆ ಇವನಾದರೂ, 'ನಾನು ಉಂಡಿ ತಿಂದರೆ ನಿಮ್ಮ ಹೊಟ್ಟೆ ಏಕೆ ನೋಯುತ್ತದೆ?....' ಎಂದು ತಿರುಗಿ ಕೇಳುತ್ತಿದ್ದನಂತೆ.

ಒಂದು ದಿನ ಚೆಕ್ಕು ಬ್ಯಾಂಕಿಗೆ ತುಂಬಲಿಕ್ಕೆ ಹೋಗಿ ಕಿಡಕಿಯ ಮುಂದಿನ ಸಾಲಿನಲ್ಲಿ ವೆಂಕಟರಾಯ ಪಾಳಿ ಹಚ್ಚಿಕೊಂಡು ನಿಂತಿದ್ದನಂತೆ. ಆಗ ಸೇಠನ ಮೋಟರ್ ಡ್ರಾಯವರ (ಇವನ ಹೆಸರು 'ತಾಜುದ್ದೀನ' ಅಂತೆ) ಭರದಿಂದ ಮೋಟಾರನ್ನು ಬ್ಯಾಂಕಿನ ಎದುರಿಗೆ ತಂದು ನಿಲ್ಲಿಸಿ, ವೆಂಕಟರಾಯನನ್ನು ಕರೆದು ಅವನ ಕೈಯಲ್ಲಿ ಎರಡು ಸಾವಿರ ರೂಪಾಯಿಗಳ ಒಂದು ಚೆಕ್ಕನ್ನು ಕೊಟ್ಟು , 'ನನಗೆ ಸೇಠರು ಮೋಟಾರಿನ

ಹಳೆಯ ಅವಯವಗಳನ್ನು ಬದಲಿಸಲು ಇದನ್ನು ಕೊಟ್ಟಿದ್ದಾರೆ. ಆದರೆ ಆದನ್ನು ಮುರಿಸಲು ವೇಳೆಯಿಲ್ಲ . ಇಂದೇ ನನಗೆ ಹಣ ಬೇಕಾಗಿದೆ. ನಾನು ಈಗ ನಿಂತರೆ ಸಾಲಿನ ಕಟ್ಟೆಕಡೆಗೆ ನಿಲ್ಲಬೇಕಾಗುತ್ತದೆ. ನೀನು ಹೇಗೂ ಪಾಳಿ ಹಚ್ಚಿರುವಿ. ಅದನ್ನು ಮುರಿಸಿ ನನ್ನ ಕಡೆಗೆ ಕೊಡು' ಎಂದು ಹೇಳಿದನಂತೆ. ವೆಂಕಟರಾಯ ಆ ಚೆಕ್ಕಿನೊಡನೆ ಸಾಲಿನಲ್ಲಿ ನಿಂತನು. ಆದರೆ ಇವನಿಗಿಂತ ಮುಂದೆ ಇರುವ ಇನ್ನೊಬ್ಬನು ಯಾವುದೋ ವಿಷಯಕ್ಕಾಗಿ ಕಾರಕೂನನೊಡನೆ ತುರುಸಿನಿಂದ ಚರ್ಚೆಮಾಡತೊಡಗಿದ್ದರಿಂದ ವೆಂಕಟರಾಯನ ಪಾಳಿ ಮುಂದೆ ಇದ್ದರೂ ಕೂಡ ಸುಮ್ಮನೆ ದಾರಿಕಾಯಬೇಕಾಯಿತು. ಇದರಿಂದ ತಾಜುದ್ದೀನನಿಗೆ ತಡವಾಗತೊಡಗಿತು. ಅವನು ಸೇಠನನ್ನು ಅಂಗಡಿಗೆ ಕರೆದೊಯ್ಯುವ ವೇಳೆಯಾಗಬಂದಿತು. ಅವನು ಮೋಟರಿನಿಂದ ಇಳಿದು ಬಂದು ವೆಂಕಟರಾಯನ ಕಿವಿಯಲ್ಲಿ 'ನೀನು ಚೆಕ್ಕು ಮುರಿಸಿ ಇಲ್ಲಿಯೇ ನಿಂತಿರು. ಸೇಠನನ್ನು ಅಂಗಡಿಗೆ ಕಳಿಸಿಬಿಟ್ಟು ಇನ್ನು ಹದಿನೈದು ಇಪ್ಪತ್ತು ನಿಮಿಷದಲ್ಲಿಯೇ ಬರುತ್ತೇನೆ' ಎಂದು ಹೇಳಿ ಹೋದನು.

ವೆಂಕಟರಾಯನಿಗೆ ಯಾವ ತಕರಾರೂ ಇಲ್ಲದೆ ಚೆಕ್ಕಿನ ಹಣವು ದೊರಕಿತು. ಮುಂದಿನವನೊಡನೆ ಸೆಣಿಸಾಡಿ ಬೆಚ್ಚಗಾದ ಕಾರಕೂನನು ಎರಡನೆಯ ವಿಚಾರವಿಲ್ಲದೆ ಈ ಪರಿಚಿತ ವ್ಯಕ್ತಿಯ ಚೆಕ್ಕನ್ನು ಸ್ವೀಕರಿಸಿದನೆಂದು ತೋರುತ್ತದೆ. ಮೂರುನಾಲ್ಕು ನಿಮಿಷದಲ್ಲಿ ಮುಂದಿನ ಕಿಡಕಿಯಲ್ಲಿ ವೆಂಕಟರಾಯನ ಕೈಗೆ ಎರಡು ಸಾವಿರ ರೂಪಾಯಿಗಳೂ ಬಂದವು. ಅವನು ತಂದ ಇನ್ನೊಂದು ಚೆಕ್ಕು ಸೇಠರ ಹೆಸರಿನಿಂದ ಜಮಾ ಆಯಿತು.

ಆ ಹಣದೊಂದಿಗೆ ವೆಂಕಟರಾಯ ಬ್ಯಾಂಕಿನ ಕಟ್ಟೆಯ ಮೇಲೆ ತಾಜುದ್ದೀನನ ದಾರಿ ಕಾಯತೊಡಗಿದನು. ಒಂದು ತಾಸು ಹಾದಿ ನೋಡಿದರೂ ತಾಜುದ್ದೀನನ ಸುಳಿವು ಇಲ್ಲ. ಇದರಿಂದ ಅವನಿಗೆ ಹೆದರಿಕೆಯೂ ಆಯಿತು, ಯಾರಾದರೂ ತನನ್ನು ಬಡಿದು ಹಣ ಕಸಿದುಕೊಂಡರೆ ಹೇಗೆ ಎಂದು. ಅದಕ್ಕಾಗಿ ಹೆಚ್ಚು ಹಾದಿ ನೋಡದೆ ಅವನು ಹಣದೊಂದಿಗೆ ತನ್ನ ಕೋಣೆಗೆ ಬಂದು ಅದನ್ನು ಟ್ರಂಕಿನಲ್ಲಿ ಭದ್ರವಾಗಿ ಇಟ್ಟು, ಅದರ ಕಡೆಗೆ ಲಕ್ಷ್ಯವಿಡಲು ತನ್ನ ಅಣ್ಣ ರಾಘವೇಂದ್ರನಿಗೆ ಹೇಳಿದನಂತೆ. ರಾಘವೇಂದ್ರ ಆಗ ಎಲ್ಲಿಯೂ ನೌಕರಿ ಸಿಗದದ್ದಕ್ಕಾಗಿ ಪುಣೆಗೆ ನೌಕರಿ ಹುಡುಕುವದಕ್ಕಾಗಿ ಬಂದಿದ್ದನಂತೆ. ಅವನಿಗೆ ಟ್ರಂಕು

ಬಿಟ್ಟು ಹೊರಗೆ ಹೋಗಬಾರದೆಂದು ತಾಕೀದು ಮಾಡಿ ವೆಂಕಟರಾಯ ಕೆಲಸಕ್ಕೆ ಹೋದನು.

ಸೇಠನ ಮನೆಯಲ್ಲಿ ಸೇಠನ ಹಿರಿಯ ಮಗ ಬಾಬುಭಾಯಿ ವೆಂಕಟರಾಯನನ್ನು ನೋಡಿದೊಡನೆ ಅವನಿಗೆ ತನ್ನ ಕೋಣೆಯೊಳಗೆ ಬರಲು ಸನ್ನೆಮಾಡಿದನು. ಇವನು ಬಹುದಿನಗಳಿಂದ ಉಡಾಳತನಕ್ಕೆ ಹೆಸರಾದವನು. ಕೋಣೆಯೊಳಗೆ ವೆಂಕಟರಾಯನಿಗೆ, 'ತಾಜುದ್ದೀನ ಇನಗೆ ಭೆಟ್ಟಿಯಾಗಿದ್ದನೆ?' ಎಂದು ಕೇಳಿದನು. ವೆಂಕಟರಾಯನಿಗೆ ಸಂಶಯ ಹುಟ್ಟಿತು. 'ಹೌದು' ಎಂದು ಹೇಳಿದನು. 'ಚೆಕ್ ಕೊಟ್ಟನೇ?' ಬಾಬು ಭಾಯಿಯ ಮುಂದಿನ ಪ್ರಶ್ನೆ. ವೆಂಕಟರಾಯನು ಅದಕ್ಕೂ 'ಹೌದು' ಎಂದು ಹೇಳಿದನು. 'ಚೆಕ್ ಮುರಿಸಿದ ಹಣ ತಾಜುದ್ದೀನನಿಗೆ ಕೊಟ್ಟೆಯಾ?' ಎಂದು ಕೇಳಿದ ಬಾಬುಭಾಯಿ. ವೆಂಕಟರಾಯ ನಿರುಪಾಯನಾಗಿ 'ಹೌದು' ಎಂದು ಸುಳ್ಳು ಹೇಳಿದನಂತೆ. ಸುಳ್ಳು ಹೇಳುವದೆಂದರೆ ವೆಂಕಟರಾಯನಿಗೆ ನೂರು ಚೇಳು ಕಡಿದಂತೆ! ಆದರೆ ನಿಜವನ್ನು ಹೇಳಿದರೆ ಬಾಬು ಭಾಯಿ ಬಿಡುವವನೇ ಅಲ್ಲ ; ಅಂಗಿ ಹಿಡಿದು 'ಕೊಟ್ಟೇತೀರಬೇಕು' ಎಂದು ಗಂಟುಬೀಳುವನು. ಅದಕ್ಕಾಗಿ ವೆಂಕಟರಾಯನು ಸುಳ್ಳು ಹೇಳಿದನು, ತಾಜುದ್ದೀನನಿಗೆ ನಿಜವಾಗುವದಕ್ಕಾಗಿ, ಇಂಥ ಚಾತುರ್ಯ ವೆಂಕಟರಾಯನಲ್ಲಿಬಹಳ. ಅವನು ತನ್ನ ತತ್ತ್ವ ಬಿಡುವವನಲ್ಲ. ಬಾಬುಭಾಯಿ ಇಷ್ಟಕ್ಕೆ ಅವನ ಕೈ ಬಿಟ್ಟುಬಿಟ್ಟನು.

ಅಂದು ಇಡೀ ದಿನ ತಾಜುದ್ದೀನ ಮನೆಗೆ ಬರಲೇ ಇಲ್ಲವಂತೆ. ಸೇಠರಾದರೂ ಸಂಜೆಯ ಗಾಡಿಗೆ ಮುಂಬೆಗೆ ಹೋಗಿಬಿಟ್ಟರು. ಮರುದಿನ ಮುಂಜಾನೆ ವೆಂಕಟರಾಯ ಸೇಠನ ಮನೆಗೆ ದೇವರಪೂಜೆಗೆ ಕುಳಿತಾಗ ರಾಘವೇಂದ್ರ ದೇವರ ಮನೆಗೆ ಬಂದು, 'ತಾಜುದ್ದೀನ ಬಂದಿದ್ದಾನೆ. ಈಗಲೇ ಹಣ ಬೇಕಂತೆ' ಎಂದು ಹೇಳಿದನು. ಮಡಿಯಿಂದ ಕುಳಿತ ಅವನು ತಾನೇ ಹೋಗಿ ಟ್ರಂಕು ಮುಟ್ಟುವದು ಸಾಧ್ಯವಿಲ್ಲದ ಮೂಲಕ ತನ್ನ ಜನಿವಾರದೊಳಗಿನ ಕೀಲಿಕೈ ತೆಗೆದು ರಾಘವೇಂದ್ರನಿಗೆ ಕೊಟ್ಟನು.

ಆದರೆ ರಾಘವೇಂದ್ರನಿಂದ ಹಣವನ್ನು ತೆಗೆದುಕೊಂಡು ಓಡಿಹೋದ ತಾಜುದ್ದೀನ ಮುಂದೆ ನಾಪತ್ತೆ. ಅವನು ತಿರುಗಿ ಬರಲೇ ಇಲ್ಲ.

ಮುಂದೆ ಹತ್ತುಹನ್ನೆರಡು ದಿನಗಳಲ್ಲಿ ಸೇಠನಿಗೆ ಲೆಕ್ಕಪತ್ರದಲ್ಲಿ ಬಂದ ಅಂತರದ ಮೂಲಕವೊ ಏನೊ, ಸಂಶಯ ಬಂದು ಪೊಲೀಸರು ಬಂದು

ವೆಂಕಟರಾಯನನ್ನು ಸೆರೆಹಿಡಿದರು. ಇಂತು ಪಾಪವನ್ನು ಮಾಡಿದವ ತಾಜುದ್ದೀನನೋ ಯಾರೊ ; ವೆಂಕಟರಾಯ ಎದುರು ನಿಂತು ಚೆಕ್ಕು ಮುರಿಸಿದ್ದಕ್ಕಾಗಿ ಕಷ್ಟಪಟ್ಟನು.

ಆದರೆ ಅಷ್ಟೊತ್ತಿಗೆ ರಾಘಪ್ಪ ನೌಕರಿ ಸಿಗದೆ ತಿರುಗಿ ಹೋಗಿದ್ದನಂತೆ. ವೆಂಕಟರಾಯ ಗಾಬರಿಯಾಗಿ ರಾಘಪ್ಪನಿಗೆ ಪತ್ರ ಹಾಕಿದನು. ರಾಘಪ್ಪ ಓಡಿಬಂದು ಬೀಗನಾದ ಕುಲಕರ್ಣಿ ಸ್ವಾಮಿರಾಯನ ಜಾಮೀನು ಕೊಡಿಸಿ ಜೇಲಿನ ಕಟ್ಟೆ ಹತ್ತಗೊಡದಂತೆ ಅವನನ್ನು ಪಾರು ಮಾಡಿದನಂತೆ.

ಅಲ್ಲಿಂದ ಮೂವರೂ ಧಾರವಾಡಕ್ಕೆ ಬರುವಾಗ ಗಾಡಿಯಲ್ಲಿ ಕುಲಕರ್ಣಿಸ್ವಾಮಿರಾಯ 'ನಿನ್ನ ಬೋಜೆ ಹೊತ್ತಿದ್ದೇನೆ ; ನಿನ್ನ ಪಾಲಿನ ಜಮೀನು ನನಗೆ ಬರೆದುಕೊಡು. ನಿನ್ನ ಭರವಸೆ ಏನು?' ಎಂದು ಗಂಟುಬಿದ್ದನಂತೆ. ಅವನ ಆಗ್ರಹಕ್ಕೆ ಧಾರವಾಡಕ್ಕೆ ಬಂದೊಡನೆ ಆ ಬಕ್ಷೀಸುಪತ್ರ ಬರೆದು ಕೊಟ್ಟದ್ದು. ಆದರೆ ಬರಕೊಟ್ಟಮೇಲೆ ಅದರ ಪರಿತಾಪ ವೆಂಕಟರಾಯನಿಗೆ ಮೇಲಿಂದ ಮೇಲೆ ಆಗತೊಡಗಿತು. ಬರೆದುಕೊಟ್ಟ ಬಕ್ಷೀಸುಪತ್ರದ ಒಂದೂ ಪ್ರತಿ ವೆಂಕಟರಾಯನ ಕಡೆಗೂ ಇರಲಿಲ್ಲ, ರಾಘಪ್ಪನ ಕಡೆಗೂ ಇರಲಿಲ್ಲ. ಅತ್ತಕಡೆಯಿಂದ ರಾಘಪ್ಪ 'ನಿನ್ನ ಹಿಸೆ ಅಂದರೆ ಏನು? ನಮ್ಮ ಕಗ್ಗಲ್ಲ ಹೊಲದೊಳಗೆ ಇರೋ ಒಂದೆರಡು ಒಳ್ಳೆ ಹೊಲಗಳೇ ನನಗೆ ಬೇಕು ಎಂದು ಸ್ವಾಮಿರಾಯ ಕುಳಿತರೆ ನನ್ನ ಗತಿ ಏನು?' ಎಂದು ಎದ್ದಲಗಾಟ[೧] ಹಚ್ಚಿ ಸ್ವಾಮಿರಾಯನಿಂದ ಒಂದು ಪ್ರತಿಯನ್ನಾದರೂ ದೊರಕಿಸಲು ವೆಂಕಟರಾಯನಿಗೆ ಆಗ್ರಹಪಡಿಸಿದನು. ಹೀಗೆ ಮೊದಲೇ ಕಂಗೆಟ್ಟ ವೆಂಕಟರಾಯ ಇವರ ತಿಕ್ಕಾಟದಲ್ಲಿ ಇನ್ನೂ ಬೇಸತ್ತು 'ನಾನು ವಕೀಲರನ್ನು ಕೇಳಬೇಕು. ಆ ಬಕ್ಷೀಸುಪತ್ರದ ಪ್ರತಿ ನನಗೆ ಬೇಕು' ಎಂದು ಸ್ವಾಮಿರಾಯನಿಗೆ ಕೇಳಿದನು. ಹಳಬನಾದ ಸ್ವಾಮಿರಾಯ ಅದಕ್ಕೆ ಒಪ್ಪದಿರಲು ವೆಂಕಟರಾಯ ಇನ್ನೂ ಕನಲಿರಬೇಕು. ಅಂತೂ ಬೇಸತ್ತು ಒಮ್ಮೆ ಸ್ವಾಮಿರಾಯ ಸಿಟ್ಟಿಗೆದ್ದು ಒಳಗಿನಿಂದ ಅದರ ಪ್ರತಿ ತಂದು, 'ನಾನು ನಿನಗೆ ಐದು ಸಾವಿರಕ್ಕೆ ಜಾಮೀನು ಆಗಿದ್ದೇನೆ. ಇಷ್ಟು ನಿನ್ನ ಕಡೆಯಿಂದ ಬರೆಸಿಕೊಂಡಿದ್ದೇನೆ. ಇದು ತಪ್ಪು ಎಂದು ನಾಲ್ಕು ಜನರ ಹೇಳಲಿ, ಕಿವಿಗೆ ಹರಳು ಹಚ್ಚಿಕೊಳ್ಳುತ್ತೇನೆ!' ಎಂದು ಕೂಗಿ, ಸಿಟ್ಟಿನಿಂದ ವೆಂಕಟರಾಯನ ಕಡೆಗೆ ಬಿಸಾಡಿದನಂತೆ.

೧. ಪಿರಿಪಿರಿ.

ವೆಂಕಟರಾಯ ಅದರೊಡನೆ ರಾಘಪ್ಪನ ಮನೆಗೆ ಬಂದನು. ಮರುದಿನ ಇಬ್ಬರೂ ಮುಂಜಾನೆ ಎದ್ದು ವಕೀಲರನ್ನು ಭೆಟ್ಟಿಯಾಗಿ ಈ ಕಾಗದ ತೋರಿಸಿ ಮಾತಾಡಬೇಕಾದ್ದರಿಂದ ಅಂದು ವೆಂಕಟರಾಯ ಅಲ್ಲಿಯೇ ಉಂಡು ಮಲಗುವವನು. ಆದರೆ ರಾತ್ರಿ ಹನ್ನೊಂದಕ್ಕೆ ಮತ್ತೆ ಪೊಲೀಸರು ಕೈದು ಮಾಡಲಿಕ್ಕೆಂದು ಬಂದು ಬಾಗಿಲು ಬಡಿಯತೊಡಗಿದರಂತೆ. ಇನ್ನು ಮತ್ತೆ ಅವರ ಕೈಗೆ ಸಿಗಬಾರದೆಂದು ವೆಂಕಟರಾಯನು ಹಿತ್ತಲ ಬಾಗಿಲಿನಿಂದ ಓಡಿ ಸ್ಟೇಶನ್ನಿಗೆ ಬಂದು ಗಾಡಿಯನ್ನು ಹತ್ತಿ ಮುಂಬೈಗೆ ಬಂದನಂತೆ. ಈ ಭಾಗವನ್ನು ವೆಂಕಟರಾಯನು ಹೇಳಿದಂತೆಯೇ ಬರೆದಿದ್ದೇನೆ. ಆದರೆ ಇದರ ಬಗ್ಗೆ ನಗೆ ಸಂದೇಹಗಳೂ ಇವೆ.

ಮುಂಬೈಯಲ್ಲಿ ನಾಲ್ಕು ದಿನ ಕಳೆಯುವಷ್ಟರಲ್ಲಿ ಈ ಹಿಟ್ಟಿನ ಗಿರಣಿಯ ಮಾಲಕನ ಮನೆಯಲ್ಲಿ ದಿನಬಳಕೆಯ ಕೆಲಸಕ್ಕಾಗಿ ನಿಂತುಕೊಂಡನು. ಕೆಲದಿವಸದ ತರುವಾಯ ಈ ಹಿಟ್ಟಿನ ಗಿರಣಿಯನ್ನು ಅವನು ತೆಗೆದಂದಿನಿಂದ ವೆಂಕಟರಾಯ ಅದರಲ್ಲಿಯೇ ಇದ್ದಾನೆ. ಅಜ್ಞಾತವಾಸದಲ್ಲಿಯೇ ಕಾಲಕಳೆಯುತ್ತಾನೆ. ಈ ಬಕ್ಷೀಸುಪತ್ರವನ್ನು ನೋಡಿದವರಲ್ಲಿ ನಾನೊಬ್ಬನೇ 'ನಿನ್ನ ಹಿಸೆ ನಿನಗೆ ಸಿಗುತ್ತದೆ'ಯೆಂದು ಹೇಳಿದವನೆಂದು ವೆಂಕಟರಾಯ ಅಂದನು.

ವೆಂಕಟರಾಯನ ದೃಷ್ಟಿಗೆ ಪ್ರಸಂಗಗಳು ತೋರಿದಂತೆ, ಅವನು ಹೇಳಿದಂತೆ ಬರೆದ ವಿಷಯವಿದು. ಅವನ ವಿಕ್ಷಿಪ್ತ ಸ್ವಭಾವದ ಮೇಲಿಂದ ಸಂಗತಿಗಳು ಅವನಿಗೆ ತಿರುವುಮುರುವಾಗಿ ಕಂಡಿರಬೇಕೆಂದು ಖಂಡಿತ. ಆದರೆ ಹೀಗೆ ಇದ್ದ ಸನ್ನಿವೇಶದಲ್ಲಿ ಕೂಡ ಕೆಲವು ಸಂದೇಹಗಳು ಕಾಣಿಸುತ್ತವೆ. ವೆಂಕಟರಾಯನ ಬಾಯಿಂದ ಈ ಸಂಗತಿಗಳನ್ನು ತಾವು ಕೇಳಿದ್ದರೆ ತಮಗಾದರೂ ಈ ಸಂದೇಹಗಳು ಬರಬಹುದಾಗಿತ್ತು. ಆದರೆ ನಾನು ಬರೆದ ಮೂಕ–ಬರೆಹದಲ್ಲಿ ಈ ಮಾತು ಸ್ಪಷ್ಟವಾಗಿರಲಿಕ್ಕಿಲ್ಲವೆಂದು ಅವನ್ನು ಇಲ್ಲಿ ಬರೆಯುತ್ತಿದ್ದೇನೆ.

ಒಂದನೆಯ ಮಾತು. ವೆಂಕಟರಾಯ ತನ್ನ ಬಳಿಯಲ್ಲಿರುವ ಕಾಗದ ಬಕ್ಷೀಸುಪತ್ರದ ಪ್ರತಿಯೆಂದೇ ನಂಬಿದ್ದಾನೆ. ಅದು ಮೂಲ ಬಕ್ಷೀಸು ಪತ್ರವೇ ಎಂದು ಸಂಶಯಬರಲಿಕ್ಕೆ ನಾನು ಹೋದ ಬಾರಿ ಕಾರಣಗಳನ್ನು ಬರೆದದ್ದು ನೆನಪು ಇರಬಹುದು. ರೆಜಿಸ್ಟ್ರೇಶನ್ನದ ಮುದ್ರಿಕೆ ಇಲ್ಲದ ಮೂಲಕವೂ ಹಳೆಯ ಮಶಿಯ ಮೂಲಕವೂ ಅದು ಪ್ರತಿಯಂತೆ

ತೋರುತ್ತದೆಯಷ್ಟೆ ಈ ಮಾತಿಗೆ ಇನ್ನೊಂದು ಪುಷ್ಟಿ ದೊರಕಿಸುವ ಸಂಗತಿಯೆಂದರೆ ಸ್ವಾಮಿರಾಯನು ಸಿಟ್ಟಿನಿಂದ ಈ ಕಾಗದವನ್ನು ವೆಂಕಟರಾಯನತ್ತ ಬೀಸಾಡಿದಂತೆ ! ಅಂದಮೇಲೆ ಮೂಲಕಾಗದವನ್ನೇ ಕೊಡುತ್ತಿದ್ದೇನೆಂಬ ಕಲ್ಪನೆ ಅವನಿಗೆ ಇರಲು ಸಾಧ್ಯವಿಲ್ಲ. ಎರಡನೆಯ ಪ್ರತಿಯೆಂಬ ಕಲ್ಪನೆಯಿಂದ ಮೂಲಕಾಗದವನ್ನೇ ಕೊಟ್ಟಿರಬೇಕು. ಎರಡು ಮೂರು ಪ್ರತಿ ಮಾಡಿ ಒಂದೇ ಕಡೆಯಲ್ಲಿ ಇಟ್ಟಾಗ ಸಿಟ್ಟಿನ ಭರದಲ್ಲಿ ಹೀಗೆ ಆಗುವುದು ಸಂಭಾವ್ಯ.

ಎರಡನೆಯದು. ಜಾಮೀನು ಕೊಟ್ಟಮೇಲೆಯೂ ಪೊಲೀಸರು ಏಕೆ ಬಂದರು? ಸಮನ್ಸ ಬರಬೇಕಾಗಿತ್ತಷ್ಟೆ? ಪೊಲೀಸರು ಮತ್ತೆ ಹಿಡಿಯಲು ಬಂದದ್ದು ನಿಜವೆ, ಅಥವಾ ವೆಕಟರಾಯನ ಭೀತಿಯ ಭೂತವೇ?

ಮೂರನೆಯದು. ವೆಂಕಟರಾಯ ಮುಂಬೈಗೆ ಓಡಿಬಂದ ಮೇಲೆ ಸ್ವಾಮಿರಾಯನ ಅವಸ್ಥೆ ಏನು ಆಗಿರಬಹುದು?... ಕೇವಲ ಇಂಥ ಹೆದರಿಕೆಯಿಂದ ಅವನು ಆಸ್ತಿ ಬರೆಸಿಕೊಂಡದ್ದು ನಿಜ. ಏನಾದರೂ ಆದರೆ, ತಾನು ಕಳಕೊಂಡ ಹಣದ ಬದಲು ಆಸ್ತಿ ಇದ್ದೇ ಇದೆ ಎಂಬ ಸುಳ್ಳು ಧೈರ್ಯವೂ ಮೊದಲು ಅವನಿಗೆ ಇರಬಹುದು. ಆದರೆ ಹುಡುಕಿ ನೋಡುವಷ್ಟರಲ್ಲಿ ಮೂಲ ಬಕ್ಷೀಸುಪತ್ರವೇ ಮಾಯವಾದದ್ದು ಕಂಡೊಡನೆ ಅವನಿಗೆ ಎದೆ ಒಡೆದಿರಬೇಕಷ್ಟೇ?... ಆದರೆ ಅದರ ವಿಚಾರ ವೆಂಕಟರಾಯನಿಗೆ ಇಲ್ಲವೇ ಇಲ್ಲ. ತನ್ನ ಆಸ್ತಿ ಇಷ್ಟೊತ್ತಿಗೆ ಸ್ವಾಮಿರಾಯನ ವಶಕ್ಕೆ ಕೂಡ ಹೋಗಿ ಅವನು ಸುಖದಲ್ಲಿ ಇದ್ದಾನೆಯೆಂಬ ಕಲ್ಪನೆಯಲ್ಲಿ ವೆಂಕಟರಾಯ ಈಗಲೂ ಇದ್ದಾನೆ. ಅವನಿಗೆ ನಿಜಸಂಗತಿ ಗೊತ್ತಾದರೆ ಬಹಳ ದುಃಖವಾಗಿ ಅವನ ಬುದ್ಧಿಯ ಸ್ತಿಮಿತ ತಪ್ಪು ವದು ಸಾಧ್ಯವಿದೆ. ಈ ವಿಷಯಕ್ಕೆ ನಾವು ಜಾಗೃತರಾಗಿರುವದು ಅವಶ್ಯ.

ಈ ಎಲ್ಲದರ ತರುವಾಯ ಮುಖ್ಯ ಗುರುಗುಂಭ[೧] ಉಳಿದೇ ಉಳಿಯುತ್ತದೆ. ಚೆಕ್ಕಿನ ಖೊಟ್ಟಿ ವ್ಯವಹಾರದ ಮೂಲಪ್ರವರ್ತಕರು ಯಾರು? ವೆಂಕಟರಾಯ ಕಣ್ಮರೆಯಾದಮೇಲೆ ಪೊಲೀಸರು ಅವನ ಶೋಧನೆಗಾಗಿ ಪ್ರಯತ್ನಪಟ್ಟರೇ? ಅವನು ಇಲ್ಲದೆಯೇ ಖಟ್ಲೆ ಆಯಿತೆ.....? ಈ ಎಲ್ಲ ಪ್ರಶ್ನೆಗಳು ಮಹತ್ವದ ಪ್ರಶ್ನೆಗಳು. ಆದರೆ ಅವುಗಳಿಗೆ ಬೇರೆ ಕಡೆಗೆ ಶೋಧ

---

೧. ಒಳಮರ್ಮ.

ಮಾಡುವದು ಅವಶ್ಯವಿದೆ. ಈ ವಿಷಯಕ್ಕೆ ಚೌಕಶಿ ಮಾಡಬೇಕೆಂದು ನನ್ನ ಇಚ್ಛೆ ಇದೆ. ಅಲ್ಲಿ ಇತರ ವಿವರಗಳನ್ನೂ, ಕೋರ್ಟಿನ ಹಳೆಯ ಜವಾಬು ಡಿಕ್ರಿಗಳನ್ನೂ ಪಡಯಲು ಯತ್ನಿಸುತ್ತೇನೆ. ಶಕ್ಯವಾದರೆ ತಾಖತ್‌ಮಲ್ಲ ಸೇಠನನ್ನು ಕಾಣುತ್ತೇನೆ.

ಈ ಕತೆ ಪೂರ್ಣವಾಗಿ ತಿಳಿದುದಾದರೆ ನಮ್ಮ ವೃತ್ತಪತ್ರದಲ್ಲಿ ಗುಪ್ತ ನಾಮಧೇಯಗಳನ್ನು ಉಪಯೋಗಿಸಿ ಸೀರಿಯಲ್ ಮಾಡಿ ಹಾಕಲು ಬರುವಂತೆ ಇದೆ. ನಮ್ಮ ಸಂಪಾದಕನಿಗೆ ಕೆಲವು ವಿವರಗಳನ್ನು ಹೇಳಿದ್ದಕ್ಕೆ ಅವನಿಗೆ ಸಂತೋಷವಾಗಿದೆ. ಹಿಂದುಸ್ತಾನದಲ್ಲಿಯೇ ನಡೆಯಬಹುದಾಗಿದ್ದ ಇಂಥ ಚಿತ್ತವೇಧಕ ವಿಷಯಗಳನ್ನು ಬರೆಯಲು ಯಾರಿಲ್ಲವಲ್ಲ ! ಕಾಮಿಕ್ ಸ್ಟ್ರಿಪ್ ಆದರೂ ಹೊರಗಿನವರಿಂದ ಕೊಂಡುಕೊಳ್ಳಬೇಕು, ಕತೆಯನ್ನು ಕೊಳ್ಳಬೇಕು. ಎಲ್ಲವೂ ಪರದೇಶದ ಸನ್ನಿವೇಶದಲ್ಲಿ ಬರೆಯಲ್ಪಟ್ಟವುಗಳು... ಎಂದು ಅವನ ತಕರಾರು. ಇದನ್ನು ಸೀರಿಯಲ್ ಮಾಡಲು ಅವನೇ ಹೇಳಿದ್ದಾನೆ. ಪುಣೆಗೆ ಹೋಗಿ ಬರಲು ರೂಪಾಯಿ ಕಳಿಸಿಕೊಡುವಿರಾ?

ನನ್ನ ಅಭ್ಯಾಸ ಚೆನ್ನಾಗಿ ಸಾಗಿದೆ. ಆರೋಗ್ಯವೂ ಚೆನ್ನಾಗಿ ಇದೆ. ಮಾತೋಶ್ರೀಯವರಿಗೆ ನಮಸ್ಕಾರಗಳು. ತಮ್ಮಂದಿರಿಗೆ ಆಶೀರ್ವಾದ.

ಇಂತೀ,
ಅಚ್ಯುತರಾಯ

# ೩೪ : ಬೆಂಕಿಯೊಡನೆ ಆಟ

ದೇಸಾಯರಿಂದ ಅಳಿಯ–ಮಗಳನ್ನು ಕಳಿಸಿಕೊಡಬೇಕೆಂದು ಸಂದೇಶವು ಬಂದಾಗ 'ದೇಸಾಯೀ, ಮಾಡು ; ನಾನೂ ನಿನ್ನ ಕುತಿಗೀ ಹಿಡಿದೇನು. ಸ್ವಲ್ಪ ತಾಳು !' ಎಂದು ವಟಗುಡುತ್ತ ರಾಘಪ್ಪ ಅವರ ಮಾತನ್ನು ನಡೆಸಿದನು. ಅಳಿಯ–ಮಗಳನ್ನು ತನ್ನ ಮನೆಗೆ ಕರೆಯಿಸಿಕೊಂಡು, 'ನೀವು ಒಂದಾಗಿ ಇರಬೇಕು. ನನ್ನ ಅಕ್ಕ ಬಹಳ ಕಷ್ಟ ಉಂಡಾಕಿ. ಆಕಿನ್ನ ನೋಯಿಸಬಾರದು' ಎಂದು ಮುಂತಾಗಿ ನಿಜವಾದ ಕಳಕಳಿಯಿಂದ ಹೇಳಿದನು. ರತ್ನಾಳ ಲಗ್ನವಾದಮೇಲೂ ರಾಘಪ್ಪ ಒಂದು ದಿನವೂ ಗಂಗವ್ವನ ಮನೆಯಲ್ಲಿ ಕಾಲು ಇಟ್ಟಿದ್ದಿಲ್ಲ ; ಗಂಗವ್ವನಾದರೂ ರಾಘಪ್ಪ ಮನೆಗೆ ಕಾಲು ಇಟ್ಟಿದ್ದಿಲ್ಲ.ಆದರೆ ಇಷ್ಟು ದ್ವೇಷದ ನಡುವೆ ಗಂಗವ್ವನಿಗೆ ರಾಘು ಎಂದರೆ ಜಗತ್ತಿನ ಎಲ್ಲ ಪಾಪಗಳ ಮೂರ್ತಿ. ರಾಘಪ್ಪನಿಗೆ ಗಂಗವ್ವನೆಂದರೆ ಬಿಗುಹಿನಿಂದ ತನ್ನನ್ನು ಬಗ್ಗಿಸಬಲ್ಲ, ತನ್ನ ಜೊತೆಗೆ ಹೋರಾಡಬಲ್ಲ ಶಕ್ತಿ. ಆದರೆ ಒಮ್ಮೊಮ್ಮೆ ಗಂಗವ್ವನ ವಿಷಯ ಬಂದಾಗ ಅವನ ಮನಸ್ಸು ಕರುಣೆಯಿಂದ ತುಂಬಿಬಿಡುತ್ತಿತ್ತು. ಲಗ್ನದ ನಿಶ್ಚಯದ ಕಾಲಕ್ಕೆ ಹೀಗೆಯೇ ಅತ್ತಿದ್ದನು. ಈಗ ಗಂಗವ್ವ ಊಟವಿಲ್ಲದೆ ಹೋದಳು. ಅದರಲ್ಲಿ ದೇಸಾಯರ ಮನೆಯಲ್ಲಿ ನಿಂತಿದ್ದಾಳೆ, ಎಂಬ ವಿವರ ಮಗಳಿಂದ ತಿಳಿದಮೇಲಂತೂ ಅವನ ಎದೆ ಕರಗಿ ನೀರಾಯಿತು. ಅವನ ಕರುಳು ಕರಗುವ ಮಾತಿಗೆ ಅಳಿಯ–ಮಗಳು ಇಬ್ಬರೂ ಒಪ್ಪಿಕೊಂಡರು.

ಇಂತು ತನ್ನ ಮನಸ್ಸಿನಲ್ಲಿ ಇದ್ದುದನ್ನೇ ದೇಸಾಯಿಯ ಮಾತಿನಂತೆ ನಡೆದೆನೆಂಬ ವಾದಕ್ಕೆ ತಿರುಗಿಸಿಕೊಂಡು ಅಳಿಯ–ಮಗಳನ್ನು ಮರುದಿನ ಹೋಗಬೇಕೆಂದು ಒತ್ತಾಯಪಡಿಸಿದ್ದಾಯಿತು. ದುರ್ಬುದ್ಧಿಯ ವೈಶಿಷ್ಟ್ಯವೇನೆಂದರೆ ಯಾವಾಗಾದರೂ, ಅದು ಸದ್ಬುದ್ಧಿಯ ಮಾತನಿಂದ ನಡೆಯಬೇಕಾದರೂ, ಅದಕ್ಕೆ ತನ್ನದೇ ಆದ ಕಾರಣಗಳನ್ನು ಕಲ್ಪಿಸುತ್ತದೆ.

ಆದರೆ ಇದೆಲ್ಲದರ ಪರಿಣಾಮ ಇನ್ನೊಂದೇ ಆಗಿಕೊಂಡು ಕುಳಿತಿತು. ತಾವು ದುರ್ಲಕ್ಷ್ಯಮಾಡಿದ ಒಂದು ವಿಷಯದ ಲಾಭ ತೆಗೆದುಕೊಂಡು ದೇಸಾಯರು ತನ್ನ ಮಗಳಿಗೂ ತನಗೂ ಭೇದಭಾವ ಹುಟ್ಟಿಸಿಯಾರೆಂದು ರಾಘಪ್ಪ ನಿರೀಕ್ಷಿಸಿರಲಿಲ್ಲ.

ಎರಡು ಮೂರು ದಿನಕ್ಕೊಮ್ಮೆ ಓಡಿಬರುವಳು ರತ್ನಾ ; ಜಗಳಾಡಿ ಅಂದು ಹೋದವಳು ಹದಿನೈದು ದಿನವಾದರೂ ಬರಲಿಲ್ಲ. ಕಿಟ್ಟಿಯೇ ಹಾದಿಯಲ್ಲಿ ಒಂದೆರಡು ಸಲ ಭೆಟ್ಟಿಯಾಗಿದ್ದನು. ಆದರೆ ತನ್ನ ಮಗಳ ವಿಷಯಕ್ಕೆ ಅವನನ್ನು ಎಂತು ಕೇಳುವದು? ರತ್ನಾಳ ಮುಖ ಕಾಣದೆ ಚಡಪಡಿಕಿಯಾಗತೊಡಗಿತು. 'ಆತ್ಯು, ಗಂಡನ ಮನ್ಯಾಗಾರ ಸುಖದಿಂದ ಇರಲಿ' ಎಂದುಕೊಂಡು ಮನಸ್ಸು ಬಿಗಿಹಿಡಿದನು. 'ಇನ್ನೂ ರಾವಣನs ನಾನು... ವಿನಾಶಕಾಲ ಬಂದsದ. ಒಂದೊಂದs ಕಳಕೊಳ್ಳಲಿಕ್ಕೆ ಹತ್ತೇನಿ' ಎದು ವಟಗುಟ್ಟುತ್ತ, 'ಆಗಲಿ ದೇಸಾಯಿ, ಇನ್ನೂ ಒಂದರಾಗರs ನಿನ್ನ ಬಗ್ಗಿಸತೇನಿ' ಎಂದುಕೊಂಡನು.

ಎರಡು ಆಸೆಗಳು ಅವನಿಗೆ ದಿನದಿನಕ್ಕೆ ಭ್ರಮೆಯಂತೆ ಬೆನ್ನಟ್ಟತೊಡಗಿದ್ದವು. ಒಂದು, ಗಂಡುಮಗ ಹುಟ್ಟಬೇಕು. ಅದಕ್ಕೆ ಸತ್ಯನಾರಾಯಣ ಮಾಡಿಸಿದ್ದಾಯಿತು, ಹರಕೆ ಹೊತ್ತದ್ದಾಯಿತು. ಮುಂಬೈಯ ಪ್ರಸಿದ್ಧ ಜ್ಯೋತಿಷಿಗೆ ಐದು ರೂಪಾಯಿ ಮನಿಆರ್ಡರ ಮಾಡಿ ಎರಡು ಪ್ರಶ್ನೆಗಳನ್ನು ಕೇಳಿದ್ದಾಯಿತು... ಅವನಿಂದ ಕೂಡ ಗಂಡು ಎಂದೇ ಉತ್ತರ ಬಂದಿತು. ಐದು ಆಣೆ ಐದು ಟೆಂಗಿನಕಾಯಿ ಆದು ಅಡಿಕೆಬೆಟ್ಟಗಳಿಗೆ ದೇವರು ಮೈಯಲ್ಲಿ ಬಂದು ಪ್ರಶ್ನೆ ಹೇಳುವ ಜೋಗವ್ವನಿಂದೂ ಅದೇ ಉತ್ತರ ಬಂದಿತು. ಇಂತು ಈ ವಿಷಯದಲ್ಲಿ ರಾಘಪ್ಪ ಖುಷಿಯಲ್ಲಿದ್ದನು.

ಇನ್ನೊಂದು ಆಸೆ... ವಸಂತನಿಗೆ ಶಾಂತಾಳನ್ನು ಲಗ್ನಮಾಡಿಕೊಡಬೇಕು. ದೇಸಾಯರ ಮೇಲೆ ದರ್ಪ ಸ್ಥಾಪಿಸಲು ಅವನಿಗೆ ಉಳಿದುದು ಇದೊಂದೇ ಉಪಾಯ. ಇಂತು ವಸಂತನ ಬರು–ಹೋಗುಗಳಿಗೆ ಶಕ್ಯವಿದ್ದಷ್ಟು, ಉತ್ತೇಜನ ಕೊಡುವನು. ಬಂದಾಗೊಮ್ಮೆ ಚಹಾ ತಂದು ಕೊಡುವವಳು ಶಾಂತಾಳೇ. ಆದರೆ ವಸಂತ ಮಾತ್ರ ಯಾವ ಮಾತನ್ನೂ ಆಡಲೊಲ್ಲನು. ಅವನಿಗೂ ಸಂಕೋಚ. ಇನ್ನೊಬ್ಬ ಸರಾಫಿ ಅಂಗಡಿಯ ವರ ಸಿಕ್ಕಾಗ ರಾಘಪ್ಪ ತನ್ನನ್ನು ಗ್ರಹಿಸಿಯಾನೇ? ಬರೀ ಖಾದೀ ಬಟ್ಟೆಯ ಉಪಯೋಗವೇನು? ತನಗೇ ಕೊಡುವ ಮನಸ್ಸಿದ್ದರೆ ರಾಘಪ್ಪ ಏಕೆ ಸ್ಪಷ್ಟವಾಗಿ ಹೇಳಬಾರದು? ಸದ್ಯಃ ಫಲಾಸಕ್ತನಾದ ವಸಂತರಾಯನು ವಿಶೇಷ ಅತ್ತಿತ್ತ ದೃಷ್ಟಿಚಾಚದೆ, ತನ್ನ ಮನೆಯ 'ಗೋದೀ ಹುಗ್ಗಿ'ಯ ಶ್ರೀಮಂತಿಕೆ ತನಗೆ ದೊರಕಿಸಿಕೊಡಲಾಗದ ನವನವೀನ ತಿಂಡಿತಿನಿಸುಗಳಿಗೆ ಹಾಗೂ ಹರಟೆಗೆ, ಯಾವಾಗಾದರೊಮ್ಮೆ ಒಂದು ಕೈ ಇಸ್ಪೇಟಿಗೆ ಮೆಚ್ಚಿದ್ದನು.

ಆದರೂ ವಸಂತನಿಗೆ ಕೂಡ ಏನೋ ಸಂಶಯ ಬಂದಿತ್ತು. ಹುಡಿಗೆಯೂ ತನಗೆ ಒಲಿದಂತೆ....! ಇಲ್ಲವಾದರೆ ರಾಘಪ್ಪನ ಮನೆಯಿಂದ ಹೊರಗೆ ಬೀಳುವಾಗ ಇಷ್ಟು ಬಾರಿ ತೋಟದಲ್ಲಿ ಹೂ ತೆಗೆಯುವ ನೆವಮಾಡಿ ತನಗೆ ಎದುರಾಗುವ

ಕಾರಣವೇನಿತ್ತು ......?

ವಸಂತ ಹಿಂದಕ್ಕೆ ನಾಟಕದ ಗದ್ದಲದಲ್ಲಿದ್ದಾಗ ಒಂದು ಕಲ್ಚರ ಮುತ್ತಿನ ಸರವನ್ನು ತನಗಾಗಿಯೆಂದು ಮಾಡಿಸಿಕೊಂಡಿದ್ದನು. ಅದನ್ನೇ ಬಿಚ್ಚಿಸಿ ಹೆಣ್ಣುಮಕ್ಕಳಿಗೆ ಆಗುವಂತೆ ಕಟ್ಟಿಸಿ, ಅದನ್ನು ಕಿವಿಯಲ್ಲಿ ಇಟ್ಟುಕೊಂಡು ಶಾಂತಾಗೆ ಕೊಡಬೇಕೆಂದು ಬಲುದಿನಗಳಿಂದ ಹವಣಿಸುತ್ತಿದ್ದನು. ಕೊನೆಗೆ ಒಮ್ಮೆ ಸುಸಂಧಿ ಸಿಕ್ಕಿತು. ಆದರೆ ಸುಸ್ಥಳದಲ್ಲಿ ಅಲ್ಲ, ದಾರಿಯಲ್ಲಿ. ಮನೆಯಲ್ಲಿ ಶಾಂತಾ ಒಬ್ಬಳೇ ಎಂದೂ ಭೆಟ್ಟಿಯಾಗಿರಲಿಲ್ಲ. ಚಂಪಕ್ಕನು ಅದರ ಬಗ್ಗೆ ಪೂರ್ಣ ಜಾಗೃತ ವಹಿಸಿದ್ದಳು.

ಗೆಳತಿಯರ ಮನೆಯಿಂದ ಮರಳುತ್ತಿದ್ದ ಶಾಂತಾ ಹಾದಿಯಲ್ಲಿ ವಸಂತನಿಗೆ ಎದುರಾದಳು. ವಸಂತ ಹಾದಿಯಲ್ಲಿಯೇ ತನ್ನನ್ನು ಮಾತಾಡಿಸಬಹುದೆಂದು ಆಕೆ ಕನಸುಮನಸಿನಲ್ಲಿ ಎಣಿಸಿರಲಿಲ್ಲ. ಆದರೆ ವಸಂತ ಆಕೆಯ ಎದುರು ಕಂಬದಂತೆ ನಿಂತು, 'ರಾಘಪ್ಪ ಊರಾಗ ಇಲ್ಲೇನು?' ಎಂದನು.

'ಇದ್ದಾರಲ್ಲ.....'

'ಮನ್ಯಾಗ ಇದ್ದಿದ್ದಿಲ್ಲ ...'

'ಹೊರಗೆ ಹೋಗಿದ್ದಾರು .......'

'ಇದನ್ನ ನೋಡೀಯೇನು?' ವಸಂತ ಕಿಸೆಯಿಂದ ಸರವನ್ನು ತೆಗೆದು ಆರ್ಜವ[೧]ದಿಂದ ದೂರದಿಂದಲೇ ಅವಳ ಕೈಯಲ್ಲಿ ಒಗೆದನು.

ಆಕೆ ಲಾಲಸೆಯಿಂದ ಸರದ ಕಡೆಗೆ ನೋಡುತ್ತ ಅದರ ದೊಡ್ಡ ದೊಡ್ಡ ಮುತ್ತುಗಳ ಮೇಲೆ ನಯವಾಗಿ ಬೆರಳು ಆಡಿಸತೊಡಗಿದಳು. ಆಕೆಯ ಕೈ ಬೆರಳುಗಳೂ ಮುತ್ತಿನಂತೆ ಕಂಡವು. ವಸಂತ ಉತ್ಸಾಹದಿಂದ 'ಖರೇ ಮುತ್ತು ಲ್ಲ, ಕಲ್ಚರ ಮುತ್ತು' ಎದನು.

'ನಿಮ್ಮ ಅವ್ವನದೇನು?' ಶಾಂತಾ ಏನು ಮಾತಾಡಬೇಕೋ ತಿಳಿಯದೆ ಅಧೀರಳಾಗಿ ಕೇಳಿದಳು.

'ನನ್ನದs. ನಮ್ಮೂರನಾಟಕದಾಗ ರಾಜಾ ಆದಾಗ ಮಾಡಿಸಿದ್ದೆ. ನಿನಗ ಪಸಂದ ಬಿದ್ದರ ನೀ ತೊಗೋ' ಎಂದನು.

ಈಗ ಶಾಂತಾ ಇನ್ನೂ ಅಧೀರಳಾದಳು. ಅತ್ತಿತ್ತ ನೋಡುವಷ್ಟರಲ್ಲಿ ಬೀದಿಯ ಬದಿಯ ಮನೆಯಲ್ಲಿಯ ಒಬ್ಬಿಬ್ಬರು ಸ್ತ್ರೀಯರು ಕಾಕದೃಷ್ಟಿಯಿಂದ ಈ ಅಪೂರ್ವದೃಶ್ಯವನ್ನು ನೋಡುತ್ತಿದ್ದುದು ಕಾಣಿಸಿತು. ಅವರು ದೂರವಿದ್ದ

---

೧. ಸರಳತನ

ಮೂಲಕ ತಮ್ಮ ಮಾತುಗಳು ಅವರಿಗೆ ಕೇಳಿಸಿರುವದು ಸಾಧ್ಯವಿರಲಿಲ್ಲ. ಆದರೂ ಅದು ಶಾಂತಾಗೆ ಸರಿಕಾಣಲಿಲ್ಲ. ಹಿಂದಕ್ಕೆ ಮೆರವಣಿಗೆಗಳಲ್ಲಿ ಭಾಗವಹಿಸುವಾಗ ಕೆಲ ಹಳೆ ಗೃಧ್ರಗಳು 'ಚಂಪೀ ಮಗಳು ಆಕಿ ! ಮತ್ತ ಯಾರೂ ಅಲ್ಲ !' ಎಂದು ಅಂದಾಗ ಅನಿಸಿದ ಅವಮಾನದ ನೆನಪು ಆಯಿತು. ತಾನು ಒಲ್ಲೆ ಒಲ್ಲೆ ಎಂದರೆ ಈ ಟೋಣಪನು ಆಗ್ರಹ ಮಾಡುತ್ತ ದಾರಿಯಲ್ಲೇ ನಿಲ್ಲುವನು. ಮೇಲಾಗಿ ಎಂಥ ಚಂದ ಮುತ್ತುಗಳು!.... ಅದಕ್ಕಾಗಿ 'ಗೆಳತಿಯರಿಗೆ ತೋರಿ ತರತೇನಿ' ಎಂದಿಷ್ಟೇ ಹೇಳಿ, ಅದನ್ನು ಕೈಯಲ್ಲಿ ಆಡುತ್ತ ಮುಂದೆ ನಡೆದಳು.

ವಸಂತ ಪೆಚ್ಚಾದನು ; ಧನ್ಯನಾದನು.

* * *

ದಿನ ಕಳೆದಂತೆ ರಾಘಪ್ಪ ತಾಳ್ಮೆಗೆಡತೊಡಗಿದನು. ಒಂದು ದಿನ ಪ್ರತ್ಯಕ್ಷವಾಗಿ ವಿಷಯವನ್ನು ವಸಂತನೆದುರು ಬಿಚ್ಚಿಟ್ಟನು.

'ವಸಂತಾ, ನಮ್ಮ ಶಾಂತಾನ ದಸಿಂದ[೧] ನಾ ವಿಚಾರ ಮಾಡಿದೆ,.... ಆ ಸರಾಫಿ ಗೋವಿಂದರಾಯನ ಮಗ ಇವತ್ತಿಗೆ ಕುಣಕೋತ ಬಂದು ನಮ್ಮ ಶಾಂತಾನ್ನ ಮಾಡಿಕೊಂಡು ಹೋದಾನು. ಆದರ ಅವರ ಮನಿಯೊಳಗ ಹೆಂಗೋ ಯಾರಿಗೆ ಗೊತ್ತು? ನೋಡೋದಕ್ಕೆಲ್ಲಾ ಶ್ರೀಮಂತರು. ಆದರ ಈ ಸರಾಫಿ ಮುಂದೀದು ಹೇಳಲಿಕ್ಕೆ ಬರೂದಿಲ್ಲೊ ! ಭಂಗಾರಾ ಕಡಿಯೊ ಅವರ ಕೈ ಕಟಕರ ಕೈಕಿಂತ ಬಿರುಸು ನೋಡು. ಅವರ ಕಾಂಕ್ಷಾ ಬಹಳ. ಮನೆತನ ಶಾಪದವು ಇರತಾವ. ಸಂತತಿ ಹುಚ್ಚು-ಮಬ್ಬು ಆಗತಾವ... ಒಟ್ಟು ನನಗ ಏನೂ ಧೈರ್ಯ ಆಗವಲ್ಲದು ಬಿಡು. ಅದಕ್ಕ ನಾ ಒಂದು ವಿಚಾರ ತಗದೇನಿ.

'ಏನು?'

'ಈಗ ಎರಡು ವರ್ಷ ಆದವು ನಮ್ಮ-ನಿಮ್ಮ ಸ್ನೇಹ ಕೂಡಿ. ನಿನ್ನ ಸ್ವಭಾವ ನನಗ ಪಸಂದ ಬಂದದ. ನಿನ್ನ ಅಪ್ಪನ ದಶಿಂದ ಅಂತು ನನಗ ದಿನ ದಿನಕ್ಕ ಭಕ್ತಿ ಹೆಚ್ಚು ಆಗಲಿಕ್ಕೆ ಹತ್ತೇದ.... ನಿನ್ನ ಎತ್ತರ, ನಿನ್ನ ರೂಪ, ನಿನ್ನ ಸ್ವಭಾವ ಇವು ತಂತೋತಂತ[೨] ನಮ್ಮ ಶಾಂತಾಗ ಹೊಂದಿಕಿ ಆಗತಾವ. ನಿನಗೆ ನಮ್ಮ ಶಾಂತಾನ್ನ ಕೊಟ್ಟರ ನಾ ಧನ್ಯ ಆಗತೇನಿ. ಇಷ್ಟs ಅಲ್ಲ, ನೀನೂ ಆಗತೀದಿ, ನಿಮ್ಮಪ್ಪ ಆಗತಾನ, ನಿನ್ನ ಕುಲಕೋಟಿ ಧನ್ಯ ಆಗತದ. ಇದರಾಗ ಯಾವ ಸಂಶಯವೂ ಇಲ್ಲ. ಈಗ ಎರಡು ದಿನಾ ಆತ್ಯು ವಿಚಾರ ಬಂದು ; ನನಗ ನಿದ್ದಿ ಹತ್ತಲೊಲ್ಲದು.

---

೧. ಸಲುವಾಗಿ ೨. ಮೊದಲಿಂದ ಕೊನೆಯವರೆಗೆ.

ತಡೀಲಾರದ ನಿನಗ ಹೇಳೇನಿ....' ಎಂದನು.

ವಸಂತ ಹಿರಿಹಿರಿ ಹಿಗ್ಗಿದನು. 'ನಾ ನಿಮ್ಮ ಮಾತು ಮೀರೋದs ಸಾಧ್ಯ ಇಲ್ಲ. ನನ್ನ ಅಪ್ಪನ್ನ ಒಪ್ಪಿಸರಿ. ನಾ ನಾಳೇ ಮಾಡಿಕೊಳ್ಳಿಕ್ಕೂ ತಯಾರ' ಎಂದನು.

ರಾಘಪ್ಪ ಈ ಮಾತನ್ನು ಅಪೇಕ್ಷಿಸಿಯೇ ಇದ್ದನು. ಅದಕ್ಕೆ ಅವನ ಉತ್ತರವೂ ಸಿದ್ಧವಿತ್ತು. ದೇಸಾಯರಿಗೆ ತನ್ನ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲ ; ಅವರು ತಾವಾಗಿಯೇ ಒಪ್ಪುವದು ಸಾಧ್ಯವೇ ಇರಲಿಲ್ಲ. ಅಲ್ಲದೆ ಒಮ್ಮೆ 'ಒಲ್ಲೆ' ಎಂದು ಅವರ ಬಾಯಿಂದ ಮಾತು ಬಂದಮೇಲೆ ಮುಂದೆ ಅದನ್ನ ಬದಲಿಸುವದು ಕಠಿಣ. ಮೇಲಾಗಿ ಮೊದಲು ಅಚ್ಯುತರಾಯನ ಲಗ್ನವಾಗಲಿ, ವಸಂತನ ವಿಚಾರ ಆಮೇಲೆ, ಎಂಬ ನೆವವನ್ನೂ ಒಡ್ಡಬಲ್ಲರು. ಆ ಮಾರ್ಗವೇ ರಾಘಪ್ಪನಿಗೆ ಸಮ್ಮತವಿರಲಿಲ್ಲ. ರಾಘಪ್ಪನ ಮನಸ್ಸಿನಲ್ಲಿದ್ದ ಸ್ವಪ್ನವೇ ಬೇರೆ. ವಸಂತನೇ ತಂದೆಗೆ ಹೇಳಿ, ಅವರೊಡನೆ ಬಡಿದಾಡಿ, ಮನೆ ಬಿಟ್ಟು ಬಂದು, ತನ್ನ ಮನೆಯಲ್ಲಿಯೇ ನಿಂತು, ತನ್ನ ಮಗಳನ್ನು ಮಾಡಿಕೊಂಡು, ಅಪ್ಪನ ವಿರುದ್ಧ ದಾವೇ ಮಾಡಿ, ತನ್ನ ಹಿಸೆ ತಾನು ಪಡೆದುಕೊಂಡು ಸ್ವತಂತ್ರನಾಗಿ ರಾಘಪ್ಪನ ಉಪದೇಶ ಕೇಳುತ್ತ ಬಾಳಬೇಕು. ಇಷ್ಟೆಲ್ಲ ಆದರೇ ದೇಸಾಯಿಗೆ ತನ್ನ ಕೈಯ ಪ್ರಸಾದ ಸಿಕ್ಕಂತಾಗವದು! ಈ ಯೋಜನೆಗೆ ಅನುಸರಿಸಿ ರಾಘಪ್ಪ ಸ್ವಲ್ಪ ವಿಚಾರ ಮಾಡಿ,

'ಅಂತೂ ನಿನ್ನ ಒಪ್ಪಿಗಿ ಅದs ಹೌದಲ್ಲೋ? ಇಟ್ಟ ಮನಿ ಘಟ್ಟಿ ಹೌದಲ್ಲೋ? ಮೊದಲು ನಿನ್ನ ಮನಸ್ಸು ಘಟ್ಟಿ ಆಗಲಿ, ಮುಂದಿನದು ನಾ ಹೇಳತೇನಿ' ಅಂದನು.

'ಹೌದು – ಘಟ್ಟಿ.'

'ಇನ್ನು ಮುಂದಿನ ಪ್ರಶ್ನೆ. ಈಗ ನಮ್ಮ ಶಾಂತಾಗಂತೂ ಹದಿನೈದು ತುಂಬಿ ಹದಿನಾರರಾಗ ಬಿತ್ತು. ಇನ್ನು ಮೂರು ವರ್ಷ ತಡೀರಿ, ನಾ ಲಗ್ನ ಮಾಡಿಕೋತೇನಿ, ಅನ್ನೋ ಅವ ಏನು ನೀನು?... ಮೊದಲs ಹೇಳಿಬಿಡು.'

'ನಾ ಎಲ್ಲಿ ಹಂಗ ಅಂತೇನಿ?'

'ನೀ ಅನದಿದ್ದರೂ ನಿಮ್ಮ ಅಪ್ಪ ಅಂತಾನ. ಅಪ್ಪನ ಒಪ್ಪಿಸು ಅಂತ ನೀ ಅಂದೆಲ್ಲಾ... ನಿಮ್ಮಪ್ಪ ನನ್ನ ಮಾತು ಮೀರಲಿಕ್ಕಿಲ್ಲ, ಇದು ಖರೆ. ಆದರೆ.... ಹಿರೇಮಗ ಕಲೀತಾನ, ಅವನ ಶಿಕ್ಷಣ ಮುಗೀಲಿ, ಆಮ್ಯಾಲ ವಸಂತನ ಲಗ್ನದ ವಿಚಾರ,... ಅಂತ ನಿಮ್ಮಪ್ಪ ಅಂತಾನ ; ಅನ್ನೋ ಅವನs !... ಹಂಗ ಅಂದರ ಅವನದು ಏನೂ ತಪ್ಪು ಇಲ್ಲ. ಸಂಪ್ರದಾಯಕ್ಕೆ ತಕ್ಕಹಂದ ಎಲ್ಲಾ ಆಗಬೇಕು ಅಂತ ಎಲ್ಲಾ ಹಿರೇರೂ ಇಚ್ಛಾಮಾಡತಾರ. ಅವ ಹಂಗ ಅಂದರ ನನಗಂತೂ ಮೂರುನಾಲ್ಕು ವರ್ಷ ನಿಲ್ಲಲಿಕ್ಕೆ ಸಾಧ್ಯವೇ ಇಲ್ಲ. ಶಾಂತಾಗ ಹದಿನಾರು

ತುಂಬೂದರಾಗs ಲಗ್ನಾ ಮಾಡಿಬಿಡಬೇಕು ಅಂತ ನನ್ನ ಇಚ್ಛಾ ಅದ.'

'ಹಂಗಾದರ ಹೆಂಗ ಮಾಡಬೇಕು ?' ವಸಂತ ಗೊಂದಲಗೊಂಡು ಹಿಂದಿನ ಕಪಾಳಮೋಕ್ಷ ನೆನಪಾದವರಂತೆ ಕೆನ್ನೆಯನ್ನು ಸವರಿಕೊಳ್ಳುತ್ತ ಕೇಳಿದನು.

'ಅದು ನಿನ್ನ ಕೂಡೇದ. ನಿನ್ನ ಮನಸಿನ್ಯಾಗ ಖರೇ ನಮ್ಮ ಹುಡಿಗಿನ್ನ ಮಾಡಿಕೋಬೇಕು ಅಂತ ಇದ್ದರ, ಅದನ್ನ ನೀನು ಸ್ಪಷ್ಟ ನಿನ್ನ ತಂದಿಗೆ ಹೇಳಬೇಕು. ನಿನಗ ಆ ಲವಲವಿಕಿ ಇದ್ದರ ಹೇಳಿಯೂ ಹೇಳತಿ. ಆದರ ಇದರಾಗ ನಮ್ಮಂಥವರು ಏನೂ ಮಾತಾಡೋದು ಸಾಧ್ಯ ಇಲ್ಲ. ಯಾಕಂದರ ನೋಡು, ನಮ್ಮದೂ ಅರ್ಧಾ ವಯಸ್ಸು ಆತ್ಯು ; ನಾಕ ಮಂದೀ ನಡುವ ನಾ ಯಜಮಾನ ಮನಶ್ಯಾ ಅನಿಸಿಗೋತೇನಿ. ಮಂದೀ ಮನ್ಯಾಗ ಲಗ್ನಾ ಮುಂಜಿವಿ ಅಂತ ಓಡ್ಯಾಡೇನಿ. ಖುದ್ದ ನನ್ನ ಮಗಳ ಲಗ್ನಾ ಮಾಡೇನಿ. ನಾನು ಈ ಮಾತು ನಿಮ್ಮ ಅಪ್ಪಗ ಹೇಳಿ, 'ಅಣ್ಣನಕಿಂತಾ ಮೊದಲ ತಮ್ಮನ ಲಗ್ನಾ ಮಾಡಿರಿ' ಅಂತ ಹೇಳಿದರ, 'ಮುದುಕ ಆದರೂ ನಿನಗ ಬುದ್ಧಿ ಬರಲಿಲ್ಲ ಅಲ್ಲs'... ಅಂತ ನಾಕು ಮಂದಿ ನನಗ ಮಂಗಳಾರತಿ ಮಾಡ್ಯಾರು. ಅದರಾಗ ಏನು ಅರ್ಥ ಇಲ್ಲ ನೋಡು ; ನಮ್ಮ ಶಾಂತಾ ನಿನಗೆ ಅನುರೂಪ ವಧು, ನಿನ್ನ ನಶೀಬ ತಗೀತದ, ಇಷ್ಟs ನಾವು ಹೇಳೋ ಅವರು. ಮುಂದಿನದು ನಿನ್ನ ಖಂಬೀರತನದ ಮೇಲೆ ಅವಲಂಬಿಸೇದ!'

ವಸಂತ ಇನ್ನೂ ಗೊಂದಲಗೊಡನು. ಬಲು ವಿಚಾರ ಮಾಡಿ, 'ನೀವು ಹೇಳಿದಂಗ ನಾನು ಕೇಳತೇನಿ !' ಎಂದು ಹೇಳಿದನು.

'ನಾ ಹೇಳೋದು ಒಂದs ಮಾತು....! ನಿನ್ನ ಅಪ್ಪನ ಒಪ್ಪಿಸೋ ಕೆಲಸ ನಿನ್ನದs...! ನಾವು ಅದರಾಗ ಕೈ ಹಾಕೋ ಅವರು ಅಲ್ಲ. ಇಷ್ಟs ಒಂದು ಮಾತಿನ್ಯಾಗ ಎಲ್ಲಾ ತಿಳಕೋ. ನೀ ಏನು ಧಡ್ಡ ಅಲ್ಲ, ಧಬಕ ಅಲ್ಲ. ನಿನಗ ಎಲ್ಲಾ ತಿಳೀತದ. ನಮ್ಮ ಶಾಂತಾನ್ನಂತೂ ನೀ ನೋಡೀದಿ. ನನ್ನ ಅನುಭವದಲೆ ಹೇಳತೇನಿ. ಗಂಡಸಿನ ಭವಿಷ್ಯತ್ತು ಎಲಾ ಅವನ ಲಗ್ನದ ಮ್ಯಾಲೆ ಅವಲಂಬಿಸಿರತದ. ಲಗ್ನ ವಿಷಯದಾಗ ಒಮ್ಮೊಮ್ಮೆ ಹಿರೇರಿಗೂ ಕಿರೇರs ಬುದ್ಧಿ ಹೇಳಬೇಕಾಗತದ.'

ವಸಂತನಿಗೆ ಈ ವಿಷಯದಲ್ಲಿ ಧೈರ್ಯ ಇದ್ದದ್ದು ಒಂದೇ ಸ್ಥಾನದಲ್ಲಿ. ಅವ್ವನ ಎದುರು ಹಟ ಹಿಡಿಯಬಲ್ಲನು. ಅಂತು, ಮಂಕುಬುದ್ಧಿಯಿಂದಲೇ ರಾಘಪ್ಪನನ್ನು ಬೀಳ್ಕೊಂಡು ಮನೆಗೆ ಬಂದನು.

ಹದಿನೈದು ದಿವಸ ಅಡಿಗೆಯ ಮನೆಯಲ್ಲಿ ತಾಯಿಯ ಎದುರು ಕುಸು ಕುಸು ಮಾಡಿದರೂ ಕೂಡ ಆಕೆ ಈ ಮಾತನ್ನು ದೇಸಾಯರ ಎದುರು ಇಡಲು ಸರ್ವಥಾ ಒಪ್ಪಲಿಲ್ಲ. ಅವಳು ದೊಡ್ಡ ಮನೆತನದವಳು. ಇಂಥ ವಿಷಯಗಳು

ಅವಳಿಗೆ ಹೊಸವು. ಅವಳನ್ನು ದೇಸಾಯರಿಗೆ ತೋರಿಸಲು ಕರಕೊಂಡು ಬಂದಾಗ ಮೂವತ್ತಾರು ಗ್ಯಾಸುಬತ್ತಿಗಳು, ಇಪ್ಪತ್ತು ಜನ ಬಿಚ್ಚುಗತ್ತಿ ಪಹರೆದವರು, ಇಬ್ಬರು ಬಂದೂಕಿನವರು, ಬೇಂಡು ಬಜಂತ್ರಿ, ಮಂದಿ ಬಳಗ ! ವರನೇ ತಾನು ಈ ಕನ್ಯೆ ಮಾಡಿಕೊಳ್ಳುತ್ತೇನೆ ಅನ್ನುವದು, ಅದರಲ್ಲಿ ಸಾವಿರ ರೂಪಾಯಿ ವರದಕ್ಷಿಣೆ ಕೊಡಲು ಆಗದ ರಾಘಪ್ಪನಂಥವನೊಡನೆ ಬೀಗತನ, ಅಲ್ಲದೆ ಅಚ್ಯುತನ ನಂಬರು ಹಾರಿಸುವದು, ಇವೆಲ್ಲ ಅವಳ ಕಲ್ಪನೆಗೆ ಕೂಡ ವಿರುದ್ಧವಾಗಿದ್ದವು ; ಅಸಾಧ್ಯವಾಗಿದ್ದವು. ಆಕೆಯೂ ಈ ಗುಜುಗುಜು ಗುನುಗುನು ಮಾತಿಗೆ ಬೇಸತ್ತು, 'ಅಷ್ಟು ಜೀವ ಇದ್ದವ ನೀನs ಹೋಗಿ ಹೇಳು... ಆ ರಾಘಪ್ಪನ ಸಂಗತಿ ನಮಗ ಬ್ಯಾಡ' ಎಂದು ಗಟ್ಟಿಹಿಡಿದಳು. ತಾಯಿ ಒಮ್ಮೆ ಮಾತು ತೆಗೆದಮೇಲೆ ಮುಂದೆ ತಾನೂ ಮಾತಾಡಬಹುದು, ಆದರೆ ತಾನೇ ಎದುರು ನಿಂತು ಮಾತು ಪ್ರಾರಂಭಿಸುವ ಧೈರ್ಯ ಎಂದಿಗೋ ಹೊರಟುಹೋಗಿತ್ತು. ಹೀಗಾಗಿ ಉಭಯಸಂಕಟಕ್ಕೆ ಬಿದ್ದನು. ಇತ್ತ ಮನೆಯಲ್ಲಿ ಕೆಲಸ ಪ್ರಗತಿಯಾಗಲೊಲ್ಲದು ; ಅತ್ತ ರಾಘಪ್ಪನಿಗೆ ತೋರಿಸಲು ಮುಖವಿಲ್ಲ...

ಹೀಗೆ ಯಾವ ನಿರ್ಧಾರವೂ ಇಲ್ಲದೆ ವಸಂತರಾಯ ರಾಘಪ್ಪನ ಮನೆಗೆ ಹೋಗುವದನ್ನೇ ನಿಲ್ಲಿಸಿಬಿಟ್ಟನು.

ದೇಸಾಯರಾದರೋ ಎಲ್ಲವನ್ನೂ ಹೆಂಡತಿಯಿಂದ ತಿಳಿದುಕೊಂಡಿದ್ದರು. ಒಮ್ಮೆ ಆಳಿನೊಂದಿಗೆ ಅಚ್ಯುತನ ಎರಡನೆಯ ಪತ್ರವನ್ನು ರಾಘಪ್ಪನತ್ತ ಕಳಿಸಿಕೊಟ್ಟು 'ಓದಿ ತಿರುಗಿ ಕೊಡಬೇಕು' ಎಂದು ಹೇಳಿಕಳಿಸಿದರು.

* * *

ಒಂದು ದಿವಸ ಗೆಳತಿಯರ ಮನೆಗೆ ಸಿಂಗಾರಾಗಿ ಹೊರಟಿದ್ದ ಶಾಂತಾಳ ಕಡೆಗೆ ಹುಳು ಹುಳು ನೋಡುತ್ತಾ ಚಂಪಕ್ಕ, 'ಶಾಂತಾ, ಇಲ್ಲಿ ಬಾ!' ಎಂದಳು. ಶಾಂತಾಳನ್ನು ಎದುರಿಗೆ ಕೂಡಿಸಿಕೊಂಡು, ಆಕೆಯು ಪೋಲಕದಲ್ಲಿ ಅಡಗುವಂತೆ ಕೊರಳಲ್ಲಿ ಹಾಕಿಕೊಂಡ ಕಲ್ಚರ ಮುತ್ತಿನ ಸರವನ್ನು ಹೊರಗೆ ಎಳೆದು ತೆಗೆದಳು.

'ಯಾರು ಕೊಟ್ಟಾರ ಇದನ್ನ ?'

'ನನ್ನ ಗೆಳತೀದು.'

'ಖರೇ ಹೇಳು ?'

'ಹೌದು, ನನ್ನ ಗೆಳತೀದು.'

'ಯಾರಕಿ ನಿನ್ನ ಗೆಳತಿ ?'

'ಪದ್ಮಾ.'

'ಆಕಿ ಯಾಕ ಕೊಟ್ಟಳು ?'

'ಅವ್ವಾ, ನಿನಗ ಹುಚ್ಚು – ಗಿಚ್ಚು ಹಿಡೀತೇನು....? ಎರಡು ದಿವಸ ಹಾಕ್ಕೋಳಿಕ್ಕೆ ಕೊಟ್ಟಾಳ.'

'ಶಾಂತಾ, ಖರೇ ಹೇಳು. ನಿನ್ನ ಕಲ್ಯಾಣದ ದಶಿಂದ ನನಗ ರಾತ್ರಿ ಕಣ್ಣಿಗೆ ಕಣ್ಣು ಹತ್ತೂದಿಲ್ಲ. ಈಗ ಸುಳ್ಳು ಆಡಿದರ ನಿನಗ ಮುಂದ ಸುಖ ಆಗಲಿಕ್ಕಿಲ್ಲ.'

'ಅವ್ವಾ, ನಾ ಸುಳ್ಳು ಯಾಕ ಹೇಳಲೇ...? ನೀನs ಕರೆದು ಕೇಳಲ್ಲಾ ಪದ್ಮಾನ್ನ. ನಾ ಏನು ಕಳವು – ಗಿಳವು ಮಾಡಲಿಕ್ಕೆ ಹತ್ತೇನಿ ಅಂತ ಸಂಶಯ ಬರತದೇನು ?'

ಚಂಪಕ್ಕನಿಗೆ ಏನು ಮಾತಾಡಬೇಕೋ ತಿಳಿಯದಾಯಿತು. ಆಕೆಗೆ ಸಿಟ್ಟಿಗೆ ಏಳಲು ಕೂಡ ತ್ರಾಣವಿರಲಿಲ್ಲ. ಪತಿಯವರೆಗೆ ಈ ದೂರನ್ನು ಒಯ್ದರೆ ಒಮ್ಮೆ ಅವರು ಹೀಗೂ ಮಾತಾಡಬಹುದು, ಹಾಗೂ ಮಾತಾಡಬಹುದು. ಅಲ್ಲದೆ ಶಾಂತಾ ಬಾಯಿ ಬಂದಾಗುವಂತೆ ಉತ್ತರ ಕೊಟ್ಟಿದ್ದಳು. ಮೊದಲಿನಷ್ಟಾದರೂ ತ್ರಾಣ ಉಳಿದಿದ್ದರೆ ಮಗಳ ಕೆನ್ನೆಗೆ ಎರಡು ಏಟನ್ನಾದರೂ ಹಾಕಬಹುದಿತ್ತು. ಆದರೆ ಆ ಶ್ರಮವೂ ಸಾಧ್ಯವಿರಲಿಲ್ಲ. ತನ್ನ ಅವ್ಯಕ್ತ ಕೋಪವನ್ನು ತೀರಿಸಿಕೊಳ್ಳಲು ಚಂಪಕ್ಕ ಸರಿಯುತ್ತ ಸರಿಯುತ್ತ ಶಾಂತಾಳ ಸಮೀಪಕ್ಕೆ ಬಂದಳು. ತನ್ನ ರಟ್ಟೆಗೆ ಎರಡು ಬಾರಿ ಚಿವುಟಿಕೊಂಡಳು.

'ಅವ್ವಾ, ನಿಮ್ಮಿಬ್ಬರಿಗೂ ಬರಬರತ ಹುಚ್ಚs ಹಿಡೀತದ ನೋಡು. ಅಪ್ಪ ಒಬ್ಬವ ತಾನs ಮಾತಾಡಿಗೋತ ಕೂಡತಾನ. ನೀನು ಸಣ್ಣ ಹುಡುಗರ ಹಂಗ ಚಿವುಟಿಗೋತೀದಿ....'

'ಇಲ್ಲವ್ವಾ, ತಪ್ಪಾತು – ನೀ ಹೋಗು ನಿನ್ನ ಗೆಳತೀ ಮನೀಗೆ !'

ಆದರೂ ಚಂಪಕ್ಕನಿಗೆ ಸಮಾಧಾನವಾಗಲಿಲ್ಲ. ಶಾಂತಾ ಹೊರಟುಹೋದ ಮೇಲೆ ತಟ್ಟನೆ ವಿಚಾರ ಹೊಳೆಯಿತು. ಗೆಳತಿ ಕೊಟ್ಟ ಸರವಾದರೆ ಪೋಲಕದಲ್ಲಿ ಮುಚ್ಚಿಕೊಳ್ಳುತ್ತಿದ್ದಳೇಕೆ ?... ಇರಲಿ, ಇನ್ನೂ ತುಸು ಎಚ್ಚರದಿಂದ ಇರೋಣ – ಎನ್ನುತ್ತ ಸುಮ್ಮನಾದಳು.

ಆಕೆಯ ಸುದೈವಕ್ಕೆ ಅವರ ಮನೆಗೆ ವಸಂತನ ಬರುವಿಕೆಯೂ ಕಡಿಮೆಯಾಯಿತು.

# ೩೫ : ಫಲಶ್ರುತಿ

ಚಂಪಕ್ಕನಿಗೆ ಎಂಟೇ ತಿಂಗಳಿಗೆ ಬೇನೆ ಸುರುವಾದವು. ಮನೆಗೆ ಬಂದ ಡಾಕ್ಟರರು ಆಕೆಯ ಅಶಕ್ತತೆಯನ್ನು ನೋಡಿ ಆಸ್ಪತ್ರೆಗೇ ಹಾಕಬೇಕೆಂದು ಹೇಳಿದರು. ರಾಘಪ್ಪ ಆ್ಯಂಬ್ಯುಲನ್ಸ್ ಕಾರು ತರಿಸಿ ಹೆಂಡತಿಯನ್ನು ಆಸ್ಪತ್ರೆಗೆ ಹಾಕಿದನು. ಅವ್ವಮನೆಬಿಟ್ಟು ಹೋಗುವಾಗ ಶಾಂತಾಗೆ ಅತಿಶಯ ದುಃಖ ಬಂದಿತು. ಆಕೆ ಅಳುವದನ್ನು ಕಂಡು ಚಂಪಕ್ಕ ತನ್ನ ನೋವಿನಲ್ಲೇ, 'ನಾ ತಿರುಗಿ ಬರೂತನಗ ಕೃಷ್ಣಾತಾಯಿ ಮನ್ಯಾಗ ಇರು !' ಎಂದು ಹೇಳಿದಳು. ಆದರೆ ಶಾಂತಾ ಅದಕ್ಕೆ ಸರ್ವಥಾ ಒಪ್ಪಲಿಲ್ಲ. 'ನನಗೇನೂ ಹೆದರಿಕಿ ಬರೂದಿಲ್ಲ. ನಾ ಮನ್ಯಾಗs ಇರತೇನಿ' ಎಂದು ಹೇಳಿದಳು. ಚಂಪಕ್ಕ ಮನೆ ಬಿಟ್ಟು ಹೊರಬಿದ್ದುದು ಕಳೆದ ಐದಾರು ವರ್ಷಗಳಲ್ಲಿ ಅದೇ ಮೊದಲ ಬಾರಿ.

ನೆರೆಮನೆಯ ಹುಗುಡ ಭೀಮಸೇನನೊಡನೆ ರಾಘಪ್ಪನು ಹೆಂಡತಿಯನ್ನು ಆಸ್ಪತ್ರೆಗೆ ಹಿಂಬಾಲಿಸಿದನು. ಚಂಪಕ್ಕನ ಈ ಗೋಳಾಟವನ್ನು ನೋಡ ನೋಡುತ್ತಲೆ ರಾಘಪ್ಪನ ಎದೆ ಒಡೆದುಹೋಗಿತ್ತು. ಭೇದಕವಾದ ಕರುಣೆ ಅವನ ರೋಮರೋಮದಲ್ಲಿ ಸೇರಿ ಅವನಿಗೆ ಕಂಪನ ತರುತ್ತಿತ್ತು. ಆಸ್ಪತ್ರೆಯ ಹೊರಗೆ ಶೂನ್ಯಮನಸ್ಕನಾಗಿ ದೇವರಿಗೆ ಪ್ರಾರ್ಥಿಸಿಕೊಳ್ಳುತ್ತ ಕುಳಿತುಕೊಂಡನು.

ಚಂಪಕ್ಕನ ಬೇನೆ ಅಸಾಧ್ಯವಾಗಿತ್ತು. ನೋವನ್ನು ಸಹಿಸುವ ಶಕ್ತಿ ಆಕೆಗೆ ಇರಲಿಲ್ಲ. ಅನಸ್ಥೆಸಿಯಾ (ಎಚ್ಚರ ತಪ್ಪಿಸುವದು) ಮಾಡಿಸಬೇಕೇ ಎಂದು ಡಾಕ್ಟರರು ತಮ್ಮತಮ್ಮಲ್ಲಿ ಚರ್ಚಿಸಿಕೊಂಡರು. ಆದರೆ ಅವಳ ಅಶಕ್ತತೆಯ ಮೂಲಕ ಅದು ದುಷ್ಪರಿಣಾಮಕ್ಕೆ ಇಳಿದರೆ... ಎಂಬ ಭಯದಿಂದ ಡಾಕ್ಟರರು ಅದನ್ನೂ ಮಾಡಿಸಲಿಲ್ಲ. ಹೆರಿಗೆಯ ಮನೆಯಲ್ಲಿ ಕೆಲಸ ಮಾಡಿದ ಡಾಕ್ಟರಿಗೆ ಕೂಡ ಚಂಪಕ್ಕನ ಕೆಕ್ಕರಿಸಿದ ಕಣ್ಣುಗಳು ಗಾಬರಿಯುಂಟುಮಾಡಿದವು.

ಆದರೆ ಈ ಬೇನೆಯಲ್ಲೇ ಚಂಪಕ್ಕ ಸಾವರಿಸಿಕೊಂಡು ಎದ್ದು ಕೂಡಲು ಯತ್ನಿಸತೊಡಗಿದಳು... ನರ್ಸ ಓಡಿ ಬಂದು, ಅವಳನ್ನು ಮಲಗಿಸಲು ಯತ್ನಿಸಿದಳು. ಆದರೆ ಚಂಪಕ್ಕ ಹಟದಿಂದ ಎದ್ದು 'ಅವರು ಎಲ್ಲಿ ?' 'ಅವರು ಎಲ್ಲಿ ?' ಎಂದು ಕೇಳಿದಳು. ನರ್ಸ 'ಹೊರಗೇ ಇದ್ದಾರೆ. ಚಿಂತೆ ಮಾಡಬೇಡಿರಿ' ಎಂದಳು.

'ಒಂದs ಒಂದು ಸರೆ ಭೆಟ್ಟಿ ಆಗತೇನಿ. ಸ್ವಲ್ಪ ಒಳಗ ಕರೀರಿ ; ಒಂದು ಮಾತು ಹೇಳಬೇಕಾಗಿತ್ತು' ಎಂದು ಕೂಡಿಕೊಂಡಳು.

ಇದು ಕಾಯದೆಗೆ ವಿರುದ್ಧವಾದರೂ ಡಾಕ್ಟರರ ಅನುಮತಿಯಿಂದ ನರ್ಸ ಬಂದು ಹೊರಗೆ ಚಿಂತಾಕ್ರಾಂತನಾಗಿ ಕುಳಿತ ರಾಘಪ್ಪನಿಗೆ, 'ಇನ್ನೂ ಹೊತ್ತು ಇದೆ' ಎಂದು ಹೇಳಿ, ಅವನಿಗೆ 'ಒಳಗೆ ಕರೆಯುತ್ತಾರೆ' ಎಂದು ತಿಳಿಸಿದಳು. ರಾಘಪ್ಪನಿಗೆ ಅಳು ಬಂದಿತು. 'ಕಡಿ ಭೆಟ್ಟಿಗೆ ಅಂತ ಕರೀತಾಳೇನು?' ಎಂದುಕೊಂಡೇ ಒಳಗೆ ಹೋದನು.

'ಯಾಕs?... ಹ್ಯಾಂಗ ಇದ್ದೀಯs ?' ಎಂದು ಬಿಕ್ಕಳಿಸಿದನು.

ಕ್ಷಣಹೊತ್ತು ಅವನ ದನಿ ಕೇಳಿ ಚಂಪಕ್ಕ ನಿಚ್ಚಳಳಾದಳು. ಅವನ ದುಃಖದ ಕಡೆಗೆ ಆಕೆಗೆ ಲಕ್ಷ್ಯ ಇರಲಿಲ್ಲ. 'ನೀವು ಇಲ್ಲೇ ಕೂತೀರೇನು ?' ಎಂದು ನರಳಿಕೆಯಿಲ್ಲದೆ ಕೇಳಿದಳು.

'ಹೌದು.'

'ನಿಮ್ಮ ಬುದ್ಧಿ ಗಿದ್ದಿ ಎಲ್ಲಾ ಹೋಗೇದೇನು ?... ಮನ್ಯಾಗ ಶಾಂತೀನ್ನ ಒಬ್ಬಾಕಿನ್ನೇ ಬಿಟ್ಟುಬಂದೀರೇನು ?... ಭೀಮನ್ನ ಇಲ್ಲಿಟ್ಟು ನೀವು ಮನೀಗೆ ಹೋಗರಿ. ನನಗ ಏನೂ ಆಗೂದಿಲ್ಲ. ನಿಮಗ ಬರಬೇಕು ಅಂತ ಅನಿಸಿದರ ಆಕೀನ್ನೂ ಕರಕೊಂಡೇ ಬರ್ರಿ... ಹೋಗರಿ... ನೀವು ಹೋಗದಿದ್ದರ ನನ್ನ ಹೆಚ್ಚಿ ಕೊಯ್ದು ತಿಂದಹಂಗ !' ಇಷ್ಟು ರೌಸಿನಿಂದ ಅಂದವಳೇ ಹಾಸಿಗೆಯ ಮೇಲೆ ಒರಗಿಕೊಂಡಳು. ಮತ್ತೆ ಬೇನೆ ಬಂದು ಚೀರುದನಿಯಲ್ಲಿ ನರಳತೊಡಗಿದಳು.

ರಾಘಪ್ಪ ಉಪರಣಿಯನ್ನು ಮುಖಕ್ಕೆ ಹಾಕಿ ಒಂದೇ ಕ್ಷಣ 'ಹೋ' ಎಂದು ಅತ್ತನು. ನರ್ಸ ಅವನ ಕೋಟು ಹಿಡಿದು ಜಗ್ಗಲಾಗಿ ತನ್ನ ಮನಸ್ಸು ಬಿಗಿಹಿಡಿದು ಕಣ್ಣು ಒರೆಸಿಕೊಂಡು ಹೊರಗೆ ಬಂದನು.

'ಭೀಮ್ಯಾ, ನೀ ಇಲ್ಲೇ ಇರು, ಊಟಾ ಕಳಿಸಿಕೊಡತೇನಿ. ಏನಾದರೂ ತಿಳಿದರ ಸಾಯಕಲ್ ಮ್ಯಾಲಿಂದ ಬಂದು ಸುದ್ದಿ ತಿಳಿಸು. ನಾ ಇನ್ನೊಂದು ಎರಡು ತಾಸಿನ್ಯಾಗ ಬರತೇನಿ –' ಎಂದು ಭೀಮನಿಗೆ ಹೇಳಿ ಮನೆಯತ್ತ ಹೊರಟನು.

* * *

ಮನೆಯಲ್ಲಿ ಒಬ್ಬಳೇ ಕುಳಿತ ಶಾಂತಾ ತುಸು ಹೊತ್ತು ದುಃಖಿಸಿದಳು. ಅನಂತರ ಒಬ್ಬೊಂಟಿಗಳಾಗಿ ಇದ್ದು ದರ ಅರಿವಿನಿಂದ ಭೀತಿ ಆರಂಭವಾಯಿತು. ತಲೆಬಾಗಿಲು ಮುಂದು ಮಾಡಿ ಬಂದಳು ; ಇನ್ನೊಬ್ಬರ ಮನೆಗೆ ಹೋಗಿ

ಕೂಡಲು ಆಕೆಗೆ ಮನಸ್ಸಿಲ್ಲ. ತನ್ನ ನೆರೆಹೊರೆಯ ಎಲ್ಲರ ಮೇಲೂ ಆಕೆಗೆ ತಿರಸ್ಕಾರ ಉಂಟಾಗಿತ್ತು. ತಾನು ಮನೆಯಲ್ಲಿ ಒಬ್ಬಳೆ ನಡುಗುತ್ತ ಕುಳಿತರೂ ಚಿಂತೆಯಿಲ್ಲ, ನೆರೆಮನೆಯ ಕೃಷ್ಣಾತಾಯಿಯ ಮನೆಗೆ ಕಾಲಿಕ್ಕುವಂತಿಲ್ಲ ಎಂದು ನಿರ್ಧರಿಸಿಕೊಂಡೇ ಆಕೆ ಒಂದು ಕಾದಂಬರಿ ಹಿಡಿದುಕೊಂಡು ಮೈಮರೆಯಲು ಯತ್ನಿಸಿದಳು ; ಸಾಧ್ಯವಾಗಲೊಲ್ಲದು.

ಹೋದ ಬಾರಿ ಕೃಷ್ಣಾ ತಾಯಿಯ ಮನೆಗೆ ಹೋದಾಗ ಶಾಂತಾಗೆ ಬಹಳ ಅಪಮಾನವಾಗಿತ್ತು.

ಅಂದು ಬೀದಿಯಲ್ಲಿ ವಸಂತನೊಡನೆ ಮಾತನಾಡುತ್ತ ನಿಂತ ಸುದ್ದಿ ಒಂದೆರಡು ತಿಂಗಳಲ್ಲಿ ಕರ್ಣೋಪಕರ್ಣವಾಗಿ ಸರಿಸಿ ಗಾತ್ರದಲ್ಲಿಯೂ ತುಸು ದೊಡ್ಡದಾಗಿತ್ತು. ಶಾಂತಾಳ ಗೆಳತಿಯರು ಏನೂ ಅರಿಯದವರಂತೆ ಆ ಮುತ್ತಿನ ಸರದ ಬಗ್ಗೆ ಕೇಳಲಾಗಿ ಧೈರ್ಯವಂತಿಯಾದ ಶಾಂತಾ ನಿರ್ವಿಕಾರವಾಗಿ, 'ನಮ್ಮ ಅಪ್ಪ ಹುಟ್ಟಿದ ಹಬ್ಬಕ್ಕೆ ಕೊಡಿಸಿದ್ದಾನೆ' ಎಂದು ಹೇಳಿ ಬಿಟ್ಟಿದ್ದಳು. ಶಾಂತಾಳ ಬಗ್ಗೆ ಅವಳ ಗೆಳತಿಯರಿಗೆ ಅಸೂಯೆ, ಅದರ. ಆಕೆಯ ಎದುರು ಯಾರೂ ಇಲ್ಲದ ಮಾತನ್ನು ಆಡರು. ಆದರದ ಒಂದಿಲ್ಲೊಂದು ನೆವದಿಂದ ಇನ್ನೊಬ್ಬರ ಮುಖದಿಂದ ಅದೇ ಪ್ರಶ್ನೆಯನ್ನು ಕೇಳಿಸಿ ಆಕೆಯಿಂದ ಅದೇ ಉತ್ತರ ಹೇಳಿಸಿಕೊಳ್ಳುವರು. ಆ ತೋರುಮುತ್ತುಗಳನ್ನು ಕಂಡು ಅನೇಕರಿಗೆ ಹೊಟ್ಟೆಕಿಚ್ಚು. ಇಂತು ಸುದ್ದಿ ಗಾಳಿತುಂಬ ಹಬ್ಬಿತ್ತು. ಶಾಂತಾ ಮಾತ್ರ ಏನೂ ಅರಿಯದೆ ಧೈರ್ಯದಿಂದಲೇ ಓಡಾಡುತ್ತಿದ್ದಳು.

ಆಕೆಯ ಧೈರ್ಯವನ್ನು ನೋಡಿ ಕೆಲವು ಮುದಿಕೆಯರಿಗೆ ಅಸಹ್ಯ. ಆಕೆಯ ಸಂಗತಿಯನ್ನು ಹಿಡಿಯದಿರಲು ತಮ್ಮ ತಮ್ಮ ಹೆಣ್ಣು ಮಕ್ಕಳಿಗೆ ಅವರು ಸೂಚಿಸಿದ್ದರು. 'ಚಂಪೀ ಮಗಳು ಆಕೆ ! ಮತ್ತ ಯಾರರ ಅಲ್ಲ !' ಎಂಬ ಶರಾ ಬಾಯಿಯಿಂದ ಬಾಯಿಗೆ ಸಾಗತೊಡಗಿತು.

ಶಾಂತಾಗೆ ಕೃಷ್ಣಾತಾಯಿಯ ಮಗಳು ಮಂದಾಕಿನಿಯೊಡನೆ ಸ್ನೇಹ ಬಹಳ. ಕೃಷ್ಣಾತಾಯಿ ಇವರ ಜೋಡಿಯನ್ನು ಮುರಿಯಲು ವಿಫಲಯತ್ನ ಮಾಡಿ, ಉಪಾಯ ಕಾಣದೆ, ಇನ್ನೊಂದು ಹಾದಿ ಹುಡುಕಿದಳು.

ಒಮ್ಮೆ ಕೃಷ್ಣಾತಾಯಿಯ ಮನೆಯಲ್ಲಿ ಹೂವೀಳ್ಯವಾಯಿತು. ಕೃಷ್ಣಾ ತಾಯಿ ಶಾಂತಾಗೆ ಮೊದಲಿಗೇ ಬರಲು ಹೇಳಿ, ಆಕೆಯಿಂದ ಸಾಕಷ್ಟು ಕೆಲಸ ಮಾಡಿಸಿಕೊಂಡಳು. ಗೌರಿಯ ಮಂಟಪವನ್ನು ಸಿಂಗರಿಸಲು ಶಾಂತಾ ಮೂರು ತಾಸು ದುಡಿದಳು. ನಂತರ ಮನೆತುಂಬ ಮಂದಿ ಕೂಡಿದೊಡನೆ ಹೌಸಿನಲ್ಲಿ ತಾನು ಕೊರಳಲ್ಲಿ ಮುಚ್ಚಿ ಹಾಕಿಕೊಂಡಿದ್ದ ಮುತ್ತಿನ ಸರವನ್ನು ಹೊರಗೆ ತೆಗೆದು

ಎಲ್ಲರೂ ನೋಡುವಂತೆ ಹಾಕಿಕೊಂಡಳು. ಇದನ್ನು ನೋಡಿ ಕೃಷ್ಣಾತಾಯಿ ತನ್ನ ಸುತ್ತಲಿದ್ದ ನಾಲ್ಕು ಹೆಂಗಸರಿಗೆ ಸುಮ್ಮನೆ ಇರಲು ಸನ್ನೆಮಾಡಿ ಮಂಟಪದ ಬಳಿಯಲ್ಲೇ ನಿಂತುಕೊಂಡ ಶಾಂತಾಳ ಸಮೀಪಕ್ಕೆ ಬಂದು 'ಈಗ ಚಂದ ಕಾಣಸತೀ ನೋಡು, ಗೌರವ್ವ ಮಂಟಪದಾಗ ಇದ್ದಾಳೋ ಹೊರಗ ಇದ್ದಾಳೋ – ಮಂದೀಗೆ ತಿಳೀಲಿಕ್ಕಿಲ್ಲ. ಈ ಮುತ್ತು ನಿನ್ನ ಮೈಬಣ್ಣಕ್ಕ ಒಪ್ಪತಾವ – ಯಾಕರೇ ?' ಎಂದಳು. ಎಲ್ಲ ಹೆಂಗಸರು, 'ಹೌದರೇ, ನಮ್ಮ ಚಂಪಕ್ಕನ ಮಕ್ಕಳ ಮೈಬಣ್ಣನs ಹಂಗ !' ಎಂದರು.

ಶಾಂತಾ ಬಹಳ ನಾಚಿ ಸುಳ್ಳು ವಿನಯದಿಂದ, 'ಅವೇನು ಬಿಡರಿ, ಕಲ್ಚರ ಮುತ್ತಿನವು, ಖರೇ ಮುತ್ತಲ್ಲ ಏನಲ್ಲ !' ಎಂದಳು.

'ಖರೇ ಮುತ್ತೂ ಬರತಾವ ತೊಗೊ. ದೊಡ್ಡ ದೊಡ್ಡ ದೇಸಾಯರು ಬರತಾರ ನಿನ್ನ ಮನೀಗೆ !' ಎಂದುಬಿಟ್ಟಳು ಕೃಷ್ಣಾತಾಯಿ.

ಸ್ತ್ರೀವೃಂದದಲ್ಲಿ ಒಬ್ಬಿಬ್ಬರು 'ಖಿಕ್' ಮಾಡಿದರು. ಕೆಲವರು 'ನಾ ಹೋಗತೇನ್ರವಾ' ಅಂದರು. ಬಹಳಷ್ಟು ಜನರು ಈ ತಾಳೆಗೆಟ್ಟ ಮಾತಿಗೆ ಭಯಪಟ್ಟು ಸುಮ್ಮನಾಗಿಬಿಟ್ಟರು. ಕೆಲವರು ಮುಖ ಕೆಳಗೆ ಮಾಡಿದರು.

ಶಾಂತಾ ಅಲ್ಲಿಂದ ಬಿರಬಿರನೆ ಹೊರಟು ಬಂದು ಇನ್ನೊಮ್ಮೆ ತನ್ನ ನೆರೆ ಹೊರೆಯವರ ಮನೆಗೆ ಕಾಲು ಹಾಕಬಾರದೆಂದು ಪ್ರತಿಜ್ಞೆ ಮಾಡಿದಳು. ಮನೆಯಲಿ ಲೌಕರಿ, ರೇಶಿಮೆ ತಂದು ತನ್ನ ಭಾವೀ ತಮ್ಮನಿಗಾಗಿ ಸ್ವೆಟರು, ಕಾಲುಚೀಲ ಹಾಕುತ್ತ, ಕತೆ ಕಾದಂಬರಿಗಳನ್ನು ಓದುತ್ತ, ಕಾಲಕಳೆಯತೊಡಗಿದಳು.

ಆದರೆ ಇಷ್ಟೆಲ್ಲ ಅನಾಹುತಕ್ಕೆ ಕಾರಣನಾದವನು ಮಾತ್ರ ಮುಖ ತೋರಿಸದಾಗಿದ್ದನು... ವಸಂತನನ್ನು ಶಾಂತಾ ಒಳಗಿಂದೊಳಗೆ ಸಾವಿರ ರೀತಿಯಿಂದ ಶಪಿಸತೊಡಗಿದಳು. ಒಮ್ಮೆ ಎಲ್ಲಿಯಾದರೂ ಒಂದು ನಿಮಿಷ ಅವನು ಒಬ್ಬನೇ ಸಿಕ್ಕರೆ ಅವನ ಸರವನ್ನು ಅವನ ಮುಖಕ್ಕೆ ಬಿಸಾಡಿಬಿಡಬೇಕೆಂದು ನಿಶ್ಚಯಿಸಿ ಹದಿನೈದು ದಿವಸ ಹಾದಿ ಕಾಯ್ದಳು. ಅದಕ್ಕಾಗಿಯೇ ಕೊರಳೊಳಗೆ ಮುಚ್ಚಿ ಹಾಕಿಕೊಂಡಿದ್ದ ಸರ ಆಕೆಗೆ ಮುಳ್ಳಿನಂತೆ ನಡುತ್ತಿದ್ದಿತು. ಆದರೆ ಒಂದು ತಿಂಗಳಾಗಿಹೋದರೂ ವಸಂತ ತಮ್ಮ ಮನೆಯ ಕಡೆಗೆ ಹಾಯಲೇ ಇಲ್ಲ.

* * *

ಆದರೆ ಅಂದು ಬಂದನು – ಅಕಸ್ಮಾತಾಗಿ.

ಶಾಂತಾಳನ್ನು ನೋಡದೆ ಬಹಳ ದಿವಸವಾಗಿದ್ದ ಮೂಲಕ ಮನಸ್ಸು ಕಾಲ್ಪನಿಕ ಚಿತ್ರಗಳಿಂದ ವ್ಯಗ್ರವಾಗಿತ್ತು. ಲಗ್ನಕ್ಕಾಗಿ ತಂದೆಯ ಒಪ್ಪಿಗೆಯನ್ನು ಪಡೆಯಲಿಕ್ಕೆ

ಆಗದಿದ್ದ ವಸಂತ, ಬರುವದನ್ನು ಬಿಟ್ಟುಬಿಟ್ಟವನು, ಮುನ್ನಾದಿನ ಚಂಪಕ್ಕನಿಗೆ ಜಡ್ಡಾಗಿದೆಯೆಂಬ ಸುದ್ದಿ ಕೇಳಿ, ಇದೇ ನೆವದಿಂದ, ಒಮ್ಮೆ ಶಾಂತಾಳ ಮುಖ ನೋಡಬೇಕೆಂಬ ಆಸೆಯಿಂದ ಬಂದನು.

ಮನೆಯ ಬಾಗಿಲು ಮುಂದೆ ಮಾಡಿತ್ತು. ಒಳಗೆ ಯಾರೂ ಕಾಣಿಸಲಿಲ್ಲ. ಚಂಪಕ್ಕನ ಕೋಣೆಯಲ್ಲಿ ಕುಳಿತಿರಬಹುದೆಂದು ತಿಳಿದು ಬಾಗಿಲು ಮುಂದೆ ಮಾಡಿ ನಡುಮನೆಯವರೆಗೆ ಹೋದನು.

ಸದ್ದಿಲ್ಲದೆ ಒಳಗೆ ಬಂದ ತನ್ನ ಧ್ಯಾನಮೂರ್ತಿಯನ್ನೇ ನೋಡಿ ಮೊದಲು ಶಾಂತಾ ಹೌಹಾರಿದಳು. ಚಂಪಕ್ಕನನ್ನು ಆಸ್ಪತ್ರೆಗೆ ಹಾಕಿದ ಸುದ್ದಿಯನ್ನು ಹೇಳಿದಮೇಲೆ, ತನ್ನ ಬಹುದಿವಸದ ಅನುಭವವನ್ನು ನೆನೆಸಿಕೊಂಡು ಕೆರಳಿದಳು. ತನ್ನ ನಿರ್ಧಾರಕ್ಕೆ ತಕ್ಕಂತೆ ಕೊರಳೊಳಗಿನ ಮುತ್ತಿನ ಹಾರವನ್ನು ತೆಗೆದು ತಿರುಗಿ ಕೊಡಹೋದಳು. ತನಗಾದ ತೊಂದರೆಯನ್ನು ಎರಡು ಹಕರುಮುರುಕು ಮಾತಿನಲ್ಲಿ ತೋಡಿಕೊಂಡಳು.

ವಸಂತನು ಕ್ಷಮಾಯಾಚನೆ ಮಾಡುತ್ತ ಆಕೆಯ ಕಾಲಿಗೆ ಎರಗಿದನು. ಮನಸಾ ತಮ್ಮ ಲಗ್ನವಾದಂತೆಯೇ ಎಂದು ಅಂಗಲಾಚಿದನು.

ದೇವರಿಗೆ ಸಲ್ಲತಕ್ಕ ಹೂವು ನಿರ್ಮಾಲ್ಯವಾಯಿತು !

* * *

ಆಸ್ಪತ್ರೆಯಿಂದ ಹೊರಟ ರಾಘಪ್ಪ ಮನೆಯಿಂದ ಒಂದು ಫರ್ಲಾಂಗಿನಷ್ಟು ದೂರವಿದ್ದಾಗ ಮನೆಯೊಳಗಿಂದ ವಸಂತ ಹೊರಬೀಳುತ್ತಿದ್ದುದು ಅವನ ಕಣ್ಣಿಗೆ ಬಿದ್ದಿತು. ಅವನ ಎದೆ ಡವಡವ ಬಡಿದುಕೊಳ್ಳತೊಡಗಿತು. ಬೇಗ ಬೇಗ ನಡೆಯತೊಡಗಿದನು. ಮಧ್ಯಾಹ್ನ ಒಂದು ಗಂಟೆಯ ರಣರಣ ಬಿಸಿಲು.

ರಾಘಪ್ಪ ಓಡುತ್ತ ಮನೆಯೊಳಕ್ಕೆ ನುಗ್ಗಿದನು. ನಡುಮನೆಯಲ್ಲಿ ಸೋತ, ಭೀತಳಾಗಿದ್ದ, ಶೂನ್ಯದೃಷ್ಟಿಯಿಂದ ಗೋಡೆಯತ್ತ ನೋಡುತ್ತ ಕುಳಿತ ಮಗಳನ್ನು ನೋಡಿದವನೇ 'ರಂಡೇ !' ಎಂದು ಕೂಗಿ ಅವಳ ರಟ್ಟೆ ಹಿಡಿದು ನೆಲಕ್ಕೆ ಕೆಡವಿದನು. ಮನವಾರೆ ತನ್ನ ಸಂಕಟ ತೀರುವವರೆಗೆ ಕೆನ್ನೆ ಬೆನ್ನುಗಳ ಮೇಲೆ ಶಕ್ತಿಹಾಕಿ ಹೊಡೆದನು. ಕೊನೆಗೆ ದಣಿದು ಹೋದಮೇಲೆ 'ರಂಡೇ, ನನ್ನ ಕೊಂದಿ!' ಎಂದು ಹಣೆಗೆ ಕೈಹಚ್ಚಿಕೊಂಡು ಒಂದು ಗೋಡೆಗೆ ಆತು ಕುಳಿತುಕೊಂಡನು.

ಅಷ್ಟರಲ್ಲಿ ಬಾಗಿಲು ಸಪ್ಪಳವಾಯಿತು. ಬಂದವನು ಭೀಮಸೇನ. ರಾಘಪ್ಪನನ್ನು ಕಂಡವನೇ 'ಊಂ' ಎಂದು ಬಿಕ್ಕಿಸಿ ಬಿಕ್ಕಿಸಿ ಅಳುತ್ತ, 'ಮಾಮೀ.... ಹಂ.... ಹೋದಳು !' ಎದು ಹೇಳಿದನು.

ಎರಡನೆಯ ವಿಚಾರವಿಲ್ಲದೆ ರಾಘಪ್ಪ ಮನೆ ಬಿಟ್ಟು ಟಾಂಗಾ ಮಾಡಿಕೊಂಡು

ಆಸ್ಪತ್ರೆಗೆ ಓಡಿದನು. ಹೆಂಡತಿ ಪ್ರಸೂತಿಕಾಲಕ್ಕೆ ಪ್ರಾಣಬಿಟ್ಟಿದ್ದಳು. ನಾಡಿ ಹೊಡೆಯವದು ನಿಂತಮೇಲೆ ಪ್ರಸೂತಿಯಾಯಿತು. ಹುಟ್ಟಿದುದು ಗಂಡು ಕೂಸು... ಶವ !

* * *

ಹೆಂಡತಿಯ ಹಾಗು ಮಗನ ಪ್ರೇತಸಂಸ್ಕಾರವನ್ನು ರಾಘಪ್ಪ ಸ್ವಲ್ಪೂ ಅಳುಕಿಲ್ಲದೆ ತಾನೇ ಎದುರು ನಿಂತು ಮಾಡಿಸಿದನು. ಅಲ್ಲಿ ಕೂಡಿದ ಜನರು ಅವನಿಗೆ ತಾವಿದ್ದೇವೆ ಎಂದರೂ ಕೂಡ ಕೇಳಲಿಲ್ಲ. ಮಗುವನ್ನು ತನ್ನ ಕೈಯಲ್ಲಿಯೇ ಹಿಡಿದುಕೊಂಡು ಆಸ್ಪತ್ರೆಯಿಂದ ಸ್ಮಶಾನದವರೆಗೆ ಹೆಂಡತಿಯ ಪ್ರೇತದ ಜೊತೆಗೆ ತಾನೇ ಒಯ್ದನು.

ದೇಸಾಯರು ವ್ಯವಸ್ಥೆ ನೋಡಲಿಕ್ಕೆಂದು ತಾವೇ ಬಂದಿದ್ದರು. ಆದರೆ ಅವರು ಬರುವದರ ಮೊದಲೇ ರಾಘಪ್ಪ ಕಟ್ಟಿಗೆಗೆ ಹೇಳಿಕಳಿಸಿ, ಬರಬೇಕಾದವರನ್ನು ಕರೆಕಳಿಸಿ, ಎಲ್ಲ ವ್ಯವಸ್ಥೆ ತಾನೇ ಮಾಡಿದ್ದನು. ದೇಸಾಯರಿಗೆ ಬಿದ್ದ ಕೆಲಸವೆಂದರೆ ಚಂಪಕ್ಕನಿಗೆ ಹೆಗಲು ಕೊಟ್ಟಿದ್ದಷ್ಟೇ.

ಏನೂ ಅರಿಯದ ವಸಂತರಾಯ ಕೂಡ ಆಸ್ಪತ್ರೆಯುವರೆಗೆ ಅಂತ್ಯದರ್ಶನಕ್ಕಾಗಿ ಬಂದುಹೋದನು.

ರತ್ನಾ – ಶಾಂತಾ ಬಹಳ ಅತ್ತರು. ಅವರಿಗೆ ಸಮಾಧಾನ ಹೇಳಲು ಬಂದ ವೇಣೂಬಾಯಿ ಕೂಡ ಅಳತೊಡಗಿದಳು. ಗಂಗವ್ವನೇ ಧೈರ್ಯ ತೆಗೆದುಕೊಂಡು, ರತ್ನಾ–ಶಾಂತಾರನ್ನು ಎದೆಗೆ ಅವಚಿಗೊಂಡು, 'ನಾ ನಿಮ್ಮ ತಾಯಿ ಅಂತ ತಿಳಕೊಳ್ರಿ' ಎಂದು ಸಮಾಧಾನ ಹೇಳಿದಳು.

ಅಂದು ಗಂಗವ್ವ ದುಃಖದ ಮನೆಗೆ ಇರಲು ಬಂದಳು. ತಮ್ಮನಿಗೆ ಬಹಳ ಹೊತ್ತು ಸಮಾಧಾನ ಹೇಳಿದಳು. ರಾಘಪ್ಪ ಕೇಳಿಕೊಂಡನು. ಅವನಿಗೆ ಸಾಂತ್ವನದ ಅವಶ್ಯಕತೆ ಉಳಿದಿರಲಿಲ್ಲ.

# ೩೬ : ದೇಸಾಯರಿಗೆ ಒಂದು ಪತ್ರ

ಮರುದಿನ ರಾತ್ರಿ ಹತ್ತು ಗಂಟೆಗೆ ಕಿಟ್ಟಿ ದುಃಖದ ಮನೆಯಿಂದ ತಮ್ಮ ಮನೆಗೆ ಮಲಗಲು ಹೊರಟನು. ಆಗ ಕೋಣೆಯಲ್ಲಿ ಬಹಳ ಹೊತ್ತು ಏನನ್ನೋ ಬರೆಯುತ್ತ ಕುಳಿತ ರಾಘಪ್ಪ ಅವನನ್ನು ಕರೆದು, 'ಈ ಪತ್ರ ನಾಳೆ ಮುಂಜಾನೆ ದೇಸಾಯರಿಗೆ ತಪ್ಪದೆ ಮುಟ್ಟಿಸು. ಈಗ ಅವರು ಮಲಗಿಕೊಂಡಿರುತಾರ. ಅವರನ ಎಬ್ಬಿಸಬ್ಯಾಡ. ನಾಳೆ ನೀನs ಹೋಗಿ ಕೊಡು' ಎಂದು ಹೇಳಿದನು.

ಕಿಟ್ಟಿಗೆ ರಾತ್ರಿ ಬೇಗ ನಿದ್ದೆ ಹತ್ತಲಿಲ್ಲ. ಜನರೆಲ್ಲ ರಾಘಪ್ಪನನ್ನು ಹಳಿಯುತ್ತಿದ್ದರು. ಕಿಟ್ಟಿಗೂ ಆದರ ಕಡಿಮೆಯಾಗಿತ್ತು. ಅದಕ್ಕಿಂತ ಹೆಚ್ಚಾಗಿ ಭೀತಿ ಹುಟ್ಟತೊಡಗಿತ್ತು.... 'ತಪ್ಪಿಗೆ ತಕ್ಕ ಶಿಕ್ಷೆ ಇದೇ ಜಗತ್ತಿನಲ್ಲಿ ಇದೇ ಆಯುಷ್ಯದಲ್ಲಿ ದೊರಕುತ್ತದೆಯೇ....?' ಎಂಬ ಸಮಸ್ಯೆ ಅವನನ್ನು ಕಾಡತೊಡಗಿತು. ಇಷ್ಟೆಲ್ಲ ಸಂಗತಿ ಅವನ ಕಣ್ಣೆದುರೇ ನಡೆದಮೇಲೆ ಭೀತಿ ಬಾರದೆ ಇನ್ನೇನು?

ಮರುದಿನ ತಡವಾಗಿ ಎಚ್ಚರವಾಯಿತು. ಎದ್ದವನೇ ಮುಖ ತೊಳೆದುಕೊಂಡು, ದೇಸಾಯರ ಮನೆಗೆ ಹೋಗಿ ಅವರಿಗೆ ಚೀಟಿ ಮುಟ್ಟಿಸಿ, ತಾನು ದುಃಖದ ಮನೆಯತ್ತ ಲಗುಬಗೆಯಿಂದ ನಡೆದನು.

ಅವನು ಅರ್ಧದಾರಿಯಲ್ಲಿ ಇರುವಾಗಲೇ ಹಿಂದಿನಿಂದ ಭರದಿಂದ ದೇಸಾಯರ ಟಾಂಗಾ ಬಂದಿತು. ದೇಸಾಯರು ಟಾಂಗಾ ನಿಲ್ಲಿಸಿ, 'ನಾನೂ ಅಲ್ಲೇ ಹೊರಟೇನಿ, ಟಾಂಗಾ ಹತ್ತು' ಎಂದು ಹೇಳಿದರು. ಕಿಟ್ಟಿ ಆಶ್ಚರ್ಯಬಡುತ್ತ ಹತ್ತಿದನು. ಇಬ್ಬರೂ ರಾಘಪ್ಪನ ಮನೆ ಮುಟ್ಟಿದಾಗ ಬೆಳಗಿನ ಒಂಬತ್ತು ಆಗಿರಬಹುದು. ಮನೆಯ ಸುತ್ತಲೂ ಜನರು ನೆರೆದಿದ್ದರು. ಒಳಗಿನಿಂದ ಸ್ತ್ರೀಯರ ಆರ್ತರೋದನ ಕೇಳಿಸುತ್ತಿತ್ತು. ಬಾಗಿಲ ಬಳಿಯಲ್ಲಿ ಪೋಲೀಸನೋರ್ವನು ಪಹರೆ ಮಾಡುತ್ತ ನಿಂತಿದ್ದನು.

* * *

ರಾತ್ರಿ ಒಂದೆರಡು ಬಾರಿ ನರಳಿದ ದನಿ ರತ್ನಾಗೆ ಕೇಳಿಸಿತ್ತಂತೆ. ಆದರೆ ಆಕೆಗೆ ತನ್ನ ಅತ್ತೆಯ ಬಡಬಡಿಸುವ ಚಟದ ಪರಿಚಯವಿತ್ತು. ಅಲ್ಲದೆ ಮರಣಾಚ್ಛಾದಿತ ಮನೆ. ಹೆದರಿಕೆಯಿಂದ ಹಾಗೆಯೇ ಮಲಗಿಕೊಂಡಳು. ಉಳಿದವರೆಲ್ಲ ದಣಿದು

ಯಾವ ಅರಿವಿಲ್ಲದೇ ಮಲಗಿದ್ದರು. ಪ್ರತಿನಿತ್ಯದಂತೆ ಆರು ಗಂಟೆಗೆ ಎದ್ದ ಗಂಗವ್ವನು ತಮ್ಮನ ಕೋಣೆಯ ಬಾಗಿಲು ಇಕ್ಕಿದುದನ್ನು ನೋಡಿದಳು. ಅವಳೂ ಚಿಕಿತ್ಸೆ[೧] ಮಾಡಲಿಲ್ಲ. ಆದರೆ ಎಂಟು ಗಂಟೆಯಾದರೂ ರಾಘಪ್ಪ ಹೊರಗೆ ಬರದಿರಲು ಗಂಗವ್ವ ಅವನನ್ನು ಎಬ್ಬಿಸಲು ರತ್ನಾಳನ್ನು ಕಳಿಸಿದಳು. ಒಳಚಿಲಕ ಹಾಕಿತ್ತು. ಎಷ್ಟು ಬಾಗಿಲ ಬಡಿದರೂ ರಾಘಪ್ಪ ಎದ್ದು ಬಾಗಿಲ ತೆಗೆಯಲಿಲ್ಲ. ಕೊನೆಗೆ ಭೀಮಸೇನನನ್ನು ಕರೆಸಿ ಹಿಮ್ಮಗ್ಗಲಿನ ಕಿಡಕಿಯನ್ನು ಏರಿ ಹಣಿಕಿ ಹಾಕಲು ಹೇಳಿದನು. ಕೆಂಪು ಕಾಜಿನ ಹರಳಿನೊಳಗಿಂದ ಏನೂ ಕಾಣಿಸಲೊಲ್ಲದು. ಆಗ ಕಾಜು ಒಡೆಯಲು ರತ್ನಾ ಹೇಳಿದಳು. ಕಾಜನ್ನು ಒಡೆದು ಒಳಗೆ ನೋಡಿ ಜಂತೆಯಿಂದ ನೇತಾಡುತ್ತಿದ್ದ ರಾಘಪ್ಪನ ಪ್ರೇತವನ್ನು ಕಂಡು, ನಿಂತಲ್ಲಿಯೇ ಚೀತ್ಕಾರ ಮಾಡಿ, ಬವಳಿಬಂದು ಕೆಳಗೆ ಬಿದ್ದನು. ಒಮ್ಮೆಲೇ ಸುದ್ದಿ ಹಬ್ಬಿ ಜನರು ನೆರೆದರು. ಪೊಲೀಸರು ಬಂದು ಅದೇ ಪಂಚನಾಮೆ ಪ್ರಾರಂಭವಾಗಿತ್ತು. ಪ್ರೇತದ ಮೇಲಿನ ಅಂಗಿಯ ಕಿಸೆಯಲ್ಲಿ ಒಂದು ಚೀಟಿ ದೊರೆತಿತು –

> ‘ಸಂಬಂಧಪಟ್ಟ ಎಲ್ಲ ಜನರಿಗೆ ರಾಘವೇಂದ್ರ ವಾಮನ ಬಿಂದಗೋಳ, ನಾನು ತಿಳಿಸುವುದೇನೆಂದರೆ – ನಾನು ಹೆಂಡತಿಯ ಮರಣದ ಶೋಕದಿಂದ ಹಾಗೂ ಇತರ ಚಿಂತೆಗಳ ಮೂಲಕ ನರಜನ್ಮಕ್ಕೆ ಬೇಸತ್ತು, ಪಾಪ ಪುಣ್ಯಗಳ ವಿಚಾರ ಮಾಡದೆ ಸ್ವಂತ ಖುಷಿಯಿಂದ ನನ್ನ ಕೋಣೆಯ ಜಂತಿಯಿಂದ ಹಗ್ಗವನ್ನು ತೂಗುಬಿಟ್ಟು ಉರಲು ಹಾಕಿಕೊಳ್ಳುತ್ತೇನೆ. ಇದು ನನ್ನ ಖುಷಿಯಿಂದ ಆದ ಸಂಗತಿ. ಇದರ ಜವಾಬುದಾರಿ ಇನ್ನಾರ ಮೇಲೆಯೂ ಇರುವದಿಲ್ಲ ; ಯಾರ ಮೇಲೂ ಹಾಕಬಾರದು ; ಯಾರೂ ಖೇದಪಟ್ಟುಕೊಳ್ಳಬಾರದು. ನನ್ನ ಶವಸಂಸ್ಕಾರದ ಬಾಬತ್ತು ನಮ್ಮ ಓಣಿಯ ಮೂಲೆಗೆ ಇರುವ ಕಟ್ಟಿಗೆಯ ಅಡ್ಡೆಯ ಮಾಲಕರಿಗೆ ಹದಿನೈದು ರೂಪಾಯಿ ಹಣ ಮುಟ್ಟಿಸಿ ಅವರ ಪಾವತಿಯನ್ನು ಇದರ ಜೊತೆಗೆ ಇಟ್ಟಿರುತ್ತೇನೆ. ಈಗ ಕೆಲದಿನಗಳ ಲಾಗಾಯಿತು ನನಗೆ ಹುಚ್ಚು ಹಿಡಿದೀತೆಂಬ ಭಯ ಬಹಳ ಹುಟ್ಟಿದ ಮೂಲಕ ಈ ಮೂರು ತಿಂಗಳ ಹಿಂದೆ ಒಂದು ಮೃತ್ಯುಪತ್ರವನ್ನು ಮಾಡಿಸಿದ್ದೆನು. ಅದೇ ನನ್ನ ನಿಜವಾದ ಕಾಯ್ದೇಶೀರ ಮೃತ್ಯುಪತ್ರವೆಂದು ತಿಳಿದುಕೊಳ್ಳಬೇಕು, ಎಂದು ನಾನು ಪ್ರಮಾಣಮಾಡಿ ಹೇಳುತ್ತೇನೆ. ಮೃತ್ಯುಪತ್ರವು ತಿಜೋರಿಯಲ್ಲಿ ಒಂದು ನೂರಾ

---

೧. ವಿಚಾರ.

ಎಪ್ಪತ್ತುಮೂರು ರೂಪಾಯಿ ಎಂಟು ಆಣೆ ಆರು ಪೈ ರಕಮು ಇರುತ್ತದೆ. ತಿಜೋರಿ ಹಾಗು ಮೃತ್ಯುಪತ್ರ – ಇವುಗಳನ್ನು ನನ ಅಳಿಯ ಚಿ॥ ಕೃಷ್ಣಾಜಿ ಸ್ವಾಮಿರಾವ ಕುಲಕರ್ಣಿ ಇವರು ತಮ್ಮ ತಾಬೇದಲ್ಲಿ ತೆಗೆದುಕೊಳ್ಳತಕ್ಕದ್ದು. ಹಾಗು ಇದ್ದ ಹಣದಲ್ಲಿ ನನ್ನ ಹೆಂಡತಿಯ ಕರ್ಮ ಮಾಡಿಸತಕ್ಕದ್ದು. ಎಲ್ಲ ಉತ್ತರಾಧಿಕಾರ ಅವರದೇ ಇರುತ್ತದೆ. ಇದನ್ನೆಲ್ಲ ಬರೆಯುವಾಗ ನಾನು ನಿಚ್ಚಳ ಬುದ್ಧಿಯಿಂದ ಇದ್ದು ಯಾವ ಮಾದಕ ಪದಾರ್ಥವನ್ನೂ ಸೇವಿಸಿರುವುದಿಲ್ಲ.'

ಕೆಳಗೆ ರಾಘಪ್ಪನ ಸಹಿ ಹಾಗು ಮುನ್ನಾದಿನದ ತಾರೀಖು ಇದ್ದಿತು. ಅದೇ ತಾರೀಖು ಕಟ್ಟಿಗೆ ಅಡ್ಡೆಯ ಪಾವತಿಯ ಮೇಲೆಯೂ ಇತ್ತು. ಕಟ್ಟಿಗೆಯ ಅಡ್ಡೆಯವನು, 'ನಾಳೆ ಎರಡು ಬಂಡಿ ಕಟ್ಟಿಗೆ ಬೇಕು' ಎಂದು ಹೇಳಿ ರಾಘಪ್ಪ ರೂಪಾಯಿ ಕೊಟ್ಟು ಹೋದರು. ವರ್ಷದ ಬಳಕೆಗೆ ಎಂದು ತಿಳಿದು ನಾವು ಇನ್ನು ಮೇಲೆ ಅವರು ಹೇಳಿಕಳಿಸಿದಾಗ ಕಳಿಸುವವರಿದ್ದೆವು' ಎಂದು ಜವಾಬು ಕೊಟ್ಟನು. ರಾಘಪ್ಪನ ಚೀಟಿಯ ಮೂಲಕ ಪೊಲೀಸರು ವಿಶೇಷ ಚಿಕಿತ್ಸೆ ಮಾಡಲಿಲ್ಲ. ಬಾಗಿಲಿಗೆ ಒಳಚಿಲಕವಿದ್ದು ಬಾಗಿಲು ಮುರಿದು ಒಳಗೆ ಹೋಗಬೇಕಾಯಿತಾದ್ದರಿಂದ ಯಾವ ವಿಷಯದ ಬಗೆಗೂ ಸಂದೇಹವನ್ನು ಎತ್ತಲಿಲ್ಲ.

ಕಿಟ್ಟಿ ದೇಸಾಯರ ಕಡೆಗೆ ಸಂಶಯದಿಂದ ನೋಡಿದನು. ದೇಸಾಯರು 'ನೀನು ತಂದ ಚೀಟಿ ನಿನಗೆ ತೋರಿಸತೇನಿ. ಅದರ ಸುದ್ದಿ ಇಲ್ಲಿ ಎತ್ತಬ್ಯಾಡ. ಮುಂದ ಹೆಚ್ಚು ತ್ರಾಸು ಆದೀತು' ಎಂದು ಹೇಳಿದನು.

ಪೊಲೀಸರು 'ಕಾರಣ' ಕಾಲಮ್ಮಿನಲ್ಲಿ 'ಹೆಂಡತಿಯ ಮರಣದ ದುಃಖದ ಮೂಲಕ ಹಾಗು ಇತರ ಚಿಂತೆಗಳ ಮೂಲಕ' ಎಂದು ಬರೆದುಕೊಂಡು ಶವವನ್ನು ಉತ್ತರಾಧಿಕಾರಿಯಾದ ಕಿಟ್ಟಿಯ ವಶಕ್ಕೆ ಕೊಟ್ಟರು. ಶವವನ್ನು ನೋಡಿ ದೇಸಾಯರು ಹೆಣ್ಣು ಮಕ್ಕಳಿಗೆ ಯಾರಿಗೂ ತೋರಿಸಕೂಡದೆಂದು ತಿಳಿಸಿದರು. ಕಿಟ್ಟಿ ಕೂಡ ಅಧೈರ್ಯದಿಂದ ಒಮ್ಮೆಯೇ ನೋಡಿದನು. ಆ ಸುಂದರವಾದ ಮುಖವು ಜಗಳಾಡುವವರಂತೆ ಅವಡುಗಚ್ಚಿತ್ತು ! ಒಂದು ಕಣ್ಣು ಇನ್ನೊಂದಕ್ಕಿಂತ ತುಸು ಹೆಚ್ಚು ಹೊರಗೆ ಬಂದಿತ್ತು !

ಬೇರೆ ವಿಚಾರ ಮಾಡದೆ ಕಿಟ್ಟಿಯನ್ನು ಯಾರಿಗೂ ಸಮೀಪಕ್ಕೆ ಬಾರಗೊಡದಂತೆ ನೋಡಲು ನಿಲ್ಲಿಸಿ ದೇಸಾಯರು ಮುಂದಿನ ಕೆಲಸಕ್ಕೆ ತೊಡಗಿದರು. ಒಂದು ಗಂಟೆಯೆನ್ನುವಷ್ಟರಲ್ಲಿ ಪ್ರೇತವು ಸ್ಮಶಾನವನ್ನು ಕಂಡಿತು.

* * *

ಹನ್ನೆರಡನೆಯ ದಿನವಾದಮೇಲೆ ದೇಸಾಯರು ಕಿಟ್ಟಿಯನ್ನು ಮನೆಗೆ ಕರೆದು ರಾಘಪ್ಪ ತಮಗೆ ಕಳಿಸಿಕೊಟ್ಟ ಪತ್ರವನ್ನು ತೋರಿಸಿದನು.

ಕ್ಷೇಮ ಶ್ರೀ ಧಾರವಾಡ

ರಾ॥ ರಾ॥ ಬಹದ್ದೂರ ದೇಸಾಯರಿಗೆ ರಾಘಪ್ಪನ ಸ.ವಿ.ವಿ. ನಾನು ನಿಮ್ಮ ಪ್ರೀತಿಗಾಗಿ ಈ ಎರಡು ಮಾತುಗಳನ್ನು ನಿಮ್ಮೆದುರು ಇಟ್ಟಿದ್ದೇನೆ. ನನಗೆ ಅಪಜಯವೆಂದರೆ ಬಹಳ ಹೆದರಿಕೆ. ಆದರೆ ನಾನು ಸೋತದ್ದು ನಿಮಗಲ್ಲ ಎಂಬುದಿಷ್ಟನ್ನೇ ಇಲ್ಲಿ ನಿಮಗೆ ತಿಳಿಸಬೇಕಾಗಿದೆ. ಏಕೆಂದರೆ ನೀವು ನಿಮ್ಮ ಮಗನ ಪತ್ರಗಳನ್ನು ನನ್ನ ಕಡೆಗೆ ಕಳಿಸಿ ಹೆದರಿಸಲು ಯತ್ನಿಸಿದಿರಿ. ನಾನು ಹೆದರಿದೆನೆಂದೇ ನಿಮ್ಮ ಕಲ್ಪನೆಯಾಗಿದ್ದರೆ ಅದನ್ನು ಬಿಟ್ಟು ಬಿಡುವದು ಒಳ್ಳೆಯದು. ಅದು ನಿಜವಲ್ಲವೆಂಬುದನ್ನು ಈಗ ಸಿದ್ಧಮಾಡಿ ತೋರಿಸುತ್ತೇನೆ. ನಾನು ನಿಮಗೆ ದುಷ್ಟನಂತೆ ತೋರಿದುದರ ಬಗ್ಗೆ ನನಗೆ ಬಹಳ ದುಃಖವಿಲ್ಲ. ನಾನು ನನ್ನದೇ ಆದ ನಿಯಮಗಳಂತೆ ನಡೆದವನು. ಆದರೆ ಯಾವ ಅಳುಕು ಇಲ್ಲದೇ, ಪಾಪಪುಣ್ಯಗಳನ್ನು ಮೀರಿನಿಂತವನಂತೆ ಸಮದೃಷ್ಟಿಯಿಂದ ನಾನು ನನ್ನ ಕೃತಿಗಳನ್ನು ನೋಡುತ್ತಿದ್ದೆನು. ಅದೀಗ ಹೊರಟುಹೋದದ್ದೇ ನನಗೆ ಮುಖ್ಯವ್ಯಸನವನ್ನುಂಟುಮಾಡಿದೆ. ನನಗೂ ಸದಸದ್ವಿವೇಕ ಬುದ್ಧಿಯು ಕಾಡತೊಡಗಿದೊಡನೆ ತನ್ನ ಅರ್ಧಜೀವನ ಮುಗಿದಂತಾಯಿತು. ನಾನು ಮೊದಲಿದ್ದಂತೆ ಒಂದಿಷ್ಟೂ ಭಯವಿಲ್ಲದ ಕಾರ್ಯ ಸಾಧಕನೇ ಆಗಿ ಉಳಿದಿದ್ದರೆ ಇನ್ನು ಮುಂದೆ ನಡೆಯುವ ಸಂಗತಿ ನಡೆಯುತ್ತಿರಲಿಲ್ಲವೆಂಬುದ ಖಂಡಿತ. ಆದರೆ ನನಗೆ ಹೀಗೆ ಅಂತರಾತ್ಮನ ಕಾಟ ಸುರುವಾಗುವ ಕಾಲಕ್ಕೇ ನೀವು ನಿಮ್ಮ ಮಗನ ಪತ್ರಗಳನ್ನು ನನ್ನ ಕಡೆಗೆ ಕಳಿಸಿ, ನನ್ನ ಭೂತಕಾಲದ ಸ್ಮೃತಿಗಳನ್ನು ಜಾಗೃತಮಾಡಿ, ನನ್ನನ್ನು ಕೆಳಗೆ ಎಳೆದಿರಿ. ನಾನು ಮೊದಲಿನ ರಾಘಪ್ಪನಾಗಿದಿದ್ದರೆ ನಿಮ್ಮ ಪತ್ರಕ್ಕೆ ಅಳುಕುತ್ತಿರಲಿಲ್ಲ ; ಈಗಲೂ ಅಳುಕಲಿಲ್ಲ. ಆ ಪತ್ರಗಳಲ್ಲಿ ನನ್ನನ್ನು ನಾನೇ ನೋಡಿಕೊಂಡು ಅಳುಕಿದೆ, ಇಷ್ಟೆ. ಇಲ್ಲವಾದರೆ ಪತ್ರಗಳ ಬೆಲೆ ಬಹಳ ಇಲ್ಲ.

ಉದಾಹರಣೆ : ನಿಮ್ಮ ಮಗನು ಪುಣೆಗೆ ಹೋಗಲಿ, ಹತ್ತು ವರ್ಷ ಹುಡುಕಾಡಲಿ, ನನಗೆ ಬಾಧೆ ತಟ್ಟುವ ಯಾವ ವಿಷಯವನ್ನೂ ಅವನು ದೊರಕಿಸಲಾರನು. ಇದನ್ನು ನಾನು ನಾನಾಗಿಯೇ ನಿಮಗೆ ಬರೆದು ತಿಳಿಸುತ್ತಿದ್ದೇನೆ. ಅಂದರೆ ನಿಮಗೆ ಸತ್ಯವೂ ತಿಳಿಯುತ್ತದೆ ; ನಾನು ನಿಮಗೆ

ಹೆದರುವ ಕಾರಣವಿದ್ದಿಲ್ಲ ಎಂಬುದೂ ತಿಳಿಯುತ್ತದೆ. ಅಲ್ಲದೆ ನನ್ನ ಅವಗುಣಗಳೊಂದಿಗೆ ಒಂದೆರಡು ಒಳ್ಳೆಯ ಗುಣಗಳೂ ಇದ್ದವೆಂಬುದು ನಿಮಗೆ ಗೊತ್ತಾಗಬಹುದು.

ನಮ್ಮ ಪಿತ್ರಾರ್ಜಿತ ಹೊಲಗಳೆಲ್ಲ ತಂದೆಯವರ ಕಾಲದಿಂದಲೆ ಒತ್ತೀ ಬಿದ್ದು ನಾವು ಸ್ವಂತ ಪ್ರಯತ್ನದಿಂದ ನಾಲ್ಕು ಪುಸ್ತಕ ಧಾರವಾಡದಲ್ಲಿ ಕಲಿತೆವು. ನನಗೆ ಇತ್ತ ನೌಕರಿ ಸಿಗಲಿಲ್ಲವಾದ್ದರಿಂದ ಪುಣೆಗೆ ನನ್ನ ತಮ್ಮ ವೆಂಕಾಟಿಯ ಬಳಿಗೆ ಹೋದದ್ದು ನಿಮ್ಮ ಮಗನ ಪತ್ರದಿಂದ ನಿಮಗೆ ಗೊತ್ತು ಆಗಿಯೇ ಇದೆ. ಆಗ ನನ್ನ ಲಗ್ನವಾಗಿ ಎರಡುಮೂರು ವರ್ಷಗಳಾಗಿದ್ದವು. ಕೆಲವೊಂದು ಪ್ರಸಂಗದ ಮೂಲಕ (ಅವು ನಿಮಗೆ ಗೊತ್ತಿದ್ದರೂ ಇರಬಹುದು) ನಾನು ನೌಕರಿ ಹಿಡಿದು ನನ್ನ ಕಾಲಮೇಲೆ ನಿಲ್ಲುವದಕ್ಕಿಂತ ಮೊದಲೇ ನನ್ನ ಲಗ್ನವಾಗಬೇಕಾಗಿಬಂದಿತು. ಲಗ್ನವಾದ ವರ್ಷಕ್ಕೆ ನಮ್ಮ ರತ್ನಾ ಹುಟ್ಟಿದಳು. ಪ್ರಾಪ್ತಿಯಾದರೋ ಬಹಳ ಕಡಿಮೆ. ಹೀಗೆ ಬಹಳ ಕಂಗಾಲಸ್ಥಿತಿಯಲ್ಲಿ ಪುಣೆಗೆ ನಾನು ನೌಕರಿ ಹುಡುಕಲು ಹೋದೆನು. ಪುಣೆಯಲ್ಲಿ ಅತ್ತಿತ್ತ ಕಚೇರಿ – ಬ್ಯಾಂಕು ಎಂದು ನೌಕರಿಗಾಗಿ ಅಲೆದಾಡುವದು, ಜಾಹೀರಾತುಗಳಿಗಾಗಿ ವೃತ್ತಪತ್ರ ಓದುವದು – ಇವೇ ಕೆಲಸಗಳಲ್ಲಿ ಒಂದು ವಾರ ಕಳೆಯಿತು. ಯಾವ ನೌಕರಿಯ ಆಸೆ ಇರಲಿಲ್ಲ. ವೆಂಕಟರಾಯನಂತೆ ಸಿಪಾಯಿಯಾಗುವದು ನನಗೆ ಸಾಧ್ಯವೇ ಇರಲಿಲ್ಲ.

ವೆಂಕಾಟಿ ಚೆಕ್ಕು ಮುರಿಸಿಕೊಂಡು ಬಂದ ಮರುದಿವಸದ ಮುಂಜಾನೆಯ ವರ್ತಮಾನಪತ್ರದಲ್ಲಿ ನಾನು ತಾಜುದ್ದೀನ ಡ್ರಾಯವರನ ಬಗ್ಗೆ ಒಂದು ಸುದ್ದಿಯನ್ನು ಓದಿದೆನು. ಅವನು ಲಕ್ಷ್ಮೀರೋಡಿನ ಮೇಲೆ ಒಬ್ಬ ಮುದುಕನ ಮೇಲೆ ಮುನ್ನಾದಿನ ಮೋಟಾರು ಹಾಯಿಸಿದ್ದನೆಂದೂ, ಅದಕ್ಕಾಗಿ ಪೊಲೀಸರು ಅವನನ್ನು ಸೆರೆಹಿಡಿದಿದ್ದರೆಂದೂ ವರ್ತಮಾನ ಪತ್ರದ ಒಂದು ಮೂಲೆಯಲ್ಲಿ ಪ್ರಕಟವಾಗಿತ್ತು. ವೆಂಕಟರಾಯು ವರ್ತಮಾನಪತ್ರ ಓದುವವನಲ್ಲ, ಅಲ್ಲದೆ ಅಪ್ಪಿತಪ್ಪಿ ನೋಡಿದರೂ ಮೂಲೆಯಲ್ಲಿ ಮುದ್ರಿತವಾದ ಸುದ್ದಿಯನ್ನು ಓದುವದೂ ಅಸಂಭವ. ಆದ್ದರಿಂದ ಈ ಅಪಘಾತದಸುದ್ದಿ ವೆಂಕಟರಾಯನಿಗೆ ತಿಳಿಯುವದೇ ಅಸಾಧ್ಯ. ಅಲ್ಲದೆ ಸಂಧಿ ಸಾಧಿಸುವಾಗ ತುಸು ಎದೆಗಾರರಾಗಿರಲೇಬೇಕು. ಈ ಸುಸಂಧಿಯನ್ನು ಹೊಟ್ಟೆಗಾಗಿ ಕಂಗಾಲಾದ ನಾನು ಕಳೆದುಕೊಳ್ಳಲಿಲ್ಲ. ವೆಂಕಾಟಿ ಪೂಜೆಗೆ ಕುಳಿತಾಗ ತಾಜುದ್ದೀನ ಬಂದಿದ್ದಾನೆಂದು ಹೇಳಿ,

ಅವನ ಕೈಯಿಂದ ಕೀಲಿಕೈ ಪಡೆದು, ಎರಡು ಸಾವಿರ ರೂಪಾಯಿ ನಾನೇ ಎತ್ತಿದೆನು. ನಿಮಗೆ ಹೆಂಡಿರುಮಕ್ಕಳನ್ನು ಉಪವಾಸ ಕೆಡವುವ ಅನುಭವಬಾರದಿರಲಿ. ಆದರೆ ಆ ಅನುಭವವುಳ್ಳವರ ಕೃತಿಗಳನ್ನು ನೀವು ಅನಾದರದಿಂದ ನೋಡಬಾರದು.

ಆದರೆ ಚೆಕ್ಕು ಖೊಟ್ಟಿಯಾಗಿರಬಹುದೆಂದು ನನಗೂ ಕಲ್ಪನೆಯಿಲ್ಲ ; ವೆಂಕಟರಾಯನಂತೂ ಅದನ್ನು ಅಷ್ಟಕ್ಕೇ ಮರೆತೇಬಿಟ್ಟನು. ನಾನು ಹಿಂತಿರುಗಿ ಧಾರವಾಡಕ್ಕೆ ಬಂದೆ... ಒಂದು ವಾರದಲ್ಲಿ ವೆಂಕಾಟಿಯ ಪತ್ರ ಬಂದಿತು. ಚೆಕ್ಕು ಖೊಟ್ಟಿ ಇತ್ತೆಂದೂ, ಅದಕ್ಕಾಗಿ ಪೊಲೀಸರು ಬಂದು ಅವನನ್ನು ಸೆರೆಹಿಡಿದಿದ್ದಾರೆಂದೂ ತಿಳಿಯಿತು. ಪುಣೆಗೆ ಹೋಗುವಾಗ ಇಲ್ಲಿಯ ವಕೀಲರನ್ನು ಕೇಳಿಕೊಂಡು, ಹೇಗಾದರೂ ವೆಂಕಟಿ ಜೇಲಿನೊಳಗೆ ಹೋಗದಂತೆ ಜಾಮೀನು ಕೊಡಿಸಲು ಬೇಕಾಗುವ ಕಾಗದ ಪತ್ರಗಳ ತಯಾರಿ ಮಾಡಿಕೊಂಡೆನು. ನನ್ನ ಬೀಗ ಸ್ವಾಮಿರಾಯನು ಎದೆಗಾರನಾಗಿ ಆಗ ಜಾಮೀನು ಕೊಡಲು ಮುಂದೆ ಬಂದನು. ನನಗೆ ಜಾಮೀನು ಕೊಡಲು ಬರುವಂತಿರಲಿಲ್ಲ. ಏಕೆಂದರೆ ನನ್ನ ಹೊಲಗಳೆಲ್ಲ ಒತ್ತೀಬಿದ್ದಿದ್ದವು, ಬಳಿಯಲ್ಲಿದ್ದ ಎರಡು ಸಾವಿರ ರೂಪಾಯಿಗಳೂ ಹಾಗೇ ಬಂದವುಗಳು. ಅಂತೂ ಸ್ವಾಮಿರಾಯನನ್ನು ಕರಕೊಂಡೇ ಪುಣೆಗೆ ಹೋಗಿ ವೆಂಕಾಟಿಯನ್ನು ಬಿಡಿಸಿಕೊಂಡು, ಸ್ವಾಮಿರಾಯನನ್ನು ಐದು ಸಾವಿರ ರೂಪಾಯಿಗಳಿಗೆ ಜಾಮೀನು ಮಾಡಿದೆವು. ಮೂವರೂ ಮತ್ತೆ ತಿರುಗಿ ಧಾರವಾಡಕ್ಕೆ ಬಂದೆವು. ವೆಂಕಾಟಿ ಸ್ವಾಮಿರಾಯನ ದೇಖರೇಖಿಯ ಕೆಳಗೆ ಅವರ ಮನೆಯಲ್ಲಿ ಇರತೊಡಗಿದನು.

ಆದರೆ ಸ್ವಾಮಿರಾಯ ಹೊರಗೆ ಧೀರನಾಗಿ ತೋರಿದರೂ ವೆಂಕಾಟಿಯ ವಿಕ್ಷಿಪ್ತ ಸ್ವಭಾವಕ್ಕೆ ಅವನು ಒಳಗಿಂದೊಳಗೇ ಹೆದರಿರಬೇಕು. ಏಕೆಂದರೆ ನನಗೆ ತಿಳಿಸದೆ ಮೊದಲು ವೆಂಕಾಟಿಗೆ 'ನಿನ್ನ ಬೋಜೆ ಹೊತ್ತಿದ್ದೇನೆ, ನಿನ್ನ ಪಾಲಿನ ಆಸ್ತಿ ಬರದುಕೊಡು' ಎದು ಕಾಡಹತ್ತಿದನೆಂದು ತೋರುತ್ತದೆ. ಕೊನೆಗೊಮ್ಮೆ ಕೈಗೆ ಸಿಕ್ಕ ಬಕ್ಷಿಸುಪತ್ರವನ್ನು ತಯಾರಿಸಿ ಸ್ವಾಮಿರಾಯ ವೆಂಕಾಟಿಯ ಸಹಿಯನ್ನು ತೆಗೆದುಕೊಳ್ಳಲು ಯತ್ನಿಸಲಾಗಿ ವೆಂಕಾಟಿ 'ನನ್ನ ಅಣ್ಣ ಮಾಡಿದರೆ ನಾನು ಸಹಿ ಮಾಡುತ್ತೇನೆ' ಎಂದು ಮೊಂಡುತನ ಹಿಡಿದನು. ಆಗ ಸ್ವಾಮಿರಾಯ ನನ್ನನ್ನು ಕರೆಸಿಕೊಂಡು, 'ನಿನ್ನ ಆಸ್ತಿಯ ಆಸೆಗಾಗಿ ಅಲ್ಲ ; ಇವನ ಸ್ವಭಾವಕ್ಕಾಗಿ ನಾನು ಇದನ್ನು ಬೇಡುತ್ತೇನೆ.

ಐದು ಸಾವಿರ ಎಂದರೆ ಸಣ್ಣ ಗಂಟು ಅಲ್ಲ' ಎಂದು ಹೇಳಿದನು. ನನಗೂ ಅದು ಸರಿ ಕಂಡಿತು. ಅದಕ್ಕೆ ಸಹಿ ಮಾಡಿದೆನು ನಾನು ಮಾಡಿದುದನ್ನು ಕಂಡಮೇಲೆ ವೆಂಕಾಟಿಯೂ ಸಹಿ ಮಾಡಿದನು.

ಆದರೆ ವೆಂಕಾಟಿಯ ಚಡಪಡಿಕೆ ಮುಗಿಯಲಿಲ್ಲ. ವೆಂಕಾಟಿ ಒಂದು ತರಹದವನು. ಈಗ ಹೊಲಮನೆಯೆಂಬ ಹವ್ಯಾಸ ಅವನಲ್ಲಿ ಹೊಕ್ಕಿತ್ತೊ ಏನೋ. 'ನನಗೆ ವಂಚನಾ ಮಾಡಿದಿರಿ. ನನ್ನ ಆಸ್ತಿ ಕಸಿದುಕೊಂಡಿರಿ' ಎಂದು ಮುಂತಾಗಿ ಕೂಗಾಡತೊಡಗಿದನು. ನಾನೇನೂ, ನಿಮ್ಮ ಮಗ ತರ್ಕಿಸಿಕೊಂಡಂತೆ, ಅವನಿಗೆ ಹಟ ಮಾಡಲು ಕಲಿಸಿಕೊಡಲಿಲ್ಲ. ಆದರೆ ಒಂದುದಿನ ಸಿಟ್ಟಿನಿಂದ ಸ್ವಾಮಿರಾಯ ಬಕ್ಷೀಸುಪತ್ರವನ್ನೇ ಪ್ರತಿಯೆಂದು ಬಿಸಾಡಲಾಗಿ ವೆಂಕಟಿ ಅದನ್ನು ತೆಗೆದುಕೊಂಡು ನಮ್ಮ ಮನೆಗೆ ಬಂದನು. ವಕೀಲರಿಗೆ ತೋರಿಸಿ ತನ್ನ ಆಸ್ತಿ ತನಗೆ ಬಿಡಿಸಿಕೊಡಬೇಕೆಂದು ಎದೆ ಎದೆ ಬಡಕೊಳ್ಳತೊಡಗಿದನು. ನಾನು ಅವನಿಗೆ ನಾಳೆ ವಕೀಲರತ್ತ ಹೋಗೋಣವೆಂದು ಸಮಾಧಾನ ಹೇಳಿದೆನು. ಆ ಕಾಗದವನ್ನು ನೋಡಿದೊಡನೆ ಅದು ಪ್ರತಿಯಲ್ಲ, ಮೂಲ ಬಕ್ಷೀಸುಕಾಗದವೇ ಎಂದು ನನಗೂ ತಿಳಿಯಿತು. ಆಶ್ಚರ್ಯದ ಮೂಲಕವೋ, ವೆಂಕಾಟಿಯ ಕಾಟದ ಮೂಲಕವೋ ನನ್ನಿಂದ ಒಂದು ತಪ್ಪು ಮಾತು ಹೊರಟಿತು ; 'ನೀನು ಯಾಕೆ ಚಿಂತೆ ಮಾಡತ್ತೀ? ಮೂಲ ಬಕ್ಷೀಸುಕಾಗದವನ್ನೇ ನಿನ್ನ ಕಡೆಗೆ ಕೊಟ್ಟಿದ್ದಾನೆ. ನೀನು ತಿರುಗಿ ಕೊಡಬೇಡ, ಅಂದರೆ ನಿನ್ನ ಆಸ್ತಿ ನಿನಗೇ ಆಗುತ್ತದೆ' ಎಂದು ನಾನು ಹೇಳಿದೆನು. ಆ ವಿಕ್ಷಿಪ್ತನು ತೋರಿಕೆಗೆ ಸಮಾಧಾನಗೊಂಡಂತೆ ಕಂಡಿತು. ನನ್ನ ದುರ್ದೈವ – ನಾನು ಅವನಿಗೆ ನಮ್ಮಲ್ಲಿಯೇ ಊಟಕ್ಕೆ ಹಾಕಿ ಮಲಗಲು ಇಟ್ಟುಗೊಂಡದ್ದು. ಅಂದು ರಾತ್ರಿ ಯಾರೋ ಊರವರು ಬಂದು ಬಾಗಿಲು ತಟ್ಟತೊಡಗಿದೊಡನೆ ವೆಂಕಾಟಿ, 'ಅಯ್ಯಯ್ಯೋ, ಪೊಲೀಸರು ಬಂದರು ! ನನ್ನನ್ನು ಹಿಡಿಯುತ್ತಾರೆ' ಎನ್ನುತ್ತ ಹಿತ್ತಲ ಕಡೆಗೆ ಓಡಿದನು. ನಾನು 'ಎಲ್ಲಿ ಹೋಗುತ್ತಾನೆ ?' ಎಂಬ ವಿಚಾರದಿಂದ ಮಾನಸಿಕಮಾಡಿ ಬಂದವರ ಉಪಚಾರದಲ್ಲಿ ತೊಡಗಿದೆ. ಆದರೆ ಆಗ ಹೋದ ವೆಂಕಾಟಿಯ ಸುದ್ದಿ ನಂತರ ನಿಮ್ಮ ಪತ್ರದ ಮುಖಾಂತರವೇ ತಿಳಿಯಿತು.

ವೆಂಕಾಟಿಯ ವಿಷಯದಲ್ಲಿ ಕಲ್ಪನೆ ಹಾಗು ಸತ್ಯ – ಇವು ಬೇರೆಬೇರೆ ವಿಷಯಗಳಲ್ಲ. ಕೈಗೆ ಮೂಲಬಕ್ಷೀಸುಪತ್ರ ಸಿಕ್ಕಿದ್ದಕ್ಕಾಗಿ ಸುಳ್ಳೇ ಹಾಗೆ

ಒದರಿ ಓಡಿಹೋದನೋ, ಅಥವಾ ನಿಜವಾದ ಪೊಲೀಸರೇ ಎಂಬ ಕಲ್ಪನೆಯನ್ನು ನಂಬಿ ಹೋದನೋ, ನನಗೂ ತಿಳಿಯದು. ಎರಡೂ ಸಾಧ್ಯವಿದೆ. ಪರಿಣಾಮ : ನನ್ನ ಅಕ್ಕನ ಮನೆಯೇ ಬರಿದಾಯಿತು ; ಅಕ್ಕ ವಿಧವೆಯಾದಳು ; ಅದರ ಅಪವಾದ ನನ್ನ ಮೇಲೆ ಬಂದಿತು. ನಾನಾಗಿಯೇ ನನ್ನ ಅಕ್ಕನ ಗಂಡನನ್ನು ಹಾಳುಮಾಡಬೇಕೆಂಬ ಉದ್ದೇಶದಿಂದ ಮಾಡಿದ್ದರೆ ನನಗೆ ದುಃಖವಾಗುತ್ತಿರಲಿಲ್ಲ. ಕೂಸಿನ ಬಾಯಲ್ಲಿ ಮೊಲೆಯಿಟ್ಟು ನಿದ್ದೆ ಹೋದ ತಾಯಿ, ಎದ್ದು ನೋಡುವಷ್ಟರಲ್ಲಿ ಕೂಸು ಉಸಿರುಗಟ್ಟಿ ಪ್ರಾಣಬಿಟ್ಟ ಸಂಗತಿಗಳನ್ನು ನೀವು ಕೇಳಿದ್ದೀರಾ?... ಹಾಗೆ ಆಯಿತು ನನ್ನ ಸ್ಥಿತಿ. ನಾನು ಅಶಕ್ತನಾದ ವೇಳೆಗೆ ಇವೆಲ್ಲ ನನ್ನ ಕಣ್ಣೆದುರು ಕಟ್ಟತೊಡಗಿದವು. ಆ ನನ್ನ ಮಾತು, ಆ ಎರಡು ಸಾವಿರ ರೂಪಾಯಿಗಳು – ಕರ್ಮದಂತೆ ನನ್ನನ್ನು ಬೆನ್ನುಹತ್ತಿದವು. ಸ್ವಾಮಿರಾಯ ಇದ್ದ ಆರು ತಿಂಗಳಲ್ಲಿ ಅವನ ಸ್ನೇಹವೂ ಹೋಯಿತು ; ಅವನೂ ನವೆನವೆದು ಸತ್ತು ಹೋದನು. ಮನೆಯಂತೂ ತೊಳೆದುಹೋಗಿತ್ತು ! ಆ ಎರಡು ಸಾವಿರ ರೂಪಾಯಿಗಳ ಬೆಂಬಲವಿದ್ದ ನಾನು ಏನನ್ನಾದರೂ ಮಾಡೇನೆಂದರೆ ಗಂಗಕ್ಕ ನನ್ನನ್ನು ನಾಯಿಯಂತೆ ದೂರವಿಟ್ಟಳು. ನನ್ನ ಮನೆಯೊಳಗಿಂದ ವೆಂಕಾಟಿ ಕಣ್ಮರೆಯಾದದ್ದೇ ಅವಳ ದ್ವೇಷಕ್ಕೆ ಸಾಕಷ್ಟು ಕಾರಣವಾಯಿತು.

ಅಕ್ಕನಿಗೆ ಮುಖ ತೋರಿಸಲು ಆಗದ್ದಕ್ಕೆ ಹಳ್ಳಿಗೆ ಹೋಗಿ ಇರಲು ತೊಡಗಿದೆನು. ನನ್ನ ಹೊಲಗಳನ್ನು ಒತ್ತಿಯಿಂದ ಬಿಡಿಸಿಕೊಂಡು ಕಮತ ಪ್ರಾರಂಭಿಸಿದೆನು. ಮನೆಯಿಂದ ಸ್ಥಿತಿವಂತನೂ ಆದೆನು. ಖಂಬೀರನಾಗಿ[೧] ಬಾಳಿ ಜೀವನವನ್ನು ಹಿಡಿತಕ್ಕೆ ತಂದೆನು. ಇನ್ನೊಮ್ಮೆ ಸೋಲು ಎಂಬುದನ್ನು ಕಾಣಬಾರದಾದರೆ ನಾನೇ ಮುಂದುವರಿದು ಕೆಲಸ ಕೈಕೊಂಡು, (ಅದು ಎಂಥದೇ ಇರಲಿ) ಅದರಲ್ಲಿ ರಮಮಾಣವಾಗಿ ಅದನ್ನು ನಿರ್ದೋಷವಾಗಿ ಪೂರ್ಣಗೊಳಿಸುವದೇ ಒಂದು ಉಪಾಯವೆಂಬ ತತ್ತ್ವವನ್ನು ಹಿಡಿದೆನು. ಕೆಲಸ ಸಾಧಿಸಿ ಸೋಲನ್ನು ಗೆಲ್ಲುವವನು ಹೆದರಿಕೆ–ನಾಚಿಕೆ ಮುಂತಾದ ಎಲ್ಲ ವಿಕಾರಗಳನ್ನೂ ಬಿಡಬೇಕು ಎಂದು ನಂಬಿ, ನಾನು ಮಾಡುವ ಕೆಲಸಗಳಲ್ಲಿಯ ನೀತಿ–ಅನೀತಿಯ ವಿಚಾರವನ್ನು ತೆಗೆದು ಹಾಕಿದೆನು. ಆದದ್ದನ್ನು ನಿರ್ವಿಕಾರವಾಗಿ ನೋಡುತ್ತ ಕೆಲಸ ಪೂರ್ಣಗೊಳಿಸುವದೇ

---

೧. ಧೈರ್ಯದಿಂದ.

ನನ್ನ ನಿತ್ಯದ ರೀತಿಯಾಯಿತು. ನನಗೆ 'ಭರಾರಿ' ಎಂಬ ಬಿರಿದು ಬಂದಿತು.

ಧಾರವಾಡಕ್ಕೆ ತಿರುಗಿ ಬಂದಮೇಲೆ ಎಲ್ಲ ಉಪಾಯಗಳನ್ನು ಮಾಡಿ ಚಿ॥ ಕೃಷ್ಣನಿಗೆ ನನ್ನ ಮಗಳನ್ನು ಕೊಟ್ಟೆನು. ನನ್ನ ಅನೇಕ ಉದ್ದೇಶಗಳಲ್ಲಿ ಗಂಗಕ್ಕನೊಡನೆ ಒಂದಾಗಿ ಹಳೇ ಕತೆಯನ್ನು ಅಷ್ಟಕ್ಕೇ ಮುಗಿಸುವ ಉದ್ದೇಶವೂ ಒಂದಾಗಿತ್ತು. ಆದರೆ ಆಕೆಯ ಹಟ–ಅಭಿಮಾನಗಳು ನನ್ನ ದುಷ್ಟತನಕ್ಕೆ ಆಹ್ವಾನವಾಗಿ ಬಂದವು. ಆಕೆಯ ತಿರಸ್ಕಾರವು ನನ್ನಲ್ಲೂ ಹಟವನ್ನು ಹೊಗಿಸಿತು. ಆಕೆಯನ್ನು ಮೀರಿ ಈ ಲಗ್ನವನ್ನು ಮಾಡಿಸಿದೆನು. ಆ ಲಗ್ನಕ್ಕೆ ನಿಮ್ಮನ್ನೂ ಒಳಗೆ ಹಾಕಿಕೊಂಡೆನು. ಮೋಸವಾಯಿತೆಂದು ಒಮ್ಮೆಯೂ ನಿಮಗೆ ಅನಿಸಿರಲಿಕ್ಕಿಲ್ಲವೆ ?

ಇನ್ನು ನನಗಾದ ಎರಡನೆಯ ಅಪಜಯ–ವರದಕ್ಷಿಣೆ ಹಣ ಕಡಿಮೆಯಾಗುವದೆಂದು ನನಗೆ ಮೊದಲೇ ಗೊತ್ತಿತ್ತು. ಚಿ॥ ಕಿಟ್ಟಣ್ಣನ ಹಣ ನಿಮ್ಮ ಬಳಿಯಲ್ಲಿದ್ದದ್ದು ತಿಳಿದುದರಿಂದ ನಿಮ್ಮ ಕೈಕಟ್ಟಲೆಂದು ಐದು ನೂರು ರೂಪಾಯಿ ಕಡಿಮೆ ಇದ್ದದ್ದನ್ನು ಹಾಗೆಯೇ ಸಾಗಿಸುವ ನನ್ನ ಯೋಚನೆಗೆ ನೀವು ಸಿಗಬೀಳಲಿಲ್ಲವಾದರೂ ನನ್ನನ್ನು ಹೊಗಳದಿರಲಾರಿರಿ. ಆದರೆ ಒಂದು ಮಾಡಲಿಕ್ಕೆ ಹೋಗಿ ಇನ್ನೂ ಒಂದಾಯಿತು ! ನನಗೆ ಇಷ್ಟವಾದ ಇನ್ನೊಂದು ಜೀವವು ನನಗೆ ಅರಿಯದೆಯೇ ಆ ಐದುನೂರು ರೂಪಾಯಿ ತುಂಬುವ ಹವ್ಯಾಸಕ್ಕೆ ಬಿದ್ದು, ಈ ಲೋಕಕ್ಕೆ ಎರವಾಯಿತು! ಆ ನೋವು ನನಗೆ ಇನ್ನೂ ಇದೆ. ನನ್ನ ಇಳಿಗಾಲದ ಈ ಎರಡನೆಯ ಸೋಲು ನನ್ನನ್ನು ನಿರ್ವಿಣ್ಣವಾಗಿ ಮಾಡಿತು, ಇನ್ನೂ ಮಾಡುತ್ತಿದೆ. ಮೆಹಬೂಬಜಾನಳ ಮರಣದ ದುಃಖ ನಿಮಂಥ ಆತ್ಮಸಂಭಾವಿತರಿಗೆ ತಿಳಿಯಲಿಕ್ಕಿಲ್ಲ. ಆದರೆ ನನ್ನನ್ನು ಮಾತ್ರ ಮೂರು ತಿಂಗಳಲ್ಲಿ ವೃದ್ಧಾಪ್ಯಕ್ಕೆ ತಂದಿತು. ನನ್ನ ಕೆಲಸದ ಹಿಡಿತವನ್ನೇ ಕೆಡೆಸಿತು. ನಾನು ಬೇರೆ ರಾಘಪ್ಪನಾದೆನು. ನನ್ನ ಮುಷ್ಟಿ ಸಡಿಲಿಸಿತು.

ನೀರಿನಲ್ಲಿ ಕಲ್ಲು ಒಗೆದು ಇದೇ ದಿಕ್ಕಿನಲ್ಲಿ ತೆರೆಗಳು ಹೋಗಲಿಯೆಂದರೆ ತೆರೆಗಳು ಕೇಳುತ್ತವೆಯೇ?... ನಾನು ಕವಿಯಂತೆ ಮಾತಾಡುತ್ತಿಲ್ಲ. ನನ್ನ ಅನುಭವಗಳ ಸಾರವಾಗಿ, ನಮ್ಮ ಕರ್ಮಗಳ ರೂಪಕವಾಗಿ, ಈ ನಾಲ್ಕು ವರ್ಷ ನಿಂತಿದೆ. ಕಲ್ಲು ಒಗೆದಮೇಲೆ ತೆರೆಗಳು ಎತ್ತ ಏಳುತ್ತವೆ ಎಂಬುದನ್ನು ಅರಿಯಲಾರದ, ತೆರೆಗಳನ್ನು ತಡೆಯಲಾರದ ನಾವು ಕಲ್ಲು ಏಕೆ ಒಗೆಯುತ್ತೇವೆ?... ಒಂದು ಮಾಡಲಿಕ್ಕೆ ಹೋಗಿ ಇನ್ನೊಂದು ಆದರೆ

ಅದಕ್ಕೆ ಹೊಣೆ ಯಾರು?... ಅನುಭವಿಸುವವರು ಯಾರು?... ನಾನು ಅನುಭವದ ಮಾತು ಹೇಳುತ್ತಿದ್ದೇನೆ – ವೇದಾಂತದ ಮಾತನ್ನು ಅಲ್ಲ. ಆದರೆ ಅನುಭವವೇ ವೇದಾಂತದತ್ತ ಜಗ್ಗುತ್ತದೆ ಹೀಗೆ, ಮೆತ್ತಗಾದ ನನ್ನ ಮನಸ್ಸು ಹಿಂದೆ ಆದದ್ದನ್ನೆಲ್ಲ ನೆನಸಿ ಕಷ್ಟಬಡತೊಡಗಿತು. ನಾನು ಅಶಕ್ತನಾದೆನು. ದೈಹಿಕ ಶಕ್ತಿ ಕುಂಠಿತವಾಗಿಲ್ಲ. ಆದರೆ ಒಂದೇ ಉದ್ದೇಶದತ್ತ ಗುರಿ ಇಟ್ಟು ಶಕ್ತಿ ಹಾಕುವ ಏಕಾಗ್ರತೆ ದಿನದಿನಕ್ಕೆ ನನ್ನಲ್ಲಿ ಕಡಿಮೆಯಾಯಿತು.

ಇದರ ಮುಂದಿನ ಅನುಭವವನ್ನೂ ಕೇಳಿರಿ – ನನಗೆ ಕೆಲಸವೆಂದರೆ ಆಲಸ್ಯವಲ್ಲ, ಭಯ ಸುರುವಾಯಿತು. ಇಂದು ಹೀಗೆ ಮಾಡಹೋಗಿ ಇನ್ನೊಂದು ಏನಾದರೂ ಆದರೆ ಅದರ ಹೊಣೆ ಯಾರು?... ಇದೇ ಪ್ರಶ್ನೆ ದಿನದಿನಕ್ಕೆ ತೀವ್ರವಾಗಿ ಭಾಸವಾಗಿ ಕೆಲಸಮಾಡುವಾಗ ಅನಪೇಕ್ಷಿತ ಪರಿಣಾಮಗಳ ಭೀತಿ ಪ್ರಾರಂಭವಾಯಿತು. ಆದರೆ ಕರ್ಮ ಬಿಟ್ಟೀತೇ? ಕೆಲಸವನ್ನಂತೂ ಮಾಡಲೇಬೇಕು. ಹೀಗಾಗಿ, ಮೊದಲಿನಂತೆ ನಾನಾಗಿಯೇ ಯೋಚನೆ ಮಾಡಿ ಕೆಲಸ ಅಂಗೀಕರಿಸುವದನ್ನು ಬಿಟ್ಟುಬಿಟ್ಟೆನು. ಅದರ ಬದಲು ಪೂರ್ವಸಂಚಿತದ ಪ್ರವಾಹದಲ್ಲಿ ಬಿದ್ದು ಕೊಂಡೆನು. ಒಲ್ಲೆ ಒಲ್ಲೆನೆನ್ನುತ್ತಲೆ ಹೊಸ ಹೊಸ ಆಸೆ–ಆಕಾಂಕ್ಷೆಗಳನ್ನು ಬೆಂಬಳಿಸತೊಡಗಿದೆನು. ನನ್ನ ಭೀತಿಯ ವಿಷಯಳಾದ ಅಕ್ಕನಿಗೆ ನನ್ನ ಆಸ್ತಿ ಹತ್ತಬಾರದೆಂಬ ಉದ್ದೇಶದಿಂದ ನನ್ನ ಹೆಂಡತಿಯ ಜೀವವನ್ನೂ ಪಣಕ್ಕೆ ಹಚ್ಚಿ ಮಗನನ್ನು ಪಡೆಯಲು ಯತ್ನಿಸಿದೆನು. ನಾನು ಇದರಲ್ಲಿ ಗೆದ್ದಂತೆಯೇ ಆಗಿತ್ತು ; ಆದರೆ ದೈವ ನನ್ನ ವಿರುದ್ಧ ಪಣವನ್ನೇ ತೊಟ್ಟಂತಾಗಿತ್ತು – ಉಪಾಯವಿಲ್ಲ.

ಬಲು ಕೆಟ್ಟ ವೇಳೆಗೆ ನೀವು ನನ್ನ ಕಡೆಗೆ ಆ ಪತ್ರಗಳನ್ನು ಕಳಿಸಿಕೊಟ್ಟಿರಿ. ಅವುಗಳಿಗೆ ನಾನು ಹೆದರಿದೆನೆಂದಲ್ಲ. ಪೂರ್ವಸ್ಮರಣೆ ಹೆಚ್ಚು ಸ್ಪಷ್ಟವಾಗಿ ಆಗಿ ನಾನು ಹೇಡಿಯಾದೆನು. ನನ್ನ ಕೃತಿಯ ಪರಿಣಾಮಗಳು ಅಗಮ್ಯತೆಯ ಬಗ್ಗೆ ಹೆಚ್ಚು ಭೀತಿ ನನ್ನಲ್ಲಿ ಹುಟ್ಟಿತು. ನಮ್ಮ ಅಕ್ಕನು ನಿಮ್ಮಲ್ಲಿ ಉಪವಾಸ ಬಿದ್ದಾಗ ನಿಮ್ಮ ಮಾತಿಗೆ ಹೆದರಿ ನಾನು ಮಗಳನ್ನು ಕಳಿಸಿಕೊಡಲಿಲ್ಲ. ಗಂಗಕ್ಕನ ಬಗ್ಗೆ ನನ್ನಂಥವನಿಗೂ ಅಂತಃಕರಣವಿದೆ. ಆಕೆ ಕಷ್ಟಬಟ್ಟದ್ದನ್ನು ನೋಡಬಲ್ಲೆನು ; ಆದರೆ ಆಕೆ ಉಪವಾಸ ಬಿದ್ದದ್ದನ್ನು ನಾನು ನೋಡಲಾರೆನು.

ಇನ್ನು ನನ್ನ ಕೊನೆಯ ಸೋಲು – ನನ್ನ ಹೆಂಡತಿಯ ಸಾವು !....

ಒಮ್ಮೊಮ್ಮೆ ದೇವರು ದುರ್ಬುದ್ಧಿಗೆ ದುರ್ಬುದ್ಧಿಯ ಅತಿಶಯದಿಂದಲೇ ಸುಬುದ್ಧಿ ಕಲಿಸುತ್ತಾನೆ ಎಂದು ಕಾಣುತ್ತದೆ. ನನ್ನ ಹೆಂಡತಿಯನ್ನು ನಾನು ಸಾವಿರ ಬಗೆಯಿಂದ ಪ್ರೀತಿಸಿದ್ದೇನೆ. ಅಷ್ಟು ಅನುಭವ ನಿಮಗೆ ಇರುವದು ಸಾಧ್ಯವಿಲ್ಲ. ಆದರೆ ಸಾವಿರದ ಒಂದನೆಯ ಬಗೆಯೂ ಇರುತ್ತದೆಂಬುದು ಇದೇ ಬಾರಿ ನನ್ನಂಥವನಿಗೂ ಗೊತ್ತಾದದ್ದು. ಆಕೆಗೆ ನಾನು ಅನ್ಯಾಯ ಮಾಡಿದಾಗ, ಆಕೆ ಬೇನೆತಿನ್ನುವಾಗ, ಮೂಕತನದಿಂದಲೇ ಸಹಿಸುವಾಗ, ಕೊನೆಗೆ ಸತ್ತುಹೋದಾಗ, ಕರುಣೆ, ಮಮತೆ, ಮಾಯೆ ನನ್ನಲ್ಲಿ ಪೂರಪೂರವಾಗಿ ಹರಿಯಿತು. ಅಪಾರವಾದ ಕನಿಕರ, ಸಮುದ್ರದಂಥ ಕನಿಕರ, ಸೆಲೆಸೆಲೆಯಾಗಿ ಹರಿಯುವ ಕನಿಕರ... ! ಸಾಧುಸಂತರು ದೇವರನ್ನು ಹೀಗೆಯೇ ಪ್ರೀತಿಸಿದರೋ ಏನೋ ಎಂದು ನನ್ನ ಸಂಶಯ. ಎಷ್ಟು ಕಣ್ಣೀರು ಸುರಿಸಿದರೂ ಮುಗಿಯದ ಕರುಣೆ ; ದೇಹಕ್ಕೆ ದೇಹ ಒಂದಾದರೂ ಮುಗಿಯದ ಮಮತೆ ; ನನ್ನ ಹೆಂಡತಿಯ ಬಗ್ಗೆ ಇಷ್ಟು ಅಪಾರವಾದ, ಉನ್ನತವಾದ ಪ್ರೇಮ ನನ್ನಲ್ಲಿ ಹುಟ್ಟೀತೆಂದು ನಾನು ಎಂದೂ ಎಣಿಸಿರಲಿಲ್ಲ. ನನ್ನ ಮದುವೆ ಕೂಡ ಕ್ಷಣಿಕಸುಖದ ಆಶೆಯಿಂದಲೇ ಪ್ರಾರಂಭವಾದದ್ದು.

ಇನ್ನು ಕೊನೆಯ ವಿಷಯ – ನಿಮ್ಮ ಮಗ ವಸಂತ ಗಟ್ಟಿಗಾಳಲ್ಲ. ಹೊಡೆತಕ್ಕೆ ಹೆದರಿದನು. ನಿಮಗೆ ತುಸು ಚಿಕ್ಕಪುಟ್ಟ ಹಾನಿಮಾಡಿ ನನಗೆ ಸಮಾಧಾನವಿಲ್ಲ. ಅವನು ಸ್ವಲ್ಪು ಆಳು ಆಗಿದ್ದರೆ ನಿಮಗೆ ನನ್ನ ಕೈಗುಣದ ಪೂರ್ಣ ಅನುಭವ ಬರುತ್ತಿತ್ತು. ಕಣ್ಣೆದುರಿಗೆಯೇ ಅವನಿಗೆ ನನ್ನ ಮಗಳನ್ನು ಕೊಟ್ಟು ಲಗ್ನಮಾಡಿಸಿ, ಹಿಸೆಗಾಗಿ ನಿಮ್ಮನ್ನು ಕೋರ್ಟಿನ ಕಟ್ಟೆ ಹತ್ತಿಸದೇ ಬಿಡುತ್ತಿರಲಿಲ್ಲ. ಆದರೆ ನಿಮ್ಮ ವಸಂತನಂಥ ಹುದ್ದರಿಯನ್ನು ಹಿಡಿದುಕೊಂಡು ಆಟವಾಡುವ ನಾನೇ ಅವಿವೇಕಿ!

ನಿಮ್ಮ ವಸಂತನಿಗೆ ನನ್ನ ಮಗಳನ್ನು ಕೊಡಬೇಕೆಂದು ಮಾಡಿದ್ದೆ. ಆದರೆ ಹೆಂಡತಿಯನ್ನು ಆಸ್ಪತ್ರೆಗೆ ಹಾಕಿದಾಗ ಅವನೇ ಅವಳನ್ನು ಕದ್ದಿದ್ದಾನೆ. ಸುದ್ದಿಯೂ ನಾಲ್ಕು ದಿನಗಳಲ್ಲಿ ಎಲ್ಲ ಕಡೆಗೂ ಹಬ್ಬುವದರಲ್ಲಿ ಸಂದೇಹವಿಲ್ಲ. ಆದರೆ ಈ ವಿಷಯಕ್ಕೂ ನಾನು ನಿಮಗೆ ಏನೂ ಕೇಳಿಕೊಳ್ಳುವದಿಲ್ಲ. ಇಷ್ಟು ದಿವಸ ನಿಮ್ಮ ದ್ವೇಷ ಸಾಧಿಸಿದ್ದೇನೆ. ಈಗ ನಿಮಗೂ ಒಂದು ಸಂಧಿ ದೊರಕಲಿ. ಅಲ್ಲದೆ, ಇದು ಚಿ॥ ಶಾಂತಾಳ ತಪ್ಪು. ನನ್ನ ಹೆಂಡತಿಯನ್ನು ನಾನೂ ಕದ್ದವನೇ. ಆದರೆ ನನ್ನ ಹೆಂಡತಿ ಒಲಿದದ್ದು ರಾಘಪ್ಪನಿಗೆ ; ನನ್ನ ಮಗಳು ಒಲಿದದ್ದು ವಸಂತನಿಗೆ. ನೆಲ–ಮುಗಿಲಿನಷ್ಟು ಅಂತರ. ಆಕೆಯ

ಅವಿವೇಕಕ್ಕೆ ಆಕೆಯೇ ಬೆಲೆ ತೆರಬೇಕು. ಆಕೆ ಬೇಕಾದಾಗ ನನ್ನೊಡನೆ ಬರಲಿ ; ಉದಾಹರಣೆಯನ್ನಂತೂ ಹಾಕಿಯೇ ಇಟ್ಟಿದ್ದೇನೆ.

ಆದರೆ ಇಂದು ರಾತ್ರಿ ಎರಡೂವರೆ ಗಂಟೆಗೆ ನಾನು ಕೆಲಸದಿಂದ ನಿವೃತ್ತನಾಗುತ್ತೇನೆ. ಅದಕ್ಕೂ ಮೊದಲು ನಾನು ಎಲ್ಲಿಯಾದರೂ ಸೋತಿದ್ದರೆ ಅದು ನಿಮಗೆ ಅಲ್ಲ ಎಂದು ಸ್ಪಷ್ಟವಾಗಿ ತಿಳಿಹೇಳುವ ಕೊನೆಯ ಕೆಲಸವನ್ನು ಮಾಡಿರುತ್ತೇನೆ. ಕೃಪೆಯಿರಲಿ,

ನಿಮ್ಮ ಎದುರು ಆಡಿದ ಹಳೆಯ ಹುದ್ದರಿ,

ರಾಘಪ್ಪ

# ೩೭ : ಉಪಸಂಹಾರ ಮತ್ತು ಅಚ್ಯುತನ ಮೂರನೆಯ ಪತ್ರ

ರಾಘಪ್ಪನ ಮರಣದನಂತರದ ಆರು ತಿಂಗಳಲ್ಲಿ ಕಿಟ್ಟಿಯ ಮನೆಯ ವಾತಾವರಣವೇ ಬದಲಿಸಿತು.

ರಾಘಪ್ಪನ ಮೃತ್ಯುಪತ್ರದಲ್ಲಿ 'ತನಗೆ ಗಂಡು ಹುಟ್ಟಿದರೆ ಪ್ರಶ್ನೆಯೇ ಇಲ್ಲ. ಆದರೆ ಹೆಣ್ಣು ಹುಟ್ಟಿದರೆ ತಾನು ದತ್ತಕ ತೆಗೆದುಕೊಳ್ಳಲಿ ಬಿಡಲಿ, ಆಸ್ತಿ ಚಿ॥ ಕೃಷ್ಣನಿಗೆ ಹೋಗಬೇಕು ; ಅವನನ್ನೇ ದತ್ತಕ ತೆಗೆದುಕೊಳ್ಳುವ ವಿಚಾರ ಇದೆ. ಆದರೆ ಹುಚ್ಚು ಹಿಡಿಯುವ ಹೆದರಿಕೆ ಇದ್ದು, ಹಾಗೇನಾದರೂ ಆಗಿ ದತ್ತಕ ತೆಗೆದುಕೊಳ್ಳದೆ ಇದ್ದರೂ ಆಸ್ತಿ ಅವನಿಗೇ ಹೋಗಬೇಕು' ಎಂಬ ತಾತ್ಪರ್ಯವಿತ್ತು. ಇದಲ್ಲದೆ ವೆಂಕಟರಾಯ ತನ್ನ ಹಿಸೆ ಬೇಡಿದರೆ ಅದನ್ನು ಕೊಟ್ಟುಬಿಡಬೇಕೆಂದೂ, ಶಾಂತಾಳ ಲಗ್ನವನ್ನು ಮಾಡಿಸಬೇಕೆಂದೂ, ಹುಟ್ಟಿದ ಮಗುವನ್ನು ಸಾಕಬೇಕೆಂದೂ, ಹೆಂಡತಿ ಬದುಕಿದ್ದರೆ ಸಲಹಬೇಕೆಂದೂ ಬೇರೆ ಕರಾರು ಇದ್ದವು. ಬ್ರಾಹ್ಮಣರ ಸಲಹೆಯ ಮೇರೆಗೆ ಕಿಟ್ಟಿ ಒಂದು ತಿಂಗಳು ರಾಘಪ್ಪನ ಮನೆಯನ್ನು ಬಿಟ್ಟು ಶಾಂತಾಳನ್ನು ಕರೆದೊಯ್ದು ತನ್ನ ಮನೆಯಲ್ಲಿಯೇ ಇದ್ದನು. ಅನಂತರ ಉದಕಶಾಂತಿ ಮಾಡಿಸಿದಮೇಲೆ ತನ್ನ ಮನೆಯನ್ನು ಬಿಟ್ಟು ರಾಘಪ್ಪನ ಮನೆಗೆ ಇರಲಿಕ್ಕೆ ಹೋದನು.

ಕಿಟ್ಟಿಯ ಮನಸ್ಸು ಈ ರುದ್ರ ಅನುಭವಗಳ ಸುತ್ತಿಗೆಯ ಹೊಡೆತಕ್ಕೆ ಮಿದುವಾಗಿಹೋಯಿತು. ಒಂದೇ ಜಿಗಿತಕ್ಕೆ ಅವನು ಕರ್ಮಠತನದತ್ತ ಜಿಗಿದನು. ರಾವುರಾವು ಹೊಡೆಯುತ್ತಿದ್ದ ಮನೆ ಉದಕಶಾಂತಿಯ ವೇದಘೋಷದಿಂದ ತಂಪಾಗಿಬಿಟ್ಟುದುದನ್ನು ಕಂಡವನೇ ಅವನಿಗೆ ಕರ್ಮಠತನದಲ್ಲಿ ಅಪಾರ ಆನಂದ ದೊರಕಿತು. ಅವನು ಹೆಚ್ಚು ಕೂಲಂಕಷ ವಿಚಾರದವನಲ್ಲ. ಸಿನೇಮಾದ ಬದಲು ಕೀರ್ತನ–ಪುರಾಣಗಳಿಗೆ ಹೋಗತೊಡಗಿದ. ತಿಂಗಳು ಎರಡು ತಿಂಗಳಿಗೊಮ್ಮೆ ಮನೆಯಲ್ಲಿ ಸತ್ಯನಾರಾಯಣ ವ್ರತ. ಚಹದಂಗಡಿ ಬಿಟ್ಟುಬಿಟ್ಟನು. ಜಾರ್ಜಿಯ ಕೂಡ ಸಹ ಬಾಯಿಮಾತಿನ ಸ್ನೇಹವೇ ಹೊರತು ಅವರ ಮನೆಯಲ್ಲಿ ಚಹ ಕುಡಿಯುವದನ್ನು ಬಿಟ್ಟು. ಕ್ರಾಪುತೆಳ್ಳಗಾಗಿ ಅದರ ಮಧ್ಯೆ ತೆಳ್ಳಗಿನ ಚಂಡಿಕೆಯ ಎಳೆಗಳು ಜೋತಾಡತೊಡಗಿದವು. 'ಶಾಲಿಗ್ರಾಮಮಹಿಮಾ' ಎಂಬ ಮರಾಠಿ ಪುಸ್ತಕವನ್ನು ಒಂದೂವರಿ ಆಣೆಗೆ ಕೊಂಡುಕೊಂಡು ಅದನ್ನು ಓದುತ್ತ ದಿನಾಲು

ಶಾಲಿಗ್ರಾಮಕ್ಕೆ ಅಭಿಷೇಕ ಮಾಡತೊಡಗಿದನು. ದಿನಾಲು ಅರ್ಧತಾಸು ಸಂಧ್ಯಾವಂದನೆ ಆಗಲೇಬೇಕು. ಇಂತು ದಿನದ ಕಾರ್ಯಕ್ರಮಗಳು ಹೆಚ್ಚತೊಡಗಿದಂತೆಲ್ಲ ನಿದ್ದೆಗಾಗಿ ಸಮಯ ಕಡಿಮೆಯಾಗತೊಡಗಿತು. ಮುಂಜಾನೆ ಬೇಗ ಏಳುವದು ಅವಶ್ಯವಾಯಿತು. ಇದರಿಂದ ಚಟುವಟಿಕೆ ಹೆಚ್ಚಿತು. ಮನೆಯಲ್ಲಿ ಅವನು ಮಂತ್ರ ಪುಟಪುಟಿಸುವದನ್ನು ನೋಡಿ ಎಲ್ಲರೂ ಆದರ ಮಾಡತೊಡಗಿದರು. ಕಚೇರಿಯಲ್ಲಿ ಹರಟೆ ಮುಂತಾದುವುಗಳು ಕಡಿಮೆಯಾದ ಮೂಲಕ ಕೆಲಸಗಳೂ ಚೆನ್ನಾಗಿ ಆಗತೊಡಗಿದವು. ಹೀಗಾಗಿ ಅಲ್ಲಿಯೂ ತನಗೆ ತಿಳಿಯದೆಯೇ ವರ್ಚಸ್ಸು ಹೆಚ್ಚತೊಡಗಿತು. ಕೈಯಲ್ಲಿ ದುಡ್ಡು ಆಡತೊಡಗಿತು. ಮುಖವು ವೈದಿಕತೇಜಸ್ಸಿನಿಂದ ಕಂಗೊಳಿಸತೊಡಗಿತು. ಸ್ವಲ್ಪ ಮೈಕೂಡ ಬಿಟ್ಟನು. ಇಂತು ಕಿಟ್ಟಿಯ ಜೀವನ ಒಂದು ಸ್ತಿಮಿತಕ್ಕೆ ಬಂದಿತು.

ಹೀಗೆ ಕಿಟ್ಟಿಯು ತನ್ನ ನಿಜವಾದ ಸ್ವಭಾವವನ್ನು, ತನ್ನ ಆಂತರಿಕ ಮೈಕಟ್ಟನ್ನು ಅರಿತುಕೊಂಡನು. ಕಿಟ್ಟಿ ಭವಿಯು. ಇದಕ್ಕಿಂತ ಅವನು ಮುಂದೆ ಹೋಗುವದು ಸಾಧ್ಯವಿಲ್ಲ. ಅವನು ಇನ್ನು ಇಪ್ಪತ್ತು ವರ್ಷಕಾಲ ಕಳೆದರೂ ಈ ವಿಷಯದಲ್ಲಿ ಬಹಳ ಬದಲಾವಣೆ ಕಾಣಿಸಲಾರದು.

ರತ್ನಾಳ ಬೆಲೆ ಇನ್ನೂ ಕಡಿಮೆಯಾಯಿತು. ಅದರೊಡನೆ ತಂದೆತಾಯಿ ಸತ್ತಾಗ, 'ನಾ ನಿನಗ ತಾಯಿ ಅಲ್ಲ ಏನು?' ಎಂದು ಅನ್ನುವವರು ಒಬ್ಬರಿದ್ದಾರಲ್ಲ ಎಂಬ ಕೃತಜ್ಞತೆಗೆ ಆಕೆ ಮಾರುಹೋದಳು. ತಾನಾಗಿಯೇ ಅತ್ತೆಯೊಡನೆ ಮಾತಾಡಿ ಕೆಲಸ ಮಾಡತೊಡಗಿದಳು. ಅತ್ತೆಗೆ ಯಾವಾಗಾದರೊಮ್ಮೆ ಒಂದು ಬಟ್ಟಲು ಹಾಲು ತಂದು 'ಕುಡಿದು ಮಲಗಿರಿ' ಎಂದೂ ಆಗ್ರಹಮಾಡತೊಡಗಿದಳು. ಎಲ್ಲರೂ ತನ್ನ ಪತಿಯನ್ನು ಆದರಿಸುತ್ತಿದ್ದುದನ್ನು ನೋಡಿ ಅವಳಿಗೆ ಅವನಲ್ಲಿ ಆದರ ಹೆಚ್ಚಾಯಿತು. ಕಿಟ್ಟಿ ಗಂಡನಷ್ಟೇ ಅಲ್ಲ, ಗುರುವೂ ಆದನು. ಮೆಲ್ಲನೆ ರತ್ನಾ ದಿನಾಲೂ ಕೆನ್ನೆಗೆ ಅರಿಷಿಣ ಹಚ್ಚಿಕೊಂಡು ತುಳಸಿಗೆ ನೀರು ಹಾಕತೊಡಗಿದಳು. ಪುತ್ರಪ್ರಾಪ್ತಿಗಾಗಿ ಗಂಗವ್ವ ಸೂಚಿಸಿದ ಎಲ್ಲ ಉಪಾಯಗಳನ್ನು ನಡೆಸಿದಳು.

ಪರದೇಶಿಯಾಗಿ ಆಳುವ ರತ್ನಾ – ಶಾಂತಾರು ಗಂಗವ್ವನಿಗೆ ತನ್ನ ಮಕ್ಕಳಾಗಿಯೇ ಕಂಡರು. ಅವರ ಭಾರವನ್ನು ಗಂಗವ್ವ ತಾನೇ ಹೊತ್ತಳು. ರಾಘಪ್ಪನ ಪ್ರಚಂಡ ಅಸ್ತಿತ್ವವು ಇಲ್ಲವಾದೊಡನೆ ಗಂಗವ್ವನ ಮನಸ್ಸು ಶೂನ್ಯಗೊಂಡಿತು ರಾಘಪ್ಪನ ದೆವ್ವವು ಬಡಿದುಕೊಂಡೀತೆಂಬ ಭೀತಿ ಕೆಲದಿನ ಒಳಗಿಂದ ಒಳಗೇ ಅವಳನ್ನು ಹಣ್ಣುಗೊಳಿಸಿತು. ನಾಲ್ಕಾರು ದಿನ ಭಯಂಕರ ಕನಸುಗಳೂ ಬಿದ್ದವು. ಆದರೆ ಗಂಗವ್ವ ರಾಘಪ್ಪನ ಹೆಣ್ಣುಮಕ್ಕಳ ಮೇಲೆ ಅಕ್ಕರೆ

ಮಾಡಿ ಈ ಭೀತಿಯನ್ನು ಹೊಡೆದೋಡಿಸಿದಳು. ದೇಸಾಯರು 'ಈಗ ಖರೆ ದೊಡ್ಡ ಮನಸ್ಸು ಮಾಡಬೇಕು' ಎಂದು ಕೇಳಿದಾಗ ಗಂಗವ್ವ 'ಗೋಪಣ್ಣಾ, ನನಗ ಇದರಾಗ ಯಾರೂ ಹೊರಗಿನವರಲ್ಲ. ಏನೋ ಆ ಕಾಲ ಇತ್ತು ಹಂಗ ಆತ್ಯು' ಎಂದು ಹೇಳಿದಳು. ಮನೆಯಲ್ಲಿ ಎಲ್ಲರೂ ಆದರಿಸುವದನ್ನು ಕಂಡು ಆಕೆಗೆ ಒಂದು ತಿಂಗಳೊಪ್ಪತ್ತಿನಲ್ಲಿ ಮೈತುಂಬ ವಿಶ್ರಾಂತಿ ದೊರಕಿದಂತಾಯಿತು. ಬದರೀಯಾತ್ರೆಗೆ ಹೋಗಬೇಕೆನ್ನುವವಳು ಈ ಸುಖದ ಪ್ರಪಂಚದತ್ತ ಮನಸ್ಸು ತಿರುಗಿಸಿದಳು. ಸುದೈವದಿಂದ ಗಂಗಾಮಾಯಿ ತಾನಾಗಿಯೇ ನಡೆಯುತ್ತ ಮನೆಗೆ ಬಂದಳು. ಕಾಶಿಯಲ್ಲಿ ಇವರು ಇಳಿದುಕೊಂಡ ಪಂಡಾ ಒಬ್ಬರು ರಾಮೇಶ್ವರದ ಯಾತ್ರೆಗೆ ಹೊರಟವವರು ಊರು ಊರಿಗೆ ಇಳಿದು ತಮ್ಮ ಹಳೆಯ ಯಾತ್ರಿಕರ ಮನೆಮನೆಗೆ ಹೋಗಿ, ಊಟ ಮಾಡಿ, ದಕ್ಷಿಣೆ ಪಡೆದು ಮುಂದೆ ಸಾಗುವವರು, ಧಾರವಾಡಕ್ಕೆ ಇಳಿದರು. ತಮ್ಮ ಒಬ್ಬ ದೊಡ್ಡ ಗಿರಾಕಿಯಾದ ದೇಸಾಯರ ಪತ್ತೆ ಹುಡುಕುತ್ತ ಬಂದರು. ಇಂಥ ಪತ್ತೆಗಳ ದೊಡ್ಡ ಯಾದಿಯೇ ಇತ್ತು ಅವರ ಬಳಿ. ದೇಸಾಯರು ಗಂಗವ್ವನಿಗೂ ಹೇಳಿಕಳಿಸಿದರು. ಗಂಗವ್ವ ಕಿಟ್ಟಿಯೊಂದಿಗೆ ಬಂದು, ಒಮ್ಮೆ ರಾತ್ರಿಯ ಊಟಕ್ಕೆ ಪಂಡಾರನ್ನು ತಮ್ಮಲ್ಲಿ ಕರೆದೊಯ್ದು ಊಟ ಹಾಕಿ, ಒಂದು ರೂಪಾಯಿ ದಕ್ಷಿಣೆ ಕೊಡಿಸಿದಳು. ಮೇಲೆ ಒಂದು ಬಾಟಲಿ ಗಂಗಾಜಲವನ್ನು ಎಂಟು ಆಣೆಗೆ ತೆಗೆದುಕೊಂಡು, ದೇವರ ನಡುವೆ ಪೂಜೆಗಾಗಿ ಇಡಿಸಿದಳು. ಇಂತು ಗಂಗಾಮಾಯಿ ಮನೆ ಸೇರಿದಳು.

ಅಚ್ಯುತರಾಯ ದೇಸಾಯರ ಪತ್ರದಂತೆ ಪುಣೆಗೆ ಹೋಗುವದನ್ನು ಬಿಟ್ಟು ಧಾರವಾಡಕ್ಕೆ ಬಂದನು. ತನಗಿಂತ ಮೊದಲು ವಸಂತನ ಲಗ್ನವಾಗಲಿಕ್ಕೆ ಅವನು ಯಾವ ಆತಂಕವನ್ನೂ ತರಲಿಲ್ಲ. ವಸಂತನೂ ಶಾಂತಾಳನ್ನು ಮಾಡಿಕೊಳ್ಳಲು ದೇಸಾಯರು ಮಾಡಿದ ಸೂಚನೆಯನ್ನು ಆನಂದದಿಂದ ಮನ್ನಿಸಿದನು. ರಾಘಪ್ಪನ ಕೊನೆಯ ವಿನಂತಿಯನ್ನು ಮನ್ನಿಸಿ ದೇಸಾಯರು ಅವನ ಮಗಳನ್ನು ತಮ್ಮ ಮಗನಿಗೆ ತೆಗೆದುಕೊಂಡರೆಂಬ ವದಂತಿ ಹಬ್ಬಿ 'ಸಾಚಾ ಮನುಷ್ಯ ; ದೊಡ್ಡ ಮನುಷ್ಯ' ಎಂದು ದೇಸಾಯರು ಹೆಸರಾದರು. ಲಗ್ನದ ತಾರೀಖು ಕೂಡ ಗೊತ್ತುಮಾಡಿ ಅಚ್ಯುತ ಪುಣೆಗೆ ಹೋದನು. ಆದರೆ ವೇಣೂಬಾಯಿಗೆ ವ್ಯಸನ, ಅವಮಾನ. ಹತ್ತು ಕೂರಿಗೆ ಹೊಲದ ರಾಘಪ್ಪನ ಮಗಳು, ಆತ್ಮಹತ್ಯ ಮಾಡಿಕೊಂಡ ರಾಘಪ್ಪನ ಮಗಳು ತನಗೆ ಸೊಸೆ ; ವರದಕ್ಷಿಣೆ ಪುಂಗಿ ; ಅಚ್ಯುತನನ್ನು ಬಿಟ್ಟು ಮಾಡುವ ಲಗ್ನ. ಆಗಾಗ್ಗೆ ಹೊಟ್ಟೆತುಂಬ ಊಟಮಾಡಿ ಬಂದು ಗಂಡನ ಮುಂದೆ ಎಲೆ–ಅಡಿಕೆ ಹಾಕಿಕೊಳ್ಳುತ್ತ ಕುಳಿತುಕೊಂಡು 'ಹಂs ಹಂs' ಎಂದು ಅಳುವಳು.

ಆದರೆ ದೇಸಾಯರು ಅವಳಿಗೆ ಸಮಾಧಾನ ಹೇಳುವ ಗೋಜಿಗೇ ಹೋಗಲಿಲ್ಲ. ಏಕೆಂದರೆ ಮುಗಿಯುವ, ಅಳುವೇ ಅಲ್ಲ ಅದು.

ಲಗ್ನ ಗೊತ್ತಾದ ಮೇಲೆ ಶಾಂತಾ ವಸಂತರಾಯನ ಮುತ್ತಿನ ಸರವನ್ನೂ ಮೆಹಬೂಬಜಾನಳ ಚಂದ್ರಹಾರವನ್ನೂ ಹಾಕಿಕೊಂಡು ತನ್ನ ಓಣಿಯ ಗೆಳತಿಯರನ್ನು ಭೆಟ್ಟಿಯಾಗಿ ಬಂದಳು.

ದೇಸಾಯರು ಕಿಟ್ಟಿಯನ್ನೂ ಗಂಗವ್ವನನ್ನೂ ಕೂಡಿಯೇ ಕರೆಸಿಕೊಂಡು ಅವರ ಲೆಕ್ಕವನ್ನು ಓದಿಹೇಳಿ, ಈ ಬಾರಿ ಈ ಹಣದ ಭಾರವನ್ನು ತಮ್ಮಿಂದ ಹೊರುವದು ಆಗುವದಿಲ್ಲವೆಂದು ಖಂಡಿತವಾಗಿ ಹೇಳಿದರು. ಆದದ್ದಕ್ಕೆಲ್ಲ ಕಿಟ್ಟಿ ಕ್ಷಮೆ ಕೇಳಿದನು. ಅದನ್ನು ಏನು ಮಾಡಬೇಕೆಂಬುದನ್ನು ದೇಸಾಯರೇ ಹೇಳಬೇಕೆಂದೂ, ಆದ ಸಾಲವನ್ನು ಮುಟ್ಟಿಸುವ ಕೆಲಸ ತನ್ನದೇ ಎಂದೂ ಹೇಳಿದನು. ಸಾಲವನ್ನು ಕೂಡಲೇ ಮುಟ್ಟಿಸಬೇಕೆಂದೂ ಉಳಿದ ಹಣವನ್ನು ಗಂಗವ್ವನ ಹೆಸರಿನಿಂದ ಪೋಸ್ಟಿನಲ್ಲಿ ಇಡಬೇಕೆಂದೂ ದೇಸಾಯರು ಸೂಚನೆ ಮಾಡಿದರು. ಅದರಂತೆ ಮಾಡಲ್ಪಟ್ಟಿತು. ಗಂಗವ್ವನ ಹೆಸರಿನಲ್ಲಿ ಹನ್ನೆರಡುನೂರು ರೂಪಾಯಿಗಳು ಪೋಸ್ಟಿನಲ್ಲಿ ಇಡಲ್ಪಟ್ಟವು. ಇತ್ತ ಕಿಟ್ಟಿ ಋಣಮುಕ್ತನಾದನು.

ಜೋಶಿ ರಾಮರಾಯನು ಜಾರ್ಜ ವಾಶಿಂಗ್ಟನ್ ಕಂಬಾರಗಣಿವಿಯ ಕಠೋರಸತ್ಯದ ಯಂತ್ರದಲ್ಲಿ ಸಿಕ್ಕು, ಹೇಗೆ ಹಿಂಬಡತಿ ಪಡೆದನೆಂಬುದು ಇನ್ನೊಂದು ದೊಡ್ಡ ಕತೆ. ಅವನು ಹಿಂಬಡತಿ ಪಡೆದು ವರ್ಗವಾಗಿ ಹೋದ ಮೇಲೆ ಜಾರ್ಜಿಯೇ ಮೊದಲು ಆ್ಯಕ್ಟಿಂಗ್ ಹೆಡ್‌ಕಾರಕೂನನಾದನು. ಅದರಲ್ಲಿ ಮೇಲಿನವರ ಮರ್ಜಿ ಪಡೆದು ತುಸು ದಿನದಲ್ಲಿಯೇ ಕಾಯಂ ಆದನು. ಅವರಿಗೆ ಸ್ಟಿಫನ್ನಿನ ಮೇಲೆ ಇನ್ನೊಂದು ಗಂಡುಮಗು ಆಗಿದೆ. ಸ್ಯಾಮುಯೆಲ್ ಸಾರಮ್ಮ ರತ್ನಾಳನ್ನು ಭೆಟ್ಟಿಯಾಗಲು ಬರುತ್ತಾಳೆ – ರತ್ನಾ ಆಸೆಯಿಂದ ಅವಳ ಮಕ್ಕಳನ್ನು ಎತ್ತಿ ಮುದ್ದಾಡಿಸುತ್ತಾಳೆ.

* * *

ಪುಣೆಗೆ ಹೋದ ಅಚ್ಯುತರಾಯನಿಂದ ಈ ಪತ್ರ ಬಂದಿತು.

ಕ್ಷೇಮ ಶ್ರೀ ಪುಣೆ

ತೀರ್ಥರೂಪದ ಚರಣಾರವಿಂದಕ್ಕೆ ಅನೇಕ ನಮಸ್ಕಾರಗಳು. ನಾನು ಕ್ಷೇಮ. ನನ್ನ ಮೂರ್ಖತನಕ್ಕೆ ನನಗೇ ಬೇಸರವಾಗಿದೆ. ಸ್ವಲ್ಪ ಬುದ್ಧಿ ಉಪಯೋಗಿಸಿದ್ದರೆ ಮುಂಬೈಯಲ್ಲಿ ಕುಳಿತೇ ಅರ್ಧ ಸಮಸ್ಯೆ

ಬಿಡಿಸಬಹುದಾಗಿತ್ತು. ಮುಂಬೈಯಲ್ಲಿ ನನಗೆ ಅನೇಕ ಗುಜರಾಥಿ – ಮಾರವಾಡಿ ಮಿತ್ರರಿದಾದ್ರೆ. ಅವರ ಸ್ವಭಾವವನ್ನೂ ಮನೆಯ ಪರಿಪಾಠಗಳನ್ನೂ ನಾನು ಬಲ್ಲೆ. ಮನೆಯಿಂದ ಬಹುತರ ಸಿರಿವಂತರಾದ್ದರಿಂದಲೂ ವ್ಯಾಪಾರಿಗಳಾದ್ದರಿಂದಲೂ ಅವರಿಗೆ ಕಾಯದೆಯ ಹೆದರಿಕೆ ಬಹಳ. ಅದು ಗೊತ್ತಿದ್ದೂ ನಾನು ಈ ಸಂದರ್ಭದಲ್ಲಿ ಅದನ್ನು ಉಪಯೋಗಿಸಲಾರದೆ ಹೋದೆನು.

ಪುಣೆಯಲ್ಲಿ ತಾಖತ್‌ಮಲ್ ಸೇಠರು ಇನ್ನೂ ಇದ್ದಾರೆ. ಅವರ ಭೆಟ್ಟಿಯೂ ಆಯಿತು. ಅವರಲ್ಲಿ ವೆಂಕಟರಾಯನೆಂಬವನೊಬ್ಬನು ಕೆಲಸಕ್ಕೆ ಇದ್ದನೆಂಬುದು ಅವರಿಗೆ ನಿಚ್ಚಳವಾಗಿ ನೆನಪು ಇತ್ತು. ಚೆಕ್ಕಿನ ಫೋರ್ಜರಿಯ ವಿಷಯಕ್ಕೆ ಅವರಿಗೆ ಕೇಳಲಾಗಿ ಅವರು ಹಾರಿಕೆಯ ಉತ್ತರ ಕೊಟ್ಟರು. 'ನಾನೇ ಮರೆತಿದ್ದೆ, ಚೆಕ್ಕು ಸರಿಯೇ ಇತ್ತು. ಅದಕ್ಕಾಗಿ ಕಂಪ್ಲೇಂಟು ಹಿಂದೆ ತೆಗೆದುಕೊಂಡೆ' ಎಂದು ಹೇಳಿದರು. ಅವರಿಗೆ ನಾನು ಮುಂದೆ ಆದ ಕತೆಯನ್ನು ಏನೂ ತಿಳಿಸಿಲ್ಲ. ಅವಶ್ಯಬಿದ್ದರೆ ಇನ್ನೊಮ್ಮೆ ಹೋಗಿ ವಿಷಯ ಎಲ್ಲವನ್ನೂ ವಿವರಿಸಿ, ಯಾವುದಾದರೂ ಅಕ್ಕಸಾಲಿಗರ ಮುಖಾಂತರ ಕಿವಿ ಚುಚ್ಚಿಸಿ, ಅವರ ಬಿಗುಹನ್ನು ಸಡಿಲಿಸಬೇಕೆಂದು ಯೋಚಿಸಿದ್ದೇನೆ.

ಇದರ ಮೇಲಿಂದ ನನ್ನ ಸ್ಪಷ್ಟ ತರ್ಕ – ಲೆಕ್ಕದ ಹೆಚ್ಚು ಕಡಿಮೆಯಾದೊಡನೆ ಹಿಂದುಮುಂದಿನ ವಿಚಾರವಿಲ್ಲದೆ ಸೇಠರು ಪೊಲೀಸರಿಗೆ ದೂರುಕೊಟ್ಟಿರಬೇಕು. ಪೊಲೀಸರು ತುಸು ವಿಚಾರಣೆ ಮಾಡುವಷ್ಟರಲ್ಲಿ ಸೇಠರಿಗೆ ಈ ಎಲ್ಲ ಪ್ರಕರಣ ತಮ್ಮ ಮಗನವರೆಗೂ ಬಂದು ಮುಟ್ಟುತ್ತದೆಯೆಂದು ವಾಸನೆ ಹತ್ತಿರಬೇಕು. ಎಲ್ಲ ಸೇಠರ ಮಕ್ಕಳು ತಮ್ಮ ತಮ್ಮ ಬಾಲ್ಯದಲ್ಲಿ ಅವಿವೇಕ ಮಾಡಿರುತ್ತಾರೆ. ಅವರೇ ತುಸು ವಯಸ್ಸಿಗೆ ಬಂದೊಡನೆ ತಮ್ಮ ತಂದೆಯ ವ್ಯವಹಾರವನ್ನು ಮಾಡುತ್ತ ಅವರಿಗಿಂತ ಹೆಚ್ಚು ಜಾಣರಾಗುತ್ತಾರೆ. ಇದು ಆ ಜನರ ಸಾಮಾನ್ಯ ಅನುಭವ. ಈಗ ಸೇಠರ ಅಂಗಡಿಯ ಮೇಲೆ ಅವರ ಹೆಸರಿನ ಬೋರ್ಡಿನೊಡನೆ ಬಾಬೂಭಾಯಿಯ ಹೆಸರೂ ನೇತಾಡುತ್ತಿದ್ದುದನ್ನು ನೋಡಿದ್ದೇನೆ. ವ್ಯಾಪಾರಸ್ಥರಾದ ಸೇಠರು ತಮ್ಮ ಮಗಕ್ರಿಮಿನಲ್ ಕೋರ್ಟಿನ ಕಟ್ಟೆಯನ್ನು (ಬರಿ ಸಾಕ್ಷಿ ಕೊಡುವುದಕ್ಕೇ ಆಗಲಿ) ಹತ್ತಿಸಬಿಡುವದು ಅವರ ವ್ಯಾಪಾರೀಧರ್ಮಕ್ಕೆ ವಿರುದ್ಧವಾಗಿದೆ. ಅದರಿಂದ ಅವರ ನಾಮೆಯೇ ಹಾಳಾಗುತ್ತದೆ. ಅದಕ್ಕಾಗಿ ಏನೇನಾದರೂ ಉಪಾಯವನ್ನು ಮಾಡಿ,

ಚೆಕ್ಕು ನಿಜವಿತ್ತೆಂದೂ, ತಮ್ಮದೇ ಲೆಕ್ಕವು ತಪ್ಪಿತ್ತೆಂದೂ ವಾದಿಸಿ ಮತ್ತೆ ಬೇರೆ ವಾಮವಾರ್ಗ ಪ್ರಯೋಗಿಸಿ ಸೇಠರು ಕೋರ್ಟಿನಲ್ಲಿ ಬೊಬ್ಬಾಟವಿಲ್ಲದೆ ದಾಟುವ ಹಾಗೆ ಮಾಡಿದಂತೆ ತೋರುತ್ತದೆ. ತಾಜುದ್ದೀನನಿಗೆ ಬೆದರಿಸಿಯಾಗಲಿ, ಕೈ ಬೆಚ್ಚಗೆ ಮಾಡಿಯಾಗಲಿ ಓಡಿಸಿರಬಹುದು. ಖಟ್ಲೆಯನ್ನು ವಿನಾಕಾರಣ ಮುಂದೆ ಮುಂದೆ ದೂಡಿಕೊನೆಗೆ ಮೂಲಕಾರಣ ಹುಸಿಯೆಂದು ತೋರಿಸಿ ಅಲ್ಲಿಯೇ ಶಾಂತವಾಗುವಂತೆ ಮಾಡಿರುವರೆಂದು ನನ್ನ ತರ್ಕ.

ಆದರೆ ನಾನು ಹುಡುಗನೆಂದು ಸೇಠರು ಬಹಳ ಮಾತಾಡಲಿಲ್ಲ. ಅವರು ಅನಾದರ ಮಾಡಿದ್ದರಿಂದ ಮುಂದಿನದನ್ನು ನಾನೇ ಹೇಳಬಾರದೆಂದು ಬಿಟ್ಟುಬಿಟ್ಟೆನು. ಅದಕ್ಕಾಗಿ ನೀವೇ ಮುಂಬೈಗೆ ಬರಬೇಕು. ಸೇಠರು ಒಳ್ಳೆಯವರು. ಅವರಿಗೆ ಈ ಚೆಕ್ಕಿನಿಂದ ಆದ ಅನಾಹುತ ತಿಳಿದರೆ ತಾವೂ ಮುಂದೆ ಬಿದ್ದು ಎಲ್ಲ ಸಹಾಯ ಮಾಡಬಹುದೆಂದು ನನಗೆ ಭರವಸೆ ಇದೆ. ಅವರಿಂದ ಆ ಖಟ್ಲೆಯ ನಂಬರು ಸಿಕ್ಕರೆ ಸಾಕು, ಮುಂದಿನದನ್ನು ನಾವೇ ಹುಡುಕುವದು ಸಾಧ್ಯವಿದೆ.

ಒಟ್ಟಿನ ಮೇಲೆ ನೋಡಲು, ಸ್ವಾಮಿರಾಯನಿಗೆ ಹಿಂದಕ್ಕೆ ಆದ ಹಾನಿಯನ್ನು ಈಗ ಸರಕಾರದಿಂದ ತುಂಬಿಸಿಕೊಳ್ಳಲು ಬರುತ್ತದೆಯೆಂದು ನನ್ನ ಭಾವನೆ. ಏಕೆಂದರೆ ಜಾಮೀನು ಆದದ್ದಕ್ಕಾಗಿ ಸರಕಾರವು ಸ್ವಾಮಿರಾಯನಿಂದ ಐದು ಸಾವಿರ ರೂಪಾಯಿ ವಸೂಲಿ ಮಾಡಿತು. ಆದರೆ ಮುಂದೆ ಅದೇ ಖಟ್ಲೆ ಸುಳ್ಳಾಗಿ ಕೊನೆಗಂಡಿತು. ಖಟ್ಲೆ ನೆನೆಗುದಿಗೆ ಬಿದ್ದ ಮೂಲಕ, ಹಾಗೂ ಅದರ ಪರಿಣಾಮ ಯಾರಿಗೂ ತಿಳಿಯದ ಮೂಲಕ, ರಿಫಂಡಿಗಾಗಿ ಈವರೆಗೆ ಯಾರೂ ಅರ್ಜಿ ಹಾಕಿಲ್ಲವೆಂದೇ ಹಣ ಇನ್ನೂ ಸರಕಾರದ ಬಳಿಯಲ್ಲೇ ಉಳಿದಿದೆ. ಅಂದಮೇಲೆ ಈಗ ಸ್ವಾಮಿರಾಯನ ವಾರಸದಾರ ಕೃಷ್ಣಾಜಿ ಕಡೆಯಿಂದ ರಿಫಂಡಿಗಾಗಿ ಅರ್ಜಿ ಹಾಕಿಸಬಹುದಲ್ಲವೇ ? ಇದಲ್ಲದೆ ವೆಂಕಟರಾಯನೂ ಅಜ್ಞಾತವಾಸದಲ್ಲಿ ಉಳಿಯುವ ಕಾರಣ ಬೀಳುವದಿಲ್ಲ. ಅವನೂ ಪೊಲೀಸರ ಹೆದರಿಕೆಯಿಲ್ಲದೆ ಅಡ್ಡಾಡಬಲ್ಲನು.

ಆದರೆ ಇದಕ್ಕೆಲ್ಲ ಸೇಠ ತಾಖತ್‌ಮಲ್ಲರ ಸಹಕಾರ ಬೇಕು. ಅದನ್ನು ನಾನು ಪಡೆಯವದು ಅಸಂಭವ. ತಾವೇಬರಬೇಕಾಗಿ ವಿನಂತಿ. ತಮ್ಮಿಂದ ಈ ಕೆಲಸ ಖಂಡಿತವಾಗಿ ಕೊನೆಗಾಣುತ್ತದೆಂದು ನನಗೆ ವಿಶ್ವಾಸವಿದೆ.

ನೀವು ಬಂದಮೇಲೆ ಇಲ್ಲಿಯ ಒಬ್ಬ ನನ್ನ ತರುಣ ವಕೀಲ–ಮಿತ್ರರನ್ನು ಭೆಟ್ಟಿಯಾಗಿ, ಶಕ್ಯವಾದರೆ ಅವರೊಡನೆ ಪುಣೆಗೆ ಹೋಗೋಣ. ಎಂದು ಬರುತ್ತೀರೋ ತಿಳಿಸಬೇಕು. ಮಾತೋಶ್ರೀಯವರಿಗೆ ಅನಂತ ವಂದನೆಗಳು. ಅವರು ಹೇಗಾದರೂ ಮಾಡಿ ವಸಂತರಾಯನ ಮದುವೆ ಜೊತೆಗೇ ನಾನೂ ಲಗ್ನ ಮಾಡಿಕೊಳ್ಳಬೇಕೆಂದು ನನಗೆ ಆಗ್ರಹ ಮಾಡಿದರು. 'ಒಲ್ಲೆ'ನೆಂದು ಬಹಳ ನಿಷ್ಠುರವಾಗಿ ಹೇಳಿದೆ. ಅವರ ಮನಸ್ಸು ಬಹಳ ನೊಂದಿದೆ. ಕಾರಣ ಸಮಾಧಾನ ಮಾಡಬೇಕು. ಈ ಬಾರಿ ಪತ್ರದಲ್ಲಿ ಅವರಿಂದ ಒಂದು ಸಾಲು ಬರೆಸಬೇಕು, ಎಂದು ಕಳಕಳಿಯ ಪ್ರಾರ್ಥನೆ. ತಮ್ಮಂದಿರಿಗೆ ಆಶೀರ್ವಾದಗಳು. ಬರುವಾಗ ಚಿ॥ ಪುರುಷೋತ್ತಮನನ್ನು ಕರೆದುಕೊಂಡು ಬರಬೇಕು.

ಇಂತೀ ಪ್ರೀತಿಯ,

**ಅಚ್ಯುತರಾಯ**